ಸಾರ್ಥಕ ಬದುಕು

(ವಿ.ಸೀ. ಜೀವನ, ಸಾಹಿತ್ಯ ಮತ್ತು ಸಾಧನೆ)

ಬಿ.ಪಿ. ರಾಧಾಕೃಷ್ಣ

1016

ವಿ.ಸೀ. ಸಂಪದ
ರಾಜೀವನಗರ, ಬೆಂಗಳೂರು-೫೬೦ ೦೮೫

SĀRTHAKA BADUKU - A biography on the life, literature and achievements of V. Sitaramiah, popularly known as V. Si. by B. P. Radhakrishna, Published by V.Si. Sampada, No. 25, 'C' Cross, Rajivnagar, 7th Main, BSK III Stage, IV Phase, Bangalore 560 085. pp. xiv + 258

1997 © : B.P. Radhakrishna

Price : Rs. 75/-

ಬೆಲೆ ರೂ : ಎಪ್ಪತ್ತೈದು ರೂಪಾಯಿಗಳು

ವಿ.ಸೀ. ಸಂಪದ

ನಂ. ೨೫, ವಸುಂಧರಾ, ರಾಜೀವನಗರ,

ಬನಶಂಕರಿ III ಸ್ಟೇಜ್, IV ಫೇಸ್, ಬೆಂಗಳೂರು - ೫೬೦ ೦೮೫

ಅಧ್ಯಕ್ಷರು : ಡಾ। ಎಚ್.ಕೆ. ರಂಗನಾಥ್

ಉಪಾಧ್ಯಕ್ಷರು : ಎಂ. ಮಲ್ಲಿಕಾರ್ಜುನಯ್ಯ
ಕೆ.ಎಸ್. ಕಲ್ಲಾಪುರ

ಕಾರ್ಯದರ್ಶಿ : ಎಂ. ವಿ. ಸತ್ಯನಾರಾಯಣ

ಕೋಶಾಧಿಕಾರಿ : ಕೆ.ಬಿ. ಷಣ್ಮುಖಪ್ಪ

ಸದಸ್ಯರು : ಮತ್ತೂರು ಕೃಷ್ಣಮೂರ್ತಿ
ವಿ. ಎಸ್. ಕೃಷ್ಣಮೂರ್ತಿ
ಎಚ್. ವಿ. ವೆಂಕಟಸುಬ್ಬಯ್ಯ
ಅ. ಬಾ. ಶೆಟ್ಟಿ ಪೊಳಲಿ (ಮಣಿಪಾಲ)
ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
ಎಸ್. ಸತ್ಯನಾರಾಯಣ
ಶ್ರೀಮತಿ ಮೀನಾ ವಾಂಗೀಕರ್ (ಪುಣೆ)
ಶ್ರೀಮತಿ ಅಂದನೂರು ಶೋಭ
ಮುನಿಧರ್ಮಯ್ಯ
ಎಂ. ವಿ. ವಿ. ಮೂರ್ತಿ

ಅಕ್ಷರ ಸಂಯೋಜನೆ : ಪ್ರಗತಿ ಗ್ರಾಫಿಕ್ಸ್, ಹನುಮಂತನಗರ, ಬೆಂಗಳೂರು - ೫೬೦ ೦೧೯
ಆಫ್‌ಸೆಟ್ ಮುದ್ರಣ : ನೇತ್ರಾ ಪ್ರಿಂಟರ್ಸ್, ಚಾಮರಾಜಪೇಟೆ, ಬೆಂಗಳೂರು - ೧೮

ಪರಿವಿಡಿ

	ಎರಡು ಮಾತು : ಎಚ್. ವೈ. ಶಾರದಾಪ್ರಸಾದ್		v
	ಪ್ರಸ್ತಾವನೆ : ಎಸ್. ಕೆ. ರಾಮಚಂದ್ರರಾವ್		ix
	ಅರಿಕೆ : ಎಚ್. ಕೆ. ರಂಗನಾಥ್		xv
೧.	ಪ್ರವೇಶ	.....	೧
೨.	ವಂಶವೃತ್ತಾಂತ	.....	೭
೩.	ಕಾಲೇಜ್ ದಿನಗಳು	.....	೧೯
೪.	ಮುಂಬಯಿ ವಾಸ	.....	೩೯
೫.	ಕನ್ನಡದ ಕರೆ	.....	೫೧
೬.	ಮದುವೆ - ದಾಂಪತ್ಯ ಜೀವನ	.....	೫೯
೭.	ಪಂಪಾಯಾತ್ರೆ	.....	೬೭
೮.	ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕ	.....	೭೫
೯.	ಹಣಪ್ರಪಂಚ ಮತ್ತು ಇತರ ಶಾಸ್ತ್ರಪ್ರಬಂಧಗಳು	.....	೯೧
೧೦.	ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ	.....	೧೦೩
೧೧.	ಹೊನ್ನಾವರದಲ್ಲಿ	.....	೧೧೫
೧೨.	ಲಂಡನ್ ಯಾತ್ರೆ	.....	೧೨೧
೧೩.	ಮೈಸೂರು ವಿಶ್ವವಿದ್ಯಾನಿಲಯ ಸಲ್ಲಿಸಿದ ಗೌರವ	.....	೧೨೫
೧೪.	ಹೇಳಿ ಬರೆಯಿಸುವ ಕಲೆ	.....	೧೩೯
೧೫.	ಕವಿ. ವಿ. ಸೀ.	.....	೧೪೭
೧೬.	ವಿಮರ್ಶಕ ವಿ. ಸೀ.	.....	೧೬೫
೧೭.	ವ್ಯಕ್ತಿತ್ವ	.....	೨೦೯
೧೮.	ಕೊನೆಯ ಅಂಕ	.....	೨೪೩
	ವಿ. ಸೀ. ಅವರ ಬಾಳಿನ ಮುಖ್ಯ ಘಟನೆಗಳು	.....	೨೫೧
	ಗ್ರಂಥಋಣ	.....	೨೫೩

ಎರಡು ಮಾತು

ವಿ.ಸೀ. ನನ್ನ ತಂದೆಯ ಹತ್ತಿರದ ಮಿತ್ರರು. ಎಳೆತನದಿಂದ ಅವರನ್ನು ಕಂಡಿದ್ದೆ. ಹೈಸ್ಕೂಲಿನಲ್ಲಿದ್ದಾಗಲೆ ಪರಿಷತ್ತಿನಲ್ಲಿ ಅವರ ಭಾಷಣ ಕೇಳಿದ್ದೆ. ಅವರ ಪದ್ಯಗಳಲ್ಲಿ ಕೆಲವನ್ನು ಕಂಠಸ್ಥ ಮಾಡಿಕೊಂಡಿದ್ದೆ. ಮುಂದೆ ವಿಶ್ವವಿದ್ಯಾಲಯದಲ್ಲಿ ಅವರಿಂದ ಪಾಠ ಹೇಳಿಸಿಕೊಳ್ಳುವ ಸುಯೋಗ ದೊರಕಿತು. ಮಹಾರಾಜಾ ಕಾಲೆಜಿನ ಹೆಮ್ಮೆಯ ದಿನಗಳ ಹೊನ್‌ಸಂಜೆ ಆಗ. ಅನೇಕ ಉದ್ದಾಮ ಪಂಡಿತರು, ವಾಗ್ಮಿಗಳು, ಕನ್ನಡದ ಹೊಸಹುಟ್ಟಿನ ನಿರ್ಮಾತೃಗಳು ಇನ್ನೂ ಅಧ್ಯಾಪಕವರ್ಗದಲ್ಲಿದ್ದರು. ಒಬ್ಬರು ಒಂದು ವಿಧದಲ್ಲಿ ಗಟ್ಟಿಗರಾದರೆ ಇನ್ನೊಬ್ಬರು ಇನ್ನೊಂದು ಬಗೆಯ ಜಟ್ಟಿ. ಅವರ ಪೈಕಿ ವಿ.ಸೀ. ತರಗತಿಗಳದೇ ಒಂದು ವೈಶಿಷ್ಟ್ಯ. ಇಪ್ಪತ್ತೈದು ವರ್ಷಗಳ ನಂತರ ಈಗಲೂ ಚೆನ್ನಾಗಿ ನೆನಪಿಗೆ ಬರುತ್ತದೆ. ಕನ್ನಡವನ್ನು ಇಂಗ್ಲಿಷಿನಲ್ಲಿ ಬೋಧಿಸುತ್ತಾರೆ ಎಂದು ಕೆಲವರು ಹಗುರವಾಗಿ ಅನ್ನುತ್ತಿದ್ದರು. ಅವರು ಓದಿದ್ದು ಕನ್ನಡವಲ್ಲ, ಅರ್ಥಶಾಸ್ತ್ರ ಎಂದು ಇನ್ನು ಕೆಲವರ ಕುಹಕ. ಪರೀಕ್ಷೆಗೆ ಸಂಬಂಧವಿಲ್ಲದ್ದನ್ನೆಲ್ಲ ಹೇಳುತ್ತಾರೆ ಎಂದು ಮತ್ತೆ ಹಲವರ ಟೀಕೆ. ಆದರೆ ಅವರ ಬಹುಮುಖ ವಿಷಯಪ್ರಭುತ್ವ, ವಾಗ್ವೈಖರಿ, ಇವುಗಳ ಬಗ್ಗೆ ಎರಡಭಿಪ್ರಾಯವಿದ್ದಿಲ್ಲ. ಸಾಹಿತ್ಯದ ಪ್ರಯೋಜನದ ಬಗ್ಗೆ ವಿ.ಸೀ. ಅವರ ನಿಲುವೇ ಬೇರೆ. ಅದು ಬರೇ ಪದವಿಯ ಹಂತವಲ್ಲ, ಜೀವನವನ್ನು ಹಸನು ಮಾಡಿಕೊಳ್ಳುವ ಹದನು, ಅನುಭವದ ವರ್ಣನೆ ಮಾತ್ರವಲ್ಲ, ಪರಕಾಯ ಪ್ರವೇಶದಿಂದ ಅನುಭವವನ್ನು ಆರ್ಜನೆ ಮಾಡಿಕೊಳ್ಳುವ ಮಾರ್ಗ ಎಂದು ಅವರ ನಂಬಿಕೆ. ಆದ್ದರಿಂದಲೇ ಅವರು ಸಾಹಿತ್ಯ ಪಾಠ ಮಾಡುವಾಗ ತತ್ತ್ವಶಾಸ್ತ್ರ ಬರುತ್ತಿತ್ತು, ರಾಜ್ಯಶಾಸ್ತ್ರ ಬರುತ್ತಿತ್ತು, ಮನೋವಿಜ್ಞಾನ ಬರುತ್ತಿತ್ತು, ವಿಜ್ಞಾನ ಬರುತ್ತಿತ್ತು. ಹೆರಾಲ್ಡ್ ಲಾಸ್ಕಿ ತಮ್ಮ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರಂತೆ, "I am not here to teach you what to think, I am here to make you think for yourselves" ಎಂದು. ವಿ.ಸೀ. ಯವರ ಪಾಠಕ್ಕೂ ಅದೇ ಮಾತು ಅನ್ವಯಿಸೀತು. ವಿದ್ಯಾರ್ಥಿಗಳು ತಮ್ಮ ವಯಸ್ಸಿನಲ್ಲಿ ಅರ್ಧಕ್ಕಿಂತ ಸಣ್ಣವರು, ಅವರಿಗೆ ಅರ್ಥವಾಗುತ್ತದೋ ಇಲ್ಲವೋ ಎಂಬ ಡಂಭವಾಗಲಿ ಶಂಕೆಯಾಗಲಿ ಅವರಿಗಿರುತ್ತಿದ್ದಂತೆ ತೋರಲಿಲ್ಲ. ಕಲೆತು ಬರಹಗಾರನ ಕಲೆಯ ಗುಟ್ಟನ್ನು ಪತ್ತೆ ಹಚ್ಚೋಣ ಬನ್ನಿ ಎಂದು ಕರೆಯುತ್ತಿದ್ದಾರೋ ಎನಿಸುತ್ತಿತ್ತು. ಎಷ್ಟೋ ಸಲ ಅವರ ವಿಚಾರದ ಓಟ ನಮ್ಮ ಬುದ್ಧಿಯ ಓಟಕ್ಕಿಂತ ತೀವ್ರವಾಗಿರುತ್ತಿತ್ತು. ಆದರೆ ಸಾಹಿತ್ಯವೆಂಬುದು ಒಂದು ಸಾಹಸ, ಒಂದು ಸೊಗಸು, ಒಂದು ತುಂಬುಬಾಳಿನ ಸಾಧನೆ ಎಂಬುದು ನಮಗೆ ಹೊಳೆಯುತ್ತಿತ್ತು. ಅವರ ಮಾತಿನಲ್ಲಿ ಕಾವಿರುತ್ತಿತ್ತು, ಕಾಂತಿಯಿರುತ್ತಿತ್ತು. ವಿಚಾರದ ಹೂರಣ ಸಂಕೀರ್ಣ

ವಾಗಿದ್ದರೂ ಹೊದಿಕೆ ವಾಡಿಕೆಯ ಮಾತುಗಳದ್ದಾಗಿರುತ್ತಿತ್ತು. ಅತಿಚತುರತೆಯಾಗಲಿ, ಚರ್ವಿತಚರ್ವಣ ಭಾವನೆಗಳಾಗಲಿ, ಪದಗುಚ್ಛಗಳಾಗಲಿ ಇರುತ್ತಿರಲಿಲ್ಲ. ವಿಷಯ ಪ್ರತಿಪಾದನೆಯಲ್ಲಿ ಪ್ರಾಮಾಣಿಕತೆಯಿರುತ್ತಿತ್ತು.

ವಿ.ಸೀ. ಅವರ ಕವಿತೆಯಲ್ಲಿಯೂ , ಮಾತಿನಲ್ಲಿಯೂ ಭಾವಕ್ಕಿಂತ ರಾಗಕ್ಕಿಂತ ಬುದ್ಧಿಗೆ ಪ್ರಾಧಾನ್ಯವಿರುತ್ತಿತ್ತು ಎಂದು ಕೆಲವರು ಎನ್ನುವುದುಂಟು. ಆದರೆ ಅವರ ವ್ಯಕ್ತಿತ್ವದಲ್ಲಿ ಭಾವಕ್ಕೆ ಯಾವ ಸ್ಥಾನವಿತ್ತು ಎಂಬುದು ಅವರು ಪಾಠ ಮಾಡುವಾಗ ನಮಗೆ ವೇದ್ಯವಾಗುತ್ತಿತ್ತು. ಅವರು ನಮಗೆ ಒಂದು ವರ್ಷ ಶಾಕುಂತಲ ಪಾಠ ಮಾಡಿದ್ದರು. ಬಸವಪ್ಪಶಾಸ್ತ್ರಿಗಳ ಅನುವಾದ. ಕಣ್ವರ್ಷಿ ಸಾಕು ಮಗಳನ್ನು ಬೀಳ್ಕೊಡುವ ದೃಶ್ಯವನ್ನು ವಿವರಿಸುವಾಗ ಅವರ ಗಂಟಲು ಹೇಗೆ ಉದ್ವೇಗದಿಂದ ಗದ್ಗದಿತವಾಯಿತು ಎಂಬುದು ಇನ್ನೂ ನೆನಪಿಗೆ ಬರುತ್ತದೆ. ಎಷ್ಟೇ ಆದರೂ ಮಗಳನ್ನೊಪ್ಪಿಸುವ ಹಾಡು ಬರೆದ ಕವಿಯಲ್ಲವೆ? ಅದೇ, ದುಷ್ಯಂತನ ಆಸ್ಥಾನಕ್ಕೆ ಗರ್ಭಿಣಿ ಶಕುಂತಲೆ ಬಂದಾಗ ಅವರು ರಾಜನ ಕರ್ತವ್ಯಗಳೇನು ಎಂಬುದರ ಬಗ್ಗೆ ಕಾಳಿದಾಸನ ಕಾಲದಿಂದ ಆಧುನಿಕ ಯುಗದವರೆಗೆ ಏನೇನು ಸಿದ್ಧಾಂತಗಳಿದ್ದಿವೆ ಎಂಬುದು ಹೇಳಿದಾಗ ಇದು ಕನ್ನಡ ತರಗತಿಯೇ ರಾಜ್ಯಶಾಸ್ತ್ರದ ತರಗತಿಯೇ ಎಂದು ಭ್ರಮೆಯಾದದ್ದೂ ನೆನಪಾಗುತ್ತದೆ. ಕೆಲವರು ಉಪಾಧ್ಯಾಯರು ಪ್ರತಿ ವರ್ಷವೂ ಹೇಳಿದ್ದೇ ಹೇಳಿ ಸುಖಿಸುವಂಥವರು, ಹಳೆಯ ಟೇಪನ್ನು ಮತ್ತೆ ಕೇಳಿಸಿದಂತೆ. ವಿ.ಸೀ. ಹಾಗಲ್ಲ. ಅವರ ಪಾಠದಲ್ಲಿ ಪ್ರತಿಸಲವೂ ಒಂದು ಹೊಸತನವಿರುತ್ತಿತ್ತು. ನವನವೋನ್ಮೇಷವಿರುತ್ತಿತ್ತು. ಅರಿತವರ ಆಪ್ತಸಭೆಯಲ್ಲಿ ಸಂಗೀತಗಾರ ರಾಗದ ಹೊಸ ಪದರುಗಳನ್ನು ರೇಕುಗಳನ್ನು ಬಿಡಿಸಿ ತೋರಿಸಿದಂತೆ ವಿ.ಸೀ.ಯವರ ತರಗತಿಗಳಲ್ಲೂ ಸಾರ್ವಜನಿಕ ಭಾಷಣಗಳಲ್ಲಿಯೂ ಒಂದು ಅನೂಹ್ಯತೆ , ಒಂದು ಸಡಗರ ಯಾವಾಗಲೂ ಇರುತ್ತಿತ್ತು. ಎತ್ತರದಲ್ಲಿಟ್ಟ ದೀಪಮಾಲೆಯನ್ನು ಹೊತ್ತಿಸಿ ಬೆಳಗಿಸುತ್ತಿದ್ದಾರೆಯೇ ಎನಿಸುತ್ತಿತ್ತು. ಇದನ್ನು ವಿವರಿಸುತ್ತಾ ಪ್ರೊ. ಎಸ್.ಕೆ. ರಾಮಚಂದ್ರರಾಯರು ಒಂದು ಕಡೆ ಹೇಳಿದ್ದಾರೆ - 'ಈ ಬಗೆಯ ಸಂಭ್ರಮ ವಿ.ಸೀ. ಬರಹಗಳಲ್ಲಿ ಅದೇ ಪ್ರಮಾಣದಲ್ಲಿ ಸಿಗುವುದಿಲ್ಲ' ಎಂದು. ಎಷ್ಟೇ ಆಗಲಿ ಬರಹಕ್ಕಿಂತ ಆಡುವ ಮಾತು ಹೆಚ್ಚು ಸಹಜವಲ್ಲವೆ? ವಿ.ಸೀ. ಅವರದು ಗಂಡು ಶೈಲಿ, ಆದರೆ ರಾಮನ ಶಾಂತ ಗಂಡುತನ, ಭೀಮನ ಮೊಂಡು ಗಂಡುತನವಲ್ಲ. ಪ್ರತಿ ಪದದ ತೂಕ, ಇಂಪು, ಆಕಾರ, ದನಿ, ಪ್ರತಿಧ್ವನಿ, ಹಿತ, ತಿಳಿದು ಆಡಿದಂಥ ಮಾತು, ಕನ್ನಡವಾಗಲಿ ಇಂಗ್ಲಿಷಾಗಲಿ. ಬರಹದಲ್ಲಿಯೂ ಅಷ್ಟೆ. ವಿಶ್ವಸಂಸ್ಕೃತಿಯ ವಿವಿಧ ಕ್ಷೇತ್ರಗಳ ಪರಿಚಯವುಳ್ಳಂಥವರ ಸಭ್ಯತೆ , ಎಳೆತ.

ಅವರು ಮಹಾರಾಜಾ ಕಾಲೆಜಿನಲ್ಲಿ ಪಾಠ ಮಾಡುತ್ತಿದ್ದಾಗ 'ಪ್ರಬುದ್ಧ ಕರ್ಣಾಟಕ 'ದ ಸಂಪಾದಕತ್ವವನ್ನು ವಹಿಸಿಕೊಂಡು ಕಥೆ, ಕವಿತೆ, ವಿಮರ್ಶೆ, ಕವಿ ಕಾಲ-ಪಾಠ ಸಂಬಂಧದ ಲೇಖನಗಳಲ್ಲದೆ ಬೇರೆ ಬೇರೆ ಪ್ರಚಲಿತ

ವಿಷಯಗಳ (current affairs) ಮೇಲಿನ ಲೇಖನಗಳೂ ಬರಲಿ ಎಂದು ಶ್ರಮಿಸಿದರು. ಕನ್ನಡ ಮಾತ್ರ ಓದುವವರಿಗೂ ಜಗತ್ತಿನ ವಿದ್ಯಮಾನಗಳನ್ನು ತಿಳಿಸುವಂಥ ಗದ್ಯ ಬೆಳೆದು ಬರಬೇಕು ಎಂಬ ಪ್ರಯತ್ನದಲ್ಲಿ ಅನೇಕರನ್ನು ಬರೆಯಲು ಹುರಿದುಂಬಿಸಿದರು. ಹಿರಿಯರು ಮಾತ್ರವಲ್ಲ, ವಿದ್ಯಾರ್ಥಿಗಳನ್ನೂ. ಸಿವಿಲ್ ಎವಿಯೇಷನ್ ಮೇಲೆ ಹತ್ತಿಪ್ಪತ್ತು ವಿದೇಶಿ ಪತ್ರಿಕೆಗಳ ಲೇಖನಗಳನ್ನು ನನಗೆ ಕೊಟ್ಟು ನನ್ನ ಕೈಯಲ್ಲಿ ಆ ವಿಷಯದ ಮೇಲೆ ಒಂದು ಲೇಖನ ಬರೆಸಿದ್ದರು.

ಕಾಲೇಜ್ ದಿನಗಳಿಂದ ಅವರ ಕೊನೆಯ ದಿನಗಳವರೆಗೂ ವಿ.ಸೀ. ಅವರ ವಿಶ್ವಾಸ ಪ್ರೋತ್ಸಾಹ ನನಗೆ ಒಂದೇ ಪ್ರಕಾರ ದೊರೆಯಿತು. ಮುಂದೆ ನಾನು ಪತ್ರಿಕೆಗಳ ಸಂಪಾದಕನಾಗಿ ಅವರಿಂದ ಲೇಖನ ಕೋರಿದರೆ ತಪ್ಪದೆ ಕಳಿಸುತ್ತಿದ್ದರು. ನಮ್ಮ ತಂದೆ ತೀರಿಹೋದ ನಂತರ ಅವರ ಸಂಗೀತ ರಚನೆಗಳ ಪುಸ್ತಕವೊಂದನ್ನು ತಂದಾಗ ನನ್ನ ವಿನಂತಿ ಮನ್ನಿಸಿ ಸುಂದರವಾದ ವ್ಯಕ್ತಿಚಿತ್ರ ಬರೆದು ಕೊಟ್ಟರು. ಪುಸ್ತಕದ ಪ್ರತಿ ಕೈಗೆ ಕೊಡಲು ಅವರ ಮನೆಗೆ ಹೋದಾಗ ಅವರ ಕಂಠ ಉಮ್ಮಳಿಸಿದ್ದು, ಕಣ್ಣಲ್ಲಿ ನೀರು ತುಂಬಿಬಂದದ್ದು ಮರೆಯಲಾರೆ.

ವಿ.ಸೀ. ಅಂಥವರು ನಮ್ಮಲ್ಲಿ ಹುಟ್ಟಿದ್ದು ನಮ್ಮ ಅದೃಷ್ಟ, ಅವರ ದುರದೃಷ್ಟ. ದೊಡ್ಡ ಸಾಗರವನ್ನು ಈಜುವ ಶಕ್ತಿಯಿದ್ದಾತ ಸಣ್ಣಕುಂಟೆಯಲ್ಲಿ ಬದುಕಬೇಕಾಯಿತು. ಬಿ. ಎಂ. ಶ್ರೀ. ಬಗ್ಗೆ ಅವರ ಆಂಗ್ಲ ಸಹೋದ್ಯೋಗಿಯೊಬ್ಬರು, ''ಶ್ರೀಕಂಠಯ್ಯನವರು ಇಂಗ್ಲೆಂಡಿಗೆ ಹೋಗಿದ್ದರೆ, ಇಂಗ್ಲೆಂಡ್ ಅವರನ್ನು ಹಿಂದೆ ಬರಲು ಬಿಡುತ್ತಿದ್ದಿಲ್ಲ'' ಎಂದರು ಎಂಬ ಮಾತು ಈ ಪುಸ್ತಕದಲ್ಲಿ ಬರುತ್ತದೆ. ವಿ.ಸೀ. ಅವರ ಮನೋವೈಶಾಲ್ಯದವರು, ಸೌಂದರ್ಯಸೂಕ್ಷ್ಮತೆಯುಳ್ಳವರು, ವಾಗ್ಸ್ವಾಮ್ಯವುಳ್ಳವರು ವಿದೇಶದಲ್ಲಿದ್ದಿದ್ದರೆ ದೊಡ್ಡ ವಿಶ್ವವಿದ್ಯಾಲಯದಲ್ಲಿ, ವಿದ್ವತ್ಪತ್ರಿಕೆಗಳಲ್ಲಿ ವಿಖ್ಯಾತರಾಗಿರುತ್ತಿದ್ದರು. ಬಂಗಾಳದಲ್ಲಿಯೋ ಮಹಾರಾಷ್ಟ್ರದಲ್ಲಿಯೋ ಜನಿಸಿದ್ದರೆ ಅವರ ಕೀರ್ತಿ ನಮ್ಮ ದೇಶದಲ್ಲೆಲ್ಲ ಹಬ್ಬಿರುತ್ತಿತ್ತು. ಕನ್ನಡದ ನಾವು ಅವರ ಗರಿಮೆಗೆ ತಕ್ಕ ಸಂಭಾವನೆಯಿರಲಿ ಸಮ್ಮಾನವನ್ನೂ ಮಾಡದೆ ಹೋದೆವು. ಕೊಡಿ ಎಂದು ಅವರು ಕೇಳಿದವರಲ್ಲ. ಕಷ್ಟದಲ್ಲಿಯೇ ಇದ್ದುಕೊಂಡೂ ಕಹಿಯಾದವರಲ್ಲ, ಒರಟಾದವರಲ್ಲ. ನೋವು ತಿಂದ ಮುಖ ಅವರದು ಎನಿಸುತ್ತಿತ್ತು. ನಕ್ಕಾಗ ಮೋಡದ ಹಿಂದಿನಿಂದ ಬೆಳಕು ಬಂದಂತೆ ತೋರುತ್ತಿತ್ತು. ಸಾರಸ್ವತ ಪ್ರಪಂಚದ ಸಿರಿಯಿರುವಾಗ ತಮಗೇನು ಕಡಿಮೆ ಎಂಬ ಸುಮ್ಮಾನದಿಂದ ಬಾಳಿದರು. ನಿಜದ ನೇರಕೆ ನಡೆವ ನಿಶ್ಚಲತೆಯನ್ನು ಕಾಪಾಡಿಕೊಂಡರು. ಅವರ ಈ ನಿಷ್ಠೆಯೇ ಅವರಿಗೆ ಡಿ.ವಿ. ಗುಂಡಪ್ಪ, ಮಾಸ್ತಿ, ಕಾರಂತ, ಕೆ.ವಿ. ಅಯ್ಯರರಂಥ ಬೇರೆ ಬೇರೆ ಮನೋಭಾವಗಳ ಕಟ್ಟಾಳುಗಳ ಸ್ನೇಹ ದೊರಕಿಸಿದ್ದು. ಅವರ ನಿಶ್ಚಲತೆಯ ಹಿಂದೆ ಒಂದು ನಿಷ್ಫಲವೂ ಇತ್ತೆನಿಸುತ್ತದೆ. ಇನ್ನಷ್ಟು ಛಲವಂತರಾಗಿದ್ದರೆ ಅವರ ಛಾಪು ಜನಜೀವನದ ಮೇಲೆ ಹೆಚ್ಚು ಬಿದ್ದಿರುತ್ತಿತ್ತೋ ಏನೋ. ಆದರೆ ಸಾಧುಪ್ರಾಣಿ, ಕಾದಾಡುವುದು ಮುನ್ನುಗ್ಗು

ವುದು ಅವರಿಗೆ ಇಷ್ಟವಿರಲಿಲ್ಲ. ಯಾರಲ್ಲಿಯೂ ಹುಳುಕು ಹಿಡಿದು ನೋಯಿಸಲು ಮುಂದಾಗುತ್ತಿರಲಿಲ್ಲ.

ಮ್ಯಾಥ್ಯು ಆರ್ನಾಲ್ಡ್ ಬಗ್ಗೆ ಬರೆಯುತ್ತ ಆತ ಮೂವತ್ತು ವರ್ಷ ಶಾಲಾ ಇನ್‌ಸ್ಪೆಕ್ಟರಾಗಿಯೇ ಇದ್ದುಬಿಟ್ಟ, ಆತನಿಗೆ ಬಡ್ತಿ ಏಕೆ ದೊರೆಯಲಿಲ್ಲವೋ ಅದೊಂದು ಗೂಢ ಎಂದು ಒಬ್ಬ ಲೇಖಕನೆಂದಿದ್ದಾನೆ. ಇದರಿಂದ ಆರ್ನಾಲ್ಡ್ ಪ್ರಭಾವಗಳೇನೂ ಕುಂದಾಗಲಿಲ್ಲ. Sweetness and light ಹಬ್ಬುವ ಆತನ ಕಾರ್ಯ ಸತತವಾಗಿ ಮುಂದುವರಿಯಿತು. ಆದರೆ ನಮ್ಮ ದೇಶದ ಸಂಸ್ಕೃತಿಯ ಪರಿಸರ ಎಂಥದೆಂದರೆ ವಿ.ಸೀ.ಯವರಂಥವರ ಹೆಸರು ಪಕ್ಕದ ಪ್ರಾಂತಗಳವರಿಗೂ ತಿಳಿಯದೆ ಹೋಯಿತು.

ದೊಡ್ಡದೊಂದು ಜೀವನದ ಬಗ್ಗೆ ಶ್ರೀ ರಾಧಾಕೃಷ್ಣರು ಮಮತೆಯಿಂದ ಚೊಕ್ಕವಾಗಿ ಬರೆದಿದ್ದಾರೆ. ಅವರ ಕವಿತೆ, ವಿಮರ್ಶೆ, ನಾಟಕ, ಜೀವನಚಿತ್ರಗಳ ಹೆಚ್ಚಳವನ್ನು ಅರ್ಥಮಾಡಿಕೊಂಡು ಬಣ್ಣಿಸಿದ್ದಾರೆ. ವಿ.ಸೀ.ಯವರ ಜ್ಞಾನೋತ್ಸಾಹ, ಹೊಸಗನ್ನಡ ಗದ್ಯ ತಿಳಿಯಾಗಿ ಶಕ್ತಿಯುತವಾಗಿ ಬೆಳೆಯುವುದರಲ್ಲಿ ಅವರ ಯೋಗದಾನ ಇವನ್ನು ಎತ್ತಿ ತೋರಿಸಿದ್ದಾರೆ. ರಾಧಾಕೃಷ್ಣರು ತಮ್ಮ ತಂದೆಯವರ ಬಗ್ಗೆ, ರಾಮನ್, ಡಾರ್ವಿನ್, ರಾಮಾನುಜನ್‌ರ ಮೇಲೆ ಪುಸ್ತಕ ಬರೆದು ಹೆಸರು ಪಡೆದವರು. ಅವರ ಈ ಪುಸ್ತಕ ಓದಿದಾಗ , ಚೆನ್ನಾಗಿ ಬಾಳಿದ ಜೀವನ ಎಷ್ಟು ಅಪರೂಪವೋ ಚೆನ್ನಾಗಿ ಬರೆದ ಜೀವನ ಚರಿತ್ರೆ ಅಷ್ಟೇ ಅಪರೂಪ ಎಂಬ ಮಾತು ಎಷ್ಟು ದಿಟ ಎಂಬುದು ವೇದ್ಯವಾಗುತ್ತದೆ. ಇಂತಹ ಪುಸ್ತಕಕ್ಕೆ ಬಿ.ಜಿ.ಎಲ್. ಸ್ವಾಮಿಯಂಥವರು ಮುನ್ನುಡಿ ಬರೆಯಬೇಕಾಗಿತ್ತು. ನನ್ನನ್ನು ಬರೆಯೆಂದಾಗ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಒಬ್ಬ ಅಧ್ಯಾಪಕ ಯೇಲ್‌ಗೆ ವಲಸೆ ಹೋದಾಗ ಇನ್ನೊಬ್ಬ ಅಧ್ಯಾಪಕ "How remarkable! By this one act the average goes up in both places" ಎಂದಿದ್ದು ನೆನಪಿಗೆ ಬಂತು. ನನ್ನ ಈ ಮಾತಿನಿಂದ ರಾಧಾಕೃಷ್ಣರ ಪುಸ್ತಕದ ಬೆಲೆಯೇನೂ ಹೆಚ್ಚಿಲ್ಲ. ಆದರೆ ಗುರುವಿನ ಪಟದ ಮುಂದೆ ಸಣ್ಣದೊಂದು ನಂದಿಬಟ್ಟಲ ಹೂವನ್ನು ಸಮರ್ಪಿಸುವ ಅವಕಾಶ ನನಗೆ ಒದಗಿ ಬಂತು. ಅದಕ್ಕಾಗಿ ನಾನು ಕೃತಜ್ಞ.

ಎಚ್. ವೈ. ಶಾರದಾಪ್ರಸಾದ್

ಪ್ರಸ್ತಾವನೆ

ಹಿರಿಯರಾದ ಕ.ವೆಂ. ರಾಘವಾಚಾರ್ಯರೊಮ್ಮೆ ಹೇಳಿದ್ದುಂಟು : ''ವಿ.ಸೀ.ಯವರದ್ದು ಯಾವಾಗಲೂ ನಗುಮುಖ, ಗೆಲುಮುಖ. ಆದರೆ ಅದು ನೋವನ್ನರಿಯದ ನಗುವಲ್ಲ, ಸೋಲನ್ನರಿಯದ ಗೆಲುವಲ್ಲ'' ಎಂದು. ದಿಟ, ಅವರನ್ನು ಬಂದಡರಿದ ನೋವು ನಾನಾಬಗೆಯದು, ನಿಡುಗಾಲದ್ದು. ಅವರ ಸೋಲೂ ಹಾಗೆಯೇ, ಅಡಿಗಡಿಗೆ ಬಂದದ್ದು; ಎತ್ತ ತಿರುಗಿದರತ್ತ ಸೋಲೇ. ಆದರೂ ಅವರ ಮುಖದಿಂದ ನಗು ಮರೆಯಾಗಲಿಲ್ಲ, ಅವರ ಮನಸ್ಸಿನ ಗೆಲುವು ಮಾಸಲಿಲ್ಲ. ಈ ಪುಸ್ತಕದ ಲೇಖಕರೇ ಹೇಳಿರುವಂತೆ, ಅವರ ಬದುಕಿನಲ್ಲಿ ಬೆಲ್ಲದ ಭಾಗಕ್ಕಿಂತ ಬೇವಿನ ಭಾಗವೇ ಹೆಚ್ಚಿನದು. ಆದರೆ ವಿ. ಸೀ. ಎಲ್ಲರಿಗೂ ಎಲ್ಲಕಾಲಕ್ಕೂ ಬೆಲ್ಲವಾಗಿಯೇ ಇದ್ದರು; ಯಾರಿಗೂ ಎಂದೂ ಬೇವೆನಿಸಲಿಲ್ಲ. ವ್ಯಕ್ತಿಯ ಹಿರಿಮೆಯನ್ನು ಹೇಳಲು ಇನ್ನೊಂದು ಗುಣ ಬೇಕೆ?

ಸಭೆಯಲ್ಲಿ ಮಾತನಾಡುವಾಗ, ಪುಸ್ತಕದಲ್ಲಿ ಬರೆಯುವಾಗ ಮೌಲ್ಯಗಳ ಸೋಗನ್ನು ಅಂದವಾಗಿ ತೊಡುವುದು ಕಷ್ಟವಲ್ಲ. ಆದರೆ ಭಾಷಣಕ್ಕಿಂತ, ಬರಹಕ್ಕಿಂತ ಮಿಗಿಲಾದುದು ಬದುಕು. ಏನು ಬರೆದರು, ಏನೆಲ್ಲ ಮಾಡಿದರು, ಏನು ಮಾತನಾಡಿದರು, ಹೇಗಿತ್ತು ಅವರ ಮಾತು ಎನ್ನುವುದಕ್ಕಿಂತ ಹೇಗೆ ಬದುಕಿದರು ಎಂಬುದೇ ಮುಖ್ಯವಲ್ಲವೆ? ಈ ಪರೀಕ್ಷೆಯಲ್ಲಿ ಗೆದ್ದವರು ವಿ. ಸೀ. ಹಾಗೆಂದೇ ಅವರ ನಗುಮುಖ, ಗೆಲುಮುಖ. ಬದುಕಿನುದ್ದಕ್ಕೂ ಎಡೆಬಿಡದೆ ಬಂದ ನೋವನ್ನೂ ಸೋಲನ್ನೂ ಬೇವನ್ನೂ ಅಂಜಿಕೆಯಿಲ್ಲದೆ, ಬೇಸರಿಕೆಯಿಲ್ಲದೆ, ದುಗುಡಪಡದೆ ಎದುರಿಸಿದರು; ಕಷ್ಟಗಳನ್ನು ತಾಳಿಕೊಂಡರು, ಮನಸ್ಸನ್ನು ಕೆಡಿಸಿಕೊಳ್ಳಲಿಲ್ಲ. ಒಳಗುದಿ, ಆಂತರಕ್ಲೇಶ ಎಷ್ಟಿದ್ದರೂ ತಮ್ಮೊಳಗೆ ಅದುಮಿಟ್ಟುಕೊಂಡು, ತಮ್ಮ ಸನಿಹಕ್ಕೆ ಬಂದವರಿಗೆ ಮಾನವತೆಯ ಸಂಸ್ಕಾರವನ್ನು ಮನಸಾರ ಸ್ಪರ್ಶಮಾಡಿಸಿದರು. ಇದೊಂದು ಅಸಾಮಾನ್ಯವಾದ ವ್ಯಕ್ತಿತ್ವ. ಸೀತೆಯ ವಿಚಾರವಾಗಿ ಅವರೇ ಹೇಳಿರುವ ಮಾತು ಅವರಿಗೂ ಅನ್ವಯವಾದೀತು — ಬದುಕು-ಆದರ್ಶಗಳ ಒಂದು ಅಸಾಮಾನ್ಯಮಿಶ್ರಣ. 'ಈ ಪರಿಯ ಹಿರಿಮೆಯನಾವ ಕವಿಯೊಳು ಕಾಣೆ ' ಎಂದು (ದಾಸರ ಕ್ಷಮೆ ಕೋರಿ) ಹೇಳಬಹುದೇನೋ!

ಇಂಥ ಒಬ್ಬ ವ್ಯಕ್ತಿಯ ಬದುಕನ್ನೆಲ್ಲ, ಬದುಕಿನ ಬವಣೆಗಳನ್ನೆಲ್ಲ ಒಲುಮೆ-ಗರಿಮೆಗಳನ್ನೆಲ್ಲ, ಸಿದ್ಧಿಸಾಧನೆಗಳನ್ನೆಲ್ಲ ಒಂದು ಪುಸ್ತಕದಲ್ಲಿ ಕೂಡಿಟ್ಟು ಕಾಣಿಸುವುದು, ಆ ವ್ಯಕ್ತಿಯ ಹೆಗ್ಗಳಿಕೆಯನ್ನು ಮನಮುಟ್ಟುವಂತೆ ಕಂಡರಿಸುವುದು ಸುಲಭದ ಕೆಲಸವಲ್ಲ. ಇದನ್ನು ನಮಗೆ ಹಿರಿಯರಾದ ಶ್ರೀ ಬಿ. ಪಿ. ರಾಧಾಕೃಷ್ಣ ಅವರು ಕೈಗೆತ್ತಿಕೊಂಡು ಓದಿದವರೆಲ್ಲ ತಲೆದೂಗುವಂತೆ ಕೈಗೂಡಿಸಿ

ದ್ದಾರೆ. ಕನ್ನಡದ ಯಾವ ಸಾಹಿತಿಗೂ ಇಂಥದೊಂದು ಮುತ್ತಿನ ಹಾರ ದೊರಕಿರುವ ನೆನಪು ನನಗಂತೂ ಇಲ್ಲ. ಮುತ್ತಿನ ಹಾರವೆಂದೆನೆ? ಹಾರ ಹಾಕಿಸಿಕೊಂಡವರೇ ಸೊಗಸಾದ ಒಂದು ಮುತ್ತು; ಮತ್ತೆ ಹಾರ ಹಾಕಿದವರೇನು ಕಡಿಮೆಯೇ? ಅವರೂ ಎಲ್ಲರೂ ಮೆಚ್ಚಿಕೊಂಡ ಒಂದು ಮುತ್ತು. ಒಂದು ಮುತ್ತಿನ ಬೆಲೆಯನ್ನು ಅಂದವನ್ನು ಹೊರಗಿನ ಹೊಳಹನ್ನು ಒಳಗಿನ ನೀರನ್ನು ಅರಿತುಕೊಳ್ಳುವುದು ಮತ್ತೊಂದು ಮುತ್ತಲ್ಲದೆ, ಬೇರೊಂದು ಕಲ್ಲೆ? ಎಂದ ಮೇಲೆ ಮುತ್ತಿನ ಹಾರ ಯಾರಿಗೆ? ಕನ್ನಡ ನುಡಿಗೆ, ಕನ್ನಡನಾಡ ಜನರಿಗೆ.

ಇವರಿಬ್ಬರ ನಡುವಣ ನಂಟು ಮೂಲದಲ್ಲಿ ಗುರು-ಶಿಷ್ಯರದ್ದು. ಜಾಣನಾದ ಶಿಷ್ಯನಿಗೆ ಗುರುವಿನ ಗುಣಾವಗುಣಗಳೆಲ್ಲ ನೇರಾಗಿ, ಚೆನ್ನಾಗಿಯೇ, ತಿಳಿಯುವುದು. ಆದರೆ ಈ ಶಿಷ್ಯ ಗುಣೈಕಪಕ್ಷಪಾತಿ, ಗುಣಾನುಸರಣಕುತೂಹಲಿ. ಜನರೆದುರು ತನ್ನ ಗುರುವಿನ ಹಿರಿಮೆಯನ್ನು ತೋರಿಸಬೇಕೆಂಬುದು ಹಳೆಯದೊಂದು ಆಣತಿ (‘ಗುರುಂ ಪ್ರಕಾಶಯೇದ್ಧೀಮಾನ್’). ಇದನ್ನು ಇಲ್ಲಿ ಈ ಶಿಷ್ಯೋತ್ತಮ ಪಾಲಿಸಿದ್ದಾರೆ. ಗುರುಶಿಷ್ಯಸಂಬಂಧಕ್ಕಿಂತ ಇಲ್ಲಿ ಹೆಚ್ಚಾಗಿ ಕಾಣುವುದು ಸಹೃದಯನೊಬ್ಬನ ಹೃದಯಸ್ಪಂದನ ; ವಿ.ಸೀ. ಅವರೇ ಯಾವುದೋ ಸಂದರ್ಭದಲ್ಲಿ ಹೇಳಿದಂತೆ ‘ಒಬ್ಬರ ಗುಣಕಿನ್ನೊಬ್ಬರು ಸೋಲುತೆ.’

ಗುರುವಿನ ನೆರಳಡಿಯಲ್ಲಿಯೇ ಬೆಳೆದು ನಿಂತ ಶಿಷ್ಯನಲ್ಲ ಶ್ರೀ ರಾಧಾಕೃಷ್ಣ ಅವರು. ಕಾಲೇಜಿನಲ್ಲಿ ಓದುವಾಗ ಹಲವು ಗುರುಗಳ ನಡುವೆ ವಿ. ಸೀ. ಒಬ್ಬರು, ಅಷ್ಟೆ. ಶ್ರೀ ರಾಧಾಕೃಷ್ಣ ಅವರು ಸ್ವತಂತ್ರವಾಗಿಯೇ ಬೆಳೆದವರು, ಹಿರಿಮೆಯನ್ನು ಸಾಧಿಸಿಕೊಂಡವರು, ನಾಡಿನ ಮೆಚ್ಚುಗೆಯನ್ನು ಪಡೆದುಕೊಂಡವರು. ಅವರು ಆರಿಸಿಕೊಂಡ ಕ್ಷೇತ್ರವೂ ಕನ್ನಡ ಸಾಹಿತ್ಯವಲ್ಲ ; ತಮಗೆ ಕನ್ನಡ ಪಾಠ ಹೇಳಿದ ಗುರುವನ್ನು ಬೇಗನೆ ಮರೆತುಬಿಡಬಹುದಾಗಿತ್ತು. ಮೇಲಾಗಿ ರಾಧಾಕೃಷ್ಣ ಅವರು ಒಲಿದದ್ದು ವಿಜ್ಞಾನಕ್ಕೆ, ಶಾಸ್ತ್ರಕ್ಕೆ ; ದುಡಿದದ್ದು ಭೂವಿಜ್ಞಾನಕ್ಷೇತ್ರದಲ್ಲಿ. ಅಲ್ಲಿ ಅವರಿಗೆ ಬಹು ಹಿಂದಿನಿಂದಲೂ ಆಚಾರ್ಯಪಟ್ಟವೇ. ಹೀಗಿದ್ದರೂ ಅವರು ವಿ.ಸೀ.ಯವರನ್ನು ನೆನಪಿನಲ್ಲಿರಿಸಿಕೊಂಡದ್ದು ಅವರ ವ್ಯಕ್ತಿತ್ವಕ್ಕೆ ಮಾರುಹೋಗಿ. ಅವರೊಂದಿಗೆ ನಿಕಟವಾದ ನಂಟನ್ನು ಉಳಿಸಿಕೊಂಡು ಬಂದರು. ಕನ್ನಡ ಸಾಹಿತ್ಯದೊಂದಿಗೆ ರಾಧಾಕೃಷ್ಣ ಅವರ ಸಂಬಂಧವೂ ಗಾಢವಾದುದು. ಹಿರಿಯ ಸಾಹಿತಿಗಳಾದ ಡಿ.ವಿ.ಜಿ., ಮಾಸ್ತಿ, ಎ. ಆರ್. ಕೃಷ್ಣಶಾಸ್ತ್ರಿಗಳು, ತಿರುಮಲೆ ತಾತಾಚಾರ್ಯ ಶರ್ಮರು ಮೊದಲಾದವರೆಲ್ಲ ರಾಧಾಕೃಷ್ಣ ಅವರ ವಿಚಾರವಾಗಿ ತುಂಬ ಆದರವನ್ನೂ ಅಭಿಮಾನವನ್ನೂ ಗೌರವವನ್ನೂ ಇರಿಸಿಕೊಂಡಿದ್ದುದನ್ನು ನಾನು ಬಲ್ಲೆ.

ಇದಕ್ಕೆ ರಾಧಾಕೃಷ್ಣ ಅವರ ಸಜ್ಜನಿಕೆ, ಸಾತ್ವಿಕತೆ, ನೀತಿಪರತೆ, ಅಧ್ಯಾತ್ಮನಿಷ್ಠೆ, ಸಾಹಿತ್ಯಶ್ರದ್ಧೆ, ಸೌಹಾರ್ದಭಾವನೆಗಳೇ ಕಾರಣ. ಈ ಹಿರಿಯರದ್ದು ಬರವಣಿಗೆಯಲ್ಲೂ ನುರಿತ ಕೈ. ಕನ್ನಡ ಸಾಹಿತ್ಯಕ್ಕೆ ಈಗಾಗಲೆ ಅವರ ಕೊಡುಗೆಯ ಪರಿಚಯ

ಧಾರಾಳವಾಗಿ ಒದಗಿಬಂದಿದೆ. ಅವರ ಬರವಣಿಗೆಯಲ್ಲಿ ನಾವು ಗುರುತಿಸುವುದು ಎವೇಕವನ್ನು, ವಿಚಾರವನ್ನು, ಮೌಲ್ಯಚಿಂತನೆಯನ್ನು, ಸಾರನಿರೂಪಣೆಯನ್ನು, ಸಮಗ್ರತೆಯನ್ನು. ಈಗ ಹೊರಬರುತ್ತಿರುವ ಪುಸ್ತಕ ಅವರ ಹೃದಯವಂತಿಕೆಯ ಅಭಿವ್ಯಕ್ತಿಯೇ. ತಮಗೆ ತುಂಬ ಆದರಣೀಯರಾಗಿದ್ದವರನ್ನು ಕುರಿತ ಬರಹ; ಮನಸ್ಸಿಗೂ ಹೃದಯಕ್ಕೂ ಹತ್ತಿರವಾದ ವಿಷಯ. ನಿಕಟಪರಿಚಯದಿಂದ ಒಡಮೂಡಿದ ವಿಶ್ವಾಸ, ಸೌಹಾರ್ದ, ಸಂವೇದನೆಗಳು ಇಲ್ಲಿ ಕೆಲಸಮಾಡಿವೆ. ವಿ. ಸೀ. ಯವರ 'ನುಡಿ, ನಡೆ, ಕಣ್‌ಬೆಳಕು, ಮನದ ತಿಳಿ, ನಯ, ಹಿತ'ಗಳ ನಿರೂಪಣೆ ಸಾಗಿಬಂದಿದೆ.

ತಮಗೆ ಹೆಚ್ಚೂ ಕಡಮೆ ಸಮಾನಧರ್ಮದವರೇ ಆಗಿದ್ದ ವಿ.ಸೀ. ಯವರನ್ನು ಇವರು ಮೆಚ್ಚಿಕೊಂಡುದೇನು ಸೋಜಿಗವಲ್ಲ. ವಿ.ಸೀ.ಯವರಲ್ಲಿ ಇವರು ಕಂಡಿರುವ ಸಂಕೋಚಪ್ರವೃತ್ತಿ, ನಿರಹಂಕೃತಿ, ಸರಳಜೀವನ, ರುಚಿಶುದ್ಧಿ, ಶುಚಿಪ್ರಿಯತೆ, ಸಾತ್ವಿಕಗುಣ, ವಿಶಾಲವಾದ ಬುದ್ಧಿ, ನಿರ್ಮತ್ಸರತೆ, ಸ್ನೇಹಪರತೆ, ಅಂತರಂಗನಮ್ರತೆ, ಭಾವಸಂಪತ್ತಿ ಇವೆಲ್ಲವೂ ಇವರಲ್ಲಿಯೂ ಇರುವ ಗುಣಗಳೇ. ಇಬ್ಬರಿಗೂ ತಳಕು ಎಳ್ಳಷ್ಟೂ ಇಲ್ಲ; ಯಾವ ವೇಷವನ್ನೂ ತಾಳದೆ ಉತ್ತಮಗೃಹಸ್ಥರಾಗಿಯೇ ಉಳಿದವರು ಇಬ್ಬರೂ. ಇಬ್ಬರೂ ಸಾಧುಜೀವನಕ್ಕೆ ಮನಸೋತವರೇ. ಆದ್ದರಿಂದಲೇ ಇದೊಂದು ಅಪೂರ್ವ ವ್ಯಕ್ತಿಚಿತ್ರವಾಗಿದೆ. 'ರತ್ನಂ ರತ್ನೇನ ಸಂಗಚ್ಛತೇ' ಎಂಬಂತಾಗಿದೆ.

ವಿ.ಸೀ.ಯವರ ವಂಶವೃತ್ತಾಂತದಿಂದ ಆರಂಭಿಸಿ ಅವರ ಬದುಕಿನ ಕೊನೆಯ ಅಂಕದವರೆಗೂ ಮಾಡಿರುವ ಈ ದಿಗ್ದರ್ಶನದಲ್ಲಿ ಅವರ ಅಂತರಂಗ-ವಿಕಾಸಕ್ಕೆ ಹೆಚ್ಚು ಗಮನಕೊಟ್ಟಿರುವುದು ಕಾಣುತ್ತದೆ. ಮಧುರವಾಗಿದ್ದ ಅವರ ವ್ಯಕ್ತಿತ್ವವನ್ನು ಚಿತ್ರಿಸ ಹೊರಟು ಯಶಸ್ವಿಗಳಾಗಿದ್ದಾರೆ. ಮೈಸೂರಿನ ಶುದ್ಧ ಸೌಂದರ್ಯಸಂಪ್ರದಾಯದ ಪ್ರತೀಕದಂತಿದ್ದರು ವಿ.ಸೀ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಕವಿಯಾಗಿ, ಪ್ರಬಂಧಕಾರರಾಗಿ, ವಿಮರ್ಶಕರಾಗಿ, ಶಾಸ್ತ್ರಗ್ರಂಥಗಳ ಬರಹಗಾರರಾಗಿ ಅವರು ಕನ್ನಡದ ಕರೆಗೆ ಓಗೊಟ್ಟುದನ್ನು ವಿವರಿಸಿದ್ದಾರೆ. ಪಂಪಾಯಾತ್ರೆಯಿಂದ ಲಂಡನ್‌ಯಾತ್ರೆಯವರೆಗೆ ಅವರು ತುಳಿದ ದಾರಿಯನ್ನು ಗುರುತಿಸಿದ್ದಾರೆ. ಮುಂದೆ ಅವರ ಅನಾರೋಗ್ಯ, ಅಸಹಾಯತೆಗಳನ್ನೂ ಹೃದಯ ಹಿಂಡುವಂತೆ ಬಣ್ಣಿಸಿದ್ದಾರೆ.

ಒಟ್ಟಿನಲ್ಲಿ ಇದೊಂದು ಪುಸ್ತಕ ವಿ.ಸೀ.ಯವರ ಜೀವನಸಾಧನೆಗಳಿಗೆ ದೊಡ್ಡದೊಂದು ಪಂಜಿನಂತೆ ತೋರಿಕೊಂಡಿದೆ ; ಅವರ ಸಾಹಿತ್ಯಸಂಪದವನ್ನೂ ಸೊಗಸಾಗಿ ಬೆಳಗಿಸುತ್ತದೆ. ಕವಿಕಾವ್ಯವಿಮರ್ಶೆಯೂ ಸಾಕಷ್ಟು ನಡೆದಿದೆಯಾದರೂ ಎಲ್ಲಿಯೂ ಅಪಸ್ವರ ಎದ್ದಿಲ್ಲ, ವಿಮರ್ಶೆ ರಾಜದಂಡವಾಗಿ ಪರಿಣಮಿಸಿಲ್ಲ. ಒಡನಾಡಿಯ ಗೊತ್ತುಗುರಿಗಳನ್ನು ಸಹೃದಯರಿಗೆ ಸ್ಪಷ್ಟಪಡಿಸುವಷ್ಟೇ ಉದ್ದೇಶ ಇಲ್ಲಿಯದು. ಲೇಖಕರ ಸಂಯಮ, ಔಚಿತ್ಯ ಪ್ರಜ್ಞೆ, ಕಥನ

ಕೌಶಲ, ಕ್ರಮವರಿತ ನಿರೂಪಣೆ ಇವು ಪುಸ್ತಕದಲ್ಲಿರುವ ವಿವರಗಳಿಗೆ ಇನ್ನಷ್ಟು ಮೆರುಗು ಕೊಡುತ್ತವೆ; ಪುಸ್ತಕದ ಸ್ವಾರಸ್ಯವನ್ನೂ ಪ್ರಯೋಜನವನ್ನೂ ಹೆಚ್ಚಿಸುತ್ತವೆ. ವಿ.ಸೀ. ಅವರ ವ್ಯಕ್ತಿತ್ವದೊಂದಿಗೆ ರಾಧಾಕೃಷ್ಣ ಅವರ ವ್ಯಕ್ತಿತ್ವವೂ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. 'ಬಲ್ಲವರೆ ಬಲ್ಲರು ಬೆಲ್ಲದ ಸವಿಯ' ಎಂಬಂತಾಗಿದೆ.

ಕನ್ನಡಿಗರು ಅಭಿಮಾನಶೂನ್ಯರೆಂದೂ, ವಿ.ಸೀ. ಅವರ ಸಾರಸ್ವತ ಸೇವೆಯನ್ನು ಸರಿಯಾಗಿ ಗುರುತಿಸಲಿಲ್ಲವೆಂದೂ ನೆನಸಿಕೊಳ್ಳುತ್ತಿಲ್ಲವೆಂದೂ ಲೇಖಕರ ಕೊರಗು (ಪು. ೨೪೫). ಇದು ದಿಟವೇ. ಅವರು ಬರೆದದ್ದೆಲ್ಲ ಬಂಗಾರವೇ. ಬರೆದದ್ದೆಲ್ಲವೂ, (ಹೇಳಿ ಬರೆಯಿಸಿದ್ದೆಲ್ಲವೂ) ಅಚ್ಚಾಗಲಿಲ್ಲ. ಇದೊಂದು ಕೊರಗು ವಿ.ಸೀ. ಅವರಿಗೂ ಇದ್ದಿತು. ಆದರೂ ಎಳ್ಳಷ್ಟೂ ಅಸೂಯೆಪಡದೆ, ಯಾರನ್ನೂ ನೋಯಿಸದೆ ತಮ್ಮ ಅಳಲನ್ನು ತಮ್ಮಲ್ಲೆ ಅಡಗಿಸಿಕೊಂಡರು. ಅವರ ಕತೆಯೇನೋ ಮುಗಿಯಿತು. ಅವರ ನೆನಪೂ ಮಾಸುವುದರಲ್ಲಿತ್ತು. ನಮ್ಮ ವಿ.ಸೀ. ಸಂಪದದ ಗೆಳೆಯರು, ವೆಂಕಟೇಶಮೂರ್ತಿ ಮತ್ತಿತರರು, ಹಾಗಾಗಗೊಡದೆ ವಿ.ಸೀ. ಅವರ ಸಾರಸ್ವತಸೇವೆಯನ್ನು ನಾಡವರಿಗೆ ಮತ್ತೊಮ್ಮೆ ಪರಿಚಯಮಾಡಿಕೊಡಲು ತೊಡಗಿರುವುದೊಂದು ಹೆಮ್ಮೆಯ ಮಾತು. ಕನ್ನಡಿಗರೆಲ್ಲರೂ ತೀರ ಅಭಿಮಾನಶೂನ್ಯರಲ್ಲವೇನೋ ಎನಿಸುತ್ತದೆ.

ಮತ್ತೆ ರಾಧಾಕೃಷ್ಣ ಅವರ ಈ ಪುಸ್ತಕವನ್ನು ನೋಡಿದ ಮೇಲಂತೂ ಕನ್ನಡಿಗರ ಮೇಲಿದ್ದ ದೂರು ದೂರಸರಿದಂತೆಯೇ ಸರಿ! ವಿದ್ಯಾವಂತರಾದ, ಸುಸಂಸ್ಕೃತರಾದ ಕನ್ನಡಿಗರ ಅಂತಃಕರಣವು ಒಳ್ಳೆಯ ಸಾಹಿತ್ಯಕ್ಕೆ, ಒಳ್ಳೆಯ ವ್ಯಕ್ತಿತ್ವಕ್ಕೆ ಹೇಗೆ ಮಿಡಿಯವುದೆಂಬುದು ಈ ಪುಸ್ತಕದಿಂದ ಸ್ಪಷ್ಟವಾಗುತ್ತದೆ. ಒಳ್ಳೆಯತನಕ್ಕೆ ಮಿಡಿಯುವುದು ಮಾನವತೆಯ ಗುಣ; ಅದರಲ್ಲಿ ಎಲ್ಲ ಕನ್ನಡಿಗರ ಪಾಲು ಇರದೆ? ಅದರ ಮೇಲೆ ವಿದ್ಯೆ, ಸಂಸ್ಕಾರಗಳು ಒದಗಿಬಂದರೆ ಒಳ್ಳೆಯ ಕಲೆ, ಒಳ್ಳೆಯ ಸಾಹಿತ್ಯ, ಒಳ್ಳೆಯ ಶಾಸ್ತ್ರ, ಒಳ್ಳೆಯ ಉದ್ಯಮ, ಹೀಗೆ ಒಳ್ಳೆಯತನದ ಎಲ್ಲ ಪ್ರಕಾರಗಳಿಗೂ ಮಿಡಿಯುವುದಾಗುತ್ತದೆ. ವಿದ್ಯೆ-ಸಂಸ್ಕಾರಗಳಿದ್ದರೇ ಸದಭಿಮಾನ ಮೂಡುವುದು. ವಿದ್ಯೆಯಿದ್ದರೆ ಮಾತ್ರ ಸಾಲದು, ಅದರಿಂದ ಬೆಳೆಯುವುದು ದುರಭಿಮಾನವೇ, ಸ್ವಾಭಿಮಾನವೇ, ಸ್ವಾರ್ಥಾಭಿಮಾನವೇ! ವಿದ್ಯೆಯೊಂದಿಗೆ ಸಂಸ್ಕಾರವೂ ಸೇರಿದಾಗಲೇ ಸದಭಿಮಾನ, ದೇಶಾಭಿಮಾನ, ಸ್ವಭಾಷಾಭಿಮಾನ, ಪರಾರ್ಥಾಭಿಮಾನಗಳು ಕಾಣಿಸಿಕೊಳ್ಳುವುವು. ಲೋಕ ಸಂಗ್ರಹದ ಬುದ್ಧಿ ಮೇಲೆದ್ದುಕೊಳ್ಳುವುದು.

ಇಂಥದೊಂದು ಪುಸ್ತಕ ಬರಿಯ ಬರೆಯುವ ಚಾಪಲ್ಯದಿಂದ ಎದ್ದು ಬಂದುದಲ್ಲ; ಹಿರಿತನದ ಗೊತ್ತುಗುರಿಗಳನ್ನು ಕನ್ನಡಜನ ಅರಿತುಕೊಂಡು ತಾವೂ ಹಿರಿತನದ ದಾರಿಯಲ್ಲೆ ಅಡಿಯಿಡುವಂತಾಗಲಿ ಎಂಬ ಲೋಕಸಂಗ್ರಹ ಬುದ್ಧಿಯಿಂದ ಹೊರಬಂದುದು. ವಿ.ಸೀ. ಅವರ ವ್ಯಕ್ತಿತ್ವವನ್ನು ಮರೆಯದೆ ಇವರು ತಮ್ಮ ವ್ಯಕ್ತಿತ್ವದಲ್ಲಿ ಅದರ ಪ್ರಭಾವವನ್ನಳವಡಿಸಿಕೊಂಡಿದ್ದಾರೆ. ಹಾಗೆ

ಮಾಡಿ ಇವರು ಕೃತಕೃತ್ಯರಾದರು. ಮತ್ತೆ ಅದನ್ನು ಬರಹದಲ್ಲಿಳಿಸುವ ಅಗತ್ಯ ವಾದರೂ ಏನಿತ್ತು? ತಮ್ಮ ಸಲುವಾಗಿಯಂತೂ ಅಲ್ಲ. ತಾವು ಕಂಡುಕೊಂಡ ಸಂಸ್ಕಾರದ ಬೆಳಕನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವ ಲೋಕೋಪಕಾರ ಚಿಂತನೆಯೇ ರಾಧಾಕೃಷ್ಣ ಅವರ ಪುಸ್ತಕದ ಹಿನ್ನೆಲೆ. ಇವರು ಮಾಡಿರುವ ಉಪಕಾರಕ್ಕೆ ನಮ್ಮ ಕೃತಜ್ಞತೆ ಸಲ್ಲಬೇಕು. ಕೃತಜ್ಞತೆಯೂ ಉತ್ತಮ ಸಂಸ್ಕಾರದಲ್ಲಿ ಅಗತ್ಯವಾಗಿ ಸೇರಿಬರುವ ಒಂದು ಗುಣವಲ್ಲವೆ?

ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ಅರಿಕೆ

ಆಚಾರ್ಯ ವಿ.ಸೀ. ಅವರ ಬಗೆಗೆ ತಾವು ರಚಿಸಿದ ಪುಸ್ತಕವನ್ನು ಹೆಸರಾಂತ ಸಂಶೋಧಕರೂ, ವಿದ್ವಾಂಸರೂ ಆದ ಶ್ರೀ ಬಿ.ಪಿ. ರಾಧಾಕೃಷ್ಣ ಅವರು ಪ್ರಕಟಣೆಗೆ ಕೊಡಮಾಡಿ 'ವಿ.ಸೀ. ಸಂಪದ'ಕ್ಕೆ ಹೂ ಮುಡಿಸಿದ್ದಾರೆ. ವಿ.ಸೀ. ಅವರ ಕಾವ್ಯ, ನಾಟಕ, ಸಾಹಿತ್ಯಸೃಷ್ಟಿಯನ್ನು ಕೂಡಿಸಿ 'ಸಂಪದ' ನಾಲ್ಕು ಸಮಗ್ರ ಸಂಪುಟಗಳನ್ನು ಈಗಾಗಲೇ ಹೊರತಂದಿದೆ. ಬಹುದಾಕ್ಷಿಣ್ಯಪರರಾದ ವಿ.ಸೀ. ತಮ್ಮ ಬಗೆಗೆ ತಾವೇ ಹೇಳಿಕೊಂಡಿದ್ದು ಕಡಮೆ. ಅದರಿಂದಾಗಿ ಈ ಶತಮಾನದ ರಸಿಕವಿದ್ವಾಂಸ ಶ್ರೇಣಿಯ ಮುನ್‌ಸಾಲಿನಲ್ಲಿದ್ದ ಅವರ ಬಗೆಗೆ ವಿಸ್ತೃತ ಜೀವನಚರಿತ್ರೆ ಈವರೆಗೆ ಬರೆದು ಬಂದುದಿಲ್ಲ. ಇಂತಹ ಕೊರತೆಯನ್ನು ರಾಧಾಕೃಷ್ಣರ ಈ ಪುಸ್ತಕ ಬಹುಮಟ್ಟಿಗೆ ನಿವಾರಿಸಿದೆ.

ಆಶ್ಚರ್ಯದ ಮಾತು ಎಂದರೆ, ರಾಧಾಕೃಷ್ಣ ಅವರೇ ಹೇಳಿರುವಂತೆ, ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ಹೊರತು ವಿ.ಸೀ.ಯವರನ್ನು ಅವರು ಹತ್ತಿರದಿಂದ ಕಂಡವರಲ್ಲ, ಅವರೊಡನೆ ಅಂತಹ ಸಲುಗೆಯೂ ಇರಲಿಲ್ಲ. ಆದರೆ ಅವರ ಪಾಠವನ್ನು ಕೇಳಿ ಕನ್ನಡ ವ್ಯಾಸಂಗದಲ್ಲಿ ಹೆಚ್ಚಿನ ಆಸಕ್ತಿಯನ್ನೂ ಹುಮ್ಮಸ್ಸನ್ನೂ ತಾಳಿದವರು. ರಾಧಾಕೃಷ್ಣರು ವಿ.ಸೀ.ಯವರಿಂದ ಮೊದಲು ಕಲಿತ ಕಾವ್ಯಪಾಠ 'ಹರಿಶ್ಚಂದ್ರಕಾವ್ಯಸಂಗ್ರಹ'ವನ್ನು ಕುರಿತದ್ದು. ರಾಘವಾಂಕನ ಕವಿವಾಣಿಯನ್ನು ವಿ.ಸೀ. ಹೇಗೆ ಸಂಪತ್‌ಸಂಭ್ರಮಗಳಿಂದ ಮೊಳಗಿಸಿದರೆಂಬುದನ್ನು ಹೇಳುವಲ್ಲಿ ರಾಧಾಕೃಷ್ಣರ ಮಾತುಗಳನ್ನೇ ಉದ್ಧರಿಸಬೇಕಾಗಿದೆ :

''ವಿ.ಸೀ.ಯವರ ಕಾವ್ಯಪಾಠ ಕೇಳುವವರೆಗೂ ನಾವು ಕೂಪಮಂಡೂಕಗಳಂತೆ ಬೆಳೆದಿದ್ದೆವು. ಈಗ ಒಮ್ಮೆಲೇ ನಮ್ಮ ದೃಷ್ಟಿ ವಿಶಾಲವಾಯಿತು. ಪದಗಳ ಅರ್ಥಕ್ಕಿಂತ ಹೆಚ್ಚಾಗಿ, ಅವುಗಳ ಧ್ವನಿ ನಮ್ಮ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡಿತು. ನಾಲಿಗೆಯ ಮೇಲೆ ಕವಿಯ ಮಾತುಗಳು ನಲಿಯತೊಡಗಿದವು. ಅರ್ಥಕಲ್ಪನೆ ಅರಳುತ್ತಾ ಹೋಯಿತು. ಸುಪ್ತವಾಗಿದ್ದ ಭಾವನಾಪ್ರಪಂಚ ಎಚ್ಚರಗೊಂಡಿತು. ಇವೆಲ್ಲವೂ ಗುರುಪ್ರಸಾದದಿಂದ ನಮಗೆ ಲಭ್ಯವಾಯಿತು.''

ಹೀಗೆ ವಿ.ಸೀ. ಅವರ ಕಾವ್ಯಪಾಠದಿಂದ ಪ್ರಭಾವಿತರಾದ ರಾಧಾಕೃಷ್ಣರು ಆ ಎಳೆಯನ್ನೇ ಬಿಡದೆ ಹಿಡಿದು, ತಮ್ಮಲ್ಲಿ ರಕ್ತಗತವಾಗಿದ್ದ ಸಂಶೋಧನೆಯ ತತ್ವವನ್ನು ಬಳಸಿಕೊಂಡು, ಗುರುಗಳ ಜೀವನದ ಹತ್ತು ಹಲವು ತಂತುಗಳನ್ನು ಕೂಡಿಸಿ, ವಿ.ಸೀ. ಅವರ ಸಮಗ್ರ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ರೂಪಿಸುವಲ್ಲಿ ಸಫಲರಾಗಿದ್ದಾರೆ. ಅದರಿಂದಾಗಿ ಈ ಪುಸ್ತಕದ ಮೌಲ್ಯ. ವಿ.ಸೀ. ಅವರ ಜೀವನ, ಸಾಧನ, ಸಿದ್ಧಿಗಳೂ ಅವರ ಮೈಯಲ್ಲಿ ಇಳಿದುಹೋಗಿದ್ದ ದಿವ್ಯ ಸಂಸ್ಕೃತಿಯೂ ಅವರ ಸಾಹಿತ್ಯ ಸೃಷ್ಟಿಯ ವೈವಿಧ್ಯ, ವೈಪುಲ್ಯಗಳೂ ಪುಸ್ತಕದ

ಪುಟಪುಟಗಳಲ್ಲಿ ಕಾಣಿಸಿಕೊಳ್ಳುತ್ತವೆ. ಈ ಪುಸ್ತಕವನ್ನು ರಚಿಸುವ ವೇಳೆಗೆ ಸಿ.ವಿ.ರಾಮನ್, ಡಾರ್ವಿನ್, ರಾಮಾನುಜನ್ ಅವರ ಜೀವನ-ಸಾಧನಗಳನ್ನು ರಚಿಸಿ ತನಿಗೊಂಡಿದ್ದ ರಾಧಾಕೃಷ್ಣರ ಲೇಖನಿ ವಿ.ಸೀ. ಅವರ ಜೀವನ ಚರಿತ್ರೆಯನ್ನು ರಚಿಸುವಲ್ಲಿ ಸಾರ್ಥಕ ಸಾಫಲ್ಯವನ್ನು ಮುಟ್ಟುತ್ತದೆ.

ಇಂತಹದೊಂದು ಕೃತಿಯಲ್ಲಿ ಗುರು ಮತ್ತು ಶಿಷ್ಯರಿಬ್ಬರ ವಿದ್ವತ್ತು, ರಸಿಕತೆ, ಅಕ್ಷರಸಾಧನೆಗಳಲ್ಲದೆ ಆ ಇಬ್ಬರ ಜೀವನ ಸೌಂದರ್ಯವೂ ಅಂತರಂಗದ ಶ್ರೀಮಂತ ಸಂಸ್ಕೃತಿಯೂ ಹೊಳೆದು ತೋರಿಕೊಳ್ಳುತ್ತವೆ.

ಬಹುಮೌಲಿಕವಾದ ಈ ಜೀವನಚರಿತ್ರೆಯನ್ನು ರಚಿಸಿಕೊಟ್ಟ ಶ್ರೀ ರಾಧಾಕೃಷ್ಣರಿಗೂ ಅತ್ಯಂತ ಆತ್ಮೀಯವಾದ 'ಎರಡು ಮಾತು'ಗಳನ್ನು ಬರೆದು ಪುಸ್ತಕಕ್ಕೆ ತಿಲಕವಿಟ್ಟಿರುವ ಶ್ರೀ ಎಚ್.ವೈ. ಶಾರದಾಪ್ರಸಾದ್ ಅವರಿಗೂ, 'ಪ್ರಸ್ತಾವನೆ'ಯನ್ನು ಬರೆದ ಪ್ರೊ. ಎಸ್.ಕೆ. ರಾಮಚಂದ್ರರಾವ್ ಅವರಿಗೂ ವಿ.ಸೀ. ಸಂಪದ ಋಣಿಯಾಗಿದೆ.

ವಿ.ಸೀ. ಅವರ ಬದುಕು, ಸಾಹಿತ್ಯ, ಸಾಧನೆಗಳನ್ನು ಕುರಿತ ಈ ಕೃತಿಗೆ ಅಕ್ಷರಸಂಯೋಜನೆಯ ನೆರವಿತ್ತಿರುವ 'ಪ್ರಗತಿ ಗ್ರಾಫಿಕ್ಸ್' ಮತ್ತು ಅಂದವಾಗಿ ಮುದ್ರಿಸಿರುವ 'ನೇತ್ರಾ ಪ್ರಿಂಟರ್ಸ್' ಸಂಸ್ಥೆಗಳ ಮಿತ್ರರಿಗೆ ನಾವು ಕೃತಜ್ಞರು.

ಈ ಕೃತಿಯನ್ನು ಸಹೃದಯರು ಅಭಿಮಾನಪೂರ್ವಕವಾಗಿ ಸ್ವಾಗತಿಸುವರೆಂದು ನಂಬಿದ್ದೇವೆ.

ಎಚ್. ಕೆ. ರಂಗನಾಥ್
ಅಧ್ಯಕ್ಷ, ವಿ. ಸೀ. ಸಂಪದ

ಸಾರ್ಥಕ ಬದುಕು

ಪ್ರವೇಶ

ನಾನು ಈಗ ಹೇಳಹೊರಟಿರುವ ಮಾತು ಸುಮಾರು ಅರುವತ್ತು ವರ್ಷ ಗಳಿಗಿಂತ ಹಿಂದಿನದು. ಆಗ ನಾನಿನ್ನೂ ಹದಿನೈದು ವರ್ಷದ ತರುಣ. ಚಾಮ ರಾಜಪೇಟೆಯ ಕೋಟೆ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು, ಈಗಿನ ಸೆಂಟ್ರಲ್ ಕಾಲೆಜಿನ ಎದುರಿಗಿದ್ದ ಇಂಟರ್‌ಮೀಡಿಯೆಟ್ ಕಾಲೆಜನ್ನು ಸೇರಿದ್ದೆ. ಎಲ್ಲವೂ ಹೊಸದು. ನನ್ನ ಇತರ ವಿದ್ಯಾಗುರುಗಳು ಯಾರು? ಅವರಿಂದ ನಾನು ಏನನ್ನು ಕಲಿತೆ ? — ಇವು ಯಾವುವೂ ಈಗ ನೆನಪಿನಲ್ಲಿ ಉಳಿದಿಲ್ಲ. ಅಚ್ಚಳಿ ಯದೆ ಉಳಿದಿರುವ ಒಂದೇ ಒಂದು ನೆನಪೆಂದರೆ ಅಂದು ವಿದ್ಯಾಗುರುಗಳಾದ ವಿ.ಸೀ. ಯವರಿಂದ ಕಲಿತ ಕಾವ್ಯಪಾಠ.

ಪಾಠಕ್ಕೆಂದು ವಿಧಿಸಿದ್ದ ಕೃತಿ 'ಹರಿಶ್ಚಂದ್ರ ಕಾವ್ಯಸಂಗ್ರಹ '. ಆ ಪುಸ್ತಕ ಆಗ ತಾನೆ ವಿಶ್ವವಿದ್ಯಾನಿಲಯದ ಪ್ರಕಟನೆಯಾಗಿ ಹೊರಬಿದ್ದಿತ್ತು. ಅದುವರೆಗೂ ವಿಜ್ಞಾನ ವಿದ್ಯಾರ್ಥಿಗಳಾದವರಿಗೆ, ಕಾವ್ಯದ ಒಂದೆರಡು ಭಾಗ ಮಾತ್ರ ಬೋಧನೆಗೆ ಆಯ್ಕೆಯಾಗಿರುತ್ತಿತ್ತು. ಇದು ಸಾಲದು, ಇದರಿಂದ ಕಾವ್ಯದ ಸೊಗಸು ವಿದ್ಯಾರ್ಥಿಗಳಿಗೆ ತಿಳಿಯುವುದಿಲ್ಲ ; ಕವಿಯ ಕವಿತಾಶಕ್ತಿ ತಿಳಿಯ ಬೇಕಾದರೆ ಕಾವ್ಯವನ್ನು ಹೆಚ್ಚು ವಿವರವಾಗಿ ನೋಡಬೇಕು, ಉತ್ತಮ ಭಾಗಗಳೆಲ್ಲ ದರ ಪರಿಚಯವಾಗಬೇಕು — ಎನ್ನುವ ಉದ್ದೇಶದಿಂದ ಆಚಾರ್ಯರಾದ ಬಿ.ಎಂ. ಶ್ರೀಕಂಠಯ್ಯನವರು ಕಾವ್ಯಸಂಗ್ರಹಗಳನ್ನು ಪ್ರಕಟಿಸುವ ಕಡೆ ಗಮನ ಕೊಟ್ಟಿದ್ದರು. ಮೊದಲ ಪ್ರಯತ್ನವಾಗಿ ಹೊಸಗನ್ನಡ ಕಾವ್ಯರಚನೆಯಲ್ಲಿ ಮೊದ ಲಿಗನೂ, ಉದ್ದಾಮ ಕವಿಯೂ ಆದ ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನೆತ್ತಿ ಕೊಂಡು, ಅತ್ಯುತ್ತಮವಾದ ಸಂಗ್ರಹವನ್ನು ಹೊರತಂದಿದ್ದರು. ಈ ಗ್ರಂಥವನ್ನೆ ಆ ವರ್ಷ ಇಂಟರ್‌ಮೀಡಿಯೆಟ್ ತರಗತಿಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿ ವಿಧಿಸಿದ್ದರು. ಇಂಥ ಉತ್ತಮ ಕಾವ್ಯವನ್ನು ಗುರುಗಳ ಮೂಲಕ ಅಭ್ಯಾಸ ಮಾಡುವ ವಿದ್ಯಾರ್ಥಿಗಳಲ್ಲಿ ನಾವು ಮೊದಲಿಗರಾಗಿದ್ದೆವು.

ವಿ.ಸೀ. ಅವರು ಅಂಥ ಎತ್ತರದ ಆಳೇನೂ ಅಲ್ಲ. ಆದರೆ ಅವರು ತೀಡಿ ಉಟ್ಟ ಕಚ್ಚೆಪಂಚೆ, ಮಿರುಮಿರುಗುತ್ತಿರುವ ಬಾದಾಮಿ ಬಣ್ಣದ ರೇಷ್ಮೆಯ ಮುಚ್ಚುಕೋಟು, ಸೊಗಸಾಗಿ ಕಟ್ಟಿದ ಕೊಕ್ಕರೆಗರಿಯಂತೆ ಶುಭ್ರವಾದ ಗರಿಗರಿ ಯಾಗಿ ಕಾಣುವ ಬಿಳಿಯ ರುಮಾಲು — ಇವು ಯಾರನ್ನೆ ಆಗಲಿ, ಮೊದಲ ಬಾರಿಗೇ ಆಕರ್ಷಿಸುವಂಥವು. ಹೀಗೆ ಆಚ್ಛಾದಿತರಾಗಿ ಬಂದ ಅವರನ್ನು ಕಂಡು

ವಿದ್ಯಾರ್ಥಿಗಳಾದ ನಮ್ಮಲ್ಲಿ ಗೌರವ ವಿಶ್ವಾಸಗಳು ತಾವಾಗಿಯೇ ಹುಟ್ಟಿ ಕೊಂಡವು. ಇನ್ನು ಅವರ ಬಾಯಿಂದ ಹೊರಬಿದ್ದ ವಾಕ್‌ಪ್ರವಾಹವನ್ನು ಕೇಳಿದ ಮೇಲಂತೂ ಭ್ರೀತ್ಯಾದರಗಳು ಇನ್ನೂ ಹೆಚ್ಚಿದವು.

ಹರಿಶ್ಚಂದ್ರ ಕಾವ್ಯದ ಪೀಠಿಕಾಭಾಗದ ಮೊದಲ ಕೆಲವು ಪದ್ಯಗಳು ಬಹು ಸುಂದರವಾದವು. ಅವುಗಳ ಸೊಗಸೇ ಸೊಗಸು. ಮೊದಲ ಪದ್ಯ ವಿರೂಪಾಕ್ಷನ ಸ್ತುತಿ :

ಶ್ರೀಪತಿಗೆ ಸೊಬಗನು,
ಉಡುಪತಿಗೆ ಶಾಂತಿಯನು,
ವಾಣೀಪತಿಗೆ ಚಾತುರ್ಯಮಂ
ದಿವಸ್ಪತಿಗೆ ಪ್ರತಾಪಮಂ
ಸುರಪತಿಗೆ ಭೋಗಮಂ
ರತಿಪತಿಗೆ ಮೂಲೋಕವಾವರಿಸುವ ರೂಪಂ,
ಸರಿತ್ಪತಿಗೆ ಗಂಭೀರತೆಯನು,
ಸ್ವಾಹಾಪತಿಗೆ ತೇಜಮಂ,
ಕೊಟ್ಟ ಗುರುಮೂರ್ತಿ ಪಂಪಾಪತಿ ವಿರೂಪಾಕ್ಷನ್,
ಎಮಗೆ ಇಷ್ಟಸಿದ್ಧಿಯಂ ಮಾಳ್ಕೆ, ಸಂತೋಷದಿಂದ

ಆಮೇಲೆ ವಾಗ್ದೇವಿ ಸರಸ್ವತಿಯ ಆವಾಹನೆ

ವಾಣಿಯರಿವಿನ ಬೆಳಗು,
ಮುಕುತಿವನಿತೆಯ ಮುಡಿಯ ಮಾಣಿಕಂ,
ಸರ್ವಮಂತ್ರಾದಿ ಪಂಚಾಕ್ಷರಿಯ ಪ್ರಾಣ,
ಮಂಗಳದ ಮನೆ,
ದೇವಲೋಕದ ಜನ್ಮಭೂಮಿ,
ತಾವರೆಗಣ್ಣನ ರಾಣಿ ಎಸೆವ ಓಲೆವಾಗ್ಯಂ,
ಸರ್ವಸಿದ್ಧಿಗಳ ತಾಣಂ,
ವಿರೂಪಾಕ್ಷನ ಉನ್ನತೈಶ್ವರ್ಯದ ಕ್ಷೋಣಿ,
ಪಂಪಾಂಬಿಕೆ
ಮದೀಯ ಮತಿಗೀಗೆ ಪ್ರಸನ್ನತೆಯನು ಉತ್ಸವದೊಳು

ಹೀಗೆ ಹೊಮ್ಮಿತು ವಿ.ಸೀ. ಯವರ ಬಾಯಿಂದ ರಾಘವಾಂಕನ ಕವಿವಾಣಿ. ವಿದ್ಯಾರ್ಥಿಗಳು ನಾವು ಮಂತ್ರಮುಗ್ಧರಾಗಿ ಕೇಳುತ್ತಿದ್ದೆವು. ನಾವು ಯಾವುದೋ ಬೇರೆ ಲೋಕವನ್ನು ಸೇರಿದ್ದೇವೆಂಬ ಅನುಭವವಾಗುತ್ತಿತ್ತು. 'ಶ್ರೀಪತಿಗೆ ಸೊಬಗನು' ಎನ್ನುವುದರಿಂದ ಮೊದಲುಗೊಂಡು, 'ಎಮಗೆ ಇಷ್ಟಸಿದ್ಧಿಯಂ ಮಾಳ್ಕೆ' ಎನ್ನುವವರೆಗೂ, ಒಂದಿಷ್ಟೂ ತಡವರಿಸದೆ ನಿರರ್ಗಳವಾಗಿ ಹರಿದು ಬಂದ

ವಾಕ್ಪ್ರವಾಹ ವಿದ್ಯಾರ್ಥಿಗಳಾದ ನಮ್ಮ ಮನಸ್ಸಿನ ಮೇಲೆ ಎಂಥ ಸತ್ಪರಿಣಾಮ ಉಂಟುಮಾಡಿತೆನ್ನುವುದನ್ನು ವಿವರಿಸಿ ಹೇಳಲಾರೆ.

ಪ್ರಪಂಚದ ಎಲ್ಲ ಶಕ್ತಿಗಳೂ ಗುರುಮೂರ್ತಿ ವಿರೂಪಾಕ್ಷನಿಂದ ವರವಾಗಿ ಬಂದಂತೆ, ಗುರುವಿನಿಂದ ಶಿಷ್ಯರಿಗೂ ವಿದ್ಯೆ ಒಲಿಯಲಿ, ಎನ್ನುವ ಉದಾತ್ತ ಮನೋಭಾವದಿಂದ ಕೂಡಿದ ಈ ಮನೋಹರವಾದ ಮೊದಲನೆಯ ಪದ್ಯ ನಮ್ಮ ವಿದ್ಯಾರಂಭಕ್ಕೆ ನಾಂದಿಯಾಯಿತು. ಅರುವತ್ತು ವರ್ಷಗಳು ಸರಿದು ಹೋಗಿದ್ದರೂ, ಈ ನಿಡುಗಾಲದ ಅಂತರದಲ್ಲಿ ಎಷ್ಟೋ ವಿಷಯಗಳು ಮರೆತು ಹೋಗಿದ್ದರೂ, ಈ ಪದ್ಯವನ್ನು ವಾಚಿಸಿದ ಗುರು ವಿ.ಸೀ.ಯವರ ಚಿತ್ರ ಮಾತ್ರ ಮನಸ್ಸಿನಲ್ಲಿ ಅಚ್ಚಳಿಯದೆ ಇಂದಿನವರೆಗೂ ಉಳಿದಿದೆ.

ಮುಂದೆ ಇಂದ್ರನ ವೈಭವದ ವರ್ಣನೆ ಬರುತ್ತದೆ.

ಪರುಷವಂಗಣದ ಕಲು,
ಸುರಭಿ ಕರಹಂ,
ಕಲ್ಪತರು ವನಂ,
ಸ್ವರ್ಗ ನಿಜದೇಶ,
ಅಮರರ್ ಆಳ್,
ಮೇರು ಕೇಳೀ ಶೈಲ,
ಅಮೃತವೇ ಮನೆಯ ಬೀಯಂ
ವರರಂಭೆ ಸೂಳೆ ! . . . . .

ವಿ.ಸೀ. 'ವರರಂಭೆ ಸೂಳೆ' ಎನ್ನುವ ಕಡೆ ತಮ್ಮ ಓದುಗಾರಿಕೆಯನ್ನು ನಿಲ್ಲಿಸಿ, ಹುಡುಗರತ್ತ ಹುಬ್ಬೇರಿಸಿ ನೋಡಿದರು. ಉಚ್ಚಾರಣೆಯಲ್ಲಿದ್ದ ಪಲುಕನ್ನು, ನುಡಿಯಲ್ಲಿನ ಕಾಕನ್ನು ಕೇಳಬೇಕಿತ್ತು. ಹುಡುಗರು ನಾವು ಹುಚ್ಚೆದ್ದು ಹೋದೆವು.

ಅಲ್ಲಿಂದಾಚೆಗೆ ವಸಿಷ್ಠ ವಿಶ್ವಾಮಿತ್ರರ ನಡುವಿನ ಕಲಹ, ವಿಶ್ವಾಮಿತ್ರರ ರೋಷದಿಂದೊಡಗೂಡಿದ ಭರ್ತ್ಸನೆಯ ಮಾತು, ವಸಿಷ್ಠರ ಶಾಂತವಾದ ಉತ್ತರ, ಹರಿಶ್ಚಂದ್ರ ಚಂದ್ರಮತಿಯರ ವರ್ಣನೆ, ಬೇಟೆಯ ವರ್ಣನೆ, ವಿಶ್ವಾಮಿತ್ರನ ಸೃಷ್ಟಿಯಾದ ಗಾಯಕಿಯರ ರೂಪುಲಾವಣ್ಯ, ಅವರೊಡನೆ ಹರಿಶ್ಚಂದ್ರನ ಸಂಭಾಷಣೆ, ಸವಾಲಿಗೆ ಜವಾಬು, ಹರಿಶ್ಚಂದ್ರ ರಾಜ್ಯ ಕಳೆದು ಕೊಂಡು ದೇಸಿಗನಂತೆ ಅಯೋಧ್ಯೆ ಬಿಟ್ಟು ಹೊರಟಿದ್ದು, ಅವನು ಅನುಭವಿಸಿದ ಕಷ್ಟ ಪರಂಪರೆ, ಹೆಂಡತಿ ಮಕ್ಕಳನ್ನು ಮಾರಿದ್ದು, ಹಾವುಕಚ್ಚಿ ರೋಹಿತಾಶ್ವನ ಮರಣ, ಚಂದ್ರಮತೀ ವಿಲಾಪ — ಹೀಗೆ, ಕಥೆ ಬೆಳೆಯುತ್ತ ಹೋಗುತ್ತದೆ. ಆ ಒಂದೊಂದು ಪ್ರಸಂಗದ ಸೊಗಸನ್ನು ಎತ್ತಿ ತೋರಿಸಿದರು ನಮ್ಮ ಗುರು ವಿ.ಸೀ. ಅವರಿಂದ ಆದ ಉಪಕಾರವನ್ನು ನಾವು ಎಂದಿಗಾದರೂ ಮರೆಯಲಾದೀತೆ?

ವಿ.ಸೀ. ಯವರ ಕಾವ್ಯಪಾಠ ಕೇಳುವವರೆಗೂ ನಾವು ಕೊಪಮಂಡೂಕ ಗಳಂತೆ ಬಿಳಿದಿದ್ದೆವು. ಈಗ ಒಮ್ಮೆಗೇ ನಮ್ಮ ದೃಷ್ಟಿ ವಿಶಾಲವಾಯಿತು. ಪದಗಳ ಅರ್ಥಕ್ಕಿಂತ ಹೆಚ್ಚಾಗಿ ಅವುಗಳ ಧ್ವನಿ ನಮ್ಮ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡಿತು. ನಾಲಿಗೆಯ ಮೇಲೆ ಕವಿಯ ಮಾತುಗಳು ನಲಿಯತೊಡ ಗಿದವು, ಅರ್ಥಕಲ್ಪನೆ ಅರಳುತ್ತ ಹೋಯಿತು, ಸುಪ್ತವಾಗಿದ್ದ ಭಾವನಾಪ್ರಪಂಚ ಎಚ್ಚರಗೊಂಡಿತು. ಇವೆಲ್ಲವೂ ಗುರುಪ್ರಸಾದದಿಂದ ನಮಗೆ ಲಭ್ಯವಾಯಿತು. ಈ ರೀತಿ ಶ್ರದ್ಧಾಭಕ್ತಿಪೂರ್ವಕವಾಗಿ ಕಾವ್ಯವ್ಯಾಸಂಗಕ್ಕೆ ಪ್ರೇರಣೆ ನೀಡಿದವರು ಗುರು ವಿ. ಸೀ.

ವಿ.ಸೀ. ತಮ್ಮ ಎಂಬತ್ತನಾಲ್ಕು ವರ್ಷಗಳ ನಿಡಿದಾದ ಬಾಳಿನಲ್ಲಿ ಅನೇಕ ಕಷ್ಟಗಳನ್ನು ಎದುರಿಸಿದರು. ಒದಗಿದ ಕಷ್ಟಪರಂಪರೆಗಳೆಲ್ಲವನ್ನು ತಾಳಿಕೊಂಡು, ನೆಮ್ಮದಿಯ ಬಾಳುವೆ ನಡೆಸಿ, ತಮ್ಮ ಸೌಂದರ್ಯಾರಾಧನೆಯಿಂದ ತಾವು ಅನುಭವಿಸಿದ ಆನಂದವನ್ನು ಇತರರಿಗೂ ಹಂಚಿ, ತಮ್ಮ ಸುತ್ತಲಿನವರ ಬದುಕನ್ನು, ತಮ್ಮ ನಡತೆಯಿಂದ, ವಿದ್ಯಾಬುದ್ಧಿಗಳಿಂದ, ತಮ್ಮ ಅದ್ಭುತ ವಾಕ್‌ಶಕ್ತಿಯಿಂದ, ತಮ್ಮ ವಿಮರ್ಶಾತ್ಮಕ ಲೇಖನಗಳಿಂದ ಬೆಳಗಿಸಿದರು. ಅಂಥ ಹಿರಿಯ ಚೇತನ ನಡೆದುಬಂದ ದಾರಿಯನ್ನು ಗುರುತಿಸಿ ಪರಿಚಯಮಾಡಿಕೊಳ್ಳುವುದು ನಮ್ಮ ಕರ್ತವ್ಯ ವೆಂದು ನನಗೆನಿಸಿತು. ಲಾರ್ಡ್ ಚೆಸ್ಟರ್‌ಫೀಲ್ಡ್ ಮಹಾಶಯ ಜೀವನಚರಿತ್ರೆಗಳ ಮೌಲ್ಯವನ್ನು ಗುರುತಿಸುತ್ತ ಹೇಳಿರುವ ವಾಕ್ಯಗಳು ನೆನಪಿಗೆ ಬಂದವು.

> There is an immense amount to be learnt from the success and failures of others, not only those with whom one's life runs, but from those of the past. There is seldom, if ever, a big risk to be faced, which has not been of a familiar type faced by some character in history. You can learn an immense amount from a careful study as opposed to the casual reading of great biographies.
>
> (ಈಗ ನಮ್ಮೆದುರಿಗೆ ಬದುಕಿದವರೊಬ್ಬರೆ ಅಲ್ಲ, ಹಿಂದೆ ಆಗಿ ಹೋದ ಮಹನೀಯರ ಜೀವನ ಚರಿತ್ರೆಗಳಿಂದ ನಾವು ಕಲಿಯಬೇಕಾದ ಪಾಠಗಳು ಅಪಾರವಾದವು. ಹಿಂದಿನವರೂ ಎಷ್ಟೋ ಕಡುಕಷ್ಟಗಳನ್ನು ಅನುಭವಿಸಿರಲೇಬೇಕಲ್ಲ. ಅಂಥವೇ ಕಷ್ಟಗಳು ನಮಗೂ ಎದುರಾಗ ಬಹುದು. ಅಂಥ ಸಮಯದಲ್ಲಿ ಉತ್ತಮ ಜೀವನಚರಿತ್ರೆಗಳ ಲಘು ಪರಿಚಯ ಮಾತ್ರವಲ್ಲ, ಆಳವಾದ ಅಧ್ಯಯನದಿಂದ ಎಷ್ಟೋ ವಿಷಯ ಗಳನ್ನು ನಾವು ತಿಳಿಯಬಹುದು.)

ಜೀವನಚರಿತ್ರೆಗಳಿಗಿರುವ ಬೆಲೆ ಇಂಥದು. ಆದರೆ ವಿ.ಸೀ. ಯವರೇ ಒಂದು ಕಡೆ ಹೇಳಿರುವಂತೆ — ''ನಮ್ಮಲ್ಲಿ ಜೀವನಚರಿತ್ರೆಗಳ ಸಂಖ್ಯೆ ಕಡಮೆ.

ಜೀವನದ ಮುಖ್ಯ ಸಂಗತಿಗಳೂ ದೊರೆಯವು. ಬೇರೆ ನಾಡುಗಳಲ್ಲಿ ತೆರಳಿಯಾಗುವ ಚಿಟ್ಟಿಕತೆಗಳು (anecdotes) ಕೂಡ ನಮ್ಮಲ್ಲಿ ಸಂಗ್ರಹವಾಗವು. ಹೀಗಾಗಿ ಸಾಹಿತ್ಯಕ್ರಮದ ಚಹರೆಚಿತ್ರಗಳನ್ನು - ಕಡೆಗೆ ಸಂಭವವಾದ ಪಕ್ಕ ನೋಟಗಳನ್ನು (profiles) ಕೂಡ ಹೊಮ್ಮಿಸಲು ಸೌಕರ್ಯ ಕಡಮೆ.'' (ವಿ.ಸೀ. ೧೯೭೦, 'ಮಹನೀಯರು' ಮುನ್ನುಡಿ)

''ನಿಮ್ಮ width ಯಾರಿಗಿದೆ ಸೀ.'' ಎಂದು ಬಿ.ಎಂ.ಶ್ರೀಕಂಠಯ್ಯನವರು ವಿ.ಸೀ.ಯವರ ವಿದ್ಯೆಯ ವೈಶಾಲ್ಯವನ್ನು ಕಂಡು ಮೆಚ್ಚಿ ನುಡಿದಿದ್ದರಂತೆ! ಅರ್ಥಶಾಸ್ತ್ರ ಪಾರಂಗತರು, ಇಂಗ್ಲಿಷ್ ಕನ್ನಡ ಸಂಸ್ಕೃತ ಸಾಹಿತ್ಯಗಳಲ್ಲಿ ಓಲಾಡಿದವರು, ಉತ್ತಮ ವಾಗ್ಮಿ, ಶ್ರೇಷ್ಠ ಅಧ್ಯಾಪಕ, ಸಂಗೀತದಲ್ಲಿ ಸಾಹಿತ್ಯದಲ್ಲಿ ಚಿತ್ರಕಲೆಯಲ್ಲಿ ಉತ್ತಮ ಅಭಿರುಚಿ ಬೆಳೆಸಿಕೊಂಡವರು, ಕವಿ ಕತೆಗಾರ ನಾಟಕಕಾರ ವಿಮರ್ಶಕ, ಪ್ರಸಾರಕಲೆಯಲ್ಲೂ ಯಶಸ್ಸುಗಳಿಸಿದವರು — ಹೀಗೆ ಬಹು ವಿದ್ಯೆಗಳಲ್ಲಿ ಪಾರಂಗತರಾದವರು ಅವರು. ಈ ಬಹುಮುಖ ಪ್ರತಿಭೆಯ ಅವಲೋಕನ ಈ ನನ್ನ ಪ್ರಯತ್ನ.

ಅವರ ಜೀವನದ ವಿವರಗಳು ಒಂದು ಕಡೆ ಎಲ್ಲಿಯೂ ದೊರೆಯುವುದಿಲ್ಲ. ವಿ.ಸೀ. ಬಹುದಾಕ್ಷಿಣ್ಯಪರರು. ತಮ್ಮ ಜೀವನದ ವಿವರಗಳನ್ನು ಎತ್ತಿ ಆಡಿದವರಲ್ಲ. ತಮ್ಮ ಕವನಗಳನ್ನು ಓದಿ ತೋರಿಸಿದ್ದೂ, ವಿವರಿಸಿದ್ದೂ ಕೂಡ ಕಡಮೆಯೇ. ತಮ್ಮ ವಿಪುಲವಾದ ಬರವಣಿಗೆಯಲ್ಲಿ ಅಲ್ಲಲ್ಲಿ ಪ್ರಾಸಂಗಿಕವಾಗಿ ಕೆಲವು ವಿಷಯಗಳನ್ನು ನೆನಪಿಗೆ ತಂದುಕೊಂಡಿರುವುದುಂಟು. ಇವೆಲ್ಲವನ್ನೂ ಆಯ್ದು ಸಂಗ್ರಹಿಸುವುದೇ ತೃಪ್ತಿಯನ್ನು ಕೊಡುವಂಥ ಕೆಲಸ.

ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ಹೊರತು ವಿ.ಸೀ.ಯವರನ್ನು ನಾನು ಹತ್ತಿರದಿಂದ ಕಂಡವನಲ್ಲ. ಅವರೊಡನೆ ಅಂಥ ಸಲುಗೆಯೂ ಇರಲಿಲ್ಲ. ಆದರೆ ಅವರ ಪಾಠವನ್ನು ಕೇಳಿ, ಕನ್ನಡ ಕಾವ್ಯವ್ಯಾಸಂಗದಲ್ಲಿ ಹೆಚ್ಚಿನ ಆಸಕ್ತಿಯನ್ನು, ಹುಮ್ಮಸ್ಸನ್ನು ತಾಳಿದವನು ನಾನು. ವಿ.ಸೀ.ಯವರ ಮುಕ್ಕಾಲುವಾಸಿ ಬರವಣಿಗೆಯನ್ನು ಓದಿ, ವಿಮರ್ಶನ ಪದ್ಧತಿಯನ್ನು ಕಂಡು, ಬಹುವಾಗಿ ಮೆಚ್ಚಿಕೊಂಡವನು. ನನ್ನ ಅನುಭವವನ್ನು, ನನ್ನಲ್ಲುಂಟಾದ ಸಂತೋಷವನ್ನು ಇತರರಲ್ಲಿಯೂ ಹಂಚಿಕೊಳ್ಳಬೇಕೆಂದು, ಈ ಸಾಹಸಕ್ಕೆ ಕೈಹಾಕಿದ್ದೇನೆ. ಕೆಲವರಿಗಾದರೂ ಈ ಬರವಣಿಗೆ ರುಚಿಸೀತು ಎನ್ನುವ ಆಸೆ ಇಟ್ಟುಕೊಂಡಿದ್ದೇನೆ. ಗುರುಚರಣಕ್ಕೆ ಶಿಷ್ಯನೊಬ್ಬನು ಅರ್ಪಿಸಿದ ಕಿರಿದೊಂದು ಹೂವೆಂದು ಇದನ್ನು ಪರಿಗಣಿಸಿದರೆ ನಾನು ಧನ್ಯನಾಗುತ್ತೇನೆ.

ವಂಶವೃತ್ತಾಂತ - ಚಿಕ್ಕಂದಿನ ವಿದ್ಯೆ

ತಾತ ಪುಟ್ಟಭಟ್ಟರು

ವಿ.ಸೀ.ಯವರ ಹಿರಿಯರು ಉಲುಚುಕಮ್ಮೆ ಎಂಬ ಪಂಗಡಕ್ಕೆ ಸೇರಿದ ಸ್ಮಾರ್ತಬ್ರಾಹ್ಮಣರು. ಜಾತಿವೃತ್ತಿಯಲ್ಲಿ ಪುರೋಹಿತರ ವಂಶಕ್ಕೆ ಸೇರಿದವರು. ಅವರ ತಾತನವರ ಹೆಸರು ಪುಟ್ಟಭಟ್ಟರೆಂದು. ಅವರಿದ್ದುದು ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಬೂದಿಗೆರೆ ಗ್ರಾಮದಲ್ಲಿ. ಆ ಗ್ರಾಮದಲ್ಲಿ ಉಪಾಧ್ಯಾಯರಾಗಿದ್ದು ನಲವತ್ತು ವರ್ಷ ಕಾಲ ಸೇವೆಸಲ್ಲಿಸಿದ್ದರಂತೆ. ಆಗ ಅವರಿಗೆ ಬರುತ್ತಿದ್ದ ಸಂಬಳ ತಿಂಗಳಿಗೆ ಎರಡೇ ರೂಪಾಯಿ! ಉಪಾಧ್ಯಾಯ ವೃತ್ತಿಯೇ ಅಲ್ಲದೆ ಮೃದಂಗವಾದನದಲ್ಲೂ ನಿಷ್ಣಾತರಾಗಿದ್ದರಂತೆ. ಕೇಳಿಕೆಗಳನ್ನು ಬರೆದು ಆಡಿಸುತ್ತಿದ್ದರಂತೆ. ಭಾಗವತದ ದಪ್ಪ ಹಸ್ತಪ್ರತಿಯೊಂದು ಅವರ ಬಳಿ ಇರುತ್ತಿತ್ತೆಂದು, ಆ ಭಾಗವತ ಪುಸ್ತಕದಲ್ಲಿ ಆಣಿಮುತ್ತಿನ ಸರದಂತೆ ಇದ್ದ ತಾತನವರ ಬರವಣಿಗೆಯನ್ನು ನೆನಪುಮಾಡಿಕೊಂಡಿದ್ದಾರೆ ವಿ.ಸೀ.

ಅಜ್ಜಿ ಸಾವಿತ್ರಮ್ಮ

ಪುಟ್ಟಭಟ್ಟರ ಪತ್ನಿ – ವಿ.ಸೀ.ಯವರ ಮಾತಾಮಹಿಯ ಹೆಸರು ಸಾವಿತ್ರಮ್ಮ. ಇವರ ಪ್ರಭಾವ ವಿ.ಸೀ.ಯವರ ಬಾಳಿನ ಮೇಲೆ ಅಪಾರ. ಸಾವಿತ್ರಮ್ಮನವರನ್ನು ಕಂಡರೆ ಗ್ರಾಮದವರೆಲ್ಲರಿಗೂ ತುಂಬ ಗೌರವವಿತ್ತಂತೆ. ಅವರನ್ನು ಎಂಟು ಹತ್ತು ಮೈಲಿ ದೂರದ ಊರುಗಳಿಗೆ ಕುದುರೆ ಮೇಲೆ ಕೂರಿಸಿ ಕೊಂಡು ಕೇಳಿಕೆಗಳಿಗೆ ಒಯ್ಯುತ್ತಿದ್ದರಂತೆ. ಆಕೆ ಕಷ್ಟಕಾಲದಲ್ಲಿ ಇಟ್ಟ ಅನ್ನದಿಂದ, ಎರೆದ ಗಂಜಿಯಿಂದ, ಧಾತು ಈಶ್ವರದ ಬರಗಳಲ್ಲಿ ನಾವು ಬದುಕಿದೆವು ಎಂದು ನೆನಪುಮಾಡಿಕೊಳ್ಳುವ ಬಹುಜನರನ್ನು ಕಂಡಿದ್ದ ವಿ.ಸೀ. ತಮ್ಮ ಅಜ್ಜಿಯ ಪರ ವಿಶೇಷ ಅಭಿಮಾನ ತಾಳಿದ್ದು ಸಹಜವಾಗಿಯೇ ಇದೆ. ಅಜ್ಜಿಯೊಡನೆ ಕಳೆದ ಬಾಲ್ಯದ ದಿನಗಳನ್ನು ನೆನೆಸಿಕೊಂಡು ಹೇಳುತ್ತಾರೆ :

> ''ಬೆಳಗಾಗುವ ಮುಂಚೆ ನನ್ನನ್ನು ಕರೆದುಕೊಂಡು ಜ್ಯೋತಿಪುರ, ಸೋಮನಹಳ್ಳಿ– ಹಂದರಹಳ್ಳಿಗಂತೂ ಸರಿಯೇ ಸರಿ – ಕಮ್ಮಸಂದ್ರಕ್ಕೆ, ಜನ್ನಹಳ್ಳಿಗೆ ಹೊರಟಳೆನ್ನಿ. ದಯಮಾಡಿಸೋಣಾಯಿತು ಅಮ್ಮ, ಎಂದವರೇ ಮೂರು ನಾಲ್ಕು ರೈತಾಪಿ ಮಂದಿ ಅವರ ಹಿಂದೆ ತೆಂಗು, ಹಲಸಂದೆಕಾಯಿ ಹಲವಾದಿ ಹೊತ್ತುತರುತ್ತಿದ್ದರು. ಇವರ ಕೈಗೆ ೨-೩

ಸೊಲಿಗೆ ಹಚ್ಚಿನ್ನ ಹೆವ್ಕುಟ್ಟದ ಹಸುವಿನ ತುಪ್ಪದ ಕುಡಿಕೆ ಬರುತ್ತಿತ್ತು. ನಾನು ಅಲ್ಲಿಗೆ ಹಿಂದಕ್ಕೆ ಬರುವಾಗ್ಗೆ ಮೊದಲು 'ಈ ಪರಿಯ ಸೊಬಗಾವ' ಎಂಬ, 'ಶಾರದೆ ನಾಲಿಗೆಯೊಳಿರಬಾರದೆ?' 'ಮೇಲುಕೋವೆ ಕೃಷ್ಣ ತುಲಸಿ, ಮೇಲುಕೋವೆ ರಾಮತುಲಸಿ' ಎಂಬುದೋ, 'ಎಂತ ದಯೋ ದಾಸುಲ ಪೈ' ಎಂಬುದೋ, ಯಾವ್ಯಾವುದೋ — ನಮ್ಮ ಕಡೆ ತೆಲುಗಿನ ಭಾಗವತ ಮುಂತಾದವಕ್ಕೆ ಹೆಚ್ಚು ಬಳಕೆಯಿತ್ತಾದ್ದರಿಂದ, ಅದಾವ ಭಾಷೆಯೋ ಎಂಬುದು ಕೂಡ ತಿಳಿಯದ ಕಾಲದಲ್ಲಿ ಅವು ಕಿವಿಗೆ ಅಮೃತವಾದ್ದು — ಹೇಳಿಕೊಡುತ್ತಿದ್ದರು. ನಡೆಯುತ್ತ ನಡೆಯುತ್ತ ಮುಂದಿನ ಗಿಡಮರ ನಮಗೆ ಹಿಂದಾಗುತ್ತಿದ್ದವು. ಚಂದ್ರ ಮಾತ್ರ ಹಿಂದೆ ಹಿಂದೆಯೇ ಬರುತ್ತಿದ್ದ — ನಮ್ಮ ಅಜ್ಜಿಯ ಹಾಡು ಕೇಳಬೇಕೆಂದೊ ಏನೊ. ಆಕೆಯ ಮಹಿಮೆ ಅಷ್ಟೆಂದು ತಿಳಿದದ್ದು ನನಗೆ ಹಾಗೆ.''

(ವಿ.ಸೀ. ಸಂಪದ 'ಲಲಿತ ಪ್ರಬಂಧ ಸಂಪುಟ', ೧೯೯೨, ಪು.೩೦೮)

ವಿ.ಸೀ.ಯವರಿಗೆ ತಮ್ಮ ಅಜ್ಜಿಯನ್ನು ಎಷ್ಟು ನೆನೆಸಿಕೊಂಡರೂ ತೃಪ್ತಿಯಿಲ್ಲ. 'ಆಕೆಯ ಇತಿಹಾಸ ನಮ್ಮ ಮನೆಯ ಪುರಾಣದ ಒಂದು ಸಂತೋಷಾಂಶ' ಎನ್ನುತ್ತಾರೆ. ಆಕೆಯ ಮಂಗಳ ರೂಪವನ್ನು ವಿ.ಸೀ.ಯವರ ಮಾತಿನಲ್ಲೆ ವರ್ಣಿಸಬೇಕು :

''ಸುತರಾಂ ಕಪ್ಪಲ್ಲದ, ತುಂಬ ಕೆಂಪೂ ತುಂಬ ಬಿಳುಪೂ ಅಲ್ಲದ ಒಂದು ಬಗೆಯ ಹೊಳೆವ, ಬಲಿತ ಜಂತದ ಮೈಗಾಂತಿ ಅವರದು. ಸುಕ್ಕದ ಮೈ, ಒಪ್ಪವಾಗಿ ನಿರಿಹಿಡಿದು ಉಡುವ ಒಂಬತ್ತು ಗಜದ ಉಡೆ; ತಾನೇ ಆರಿಸಿ ತರಬೇಕೇ ಹೊರತು ಇನ್ನೊಬ್ಬರು ತಂದುಕೊಟ್ಟದ್ದನ್ನು ಅವರು ಎಂದಿಗೂ ಉಡರು; ಸ್ನಾನಮಾಡಿ ಮಡಿಯನ್ನುಟ್ಟು ಬೆರಳಿಗೆ ತೆಳ್ಳಗೆ ವಿಭೂತಿ ಸವರಿ, ಹದಮಾಡಿಕೊಂಡು ಹಣೆಗೆ ಹಚ್ಚಿಕೊಂಡು ಆಕೆ ನಡೆದಾಡಿದಾಗ ಬೀಗಲ್ಲದ, ಸಡಿಲವಲ್ಲದ, ಸೆಡೆತವಲ್ಲದ, ಅತಿ ಧಾರಾಳವಲ್ಲದ, ಅಗ್ಗವಲ್ಲದ, ಶ್ರೀಮಂತವಲ್ಲದ ಆ ನಡೆ ನೋಡಲು ಎರಡು ಕಣ್ಣು ಸಾಲದು.''

(ಅದೇ ಪು. ೩೧೨)

ಇನ್ನೊಂದು ಕಡೆ ತಮ್ಮ ಅಜ್ಜಿ ತೀರಿಕೊಂಡ ದಿನದ ವಿವರವನ್ನು ಒದಗಿಸಿದ್ದಾರೆ ವಿ.ಸೀ. ಆಕೆ ಎಂಥ ಮಹನೀಯ ವ್ಯಕ್ತಿ ಎನ್ನುವುದು ನಮಗೆ ತಿಳಿಯುತ್ತದೆ.

''ಆಕೆ ತೀರಿಕೊಂಡ ದಿನದ ನೆನಪಿದೆ. ಸುಮಾರು ಮಧ್ಯಾಹ್ನ ನಾಲ್ಕರ ಸಮಯ. ಕಾಲು ತೊಳೆದುಕೊಂಡು ಬಂದು ಹಾಸಿಗೆಯಲ್ಲಿ ಮಲಗಿದರು. ಆ ಮುಂಚೆ ಬೇರೆ ಒಗೆದ ವಸ್ತ್ರವನ್ನುಟ್ಟು ಮಕ್ಕಳನ್ನು ಕರೆದರು. ಇಬ್ಬರು ಹೆಣ್ಣುಮಕ್ಕಳಿಗೂ ಹೇಳಿ ಕಲಶದಲ್ಲಿದ್ದ ಗಂಗೆ ತರಿಸಿದರು. ನಾನು ಆಗತಾನೆ ಆಕೆಗೆಂದು ಸ್ವಲ್ಪ ಹಾಲು ಕಾಯಿಸಿಟ್ಟಿದ್ದೆ. ಅದರಲ್ಲಿ ಒಂದು ಅಂಜೂರ ಬೇಯಿಸಿ ಅದರ ಸಾರ ಮಾತ್ರ ಇತ್ತು. ನಾಲ್ಕು ಚಮಚ

ತಗೆದುಕೊಂಡರು ಔಷಧಿಯ ಜೊತೆಗೆ. ಮಕ್ಕಳು ಗಂಗೆ ಕೊಟ್ಟರು.... ನನ್ನನ್ನು ಕರೆದು ನನ್ನ ಕೈಯಲ್ಲಿ ನಮಸ್ಕಾರ ಮಾಡಿಸಿಕೊಂಡು ಹರಸಿದರು. ಎಲ್ಲರೂ ಎದುರಿಗಿರಲು ರಾಮ, ನಾರಾಯಣ ಎಂದುಕೊಂಡವರೇ ಕಣ್ಣು ಮುಚ್ಚಿಕೊಂಡರು. ಆ ಮುಖದ ಶಾಂತಿ, ಪ್ರಸನ್ನತೆ ಕಣ್ಣಿಗೆ ಕಟ್ಟಿದೆ. ತುಂಬಿದ ಜೀವ. ಹಣ್ಣು, ಕಾವಿಂದ ಕಳಚಿಕೊಂಡು ನೆಮ್ಮದಿಯಿಂದ ಉದುರಿಬಿತ್ತು. ಏನೇ ಚಿಂತೆ, ಕಷ್ಟ ಇದ್ದರೂ ಲಕ್ಷಿಸದೆ, ತನ್ನ ಮನಸ್ಸನ್ನು ತನ್ನ ವಶದಲ್ಲಿಟ್ಟುಕೊಂಡು, ನಾಲ್ವರಿಗೆ ನೆರವಾಗಿದ್ದ ಜೀವ ಅದು; ಕೊಟ್ಟು ಇಟ್ಟು ತಣಿದದ್ದು- ಆ ತಣಿವಿನಲ್ಲಿಯೇ ತೀರಿಕೊಂಡಿತು.''

(ಅದೇ ಪು.೩೧೪-೩೧೫)

ತಂದೆ ತಾಯಿ

ಪುಟ್ಟಭಟ್ಟರಿಗೆ ಗಂಡುಮಕ್ಕಳಿರಲಿಲ್ಲ. ಇದ್ದವರು ಇಬ್ಬರು ಹೆಣ್ಣುಮಕ್ಕಳು ಮಾತ್ರ. ಅವರಲ್ಲಿ ಹಿರಿಯಾಕೆಯ ಹೆಸರು ದೊಡ್ಡವೆಂಕಮ್ಮ. ಈಕೆಯನ್ನು ಹೊಸ ಕೋಟೆ ತಾಲ್ಲೂಕಿನ ದೊಡ್ಡಹುಲ್ಲೂರಿನ ಸುಬ್ಬಾಭಟ್ಟರ ಮಗ ವೆಂಕಟರಾಮಯ್ಯ ನವರಿಗೆ ಕೊಟ್ಟು ಮದುವೆ ಮಾಡಿದ್ದರು. ಸುಬ್ಬಾಭಟ್ಟರೂ ವೃತ್ತಿಯಿಂದ ಪುರೋ ಹಿತರೇ. ಸುತ್ತಲ ಹಳ್ಳಿಗಳಿಗೆ ಪುರೋಹಿತರಾಗಿದ್ದುಕೊಂಡು ಒಳ್ಳೆಯ ಹೆಸರು ಗಳಿಸಿದ್ದರು. ಅವರದು ಕೋಪದ ಸ್ವಭಾವವಂತೆ. ಇದೊಂದು ಅವಗುಣ ಅವರ ವಂಶಕ್ಕೆ ಅಂಟಿಕೊಂಡದ್ದು. ವಿ.ಸೀ.ಯ ತಂದೆ ವೆಂಕಟರಾಮಯ್ಯನವರಿಗೆ ನಾಲ್ವರು ಮಕ್ಕಳು — ಎರಡು ಹೆಣ್ಣು, ಎರಡು ಗಂಡು. ಹಿರಿಯ ಮಗನಾಗಿ ೧೮೯೯ನೇ ಇಸವಿ ಅಕ್ಟೋಬರ್ ತಿಂಗಳ ೨ ರಂದು ವಿ.ಸೀ. ಬೂದಿಗೆರೆಯಲ್ಲಿ ಜನ್ಮ ತಾಳಿದರು. ಗಾಂಧೀಜಿ ಹುಟ್ಟಿದ ದಿನವೂ ಅಕ್ಟೋಬರ್ ಎರಡು ಎನ್ನುವು ದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

ಪುಟ್ಟಭಟ್ಟರ ಮಗಳು ದೊಡ್ಡವೆಂಕಮ್ಮನವರನ್ನು ಮದುವೆಯಾದ ಕಾಲಕ್ಕೆ ವೆಂಕಟರಾಮಯ್ಯನವರು ಇನ್ನೂ ಹುಲ್ಲೂರಿನಲ್ಲಿಯೇ ವಾಸವಾಗಿದ್ದರು. ಮದುವೆಯಾದ ಕೆಲಕಾಲವಾದ ಮೇಲೆ ತಂದೆ ಮಗನ ನಡುವೆ ಯಾವುದೋ ಬಂಜರುಭೂಮಿಯ ಬಗ್ಗೆ ವಿವಾದವೆದ್ದು, ಕೋಪದಿಂದ 'ಇನ್ನು ನಾನು ಈ ಮನೆಯಲ್ಲಿ ಇರುವುದಿಲ್ಲ' ಎಂದು ಹೇಳಿ ವೆಂಕಟರಾಮಯ್ಯ ಮನೆಬಿಟ್ಟು ಬೆಂಗಳೂರು ಸೇರಿದರಂತೆ. ಅಂದಿನ ಚಾಮರಾಜಪೇಟೆಯ ಚೌಬೀನೆ ಅಂಗಡಿ ಯೊಂದರಲ್ಲಿ ಗುಮಾಸ್ತರಾಗಿ ಸೇರಿ, ಅದೇ ಪೇಟೆಯ ಎರಡನೆ ಬೀದಿಯ ಮನೆಯೊಂದರಲ್ಲಿ ಬಿಡಾರ ಹೂಡಿದರಂತೆ. ವೆಂಕಟರಾಮಯ್ಯನವರು ಹಠ ತೊಟ್ಟಂತೆ ಹುಟ್ಟೂರಾದ ಹುಲ್ಲೂರಿಗೆ ಹಿಂತಿರುಗಲಿಲ್ಲ. ತಂದೆ ಹಾಸಿಗೆ ಹಿಡಿದು ಕೊನೆಯುಸಿರೆಳೆಯುವ ಕಾಲಕ್ಕೆ ಮಗನನ್ನು ನೋಡಬೇಕೆಂದು ಕಾಗದ ಹಾಕಿಸಿ ದಾಗ ಮಾತ್ರ ಹಳೆಯ ಸಿಟ್ಟನ್ನು ಮರೆತು ಊರಿಗೆ ಹೋಗಿ ತಂದೆಯ ಮನಸ್ಸಿಗೆ ಶಾಂತಿ ದೊರೆಯುವಂತೆ ಮಾಡಿದರಂತೆ.

'ಅರಲು-ಬರಲು' ಸಂಕಲನದಲ್ಲಿ ಸೇರಿರುವ ಕವನವೊಂದರಲ್ಲಿ ವಿ.ಸೀ. ಯವರ ತಂದೆಯ ಚಿತ್ರ ದೊರೆಯುತ್ತದೆ.

ತಂದೆಯನು ಈಗಿರುವ ಇವರಾರೂ ಕಾಣರು
ಮಸಕು ನನಗೇ ನೆನಪವರದು ! –
ಅಚ್ಚಳಿಯದಿದೆ ಚಹರೆ ! ನಿಮಿರಿನಿಂತಲಗಿನಂತೆ
ಅವರ ನಿಲವು, ಆ ಶುಚಿ, ಆ ವಸ್ತ್ರ
ದಿನಕೆ ಮೂರು ಸಲ ಮಿಂದು ದೇವರರ್ಚನೆ ಮಾಡಿ ಮಡಿಯಲ್ಲಿ
ಊಟ ಉಪಚಾರ ; ಹತ್ತು ಗಜ ಧೋತ್ರ
ಮುರುಗು ಮುರುಗಾಗಿ ಒಗೆಸಿ ತೀಡಿ ಉಡುತಿದ್ದ ಆ ಗಾಡಿ
ಇನ್ನಾರಿಗುಂಟು !
ಅಗಲ ಹಣೆ , ನಡುವೆ ದುಂಡನಕ್ಷತೆ; ಕಣ್ಣಲ್ಲಿ ನುಣುಪು ಹೊಳಪು
ಅದು ನನ್ನ ನೆನಪು
ಎತ್ತರಕೆ ಕಟ್ಟಿದ್ದ ಪೇಟ, ಉನ್ನತಿಗೆ ಮುಡಿಕಟ್ಟು.
ಇನ್ನೆಲ್ಲಿ ಕಂಡೇನು ಅದನು !

(ವಿ.ಸೀ. ಸ್ನೇಹ ವಿಶ್ವಾಸ, ೧೯೯೦, ಪು.೩೫೯)

ತಂದೆಗೆ ಸಂಬಂಧಿಸಿದ ಇನ್ನೊಂದು ಪ್ರಸಂಗವನ್ನು ಇಲ್ಲಿ ಉಲ್ಲೇಖಿಸ ಬೇಕು. ತಂದೆ ತುಂಬ ಕೋಪಿಷ್ಠರೆನ್ನುವ ಸಂಗತಿಯನ್ನು ಈಗಾಗಲೇ ಹೇಳಿ ಯಾಗಿದೆ. ತೀರ ಚಿಕ್ಕವರಾಗಿದ್ದ ವಿ.ಸೀ. ಒಮ್ಮೆ ಬೆಂಗಳೂರಿಗೆ ಬಂದಿದ್ದಾಗ ಊಟಮಾಡದೆ ಚಂಡಿಮಾಡುತ್ತಿದ್ದುದನ್ನು ಕಂಡು ಸುಮ್ಮನಾಗಿಸಲು, ಚಂಡಿ ಮಾಡುತ್ತಿದ್ದ ಮಗುವಿನ ಕಡೆ ಬೀಸಣಿಗೆಯನ್ನು ಎಸೆದರಂತೆ. ಯಾವ ಅಚಾತುರ್ಯದಿಂದಲೊ ಏನೊ ಬೀಸಣಿಗೆಯ ಕೊನೆ ಬಲಗಣ್ಣಿನ ಅಂಚಿಗೆ ತಗಲಿ ರಕ್ತ ಸುರಿಯಿತಂತೆ. ಗಾಯ ರಣವಾಯಿತು. ಇದನ್ನು ಕಂಡು ತಂದೆಯಾದವನು ಅನುಭವಿಸಿದ ಸಂಕಟ ಅಷ್ಟಿಷ್ಟಲ್ಲ. ಹುಣ್ಣು ಮಾಯುವುದಕ್ಕೆ ತಿಂಗಳ ಕಾಲ ಚಿಕಿತ್ಸೆ ನಡೆಸಿದರು. ಚಿಕಿತ್ಸೆಯ ವಿಧಾನ ಹೀಗೆ : 'ಬೆಳಗ್ಗೆ ಒಂಬತ್ತು ಗಂಟೆಗೆ ಸರಿಯಾಗಿ ರಾಣಾಸಿಂಗನಪೇಟೆಯಲ್ಲಿದ್ದ ಮರಗೆಲಸದ ಪಟ್ಟಡಿಗೆ ಕರೆದುಕೊಂಡು ಹೋಗುವುದು. ಹತ್ತಿರದ ಮನೆಯಿಂದ ಒಂದು ಹುಂಜವನ್ನು ತಂದು ಸಣ್ಣ ಚಾಕುವಿನಿಂದ ಹುಂಜದ ಕತ್ತಿನ ಬಳಿ ಗಾಯಮಾಡಿ ಎರಡು ಮೂರು ತೊಟ್ಟು ಬಿಸಿರಕ್ತ ಗಾಯದ ಕಣ್ಣಿಗೆ ಬೀಳುವಂತೆ ಮಾಡುವುದು. ಸುಖೋಷ್ಣವಾಗಿ ಬಿದ್ದ ಆ ತೊಟ್ಟುಗಳು ಇವೊತ್ತಿಗೂ ನನಗೆ ದೃಷ್ಟಿದಾನ ಮಾಡಿದೆಯಾದ್ದರಿಂದ ನನಗೆ ಕೋಳಿಗಳನ್ನು ಕಂಡರೆ ತುಂಬಾ ಕೃತಜ್ಞತೆ' ಎಂದು ತಮ್ಮ ಲಘು ಪ್ರಬಂಧಗಳಲ್ಲಿ ಒಂದಾದ 'ಕೋಳಿ'ಯಲ್ಲಿ ಹೇಳಿಕೊಂಡಿದ್ದಾರೆ *(ವಿ.ಸೀ. ಲಲಿತ ಪ್ರಬಂಧ ಸಂಪುಟ, ೧೯೯೨, ಪು.೧೭೩)*.

ವಿ.ಸೀ. ತಂದೆ ಎತ್ತರದ ವ್ಯಕ್ತಿ. ಆಜಾನುಬಾಹು. ಪ್ರತಿ ವರ್ಷ ಶಿವರಾತ್ರಿಯಂದು ಗವಿಪುರದ ಗವಿಗಂಗಾಧರೇಶ್ವರನ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬರುವ ವಾಡಿಕೆ. ವಿ.ಸೀ. ಬೂದಿಗೆರೆಯಿಂದ ಬೆಂಗಳೂರಿಗೆ ಬಂದ ವರ್ಷ ವೆಂಕಟರಾಮಯ್ಯನವರು ಶಿವರಾತ್ರಿಯ ದಿನ ಎಂದಿನಂತೆ ದೇವರ ದರ್ಶನ ಮಾಡಿಕೊಂಡು ಬಂದು ಮಲಗಿದವರು ಮತ್ತೆ ಏಳಲೇ ಇಲ್ಲವಂತೆ. ಹೀಗೆ ಅನಾಯಾಸವಾಗಿ ಮರಣ ಹೊಂದಿದರು.

ವಿ.ಸೀ. ಹುಟ್ಟಿದ್ದು ಬೂದಿಗೆರೆಯಲ್ಲಾದರೂ ತಂದೆ ಅಷ್ಟು ಹೊತ್ತಿಗಾಗಲೆ ಬೆಂಗಳೂರಿಗೆ ಹೊರಟುಹೋಗಿದ್ದರಿಂದ, ಕೆಲವು ತಿಂಗಳಾದ ಮೇಲೆ ತಾಯಿ ಮಗು ಬಂದು ಚಾಮರಾಜಪೇಟೆ ಮನೆ ಸೇರಿದರು. ಆದರೆ ಅಲ್ಲಿ ಬಹುಕಾಲ ವಿರಲಿಲ್ಲ. ಮತ್ತೆ ಸೀತಾರಾಮಯ್ಯನವರು ಬೂದಿಗೆರೆಗೇ ಹಿಂದಿರುಗಿ ಅಜ್ಜಿಯ ಮತ್ತು ಚಿಕ್ಕಮ್ಮನ ಆರೈಕೆಯಲ್ಲಿ ತಮ್ಮ ಬಾಲ್ಯವನ್ನು ಕಳೆದರು.

ಚಿಕ್ಕಮ್ಮನ ಆರೈಕೆ - ಆಕೆಯ ದಾರುಣ ಕಥೆ

ವಿ.ಸೀ. ಚಿಕ್ಕಮ್ಮನದೂ ಒಂದು ದೊಡ್ಡ ಕತೆ. ಆಕೆಯ ಹೆಸರು ಚಿಕ್ಕ ವೆಂಕಮ್ಮ. ಅವರನ್ನು ದೊಡ್ಡಬಳ್ಳಾಪುರದ ಭಟ್ಟರೊಬ್ಬರಿಗೆ ಮದುವೆ ಮಾಡಿ ಕೊಟ್ಟಿದ್ದರು. ಅವರು ಕೈಹಿಡಿದ ಹೆಂಡತಿಯನ್ನು ಅತಿ ಕ್ರೂರವಾಗಿ ನಡೆಸಿ ಕೊಂಡದ್ದರಿಂದ, ಆಕೆ ತಾಳಲಾರದೆ ತವರುಮನೆಗೆ ಹಿಂತಿರುಗಿದರು. 'ಗಂಡ ನೊಡನೆ ಸಂಸಾರಮಾಡಿಕೊಂಡು ಬಾಳುವುದು ನಿನಗೆ ಸಾಧ್ಯವಾಗದಿದ್ದರೆ ಇಲ್ಲಿಯೇ ಗಂಡುಮಗು ಇದ್ದ ಹಾಗೆ ಇದ್ದುಬಿಡು ತಾಯಿ' ಎಂದಿದ್ದರಂತೆ ಅವರ ತಂದೆ. ಹೀಗಾಗಿ ಆಕೆ ಬೂದಿಗೆರೆಯಲ್ಲೆ ಬೆಳೆದರು.

ಈ ಚಿಕ್ಕಮ್ಮ ವಿ.ಸೀ.ಯವರನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗಿಂತ ಹೆಚ್ಚಾಗಿ, ತಮ್ಮದೇ ಜೀವವೇನೊ ಎಂಬಂತೆ ಬಹು ಪ್ರೀತಿಯಿಂದ ನೋಡಿ ಕೊಂಡರಂತೆ. ಇದನ್ನು ಕಂಡು ವಿ.ಸೀ.ಯವರ ತಾಯಿಯೂ ಅಸೂಯೆ ಪಡುವಂತಾಯಿತಂತೆ. 'ಗಂಡುಮಗನನ್ನು ತನ್ನಿಂದ ಕಸಿದುಕೊಂಡು ತನ್ನದನ್ನಾಗಿ ಮಾಡಿಕೊಂಡಳು' ಎನ್ನುವ ಭಾವನೆ ಮನಸ್ಸಿನಲ್ಲಿ ಸುಳಿದು, ಅಕ್ಕತಂಗಿಯರ ನಡುವೆ ಅಸಮಾಧಾನ ಹೊರತೋರುತ್ತಿತ್ತಂತೆ. ಎಲ್ಲ ಸಂಸಾರಗಳಲ್ಲೂ ಈ ಬಗೆಯ ವಿರಸ ಸಾಮಾನ್ಯ. ಅದನ್ನು ತಾಳಿಕೊಂಡು ಬಾಳು ಸಾಗಿಸುವುದಕ್ಕೆ ವಿಶೇಷ ಸಹನೆ ತಾಳ್ಮೆ ಇರಬೇಕು. ಅಕ್ಕತಂಗಿಯರ ನಡುವೆ ಏನೇ ವಿರಸವಿದ್ದರೂ ಮಗುವನ್ನು ಪ್ರೀತಿಸುವುದರಲ್ಲಿ ಇಬ್ಬರೂ ಹಿಂದೆ ಬಿದ್ದವರಲ್ಲ. ವಿ.ಸೀ.ಯವರೂ ಅವರ ನಂತರ ಹುಟ್ಟಿದ ತಂಗಿ ಸೀತಮ್ಮನೂ ಚಿಕ್ಕಮ್ಮನ ಆರೈಕೆಯಲ್ಲಿ ಬೆಳೆದರೆ ವಿ.ಸೀ.ಯವರ ಅಕ್ಕ ರುಕ್ಮಿಣಿಯಮ್ಮ ಮತ್ತು ತಮ್ಮ ಸುಬ್ಬಯ್ಯ ತಾಯಿಯ ಆರೈಕೆಯಲ್ಲಿ ಬೆಳೆದರು.

ವಿ.ಸೀ. ಚಿಕ್ಕಮ್ಮ ಬಹು ಕಷ್ಟವನ್ನು ಕಂಡಿದ್ದ ಮಹಿಳೆ. ಆಕೆಯ ಜೀವನದ ಒಂದು ಸಂದರ್ಭವನ್ನು ಕೊನೆಯವರೆಗೂ ವಿ.ಸೀ. ಮರೆಯಲಾರದೆ ನೆನಪಿಗೆ ತಂದುಕೊಂಡು ತಲ್ಲಣಿಸುತ್ತಿದ್ದರು. ವಿ.ಸೀ. ಇನ್ನೂ ಐದು ವರ್ಷದ ಬಾಲಕನಾಗಿದ್ದಾಗ ಚಿಕ್ಕಮ್ಮ, ಗೆಳತಿಯೊಬ್ಬಳನ್ನು ಜೊತೆಮಾಡಿಕೊಂಡು, ಬಾಲಕನನ್ನೂ ಎತ್ತಿಕೊಂಡು ದೊಡ್ಡಬಳ್ಳಾಪುರದಲ್ಲಿದ್ದ ತಮ್ಮ ಗಂಡನ ಮನೆಗೆ ಕರೆದುಕೊಂಡು ಹೋದರಂತೆ. ಊರು ಸೇರಿದಾಗ ಆಕೆಯ ಗಂಡ ಮನೆಯಲ್ಲಿರಲಿಲ್ಲ. ಹನ್ನೆರಡು ಗಂಟೆ ಹೊತ್ತಿಗೆ ಅವರು ಮನೆ ಸೇರಿದಾಗ, ಚಿಕ್ಕಮ್ಮ ಗಂಡನನ್ನು ಕುರಿತು 'ನನಗೆ ನೀವಲ್ಲದೆ ಯಾರು ದಿಕ್ಕು? ನನಗೆ ಒಂದು ಮಾಸಾಶನವನ್ನಾದರೂ ಕಲ್ಪಿಸಿಕೊಡಿ. ಬದುಕಲು ಏನಾದರೂ ಒಂದು ದಾರಿಮಾಡಿಕೊಡಿ' ಎಂದು ಅಂಗಲಾಚಿದರಂತೆ. ಅದಕ್ಕೆ ಆ ಗಂಡ 'ನಿನಗೆ ನೀನೇ ದಿಕ್ಕು. ನೀನು ಹೋದ ದಿನವೇ ಘಟಶ್ರಾದ್ಧ ಮಾಡಿ ಕೈ ತೊಳೆದುಕೊಂಡಿದ್ದೇನೆ. ಭಿಕ್ಷೆ ಬೇಡಿ ತಿನ್ನು, ಹೋಗು' ಎಂದು ಹೇಳಿದವರೇ ಚಿಕ್ಕಮ್ಮನ ಮುಂದಲೆಗೆ ಕೈಹಾಕಿ ದಡದಡ ಎಳೆದುತಂದು, ಮನೆಯಿಂದಾಚೆ ತಳ್ಳಿಬಿಟ್ಟರಂತೆ. ಈ ಅಮಾನುಷ, ಬರ್ಬರ ಕಾರ್ಯವನ್ನು ಕಂಡ ವಿ.ಸೀ. 'ಯಾವ ಹೆಂಗಸಿನ ವಿಷಯದಲ್ಲೂ ನಾನು ಕ್ರೂರವಾಗಿ ನಡೆದುಕೊಳ್ಳುವುದಿಲ್ಲ. ಕುಸುಮಾದಪಿ ನ ತಾಡಯೇತ್ (ಹೂವಿನ ಎಸಳಿನಿಂದಲೂ ಹೊಡೆಯಲು ಹೋಗುವುದಿಲ್ಲ) ಎಂದು ನಿರ್ಧರಿಸಿದರಂತೆ. ಅದರಂತೆಯೇ ಜೀವನದುದ್ದಕ್ಕೂ ನಡೆದುಕೊಂಡರು. ಯಾರನ್ನೂ ಹೊಡೆಯುವುದಕ್ಕೆ ಕೈ ಎತ್ತಲಿಲ್ಲ. ಹೆಂಗಸಿನ ವಿಷಯವಾಗಂತೂ ಒಂದು ಕಟುಶಬ್ದವನ್ನೂ ಉಪಯೋಗಿಸುತ್ತಿರಲಿಲ್ಲ. ಆ ದಿನ ಮೊದಲುಗೊಂಡು ದೊಡ್ಡಬಳ್ಳಾಪುರಕ್ಕೆ ಅವರು ಕಾಲಿರಿಸಲೂ ಇಲ್ಲ.

ತಂದೆ ವೆಂಕಟರಾಮಯ್ಯನವರು ಬೆಂಗಳೂರಿನ ಚೌಬೀನೆ ಅಂಗಡಿಯೊಂದರಲ್ಲಿ ಗುಮಾಸ್ತರಾಗಿದ್ದು ಅಲ್ಲಿಯೇ ಸಂಸಾರ ಹೂಡಿದ್ದರಷ್ಟೆ. ತಾಯಿ ತಂದೆಯರು ಬೆಂಗಳೂರಿನಲ್ಲಿದ್ದರೂ ವಿ.ಸೀ.ಯವರ ಬಾಲ್ಯವೆಲ್ಲ ಬೂದಿಗೆರೆಯಲ್ಲಿ ಕಳೆಯಿತು. ಅಜ್ಜಿ ಮತ್ತು ಚಿಕ್ಕಮ್ಮನ ಲಾಲನೆಯಲ್ಲಿ ಕಳೆದ ಬಾಲ್ಯದ ದಿನಗಳು ಅತಿ ಸೊಗಸಿನವೆಂದು ವಿ.ಸೀ. ನೆನೆಸಿಕೊಂಡಿದ್ದಾರೆ. ತಾವು ಬೆಳೆದ ಮನೆಯ ಪರಿಸರದ ಸುಂದರ ಚಿತ್ರ ಇದು:

> ''ಅವರವರ ಮನೆ, ಊರು, ಅವರವರಿಗೆ ಪ್ರಿಯ. ಇದು ನಮ್ಮ ಊರು - ಅರ್ಧಶತಮಾನದ ಹಿಂದೆ. ಇಂದು ಅಲ್ಲಿ ನಮ್ಮದೇನೂ ಇಲ್ಲ, ಉಳಿದಿಲ್ಲ. ಅಲ್ಲಿರುತ್ತಿದ್ದ ಬಾವಿಯೊಂದು ಬಾಯಿ ತರೆದುಕೊಂಡಿದೆ. ಕಲ್ಲುಚಪ್ಪಡಿ ಒಂದು ಒಳಗೆ ಕಳಚಿಕೊಳ್ಳುತ್ತಿದೆ. ಮನೆಯೆದುರಿನ ನಾಗರಕಟ್ಟೆ ಜಾಳುಬಿದ್ದು ನಾಗರಕಲ್ಲು ಹಾಗೂ ಹೀಗೂ ಗಾರೆಗಚ್ಚು ಇಲ್ಲದೆ ನಿಂತಿದೆ. ಅರಳಿ, ಬೇವು ಬಡಕಲಾಗಿ ಒಣಗಿ ಉಳಿಕೆಯಂತಿವೆ. ಸುತ್ತಲೆಲ್ಲ ಆಗೆದು ನೆರೆಯವರು ಮಣ್ಣನ್ನು ಕೂಡ ಮಾರಿಕೊಂಡಿದ್ದಾರೆ. ತಮ್ಮ ಕಸವನ್ನು ತಿಪ್ಪೆಹಾಕಿದ್ದಾರೆ.

ಆದರೆ ಇಲ್ಲಿತ್ತು ನಮ್ಮ ಮನೆ. ನಮ್ಮ ತಾತನದು. ಹಿಂದೆ ಸಣ್ಣ ವಯಸ್ಸಿನಲ್ಲಿ ಒಮ್ಮೆ ಬಂದಿದ್ದೆ. ತಾತಂದಿರು ತೀರಿಕೊಂಡು ಅವರ ಕರ್ಮಾಂತರ ನಡೆಯುತ್ತಿದ್ದ ಕಾಲ ಅದು. ಮನೆಯಲ್ಲಿ ಆರೆಂಟು ಹಸು; ನಾಲ್ಕು ಕಪಿಲೆ ಕರೆಯುತ್ತಿದ್ದವು. ತುಂಬಾ ಜನ, ಮಕ್ಕಳ ಆಟ; ಹಟ, ಚೀರು, ಹುಯಿಲು:– ದೊಡ್ಡವರದು ಚಿಕ್ಕವರದು. ಏತೇತಕ್ಕೊ ಸಂತೆಯಂತಿತ್ತು. ಬತ್ತಲ ಮಕ್ಕಳು ಬಟ್ಟಿ ಬಿಸಾಟು ರಂಪ ಮಾಡುತ್ತಿರುವವರೇ. ಕೊಟ್ಟ ತಿಂಡಿ ಒಲ್ಲದೆ, ಕೈಗೆ ಹಾಕಿದ ತುತ್ತನ್ನು ಎಸೆದು, ನಾನೂ ಏತಕ್ಕೊ ಮುನಿಸಿಕೊಂಡಿದ್ದ ನೆನಪು. ತಾಯಿ ಸಮಾಧಾನ ಮಾಡುತ್ತಿದ್ದರು. ಅಲ್ಲಿಂದ ಪಕ್ಕದ ಮನೆಯ ಕಮ್ಮಸಂದ್ರದ ಮುನಿಯಕ್ಕನ ಮನೆಗೆ ನನ್ನನ್ನು ಒಯ್ದರು. 'ಅಯ್ಯೋ ನನ್ನಪ್ಪ, ನಮ್ಮ ಎಂಟ್ರಾಮಪ್ಪನ ಮಗನಾ ನೀನು? ಬಾ ಮಗ' ಎಂದವಳೇ ಆಗತಾನೆ ಹಚ್ಚಗೆ ಕಾಯಿಸಿಟ್ಟಿದ್ದ ಕೆನೆಹಾಲನ್ನು ಕಂಚಿನ ತುಂಬಾ ತಂದುಕೊಟ್ಟ ನೆನಪು ಹಾಯೆನಿಸುತ್ತದೆ. ಅವಳಾರೊ, ನಾನ್ಯಾರೊ ..... ಆ ಚಿತ್ರಗಳು ಮರುಕಳಿಸುತ್ತಿವೆ. ಆ ನೆಲ, ಆ ಹರ್ಷದ ಭೂಮಿ ಇಂದು ರುದ್ರಭೂಮಿ. ಅದನ್ನು ಇಂದು ಕಾಣುತ್ತಿದ್ದೇನೆ, ಈ ಹಾಳನ್ನು; ನಿಟ್ಟುಸಿರು ತರುವ ಈ ಒಣನೆಲವನ್ನು. ಆದರೂ ಮನಸ್ಸು ತುಯ್ಯುತ್ತಿದೆ. ಅಲ್ಲಿಯೇ ಸ್ವಲ್ಪ ಕುಳಿತು ಬಾಗಿ ಯಾರೂ ಕಾಣದಿರುವಾಗ ಅದನ್ನು ಮುದ್ದಿಡಬೇಕೆಂದು .....''

(ವಿ.ಸೀ. ಸಂಪದ 'ಲಲಿತ ಪ್ರಬಂಧ ಸಂಪುಟ', ೧೯೯೨, ಪು.೨೬೨-೨೬೩)

ಎಷ್ಟು ಪ್ರೀತಿ ಬೆಳೆಸಿಕೊಂಡಿದ್ದರು ತಾವು ಹುಟ್ಟಿ ಬೆಳೆದ ಆ ನೆಲದ ಮೇಲೆ. ಅದಕ್ಕಿಂತ ಹೆಚ್ಚಾಗಿ, ರಂಪಮಾಡುತ್ತಿದ್ದ ತನ್ನನ್ನು ಅಕ್ಕರೆಯಿಂದ ಎತ್ತಿಕೊಂಡು ಕೆನೆಹಾಲು ಕುಡಿಸಿದ ಕಮ್ಮಸಂದ್ರದ ಮುನಿಯಕ್ಕನ ನೆನಪು ಅವರ ಮನಸ್ಸಿನಲ್ಲಿ ಉಳಿದದ್ದು ಹೆಚ್ಚಲ್ಲವೆ? ಇದು ನಮಗೆ ದೊರೆಯುವ ವಿ.ಸೀ.ಯವರ ಬಾಲ್ಯದ ಒಂದು ಚಿತ್ರ.

ಬೆಂಗಳೂರಿನಲ್ಲಿ ಬಡತನದ ಬಾಳು

ಏಳು ವರ್ಷದ ಹುಡುಗನಾಗಿದ್ದಾಗ ವಿ.ಸೀ. ಬೂದಿಗೆರೆಯನ್ನು ಬಿಟ್ಟು ತಾಯಿ ತಂದೆಯರೊಂದಿಗೆ ಇರಲು ಬೆಂಗಳೂರಿಗೆ ಬಂದು ಸೇರಿದರು. ಆದರೆ ಸುಖಜೀವನ ನಡೆಸುವ ಯೋಗ ಅವರ ಹಣೆಯಲ್ಲಿ ಬರೆದಿರಲಿಲ್ಲ. ಅವರ ತಂದೆ ಹಠಾತ್ತನೆ ತೀರಿಕೊಂಡು ಮನೆ ಅನಾಥವಾಯಿತು. ಬಡತನದ ಬೇಗೆಯನ್ನು ಎಳೆತನದಿಂದಲೇ ಎದುರಿಸಬೇಕಾಯಿತು. ತಂದೆ ಬದುಕಿದ್ದಾಗಲೆ ಅಕ್ಕ ರುಕ್ಮಿಣಿಯಮ್ಮನ ಮದುವೆ ನಿಶ್ಚಯವಾಗಿತ್ತು. ಆಕೆಯ ಮದುವೆಗೆ ಹಣ ಒದಗಿಸಲು ಇದ್ದ ಮನೆಯನ್ನು ಮಾರಬೇಕಾಯಿತು. ಹತ್ತು ವರ್ಷ ವಯಸ್ಸಿನ ವಿ.ಸೀ. ಸಂಸಾರದ ಭಾರವನ್ನು ಹೊರಬೇಕಾಯಿತು. ಬೂದಿಗೆರೆಯಲ್ಲಿದ್ದ ಅಜ್ಜಿ, ಚಿಕ್ಕಮ್ಮ ಕೂಡ ನೆಲೆತಪ್ಪಿ ಬೆಂಗಳೂರು ಸೇರಿದರು. ಬಡತನ ಕಿತ್ತು ತಿನ್ನುತ್ತಿದ್ದರೂ ವಿದ್ಯಾಭ್ಯಾಸ ಮುಂದುವರಿಸುವುದನ್ನು ಬಿಡಲಿಲ್ಲ. ಚಾಮರಾಜಪೇಟೆ ಮುನಿಸಿ

ಪಲ್ ಮಿಡಲ್ ಸ್ಕೂಲನ್ನು ಸೇರಿದರು. ಈ ಕಾಲವನ್ನು ಹೇಗೆ ಕಳೆದರು, ಜೀವನ ಸಾಗಿಸುವುದಕ್ಕೆ ಏನೇನು ಪಾಡು ಪಟ್ಟರು, ಈ ವಿವರಗಳು ದೊರೆಯುವುದಿಲ್ಲ. ವಿ.ಸೀ. ಯವರು ಕೂಡ ಆ ಕಷ್ಟದ ದಿನಗಳನ್ನು ಅಷ್ಟಾಗಿ ನೆನಪಿಸಿಕೊಂಡಂತೆ ಕಾಣುವುದಿಲ್ಲ.

ಬಡತನದ ಸಂಸಾರ ಸಾಗುವುದು ಕಷ್ಟವಾಗಿತ್ತು. ಅಭಿಮಾನವನ್ನು ಅದುಮಿ ವಿ.ಸೀ. ವಾರಾನ್ನದ ಹುಡುಗನಾಗಿ ಬದುಕು ನೂಕಬೇಕಾಯಿತು. ಹಲವಾರು ಪ್ರತಿಭಾವಂತ ಮಹನೀಯರು (ಉದಾ: ಮಾಸ್ತಿಯವರು) ಈ ಬಗೆಯ ವಾರಾನ್ನದಿಂದ ಬೆಳೆದು ವಿದ್ಯಾರ್ಜನೆ ಮಾಡಿರುವುದನ್ನು ನೋಡಿದರೆ ಈ ಹಳೆಯ ಕಾಲದ ಸಂಪ್ರದಾಯದಲ್ಲಿ ಗುಣವಿದ್ದಂತೆ ಕಾಣುತ್ತದೆ. ಅನ್ನ ಹಾಕುವವರು ತಾತ್ಸಾರಭಾವದಿಂದ ನಡೆದುಕೊಳ್ಳದೆ, ವಿದ್ಯಾರ್ಜನೆಗಾಗಿ ತವಕಿಸುತ್ತಿದ್ದ ಹುಡುಗರನ್ನು ಅಕ್ಕರೆಯಿಂದ, ಪ್ರೀತಿವಿಶ್ವಾಸಗಳಿಂದ ನೋಡಿಕೊಳ್ಳುತ್ತಿದ್ದಂತೆ ಕಾಣುತ್ತದೆ. ಬ್ರಹ್ಮಚಾರಿಯಾದ ವಟು ಭಿಕ್ಷಾನ್ನದಿಂದ ಹೊಟ್ಟೆಹೊರೆದು ಕಷ್ಟ ಜೀವಿಯಾಗಿ, ವಿನಯ ಸಹನೆಗಳಂಥ ಗುಣಗಳನ್ನು ಬೆಳಸಿಕೊಂಡು ವಿದ್ಯಾರ್ಜನೆ ಮುಂದುವರಿಸುವುದರಲ್ಲಿ ಒಂದು ಸಮಂಜಸತೆ ಕಾಣುತ್ತದೆ. ಕಷ್ಟಸಹಿಷ್ಣುತೆ ವಿದ್ಯಾರ್ಜನೆಯಲ್ಲಿ ಮುಖ್ಯವಾದ ಅಂಶವೆನ್ನುವುದನ್ನು ನಾವು ಮನಗಾಣುತ್ತೇವೆ. ಹಾಗೆ ಕಲಿತ ವಿದ್ಯೆ ಸಾರ್ಥಕವಾಗುವುದೆಂದು ತೋರುತ್ತದೆ.

ಎಷ್ಟೇ ಕತ್ತಲು ಕವಿಯುತ್ತ ಹೋದರೂ ಚಂದ್ರನ ಕಾಂತಿಗೆ ಕುಂದು ಬಾರದೆ ಮತ್ತೂ ಬೆಳಗುತ್ತ ಹೋಗುವಂತೆ, ಬಡತನದಿಂದ ಧೃತಿಗೆಡದೆ, ತಮ್ಮ ಉತ್ತಮತೆಯನ್ನು ಮೆರೆಯುತ್ತ ವಿ.ಸೀ. ವಿದ್ಯಾಭ್ಯಾಸ ಮುಂದುವರಿಸಿದರು. ಇಂಗ್ಲಿಷಿನಲ್ಲಿ ಹೆಚ್ಚಿನ ತಿಳಿವಳಿಕೆ, ಪರಿಶ್ರಮ ತೋರಿದ್ದರಿಂದ ಡಬಲ್ ಪ್ರಮೋಷನ್ ದೊರೆಯಿತು. ಮುಂದೆ ಆಗ್ಗೆ ಪ್ರಸಿದ್ಧಿಯಾಗಿದ್ದ ಚಾಮರಾಜಪೇಟೆಯ ಒಂದು ತುದಿಯಲ್ಲಿದ್ದ ಕೋಟೆ ಹೈಸ್ಕೂಲನ್ನು ಸೇರಿದರು. ಆ ಕಾಲದಲ್ಲಿ ಟಿ.ಪಿ. ಕೈಲಾಸಂ ಅವರ ತಮ್ಮ ಕೃಷ್ಣಸ್ವಾಮಿ, ವೆಂಕಟರಂಗಯ್ಯಂಗಾರ್, ಎಂ.ಜಿ. ವೆಂಕಟೇಶಯ್ಯ, ಪಿ. ಶ್ರೀನಿವಾಸರಾವ್, ಕೆ.ವಿ.ಅಯ್ಯರ್ ಇವರುಗಳು ಕೋಟೆ ಸ್ಕೂಲಿನಲ್ಲಿ ವಿ.ಸೀ. ಯವರ ಸಹಪಾಠಿಗಳಾಗಿದ್ದರು.

ಹೈಸ್ಕೂಲಿನ ವಿದ್ಯಾಭ್ಯಾಸದ ಹೆಚ್ಚಿನ ವಿವರಗಳು ದೊರೆಯುವುದಿಲ್ಲ. ಹೈಸ್ಕೂಲಿನ ಹಿಂಭಾಗದಲ್ಲಿ ಇದ್ದ ಹಳೆಯ ಸಂಸ್ಕೃತ ಕಾಲೆಜು ಆವರಣದಲ್ಲಿಯೂ, ಚಾಮರಾಜಪೇಟೆಯ ರಾಮೇಶ್ವರನ ಗುಡಿಯಲ್ಲಿಯೂ ನಡೆಯುತ್ತಿದ್ದ ಸಂಗೀತ ಕಚೇರಿಗಳಿಗೆ ತಪ್ಪದೆ ಹೋಗಿ, ಸಂಗೀತದಲ್ಲಿ ಆಸಕ್ತಿಯನ್ನು ವಿ.ಸೀ. ಆ ತರುಣದಲ್ಲೆ ಬೆಳೆಸಿಕೊಂಡರು.

೧೯೧೬ ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗಿನ ವಿದ್ಯಾಭ್ಯಾಸದ ಕ್ರಮದ ಪ್ರಕಾರ ಎಸ್.ಎಸ್.ಎಲ್.ಸಿ. ಮುಗಿಸಿದ ಮೇಲೆ

ಕಾಲೇಜು ಸೇರುವ ಮೊದಲು ಎಂಟ್ರೆನ್ಸ್ (Entrance) ಪರೀಕ್ಷೆಯೊಂದು ಇರುತ್ತಿತ್ತು. ಇದಕ್ಕಾಗಿ ಕೊಲೀಜಿಯೆಟ್ ಹೈಸ್ಕೂಲಿನಲ್ಲಿ ವ್ಯಾಸಂಗ ಮುಂದುವರಿಸಬೇಕಾಗಿತ್ತು. ಎಂಟ್ರೆನ್ಸ್ ಮುಗಿದ ಮೇಲೆ ಮೂರು ವರ್ಷ ವ್ಯಾಸಂಗ ಮುಂದು

ಸ್ನೇಹಿತರೊಂದಿಗೆ ಬಾಲಕ ವಿ.ಸೀ. (ನಿಂತಿರುವವರಲ್ಲಿ ಎಡದಿಂದ ಮೊದಲಿಗರು, ೧೯೧೨)

ವರಿಸಿದರೆ ಬಿ.ಎ. ಡಿಗ್ರಿ ಪಡೆಯುವ ಅವಕಾಶವಿತ್ತು. ವಿ.ಸೀ. ಎಂಟ್ರೆನ್ಸ್ ಪರೀಕ್ಷೆಗಾಗಿ ಕೊಲೀಜಿಯೆಟ್ ಹೈಸ್ಕೂಲು ಸೇರಿದರು. ಎಂಟ್ರೆನ್ಸ್ ಪ್ರವೇಶ ಪರೀಕ್ಷೆಗೆ ಇವರು ಬರೆದ ಇಂಗ್ಲಿಷ್ ಭಾಷೆಯ ಉತ್ತರ ಪತ್ರಿಕೆಯನ್ನು ನೋಡಿದ

ಪ್ರಿನ್ಸಿಪಾಲ್ ಟೀಟ್ ಅವರು — 'Not bad. Pull the young fellow's nose and ask him to write simpler English with shorter sentences.' (ಪರವಾಯಿಲ್ಲ. ಈ ಹುಡುಗನ ಮೂಗು ಹಿಂಡಿ, ಸುಲಭವಾದ ಇಂಗ್ಲಿಷ್ ಬರೆಯುವಂತೆ ಹೇಳಿ. ವಾಕ್ಯಗಳು ಚಿಕ್ಕವಾಗಿರಲಿ.) ಎಂದು ಟಿಪ್ಪಣಿ ಬರೆದಿದ್ದರಂತೆ.

ಎಂಟ್ರೆನ್ಸ್ ಪರೀಕ್ಷೆಯಲ್ಲಿ ವಿ.ಸೀ. ಉತ್ತೀರ್ಣರಾದರು. ಇಲ್ಲಿಗೆ ವಿದ್ಯಾಭ್ಯಾಸದಲ್ಲಿ ಒಂದು ಘಟ್ಟ ಮುಗಿಯಿತು. ಇನ್ನು ಕಾಲೇಜು ವ್ಯಾಸಂಗ. ಮೈಸೂರಿನ ಮಹಾರಾಜಾ ಕಾಲೇಜು ಅವರನ್ನು ಆಕರ್ಷಿಸುತ್ತಿತ್ತು.

ಅಂದಿನ ಚಾಮರಾಜಪೇಟೆ

ಈ ಶತಮಾನದ ಆರಂಭದ ದಶಕಗಳಲ್ಲಿ ಚಾಮರಾಜಪೇಟೆ ವಿದ್ವಾಂಸರುಗಳ, ಸರಕಾರದಲ್ಲಿನ ಉನ್ನತ ಅಧಿಕಾರಿಗಳ ನೆಲೆವೀಡಾಗಿತ್ತು. ರಾಮೇಶ್ವರನ ಗುಡಿಯ ಸುತ್ತ ಛಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳು, ಮೋಟಗಾನಹಳ್ಳಿ ರಾಮಶೇಷ ಶಾಸ್ತ್ರಿಗಳು, ಶಂಕರಶಾಸ್ತ್ರಿಗಳು, ಶಂಕರಶಾಸ್ತ್ರಿಗಳ ಮಕ್ಕಳು ಸುಬ್ರಹ್ಮಣ್ಯಶಾಸ್ತ್ರಿಗಳು ವಾಸಿಸುತ್ತಿದ್ದರು. ಮೂರನೆ ಬೀದಿಯ ರಾಮೇಶ್ವರನ ಗುಡಿಯಲ್ಲಿ ನಿತ್ಯ ಏನಾದರೂ ಒಂದು ಕಾರ್ಯಕ್ರಮವಿರುತ್ತಿತ್ತು. ಚಾಮರಾಜಪೇಟೆ ಐದನೆ ಬೀದಿಯ ಉದ್ದಕ್ಕೂ ವಿಶಾಲವಾದ ಆವರಣಗಳ ನಡುವೆ, ಹೂತೋಟಗಳಿಂದ ಕಂಗೊಳಿಸುತ್ತಿದ್ದ, ಸರಕಾರದ ಉನ್ನತ ಅಧಿಕಾರಿಗಳು ವಾಸಿಸುತ್ತಿದ್ದ ಬಂಗಲೆಗಳಿದ್ದವು. ಕೆ.ಪಿ.ಪುಟ್ಟಣ್ಣಶೆಟ್ಟರು, ಕೆ.ಆರ್. ಶ್ರೀನಿವಾಸಯ್ಯಂಗಾರ್ಯರು, ವೆಂಕಟರಂಗಂ ಅವರು, ಬಿ.ಪುಟ್ಟಯ್ಯನವರು, ಮೋಕ್ಷಗುಂಡಂ ರಾಮಚಂದ್ರರಾಯರು, ದೇಶಮುಖಿ ಗೋವಿಂದರಾಯರು, ಅಂಡಾಪುರಂ ರಾಘವಾಚಾರ್ಯರು, ಇ. ಕೃಷ್ಣಸ್ವಾಮಿ ಅಯ್ಯರ್ ಅವರು ಈ ಬೀದಿಯ ಬಂಗಲೆಗಳಲ್ಲಿ ವಾಸಿಸುತ್ತಿದ್ದರು. ಎತ್ತ ನೋಡಿದರೂ ಶಾಂತ ವಾತಾವರಣವಿರುತ್ತಿತ್ತು. ಚಾಮರಾಜಪೇಟೆಯ ಬೀದಿಗಳಲ್ಲಿ ಬೆಳುದಿಂಗಳ ರಾತ್ರಿಯಲ್ಲಿ ನಡೆದು ಹೋಗುವುದೇ ಸೊಗಸಿನ ಅನುಭವವಾಗಿತ್ತು. ವಿ.ಸೀ. ತಮ್ಮ ಬಾಲ್ಯವನ್ನು ಇಂಥ ಸುಂದರ ವಾತಾವರಣದಲ್ಲಿ ಕಳೆದರು.

ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡವಾಗಲಿ, ಸಂಸ್ಕೃತ ಪಾಠಶಾಲೆಯಾಗಲಿ ಇರಲಿಲ್ಲ. ಪರಿಷತ್ತಿರುವ ಕಡೆ ವಿಶಾಲವಾದ ಮೈದಾನವಿತ್ತು . ಗಾಂಧಿ ಮೈದಾನವೆಂದು ಅದು ಹೆಸರು ಗಳಿಸಿತ್ತು. ಸಾರ್ವಜನಿಕ ಸಭೆಗಳು ನಡೆಯುತ್ತಿದ್ದದ್ದೂ ಅಲ್ಲಿಯೇ. ಈಗ ಸಂಸ್ಕೃತ ಪಾಠಶಾಲೆ ಇರುವ ಕಡೆ ಟಿಪ್ಪೂ ಸುಲ್ತಾನನ ಕಾಲದ ಬೆಂಗಳೂರು ಕೋಟೆಯ ಭಗ್ನ ಅವಶೇಷಗಳು, ಕಂದಕಗಳು ಕಾಣುತ್ತಿದ್ದವು.

ಮೂರನೆಯ ಬೀದಿಯಲ್ಲಿದ್ದ ಚೌಬೀನೆ ಸುಬ್ಬರಾಯರು ಎಂಬ ಶ್ರೀಮಂತರ ಮನೆಯಲ್ಲಿ ನವರಾತ್ರಿಯ ಕಾಲದಲ್ಲಿ ಶಂಕರಶಾಸ್ತ್ರಿಗಳಿಂದ ವಾಲ್ಮೀಕಿ ರಾಮಾಯಣ ಪಾರಾಯಣ ನಡೆಯುತ್ತಿತ್ತು. ಅಲ್ಲಿಗೆ ತಪ್ಪದೆ ಹೋಗುತ್ತಿದ್ದ ಕಾರಣ ಶ್ರೀರಾಮಕಥೆಯ ಸ್ವಾರಸ್ಯವನ್ನು ಅನುಭವಿಸುವ ಸುಯೋಗ ವಿ.ಸೀ.ಯವರಿಗೆ ಬಾಲ್ಯದಿಂದಲೇ ದೊರೆತಿತ್ತು. ಬೇರೆ ಯಾವುದೋ ಪ್ರಪಂಚಕ್ಕೆ ಕೊಂಡೊಯ್ದು ಅಲ್ಲಿ ವಾಸಮಾಡುವಂತೆ ಮಾಡುತ್ತಿತ್ತು ಆ ಪಾರಾಯಣ ಎನ್ನುತ್ತಾರೆ ಆ ವ್ಯಾಖ್ಯಾನವನ್ನು ಕೇಳಿದ ವಿ.ಸೀ. ಸೀತಾಕಲ್ಯಾಣದ ವಾಲ್ಮೀಕಿಯ ಪದ್ಯ

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥
ಪತಿವ್ರತಾ ಮಹಾಭಾಗಾ ಛಾಯೇವ ಅನುಗತಾ ಸದಾ

(ವಾಲ್ಮೀಕಿ ರಾಮಾಯಣ, ಬಾಲಕಾಂಡ, ೭೩-೨೭)

ಅವರ ಮೇಲೆ ತುಂಬಾ ಪ್ರಭಾವ ಬೀರಿತು. ಶಾಸ್ತ್ರಿಗಳು ದೊಡ್ಡ ಆರತಿಯನ್ನು ವಾಲ್ಮೀಕಿಯ ಗ್ರಂಥಕ್ಕೂ ಶ್ರೀರಾಮರ ಪಟ್ಟಾಭಿಷೇಕದ ಪಠಕ್ಕೂ ಮಾಡಿ, ಎಲ್ಲರಿಗೂ ಹೂ ಅಕ್ಷತೆ ಕೊಡುತ್ತಿದ್ದ ಚಿತ್ರವನ್ನು ವಿ.ಸೀ. ಜ್ಞಾಪಿಸಿಕೊಳ್ಳುತ್ತಾರೆ. ಆಗ ಶಂಕರಶಾಸ್ತ್ರಿಗಳನ್ನು ನೋಡಿದರೆ ವಸಿಷ್ಠರೇ ನಿಂತಿದ್ದಾರೇನೊ ಎನ್ನುವಂತೆ ತೋರುತ್ತಿತ್ತಂತೆ!

ಇಂಥ ಘನವಿದ್ವಾಂಸರ ಸಹವಾಸ, ಅವರ ಪಾಂಡಿತ್ಯ, ದಿನವೂ ನಡೆಯುತ್ತಿದ್ದ ವೇದಶಾಸ್ತ್ರಗಳ ಪಾಠ, ಪುರಾಣ ಶ್ರವಣ, ವಿ.ಸೀ.ಯವರ ಮನಸ್ಸು ಉತ್ತಮ ಸಂಸ್ಕೃತಿಯ ಸಂಪರ್ಕದಿಂದ ಅರಳುವಂತೆ ಮಾಡಿತು. ವಿ.ಸೀ.ಯವರ ಉಚ್ಚಾರ ಶುದ್ಧಿಗೆ ಈ ಎಳೆತನದ ಸಹವಾಸವೇ ಕಾರಣ. ಶಾಸ್ತ್ರಿಗಳು ಕೋಮಲ ಕಂಠದಿಂದ ಹೇಳುತ್ತಿದ್ದ ಸಂಸ್ಕೃತ ಪದ್ಯಗಳು, ವೃತ್ತಗಳು, ಕಂದಗಳು, ಚೂರ್ಣಿಕೆಗಳು ಅವರ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮವುಂಟುಮಾಡಿದವು.

ಕಾಲೆಜ್ ದಿನಗಳು

ಮೈಸೂರು ವಿಶ್ವವಿದ್ಯಾನಿಲಯದ ಆರಂಭದ ದಿನಗಳು

ಮೈಸೂರಿನ ಹೆಮ್ಮೆಯ ಪುತ್ರ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಸತತ ಪ್ರಯತ್ನದಿಂದ ೧೯೧೬ರ ಸುಮಾರಿಗೆ ಮೈಸೂರು ವಿಶ್ವವಿದ್ಯಾನಿಲಯ ಸ್ವತಂತ್ರ ವಾದ ಅಸ್ತಿತ್ವವನ್ನು ಪಡೆಯಿತು. ಸರ್ವಪಲ್ಲಿ ರಾಧಾಕೃಷ್ಣನ್, ಕಟ್ಟಿಮಂಚಿ ರಾಮಲಿಂಗಾ ರೆಡ್ಡಿ, ಎನ್.ಎಸ್. ಸುಬ್ಬರಾವ್, ಜೆ.ಸಿ.ರಾಲೋ, ಬಿ.ಎಂ. ಶ್ರೀಕಂಠಯ್ಯ, ಎ.ಆರ್.ವಾಡಿಯ, ಎಂ.ಹಿರಿಯಣ್ಣ ಮುಂತಾದ ಹೆಸರಾಂತ ವಿದ್ವಾಂಸರು ಪ್ರಾಧ್ಯಾಪಕರುಗಳಾಗಿ ನೇಮಕಗೊಂಡು ನೂತನ ವಿಶ್ವವಿದ್ಯಾ ನಿಲಯಕ್ಕೆ ಹೊಸತೊಂದು ಮೆರುಗು ಕೊಟ್ಟಿದ್ದರು.

ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿ.ಸೀ.ಯವರಿಗೆ ಮಹಾ ರಾಜಾ ಕಾಲೆಜ್ ಬಂದು ಸೇರಲು ಎನ್.ಎಸ್. ಸುಬ್ಬರಾಯರು ಮೊದಲೇ ಆಹ್ವಾನ ನೀಡಿದ್ದರಂತೆ. ಕಾಲೆಜ್ ಸೇರಲು ಮೈಸೂರಿಗೆ ಹೋಗಬೇಕು. ಆದರೆ ವಾಸಕ್ಕೆ ಸ್ಥಳವೆಲ್ಲಿ? ಖರ್ಚಿಗೆ ಹಣವೆಲ್ಲಿ? ಹಣ ಸಂಪಾದನೆಗೆಂದೇ ವಿ.ಸೀ. ಸರಕಾರದ ವಿದ್ಯಾ ಇಲಾಖೆಯ ಕಚೇರಿಯಲ್ಲಿ ಗುಮಾಸ್ತರಾಗಿ ಸೇರಿ ಮೂರು ತಿಂಗಳ ಕಾಲ ಕೆಲಸಮಾಡಿದರು. ಒಂದಿಷ್ಟು ಹಣವನ್ನು ಜೊತೆಮಾಡಿಕೊಂಡು ಮೈಸೂರು ಸೇರಿದರು. ಮಹಾರಾಜ ಕಾಲೆಜನ್ನು ೧೯೧೭ರಲ್ಲಿ ಪ್ರವೇಶಿಸಿದರು. ನೂತನ ವಿಶ್ವವಿದ್ಯಾನಿಲಯದ ಮೊದಲ ವರ್ಷದ ವಿದ್ಯಾರ್ಥಿಗಳಲ್ಲಿ ಒಬ್ಬರಾದರು.

ಅಂದಿನ ಮಹಾರಾಜ ಕಾಲೆಜಿನ ವಿದ್ಯಾವಾತಾವರಣವನ್ನು ಎ.ಎನ್ ಮೂರ್ತಿರಾಯರು ಈಗಾಗಲೆ ಚಿತ್ರಿಸಿದ್ದಾರೆ. ಅದೊಂದು ನಿಜಕ್ಕೂ ಸುವರ್ಣ ಯುಗವೇ ಸರಿ. ಅಂತಹ ಉತ್ಸಾಹೀ ತರುಣ ವಿದ್ಯಾರ್ಥಿಗಳನ್ನಾಗಲಿ, ಪ್ರಾಧ್ಯಾಪಕ ರತ್ನಗಳನ್ನಾಗಲಿ ಆ ಕಾಲೆಜ್ ಮುಂದೆಂದೂ ಕಾಣಲಿಲ್ಲ. ವಿದೇಶಗಳಲ್ಲಿ ಕೇಂಬ್ರಿಡ್ಜ್, ಆಕ್ಸ್‌ಫರ್ಡ್ ಮುಂತಾದ ಶಿಕ್ಷಣಸಂಸ್ಥೆಗಳು ನಾನೂರು ಐನೂರು ವರ್ಷಗಳು ಕಳೆದರೂ ತಮ್ಮ ಹಿರಿಮೆಯನ್ನು ಕಳೆದುಕೊಳ್ಳದೆ, ಒಂದೇ ಸಮನೆ ಕೀರ್ತಿಯನ್ನು ಹರಡುತ್ತ ಬಂದಿವೆ. ನಮ್ಮ ದೇಶದಲ್ಲೇಕೊ ಸಂಸ್ಥೆಗಳು ನೂರು ವರ್ಷ ಕೂಡ ನೆಟ್ಟಗೆ ನಡೆಯುವಂತಿಲ್ಲ. ಏನು ಶಾಪವೊ?

ಅಂದಿನ ಕಾಲದ ವಿದ್ಯಾಭ್ಯಾಸ ಪ್ರಯೋಜನವಿಲ್ಲದ್ದು, ಕೇವಲ ಗುಮಾಸ್ತ ರನ್ನು ತಯಾರುಮಾಡಲು ನಡೆದದ್ದು ಎನ್ನುವ ಟೀಕೆಯನ್ನು ವಿ.ಸೀ. ಸಂಪೂರ್ಣ

ವಾಗಿ ನಿರಾಕರಿಸುತ್ತಾರೆ. ಕಾಲೇಜ್ ಪರಿಸರದಲ್ಲಿ ತಮಗೆ ದೊರೆತ ಸಂಸ್ಕಾರ ಎಷ್ಟು ಉನ್ನತಮಟ್ಟದ್ದು ಎನ್ನುವುದನ್ನು ವಿವರಿಸುತ್ತ ಹೇಳುತ್ತಾರೆ :

> ''ಒಳಗೆ ಮನೆಗಳಲ್ಲಿ, ಹೊರಗೆ ಸಂಸ್ಥೆಗಳಲ್ಲಿ ಎಷ್ಟು ಬಗೆಯ ಜೀವನ ಸ್ಪಂದಿಸುತ್ತದೆ, ವಿದ್ಯಾರ್ಥಿಯ ಮನಃಸಂಸ್ಕಾರಕ್ಕೆ ಬೆಳಕು ಹಾಯಿಸುತ್ತದೆ, ಪುಷ್ಟಿ ತರುತ್ತದೆ ಎಂಬುದು ಆ ಕಾಲದಲ್ಲಿ ತುಂಬ ದೊಡ್ಡ ಪ್ರಭಾವವಾಗುತ್ತದೆ. ಇದು ನಾಳೆಯ ಬಾಳಿನ ಅಡಿಗಲ್ಲು.
>
> ..... ವಿದ್ಯಾರ್ಥಿ ಜೀವನದ ಈ ಕಾಲದಲ್ಲಿ ಬದುಕಿನ ಈ ಲಕ್ಷಣ, ರುಚಿ, ವಿಲಾಸ, ರೂಪಗೊಳ್ಳದಿದ್ದರೆ ಇನ್ನೆಂದಾದೀತು? ಕಲಿಕೆ ಇನ್ನೆಲ್ಲಿ? ಕಾಲೇಜಲ್ಲಿ, ಊರಲ್ಲಿ, ಪ್ರವಾಸಗಳಲ್ಲಿ, ಸಂಪರ್ಕ ಸಂಸರ್ಗಗಳಲ್ಲಿ: ಚಿತ್ತ ಶುದ್ಧಿ, ಶೀಲ ಸಮುನ್ನತಿ, ತುಂಬುಜೀವನ ಸ್ವರೂಪ ನಿರ್ಣಯ ಆಗ ಆಗದಾದರೆ ಬೇರೆ ಎಂದೂ ಆಗವು. ಮುಂದಿನ ಎಲ್ಲಕ್ಕೂ ಬೀಜ, ಮೊಳಕೆ ಅಲ್ಲಿ. ನಮಗೆ ಇನ್ನೇನು ಪ್ರಯೋಜನವಾಯಿತೊ ಇಲ್ಲವೊ; ಒಂದು ಕುಟುಂಬದಲ್ಲಿ ಸುಖ, ಸಂತೋಷ ಭರಣೆ, ಕಷ್ಟಸಹನೆ, ಔದಾರ್ಯ, ನಯ, ಹಣ್ತ, ತಾಯಿಗುಣ, ಮನೆಯೊಡತಿ ಮಹಾಲಕ್ಷ್ಮಿಯಾಗುವುದೆಂದರೆ ಯಾವುದೆಂಬುದರ ಪರಿಚಯ ಆಯಿತು. ಬಹು ದೊಡ್ಡ ವಿದ್ವಾಂಸರ ಸನ್ನಿಧಿಯಲ್ಲಿ ಕಲಿತು ವಿದ್ಯಾಶ್ರದ್ಧೆ, ಸತ್ಯಾನ್ವೇಷಣೆ, ಆಳವಾದ ಗಂಭೀರವಾದ ವಿಚಾರ ಬೋಧನದಲ್ಲಿ ದೊರೆಯಿತು.''
>
> *(ಕಾಲೇಜ್ ದಿನಗಳು, ಪು.೨೫೦-೨೫೧)*

ವಿ.ಸೀ.ಯವರು ತಾವು ಓದಿದ ಕಾಲೇಜಿನ ಬಗ್ಗೆ, ತಮಗೆ ಪಾಠಹೇಳಿದ ಗುರುಗಳ ಬಗ್ಗೆ ತುಂಬ ಅಭಿಮಾನ ತಾಳಿದ್ದರು. 'ನಮ್ಮ ಕಾಲೇಜಷ್ಟು ಧೀಸಮೃದ್ಧಿ ಭಾರತದ ಇನ್ನೆಲ್ಲಿಯಾದರೂ ಇದ್ದಿತೊ ಇಲ್ಲವೊ ಎಂಬಷ್ಟು ಸಂಪನ್ನತೆ ಅದು' ಎಂದು ಮುಕ್ತಕಂಠದಿಂದ ಹೊಗಳುತ್ತಾರೆ.

> ''ಯಾವುದು ಹೆಚ್ಚು ಯಾವುದು ಕಡಮೆ ಎಂಬುದು ಸಾಮಾನ್ಯವಾಗಿ ಗೊತ್ತಾಗುವಷ್ಟು ಧೀಸ್ಪರ್ಧೆ ನಮ್ಮ ಕಾಲೇಜಿನ ಆವರಣದಲ್ಲಿ ಇದ್ದು ವಿದ್ಯಾರ್ಥಿಗಳಾದ ನಮಗೆ ಅಮೃತವೆರೆಯಿತು, ಸತ್ಯದ ಬಹುಮುಖ ಸ್ವರೂಪವನ್ನು ಕಾಣಿಸಿತು. ನಮ್ಮ ರಕ್ತ ಹೆಚ್ಚು ಚುರುಕಾಗಿ ಹರಿವಂತಾಯಿತು. ಕಣ್ಣಿಗೆ ಹೊಸಬೆಳಕು ಬಿದ್ದಿತು. ಬುದ್ಧಿಯ ಪ್ರಚೋದನೆ, ಆ ವಿವಿಧ ಪ್ರಬೋಧನೆಗಳಿಂದ ಮಹಾತಾಂಡವದಂತೆ ಸ್ಫೂರ್ತಿದಾಯಕವಾಯಿತು.''
>
> *(ಅದೇ ಪು.೭೦)*

ರಾಧಾಕೃಷ್ಣನ್, ವಾಡಿಯ, ಹಿರಿಯಣ್ಣ ಇವರುಗಳ ವಿದ್ಯೆ, ಬೋಧನ ಕ್ರಮ ವಿ.ಸೀ.ಯವರಿಗೆ ಸಂತೋಷ ಕೊಟ್ಟಿತು. ಅವರ ಎಲ್ಲ ಆಲೋಚನೆಯ ತಳಹದಿಯಾಯಿತು. ಅವರು ಹೇಳುತ್ತಾರೆ :

''ನನ್ನ ಬಾಳಿಗೆ ಏನು ಸಂಸ್ಕಾರ ಬಂದಿದೆಯೋ (ಅದನ್ನು width ಎಂದು ತಳ್ಳಿಹಾಕಿದರೂ) ಅದರಲ್ಲಿನ ವೈವಿಧ್ಯ ವರ್ಣರಂಜನೆ ಇಂದಿಗೂ ಎಂದಿಗೂ ನನ್ನ ಕೃತಜ್ಞತೆಗೆ ಕಾರಣವಾಗಿದೆ.''

ಅಧ್ಯಯನಕ್ಕೆ ಆರಿಸಿಕೊಂಡ ಶಾಸ್ತ್ರಗಳು

ವಿ.ಸೀ. ಅಧ್ಯಯನಕ್ಕೆ ಆರಿಸಿಕೊಂಡದ್ದು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ತತ್ತ್ವಶಾಸ್ತ್ರ. ಸಾಹಿತ್ಯದ ಕಡೆ ಅವರ ಮನಸ್ಸು ಅಷ್ಟಾಗಿ ಹರಿಯಲಿಲ್ಲ ವೆನ್ನುವುದನ್ನು ಇಲ್ಲಿ ಗಮನಿಸಬೇಕು. ಅವರ ಒಲವು ಏನಿದ್ದರೂ ಅರ್ಥಶಾಸ್ತ್ರದ ಕಡೆಗೇ. ಪ್ರಾಧ್ಯಾಪಕರಾದ ಎನ್.ಎಸ್.ಸುಬ್ಬರಾಯರ ಪ್ರೀತಿ ವಿಶ್ವಾಸಗಳನ್ನು ಅಷ್ಟು ಹೊತ್ತಿಗಾಗಲೆ ಗಳಿಸಿಕೊಂಡಿದ್ದರು. ಈಗ ಅವರ ಅಚ್ಚುಮೆಚ್ಚಿನ ಶಿಷ್ಯರಾದರು.

ತತ್ತ್ವಶಾಸ್ತ್ರ ಆಯ್ಕೆಮಾಡುವ ಮುನ್ನ ಪ್ರಿನ್ಸಿಪಲರಾದ ಸಿ.ಆರ್.ರೆಡ್ಡಿ ಯವರನ್ನು ಕಂಡು ಮಾತನಾಡುವಾಗ, ತತ್ತ್ವಶಾಸ್ತ್ರ ಕಷ್ಟ ಎನ್ನುತ್ತಾರೆ ಎಂದರಂತೆ. ಅದಕ್ಕೆ ರೆಡ್ಡಿಯವರು ಕೊಟ್ಟ ಉತ್ತರ ಎಲ್ಲ ಅಧ್ಯಾಪಕರಿಗೂ ಮಾದರಿಯಾಗಿ ನಿಲ್ಲತಕ್ಕಂಥಾದ್ದು. ಅವರೆಂದರಂತೆ: 'What are we here for? We will make it easy for you' (ನಾವೇಕಿರುವುದು? ಅದು ಸುಲಭವಾಗುವಂತೆ ನಾವು ನೋಡಿಕೊಳ್ಳುತ್ತೇವೆ.) ವಿದ್ಯಾರ್ಥಿಯಾದವನ ಮನಸ್ಸಿನಲ್ಲಿ ಧೈರ್ಯತುಂಬುವ ಎಂಥ ಸೊಗಸಿನ ಉತ್ತರವಿದು! ವಿ.ಸೀ. ಉತ್ಸಾಹದಿಂದ ತತ್ತ್ವಶಾಸ್ತ್ರವನ್ನು ಆರಿಸಿಕೊಂಡರು.

''ಈ ಐಚ್ಛಿಕ ವಿಷಯಗಳ ಓದು ನನ್ನ ಜೀವನಕ್ಕೆ ಒಂದು ದೊಡ್ಡ ಲೋಕವನ್ನೂ ಅನುಭವವನ್ನೂ ತೆರೆದುಕೊಟ್ಟಿತು; ಹೃದಯವನ್ನು ವಿಸ್ತಾರಗೊಳಿಸಿತು .... ನನ್ನ ಮನಸ್ಸಿನಲ್ಲಿನ ಮೂಲಭೂತ ಪ್ರವೃತ್ತಿಗಳ ಸಂಕೇತವಾಗಿ ಕೂಡ ಬೆಳೆಯಿತು.''

(ಅದೇ ಪು. ೨೮)

ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸುತ್ತಿದ್ದಾಗ ವಿ.ಸೀ. ಬೆಳಸಿ ಕೊಂಡ ಮುಖ್ಯವಾದ ಆಸಕ್ತಿಯೊಂದು ವಿಶ್ವವಿದ್ಯಾನಿಲಯದ ಗ್ರಂಥಭಂಡಾರಕ್ಕೆ ಭೇಟಿಕೊಟ್ಟು ಅಲ್ಲಿ ಬರುತ್ತಿದ್ದ ವಿದೇಶಿ ಪತ್ರಿಕೆಗಳು — ಮುಖ್ಯವಾಗಿ, ಎಕಾನಮಿಸ್ಟ್, ಟೈಮ್ಸ್, ಮ್ಯಾಂಚೆಸ್ಟರ್ ಗಾರ್ಡಿಯನ್, ನೇಷನ್, ಲಂಡನ್ ಮರ್ಕ್ಯುರಿ ಪತ್ರಿಕೆಗಳನ್ನು ತಪ್ಪದೆ ಓದುವುದು. ಯಾವ ಚಟವನ್ನು ಬಿಟ್ಟರೂ ಈ ಓದುವ ಚಟವೊಂದನ್ನು ಬಿಡದೆ, ಆ ಪತ್ರಿಕೆಗಳ ಅಧ್ಯಯನದಲ್ಲಿ ತೊಡಗಿ ತಮ್ಮ ದೃಷ್ಟಿಯನ್ನು ವಿಶಾಲಗೊಳಿಸಿಕೊಳ್ಳುತ್ತ ಬಂದರು. ಹೀಗೆ ಪ್ರಪಂಚದಲ್ಲಿ ನಡೆಯುತ್ತಿರುವ ಎಲ್ಲ ವಿದ್ಯಮಾನಗಳನ್ನೂ ಸಿಂಹಾವಲೋಕನ ರೀತಿಯಿಂದ ಪರಿಚಯಿಸಿಕೊಂಡರು.

ಧರ್ಮದ ಹುಡುಗ

ಮಹಾರಾಜ ಕಾಲೆಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಮೈಸೂರು ಸೇರಬೇಕಾಯಿತಷ್ಟೆ. ಆದರೆ ವಾಸಮಾಡುವುದು ಎಲ್ಲಿ ? ಅನ್ನ ಹಾಕುವವರು ಯಾರು? ಹಾಸ್ಟೆಲಿಗೆ ಹಣ ತೆರುವ ಚೈತನ್ಯವಿರಲಿಲ್ಲ. ತಮ್ಮ ಮನೆತನಕ್ಕೆ ಹಿಂದಿನಿಂದ ಪರಿಚಯವಿದ್ದ ಶ್ರೀಮಂತರೊಬ್ಬರ ಮನೆಯಲ್ಲಿ ಧರ್ಮದ ಹುಡುಗನಾಗಿ ಬಾಳು ಸಾಗಿಸಬೇಕಾಯಿತು. ವಿ.ಸೀ.ಯವರದು ಅತಿ ಸಂಕೋಚದ ಪ್ರಕೃತಿ. ಹೊಸತರಲ್ಲಿ ತಾವು ಸೇರಿದ ಮನೆಯಲ್ಲಿ ಇತರರಂತೆ ಸರಿಸಮಾನವಾಗಿ ಸ್ನಾನ ಮಾಡಬಹುದೋ ಇಲ್ಲವೊ ಎಂದು ಶಂಕೆಪಟ್ಟು ಕುಕ್ಕನಹಳ್ಳಿ ಕೆರೆಗೆ ಹೋಗಿ ಮಿಂದು ಬಂದರಂತೆ. ಇದನ್ನು ತಿಳಿದ ಮನೆಯ ಯಜಮಾನಿತಿ ಹಾಗೆ ಮಾಡ ಕೂಡದೆಂದು ಹೇಳಿ, ಧರ್ಮದ ಹುಡುಗನೆಂದು ಕಡೆಗಣಿಸದೆ ಬಹಳ ಅಕ್ಕರೆಯಿಂದ ನೋಡಿಕೊಂಡರಂತೆ. ಆ ಮನೆಯಲ್ಲಿ ತಮಗೆ ದೊರೆತ ಜೀವನಸಂಸ್ಕಾರ ಕಾಲೆಜ್ ವಿದ್ಯಾಭ್ಯಾಸಕ್ಕಿಂತ ಕಡಮೆಯದೇನೂ ಅಲ್ಲ ಎನ್ನುತ್ತಾರೆ ವಿ.ಸೀ.

ಮನೆಯ ಯಜಮಾನಿತಿಯ ವಿಷಯವಾಗಿ ತುಂಬ ಅಭಿಮಾನ ತಾಳಿದ್ದರು ವಿ.ಸೀ.

> ''ಮನೆಯ ಯಜಮಾನಿತಿ — ಅಮ್ಮನವರು; ಸಾಕ್ಷಾತ್ ಅನ್ನಪೂರ್ಣೆ-ಭೂದೇವಿ ಎರಡೂ. ತಾಳ್ಮೆಯಲ್ಲಿ ಸ್ಥೈರ್ಯದಲ್ಲಿ, ಕ್ಷಮೆಯಲ್ಲಿ ಭೂತಾಯಿ. ಸದಾ ಪ್ರಸನ್ನರು; ಸದಾ ಊಡುವ ಕೈ, ತೆತ್ತ ಕೈ, ಕೆಲಸ ಮಾಡುತ್ತ ಉಪಕಾರ ಮಾಡುತ್ತ ಇದ್ದ ಕೈ. ಆಕೆಗೆ ಕೋಪ ಬಂದಾಗಲೂ ಅಲ್ಲಿನ ಹೊಳಪು ಒನಪು ತುಂಬಾ ಹಾರ್ದವಾದ್ದು.''
>
> (ಆದೇ ಪು.೩೨)

ಪರೀಕ್ಷೆಯ ದಿನ ಒಂಬತ್ತು ಗಂಟೆಗೆಲ್ಲ ಕಾಲೆಜಿಗೆ ಹೋಗಬೇಕಾಗಿ ಬಂತಂತೆ. ಈ ವಿಷಯವನ್ನು ಮೊದಲೇ ಯಜಮಾನಿತಿಗೆ ತಿಳಿಸಿರಲಿಲ್ಲ. ವಿ.ಸೀ. ಹೊರಟು ನಿಂತಾಗ ಆಕೆ 'ಮೊದಲೇ ಹೇಳಬಾರದಾಗಿತ್ತೇನೊ' ಎಂದವರೆ 'ಎಲೆ ಹಾಕಿಕೊಂಡು ಕುಳಿತುಕೊ' ಎಂದು ಆಗತಾನೆ ಆಗಿದ್ದಷ್ಟು ಅನ್ನ ಬಡಿಸಿ, ಉಪ್ಪಿನ ಕಾಯಿ, ಗಟ್ಟಿ ತುಪ್ಪ ಹಾಕಿ, ಕೆನೆ ಮೊಸರು ಹಾಕಿ, ಊಟ ಮಾಡಿಸಿ, 'ಬೇಗ ಬಂದುಬಿಡು' ಎಂದು ಹೇಳಿ ಕಳುಹಿಸಿಕೊಟ್ಟರಂತೆ !

ಅನ್ನ ವಸತಿಗಳನ್ನು ನೀಡಿ ವಿಶ್ವಾಸದಿಂದ ನೋಡಿಕೊಂಡ ಅಮ್ಮನವರನ್ನು ಕುರಿತು ಕೃತಜ್ಞತೆ ಉಕ್ಕಿ ಬಂದು ವಿ.ಸೀ. ಹೇಳುತ್ತಾರೆ :

> ''ಮನೆಯಲ್ಲಿ ವ್ಯಾಸಂಗದ ಪರೀಕ್ಷೆಯ ಅಷ್ಟು ದಿನವೂ, ಒಂದು ಎಳೆಯ ಸಸಿಯನ್ನು ಬಾಡದ ಹಾಗೆ ನೋಡಿಕೊಳ್ಳುವಂತೆ ನನ್ನನ್ನು ಅಮ್ಮನವರು ನೋಡಿಕೊಂಡರು. ನನ್ನನ್ನೂ ನನ್ನ ಬದುಕನ್ನೂ ತೇರ್ಗಡೆಗೊಳಿಸಿರುವ ಮಹಾಂಶಗಳಲ್ಲಿ ಈ ಪ್ರೀತಿ ವಿಶ್ವಾಸಗಳು ಮುಖ್ಯವಾದವು. ಅವು

ಗಳಿಂದ ನನ್ನ ಬಾಳು ಸಂಸ್ಕಾರಗೊಂಡಿದೆ. ದೊಡ್ಡದೆಂದರೇನೆನ್ನುವುದನ್ನು ಕಂಡಿದೆ. ಬಾಳು ಚೊಕ್ಕವಾಗಲು ನೆರವಾಗಿದೆ. ನಿತ್ಯ ಕಾಪಾಡಿದೆ.''

(ಅದೇ, ಪು. ೨೪೦)

ಆ ಕಾಲದ ಶ್ರೀಮಂತ ಬ್ರಾಹ್ಮಣ ಮನೆತನದ ದಿನಚರಿಯ ಚಿತ್ರವನ್ನು ವಿ.ಸೀ. ನಮಗೆ ದೊರಕಿಸಿದ್ದಾರೆ :

''ಪ್ರತಿದಿನ ಬೆಳಗ್ಗೆ ಕಾಫಿ ತಿಂಡಿಯ ಸಮಾರಾಧನೆ. ಊಟಕ್ಕೆ ಹದಿನೈದು ಇಪ್ಪತ್ತಾದರೂ ಎಲೆ; ಊಟದ ಸಮಯದಲ್ಲಿ ಯಾರು ಬಂದರೂ ಊಟಕ್ಕೆಬ್ಬಿಸುವ ರೂಢಿ. ಆ ಹೊತ್ತಿಗೆ ಭಿಕ್ಷಾನ್ನದವರು ಬಂದರೆ ಅವರನ್ನು ಖಾಲಿ ಇರುತ್ತಿದ್ದ ಎಲೆಯಲ್ಲಿ ಊಟಮಾಡಿಕೊಂಡು ಹೋಗು ಎನ್ನುವ ಪದ್ಧತಿ. ಬೆಳಗ್ಗೆ ೧೦, ೧೦-೩೦ ಗಂಟೆಯವರೆಗೆ ಬಂದ ಎಲ್ಲ ಭಿಕ್ಷುಕರಿಗೂ, ಯಾರಿಗೂ ಇಲ್ಲವೆನ್ನದೆ ಹಾಕುತ್ತಿದ್ದ ಅಕ್ಕಿ ಸುಮಾರು ದಿನಾ ೩-೪ ಸೇರು. ಕಾಮನ ಹಬ್ಬ, ಯುಗಾದಿ, ಶ್ರಾವಣಿ, ವಿನಾಯಕ ಚತುರ್ಥಿ, ಅನಂತವ್ರತ, ನವರಾತ್ರಿ, ದೀಪಾವಳಿ, ಸಂಕ್ರಾಂತಿ ಮುಂತಾದ ಹಬ್ಬ ದಿನಗಳಲ್ಲಿ ಸಂಜೆ ಹೊರಪಡಸಾಲೆಯಲ್ಲಿ ಕುಳಿತು ಮಾತನಾಡುತ್ತಿದ್ದ ಯಜಮಾನರು ಭಿಕ್ಷಾನ್ನಕ್ಕೆ ಬಂದ ಹುಡುಗರೆಲ್ಲರಿಗೂ 'ಬೇರೆ ಎಲ್ಲಿಯೂ ಅನುಕೂಲವಿಲ್ಲದಿದ್ದರೆ ನಾಳೆ ಇಲ್ಲಿಗೇ ಸ್ನಾನಕ್ಕೆ ಊಟಕ್ಕೆ ಬಂದುಬಿಡು' ಎಂದು ಹೇಳಿಕಳಿಸುತ್ತಿದ್ದ ಮಾತು. ಇದು ದಿನಚರಿ ....

..... ಆಯಾ ಕಾಲಕ್ಕೆ ತಕ್ಕಂತೆ ಕಿತ್ತಿಳೆಹಣ್ಣು, ಮಾವಿನ ಹಣ್ಣುಗಳ ರಾಶಿ ಒಳಮನೆಯಲ್ಲಿ ಯಾವಾಗಲೂ ಇರುತ್ತಿತ್ತು. ಆಯಾ ಕಾಲದಲ್ಲಿ ದಿನಾ ಐವತ್ತಕ್ಕೆ ಕಡಮೆ ಇಲ್ಲದೆ ಕಿತ್ತಿಳೆ ಇರಲೇಬೇಕು. ಹುಣಸೂರಿನ ಕಾಡು ಬಾಳೆಹಣ್ಣು ಒಂದು ಮಕ್ಕರಿಯಲ್ಲಿ. ಕಡೆಯಪಕ್ಷ ಒಂದಾದರೂ ನಂಜನ ಗೂಡಿನ ಅಥವಾ ಮಂಡ್ಯದ ರಸಬಾಳೆಯ, ಹದವಾಗಿ ಹಣ್ಣಾಗುತ್ತಿರುವ ಒಂದು ಗೊನೆ ಮೂಲೆಯಲ್ಲಿ ತೂಗಿರುತ್ತಿತ್ತು. ಒಂದು ಹಣ್ಣಾಗಲು ಎರಡು ದಿನ ಕಾಯಬೇಕಾದದ್ದು. ಇನ್ನೊಂದು ಹಣ್ಣು, ಸಿಪ್ಪೆಬಿರಿದು ತೊಟ್ಟು ಕಳಚಿ ಕೆಳಗೆ ಬೀಳುತ್ತಿರುವುದು.''

(ಅದೇ, ಪು. ೫೨-೫೪)

ಇಂಥ ಶ್ರೀಮಂತಿಕೆ ಈಗ ಎಲ್ಲಾದರೂ ಉಳಿದಿದೆಯೆ ಎಂದು ನಾವು ಆಶ್ಚರ್ಯಪಡುವಂತಾಗುತ್ತದೆ.

ಪಾಠ ಹೇಳಿದ ಗುರುವರ್ಯರ ವ್ಯಕ್ತಿಚಿತ್ರಗಳು

ಐದು ವರ್ಷ ಕಾಲೇಜಿನಲ್ಲಿ ಕಳೆದ ಕಾಲಾವಧಿಯಲ್ಲಿ ಹಲವಾರು ವ್ಯಕ್ತಿಗಳು ವಿ.ಸೀ. ಯವರ ಮೇಲೆ ವಿಶೇಷ ಪ್ರಭಾವ ಬೀರಿದರು. ಅವರೆಲ್ಲರ ಸುಂದರ ವ್ಯಕ್ತಿ ಚಿತ್ರಗಳು ದೊರೆಯುತ್ತವೆ. ಕೆಲವನ್ನಾದರೂ ಇಲ್ಲಿ ಉದ್ಧರಿಸಬೇಕೆನ್ನಿಸುತ್ತದೆ.

ಸಿ.ಆರ್. ರೆಡ್ಡಿಯವರು

ಪ್ರಾಂಶುಪಾಲ ರೆಡ್ಡಿಯವರು ಮೇಧಾವಿ ವಿದ್ವಾಂಸರು. ಇಂಥವರು ಮೊದಲ ವರ್ಷವೇ ಪ್ರಾಧ್ಯಾಪಕರಾಗಿ ದೊರೆತಿದ್ದು ವಿ.ಸೀ.ಯವರ ಭಾಗ್ಯ. ಅವರು ಕೇಂಬ್ರಿಡ್ಜ್ ಪದವೀಧರರು. ಅಲ್ಲಿ ಅವರ ಜೊತೆಗಿದ್ದವರು ಬರ್ಟ್ರಂಡ್ ರಸ್ಸೆಲ್, ಜಿ.ಇ.ಮೂರ್ ಮುಂತಾದವರು. ಅವರೊಡನೆ ಒಡನಾಟ ರೆಡ್ಡಿಯವರಿಗೆ ದೊಡ್ಡ ಸಂಸ್ಕಾರ ಒದಗಿಸಿತ್ತು. ಅವರು ಮುಂದಿನ ದಿವಸಗಳಲ್ಲಿ ಬೆಳೆಸಿಕೊಂಡ ವಾಗ್ಮಿತೆಗೆ ಅಡಿಪಾಯ ಬಿದ್ದದ್ದು ಆಗ. ರೆಡ್ಡಿಯವರ ಮಾತುಗಾರಿಕೆಯ ಮೋಡಿಯನ್ನು ವರ್ಣಿಸುತ್ತ ವಿ.ಸೀ. ಹೇಳುತ್ತಾರೆ :

> ''ಅವರ ಬುದ್ಧಿಲಕ್ಷಣದಲ್ಲಿಯೇ ಸ್ವಭಾವಜನ್ಯವಾದ ಪ್ರತಿಯೋಧಿತೆಯೊಂದು ಇತ್ತು. ಅವರ ಮಾತುಕತೆಗಳಲ್ಲಿ ಈ ಸಂಗತಿ ಆಗಾಗ್ಗೆ ಬರುತ್ತಿತ್ತು. ಯಾವುದನ್ನು ತೆಗೆದುಕೊಂಡರೂ ಸುಲಭವಾಗಿ, ಖಚಿತವಾಗಿ, ಚುಚ್ಚಿದಂತೆ, ಕತ್ತರಿಸಿದಂತೆ ಮಾತನಾಡುವುದು ಅವರ ರೀತಿ. ಯಾವುದೂ ಕಟುವಾದ ವಿಮರ್ಶೆಗೂ ಹಾಸ್ಯಕ್ಕೂ ಈಡಾಗುತ್ತಿತ್ತು. ಅವರ ಹಾಸ್ಯ, ಪರಿಹಾಸ್ಯ, ವ್ಯಂಗ್ಯ ನಾನು ಇನ್ನೊಬ್ಬರಲ್ಲಿ ಕಂಡಿಲ್ಲ.''
>
> *(ಅದೇ, ಪು. ೩೮)*

ರೆಡ್ಡಿಯವರ ವಿಷಯ ಪ್ರಸ್ತಾಪಿಸುತ್ತ ಒಂದು ಸ್ವಾರಸ್ಯಕರವಾದ ಪ್ರಸಂಗವನ್ನು ವಿ.ಸೀ. ಜ್ಞಾಪಿಸಿಕೊಳ್ಳುತ್ತಾರೆ. ಕಾಲೇಜಿನ ವಿದ್ಯಾಭ್ಯಾಸದ ಕಾಲದಲ್ಲಿ ಒಮ್ಮೆ ಕಾಂಗ್ರೆಸ್ ಪಕ್ಷದ ನಾಯಕ ಸತ್ಯಮೂರ್ತಿಯವರ ಭಾಷಣ ಏರ್ಪಟ್ಟಿತ್ತಂತೆ. ಅಂದು ಸಿ.ಆರ್. ರೆಡ್ಡಿಯವರೇ ಅಧ್ಯಕ್ಷರು. ಸತ್ಯಮೂರ್ತಿಯವರು ಹೆಸರಾಂತ ವಾಗ್ಮಿ. ಬ್ರಿಟಿಷರ ವಿರುದ್ಧ ಮಾತನಾಡಿ ಭಾರತೀಯ ಸಂಸ್ಕೃತಿಯನ್ನು ಪ್ರಶಂಸಿಸಿದರಂತೆ. ರೆಡ್ಡಿಯವರು ಇದನ್ನು ಸಹಿಸದೆ ಅಧ್ಯಕ್ಷರಾಗಿ ಮಾತನಾಡುವ ಸರದಿ ಬಂದಾಗ ಹೇಳಿದರಂತೆ :

> ''ಹೌದು, ನಮ್ಮ ಪುರಾತನರು ಪರಮ ಪ್ರಾಜ್ಞರು; ಸರ್ವಶಕ್ತರು; ಅನುಪಮಸತ್ವರು, ಇಂದು ನಾಗರಿಕರೆಂದು ಮೆರೆಯುತ್ತಿರುವ ಅನೇಕ ರಾಷ್ಟ್ರಗಳ ಪುರಾತನರು ರೂಕ್ಷರಾಗಿ ಕಾಡುಮನುಷ್ಯರಂತೆ ಅಲೆಯುತ್ತಿದ್ದಾಗ ಭರತಖಂಡದ ಸಂಸ್ಕೃತಿ ಅತ್ಯುನ್ನತಿಯ ಶಿಖರಕ್ಕೆ ಏರಿತ್ತು. ನಮ್ಮವರಿಗಿಂತ ವಿದ್ವಾಂಸರು ಇರಲಿಲ್ಲ; ಸಂಪೂರ್ಣರಿರಲಿಲ್ಲ; ನಿಜ. ಅವರು ಒಂದು ತಪ್ಪು ಮಾಡಿದರು. ಅದನ್ನು ನಡಸಿಕೊಂಡು ಬೆಳಸಿಕೊಂಡು ಹೋಗಬಲ್ಲ ಯೋಗ್ಯ ಸಂತಾನವನ್ನು - ಎಂದರೆ ಪೀಳಿಗೆಯನ್ನು ಕುರಿತು ಮಾತ್ರ ಯೋಚಿಸಲಿಲ್ಲ, ಸಾಧಿಸಲಿಲ್ಲ. Failed to create a proper progeny!''
>
> *(ಅದೇ, ಪು.೪೬)*

ಹೀಗೆಂದು ಹೇಳಿ ಭಾಷಣಕಾರರಾದ ಸತ್ಯಮೂರ್ತಿಯವರ ಮುಖದ ನೀರಿಳಿಸಿಬಿಟ್ಟರಂತೆ. ಮರ್ಮಘಾತಕವಾದ ಈ ವ್ಯಂಗ್ಯದಿಂದ ಯಾರೇ ಆಗಲಿ ತತ್ತರಿಸಿ ಹೋಗಬೇಕು. ಇದು ರೆಡ್ಡಿಯವರ ಮಾತುಗಾರಿಕೆಯ ಒಂದು ನಿದರ್ಶನ.

ರೆಡ್ಡಿಯವರು ಹೇಳುತ್ತಿದ್ದ ಇನ್ನೊಂದು ವಾಕ್ಯವನ್ನು ವಿ.ಸೀ. ಸ್ಮರಿಸಿಕೊಳ್ಳುತ್ತಾರೆ. ಯಾವುದೊ ಒಂದು ಸಂದರ್ಭದಲ್ಲಿ ಅವರು ಹೇಳಿದರಂತೆ – He is a donkey who reads a book from cover to cover. ಬುದ್ಧಿವಂತನಾದ ಓದುಗ ಕೈಗೆ ಸಿಕ್ಕ ಯಾವುದೇ ಪುಸ್ತಕವನ್ನು ಮೊದಲಿಂದ ಕೊನೆಯ ಪುಟದ ವರೆಗೂ ಓದಬೇಕಾಗಿಲ್ಲ. ಚಾಣಾಕ್ಷನಾದವನು ಪುಸ್ತಕದ ಯಾವ ಭಾಗದಲ್ಲಿ ಸ್ವಾರಸ್ಯವಿದೆಯೆಂದು ಗ್ರಹಿಸಿ ಆ ಭಾಗ ಮಾತ್ರ ಓದಿಯಾನು. ಹೊಸದಾಗಿ ಏನಾದರೂ ಹೇಳಿದ್ದಾನೆಯೇ ಎಂದು ಗ್ರಹಿಸಿಕೊಂಡಾನು. ವಿಷಯಸೂಚಿಯ ಕಡೆ ಕಣ್ಣುಹಾಯಿಸಿ ತನಗೆ ಬೇಕಾದ ಪ್ರಕರಣಗಳನ್ನು ನೋಡುವುದು ಸರಿಯಾದ ಪದ್ಧತಿ. ವಿದ್ಯಾರ್ಥಿಯಾದವನು ಈ ಓದುವ ಕಲೆಗಾರಿಕೆಯನ್ನು ಕಲಿಯಬೇಕಾದದ್ದು ಕರ್ತವ್ಯ.

ಎನ್. ಎಸ್. ಸುಬ್ಬರಾಯರು

ವಿ.ಸೀ. ಮೆಚ್ಚಿಕೊಂಡ ವಿದ್ಯಾಗುರುಗಳಲ್ಲಿ ಮೊದಲ ಸ್ಥಾನ ಪಡೆದವರು ಎನ್.ಎಸ್. ಸುಬ್ಬರಾಯರು. ಅವರೂ ಕೇಂಬ್ರಿಡ್ಜ್ ಪದವೀಧರರು, ಟ್ರೈಪಾಸ್ ಮಾಡಿಕೊಂಡು ಬಂದಿದ್ದವರು. ಅವರ ಆಕೃತಿ, ಮುಖಸೌಂದರ್ಯ, ಉಡುಪು ಯಾರನ್ನೆ ಆಗಲಿ ಆಕರ್ಷಿಸುವಂಥದು. ಸುಬ್ಬರಾಯರ ನಗುಮುಖ, ಮಾತಿನ ಉಲ್ಲಾಸ ವಿ.ಸೀ.ಯವರ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ನಿಂತಿತು. ಅವರ ನೆನಪಿನ ಶಕ್ತಿ ಅಸಾಧಾರಣವಂತೆ. ಒಂದು ಸಲ ಓದಿದರೆ ಸಾಕು, ಓದಿದ್ದೆಲ್ಲವೂ ಅವರ ನೆನಪಿನಲ್ಲಿ ಇರುತ್ತಿತ್ತಂತೆ. ಓದು ಮಾತ್ರವಲ್ಲ, ಕಂಡವರ ಗುರುತೂ ಹಾಗೇ ಅಂತೆ. ಈ ಅಸಾಧಾರಣ ಸ್ಮರಣಶಕ್ತಿಯೂ ಒಂದು ದೋಷವಾಗಿ ಪರಿಣಮಿಸಿತು ಎನ್ನುತ್ತಾರೆ ವಿ.ಸೀ. ತಮ್ಮ ಗುರುಗಳ ವಿದ್ವತ್ತು, ಔದಾರ್ಯ, ಮಾನವತೆಯನ್ನು ಎಷ್ಟು ಕೊಂಡಾಡಿದರೂ ತೃಪ್ತಿಯೇ ಇಲ್ಲ ವಿ.ಸೀ.ಯವರಿಗೆ. ಸುಬ್ಬರಾಯರ ಹಿರಿಮೆಯನ್ನು ಕೆಲವೇ ಮಾತುಗಳಲ್ಲಿ ಸೂಚಿಸಿದ್ದಾರೆ :

> ''ಆ ಮನಸ್ಸು, ಆ ಸಾಕಲ್ಯ ದೃಷ್ಟಿ, ಆ ಅಡಕ, ಆ ವಿದ್ವತ್ತು ಎಷ್ಟು ಕೆಲಸ ಮಾಡಿ ಎಷ್ಟು ಬರವಣಿಗೆಯನ್ನು ದೇಶಕ್ಕೆ ಕೊಡಬಹುದಿತ್ತು ಅಷ್ಟನ್ನು ಕೊಡಲಿಲ್ಲ. ಅದಕ್ಕೆ ಕಾರಣ ಅವರಿಗೆ ತಿಳಿವಳಿಕೆ ಸಾಲದೆಂದಲ್ಲ. ನಮ್ಮ ನಾಡಲ್ಲಿ ಬರೆದು ಪ್ರಖ್ಯಾತರಾದವರು ಅವರಿಗಿಂತ ವಿದ್ವಾಂಸರು ಎಂಬುದೂ ಅಲ್ಲ. ತಾವು ಹೇಳಬಹುದಾದ್ದನ್ನು ಒಬ್ಬ ಮಾರ್ಷಲ್, ಒಬ್ಬ ಕೇನ್ಸ್, ಒಬ್ಬ ಪಿಗೋ, ಒಬ್ಬ ರಸ್ಸೆಲ್ ಇನ್ನೆಷ್ಟೊ ಚೆನ್ನಾಗಿ ಹೇಳಿದ್ದಾರೆ ಎಂಬ

ನೆನಪು ಬರುತ್ತದೆ. ಅದನ್ನು ನನ್ನ ಸಪ್ಪೆ ಮಾತಿನಲ್ಲಿ ಇನ್ನೇನು ಹೇಳುವುದು ಎನ್ನುತ್ತಿದ್ದರು.''

(ವಿ.ಸೀ., 'ಮಹನೀಯರು', ೧೯೭೦, ಪು.೧೯)

ಇಂಥ ವಿದ್ವಾಂಸರನ್ನು ಇಂದಿನ ದಿವಸಗಳಲ್ಲಿ ಕಂಡೇವೆ ಎನ್ನಿಸುತ್ತದೆ. ವಿ.ಸೀ. ಇಂಥವರನ್ನು ಗುರುವಾಗಿ ಪಡೆದು ಅವರ ಪ್ರೀತಿ ವಿಶ್ವಾಸಗಳನ್ನು ಗಳಿಸಿ ಧನ್ಯರಾದರು.

ಪರೀಕ್ಷೆಯಾದ ಒಂದು ದಿನ ಪಾಠ ಮುಗಿಸಿಕೊಂಡು ಬರುತ್ತಿದ್ದಾಗ ಗುರುಗಳು ಎದುರಿಗೆ ಸಿಕ್ಕರಂತೆ. 'ಹೇಗೆ ಬರೆದಿದ್ದೀಯ ? ' ಎಂದರಂತೆ, ಅದಕ್ಕೆ ವಿ.ಸೀ. 'ಪಾಸಾಗುತ್ತೇನೆಯೊ ಇಲ್ಲವೊ' ಎಂದರಂತೆ. 'Silly. I am not bothered about your pass, but of your class' (ಬುದ್ಧಿಯಿಲ್ಲದವನು ನೀನು. ಪಾಸಾಗುತ್ತೀಯೋ ಇಲ್ಲವೊ ಎಂದಲ್ಲ ನಾನು ಕೇಳಿದ್ದು. ಕ್ಲಾಸು ಗಿಟ್ಟಿಸುತ್ತೀಯೊ ಇಲ್ಲವೊ ?). ಇಷ್ಟೊಂದು ಅಭಿಮಾನವಿತ್ತು ಸುಬ್ಬರಾಯರಿಗೆ ಶಿಷ್ಯನ ಮೇಲೆ.

ರಾಧಾಕೃಷ್ಣನ್ ಅವರ ಗುರುಧರ್ಮ ರಹಸ್ಯ

ವಿ.ಸೀ. ಮಹಾರಾಜ ಕಾಲೆಜಿನಲ್ಲಿ ಓದುತ್ತಿದ್ದ ಕಾಲದಲ್ಲಿ ಎರಡನೆಯ ವರ್ಷ ರಾಧಾಕೃಷ್ಣನ್ ಅವರು ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ನೇಮಕಗೊಂಡು ಮೈಸೂರಿಗೆ ಬಂದರಂತೆ. ವಿ.ಸೀ. ತತ್ತ್ವಶಾಸ್ತ್ರದ ವಿದ್ಯಾರ್ಥಿಯಾದುದರಿಂದ ಗುರುವಿನೊಡನೆ ಸಲಿಗೆ ಬೆಳೆಯಿತು. ಈ ಗುರುವನ್ನು ತುಂಬ ಮೆಚ್ಚಿಕೊಂಡರು ವಿ.ಸೀ. ಅವರ ಗುರುಧರ್ಮದ ರಹಸ್ಯವನ್ನು ವಿವರಿಸುತ್ತ ಹೇಳಿರುವ ಮಾತುಗಳು ಮನನಯೋಗ್ಯವಾದುವು :

''ವಿದ್ಯಾರ್ಥಿಗಳ ಸಂಬಂಧದಲ್ಲಿ ಅವರ ಮುಖ ಎಂದೂ ಮಸುಕಾದುದಿಲ್ಲ, ಮಾತು ಕಠಿಣವಾದುದಿಲ್ಲ, ನಗೆ ಆರಿದುದಿಲ್ಲ. ಹಾಗೆ ನಡಸಿಕೊಂಡುದರಿಂದ, ಕಾಲೆಜಿನಲ್ಲಿ, ಊರಲ್ಲಿ, ನಾಡಲ್ಲಿ ಅವರ ಕೀರ್ತಿ ಹಬ್ಬಿತು. ನಮ್ಮಂಥವರ ಬದುಕಿನಲ್ಲಿ ಯಾವುದೋ ಹೊಸ ಸ್ನಿಗ್ಧತೆ, ಸುಖೋಷ್ಣತೆ ಅವರ ಸಂಪರ್ಕದಿಂದ ಪ್ರವಹಿಸಿ ಬರುವಂತೆ ಆಯಿತು. ಗುರುವಿನಲ್ಲಿ ವಿದ್ಯೆ, ಬೋಧನ ಚಾತುರ್ಯ ಇದ್ದರೆ ಸಾಲದು. ಮಾನವತೆ, ಔದಾರ್ಯ, ವಾತ್ಸಲ್ಯಗಳು ಇನ್ನೂ ಹೆಚ್ಚು ಫಲಕಾರಿಯಾಗುತ್ತವೆ.''

(ವಿ.ಸೀ., 'ಕಾಲೆಜ್ ದಿನಗಳು', ಪು. ೬೮)

ಮುಂದೆ ಎಂ.ಎ. ತರಗತಿಗೆ ವಿ.ಸೀ. ಸೇರಿಕೊಂಡಾಗ ತತ್ತ್ವಶಾಸ್ತ್ರವನ್ನು ಆರಿಸಿಕೊಳ್ಳುವಂತೆ ಮಾಡಲು ರಾಧಾಕೃಷ್ಣನ್ ಅವರೂ, ಎಂ.ಹಿರಿಯಣ್ಣನವರೂ ಪ್ರಯತ್ನಪಟ್ಟರು. ಆದರೆ ಆ ಶಾಸ್ತ್ರಭಾಗದಲ್ಲಿ ಸ್ಕಾಲರ್‌ಷಿಪ್ ದೊರೆಯುವ ಅವಕಾಶವಿಲ್ಲದುದರಿಂದಲೂ, ತಮ್ಮ ಒಲವು ಅರ್ಥಶಾಸ್ತ್ರದ ಕಡೆ

ಗಿದ್ದುದರಿಂದಲೂ, ವಿ.ಸೀ. ಅರ್ಥಶಾಸ್ತ್ರವನ್ನು ಆರಿಸಿಕೊಂಡರು. ಇದನ್ನು ಕೇಳಿದ ಪ್ರಾಧ್ಯಾಪಕ ರಾಧಾಕೃಷ್ಣನ್ — "Look at this fellow. He has deserted us for economics. He has prostituted his intellect" (ಇವನನ್ನು ನೋಡಿ. ನಮ್ಮನ್ನು ದೂರ ಮಾಡಿ ಅರ್ಥಶಾಸ್ತ್ರಕ್ಕೆ ಒಲಿದಿದ್ದಾನೆ. ತನ್ನ ಬುದ್ಧಿಶಕ್ತಿಯನ್ನು ಬೆಲೆಗೆ ಮಾರಿಕೊಂಡಿದ್ದಾನೆ) ಎಂದರಂತೆ. ತಮ್ಮ ಬಗೆಗೆ ಗುರುಗಳಲ್ಲಿ ಎಂಥ ಸದಭಿಪ್ರಾಯವನ್ನು ವಿ.ಸೀ. ಮೂಡಿಸಿದ್ದರೆನ್ನುವುದನ್ನು ಈ ಪ್ರಸಂಗ ತಿಳಿಸುತ್ತದೆ.

ವಿ.ಸೀ. ಕಾಲೇಜು ವಿದ್ಯಾಭ್ಯಾಸದ ಕಡೆಯ ವರ್ಷ ರಾಧಾಕೃಷ್ಣನ್ ಮಹಾರಾಜ ಕಾಲೇಜು ಬಿಟ್ಟು ಕಲಕತ್ತೆಗೆ ಹೊರಟರು. ಅವರನ್ನು ಬೀಳುಕೊಡುವ ಸಲುವಾಗಿ ವಿದ್ಯಾರ್ಥಿಗಳು ಸರ್ವಾಲಂಕೃತವಾದ ಫೀಟನ್ ಗಾಡಿಯನ್ನು ಸಜ್ಜುಗೊಳಿಸಿ, ತೇರನ್ನು ಎಳೆದುಕೊಂಡು ಬರುವಂತೆ ಸ್ಟೇಷನ್ನಿನವರೆಗೂ ತಮ್ಮ ಪ್ರಾಧ್ಯಾಪಕರನ್ನು ಕರೆದು ತಂದರಂತೆ. ಆ ಭವ್ಯ ದೃಶ್ಯವನ್ನು ನೆನಸಿಕೊಳ್ಳುತ್ತಾ ವಿ.ಸೀ. ಹೇಳುತ್ತಾರೆ :

> ''ಇಷ್ಟು ಜನರ ಪ್ರೀತಿ, ಸೌಹಾರ್ದ, ಭಕ್ತಿಗಳನ್ನು ಒಬ್ಬ ಪ್ರಾಚಾರ್ಯ ಗಳಿಸಿಕೊಳ್ಳುವುದು ಶಕ್ಯವಾದರೆ ಅದಕ್ಕಿಂತ ದೊಡ್ಡ ಸಾಧನೆ ಅವನ ಜೀವಿತದಲ್ಲಿಯಾಗಲಿ ಅವನ ಬೋಧಕತನಕ್ಕಾಗಲಿ ಇನ್ನಾವುದುಂಟು? ಇದು ಭಾಗ್ಯ, ಇದು ಭಾಗ್ಯ, ಇದು ಭಾಗ್ಯವಯ್ಯ ಎನ್ನಿಸಿತು.''
>
> *(ವಿ.ಸೀ., 'ಕಾಲೇಜ್ ದಿನಗಳು', ಪು. ೨೨೮)*

ಈ ಬಗೆಯ ಪ್ರೀತಿ ವಿಶ್ವಾಸಗಳನ್ನು ಗಳಿಸುವುದರಲ್ಲಿ ವಿ.ಸೀ.ಯವರು ಹಿಂದೆ ಬೀಳಲಿಲ್ಲ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕು.

ರಾಳ್ಲಪಲ್ಲಿ ಅನಂತಕೃಷ್ಣಶರ್ಮರು

ಕೆಲವೇ ಮಾತುಗಳಲ್ಲಿ ವ್ಯಕ್ತಿಯೊಬ್ಬರ ಚಿತ್ರ ನಮ್ಮ ಕಣ್ಣಮುಂದೆ ನಿಲ್ಲುವಂತೆ ಮಾಡಬಲ್ಲವರು ವಿ.ಸೀ. ಇದಕ್ಕೆ ಉತ್ತಮ ನಿದರ್ಶನ ರಾಳ್ಲಪಲ್ಲಿ ಅನಂತಕೃಷ್ಣಶರ್ಮರ ಚಿತ್ರಣ. ಶರ್ಮರು ಕಾಲೇಜಿನಲ್ಲಿ ತೆಲುಗು ಬೋಧಿಸುವ ಪಂಡಿತರು. ಅವರು ಆ ಕೆಲಸಕ್ಕೆ ನೇಮಕಗೊಂಡ ಸಂದರ್ಭವೂ ಸ್ವಾರಸ್ಯಕರವಾದದ್ದು. ಕಾಲೇಜು ಪ್ರಾಂಶುಪಾಲರಾದ ಸಿ.ಆರ್. ರೆಡ್ಡಿಯವರಿಂದ ತೆಲುಗು ಅಧ್ಯಾಪಕರನ್ನಾಗಿ ಮಾಡಿದ ಕರೆ ಬಂದಿತಂತೆ. ಶರ್ಮರು 'ನನಗೆ ಪದವಿಯೂ ಇಲ್ಲ, ನಾನು ಯಾವ ಡಿಗ್ರಿಯನ್ನೂ ಪಡೆದವನಲ್ಲ' ಎಂದು ಕೆಲಸ ಸೇರುವುದಕ್ಕೆ ಹಿಂಜರಿದಾಗ ರೆಡ್ಡಿಯವರು 'ನೇನು ಡಿಗ್ರಿ ಇಚ್ಚೆನಾನು, ರಾಂಡಿ, ಮಾ ಪಿಲ್ಲವಾಂಡ್ಲುಕು ಮೀರು ಭಾರತಮು ಊರಕೆ ಚದುವಂಡಿ, ಚಾಲು' (ನಾನು ಡಿಗ್ರಿ ಕೊಟ್ಟಿದ್ದೇನೆ, ಬನ್ನಿ. ನಮ್ಮ ಹುಡುಗರಿಗೆ ನೀವು ಭಾರತವನ್ನು ಒಂದಿಷ್ಟು ಓದಿ

ಹೇಳಿ, ಸಾಕು) ಎಂದರಂತೆ. ವಿದ್ಯೆಗೆ ವಿಶೇಷವಾದ ಮನ್ನಣೆಯಿದ್ದ ಕಾಲ. ಯೋಗ್ಯತೆ ಇದ್ದ ಕಡೆ ಗುರುತಿಸುವ, ಅಂಥವರನ್ನು ಆಯ್ದು ನೇಮಕ ಮಾಡುವ ಸ್ವಾತಂತ್ರ್ಯ ಅಂದಿನ ಪ್ರಾಂಶುಪಾಲರಿಗೆ ಇತ್ತು. ಅದನ್ನು ಪ್ರಶ್ನಿಸುವ ಧೈರ್ಯ ಯಾರಿಗೂ ಇರಲಿಲ್ಲ.

ರಾಳ್ಳಪಲ್ಲಿಯವರನ್ನು ನಾನು ಕಂಡಿದ್ದೆ. ಅವರದು ಮಂಗಳವಾದ ಆಕೃತಿ. ಒಮ್ಮೆ ನೋಡಿದರೆ ಸಾಕು, ಗೌರವ ಹುಟ್ಟುವಂಥ ತೇಜೋಮಯ ರೂಪ. ವಿ.ಸೀ.ಯವರ ವರ್ಣನೆ ಆ ರೂಪ ಎದುರಿಗೆ ಬಂದು ನಿಂತಷ್ಟು ಸಹಜವಾಗಿದೆ.

> ''ಪಂಡಿತರ ಆಕೃತಿ ಕಣ್ಣಿಗೆ ಹೊಡೆಯುವಂಥದು. ವಸ್ತ್ರ ಧರಿಸಿರಲಿ, ಮೇಲೆ ಒಡಲು ಬರಿದಾಗಿರಲಿ, ಕೋಟು ರುಮಾಲು ಹಾಕಿರಲಿ,-ಎರಡೂ ರೇಷ್ಮೆಯವು - ಮನಸ್ಸನ್ನು ಅಪಹರಿಸುವಂಥವು. ಅಂದೊ ಹಿಂದಿನ ದಿನವೊ ನುಣ್ಣಗೆ ಕ್ಷೌರ ಮಾಡಿಸಿಕೊಂಡಿದ್ದ ತಲೆಯ ಮಾಟವೇ ಮಾಟ. ಆ ಮುಖಕಾಂತಿಯೊ ! ಆಗ ತಾನೇ ಸುಮಾರು ಬೆಳಗಿನ ಪೂಜಾದಿಗಳನ್ನು ನೆರವೇರಿಸಿ ನಾಮ ಹಾಕಿಕೊಂಡಿದ್ದ ಮುಖ. ನಾಮ ನಡುವೆಯದು ಹಳದಿಯದೊ ಏನೊ; ಹುಬ್ಬು ಬಾಯಿಗಳಿಗೆ ನಡುವೆ ನಿಂತ ಸೇತುವೆಯಂತೆ ಮುಖದ ಆಕೃತಿಯನ್ನು ಎತ್ತಿ ಹಿಡಿದು ತೂಗಿ ನಿಲ್ಲಿಸುವಂತೆ ನಾಸಿಕ; ಕಾಂತಿಗೂಡಿದ ಕಣ್ಣು; ಒಟ್ಟು ಮುಖದ ಆ ಗಂಡು ಚೆಲುವು ನನಗೆ ಅತಿಶಯವಾಗಿ ಕಾಣಿಸಿತು.''
>
> *(ಅದೇ, ಪು.೫೯)*

ಇಂಥ ಮಹನೀಯ ವ್ಯಕ್ತಿಗಳನ್ನು ಪ್ರೋತ್ಸಾಹಿಸುವ ಅಗತ್ಯ ಕುರಿತು ವಿ.ಸೀ. ಹೇಳುವುದನ್ನು ಗಮನಿಸಬೇಕು :

> ''ಇಂಥವರ ಹತ್ತಿರ ಮಾತನಾಡುವುದು ಎಂದರೆ ಅದೇ ಒಂದು education — ಬೇರೆ ಪ್ರಪಂಚದಲ್ಲಿ ಇದ್ದಂತೆ ಎನಿಸುತ್ತದೆ. It is a glory. ಇಂಥವರಿಗೆ ತಿಂಗಳಿಗೆ ಒಂದು ಸಾವಿರ ರೂಪಾಯಿ ಸರ್ಕಾರ ಕೊಟ್ಟು 'ಇನ್ನೇನೂ ಮಾಡಬೇಡಿ ನೀವು, ನಿಮ್ಮ ಹತ್ತಿರ ಬಂದವರೊಡನೆ ಮಾತನಾಡುತ್ತಿರಿ' ಎಂದರೆ ಸಾಕು. That itself will be culture and education. ಇವರು ಒಬ್ಬೊಬ್ಬರ ಪ್ರಭಾವ ಒಂದೊಂದು ವಿಶ್ವವಿದ್ಯಾನಿಲಯದ ಪ್ರಭಾವಕ್ಕೆ ಸಮ.''
>
> *(ಎಂ.ವಿ. ಪ್ರೇಮ ಕುಮಾರ್, 'ವಿ.ಸೀ.೭೫,' ಪು.೬೮)*

ರಾಳ್ಳಪಲ್ಲಿಯವರು ಅತ್ಯಂತ ವಿನಯಶೀಲರು. ವಿದ್ಯೆಯಿಂದ ತುಂಬಿ ತುಳುಕುತ್ತಿದ್ದರೂ ಅವರು ಹೇಳುತ್ತಿದ್ದರಂತೆ — 'ನಿಜವಾಗಿ ನನ್ನ ವ್ಯಾಸಂಗವೆಲ್ಲ ಹಸಿವಿಲ್ಲದವನ ಊಟದೆಲೆಯಂತೆ, ಬರಿ ಎಂಜಲುಮಯ ಅಷ್ಟೆ. ಎಲ್ಲದಕ್ಕೂ ಕೈಯಿಕ್ಕಿ ಯಾವುದರ ಆಳಕ್ಕೂ ಇಳಿಯದ, ಇಳಿಯಲಾರದ ವೃತ್ತಿ.' ಮಹಾ ವಿದ್ವಾಂಸರಾದವರಿಗೆ ಮಾತ್ರ ಇಂಥ ವಿನಯ ಸಾಧ್ಯ.

ಬೆಳ್ಳೂರು ಮೈಲಾರ ಶ್ರೀಕಂಠಯ್ಯನವರು

ಮಹಾರಾಜ ಕಾಲೆಜಿನ ತಮ್ಮ ಗುರುಗಳಲ್ಲಿ ಅತಿ ಮುಖ್ಯ ಸ್ಥಾನವನ್ನು ಪಡೆದವರು ಶ್ರೀಕಂಠಯ್ಯನವರು. ವಿ.ಸೀ.ಯವರ ಬೆಳವಣಿಗೆಯಲ್ಲಿ ಶ್ರೀಯವರ ಪ್ರಭಾವ ಅತಿ ಹೆಚ್ಚಿನದು. ಅವರು ಇಂಗ್ಲಿಷ್ ಪಾಠವನ್ನು ನಡಸಿಕೊಡುತ್ತಿದ್ದ ರೀತಿಯನ್ನು ವಿ.ಸೀ. ತುಂಬ ಮೆಚ್ಚಿಕೊಂಡರು. ಅವರು ಹೇಳಿಕೊಟ್ಟದ್ದು ಜಾರ್ಜ್ ಎಲಿಯಟ್ಟಳ 'ಸೈಲಾಸ್ ಮಾರ್ನರ್' ಎನ್ನುವ ಕಾದಂಬರಿ. ಪುಸ್ತಕದ ಪಾಠವನ್ನು ಕೈಗೆತ್ತಿಕೊಳ್ಳದೆ, ಮೊದಲು ಮೂರು ತಿಂಗಳ ಕಾಲ, ಜಾರ್ಜ್ ಎಲಿಯಟ್ಟಳ ಜೀವನಚರಿತ್ರೆ, ಕಾಲವಿಶೇಷ, ಕೃತಿಗಳು, ಪ್ರಕಾಶನ ಪ್ರಭಾವ ಇವುಗಳ ಗುಣಾವಗುಣಗಳನ್ನು ಚಿತ್ರಿಸುತ್ತ ಹೋದರಂತೆ. ಪಠ್ಯಪುಸ್ತಕಕ್ಕೆ ಮಾತ್ರ ಗಮನಕೊಡಬೇಕೆಂದು ತೀರ್ಮಾನಿಸಿದ್ದ ಕೆಲವರು ವಿದ್ಯಾರ್ಥಿಗಳು ಪಾಠಬಿಟ್ಟು ಬೇರೆ ಏನನ್ನೊ ಹೇಳುತ್ತಾರೆ ಎಂದು ತಮ್ಮ ಅಸಮಾಧಾನವನ್ನು ಮೇಲಿನವರಿಗೆ ವ್ಯಕ್ತಪಡಿಸಿದರಂತೆ. ಅದಕ್ಕೆ ಶ್ರೀಕಂಠಯ್ಯನವರಿತ್ತ ಉತ್ತರ ಇದು :

> ''ಕಾಲೆಜಿನಲ್ಲಿ ಪಾಠ ಹೇಳಬೇಕಾದುದು ಹೀಗೆ, ಇಲ್ಲಿ ನಾವು ಹುಡುಗರನ್ನು ಪಾಸು ಮಾಡಿಸುವ 'coaches' ತಯಾರಕರು ಮಾತ್ರ ಅಲ್ಲ, 'educators' ಎಂದರು. ವಿದ್ಯಾರ್ಥಿಗಳ ಮನಸ್ಸನ್ನು ರೂಪಿಸುವ ಕೆಲಸ, ತಿದ್ದುವ ಕೆಲಸ ನಮ್ಮದು. ಯಾರಿಗೆ ಬೇಕಾಗಲಿ, ಯಾರಿಗೆ ಬೇಡವಾಗಲಿ ನಾನು ಪಾಠಮಾಡುವುದು ಹೀಗೆ. ಇರುವವರು ಇರಬಹುದು ಹೋಗುವವರು ಹೋಗಬಹುದು.''
>
> *(ವಿ.ಸೀ., 'ಕಾಲೆಜ್ ದಿನಗಳು', ಪು.೮೩)*

ಶ್ರೀಕಂಠಯ್ಯನವರ ಈ ನಿಲುವನ್ನು ಮೆಚ್ಚಿಕೊಂಡ ವಿ.ಸೀ. ಈ ಬಗೆಯ ಶಿಕ್ಷಣ ದೊರೆತದ್ದೇ ಕಾಲೆಜ್ ಶಿಕ್ಷಣದಲ್ಲಿ ತಮಗೆ ದೊರೆತ ಮಹಾ ಲಾಭ ಎನ್ನುತ್ತಾರೆ. ಆ ದೃಷ್ಟಿಯನ್ನು ಮರೆತದ್ದೇ ಈಗಿನ ಕಾಲೆಜು ಶಿಕ್ಷಣದ ಅವನತಿಗೆ ಕಾರಣ ಎನ್ನುತ್ತಾರೆ.

ಒಮ್ಮೆ ಶ್ರೀಕಂಠಯ್ಯನವರು ತಾವು ಹೇಳಿಕೊಟ್ಟ ಪಾಠವನ್ನು ಸಂಗ್ರಹಿಸಿ, ಇತರ ಗ್ರಂಥಗಳನ್ನು ಓದಿ, ಪ್ರಬಂಧವನ್ನು ಸಿದ್ಧಪಡಿಸಿ ಎಂದು ತಮ್ಮ ಶಿಷ್ಯರಿಗೆ ನೇಮಿಸಿದರಂತೆ. ಬರೆದು ತಂದ ಪ್ರಬಂಧಗಳನ್ನು ಪರಿಶೀಲಿಸಿ, ಇಬ್ಬರಿಗೆ ಹತ್ತಕ್ಕೆ ಹತ್ತು ನಂಬರನ್ನು, ಇಪ್ಪತ್ತು ಜನಕ್ಕೆ ಸೊನ್ನೆಯನ್ನು ಕೊಟ್ಟಿದ್ದರಂತೆ ! ಹತ್ತು ಅಂಕ ಪಡೆದವರಲ್ಲಿ ಮುಂದೆ ಇಂಗ್ಲಿಷ್ ಅಧ್ಯಾಪಕರಾಗಿ ಹೆಸರು ಗಳಿಸಿದ ಕೆ. ಅನಂತ ರಾಮಯ್ಯನವರು ಒಬ್ಬರು. ವಿ.ಸೀ. ಒಂಭತ್ತು ಅಂಕ ಪಡೆದ ನಾಲ್ವರಲ್ಲಿ ಒಬ್ಬರು. 'ಎಂದಿಗೂ ನಾನು ಸೆಕಂಡ್‌ಕ್ಲಾಸ್ ಶಾಪಗ್ರಸ್ತ' ಎಂದು ತಮ್ಮನ್ನು ತಾವೇ ಕೆಳಗಿಳಿಸಿಕೊಂಡಿದ್ದಾರೆ.

ಶ್ರೀಯವರು ಎಂಥ ಮಹನೀಯ ವ್ಯಕ್ತಿ ಎನ್ನುವುದರಲ್ಲಿ ಯಾರಿಗೂ ಸಂದೇಹವಿರಲಿಲ್ಲ. ಅವರಿಗಿಂತ ಉನ್ನತ ಪದವಿಯಲ್ಲಿದ್ದ ಆಕ್ಸ್‌ಫರ್ಡ್ ಪದವೀಧರ ಇಂಗ್ಲಿಷ್ ಅಧ್ಯಾಪಕರು ಹೇಳುತ್ತಿದ್ದರಂತೆ – ''If Professor Srikantia goes to England he will not be allowed to return. Oxford will snap him up.'' ಅಷ್ಟೊಂದು ಹೆಸರುವಾಸಿಯಾಗಿದ್ದರು ಬಿ.ಎಂ. ಶ್ರೀಕಂಠಯ್ಯನವರು.

''ಶ್ರೀಯವರಂಥವರು ಲೋಕದಲ್ಲಿ ಅಪರೂಪ. ತುಂಬುಮುಖ, ಆಳವಾದ ಶಾಂತವಾದ ತಂಪಾದ ಕಣ್ಣ ಹೊಳಪು, ಯಾವುದೋ ಲೋಕೋತ್ತರವಾದ ಒಂದು ಮಹಾಶ್ರದ್ಧೆಯನ್ನು ಸೂಚಿಸುತ್ತಿದ್ದವು. ಆ ಜೀವದ ಕಾಣ್ಕೆ, ಆ ಒಬ್ಬರ ಪ್ರಭಾವ ಒಟ್ಟು ಒಂದು ವಿಶ್ವವಿದ್ಯಾನಿಲಯದ ಪ್ರಭಾವಕ್ಕೆ ಸಮನಾಗಿತ್ತು'' ಎಂದು ತಮ್ಮ ಗುರುವಿನ ಗುಣಗಾನ ಮಾಡಿದ್ದಾರೆ ವಿ.ಸೀ.

ಶ್ರೀಯವರ ಗರಡಿಯಲ್ಲಿ ಅದೆಷ್ಟು ಪ್ರತಿಭಾವಂತ ಯುವಕರು ತಯಾರಾದರು! ಅಂದಿನ ಮಹಾರಾಜ ಕಾಲೆಜ್ ಪರಿಸರದಲ್ಲಿ ದೊಡ್ಡದೊಂದು ಪವಾಡವೇ ನಡೆದುಹೋದಂತೆ ಕಾಣುತ್ತದೆ. ಶ್ರೀಯವರ ಪಾಠಕ್ರಮದಿಂದ ವಿ.ಸೀ.ಯವರ ಬುದ್ಧಿ ವಿಶಾಲವಾಯಿತು, ಹೊಸತೊಂದು ಸಂಸ್ಕಾರವನ್ನು ಪಡೆದುಕೊಂಡಿತು.

ಎಂ. ಹಿರಿಯಣ್ಣನವರು

ಅಂದಿನ ಮಹಾರಾಜ ಕಾಲೆಜಿಗೆ ವಿಶೇಷ ಕೀರ್ತಿಯನ್ನು ತಂದವರು ಎಂ. ಹಿರಿಯಣ್ಣನವರು. ಇವರು ಕೆಲವು ಕಾಲ ಮೈಸೂರು ರಾಜ್ಯದ ದಿವಾನರಾಗಿ ಕೀರ್ತಿಗಳಿಸಿದ ಎಂ.ಎನ್.ಕೃಷ್ಣರಾಯರ ಅಣ್ಣಂದಿರು. ತುಂಬ ಶುಚಿಶೀಲರೆಂದು, ನಿಷ್ಠರೆಂದು, ಸಂಸ್ಕೃತ ಮತ್ತು ತತ್ತ್ವಶಾಸ್ತ್ರಗಳ ವಿದ್ವತ್ತಿನಲ್ಲಿ ಗಣ್ಯಸ್ಥಾನವನ್ನು ಪಡೆದು ಖ್ಯಾತಿಗಳಿಸಿದ್ದರು. ಇಂಥವರ ಮಾರ್ಗದರ್ಶನ ದೊರೆತದ್ದು ತಮ್ಮ ಭಾಗ್ಯ ಎಂದು ವಿ.ಸೀ. ಪರಿಗಣಿಸಿದ್ದರು. ಹಿರಿಯಣ್ಣನವರು ಮೊದಲು ಬಂದದ್ದು ಸಂಸ್ಕೃತ ಪ್ರಾಧ್ಯಾಪಕರಾಗಿ. ಆದರೆ, ಭಾರತೀಯ ತತ್ತ್ವಶಾಸ್ತ್ರದಲ್ಲಿನ ಅವರ ಆಳವಾದ ಜ್ಞಾನವನ್ನು ಕಂಡು ಆ ಭಾಗವನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ನೇಮಕ ಪಡೆದರಂತೆ. 'ಹಿರಿಯಣ್ಣನವರು ನಿಜವಾಗಿ ಹಿರಿಯರೂ ಹೌದು, ಎಲ್ಲರಿಗೂ ಅಣ್ಣನವರೂ ಹೌದು; ಅಣ್ಣ ಭಾಗ ಕಡಮೆ, ಹಿರಿಯತನದ ಭಾಗ ಪ್ರಧಾನ. ಅವರ ಉನ್ನತಿ ಅಷ್ಟು ದೊಡ್ಡದಾದದ್ದು ಕೂಡ' ಎನ್ನುತ್ತಾರೆ ವಿ.ಸೀ. ಎ.ಸಿ. ಬ್ರಾಡ್ಲೆ ಷೇಕ್ಸ್‌ಪಿಯರ್ ದುರಂತ ನಾಟಕಗಳ ಮೇಲೆ ಬರೆದ ವ್ಯಾಖ್ಯಾನದಿಂದ ಪ್ರಸಿದ್ಧನಾದ ವ್ಯಕ್ತಿ. ಅವನು In Memoriam ಕವಿತೆಯ ಮೇಲಿನ ವ್ಯಾಖ್ಯಾನದ ಎರಡನೆ ಮುದ್ರಣದಲ್ಲಿ ಅಡಿಟಿಪ್ಪಣಿಯೊಂದರಲ್ಲಿ ಹಿರಿಯಣ್ಣನವರ ಟೀಕೆಯನ್ನು ಸೂಚಿಸಿದ್ದನಂತೆ! ಪ್ರಮಾಣಪುರುಷನೆಂದು

ಖ್ಯಾತಿಗಳಿಸಿದ್ದ ಈ ಇಂಗ್ಲಿಷ್ ವಿದ್ವಾಂಸ ದೂರದ ಮಹಾರಾಜ ಕಾಲೇಜಿನಲ್ಲಿ ಅಜ್ಞಾತರಾಗಿದ್ದ ಸಂಸ್ಕೃತ ಪ್ರಾಧ್ಯಾಪಕರ ಅಭಿಪ್ರಾಯವನ್ನು ಉದ್ಧರಿಸಿದ್ದನಲ್ಲ ಎಂದು ಅಂದಿನ ವಿದ್ಯಾರ್ಥಿಗಳು ಸಂಭ್ರಮಪಟ್ಟುಕೊಂಡಿದ್ದರಂತೆ.

ಹಿರಿಯಣ್ಣನವರು ಎಷ್ಟು ಹಿರಿಯ ವಿದ್ವಾಂಸರೋ ಅಷ್ಟೇ ಸಾಧು ಚರಿತರು. ಯಾರನ್ನೂ ಅಭಿನಂದಿಸಿದವರೂ ಅಲ್ಲ, ದ್ವೇಷಿಸಿದವರೂ ಅಲ್ಲ. ದೊರೆತದ್ದರಿಂದ ತೃಪ್ತಿಗೊಂಡು, ಯಾವುದಕ್ಕೂ ಆಸೆ ಪಡದೆ, ನಿರ್ಮಲ ಜೀವನ ನಡೆಸಿದವರು. ಆ ಬದುಕು, "ಒಂದು ಜೀವದ ಶಿಕ್ಷಣ, ಸಂಸ್ಕಾರ, ಸಿದ್ಧಿಗಳ ಪ್ರತೀಕ' ಎನ್ನುತ್ತಾರೆ ವಿ.ಸೀ.

ಭಗವದ್ಗೀತೆಯ ವಿಷಯವಾಗಿ ಪ್ರಸ್ತಾಪ ಮಾಡುತ್ತ ಹಿರಿಯಣ್ಣನವರು ಕಡೆಯಲ್ಲಿ It can be the Bible of any creed (ಯಾವ ಧರ್ಮಸಮಯಕ್ಕೂ ಗೀತೆ ಒಂದು ಪ್ರಮಾಣಗ್ರಂಥವಾಗಬಲ್ಲದು) ಎಂದುದನ್ನು ವಿ.ಸೀ. ಜ್ಞಾಪಿಸಿ ಕೊಳ್ಳುತ್ತಾರೆ. ಆ ಮಾತಿನ ಸತ್ಯತೆಯನ್ನು ಕಂಡು ತಲೆದೂಗುತ್ತಾರೆ. ಹಿರಿಯಣ್ಣನವರು ಆಡುವ ಮಾತುಗಳೆಲ್ಲವೂ ಇಂಥವೇ ; ಅರ್ಥವತ್ತಾದವು. ಅಬ್ಬರವಾದ ಪದಗಳನ್ನು ಪ್ರಯೋಗಿಸದೆ ಸುಲಭವಾದ ಪದಗಳಲ್ಲಿ ಅರ್ಥ ವಿವರಿಸಬೇಕು ಎಂದು ಹೇಳುತ್ತಾ — "The word should speak its meaning, indicate relationship and retire, it should not try to draw attention to itself or the speaker" ಎನ್ನುತ್ತಿದ್ದರಂತೆ. ಎಂಥ ಘನವಾದ ಉಪದೇಶ! ವಿ.ಸೀ. ಹೇಳುತ್ತಾರೆ : 'Retire ಎಂಬ ಪದವನ್ನು ಅವರ ಬಾಯಿಂದ ಕೇಳಬೇಕಿತ್ತು. ಅದು ಅಲ್ಲಿನ ಜೀವಾಂಶ ; ಗುಣಾಂಶ; ಧರ್ಮಾಂಶ. ಅವರ ಮಾತೆಲ್ಲ ಹಾಗೆ ; ಬರವಣಿಗೆ, ಪಾಠ ಹಾಗೆ. ಐವತ್ತು ವರ್ಷಗಳ ಯತ್ನ ಫಲಿಸದೆ ನನ್ನಂಥವರು ಈ ಬೋಧೆಯಿಂದ ಹಿಂದೆ ಎಷ್ಟು ದೂರವಿದ್ದೆವೊ ಇಂದೂ ಅಷ್ಟೇ ದೂರವಿದ್ದೇವೆ.' ಪದಗಳ ಯಥಾರ್ಥ ಉಪಯೋಗವನ್ನು ನಾವು ಕಲಿಯುವುದೆಂದಿಗೊ!

ಹಿರಿಯಣ್ಣನವರ ವೇಷಭೂಷಣಗಳನ್ನು ವಿ.ಸೀ. ವಿವರಿಸಿರುವ ರೀತಿ ತುಂಬ ಮೆಚ್ಚತಕ್ಕಂಥಾದ್ದು.

> "ರೇಷ್ಮೆಯ ನಿಲುವಂಗಿಯನ್ನೊ ಅಥವಾ ಸರ್ಜಿನ ಕಿರು ಕೋಟನ್ನೊ ಹಾಕಿಕೊಂಡು, ಶುಭ್ರವಾಗಿ ಒಗೆದು ಲಕ್ಷಣವಾಗಿ ಇಸ್ತ್ರಿ ಮಾಡಿದ ಮಲ್ ಧೋತ್ರವುಟ್ಟು, ಕಾಲಿಗೆ ಪೂನಾ ಪಾಪಾಸ್ ಹಾಕಿ ಕೊಂಡು ತಲೆಯಮೇಲೆ ಮಲ್ ಅಥವಾ ಮಸ್ಲಿನ್ ರುಮಾಲು ಹಾಕಿ, ಗೌನು ಧರಿಸಿ ಅವರು ಕ್ಲಾಸಿಗೆ ಬರುತ್ತಿದ್ದಾಗ ಯಾವುದೊ ಬೇರೆ ಪ್ರಪಂಚ ನಮ್ಮ ಕಡೆಗೆ ಇಳಿದು ಬರುತ್ತಿತ್ತು ಎಂಬ ಭಾವನೆ. ಅಲ್ಲಿ ಸಂತೋಷ, ಕಾವು, ರಂಜನೆಗೆ ಅವಕಾಶ ಇರಲಿಲ್ಲ. ದೇವಸ್ಥಾನದ ಒಂದು ಭಾವ ಅಲ್ಲಿ."
>
> (ಅದೇ, ಪು. ೧೨೭)

'' 'ನಾನಿಲ್ಲಿದ್ದೇನೆ ನೋಡಿ' ಎಂದು ಇತರರ ಕಣ್ಣಿಗೆ ಬೀಳುವ, ಬೀಳಿಸಿಕೊಳ್ಳುವ ಜೀವವಲ್ಲ. ತಾನು ಇದ್ದಕಡೆ ಇದ್ದು, ಬೆಳೆದು, ಮಾಡಬೇಕೆನ್ನಿಸಿದ್ದನ್ನು ಮಾಡಿ ಕಣ್ಮರೆಯಾಯಿತು. ಒಂದು ಮರ ತನ್ನ ನೆಲದಲ್ಲಿ ನಟ್ಟು ಬೆಳೆದು, ತಾನು ಏರುಷಷ್ಟು ಎತ್ತರ ಏರಿ, ಹರಡುವಷ್ಟು ಹರಡಿ, ಬೇರು ಕಾಳು ಕೊಂಟಿ ಎಲ್ಲವನ್ನೂ ಬಲಿಸಿಕೊಂಡು, ಎರಗಿದ ಪೀಡೆಗಳನ್ನೆಲ್ಲ ನಿವಾರಿಸಿಕೊಂಡು, ಬಿಡುವ ಚಿಗುರು ಹೂ ಕಾಯಿ ಹಣ್ಣು ಆಯಾ ಕಾಲಕ್ಕೆ ಆಯಾ ರೀತಿ ಬಿಟ್ಟು ಚರಿತಾರ್ಥವಾಗುವಂತೆ ಬದುಕಿತು.''

('ವ್ಯಕ್ತಿಚಿತ್ರ ಸಂಪುಟ,' ಭಾಗ ೧, ಪು. ೧೨೧)

ವಿ.ಸೀ. ತಮ್ಮ ಬಾಳಿನುದ್ದಕ್ಕೂ ಪೂಜ್ಯರಾದ ಹಿರಿಯಣ್ಣನವರ ನಡೆನುಡಿಗಳನ್ನು ಆದರ್ಶವಾಗಿಟ್ಟುಕೊಂಡು, ಅದರಂತೆ ನಡೆಯಲು ಪ್ರಯತ್ನಪಟ್ಟರು.

ಕಾನಕಾನಹಳ್ಳಿ ವರದಾಚಾರ್ಯರು

ಕನ್ನಡ ಪಾಠ ಹೇಳಿದ ಕಾನಕಾನಹಳ್ಳಿ ವರದಾಚಾರ್ಯರ ಬೋಧನ ಕ್ರಮದ ವಿಲಾಸವನ್ನು ವಿ.ಸೀ.ಯವರ ಮಾತಿನಲ್ಲೆ ವಿವರಿಸಬೇಕು. ರಾಜಶೇಖರ ವಿಲಾಸದಲ್ಲಿ ಬರುವ ಶೃಂಗಾರಭಾಗಗಳ ಅರ್ಥ ವಿವರಣೆ ಮಾಡುವಾಗ ಕೆಲವು ಬಲಿತ ಹುಡುಗರು ಕುಹಕ ಮಾತುಗಳನ್ನಾಡಿದರಂತೆ. ಆಗ ಆಚಾರ್ಯರು ಅವರನ್ನು ಕುರಿತು 'ಇಲ್ಲಿ ಬನ್ನಿ ಅಣ್ಣಯ್ಯ' ಎಂದು ಕರೆಯುತ್ತಿದ್ದರಂತೆ. ಮೆಲ್ಲಗೆ ಆದರೂ ಕ್ಲಾಸಿಗೆಲ್ಲ ಕೇಳುವ ಹಾಗೆ 'ನಿಮಗೆ ಮದುವೆಯಾಗಿದೆಯೋ?' ಎಂದು ಕೇಳುವರು. ಎರಡನೆಯ ಹೆಜ್ಜೆ 'ಹೆಂಡತಿ ಮನೆಗೆ ಬಂದಿದ್ದಾರೊ?' ಎನ್ನುವರು. ಇಲ್ಲವಾದರೆ 'ಸದ್ಯ ನಿಮಗೆ ಅರ್ಥವಾಗುವುದಿಲ್ಲ' ಎನ್ನುವರು ; 'ನಾನು ಹೇಳಿದಷ್ಟು ಸಾಕು' ಎನ್ನುವರು. ಹೆಂಡತಿ ಬಂದಿದ್ದಾಳೆಂದರೆ 'ನಿಮಗೆ ಅರ್ಥವಾಗಿರಬೇಕಲ್ಲ ಅಣ್ಣಯ್ಯ' ಎನ್ನುವರು. ಯಾವ ಚೇಷ್ಟೆ ಹೇಗೆ ಬರಲಿ, ಅದಕ್ಕೆ ತಕ್ಕಂತೆ ಪ್ರತಿವಾಕ್ ಅವರದು (ಕಾಲೆಜ್ ದಿನಗಳು, ಪುಟ ೧೨೯).

ಇನ್ನೊಂದು ಸಂದರ್ಭ. ಮೀಸೆ ಹೊತ್ತ ತಾಂಬೂಲ ಮೆಲ್ಲುತ್ತಿದ್ದ ವಿದ್ಯಾರ್ಥಿಯೊಬ್ಬ ಗ್ರಂಥದಲ್ಲಿ ವೇಶ್ಯೆಯರ ಮಾತು ಬಂದಾಗ 'ವೇಶ್ಯೆಯರಿಗೆ ಏಕೆ ಮಕ್ಕಳಾಗುವುದಿಲ್ಲ?' ಎಂದು ಕೇಳಿದನಂತೆ. ಆಚಾರ್ಯರು 'ಅವರಿಗೂ ಆಗುತ್ತದೆ ಅಣ್ಣಯ್ಯ' ಎಂದು ಹೇಳಿ ಆತನನ್ನು 'ಇಲ್ಲಿ ಬನ್ನಿ' ಎಂದು ಕರೆದು ಕಿಟಕಿಯ ಆಚೆ ಹೊರಗಿದ್ದ ಕಿರುದಾರಿಯನ್ನು ತೋರಿಸಿ 'ಅಲ್ಲಿ ಏಕಣ್ಣಯ್ಯ ಏನೂ ಬೆಳೆಯುವುದಿಲ್ಲ' ಎಂದರಂತೆ. ಆತನು 'ಅರ್ಥವಾಯಿತು ಪಂಡಿತರೆ' ಎಂದಾಗ, 'ಹೋಗಿ ಗಂಭೀರವಾಗಿ ನಿಮ್ಮ ಸ್ಥಳದಲ್ಲಿ ಕುಳಿತುಕೊಳ್ಳಿ. ದೊಡ್ಡ ಮೀಸೆ ಸಾರ್ಥಕವಾಗುತ್ತದೆ' ಎಂದರಂತೆ (ಕಾಲೆಜ್ ದಿನಗಳು, ಪು.೧೩೦). ಇಂಥವರ ಮುಂದೆ ಯಾರ ಆಟ ತಾನೆ ಸಾಗೀತು? ಕನ್ನಡ ಪಂಡಿತರೆಂದು ಇಂಥವರನ್ನು ತಾತ್ಸಾರದಿಂದ ಕಾಣಲಾದೀತೆ?

ಕಾಲೇಜ್ ದಿನಗಳಲ್ಲಿ ವಿ.ಸೀ. ದಿನಚರಿ

ವಿ.ಸೀ.ಯವರದು ಕಾಯಿಲೆಯ ಪ್ರಕೃತಿ. ಆದರಿಂದ ಯಾರಿಗೂ ತೊಂದರೆಯಾಗದಂತೆ ವಿಶೇಷ ಎಚ್ಚರಿಕೆ ವಹಿಸುತ್ತಿದ್ದರು. ಕಾಯಿಲೆಯನ್ನು ದೂರವಿರಿಸಲು ಅವರು ಅನುಸರಿಸುತ್ತಿದ್ದ ದಿನಚರಿ ಈ ರೀತಿಯದು :

> ''ಬೆಳಗ್ಗೆ ಎದ್ದು ಮರಿಮಲ್ಲಪ್ಪನವರ ಹೈಸ್ಕೂಲು ಎದುರಿಗೆ ಇರುವ ಸೀತಾರಾಮ ದೇವಸ್ಥಾನದಿಂದ ಹಿಡಿದು ಕುಕ್ಕನಹಳ್ಳಿ ಕೆರೆಯ ಮೂಲೆ ದಾಟಿ ಇನ್ನರ್ಧ ಕೆರೆಯ ದಂಡೆಯವರೆಗೂ ಮೆಲ್ಲನೆ ಓಡುವುದು; ಪ್ರಾತಃ ಕಾರ್ಯಗಳನ್ನು ತೀರಿಸಿಕೊಂಡು ಕೆರೆ ಸುತ್ತಿ ಹಿಂದಕ್ಕೆ ಬರುವುದು; ದಾರಿಯಲ್ಲಿ ನಮ್ಮ ಮನೆಗೆ ಹಾಲು ಕೊಡುತ್ತಿದ್ದ ಬಚ್ಚಿ ಮನೆಗೆ ಹೋಗಿ ಅವನು ಕೊಟ್ಟಷ್ಟು ನೊರೆಹಾಲು ಕುಡಿಯುವುದು; ಮನೆಗೆ ಬಂದು ಸ್ನಾನಮಾಡಿ ಅಮ್ಮನವರು ಎಲ್ಲರಿಗೂ ತಪ್ಪದೆ ಕೊಡುತ್ತಿದ್ದ ಕಾಫೀ ತಿಂಡಿ ಸೇವನೆ ಮಾಡುವುದು, ಸಂಜೆ ಐದು ಗಂಟೆಗೆ ಪುನಃ ಮನೆಯಿಂದ ಹೊರಟು ಪೂರ್ವಭಾಗದಲ್ಲಿರುವ ಕಾರಂಜಿ ಕೆರೆ ಏರಿಯ ಮೇಲೆಯೊ, ಥಂಡಿಸಡಕ್ ಸಾಲುಮರದ ಮೂಲಕವಾಗಿಯೊ ಹೊರಟು .... ಹಿಂದಕ್ಕೆ ಬರುವುದು.''
>
> *(ವಿ.ಸೀ. 'ಕಾಲೇಜ್ ದಿನಗಳು', ಪು. ೮೬)*

ಪ್ರತಿದಿನ ಬೆಳಗ್ಗೆ ಸಂಜೆ ಈ ಬಗೆಯ ವ್ಯಾಯಾಮ ನಡೆಯುತ್ತಿತ್ತಂತೆ. ಅವರೇ ಹೇಳುವಂತೆ ನಂಬಲು ಆಗದಷ್ಟು ವ್ಯಾಯಾಮ. ವಿದ್ಯಾಭ್ಯಾಸ ಮುಗಿಯುವವರೆಗೂ ಈ ಕ್ರಮ ಅನುಸರಿಸಿದರಂತೆ. ಎಷ್ಟು ಜನ ಈಗಿನ ವಿದ್ಯಾರ್ಥಿಗಳು ಈ ಬಗೆಯ ಕಾರ್ಯಕ್ರಮವನ್ನು ಅನುಸರಿಸಿಯಾರು? ವ್ಯಾಯಾಮ ಒದಗಿಸಿದ್ದಲ್ಲದೇ ಅದು ವಿಹಾರ ವಿಲಾಸಕ್ಕೂ, ಯೋಚನೆಗಳನ್ನು ಮೆಲುಕು ಹಾಕುವುದಕ್ಕೂ ಅವಕಾಶ ಮಾಡಿಕೊಡುತ್ತಿತ್ತು. ದಾರಿಯಲ್ಲಿ ನಡೆದು ಹೋಗುವಾಗ ಅಂದಿನ ದಿನದ ಪಾಠದಲ್ಲಿ ಕೇಳಿದ ವಿಷಯದ ಮಂಥನ ನಡೆಯುತ್ತಿತ್ತು. ಪರೀಕ್ಷೆಗೆಂದೇ ಅವರು ಬೇರೆಯಾಗಿ ಓದಿದ್ದು ಕಡಮೆಯೇ.

ಕಾಲೇಜಿನ ಪುಸ್ತಕ ಭಂಡಾರದ ಪೂರ್ಣ ಉಪಯೋಗವನ್ನು ಅವರು ಪಡೆದರು. ಅಲ್ಲಿ ಕತ್ತಲಿರುವಷ್ಟು ಎತ್ತರದ ಅಲಮಾರುಗಳಲ್ಲಿ ಯಾವಾಗ ಹೋದರೂ ಯಾವ ಬೀರುವಿನ ಪುಸ್ತಕವನ್ನಾದರೂ ತೆರೆದು ಗಂಟೆಗಟ್ಟಲೆ ಓದುವ ಅವಕಾಶ, ರಾಜಭೋಜನಕ್ಕೆ ಸಮ ಎಂದು ಪರಿಗಣಿಸಿದ್ದರು. ಪುಸ್ತಕ ಭಂಡಾರಗಳು ವಿದ್ಯಾರ್ಜನೆಗೆ ಎಂಥ ಮುಖ್ಯ ಸಾಧನ ಎನ್ನುವುದನ್ನು ಈಗಿನ ವಿದ್ಯಾರ್ಥಿಗಳು ಮರೆತಂತೆ ಕಾಣುತ್ತದೆ.

ರವೀಂದ್ರರ ದರ್ಶನ

೧೯೧೫ರಲ್ಲಿ ಮೊದಲ ಬಾರಿಗೆ ಕವಿ ರವೀಂದ್ರರು ಬೆಂಗಳೂರಿಗೆ ದಯ ಮಾಡಿಸಿದ್ದರು. ನೊಬೆಲ್ ಪಾರಿತೋಷಿಕ ಪಡೆದು ಆರಾಷ್ಟ್ರ ವಿಶ್ರಾಂತ ಕೀರ್ತಿ

ಯನ್ನು ಪಡೆದ ಕವಿವರ್ಯರನ್ನು ನೋಡಲು ಎರಡು ರೈಲುಗಾಡಿಯ ತುಂಬ ವಿದ್ಯಾರ್ಥಿಗಳು ಮೈಸೂರಿಂದ ಹೊರಟು ಬೆಂಗಳೂರಿಗೆ ಬಂದರಂತೆ. ಕವಿಯೊಬ್ಬನನ್ನು ನೋಡಲು ಈಗಿನ ಕಾಲದ ವಿದ್ಯಾರ್ಥಿಗಳು, ಅಂದಿನ ಮೈಸೂರಿನ ವಿದ್ಯಾರ್ಥಿಗಳಂತೆ ಉತ್ಸಾಹ ತೋರುವರೊ ಇಲ್ಲವೊ! ಮೈಸೂರಿನಿಂದ ಹೊರಟು ಬಂದ ವಿದ್ಯಾರ್ಥಿಗಳಿಗೆ ಬೆಂಗಳೂರು ಎಂದಿನಂತೆಯೇ ಇದ್ದುದನ್ನು ಕಂಡು ತೀರ ನಿರಾಶೆಯಾಯಿತಂತೆ. ಅವರೆಣಿಕೆಯಲ್ಲಿ ಮಹಾಕವಿಯನ್ನು ಎದುರುಗೊಳ್ಳಲು ಊರಿಗೆ ಊರೇ ಸಡಗರದಿಂದ ಇರುತ್ತದೆ, ಸಂಭ್ರಮ ಪಡುತ್ತದೆ ಎಂದುಕೊಂಡಿದ್ದರಂತೆ. ಯಾವ ಉತ್ಸಾಹವನ್ನೂ ತಾಳದೆ ಎಂದಿನಂತೆಯೇ ಜೀವನ ನಡೆಸುತ್ತಿರುವ ಗದ್ಯತೆಯನ್ನು ಕಂಡು ವಿದ್ಯಾರ್ಥಿಗಳು ಬೇಸತ್ತರಂತೆ.

ಎಸ್.ಎಲ್.ಎನ್. ಹೈಸ್ಕೂಲಿನ ಮುಂಭಾಗದಲ್ಲಿ ಹಾಕಿದ ದೊಡ್ಡ ಚಪ್ಪರದಲ್ಲಿ ಮೊದಲ ದಿನ 'The Message of the Forests' ಎಂಬ ವಿಷಯದ ಮೇಲೂ, ಎರಡನೆಯ ದಿನ ಲಾಲ್‌ಬಾಗಿನಲ್ಲಿ 'The Mother's Prayer' ಎಂಬ ಕಿರುನಾಟಕವನ್ನೂ ಕವಿ ಓದಿದರಂತೆ. ಆ ಸನ್ನಿವೇಶ, ಕವಿವಾಣಿಯ ಪ್ರಭಾವ, ಹುಡುಗರಿಗೆ ಯಾವುದೋ ಬೇರೆ ಪ್ರಪಂಚದ ಸಂಪರ್ಕ ತಂದುಕೊಟ್ಟಿತಂತೆ.

ಎರಡು ವರ್ಷಗಳ ನಂತರ ಕವಿ ರವೀಂದ್ರರು ಮೈಸೂರಿಗೂ ಭೇಟಿ ಕೊಟ್ಟರಂತೆ. ಅವರನ್ನು ಮಹಾರಾಜರ ಅತಿಥಿಯಾಗಿ Summer Palace ನಲ್ಲಿ ಇಳಿಸಿದ್ದರಂತೆ. ವಿ.ಸೀ.ಯವರ ಅಂದಿನ ಉತ್ಸಾಹ ಎಷ್ಟಿತ್ತೆಂದರೆ, ಅವರೂ ಇನ್ನಿಬ್ಬರೂ ಸೇರಿ ಕವಿಗಳನ್ನು ಭೇಟಿಯಾಗಲು ಹತ್ತು ನಿಮಿಷದ ಕಾಲಾವಕಾಶ ಪಡೆದರಂತೆ. ಆ ಭೇಟಿಗೆ ಹುಡುಗರು ಸಿದ್ಧಮಾಡಿಕೊಂಡದ್ದು, ಕವಿವರ್ಯರೊಡನೆ ಸಂಭಾಷಿಸಿದ್ದು, ಒಂದು ಸ್ವಾರಸ್ಯಕರ ಪ್ರಸಂಗ. ಅದನ್ನು ವಿ.ಸೀ. ವಾಣಿಯಲ್ಲೆ ಕೇಳಬೇಕು :

> ''ಮೈಸೂರು ಆಗ ಇನ್ನೂ ಮಲ್ಲಿಗೆ ಹೂವಿಗೂ, ಚಿಗುರು ವೀಳೆಯದೆಲೆಗೂ, ಈರನಗೆರೆಯ ಮೊಗರು ಬದನೆಕಾಯಿಗೂ, ಉತ್ತಮ ಊದುಕಡ್ಡಿಗೂ ಖ್ಯಾತವಾದ ಪಟ್ಟಣ. ಅಲ್ಲಿ ದೊರೆಯುತ್ತಿದ್ದ ಪನ್ನೀರು ಅತ್ತರು ನಿಜವಾದ ಶ್ರೀಗಂಧ, ಹಸಿ ಗಂಧ ಸೌಂಗಧದವು. ಯುವರಾಜರ ಅರಮನೆಗೆ ಸೇರಿದ ಒಬ್ಬ ಯುವಕ ನಮಗೆ ಪರಿಚಯಸ್ಥನಾದುದರಿಂದ ಖಾಸಾಹಾರ ಮಾಡುವ ಒಬ್ಬರಿಗೆ ಹೇಳಿ, ನಾಲ್ಕೂವರೆ ಅಡಿ ನಿಲವುಳ್ಳ, ೪-೫ ಎಳೆ ಕಟ್ಟಿ ತೋರವಾದ, ಆದರೂ ಹಗುರವಾದ, ಹೊಸ ಮಲ್ಲಿಗೆ ಮೊಗ್ಗಿನ ಹಾರವೊಂದನ್ನು ಮಾಡಿಸಿದ್ದೆವು. ಅದಕ್ಕೆ ಮೂರು ಸಣ್ಣ ಕುಚ್ಚು, ಕೊರಲ ಹಿಂದೆ, ತೋಳಿಗೆ ತೂಗಲು; ಕೆಳಗೆ ಪದಕದಂತೆ ಇನ್ನೊಂದು ದೊಡ್ಡ ಕುಚ್ಚು ಕೆಂಪು ಗುಲಾಬಿಯ ಐದೈದು ಮೊಗ್ಗುಗಳಿಂದ ಮಾಡಿಸಿತ್ತು. ನಡುವೆ ಅಲ್ಲಲ್ಲಿ ಕೆಂಡಸಂಪಗೆ, ಮರುಗ, ಪಚ್ಚೆಯ ತೆನೆ, ಕಸ್ತೂರಿ ಜಾಜಿಯ ಸೇರುವೆ, ನೆಯಿಗೆ ಇತ್ತು. ಅದಕ್ಕೆ ಪನ್ನೀರು ಚಿಮುಕಿಸಿ ತೆಗೆದು

ಕೊಂಡು ಹೋಗಿದ್ದೆವು. ಒಂದು ಸಣ್ಣ ಬೆಳ್ಳಿಯ ಡಬ್ಬಿಯಲ್ಲಿ ಅತ್ತರಿತ್ತು. ಮೂರು ತೊಲೆ ಅಂಬರ್ ಊದುಕಡ್ಡಿಯನ್ನು ತೆಗೆದುಕೊಂಡು ಹೋಗಿದ್ದೆವು. ಅದರಲ್ಲಿ ಅಷ್ಟನ್ನು ಹಚ್ಚಲು ಮುಂಚೆಯೇ ವಿರ್ಸಾಡಾಗಿತ್ತು. ಒಳಮನೆಯ ಬಾಗಿಲಿಗೆ ಹೋಗಿ ನಿಂತಾಗ, ಕವಿಗಳು ನಮ್ಮನ್ನು ಸ್ವಾಗತಿಸಿ, ಒಂದು ಕಡೆ ಕುಳ್ಳಿರ ಹೇಳಿ ತಾವೂ ಎದುರಿನ ಸೋಫಾದಲ್ಲಿ ಕುಳಿತುಕೊಂಡರು. ಒಂದು ಬೆತ್ತದ ಪೆಟ್ಟಿಗೆಯಲ್ಲಿ ಬೆಳ್ಳಿಯ ತಟ್ಟೆಯಲ್ಲಿ ಹೂ, ಎರಡು ಕಟ್ಟು ಹೊಂಬಣ್ಣದ ಆರಿಸಿದ ಬುತ್ತಿಚಿಗುರು ವೀಳೆಯದೆಲೆ, ಕಲ್ಲುಸಕ್ಕರೆ, ಬಾದಾಮಿ, ಘಮ್ಮೆನ್ನುವ ಸಂಭಾರ ಬೆರಸಿದ ಅಡಿಕೆಪುಡಿ, ಒಂದು ಡಜನ್ ಒಳ್ಳೆಯ ಕಿತ್ತಲೆಹಣ್ಣು ತೆಗೆದುಕೊಂಡು ಹೋಗಿದ್ದೆವು. ಊದುಬತ್ತಿ ಹೊತ್ತಿಸಿ, ಅದನ್ನು ಅವರಿಗೆ ಅರ್ಪಿಸಿ, ಅವರ ಕೊರಳಿಗೆ ಮಾಲೆ ಹಾಕಿ ನಾಲ್ವರೂ ನಮಸ್ಕಾರ ಮಾಡಿದೆವು... ಆ ಹೂಮಾಲೆಯನ್ನು ಕೊರಳಿಗೆ ಅರ್ಪಿಸಿದಾಗ, ತುರಾಯನ್ನು ಕೈಗೆ ಕೊಟ್ಟಾಗ ಅವರಿಗೆ ನಿಜವಾಗಿ ಸಂತೋಷವಾಗಿರಬೇಕು. 'Beautiful flowers, marvellous flowers, some of the finest I have worn; you have brought me joy, joy!' ಎಂದರು. ಹತ್ತು ಸಲ ಮೂಸಿ ನೋಡಿದರು, ಎರಡು ಸಲ ಕಣ್ಣಿಗೊತ್ತಿಕೊಂಡರು. ನಮ್ಮಲ್ಲಿ ಒಬ್ಬೊಬ್ಬರನ್ನೂ ಅಪ್ಪಿಕೊಂಡರು. ಹತ್ತು ನಿಮಿಷಗಳ ಸಂದರ್ಶನ ನಲವತ್ತೈದು ನಿಮಿಷಗಳಿಗೆ ಬೆಳೆಯಿತು.''

(ಅದೇ, ಪು. ೧೫೨-೫೩)

ಆ ದಿನದ ಅನುಭವವನ್ನು ನೆನಸಿಕೊಂಡು ವಿ.ಸೀ. ಹೇಳುತ್ತಾರೆ :

''ಅಂದು ನಮಗೆ ಹುಡುಗುತನದ ಉತ್ಸಾಹದಲ್ಲಿ ಉಂಟಾದ ಆನಂದ ವಯಸ್ಸು ಕಳೆದ ಹಾಗೆಲ್ಲ ನೆನಪಿನಲ್ಲಿ ಅಚ್ಚಳಿಯದೆ ನಿಂತು ಇಳಿವಯಸ್ಸಿನ, ಯೌವನ ಸೋರಿದ ಈಗಲೂ ಅಂತಹುದಕ್ಕೆ ಋಣಿಯಾಗಿ ಮಾಡಿದೆ. ಭೋಗ, ವಿಲಾಸ, ಸೌಂದರ್ಯ ಇವುಗಳ ಕಲ್ಪನೆಯೇ ವಿದ್ಯಾರ್ಥಿಗಳಿಗೆ ಆಗದೆ ಹೋದರೆ ಬಾಳು ಒಣಗುತ್ತದೆ. ಅದಕ್ಕೆ ಆಗಬೇಕಾದ ಶುಚಿ ಸಂಸ್ಕಾರಗಳಲ್ಲಿ ಕೆಲವದರ ಪರಿಚಯವೇ ಇಲ್ಲದಂತಾಗಿ ಮನಸ್ಸು ಬರಡಾಗುತ್ತದೆ. ಸಾವಿರ ವಿಲಾಸಗಳ ಸೌಭಾಗ್ಯ, ಸವಿ, ಸುವರ್ಣತೆ ಬಾಳಿಗೆ ಪರಿಚಿತವಾಗಿರಬೇಕು.''

(ಅದೇ, ಪು.೧೫೩)

ಅಧ್ಯಯನದ ಮುಂದುವರಿಕೆ ; ಎಂ.ಎ. ಡಿಗ್ರಿ

ಬಿ.ಎ. ಮುಗಿಯಿತು. ಉತ್ತಮ ಅಂಕಗಳೂ ಬಂದಿದ್ದವು. ಮುಂದೆ ಎಂ.ಎ. ಓದುವ ಅವಕಾಶವಿತ್ತು. ಆದರೆ ವಿ.ಸೀ. ಯವರ ತಾಯಿಯ ಮನಸ್ಸಿನಲ್ಲಿ ಮಗ ಇನ್ನೆಷ್ಟು ದಿನ ಹೊರಗಿರುವುದು, ಇನ್ನೊಬ್ಬರು ಹಾಕುವ ಅನ್ನಕ್ಕೆ ಕಾಯುವುದು ಎನ್ನುವ ಸಂಕೋಚ ಮೇಲುಕೈ ಆಗಿತ್ತಂತೆ. ಆದರೆ ಮೈಸೂರಿನಲ್ಲಿ ಆಶ್ರಯವಿತ್ತ ಮನೆಯ ಯಜಮಾನರು 'ಹುಡುಗ ಮುಂದಕ್ಕೆ ಬರಲಿ, ಎಂ.ಎ.

ಮಾಡಿಕೊಂಡು ಆಮೇಲೆ ಬೇಕಾದರೆ ಕೆಲಸಕ್ಕೆ ಸೇರಲಿ' ಎಂದು ವಿ.ಸೀ.ಯವರ ತಾಯಿಗೆ ಹೇಳಿದರಂತೆ. ಈ ಉಪದೇಶವನ್ನು ಮೀರುವಂತಿರಲಿಲ್ಲ. ವಿ.ಸೀ. ಒಪ್ಪಿ ಕೊಂಡರು. ಅದೇ ಸುಮಾರಿಗೆ ವಿದ್ಯಾಗುರುಗಳಾದ ಎನ್.ಎಸ್. ಸುಬ್ಬ ರಾಯರು ರೈಲು ಸ್ಟೇಷನ್ನಿನಲ್ಲಿ ಸಿಕ್ಕಿ, ಚಪ್ಪಾಳೆತಟ್ಟಿ ವಿ.ಸೀ.ಯನ್ನು ಹತ್ತಿರಕ್ಕೆ ಕರೆದು 'ನಿನಗೆ ಅರ್ಥಶಾಸ್ತ್ರದಲ್ಲಿ ಮೆಡಲ್ ಬಂದಿದೆ. ಆದ್ದರಿಂದ ನಿನಗೆ ಮೆರಿಟ್ ವಿದ್ಯಾರ್ಥಿವೇತನ ದೊರೆಯುತ್ತದೆ. ಬಂದು ಕಾಲೆಜು ಸೇರು' ಎಂದು ಹೇಳಿ ಜೇಬಿಗೆ ಕೈ ಹಾಕಿ ಎರಡು ಸವರನ್ ನಾಣ್ಯಗಳನ್ನು ತೆಗೆದು ಕೊಟ್ಟರಂತೆ (ಕಾಲೆಜ್ ದಿನಗಳು, ಪು.೧೬೦). ಇಂಥ ಗುರುಗಳೂ ಉಂಟೆ? ನಮಗಂತೂ ಇದನ್ನು ನಂಬುವುದೇ ಕಷ್ಟವಾಗಿ ಕಾಣುತ್ತದೆ.

ಆಕಸ್ಮಿಕವಾಗಿ ದೊರೆತ ಸವರನ್ನುಗಳನ್ನು ವಿ.ಸೀ. ವಿನಿಯೋಗಿಸಿದ್ದು ಹೀಗೆ: 'ಒಂದು ಸವರನ್ ಮುರಿಸಿ, ಹದಿನೈದು ರೂಪಾಯಿ ಆರಾಣೆ ತೆಗೆದುಕೊಂಡು ಬಂದವನೇ ಸುಮಾರು ಬೆಳಗ್ಗೆ ಹತ್ತು ಗಂಟೆಯ ಸಮಯ ಚಿಕ್ಕಪೇಟೆಯ ಬಾಂಬೆ ಆನಂದ ಭವನ ಹೋಟಲಿಗೆ ಹೋಗಿ ಒಂದು ರವೆ ದೋಸೆ — ಬಾಣಲಿಯಷ್ಟು ಅಗಲವಾಗಿರುತ್ತಿತ್ತು ಆ ಕಾಲದಲ್ಲಿ — ಎರಡು ಜಾಮೂನು ತಿಂದು, ಕಾಫಿ ಕುಡಿದು, ಕಪೂರ್‌ಚಂದ್ ಅಂಗಡಿಗೆ ಹೋಗಿ ಒಂದು ಜೊತೆ ಟ್ವಿಲ್ ಬೆಡ್‌ಷೀಟನ್ನು ಕೊಂಡು ಮಾರ್ಕೆಟ್ಟಿನಲ್ಲಿ ಎರಡು ಸೇಬಿನ ಹಣ್ಣು ಕೊಂಡು ಮನೆಗೆ ಸೇರಿ ತಾಯಿಯ ಕೈಯಲ್ಲಿ ಉಳಿದ ಸವರನ್ ಕೊಟ್ಟೆ'. ಇದು ವಿ.ಸೀ.ಯವರ ಹಣದ ಉಪಯೋಗದ ವೈಖರಿ.

ವಿ.ಸೀ. ಮೈಸೂರಿಗೆ ಹಿಂತಿರುಗಿ ಮಹಾರಾಜ ಕಾಲೆಜು ಸೇರಿದರು. ಅಧ್ಯಯನಕ್ಕೆ ಅರ್ಥಶಾಸ್ತ್ರವನ್ನು ಆರಿಸಿಕೊಂಡರು. ರಾಯರ ಮನೆಯಲ್ಲಿನ ಆತಿಥ್ಯ ಮುಂಚಿನಂತೆಯೇ ಮುಂದುವರಿಯಿತು. ಮನೆಯ ಅಳಿಯನಿಗೂ ದೊರೆಯದಂಥ ಪ್ರೀತ್ಯಾದರಗಳು ತಮಗೆ ಅಲ್ಲಿ ದೊರೆತವೆಂದು ವಿ.ಸೀ. ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ.

ಅರ್ಥಶಾಸ್ತ್ರದಲ್ಲಿ ವಿ.ಸೀ. ತುಂಬ ಪರಿಣತಿ ಪಡೆದರು. ಪರೀಕ್ಷೆಯ ವಿಷಯವಾಗಿ ಅವರಿಗೆ ಯಾವ ಆತಂಕವೂ ಇರಲಿಲ್ಲ. ಎಷ್ಟೇ ಕಠಿಣ ಪ್ರಶ್ನೆಗಳನ್ನು ಕೊಟ್ಟರೂ ಅವೆಲ್ಲವನ್ನೂ ಸಮಾಧಾನಕರವಾಗಿ ಉತ್ತರಿಸಬಲ್ಲ ಶಕ್ತಿ ತನಗಿದೆ ಎಂದು ದೃಢವಾಗಿ ನಂಬಿದ್ದರು.

ಪರೀಕ್ಷೆಯೂ ಬಂತು. ಪರೀಕ್ಷೆಯಲ್ಲಿ ಉತ್ತರಿಸಬೇಕಾದ ಪ್ರಶ್ನೆ Democracy ಕುರಿತದ್ದಂತೆ. ಅದೇ ಕೆಲವು ದಿನಗಳ ಹಿಂದೆ ಓದಿದ್ದ ಕಾರ್ಲೈಲ್‌ನ ''What is it but an aristocracy of scoundrels'' ಎಂಬ ವಾಕ್ಯ ಜ್ಞಾಪಕಕ್ಕೆ ಬಂದು ಅದೇ ಧಾಟಿಯಲ್ಲಿ ಉತ್ತರಿಸಿದರಂತೆ. ಇನ್ನೊಂದು ಪ್ರಶ್ನೆ Thrift ಎನ್ನುವ ವಿಷಯದ್ದು. ವಿ.ಸೀ.ಗೂ thriftಗೂ ಎಂದಿಗೂ ಸಂಬಂಧವಿಲ್ಲ. ಈ ವಿಷಯವಾಗಿ ಅವರು ಉತ್ತರಿಸಬೇಕಾಗಿ ಬಂದದ್ದು ವಿಧಿಯ ವೈಚಿತ್ರ್ಯ!

ಸಿದ್ಧಿ ಸಂಸ್ಕೃತಿಗಳನ್ನು ದೊರಕಿಸಿಕೊಂಡು, ಏನಮ್ಮ ಕೃತಜ್ಞತಾಭಾವದಿಂದ ವಿ.ಸೀ. ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಹೊರಜೀವನದಲ್ಲಿ ಕಾಲಿಟ್ಟರು. ಅವರ ಬಾಳಿನಲ್ಲಿ ಅತಿ ಮುಖ್ಯವಾದ ಮಜಲು ಕಾಲೇಜುರಂಗ. ಅವರ ಉತ್ತಮ ಗುಣಗಳೆಲ್ಲವೂ ರೂಪುಗೊಂಡದ್ದು ಅಲ್ಲಿ. ಬೇರಾರಿಗೂ ದೊರೆಯದ, ಅತ್ಯಂತ ಪ್ರತಿಭಾನ್ವಿತ ವಿದ್ಯಾಗುರುಗಳು ಅವರಿಗೆ ಅಲ್ಲಿ ದೊರೆತಿದ್ದರು. ಅಂಥ ಗುರುಗಳ ಗರಡಿಯಲ್ಲಿ ತರಬೇತಿ ಹೊಂದಿ ವಿ.ಸೀ. ಕಾಲೇಜು ಬಿಟ್ಟು ಹೊರಬಂದರು.

ಅಂದಿನಕಾಲದ ಮೈಸೂರು

ಕಾಲೇಜ್ ದಿನಗಳ ಇತಿಹಾಸವನ್ನು ಮುಗಿಸುವ ಮುನ್ನ ಅಂದಿನ ಮಹಾರಾಜರ ಕಾಲದ ಮೈಸೂರು ನಗರ ಹೇಗಿತ್ತೆನ್ನುವುದರ ಕಲ್ಪನೆ ಮಾಡಿಕೊಳ್ಳಬೇಕು. ಸಕಲರ ಸ್ವಾತಂತ್ರ್ಯದ, ಸಮತೆಯ ಗದ್ಯತೆ ಬಂದು ಈ ನಗರವೂ ಈಗ ಮಿಕ್ಕ ನಗರಗಳಂತೆಯೇ ನಿರಾಕಾರವೂ ನಿರಾನಂದವೂ ಆಗಿರುವುದನ್ನು ಕಂಡು ನಿಟ್ಟುಸಿರು ಬಿಡುತ್ತ ವಿ.ಸೀ. ಹೇಳುತ್ತಾರೆ :

> ''ಆ ಕಾಲದ ರಸ್ತೆಗಳ ಶುಚಿ, ಒಪ್ಪ ; ಅದಕ್ಕೆ ದಿನವೂ ಸಲ್ಲಿಸುತ್ತಿದ್ದ ನೀರ ತಳಿ; ಆಗಿನ ಉಪವನ ವಿಹಾರಗಳ ದಿಟ್ಟ ಸ್ವಚ್ಛತೆ ! ಮೂರು ಕೆರೆಗಳ ದಂಡೆಯಲ್ಲಿನ ಕಲ್ಲುಪೀಠಗಳ ಹಾಸು; ಪ್ರತಿಯೊಂದರ ಹಿಂದೆ, ಪಕ್ಕಗಳಲ್ಲಿ ಮರದ ಜಾಲರಿ ಚೌಕಟ್ಟು, ಅವುಗಳ ಮೇಲೆ ಹಬ್ಬಿಸಿದ ಲಕ್ಕೆ, ಜಾಲಿ, ಸುಗಂಧರಾಜ, ಹಳದಿ ಗಂಟೆಹೂ, ಬಳ್ಳಿ, ಬಾಗ್‌ಗಳಲ್ಲಿ, ಊರ ಹೊರಗೆ ನೈದಿಲೆ, ತಾವರೆ ಕೊಳ ; ಲಲಿತಾದ್ರಿಗೆ ದಾರಿ ಒಡೆಯುವ ಬೆಟ್ಟದ ತಪ್ಪಲಲ್ಲಿ ಕೊಳದ ಸುತ್ತ ಮಲ್ಲಿಗೆ, ಜಾಜಿ, ಪಚ್ಚೆತೆನೆ, ತೋಟ.... ಊರ ರಸ್ತೆಗಳ ಇಕ್ಕಡೆಯ ದೀಪತೋರಣ; ವಿಜಯದಶಮಿ ವರ್ಧಂತಿಗಳಲ್ಲಿ ಪಟ್ಟದ ಆನೆ ಕುದುರೆಗಳ ಮೇಲೆ ಮಹಾರಾಜರ ಹಿಂದೆ ಮುಂದೆ ವೈಭವದ ಮೆರವಣಿಗೆ.... ಸುಸ್ವರವಾದ, ಬಾನೆತ್ತರ ಎಸೆವ ಓಲಗ. ಇವು ಅವಿಸ್ಮರಣೀಯ.....''
>
> *(ಅದೇ, ಪು.೨೪೬-೨೪೭)*

ಇನ್ನೂ ಇದೇ ರೀತಿಯ ಬಗೆ ಬಗೆಯ ನೆನಪುಗಳು : ಎಲೆ ಮಾರುವ ಹೆಣ್ಣುಗಳ ಸರಸ, ಅವರ ಹರಳೋಲೆಯ, ಕೈಕಡಗದ, ಹಸಿರಂಗಿ ಅಥವಾ ಮಕಮಲ್ ಕುಪ್ಪಸದ ಓರಣ ಅಂದಿನ ಹುಡುಗರನ್ನು ಒಲಿಸುತ್ತಿದ್ದುವಂತೆ. ಅಂದಿನ ಗರಡಿ ಮನೆಯ ಉಸ್ತಾದಿಗಳು, ಅವರ ಮಳವಳ್ಳಿ ಚಡಾವು, ಕೊಳ್ಳೆಗಾಲದ ವಸ್ತ್ರ! ಯಾವಲ್ಲಿ ನೋಡಿ, ರಂಗು, ರಂಗು, ರಂಗು ಎಲ್ಲೆಲ್ಲಿಯೂ....

ಎಂಥ ಸುಂದರ ಚಿತ್ರ. ಮತ್ತೆ ಆ ದಿನಗಳನ್ನು ಕಂಡೇವೆ ಎನಿಸುತ್ತದೆ.

ಕಾಲೇಜಿನ ಬಗ್ಗೆ ಅಭಿಮಾನ

ಮೈಸೂರು ವಿಶ್ವವಿದ್ಯಾನಿಲಯ ಹುಟ್ಟಿಕೊಳ್ಳುವುದಕ್ಕೆ ಮುಂಚೆಯೂ ಮಹಾರಾಜ ಕಾಲೇಜು ಇತ್ತು. ಆದರೆ ಹೊಸ ವಿಶ್ವವಿದ್ಯಾನಿಲಯ ಹುಟ್ಟಿಕೊಂಡ ಮೇಲೆ ಕಾಲೇಜಿನ ಸ್ವರೂಪವೇ ಬದಲಾಯಿತು ಎನ್ನುತ್ತಾರೆ ವಿ.ಸೀ.

''ಮಹಾರಾಜ ಕಾಲೇಜು ಮೂಲಭೂತವಾಗಿ ಮಾರ್ಪಟ್ಟಿತೆನ್ನಬಹುದು – ಒಂದು ಕ್ರಾಂತಿಯೇ ಆಯಿತೆಂಬಷ್ಟು ಮಟ್ಟಿಗೆ. ಆ ಕ್ರಾಂತಿಯ ಹರಡು ರೆಕ್ಕೆಗಳ ಮೇಲೆ ಹಾರಿದವರು ನಾವು. ರೆಕ್ಕೆ ಎಲ್ಲಿಗೆ ಒಯ್ದರೆ ಅಲ್ಲಿಗೆ ಹೋದೆವು. ಹೇಗೆ ಒಯ್ದಿತೋ ಹಾಗೆ ಹೋದೆವು. ನಿಜವಾಗಿ ಅದು ಹಕ್ಕಿ ಹಾರು ; ಆವರಣ ಹಾಗೆ, ವ್ಯವಸ್ಥೆ ಹಾಗೆ , ವಿಧಾನ ಹಾಗೆ ; ವಿದ್ಯೆಯ ದಾನ ಹಾಗೆ ; ಓದಿನ ಸಂತೋಷ ಹಾಗೆ. ಒಂದು ಹೊಸ ಉತ್ಸಾಹ – ನವೀಕರಣ ಮೈಸೂರನ್ನು ರೋಮಾಂಚನ ಗೊಳಿಸಿತ್ತು. ಆ ಐದು ವರ್ಷಗಳು ನೆನೆಸಿಕೊಂಡರೆ ಅಂಥ ಆನಂದ ಪ್ರಪಂಚ ಇನ್ನೊಂದಿರಲಾರದು ಎನ್ನಿಸುತ್ತದೆ ಈಗಲೂ.''

ವಿ.ಸೀ.ಯವರ ಗದ್ಯಶೈಲಿಗೆ ಇಲ್ಲಿ ಉದ್ಧರಿಸಿರುವ ವಾಕ್ಯಪುಂಜಗಳು ಉತ್ತಮ ನಿದರ್ಶನ. ಮನಸ್ಸು ಹೇಗೆ ಓಡುತ್ತದೆಯೋ ಭಾಷೆಯೂ ಅದಕ್ಕೆ ವಿಧೇಯವಾಗಿ, ಒಂದಿಷ್ಟೂ ತಡವರಿಸದೆ ಓಡುತ್ತದೆ. ಕಾಲೇಜಿನಲ್ಲಿ ಕಳೆದ ಅಂದಿನ ದಿನಗಳನ್ನು ನೆನಪು ಮಾಡಿಕೊಳ್ಳುತ್ತ ವರ್ಡ್ಸ್‌ವರ್ತ್ ಕವಿಯ Bliss was it in that dawn to be alive, but to be young was very heaven— ಎಂಬ ಸಾಲುಗಳನ್ನು ನೆನೆಸಿಕೊಳ್ಳುತ್ತಾರೆ. ಕವಿ ಅನುಭವಿಸಿದ ಸಾರ್ಥಕತೆ ನಮಗೂ ಕಂಡಿತ್ತು ಎಂದು ಹೇಳಿ ಕಾಲೇಜಿನಲ್ಲಿ ಕಳೆದ ದಿನಗಳ ಕತೆಯನ್ನು ಮುಗಿಸುತ್ತಾರೆ ವಿ.ಸೀ.

ಮುಂಬಯಿ ವಾಸ

ಭಾರತ ದರ್ಶನ

೧೯೨೨ ರಲ್ಲಿ ವಿ.ಸೀ. ಯವರ ಕಾಲೇಜಿನ ಓದು ಮುಗಿಯಿತು. ಅರ್ಥಶಾಸ್ತ್ರ ದಲ್ಲಿ ಎಂ.ಎ. ಪದವೀಧರರಾದರು. ಇನ್ನು ನೌಕರಿಯೊಂದನ್ನು ಹುಡುಕಿ ಸಂಪಾದನೆಗೆ ದಾರಿಮಾಡಿಕೊಳ್ಳಬೇಕು, ಸಾಧ್ಯವಾದರೆ ಲಾ ಕಾಲೆಜಿಗೆ ಸೇರಿ LL.B. ಡಿಗ್ರಿ ಪಡೆಯಬೇಕು ಎಂದುಕೊಂಡು ವಿ.ಸೀ. ಮುಂಬಯಿ ಕುರಿತು ಪ್ರಯಾಣ ಬೆಳಸಿದರು. ತಮ್ಮ ಅಕ್ಕ ಕಾಶಿಯಲ್ಲಿದ್ದುದರಿಂದ, ಆಕೆಯನ್ನು ನೋಡಿ ದಂತಾಗುತ್ತದೆಂದು ಮೊದಲು ಕಲ್ಕತ್ತ ಸೇರಿ, ಅಲ್ಲಿಂದ ಕಾಶಿಗೆ ಹೋಗಿ, ಅಕ್ಕನ ಮನೆಯ ಆತಿಥ್ಯ ಸವಿದು ಆಮೇಲೆ ಮುಂಬಯಿಗೆ ಹೊರಟರು.

ಮೊದಲು ಕೈಗೊಂಡ ಈ ಯಾತ್ರೆಯಿಂದ ತಮ್ಮ ತಾಯಿನಾಡಿನ ಬಗೆಗೆ ಅಭಿಮಾನ ಬೆಳೆಯಿತು. ಅದುವರೆಗೆ ಪಡೆದ ಜ್ಞಾನವೆಲ್ಲ ಪುಸ್ತಕಗಳಿಂದ ಪಡೆದದ್ದು. ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ರಾಜ್ಯಶಾಸ್ತ್ರ ಎಲ್ಲವೂ ಪಾಶ್ಚಿಮಾತ್ಯ ವಿದ್ಯೆಗಳು ; ಇಂಗ್ಲಿಷ್ ಅಮೆರಿಕನ್ ಪ್ರತಿಷ್ಠೆಯವು. ಇವುಗಳ ನಡುವೆ ನಮ್ಮ ಸ್ಥಾನ ಯಾವುದು?- ಎನ್ನುವ ಪ್ರಶ್ನೆ ಮನಸ್ಸಿನಲ್ಲಿ ಮೂಡಿತು. ಭಾರತದ ಒಟ್ಟು ಜೀವನದ ಚಿತ್ರ ಕಲ್ಪಿಸಿಕೊಳ್ಳುವುದಕ್ಕೆ ಮನಸ್ಸು ಹೆಣಗಿತು. 'ಇದೆಲ್ಲ ಭರತ ಖಂಡ, ಇದೆಲ್ಲ ನಮ್ಮದು, ಈ ತಾಯಿನೆಲಸಿನ ಅಂಶ ನಾವು, ಅದರ ಬಾಳು ಬಿಟ್ಟು ನಮಗೆ ಬೇರೆ ಬಾಳಿಲ್ಲ. ಇದರ ಆಗುಹೋಗುಗಳೆಲ್ಲ ಮೈಸೂರಿನ ಒಂದು ಮೂಲೆಯಲ್ಲಿರುವ ವರಿಗೂ ಸಂಬಂಧಿಸಿದ್ದು' ಎನ್ನುವ ಭಾವನೆ ಮನಸ್ಸಿನಲ್ಲಿ ಮೊದಲಬಾರಿಗೆ ಮೊಳೆಯಿತು. ದೇಶ ಇಂಥದು ಎಂದು ತಿಳಿಯಬೇಕಾದರೆ ದೇಶಪರ್ಯಟನೆ ಯಿಂದ ಮಾತ್ರ ಸಾಧ್ಯ ಎನ್ನುವ ಸತ್ಯ ಮನಸ್ಸಿಗೆ ಹೊಳೆಯಿತು.

ಈ ಬಗೆಯ ಭಾವನೆ ಎಳೆತನದಲ್ಲೆ ಮೊಳಕೆಯೊಡೆದಿದ್ದರಿಂದಲೊ ಏನೊ ಮುಂದೆ ಯಾವ ಸಣ್ಣ ಅವಕಾಶ ದೊರೆತರೂ ಅದನ್ನು ಕಳೆದುಕೊಳ್ಳದೆ ವಿ.ಸೀ. ದೇಶವನ್ನೆಲ್ಲ ಸುತ್ತಿದರು. ಕನ್ನಡ ರಾಜ್ಯವಷ್ಟೇ ಅಲ್ಲ, ಇಡೀ ಭಾರತದ ಸಂಚಾರ ಮಾಡಿದರು. ಭರತಖಂಡದ ಮೇಲಿನ ಒಲವನ್ನು ಬೆಳಸಿಕೊಂಡರು.

ವಿ.ಸೀ. ತಮ್ಮ ಜೀವಿತದಲ್ಲಿ ಬಹು ರಾಜ್ಯಗಳನ್ನು ಸುತ್ತಿದರು. ಅಲ್ಲಿನ ಜನಗಳ ನಡೆ ನುಡಿಯನ್ನು ವಿವರವಾಗಿ ಗಮನಿಸಿದರು. ಅವರು ಉಳಿಸಿ ಹೋಗಿರುವ ಶಬ್ದ ಚಿತ್ರಗಳು ತಮ್ಮದೇ ಆದ ವಿಲಕ್ಷಣ ಸೌಂದರ್ಯವನ್ನು ಪಡೆದುಕೊಂಡಿವೆ.

ಮಾದರಿಗಾಗಿ ಕಲ್ಕತ್ತ ನಗರದ ಪರ್ಯಟನ ಕಾಲದಲ್ಲಿ ಅವರು ಕಂಡ ಬಂಗಾಳಿಗಳ ಚಿತ್ರ ಒಂದನ್ನು ಮಾತ್ರ ಕೊಡಬೇಕೆಂದು ಮನಸ್ಸಾಗುತ್ತದೆ. ಆ ಜನದ ವಿವರ ಇದು :

> ''ಚೆಲು, ನಯ, ಚಟುವಟಿಕೆ, ಒಂದು ವಿಚಿತ್ರ ಆಕೃತಿ – ಮುಖಲಕ್ಷಣದಲ್ಲಿ, ಮೂಗಿನ ಮಾಟದಲ್ಲಿ, ಆಗಾಗ ಕಾಣುವ ಹಣೆಯ ಚಪ್ಪಟೆಯಲ್ಲಿ, ಚುಂಗನ್ನು ಮೊಣಕಾಲಿಗೆ ಇಳಿಯಬಿಟ್ಟು ಈಸಾಡುವಂತೆ ಬಿಟ್ಟ ಧೋತ್ರದಲ್ಲಿ; .... ಗೃಹಜೀವನದಲ್ಲಿ ಗಂಡಸರಿಗಿಂತ ಹೆಚ್ಚು ಪ್ರಭಾವ ಹೊಂದಿ ಇರುತ್ತಿದ್ದವರು ಹೆಂಗಸರು :- ರಮ್ಯವಾದ ರೋಮಾಂಚಕಾರಿ ಹೆಸರುಗಳು ಬಂಗಾಳಿಗಳವು. ಇವರ ರಹಸ್ಯಮಯ ಓಡಾಟ, ಸಂತತವಾಗಿ ಯಾವುದೋ ಪಿತೂರಿಯಲ್ಲಿ ನಿರತರೆಂಬಂತಿರುವ ಚಹರೆ, ಮಾತು, ನಡವಳಿಕೆ ಅಲ್ಲಿನವು... ಅವರೆಲ್ಲರೂ ತಿನ್ನುವ ಮೀನಿನ ಆಕಾರ ಅವರ ಚಲಿಸುವ ಕಣ್ಣುಗಳದು. .... ಓದಿನ ಮೂಲಕ ಮಾತ್ರ ಭಾಷೆ ಕಲಿತವರಿಗೆ ಒಂದು ಅಕ್ಷರ ಗೊತ್ತಾಗದಿದ್ದರೂ ತಮ್ಮ ಭಾಷೆಯನ್ನು ಬಹು ಮುದ್ದು ಮುದ್ದಾಗಿ ಮಾತನಾಡುತ್ತ ಸುಳಿವ ಹೆಣ್ಣುಮಕ್ಕಳ ಸರಸ ವಿನೋದ ಆಕರ್ಷಣೀಯ! ಭಾರತ ಸೃಷ್ಟಿಯಲ್ಲಿಯೇ ಆ ಜನ ತಾವೊಂದು ಅತಿ ಸೃಷ್ಟಿ ಎಂಬಂತೆ, ಸಹಜವಾಗಿ ತಾವು ಭಾರತದ ನಾಯಕರೆಂಬಂತೆ ವಿಹರಿಸುವವರು. ಕಲೆಯಲ್ಲಿ, ಶಾಸ್ತ್ರದಲ್ಲಿ, ರಾಜಕೀಯದಲ್ಲಿ, ಜಾಣತನದಲ್ಲಿ ಬಹು ಕಾಲ ಮೊದಲಿಗರಾಗಿ ಮೆರೆಯುತ್ತಿದ್ದವರು.
>
> (ವಿ.ಸೀ. 'ಮುಂಬಯಿ ವಾಸ', ಪು. ೧)

ಇದಕ್ಕೂ ಹೆಚ್ಚು ಸಮರ್ಪಕವಾದ ವರ್ಣನೆಯನ್ನು ಕೊಡಲು ಆಗದೇನೊ ಎನ್ನುವಷ್ಟು ಸಹಜವಾಗಿದೆ ಈ ಚಿತ್ರಣ. ವಿ.ಸೀ.ಯವರ ಗ್ರಹಣಶಕ್ತಿ ಅದ್ಭುತವಾದದ್ದು. ವಿಶ್ಲೇಷಣೆಯೂ ವಿಸ್ಮಯ ಹುಟ್ಟಿಸುವಂಥಾದ್ದು.

ಮುಂಬಯಿಯಲ್ಲಿ ಕಳೆದ ಮಹತ್ತ್ವದ ದಿನಗಳು

ವಿ.ಸೀ. ಮುಂಬಯಿಯಲ್ಲಿದ್ದ ಕಾಲ ಎಂಟು ತಿಂಗಳು ಮಾತ್ರವಾದರೂ ಅದು ಮಹತ್ತ್ವದ ದಿನಗಳಾಗಿ ಪರಿಣಮಿಸಿದವು. ಇಪ್ಪತ್ತೆರಡು ವಯಸ್ಸಿನ ತರುಣನ ಮನಸ್ಸಿನ ಮೇಲೆ ಆ ಮಹಾನಗರದ ಜೀವನ ಎಂಥ ಪ್ರಭಾವ ಬೀರಿತು ಎನ್ನುವುದು ಅವರು ಐವತ್ತು ವರ್ಷಗಳಾದ ಮೇಲೆ ಬರೆದಿಟ್ಟ ಪ್ರವಾಸ ಕಥನದಿಂದ ತಿಳಿಯುತ್ತದೆ. ವಿ.ಸೀ.ಯವರ 'ಮುಂಬಯಿ ವಾಸ: ನೆನಪುಗಳು' (೧೯೭೪) ಎಂಬ ಈ ಪುಸ್ತಕ ಬಹು ಜನರ ಕಣ್ಣಿಗೆ ಬಿದ್ದಂತಿಲ್ಲ. ಈ ಪುಸ್ತಕದ ವಿಮರ್ಶೆಯನ್ನು ನಾನು ಓದಿದ ನೆನಪಿಲ್ಲ. ವಿ.ಸೀ. ಅವರ ಕೃತಿಗಳ ವಿಷಯವಾಗಿ ಬರೆದಿರುವ ಯಾರೂ ಈ ಪುಸ್ತಕದ ಉಲ್ಲೇಖ ಕೂಡ ಮಾಡುವುದಿಲ್ಲ. ಇದಕ್ಕೆ ಕಾರಣ ಪ್ರಾಯಶಃ ಪುಸ್ತಕವನ್ನು ಮುದ್ರಿಸಿರುವ ರೀತಿ ಎಂದು ತೋರುತ್ತದೆ. ಯಾವ ಅಂದಚೆಂದವೂ ಇಲ್ಲದೆ, ತೀರ ಸಾಧಾರಣ ಕಾಗದದ ಮೇಲೆ ಅತಿ ಸಣ್ಣ

ಅಕ್ಷರದಲ್ಲಿ ಮುದ್ರಿತವಾಗಿದೆ ಈ ಪುಸ್ತಕ. ಅದನ್ನು ನೋಡಿದವರು ಯಾರಿಗೂ ಪುಸ್ತಕವನ್ನು ಕೈಗೆತ್ತಿ ಓದಬೇಕೆಂಬ ಮನಸ್ಸು ಬರುವುದಿಲ್ಲ. ಮುದ್ರಣದ ಅಂದ ಚೆಂದಕ್ಕೆ ವಿಶೇಷ ಗಮನಕೊಡುತ್ತಿದ್ದ ವಿ.ಸೀ. ಓದುಗರ ಚಿತ್ತವನ್ನು ಒಂದಿಷ್ಟೂ ಆಕರ್ಷಿಸದ ರೀತಿಯಲ್ಲಿ ಮುದ್ರಿಸಲು ಹೇಗೆ ಅನುಮತಿ ಇತ್ತರೊ !

'ಮುಂಬಯಿ ವಾಸ' ಒಂದು ಅತ್ಯುತ್ತಮ ಪ್ರವಾಸ ಕಥನ. ಈಗ ಎಪ್ಪತ್ತು ವರ್ಷಗಳ ಕಾಲದ ಹಿಂದಿನ ಮುಂಬಯಿ ನಗರದ ಸುಂದರ ಪರಿಚಯ ಇಲ್ಲಿ ದೊರೆಯುತ್ತದೆ. ಇಂಥ ಸೊಗಸಿನ ಬರವಣಿಗೆ ಬೇರೆ ಭಾಷೆಗಳಲ್ಲಿ – ಇಂಗ್ಲಿಷಿನಲ್ಲೂ ಸಹ – ದೊರೆಯುತ್ತದೊ ಇಲ್ಲವೊ ! ಈ ಪುಸ್ತಕವನ್ನು ಇಂಗ್ಲಿಷಿಗೆ ಭಾಷಾಂತರಿಸಿದರೆ ಅದು ಅನೇಕ ಜನರ ಮನಸ್ಸನ್ನು ಸೆಳೆಯುವುದರಲ್ಲಿ ಸಂದೇಹವಿಲ್ಲ.

ಆ ಮುಂಬಯಿ ನಗರವೊ ಎಂಥದ್ದು? ''ಅದು ಪಡುವಲ ರಾಣಿ .... ಉದ್ಯೋಗ, ಕೈಗಾರಿಕೆ, ವ್ಯಾಪಾರ ಕಟ್ಟಿ ಬೆಳಸಿದ ಜೀವನ ಅಲ್ಲಿನದು. ಸಂಪತ್ತಿನ ನಿರ್ಮಾಣ, ಸಂಚಾರ, ವೀರ-ವಿರಸ, ವಿಷ-ಅಮೃತಗಳ ತಾಂಡವರಂಗ ; ಕ್ಷಣ ಐಶ್ವರ್ಯ, ಕ್ಷಣ ಭಿಕಾರಿತನಕ್ಕೆ ಹೆಸರಾದ ಊರು. ಆ ಹುಚ್ಚು ಅಥವಾ ಆ ಮಾದಕತೆ ಇಂದಿನವರೆಗೂ ಈ ನಾಡಿನ ಇನ್ನಾವ ಊರಿನಲ್ಲಿಯೂ ಕಾಣದು.'' *('ಮುಂಬಯಿ ವಾಸ', ಪು.೩)*.

ಈ ವಾಣಿಜ್ಯ ನಗರದಲ್ಲಿನ ಜೀವನದ ಅನೇಕಾನೇಕ ಚಿತ್ರಗಳ ವರ್ಣನೆಯನ್ನು ಈ ಪ್ರವಾಸ ಕಥನದಲ್ಲಿ ಕಾಣಬಹುದು. ಅದನ್ನು ಓದಿಯೇ ಸವಿಯಬೇಕು.

ಉದ್ಯೋಗಕ್ಕಾಗಿ ಅಲೆದಾಟ

ತಮ್ಮ ಹಿರಿಯ ಪ್ರೋತ್ಸಾಹಕರಲ್ಲಿ ಒಬ್ಬರಾದ ಮುಂಬಯಿಯ ವಿ. ಸುಬ್ಬರಾಯರು ಕೊಟ್ಟ ಕೆಲವು ಪರಿಚಯಪತ್ರಗಳು, ಅವರು ಇನ್ನೊಂದು ಕವರಿನಲ್ಲಿಟ್ಟು ಕೊಟ್ಟ ಐವತ್ತು ರೂಪಾಯಿಗಳು, ಇವಿಷ್ಟು ಮಾತ್ರದ ನೆರವು ಪಡೆದು ಒಣ ಧೈರ್ಯದಿಂದ ವಿ.ಸೀ. ಮುಂಬಯಿ ಸೇರಿದ್ದರು. ಎಂಪೈರ್ ಹಿಂದೂ ಹೋಟಲಿನ ಕಿರು ಕೊಠಡಿಯೊಂದರಲ್ಲಿ ಬಿಡಾರ ಹೂಡಿ ದಿನ ಬೆಳಗಾದರೆ ಒಂದೊಂದು ರಸ್ತೆಯಲ್ಲಿನ ಅಂಗಡಿಗಳನ್ನೂ, ಕಚೇರಿಗಳನ್ನೂ, ಬ್ಯಾಂಕ್‌ಗಳನ್ನೂ ಹೊಕ್ಕು, ಕೆಲಸವಿದೆಯೇ ಎಂದು ವಿಚಾರಿಸಿ, ಒಂದೊಂದು ಕಡೆಯೂ ಇಲ್ಲವೆನ್ನಿಸಿಕೊಂಡು, ಮನಸ್ಸಿನ ಕ್ಲೇಶವನ್ನು ಕಡಮೆ ಮಾಡಿಕೊಳ್ಳಲು ಗಂಟೆ ಗಂಟೆಗೂ ಟೀ ಕುಡಿದು, – ಹೀಗೆ ಹಲವಾರು ದಿನಗಳು ಅಲೆದಲೆದು ಬೇಸತ್ತರು.

ಪ್ರತಿಭಾವಂತನಾದ ಯುವಕ, ಎಂ.ಎ. ಡಿಗ್ರಿ ಪಡೆದು ಪ್ರಶಸ್ತಿ ಗಳಿಸಿದವನು, ತನ್ನ ಅಭಿಮಾನವನ್ನು ಒತ್ತಟ್ಟಿಗಿಟ್ಟು ಕಂಡಕಂಡವರ ಬಾಗಿಲು ಕಾಯುತ್ತ, ನೌಕರಿಗಾಗಿ ಅಲೆಯುತ್ತ, ಒಂದು ಕಡೆಯೂ ಉತ್ತೇಜನ ದೊರೆಯದೆ,

ನಿರಾಶನಾಗಿ ಹಿಂತಿರುಗುತ್ತಿದ್ದ ಕರುಣಾಜನಕ ದೃಶ್ಯ ನಮ್ಮೆದುರಿಗೆ ನಿಲ್ಲುತ್ತದೆ. ವಿಧಿ ಇಂಥ ಸ್ಥಿತಿಗೆ ಈ ಯುವಕನನ್ನು ಒಡ್ಡಿತೇ ಎಂದು ಮರುಗುತ್ತೇವೆ.

'ನ್ಯೂ ಕಸ್ಟಮ್ಸ್ ಹೌಸ್'ನಲ್ಲಿ ನೌಕರಿ

ಹಾರ್ನ್‌ಬಿ ರೋಡಿನಲ್ಲಿ ನಡೆದು ಹೋಗುತ್ತಿದ್ದಾಗ ಒಂದು ದಿನ ವಿ.ಸೀ. ಯವರಿಗೆ 'ಕರೆನ್ಸಿ ಆಫೀಸ್' ಎಂಬ ಫಲಕ ಕಂಡಿತು. ಅರ್ಥಶಾಸ್ತ್ರ ಅಧ್ಯಯನದಲ್ಲಿ 'ಕರೆನ್ಸಿ', 'ಫಿನಾನ್ಸ್' ಇವುಗಳ ವಿಷಯ ಕೊಂಚಮಟ್ಟಿಗೆ ತಿಳಿದಿದ್ದರಿಂದ ಈ ಆಫೀಸಿನಲ್ಲಿ ಯಾವುದಾದರೂ ಕೆಲಸ ದೊರಕಬಹುದೆಂಬ ಆಸೆಯಿಂದ ಒಳ ಹೊಕ್ಕರು. ಆದರೆ ಕೆಲಸ ಸಿಕ್ಕಲಿಲ್ಲ. ಹಿಂದಕ್ಕೆ ಬರುತ್ತಿದ್ದಾಗ ಇವರ ಸೋತ ಮುಖವನ್ನು ನೋಡಿದ ಒಬ್ಬಾತ ಹತ್ತಿರಕ್ಕೆ ಕರೆದು, ಪೂರ್ವೋತ್ತರಗಳನ್ನು ವಿಚಾರಿಸಿ, ''ನ್ಯೂ ಕಸ್ಟಮ್ಸ್ ಹೌಸಿಗೆ ಹೋಗಿ. ಅಲ್ಲಿ ಒಂದೆರಡು ಕೆಲಸ ಖಾಲಿಯಿದೆ. ನಿಮಗೆ ಕೆಲಸ ಸಿಕ್ಕರೂ ಸಿಗಬಹುದು'' ಎಂದು ಸೂಚನೆ ಕೊಟ್ಟನಂತೆ.

ಮುಂದೆ ''ನ್ಯೂ ಕಸ್ಟಮ್ಸ್ ಹೌಸ್ '' ಹುಡುಕಿಕೊಂಡು ಹೋಗಿ ಅಲ್ಲಿನ ಮ್ಯಾನೇಜರನ್ನು ಕಂಡರು. ಕೆಲಸ ಖಾಲಿಯಿದೆ ಎನ್ನುವುದು ಖಚಿತವಾಯಿತು. ಮಾರನೆಯ ದಿನ ಬಂದು ಮೇಲಧಿಕಾರಿಯನ್ನು ನೋಡಲು ಆತ ಹೇಳಿದನಂತೆ. ಮೇಲಧಿಕಾರಿ ಬ್ರಿಟಿಷರವನು. ಅವನನ್ನು ಮೆಚ್ಚಿಸುವುದಕ್ಕೆ ಪ್ಯಾಂಟ್ ತೊಟ್ಟು ಹೋಗಬೇಕಾಯಿತು. ಏಳು ರೂಪಾಯಿ ಖರ್ಚು ಮಾಡಿ ಬಿಳಿ ಬಟ್ಟೆಯ ಪ್ಯಾಂಟ್ ಕೊಂಡುಕೊಂಡು, ಇಡೀ ರಾತ್ರಿ ಆ ಪ್ಯಾಂಟನ್ನು ಧರಿಸಿ ರೂಮಿನ ಉದ್ದಕ್ಕೂ ನಡೆದಾಡಿ ರೂಢಿಮಾಡಿಕೊಂಡರಂತೆ ವಿ.ಸೀ. !

ಮಾರನೆಯ ದಿನ ಹನ್ನೊಂದು ಗಂಟೆಗೆ ಸರಿಯಾಗಿ ಬ್ರಿಟಿಷ್ ಐ.ಸಿ.ಎಸ್. ಅಧಿಕಾರಿಯನ್ನು ಕಂಡರು. ಎಂ.ಎ.ಪದವೀಧರರಾದ ವಿ.ಸೀ. ಯವರ ಮಾತನ್ನು ಆಲಿಸಿ ಆತ ತೃಪ್ತಿಪಟ್ಟಂತೆ ಕಾಣುತ್ತದೆ. ಖಾಲಿ ಇದ್ದ ಕೆಲಸವನ್ನು ಅವರಿಗೆ ಕೊಡಲು ಒಪ್ಪಿದ. ಆದರೆ ಎಂ.ಎ. ಪದವೀಧರನಿಗೆ ಕೊಡಲಾಗುವ ಸಂಬಳ ಬರಿಯ ನೂರು ರೂಪಾಯಿ ಎಂದು ಪೇಚಾಡಿದನಂತೆ ! ವಿ.ಸೀ. ಯವರಿಗಾದರೋ ಅಷ್ಟಾದರೂ ಸಿಕ್ಕಿತಲ್ಲ ಎಂಬ ಸಂತೋಷ. ಕೂಡಲೆ ಕೆಲಸಕ್ಕೆ ಸೇರಿಕೊಂಡರು. ಹಕ್ಕಿಯಂತೆ ಹಗುರವಾಯಿತು ದೇಹ ಮನಸ್ಸುಗಳೆರಡೂ.

ಆಫೀಸಿನಲ್ಲಿ ದಿನ ಕಳೆದಂತೆ ವಿ.ಸೀ. ಅವರ ತೂಕ ಹೆಚ್ಚುತ್ತ ಹೋಯಿತು. ಇಂದ–ಗೆ ರಿಜಿಸ್ಟರ್ ಬರೆದು ಬೇಸತ್ತಿದ್ದ ಅವರಿಗೆ ಬೇರೆ ಶಾಖೆಗಳಲ್ಲಿ ಕೆಲಸ ಮಾಡುವ ಅವಕಾಶ ಬಹುಬೇಗ ದೊರೆಯಿತು. ಕೊಟ್ಟ ಕೆಲಸವೆಲ್ಲವನ್ನೂ ಅಚ್ಚುಕಟ್ಟಾಗಿ ಮಾಡುತ್ತಿದ್ದರಾದ್ದರಿಂದ ಒಳ್ಳೆಯ ಹೆಸರನ್ನು ಗಳಿಸಿಕೊಂಡರು.

ಪಾರ್ಸನ್ಸ್ ಮಹನೀಯನ ಉಪಕಾರ

ಆಶ್ಚರ್ಯದ ಸಂಗತಿಯೆಂದರೆ ಇನ್ನೂ ಇಪ್ಪತ್ತೆರಡು ವರ್ಷ ದಾಟದ, ಹೆಚ್ಚಿನ ವ್ಯವಹಾರ ಅನುಭವವಿಲ್ಲದ, ವಿ.ಸೀ. ಪಾರ್ಸನ್ಸ್‌ನಂಥ ಐ.ಸಿ.ಎಸ್.

ಅಧಿಕಾರಿಯ ಮನಸ್ಸನ್ನು ಒಲಿಸಿಕೊಂಡದ್ದು. ಇದು ಆ ಸಣ್ಣ ಇಲಾಖೆಯ ಇತರ ಗುಮಾಸ್ತರು ಅಸೂಯೆಪಡುವಂತೆ ಮಾಡಿತು. ಹಲವಾರು ವರ್ಷಗಳ ಸರ್ವಿಸ್ ಆಗಿದ್ದರೂ ನೂರು ರೂಪಾಯಿ ಸಂಬಳ ಅವರಾರಿಗೂ ದೊರೆತಿರಲಿಲ್ಲ. ಮೇಲಧಿಕಾರಿಯೊಡನೆ ಸಲುಗೆಯಿಂದ ನಡೆದುಕೊಳ್ಳುವುದಂತೂ ದೂರವೇ ಉಳಿದಿತ್ತು. ಹೀಗಿರುವಾಗ ನೆನ್ನೆ ತಾನೆ ಬಂದ ಈ ಮೈಸೂರು ಹುಡುಗ, ಇನ್ನೂ ಮೀಸೆಯೇ ಸರಿಯಾಗಿ ಮೊಳೆಯದವನು, ಮೇಲಧಿಕಾರಿಯ ಮನವನ್ನು ಒಲಿಸಿ ನೂರು ರೂಪಾಯಿ ಸಂಬಳವನ್ನು ಏಕ್‌ದಂ ಗಿಟ್ಟಿಸಿಕೊಂಡುಬಿಟ್ಟನಲ್ಲ, ಸಾಹೇಬನಿಗೆ ಬೇಕಾದವನಾಗಿಬಿಟ್ಟನಲ್ಲ, ಎನ್ನುವ ಹೊಟ್ಟಿಕಿಚ್ಚು ಅವರುಗಳ ಮನಸ್ಸನ್ನು ಕದಡಿತು.

ವಿಶೇಷ ಸಂದರ್ಭ ಒಂದನ್ನು ಇಲ್ಲಿ ಗುರುತಿಸಬೇಕು. ಒಂದು ದಿನ ವಿ.ಸೀ. ಸಾಹೇಬನ ಕೊಠಡಿಗೆ ಕಾಗದಗಳನ್ನು ತೆಗೆದುಕೊಂಡು ಹೋದಾಗ ಅಲ್ಲಿನ ಪುಸ್ತಕದ ಅಲಮಾರಿನಲ್ಲಿ, ಜೆ.ಎಮ್. ಕೇನ್ಸ್‌ನ ಹೊಸ ಪುಸ್ತಕವೊಂದನ್ನು ಕಂಡರಂತೆ. ಕೇನ್ಸ್ ಪ್ರಸಿದ್ಧನಾದ ಅರ್ಥಶಾಸ್ತ್ರಜ್ಞ. ಕೇಂಬ್ರಿಡ್ಜಿನಲ್ಲಿ ತನ್ನ ಗುರುಗಳಾದ ಎನ್.ಎಸ್. ಸುಬ್ಬರಾಯರ ಸಹಪಾಠಿಯಾಗಿದ್ದವನು. ತಮ್ಮ ಮೆಚ್ಚಿನ ಬರಹಗಾರ. ಅವನ ಆ ಹೊಸ ಪುಸ್ತಕವನ್ನು ಓದಬೇಕೆಂಬ ಮನಸ್ಸಾಯಿತಂತೆ. ಭಯ ಸಂಕೋಚಗಳಿಂದ ಆ ಪುಸ್ತಕವನ್ನು ಎರಡು ಮೂರು ದಿನಗಳ ಮಟ್ಟಿಗೆ ಓದಲು ಕೊಡಬೇಕೆಂದು ಆಂಗ್ಲ ಮೇಲಧಿಕಾರಿಯನ್ನು ಕೇಳಿಕೊಂಡರಂತೆ. ಸಾಹೇಬ ತಪ್ಪು ತಿಳಿಯಲಿಲ್ಲ. ಅವನೂ ಕೇನ್ಸ್‌ನ ಅಭಿಮಾನಿಯೇ. ವಿ.ಸೀ.ಗೆ ಪುಸ್ತಕ ವ್ಯಾಸಂಗದ ಮೇಲಿರುವ ಉತ್ಸಾಹ ಕಂಡು ಸಂತೋಷಪಟ್ಟು, ಪುಸ್ತಕವನ್ನು ಓದಲು ಕೊಟ್ಟದ್ದೇ ಅಲ್ಲದೆ - 'You shall have access to the whole library' ಎಂದನಂತೆ. ಹೀಗೆ ಪಾರ್ಸನ್ಸ್ ಮಹನೀಯನ ವಿಶ್ವಾಸ ಗಳಿಸಿಕೊಂಡು, ತಮಗೆ ವಹಿಸಿದ ಕೆಲಸವನ್ನು ದಕ್ಷತೆಯಿಂದಲೂ ಪ್ರಾಮಾಣಿಕತೆಯಿಂದಲೂ ನಿರ್ವಹಿಸುತ್ತ ಎಲ್ಲರಿಗೂ ಅಚ್ಚುಮೆಚ್ಚಿನವರಾಗಿ, ಯಾರನ್ನೂ ಎದುರುಹಾಕಿ ಕೊಳ್ಳದೆ ವಿ.ಸೀ. ಕೆಲಸದಲ್ಲಿ ಮುಂದುವರಿದರು.

ಸ್ನೇಹ ಸೌಭಾಗ್ಯ

ಕಸ್ಟಮ್ಸ್ ಹೌಸಿನಲ್ಲಿ ಕೆಲಸ ದೊರಕಿಸಿಕೊಂಡ ಕಾಲಕ್ಕೆ ಒಂದು ದಿನ ಮುಂಬಯಿಯ ರಸ್ತೆಯಲ್ಲಿ ಅಲೆದಾಡುತ್ತಿದ್ದಾಗ, ಮೈಸೂರಿನವರಾದ ಹಳೆಯ ಗೆಳೆಯರೊಬ್ಬರು ಸಿಕ್ಕರಂತೆ. ವಿ.ಸೀ. ಹೋಟಲೊಂದರಲ್ಲಿ ತಂಗಿದ್ದುದನ್ನು ತಿಳಿದ ಅವರು ಕೂಡಲೆ ಅವರನ್ನು ತಾವಿದ್ದ ಕೊಠಡಿಗೆ ಕರೆದೊಯ್ದರಂತೆ. ಅದೃಷ್ಟ ಎನ್ನುವುದು ಹೀಗೆ ಗುದ್ದಿಕೊಂಡು ಬಂದದ್ದನ್ನು ಕಂಡ ವಿ.ಸೀ. 'ಹಕ್ಕಿಗೊಂದು ನೆಲೆ ಸಿಕ್ಕಿತು' ಎಂದು ಹಿಗ್ಗಿ ಹಾಸಿಗೆ, ಪೆಟ್ಟಿಗೆ, ಛತ್ರಿ ಸಮೇತ ಗಿರಗಾಂನಲ್ಲಿದ್ದ ಸ್ನೇಹಿತನ ಮನೆಗೆ ವರ್ಗವಾದರು.

ವಿ.ಸೀ. ಮುಂಬಯಿಯಲ್ಲಿದ್ದಷ್ಟು ಕಾಲವೂ ಮೂರು ನಾಲ್ಕು ಗೆಳೆಯರು ಒಟ್ಟು ಸೇರಿ ಸರದಿಯ ಮೇಲೆ ಅಡಿಗೆ ಮಾಡಿಕೊಂಡು ಬಹು ಅನ್ಯೋನ್ಯವಾಗಿ ಕಾಲಕಳೆದಂತೆ ಕಾಣುತ್ತದೆ. ಈ ಸಹಜೀವನದ ಸುಂದರ ಚಿತ್ರ 'ಮುಂಬಯಿ ವಾಸ'ದಲ್ಲಿ ನಮಗೆ ದೊರೆಯುತ್ತದೆ. ಹೀಗೆ ಒಟ್ಟಿಗೆ ಕಳೆದ ಕಾಲ ಬಹು ದೊಡ್ಡ ನೆನಪಾಗಿ ವಿ.ಸೀ. ಮನಸ್ಸಿನಲ್ಲಿ ಉಳಿಯಿತು.

'ಶ್ರೀಮಂತ ಸರದಾರ'ನ ಆಸೆ ಆಕಾಂಕ್ಷೆಗಳು

''ನನ್ನ ಆಸೆ ಶ್ರೀಮಂತ ಸರದಾರನದು; ನಸೀಬು ಮಾತ್ರ ದರಿದ್ರನದು'' ಎನ್ನುತ್ತಾರೆ ವಿ.ಸೀ. (*'ಮುಂಬಯಿ ವಾಸ,' ಪು.೪೨*). ಪಾನೀಯಗಳ ಸೇವನೆಯಲ್ಲಿ ಅವರದು ಮೊಗಲ ಬಾದಷಹರ ಅಭಿರುಚಿ. ಬೆರಸಿ ಮಾಡಿಕೊಟ್ಟ ಟೀ ಅವರಿಗೆ ರುಚಿಸದು. ಅವರ ಪ್ರಕಾರ ಟೀ ಸಂಸ್ಕಾರ ಇರುವವರು ಇನ್ನಷ್ಟು ವಿತರಣೆಯ ಪರಿಪಾಠ ಇಟ್ಟುಕೊಳ್ಳಬೇಕಂತೆ. ಟೀಸೆಟ್ಟೇ ಆಗಬೇಕು; ಟೀ ಸೊಪ್ಪಿಗೆ ಮರಳಿಸಿದ ನೀರನ್ನು ತುಂಬಿಸಿರುವ ಕೆಟಲ್ ಇರಲೇಬೇಕು. ಕುಡಿಯುವ ಬಟ್ಟಲು, ಚಮಚ, ಹಾಲಿಗೆ ಸಕ್ಕರೆಗೆ ಬೇರೆ ಪಾತ್ರೆ, ಎಲ್ಲವೂ ಪೋರ್ಸೆಲೈನ್ – ಪಿಂಗಾಣಿಯವು ಎದುರಿಗಿರದಿದ್ದರೆ ಆ ಟೀ ಸುಖಕರವಲ್ಲವಂತೆ!

ಮುಂಬಯಿಯ ಶ್ರೀಮಂತ ಹೋಟಲುಗಳಾದ ತಾಜಮಹಲ್, ಗ್ರೀನ್ಸ್ — ಇವುಗಳೊಂದರಲ್ಲಿ ಕೆಲಸ ಮಾಡುತ್ತಿದ್ದ, ರಿಟೈರ್ ಆಗಿದ್ದ ಮುದುಕನೊಬ್ಬನ ಪರಿಚಯ ಮಾಡಿಕೊಂಡು ಅವನ ಕೈಲಿ ಚಹಾ ಮಾಡಿಸಿಕೊಂಡು ಕುಡಿಯುವ ಅಭ್ಯಾಸ ಬೆಳಸಿಕೊಂಡರು ವಿ.ಸೀ. ಇದೊಂದು ಅವರ ಖಯಾಲಿ, ಎಳೆತನದಿಂದಲೇ ಬಲಿತ ಜಿಹ್ವಾಚಾಪಲ್ಯದ ನಿದರ್ಶನ.

'ಲೋಕದ ಸೌಂದರ್ಯ ಅನಂತ. ಅದನ್ನು ನೋಡುವ ಕಣ್ಣು ನನ್ನದಾಗಿರಲಿ' ಎಂದು ಹಾರೈಸುತ್ತಾರೆ ವಿ.ಸೀ. ಅವಕಾಶ ದೊರೆತಾಗಲೆಲ್ಲ ತಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಊರೆಲ್ಲ ಸುತ್ತಾಡುತ್ತಾರೆ. ಜನರ ಉಡಿಗೆ ತೊಡಿಗೆ, ನಡೆನುಡಿ ಎಲ್ಲವೂ ಅವರನ್ನು ಆಕರ್ಷಿಸುತ್ತವೆ. ಒಂದು ದಿನ ವಿದೇಶದಿಂದ P&O ಹಡಗು ಬಂದರನ್ನು ಪ್ರವೇಶಿಸುವುದನ್ನು ಕಾಣಲು ಹೋಗುತ್ತಾರೆ. ಎಲ್ಲೆಲ್ಲಿಂದಲೋ ಬಂದ, ಯಾರು ಯಾರೋ ಪ್ರಯಾಣಿಕರ ಹಾವಭಾವಗಳನ್ನು ಗಮನಿಸಿದಾಗ ಈ ಸುಭಾಷಿತ ಅವರಿಗೆ ಜ್ಞಾಪಕಕ್ಕೆ ಬರುತ್ತದೆ.

ಕ್ವಚಿದ್ ವೀಣಾನಾದಃ, ಕ್ವಚಿದಪಿ ಚ ಹಾಹೇತಿ ರುದಿತಂ
ಕ್ವಚಿದ್ ರಮ್ಯಾ ರಾಮಾ ಕ್ವಚಿದಪಿ ಜರಾಜರ್ಜರತನುಃ
ಕ್ವಚಿತ್ ವಿದ್ವದ್ಗೋಷ್ಠೀ, ಕ್ವಚಿದಪಿ ಸುರಾಮತ್ತಕಲಹಃ
ನ ಜಾನೇ ಸಂಸಾರಃ ಕಿಂ ಅಮೃತಮಯಃ ಕಿಂ ವಿಷಮಯಃ

''ಲೋಕಜೀವನದ ಸಮಗ್ರ ಸ್ವರೂಪವನ್ನು ಕುರಿತು ಇಂಥ ಮಾತನಾಡ ಬಹುದೆ'' ಎಂದು ಪ್ರಶ್ನಿಸುತ್ತಾರೆ. ಈ ತುಂಬು ವೈವಿಧ್ಯ ವೈಶಾಲ್ಯವಿಲ್ಲದಿದ್ದರೆ ಲೋಕದ ಬದುಕಿಗೆ ರಂಗೆಲ್ಲಿ, ರಂಜನೆಯೆಲ್ಲಿ, ವಿಲಾಸವೆಲ್ಲಿ? 'It takes all sorts to make a world' ಎಂದು ಸಮಾಧಾನ ಪಟ್ಟುಕೊಳ್ಳುತ್ತಾರೆ. ಯುವಕರಾದ ವಿ.ಸೀ. ಅವರಿಗೆ ಅಂದು ನೋಡಿದ್ದೆಲ್ಲ ಚೆಲುವಾಗಿ ಕಂಡಿತು. ನೋವಿಗಿಂತ ಹೆಚ್ಚಾಗಿ ನಲಿವು ಸ್ವಾಗತಗಳನ್ನು ಕಂಡರು. ಪ್ರಿಯರು ಸೇರಿದ ಸಂತೋಷವನ್ನು ಕಂಡರು; ತಾವೂ ಸಂತೋಷಪಟ್ಟರು. ಇಂಥ ದೃಶ್ಯಗಳು ಹಲವಾರು ಈ ಪ್ರವಾಸ ಕಥನದಲ್ಲಿ ದೊರೆಯುತ್ತವೆ. ಒಂದೊಂದೂ ಸ್ವಾರಸ್ಯಕರವಾದದ್ದು, ಮನನಯೋಗ್ಯವಾದದ್ದು.

ಹಣ ಪ್ರಪಂಚದ ಮೇಲಿನ ಆಸಕ್ತಿ

ವಿ.ಸೀ. ಯವರಿಗೆ ಬಹು ದಿನಗಳಿಂದಲೂ ಭಾರತದ ಹಣಕಾಸು ಪದ್ಧತಿ, ವಿನಿಮಯ ದರಗಳನ್ನು ಕುರಿತು ಪುಸ್ತಕ ಬರೆಯಬೇಕೆಂಬ ಆಸೆ ಬಲವಾಗಿತ್ತಂತೆ. ಮುಂಬಯಿಗೆ ಹೋದ ಮೇಲೆ ಅದು ಇನ್ನೂ ಬಲಿಯಿತು. ಕೇನ್ಸ್ ಅವರು ಬರೆದ The Indian Currency, Banking and Finance ಪುಸ್ತಕವನ್ನು ಕಂಡರೆ ಬಹಳ ಮೆಚ್ಚುಗೆ. ಎಂದೆಂದಿಗೂ ಕಣ್ಣಿಗೊತ್ತಿಕೊಂಡು ಓದಬೇಕಾದ ಪುಸ್ತಕ ಅದು ಎನ್ನುತ್ತಾರೆ. ಕೇನ್ಸ್‌ನ ಬುದ್ಧಿಶಕ್ತಿ ಎಂಥ ಜಟಿಲವಾದ ವಿಷಯವನ್ನೂ ವಿಶದವಾಗಿ, ತಿಳಿಯಾಗಿ, ಸ್ಪಷ್ಟವಾಗಿ, ಸಮಗ್ರವಾಗಿ ಪ್ರತಿಪಾದಿಸುವ ಲಕ್ಷಣದ್ದು ಎಂದು ಮೆಚ್ಚಿಕೊಳ್ಳುತ್ತಾರೆ. ವಿಷಯದ ಮೇಲೆ ನಿಂತು ಒಟ್ಟು ಚಿತ್ರವನ್ನು ನೋಡುವ, ಅದನ್ನು ಚಿತ್ರಿಸುವ ಆಸೆ ಅಂದೇ ಅವರ ಮನಸ್ಸನ್ನು ಆವರಿಸಿತ್ತು. ಆದರೆ ಅವರ ಎಷ್ಟೋ ಆಸೆಗಳಂತೆ ಇದೂ ಜಳ್ಳಾಗಿಹೋಯಿತು. 'ಉತ್ಪದ್ಯಂತೆ ವಿಲೀಯಂತೇ ದರಿದ್ರಾಣಾಂ ಮನೋರಥಾಃ ಅಲ್ಲವೆ?' ಎನ್ನುತ್ತಾರೆ ('ಮುಂಬಯಿ ವಾಸ', ಪು.೩೯). ನಾವು ಇಲ್ಲಿ ಗಮನಿಸಬೇಕಾದದ್ದು ಇಪ್ಪತ್ತೆರಡು ವರ್ಷದ ಯುವಕನ ಆಶೋತ್ತರಗಳ ಎತ್ತರವನ್ನು.

ಇದೇ ಸಂದರ್ಭದಲ್ಲಿ ಪುಸ್ತಕ ಓದಿನಿಂದ ಮಾತ್ರ ಗಳಿಸಿದ ಜ್ಞಾನ ಸಾಲದು, ಪ್ರತ್ಯಕ್ಷ ಅನುಭವವೂ ಬೇಕು ಎಂದು ಸೂಚಿಸುತ್ತ ಹೇಳುತ್ತಾರೆ:

> ''ಅರ್ಥಶಾಸ್ತ್ರವನ್ನು, ಯಂತ್ರತಂತ್ರವನ್ನು ವ್ಯಾಸಂಗಮಾಡಬೇಕಾದ ವಿದ್ಯಾರ್ಥಿಗಳು ದೊಡ್ಡ ಯಂತ್ರಾಗಾರಕ್ಕೆ, ಕಾರ್ಖಾನೆ, ಬ್ಯಾಂಕುಗಳಿಗೆ ಹೋಗಿ ನೋಡುವ ಅವಕಾಶಕ್ಕೆ, ಎಷ್ಟೋ ಕಾಲ, ಎಷ್ಟೋ ಜನರ ಮರ್ಜಿ ಕಾಯಬೇಕು. ಆದರಾಯಿತು, ಇಲ್ಲವಾದರಿಲ್ಲ. ಪುಸ್ತಕದ ಓದು, ಗಿಳಿಪಾಠ, ಬಹುಮಟ್ಟಿಗೆ ನಮ್ಮ ವ್ಯಾಸಂಗ; ವಸ್ತುದರ್ಶನ ಶೂನ್ಯ.''
>
> (ವಿ.ಸೀ., 'ಮುಂಬಯಿ ವಾಸ', ಪು.೪೬)

ಈ ಪರಿಸ್ಥಿತಿಯಲ್ಲಿ ಇಂದಿಗೂ ಹೆಚ್ಚಿನ ಪ್ರಗತಿಯಾದಂತಿಲ್ಲ. ನಮ್ಮಲ್ಲಿನ ಬಹುಮಟ್ಟಿನ ಜ್ಞಾನಾರ್ಜನೆ ಗಿಳಿಪಾಠವಾಗಿಯೇ ಉಳಿದಿದೆ. ಪ್ರತ್ಯಕ್ಷ ಅನುಭವ ಏನೇನೂ ಸಾಲದು.

ಮಾನವತೆ, ಸಜ್ಜನಿಕೆಗಳ ಮಹತ್ತ್ವ

ಅಂದಿನ ಕಾಲದ ಬ್ರಿಟಿಷ್ ಮೇಲಧಿಕಾರಿಗಳ ನಡತೆಯನ್ನು ವಿ.ಸೀ. ಬಹು ವಾಗಿ ಮೆಚ್ಚಿಕೊಂಡರು. ಪಾಶ್ಚಾತ್ಯರನ್ನು ಕಂಡರೆ ಅವರಿಗೆ ಎಂದಿನಿಂದಲೂ ಅಭಿ ಮಾನ ಸ್ವಲ್ಪ ಹೆಚ್ಚೆಂದೇ ಹೇಳಬೇಕು. ತಮಗಾಗಿ ದುಡಿಯುತ್ತಿರುವ ನೌಕರ ವರ್ಗವನ್ನು ಈ ಪಾಶ್ಚಾತ್ಯ ಅಧಿಕಾರಿಗಳು ಪ್ರೀತಿ ಆದರಗಳಿಂದ ನೋಡಿಕೊಳ್ಳುತ್ತಿ ದ್ದರಂತೆ. 'ಅವರ ಗುಣ ಉದಾರವಾದದ್ದು, ಉನ್ನತವಾದದ್ದು, ಮಾನವೀಯತೆ ಯಿಂದ ಕೂಡಿದ್ದು' ಎನ್ನುತ್ತಾರೆ. ''ನಮ್ಮವರದೇ ಕರ್ಕಶ ಮಾತು. ಎಂದಿಗೂ ದರ್ಪ ಜಬರ್‌ದಸ್ತ್, ಕಾರ್ಪಣ್ಯ..... ಬ್ರಿಟಿಷ್ ಅಧಿಕಾರಿ ಆಡಿದ ಮಾತು ಅಪ್ಪಣೆ ಎಂದು ಕಾಣುತ್ತಿದ್ದುದೇನೋ ನಿಜ. ಆದರೆ ಅವರು ಕ್ಷಮಿಸಬಲ್ಲರು, ಅರ್ಥ ಮಾಡಿಕೊಳ್ಳಬಲ್ಲರು. ಈ ಬಗೆಯ ಗುಣಗಳನ್ನು ನಮ್ಮ ಕಚೇರಿಗಳಲ್ಲಿ ಮೇಲ್ಪಟ್ಟ ಅಧಿಕಾರಿಗಳು ಏಕೊ ಅನುಕರಿಸಲಿಲ್ಲ. ಅಭ್ಯಾಸ ಮಾಡಲಿಲ್ಲ .... ಎಲ್ಲಕ್ಕಿಂತ ದೊಡ್ಡದು ಮಾನವತೆ, ಸೌಜನ್ಯ. ಮಾನವರ ಹೃದಯ ತೆರೆಯಬೇಕು, ವಿಸ್ತಾರ ವಾಗಬೇಕು. ದೇವತೆಗಳಿಗೆ ಕೊಟ್ಟಿರುವ ಸುಮನಸಃ ಎಂಬ ಹೆಸರಿಲ್ಲದಿದ್ದರೆ ದೇವತ್ವಕ್ಕೆ ಬೆಲೆಯಿಲ್ಲವೆನ್ನಿಸುತ್ತದೆ. ಮಾನವತೆ, ಸಜ್ಜನತೆಗಳಿಂದ ಮಾತ್ರ ಲೋಕ ಉದ್ಧಾರವಾಗುತ್ತದೆ. ಅದಿಲ್ಲವಾದರೆ ಎಷ್ಟು ನ್ಯಾಯ, ನಿಷ್ಠೆ ಇದ್ದರೂ ಬದುಕು ದುರ್ಭರವಾಗಬಲ್ಲದು. ಮಾನವನ ಲೋಪ ದೋಷಗಳನ್ನು ಅರಿಯದವನು ಮಾನವನನ್ನು ಪ್ರೀತಿಸಲಾರ'' ('ಮುಂಬಯಿ ವಾಸ', ಪು.೫೬).

ಮುಂಬಯಿ ನಗರಜೀವನದ ವೈಚಿತ್ರ್ಯ

ಮುಂಬಯಿಯಲ್ಲಿದ್ದದ್ದು ಎಂಟು ತಿಂಗಳು ಮಾತ್ರವಾಗಿದ್ದರೂ ಆ ನಗರ ವನ್ನೆಲ್ಲ ಸಂಚರಿಸಿ, ಅಲ್ಲಿನ ಜೀವನ ವೈಚಿತ್ರ್ಯವನ್ನು ವಿ.ಸೀ. ಅನುಭವ ಮಾಡಿ ಕೊಂಡಿದ್ದರು. ಯಾರೊಬ್ಬರ ಕಣ್ಣಿಗೂ ಬೀಳದೆ, ಬಿದ್ದರೂ ಗುರುತು ಲಕ್ಷ್ಯವಿಲ್ಲದೆ, ಬದುಕು ನಡೆಸಬಹುದಾದ ಊರು ಇದು. 'ಏನಪಮಾನವೊ ಸೋಲೊ ತಲೆ ಮರಸಿಕೊಂಡು ಬದುಕಲು ಅಲ್ಲಿರುವಷ್ಟು ಅವಕಾಶ ಬೇರೆಲ್ಲಿಲ್ಲ' (ಮುಂಬಯಿ ವಾಸ, ಪು.೮೯) ಎನ್ನುತ್ತಾರೆ ಮುಂಬಯಿ ಜೀವನವನ್ನು ಕುರಿತು ವಿ.ಸೀ.

> ''ಕೋಟೆಯಲ್ಲಿನ ಹಾರ್ನ್‌ಬಿ ರೋಡು, ಬ್ಯಾಂಕ್ ಸ್ಟ್ರೀಟ್, ಬ್ಯಾಲರ್ಡ್ ಪಿಯರ್ ದೃಶ್ಯ ಎಲ್ಲಿ! ದಾದರ್, ಭಾಯಿಕಳ, ಠಾಣಾವರೆಗಿನ ಈ ಕಡೆಯ ಮನೆ ಅಂಗಡಿಗಳ ಜೀವನ ಚಿತ್ರಗಳೆಲ್ಲಿ! ಮಲಬಾರ್ ಹಿಲ್ ಪಾಯಿಂಟಿನ ವಿವಿಕ್ತ ಸ್ವರ್ಗದಂತಿರುವ ಪ್ರಪಂಚವೆಲ್ಲಿ! ಈ ಮೂರು ಬಗೆಯ - ಮೂರೇನು ನೂರು! - ನೆಲಸಿನ ಜೀವನ ಮುಂಬಯಿಯದು. ಒಂದಕ್ಕೊಂದು ಮಾನವ ಸಂಪರ್ಕ ಇದ್ದರಿತ್ತು! ಇಲ್ಲದಿದ್ದರಿಲ್ಲ. ಯಾವ

ತರದ್ದು! ಇರುವುದರಲ್ಲಿಯೂ ಆರ್ಥಿಕವಾಗಿ ಸಾಮಾಜಿಕವಾಗಿ ಸಂಪರ್ಕ ವಿಲ್ಲದ ಎಷ್ಟು ಬೇರೆ ಬೇರೆ! ಎಷ್ಟು ವ್ಯತಿರೇಕ, ವಿರುದ್ಧ! ಆದರೂ, ಯಾವುದೋ ಆಸಕ್ತಿಯಿಂದ ಪ್ರಯೋಜನಾಕಾಂಕ್ಷೆಯಿಂದ ಎಲ್ಲ ಜೀವನವೂ ಅಲ್ಲಿಯೂ ದಿನಾ ನೂರು ಸೂತ್ರಗಳಿಗೆ ಒಳಪಟ್ಟು ನಡೆಯುತ್ತದೆ. ಎಲ್ಲೆಲ್ಲಿಗೋ ಹೋಗುತ್ತದೆ; ಏತಕ್ಕೇತಕ್ಕೋ ನಡೆಯುತ್ತದೆ; ಎಲ್ಲಿಂದಲೋ ಧಾವಿಸುತ್ತದೆ. ಹೊರಗಿನ ಬೆಳಕು ಬಿಸಿಲು, ಮೇಲಿನ ಆಕಾಶ ಕಾಣದ, ಕಾಣಲು ಬಯಸದ ವಿಚಿತ್ರ ಜೀವನ ಮನೆಗಳಲ್ಲಿ; ಎಲ್ಲಿ ನೋಡಿದರೂ ಹಿಂಡು ಜನ; ಒಂದಕ್ಕೆ ಇನ್ನೊಂದರ ಪರಿಚಯವಿಲ್ಲ; ಬೇಕಿಲ್ಲ.''

(ಅದೇ, ಪು. ೧೧೭)

ಮುಂಬಯಿ ನಗರ ಜೀವನದ ವಿ.ಸೀ.ಯವರ ವಿಶ್ಲೇಷಣೆ ಇದು. ಎಷ್ಟು ಸಮರ್ಪಕವಾದ ಚಿತ್ರ ಇದು ಎನ್ನುವುದನ್ನು ಆ ನಗರ ಜೀವನದ ಅನುಭವವಿರುವವರು ಬಲ್ಲರು.

ಅನಾರೋಗ್ಯ

ಮುಂಬಯಿಯಲ್ಲಿ ಎಂಟು ತಿಂಗಳು ಕಳೆಯುವ ಹೊತ್ತಿಗೆ ಆರೋಗ್ಯ ಕೆಟ್ಟಿತು. ಮಲೇರಿಯ ಜ್ವರ ಅಂಟಿಕೊಂಡು ದೇಹಶಕ್ತಿ ಕ್ಷೀಣಿಸಿತು. 'ಮುಂಬಯಿಯದೇನು ಬದುಕು? ಅಲ್ಲಿ ನೂರಿನ್ನೂರು ರೂಪಾಯಿ ಗಳಿಕೆ ಏತರ ಸಂಪಾದನೆ? 'ಲಾ' ಕಲಿತು ಏನು ಉಪ್ಪರಿಗೆಗಳನ್ನು ಕಟ್ಟಬಹುದು?' - ಈ ಬಗೆಯ ಯೋಚನೆಗಳು ಮನಸ್ಸನ್ನು ಮುತ್ತಿ ನಿರುತ್ಸಾಹಗೊಳಿಸತೊಡಗಿದವು. ನಿರುತ್ಸಾಹಕ್ಕೆ ಮುಖ್ಯ ಕಾರಣ ಮುಂಬಯಿಯ ನಿಸ್ತೇಜಗೊಳಿಸುವ ಹವ, ಎಡೆಬಿಡದ ಗದ್ದಲ. ಎಷ್ಟು ಶುಚಿಯಾಗಿರಲು ಪ್ರಯತ್ನಪಟ್ಟರೂ ಚಾಲಿನ ಶೌಚಾಲಯಗಳ ವಾಸನೆ, ಅಲ್ಲಿನ ಕೊಳಕು, ರೋಗ ಅಂಟುವುದೆಂಬ ಭೀತಿ, ಮುಂಬಯಿ ಜೀವನದಲ್ಲಿ ಅಸಹ್ಯ ಹುಟ್ಟಿಸಿದವು. ದಿನವೂ ಪೂರಿ, ಮಸಾಲ್ ದೂದುಗಳ ಸೇವನೆಯಿಂದ ನಾಲಿಗೆಯ ರುಚಿಯೂ ಕೆಟ್ಟಿತ್ತು. ನಾಲ್ಕು ದಿನ ಮನೆಯ ಕಡೆ ಹೋಗಿ ಬರೋಣವೆನ್ನಿಸಿತು. ಎಷ್ಟೇ ಶಾಂತಿಯಿಂದಿರಲು ಪ್ರಯತ್ನಿಸಿದರೂ ಮನಸ್ಸಿನಲ್ಲಿ ಅಶಾಂತಿ ಹುಚ್ಚೆದ್ದು ಕುಣಿಯಿತು. ಹೆಚ್ಚು ತಾಳಲಾರದೆ ಮೇಲಿನ ಅಧಿಕಾರಿಗಳಿಗೆ ಒಂದು ಹತ್ತು ದಿನ ರಜ ಕೊಡಬೇಕೆಂದು ಕೇಳಿಕೊಂಡರು. 'ಇನ್ನೂ ಆರು ತಿಂಗಳು ಸರ್ವಿಸು ಕೂಡ ಆಗಿಲ್ಲ. ಈಗಾಗಲೆ ಆರು ದಿನಗಳ ರಜವನ್ನು ತೆಗೆದುಕೊಂಡಿದ್ದೀರಿ. ತೀರ ಅಗತ್ಯವಾದರೆ ಒಂದು ವಾರ ಫರ್ಲೋ ರಜವನ್ನು ಕೊಡಬಹುದು' ಎಂದರಂತೆ ಮೇಲಿನವರು. ವಿ.ಸೀ. ಧೈರ್ಯಮಾಡಿ ರಜ ತೆಗೆದುಕೊಂಡು ಬೆಂಗಳೂರಿಗೆ ಹಿಂದಿರುಗಿದರು.

ಬಿಳಿಚಿಕೊಂಡಿರುವ ವಿ.ಸೀ.ಯವರ ಮುಖವನ್ನು, ನಿತ್ಯ ಜ್ವರದಿಂದ ಪರಿತಪಿಸುತ್ತಿರುವುದನ್ನು ಕಂಡ ವಿ.ಸೀ. ಅವರ ತಾಯಿ ಮತ್ತು ಚಿಕ್ಕಮ್ಮಂದಿರು ಗಾಬರಿಯಾದರು. ಮತ್ತೆ ಮುಂಬಯಿಗೆ ಹಿಂದಿರುಗುವುದು ಬೇಡವೆಂದು ತಡೆಹಾಕಿದರು.

ಕೆಲಸಕ್ಕೆ ರಾಜೀನಾಮೆ

ಬರುತ್ತಿದ್ದ ನೂರು ರೂಪಾಯಿಯ ಸಂಬಳ ಬಿಟ್ಟು, ಓದುತ್ತಿದ್ದ ಲಾ ವ್ಯಾಸಂಗವನ್ನು ತುಂಡರಿಸಿ, ಬೆಂಗಳೂರಿನಲ್ಲಿ ಬಂದು ನಿಲ್ಲುವುದರಿಂದ ಏನು ಮಾಡಿದ ಹಾಗಾಯಿತು ಎಂದುಕೊಂಡು ಮುಂಬಯಿಯ ಆಫೀಸಿಗೆ ಒಂದು ಪ್ರಾರ್ಥನಾಪತ್ರ ಬರೆದು 'ನನಗೆ ಜ್ವರ ಹೆಚ್ಚಾಗಿದೆ. ರಕ್ತ ಕಡಿಮೆಯಾಗಿ ಅನೀಮಿಕ್ ಆಗಿದ್ದೇನೆ. ರಜಾ ಕೊಟ್ಟು ಉಪಕಾರ ಮಾಡಬೇಕು' ಎಂದು ಕೇಳಿಕೊಂಡರು. ಅದಕ್ಕೆ ಸರಕಾರ ರೆಸಿಡೆನ್ಸಿ ಸರ್ಜನರಿಗೆ ಕಾಗದ ಕೊಟ್ಟು ಅವರಲ್ಲಿ ಹೋಗಿ ಪರೀಕ್ಷೆಮಾಡಿಸಿಕೊಂಡು ಒಂದು ಸರ್ಟಿಫಿಕೇಟ್ ಕಳುಹಿಸಿದರೆ ರಜಾ ಕೊಡುವ ವಿಷಯ ಪರ್ಯಾಲೋಚಿಸುವುದಾಗಿ ಉತ್ತರ ಕೊಟ್ಟಿತು.

ಅಷ್ಟು ಹೊತ್ತಿಗೆ ಬಂದಿರುವ ವ್ಯಾಧಿ ಮಲೇರಿಯ ಎನ್ನುವುದು ಖಚಿತವಾಯಿತು. ಅದು ಸುಲಭಕ್ಕೆ ಬಿಟ್ಟು ಹೋಗುವ ಜ್ವರವಲ್ಲ. ವಾಸಿಯಾಗಬೇಕಾದರೆ ಹೆಚ್ಚು ಕಾಲ ಬೇಕಾಗುತ್ತದೆ ಎಂದು ವೈದ್ಯರು ಅಭಿಪ್ರಾಯಪಟ್ಟರು. ಮುಂದೇನು ಮಾಡುವುದು ಎಂದು ಚಿಂತಿಸುತ್ತಿದ್ದಾಗ ಆಗ ಬೆಂಗಳೂರಿನಲ್ಲಿದ್ದ ಟಿ.ಎಸ್. ವೆಂಕಣ್ಣಯ್ಯನವರು — ''ನಾನೂ ಮುಂಬಯಿಯಲ್ಲಿ LL.B. ಹಾಜರಿ ಹಾಕಿದ್ದೇನೆ ; ಇನ್ನೆರಡು ವರ್ಷ ಅಲ್ಲಿದ್ದು, ಅದನ್ನು ಪಾಸು ಮಾಡಿಕೊಂಡು ಬಂದು ನೀವೂ ನಾನೂ ಬೋರ್ಡ್ ಹಾಕಿಕೊಂಡು ನ್ಯಾಯವಾದಿಗಳಾಗಿ ಸಂಪಾದನೆ ಮಾಡಬಹುದಾದ್ದು ಅಷ್ಟರಲ್ಲಿಯೇ ಇದೆ. ಇಲ್ಲಿ ಮಾಡಬೇಕಾದ ಕೆಲಸ ಬೇಕಾದಷ್ಟುಂಟು. ಮುಂಬಯಿಗೆ ಹಿಂತಿರುಗುವ ಯೋಚನೆ ಕಟ್ಟಿಕೊಳ್ಳಬೇಡಿ'' ಎಂದು ಉಪದೇಶಿಸಿದರಂತೆ.

ಜ್ವರದ ತಾಪದಿಂದ ತೊಳಲುತ್ತಿದ್ದ ಹೊತ್ತಿನಲ್ಲಿ ಮನಸ್ಸಿಗೆ ಏನು ತೋರಿತೊ, ವಿ.ಸೀ. ಒಂದು ಕಾಗದವನ್ನು ತೆಗೆದುಕೊಂಡು ''ಖಾಯಿಲೆ ಗುಣವಾಗುವುದಕ್ಕೆ ಎರಡು ಮೂರು ತಿಂಗಳಾದರೂ ಬೇಕಾಗುತ್ತದೆ. ಮುಂಬಯಿಗೆ ಹಿಂತಿರುಗುವ ಯೋಚನೆ ಬಿಟ್ಟಿದ್ದೇನೆ. ಈ ಪತ್ರವನ್ನು ನನ್ನ ರಾಜಿನಾಮೆ ಪತ್ರವೆಂದು ಪರಿಗಣಿಸಿ'' ಎಂದು ಬರೆದು ಕಳುಹಿಸಿಬಿಟ್ಟರು.

ಅಲ್ಲಿಗೆ ಭಾರತ ಸರಕಾರದ ಹಣಕಾಸು ಸಂಸ್ಥೆಯ ಸಂಪರ್ಕ ಕಡಿದು ಹೋಯಿತು. ಅಲ್ಲಿಯೇ ಅವರು ಮುಂದುವರಿದಿದ್ದರೆ, ಅರ್ಥಶಾಸ್ತ್ರದ ಜ್ಞಾನವನ್ನು ಬೆಳಸಿಕೊಂಡು, ಮೇಲಧಿಕಾರಿಗಳ ವಿಶ್ವಾಸವನ್ನು ಗಳಿಸಿದ್ದರೆ, ಉನ್ನತ ಪದವಿಗಳಿಗೆ ಏರಬಹುದಾಗಿತ್ತು. ವಿ.ಸೀ. ಅವರ ಹಣೆಯಲ್ಲಿ ಅಂಥ ಯೋಗ ಬರೆದಿರಲಿಲ್ಲ.

ಕೆಲಸದಿಂದ ಬಿಡುಗಡೆ ಹೊಂದಿದ ಮೇಲೆಯೂ ಮನಸ್ಸಿನಲ್ಲಿ ಕೊರಗೊಂದು ಉಳಿದಿತ್ತು. ಮುಂಬಯಿಯಲ್ಲಿ ತಮಗೆ ಚಾಕರಿ ಕೊಟ್ಟು ವಿಶ್ವಾಸದಿಂದ ನಡೆಸಿಕೊಂಡ ಪಾರ್ಸನ್ಸ್ ಅವರ ನಿರೀಕ್ಷೆಗೆ ತಕ್ಕಂತೆ ತಾನು ಬೆಳೆಯಲಿಲ್ಲವಲ್ಲ ಎನ್ನು

ವುದೇ ಆ ಕೊರಗು. ಅದಕ್ಕೂ ಹೆಚ್ಚಿನದು, ಕೆಲಸ ಬಿಟ್ಟಾಗ ಅವರ ಹೆಸರಿಗೆ ಒಂದು ಕಾಗದವನ್ನೂ ಬರೆಯದೆ ಹೋದೆನಲ್ಲ ಎನ್ನುವುದು. ತಾವು ಮಾಡಿದ್ದು ಸರಿಯಲ್ಲವೆಂಬ ಭಾವನೆ ಅವರನ್ನು ಬಹುಕಾಲ ಕಾಡಿತು. ಮತ್ತೆ ಮತ್ತೆ ನನ್ನಿಂದ ಅಪರಾಧವಾಯಿತು, ಕರ್ತವ್ಯ ಲೋಪವಾಯಿತು, 'ಕ್ಷಂತವ್ಯೋ ಮೇ ಅಪರಾಧಃ' ಎಂದು ಬೇಡಿಕೊಳ್ಳುವುದನ್ನು ಕಾಣುತ್ತೇವೆ. ವಿ.ಸೀ. ಸಂಪನ್ನ ಸತ್ಪುರು. ಕೃತಜ್ಞತಾ ಮನೋಭಾವ ಅವರ ಸ್ವಭಾವೋನ್ನತಿಯನ್ನು ಎತ್ತಿ ತೋರಿಸುತ್ತದೆ.

ಕಚೇರಿಯವರು ವಿ.ಸೀ.ಯವರಿತ್ತ ರಾಜಿನಾಮೆಯನ್ನು ಅಂಗೀಕರಿಸಿದರು. ಅವರಿಗೆ ಸಲ್ಲಬೇಕಾದ ಸಂಬಳದ ಹಣವನ್ನು ಕಳುಹಿಸಿಕೊಟ್ಟರು. ಅದಷ್ಟೇ ಅವರ ಮುಂಬಯಿ ವಾಸದ ಗಳಿಕೆ. ಅದರ ಆಧಾರದ ಮೇಲೆ ಮತ್ತೆ ಮೊದಲಿನಿಂದ ಜೀವನ ಪ್ರಾರಂಭಿಸಬೇಕಾಯಿತು. ಇಲ್ಲಿಗೆ ಮುಂಬಯಿ ವಾಸದ ಪ್ರವಾಸ ಕಥನ ಮುಗಿಯುತ್ತದೆ. 'ತಮಾಮ್ ಶುದ್' ಎಂಬ ಪರ್ಷಿಯನ್ ಉಕ್ತಿಯಿಂದ ಈ ಪ್ರಕರಣಕ್ಕೆ ಕೊನೆಯ ತೆರೆಯನ್ನೆಳೆಯುತ್ತಾರೆ ವಿ.ಸೀ.

ಕನ್ನಡದ ಕರೆ

ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘ

೧೯೧೪ ರ ಸುಮಾರಿಗೆ ಬೆಂಗಳೂರಿನ ಸೆಂಟ್ರಲ್ ಕಾಲೆಜಿನಲ್ಲಿ ಕರ್ನಾಟಕ ಸಂಘವೆಂಬ ಹೆಸರಿನ ಸಂಸ್ಥೆಯೊಂದು ಜನ್ಮ ತಾಳಿತು. ಅದು ಕನ್ನಡ ಸಾಹಿತ್ಯ ಪರಿಷತ್ತಿಗೆ ಪ್ರತಿಸ್ಪರ್ಧಿಯಾಗಿ ಹುಟ್ಟಿರಲಿಲ್ಲ; ಪೂರಕವಾಗಿತ್ತು. ಎರಡೂ ಸಂಸ್ಥೆಗಳ ಅಧ್ಯಕ್ಷರು ಒಬ್ಬರೇ ಆಗಿದ್ದರು. ಯಾವುದೋ ದೊಡ್ಡ ಧೈರ್ಯದಿಂದ, ಸೆಂಟ್ರಲ್ ಕಾಲೆಜಿನ ವಿದ್ಯಾರ್ಥಿಗಳ ಬೆಂಬಲದಿಂದ, ಸಂಘ ಸ್ಥಾಪನೆಯಾಗಿತ್ತು. ಇದಕ್ಕೆ ಕಾರಣರಾದ ಎ.ಆರ್.ಕೃಷ್ಣಶಾಸ್ತ್ರಿಗಳು ಸಂಘದ ಅಂಗವಾಗಿ 'ಪ್ರಬುದ್ಧ ಕರ್ಣಾಟಕ' ಎಂಬ ಪತ್ರಿಕೆಯನ್ನು ಹೊರತರುತ್ತಿದ್ದರು. ಪತ್ರಿಕೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ರಚಿಸಿದ ಪ್ರಬಂಧಗಳೂ, ತಾವೇ ಬರೆದ ಸಂಪಾದಕೀಯಗಳೂ, ಲೇಖನಗಳೂ ಸೇರಿರುತ್ತಿದ್ದವು. ಅರಳೆಪೇಟೆ ಸಂದಿಯೊಂದರಲ್ಲಿ, ಈಗಲೂ ಅಲ್ಲಿಯೇ ಇರುವ, ಬಿ.ಬಿ.ಡಿ. ಪ್ರೆಸ್ಸಿನಲ್ಲಿ ಪತ್ರಿಕೆಯನ್ನು ಮುದ್ರಿಸಲಾಗುತ್ತಿತ್ತು. ಎಸ್.ವಿ.ರಂಗಣ್ಣ, ಸಿ.ಕೆ.ವೆಂಕಟರಾಮಯ್ಯ, ಪಿ.ಕೃಷ್ಣರಾವ್ ಮುಂತಾದ ವಿದ್ಯಾರ್ಥಿಗಳ ಬರಹಗಳು ಆ ಹೊತ್ತಿಗಾಗಲೆ ಪತ್ರಿಕೆಯಲ್ಲಿ ಬೆಳಕು ಕಂಡಿದ್ದವು. ಬಹಳ ಉತ್ಸಾಹದಿಂದ ಕೆಲಸ ನಡೆಯುತ್ತಿತ್ತು.

ಕಾಲೆಜು ದಿನಗಳಲ್ಲಿ ವಿ.ಸೀ.ಯವರ ಮನಸ್ಸು ಅಷ್ಟಾಗಿ ಕನ್ನಡದ ಕಡೆ ಹರಿದಿರಲಿಲ್ಲ. ಅವರ ಕಾಲದ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಬರೆಯಬೇಕೆನ್ನುವ ಚಪಲವೇ ಇಲ್ಲವಾಗಿತ್ತು. ಏನಿದ್ದರೂ ಇಂಗ್ಲಿಷಿನಲ್ಲಿ ಬರೆಯಬೇಕು, ಆಗಲೆ ಹೆಸರು ಪ್ರತಿಷ್ಠೆ ಬೆಳೆಯುವುದು, ಎಂಬ ನಂಬಿಕೆ ಅವರಲ್ಲಿ ಬೇರೂರಿತ್ತು. ಇಂಥ ಭಾವನೆ ಸಡಿಲಗೊಳ್ಳುವಂತೆ ಮಾಡಿ, ಕೆಲವರಾದರೂ ಕನ್ನಡಕ್ಕಾಗಿ ದುಡಿಯುವಂತೆ ಮನವೊಲಿಸಿದವರು ಎ.ಆರ್.ಕೃಷ್ಣಶಾಸ್ತ್ರಿಗಳು. ಕನ್ನಡಿಗರು ಅವರ ಋಣವನ್ನು ಎಂದಿಗೂ ಮರೆಯಬಾರದು.

ಕೃಷ್ಣಶಾಸ್ತ್ರಿಗಳ ಪ್ರೋತ್ಸಾಹ

ಮಹಾರಾಜ ಕಾಲೆಜಿನಲ್ಲಿ ಇನ್ನೂ ವ್ಯಾಸಂಗ ಮುಂದುವರಿಸುತ್ತಿದ್ದ ಕಾಲದಲ್ಲಿಯೇ, ವಿ.ಸೀ.ಯವರಿಗೆ ಆಗ ಮೈಸೂರು ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡುತ್ತಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳ ಪರಿಚಯವಾಗಿತ್ತು. ಚಾಣಾಕ್ಷರಾದ ಅವರು ವಿ.ಸೀ.ಯವರಲ್ಲಿ ಸುಪ್ತವಾಗಿದ್ದ ಪ್ರತಿಭೆಯನ್ನು ಗುರುತಿಸಿದರು, ಕನ್ನಡದಲ್ಲಿ ಬರೆಯಲು ಪ್ರೋತ್ಸಾಹಿಸಿದರು. ''ನೀವು ಕನ್ನಡದಲ್ಲಿ

ಬರೆಯಿರಿ. ನಾನು ನಿಮ್ಮ ಲೇಖನಗಳನ್ನು ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸುತ್ತೇನೆ'' ಎಂದು ಮುಂದೆ ಬಂದರು. ಶಾಸ್ತ್ರಿಯವರು ಹಾಕಿದ ಗಾಳಕ್ಕೆ ಸಿಕ್ಕಿಕೊಳ್ಳದ ಮೀನು ಯಾವುದು? ವಿ.ಸೀ.ಯವರ ಮನಸ್ಸು ಕನ್ನಡದ ಕಡೆ ಒಲಿಯಿತು.

ಚೊಚ್ಚಲ ಬರವಣಿಗೆ

ಹಿಂದೆ, ಮಹಾರಾಜ ಕಾಲೆಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿ ಭಾಸನ ಪ್ರತಿಮಾ ನಾಟಕವನ್ನು ಓದಿ ಮೆಚ್ಚಿಕೊಂಡಿದ್ದರು. ಕನ್ನಡದಲ್ಲೂ ಹೀಗೆ ಅಲಂಕಾರ ಕವಿಸಮಯಗಳಿಂದ ಕೃತಕವಾಗದ ಬರವಣಿಗೆ ಬರಬಾರದೆ ಎಂದು ಹಂಬಲಿಸಿದ್ದರು. ತಿಳಿಯಾದ ಅಡುಮಾತಿನಂತಹ ಭಾಸನ ಶೈಲಿ ಮನಸ್ಸಿಗೆ ತುಂಬ ಹಿಡಿಸಿತ್ತು. ನಾಟಕದ ಎರಡನೆ ಅಂಕದ ಕೊನೆಯಲ್ಲಿ ಬರುವ,

ಸೂರ್ಯ ಇವ ಗತೋ ರಾಮಃ
ಸೂರ್ಯಂ ದಿವಸೇವ ಲಕ್ಷ್ಮಣಾನುಗತಃ।
ಸೂರ್ಯದಿವಸಾವಸಾನೇ
ಛಾಯೇವ ನ ದೃಶ್ಯತಾ ಸೀತಾ॥

ಎಂದು ವರ್ಣಿತವಾಗಿರುವ ಪದ್ಯದಿಂದ ಮೋಹಿತರಾಗಿದ್ದರು. ಅಲ್ಲಿನ ಉಪಮಾನ ಸರಳ ಸುಂದರ, ಅತೀವ ಸಹಜವಾಗಿ ಕಂಡಿತು ಅವರಿಗೆ. ಈ ನಾಟಕದ ಅನುವಾದ 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟಿತವಾಗಿತ್ತು. ತಾವು ಮೆಚ್ಚಿಕೊಂಡಿದ್ದ ಭಾಸನ ಪದ್ಯ ಕಂದ ರೂಪದಲ್ಲಿ ಹೊರಬಿದ್ದಿತ್ತು. ಮುಂಬಯಿಯಲ್ಲಿದ್ದ ವಿ.ಸೀ. ಈ ಅನುವಾದಿಸಿದ ಪದ್ಯ ಓದಿ ಅಸುಖಿಗಳಾದರು. ಕಂದದ ರಚನೆಗಾಗಿ ಸೇರಿಸ ಬೇಕಾದ ಅನಾವಶ್ಯಕವಾದ ಮಾತುಗಳನ್ನು ಕಂಡು ಬೇಸರಪಟ್ಟುಕೊಂಡರು. 'ಅಷ್ಟು ಸುಂದರವಾದ ಪದ್ಯಕ್ಕೆ ಇಷ್ಟು ಕೃತಕವಾದ ಭಾಷಾಂತರವೇಕೆ ? ಮೂಲದ ಸೊಗಸು ಸಂತೋಷ ಕಳೆದುಹೋದರೆ ಉಳಿದುದು ಏನಿದ್ದರೇನು ?' ಎಂದು ಮನಸ್ಸಿಗೆ ನೋವಾಯಿತು.

ತಮ್ಮ ಮನಸ್ಸಿಗೆ ಉಂಟಾದ ನೋವನ್ನು ವ್ಯಕ್ತಪಡಿಸಿ ಪತ್ರಿಕೆಯ ಸಂಪಾದಕರಾಗಿದ್ದ ಕೃಷ್ಣಶಾಸ್ತ್ರಿಗಳಿಗೆ ದೀರ್ಘ ಪತ್ರವೊಂದನ್ನು ಬರೆದರು. ವಿ.ಸೀ. ಯವರ ಈ ಚೊಚ್ಚಲು ಬರವಣಗೆಯನ್ನು ಶಾಸ್ತ್ರಿಗಳು ಮೆಚ್ಚಿದರು. ಅಷ್ಟೇ ಅಲ್ಲದೆ, ಆ ಕಾಗದವನ್ನು ತಮ್ಮ ಕಾವ್ಯಾವಲೋಕನದ ಭಾಗದಲ್ಲಿ ಅಚ್ಚುಮಾಡುವೆನೆಂದು ಹೇಳಿದರು. ಏನು ಕಾರಣವೋ, ವಿ.ಸೀ. ತಮ್ಮ ಲೇಖನವನ್ನು ಪ್ರಕಟಿಸುವುದಕ್ಕೆ ಒಪ್ಪಲಿಲ್ಲ. ತಾವು ಬರೆದ ಕಾಗದವನ್ನು ಅಚ್ಚುಮಾಡಕೂಡದೆಂದೂ, ಮುಂದೆ ಸ್ವತಂತ್ರವಾಗಿ ಬೇರೊಂದು ಲೇಖನವನ್ನು ಬರೆದಾಗ ಅದನ್ನು ಪ್ರಕಟಿಸುವಿರಂತೆ ಎಂದೂ ಉತ್ತರ ಬರೆದು ಜಾರಿಕೊಂಡರು.

ಕೃಷ್ಣಶಾಸ್ತ್ರಿಗಳು ಬಡಪೆಟ್ಟಿಗೆ ಬಿಡುವವರಲ್ಲ. ಮತ್ತೆ ಮತ್ತೆ ಒತ್ತಾಯಿಸುತ್ತ ಹೋದರು. ಕೊನೆಗೂ ತಾವು ಹಿಡಿದ ಹಠವನ್ನು ಸಾಧಿಸಿಯೇಬಿಟ್ಟರು. ಪ್ರಬುದ್ಧ ಕರ್ಣಾಟಕದ ಬರಹಗಾರರ ಪಂಕ್ತಿಯಲ್ಲಿ ವಿ.ಸೀ.ಯವರ ಹೆಸರು ಸೇರಿಕೊಳ್ಳಲು ತಡವಾಗಲಿಲ್ಲ. ಆ ಬೆಳವಣಿಗೆಯನ್ನು ಕಂಡು ವಿ.ಸೀ. ಹೇಳುತ್ತಾರೆ: ''ಕನ್ನಡಕ್ಕೆ ಹೀಗೆ ಯಾವುದೋ ಸ್ನೇಹದ ಸಂಕಲೆಗೆ ಕಟ್ಟಿ, ಮುಂದೆ ಹೇಗೆ ಬೆಳೆಯಿತೊ, ಕುಡಿ ಒಡೆಯಿತೊ, ಬೆಳೆಯಿತೊ, ನನಗೇ ಅಚ್ಚರಿತಂದಿರುವ ಸಂಗತಿ. ದೈವವನ್ನು ಪೂರ್ವಜನ್ಮದ ಕರ್ಮಕ್ಕೆ ಸೇರಿಸಿ ಎಂದು ಸ್ಮೃತಿ ಹೇಳುತ್ತದೆ. ಇದೂ ಒಂದು ಕರ್ಮವಿಶೇಷವೆ ಎನ್ನಲೆ?'' (*'ಮುಂಬಯಿ ವಾಸ'*, ಪು. ೧೩೬)

'ವಿ.ಸೀ.' ನಾಮಕರಣ

ಮುಂದೆ ವಿ.ಸೀ. ಮೈಸೂರು ಸೇರಿದಾಗ, 'ರಣಜಿತ್ ಸಿಂಹನ ಕಥೆಗಳು' ಎಂಬ ಕೋಮಾಂಡೂರು ರಾಮಸ್ವಾಮಿ ಅಯ್ಯಂಗಾರ್ಯರ ಭಾಷಾಂತರವನ್ನು ಅವಲೋಕಿಸಲು ಹೇಳಿ, ತಮ್ಮ ಮೊದಲ ಲೇಖನವನ್ನು ಪ್ರಕಟಿಸಿ, ಬರಹದ ಕೆಳಗೆ ಆರೆ ಇಂಗ್ಲಿಷ್ ಆರೆ ಕನ್ನಡದ ವಿ.ಸೀ. ಎಂಬ ಹೆಸರನ್ನು, ಕೃತಿಯ ಕರ್ತೃವಿನ ಹೆಸರೆಂದು ಸೂಚಿಸಿದ್ದರು ಕೃಷ್ಣಶಾಸ್ತ್ರಿಗಳು. ವಿ.ಸೀ. ಎನ್ನುವ ನಾಮಕರಣ ಬೆಳಕು ಕಂಡಿದ್ದು ಹೀಗೆ. ಈ ನಾಮಕರಣವನ್ನು 'ನನ್ನ ಬಾಳಿನ ಅಖಂಡ (ಸೌ) ದೌರ್ಭಾಗ್ಯ' ಎನ್ನುತ್ತಾರೆ ವಿ.ಸೀ. 'ಈವರೆಗೂ ಮೊದಲಕ್ಷರವನ್ನು 'ವೀ' ಎಂದೇ ಉಚ್ಚಾರ ಮಾಡುವವರುಂಟು. ಇನ್ನೂ ಹಲವಾರು ವಿಕಾರ ರೂಪಗಳಲ್ಲಿ ಈ ಹೆಸರು ಪ್ರಚಾರಗೊಂಡಿದೆ — We see; Victoria Cross, Vice-chancellor, Vicious Colt, We Sey, ವ್ಹಿ.ಸೀ. 'ಅಲ್ಪಾಕ್ಷರ ರಮಣೀಯ' ವಂತೂ ಅಲ್ಲ ಜನ್ಮಕ್ಕೆ ಅಂಟಿತು' ಎನ್ನುತ್ತಾರೆ ಅವರು.

ಹೀಗೆ ವಿ.ಸೀ. ಪ್ರಬುದ್ಧ ಕರ್ಣಾಟಕದ ಮೊದಲ ವರ್ಷಗಳ ಬರಹಗಾರರಲ್ಲಿ ಒಬ್ಬರಾದರು. ಕಾವ್ಯಭಾಗದಲ್ಲಿ, ಕಾವ್ಯಾವಲೋಕನ ಭಾಗದಲ್ಲಿ, ಸಣ್ಣ ಕತೆಗಳ ಭಾಗದಲ್ಲಿ ಅವರ ಬರಹಗಳು ಕಾಣತೊಡಗಿದುವು. ಪ್ರಬುದ್ಧ ಕರ್ಣಾಟಕ ಬೆಳೆದು ಹೆಸರುವಾಸಿಯಾಗುವುದಕ್ಕೆ ಅವರೂ ಕಾರಣರಾದರು. ಪತ್ರಿಕೆಯೊಂದಿಗೆ ತಾವೂ ಬೆಳೆದರು. ಆಗಿನ ಕಾಲದಲ್ಲಿ ಅವರು ಬರೆದ 'ರಾಧೆ', 'ಉದ್ಧಾರ' ಎಂಬ ಕತೆಗಳನ್ನು ಓದಿ ಮರುಳಾಗಿ ಅವನ್ನು ಮೇಲಿಂದ ಮೇಲೆ ಓದುತ್ತಿದ್ದ ನೆನಪು ನನಗೆ ಈಗ ಮರುಕಳಿಸುತ್ತದೆ.

ಕನ್ನಡ ದೊರಕಿಸಿಕೊಟ್ಟ ಸ್ನೇಹ ಸೌಭಾಗ್ಯ

ಕೃಷ್ಣಶಾಸ್ತ್ರಿಯವರ ಮೂಲಕ ವಿ.ಸೀ.ಯವರಿಗೆ ವೆಂಕಣ್ಣಯ್ಯನವರ ಪರಿಚಯವಾಯಿತು. ಕರ್ಣಾಟಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಈ ಸಂಸ್ಥೆಗಳ ಸಂಪರ್ಕವುಂಟಾಯಿತು. ಹಿರಿಯರಾದ ಬೆಳ್ಳಾವೆ ವೆಂಕಟನಾರಣಪ್ಪನವರು,

ಡಿ.ವಿ.ಗುಂಡಪ್ಪನವರು, ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಹತ್ತಿರದವರಾದರು. ತಮ್ಮ ಸಮವಯಸ್ಕರಾದ ಎಂ.ಆರ್. ಶ್ರೀನಿವಾಸಮೂರ್ತಿಯವರ ಗೆಳೆತನವೂ ಲಭಿಸಿತು.

೧೯೨೮ರ ಹೊತ್ತಿಗೆ ಕರ್ನಾಟಕ ಸಂಘದ ವಾರ್ಷಿಕೋತ್ಸವ ಸಂದರ್ಭದಲ್ಲಿ ಪೂಜ್ಯ ಪಂಜೆಯವರ ಪರಿಚಯವಾಯಿತು. ಪ್ರೀತಿ ಗೌರವಗಳು ಬೆಳೆದವು. ಪಂಜೆಯವರನ್ನು ನೆನೆದಾಗಲೆಲ್ಲ ತುಂಬುಬಾಳಿನ ಚಿತ್ರ ಅವರ ಕಣ್ಣಮುಂದೆ ನಿಲ್ಲುತ್ತಿತ್ತು. ಇಂಥವರ ಹುಟ್ಟು ಬದುಕುಗಳಿಂದ ಒಂದು ದೇಶ ಕೃತಾರ್ಥತೆಯನ್ನು ಪಡೆಯುತ್ತದೆ ಎಂದು ಅವರು ಭಾವಿಸಿದ್ದರು. ಈ ಭಾವನೆಗಳೇ ಮುಂದೆ ಅವರಿಂದ, 'ಸ್ವರ್ಗದೊಳಗೀ ಸ್ನೇಹ ದೊರೆವುದೇನು?' ಎನ್ನುವ ಕವನವನ್ನು ಹೊರ ಹೊಮ್ಮಿಸಿದವು.

ಇಪ್ಪತ್ತೆರಡು ವರ್ಷದ ಯುವಕನಿಗೆ ಇಂಥ ಸಾಹಿತ್ಯ ದಿಗ್ಗಜಗಳ ಸಹವಾಸ ಸೌಭಾಗ್ಯ ದೊರೆತು ಬಾಳು ಧನ್ಯತೆಯನ್ನು ಪಡೆಯಿತು. ಕನ್ನಡ ತಾಯಿಯ ಸೇವೆಗೆ ಹಾದಿಮಾಡಿಕೊಟ್ಟಿತು. ಕೃಷ್ಣಶಾಸ್ತ್ರಿ, ವೆಂಕಣ್ಣಯ್ಯ ಇವರಿಬ್ಬರ ಅಭಿಮಾನ ವಿಶ್ವಾಸಗಳು ವಿ.ಸೀ.ಯವರ ಮೇಲೆ ವಿಲಕ್ಷಣ ಪ್ರಭಾವ ಬೀರಿದವು.

ಕೃಷ್ಣಶಾಸ್ತ್ರಿಗಳು ವಿ.ಸೀ. ಅವರನ್ನು ಮೊದಲು ಕನ್ನಡದ ಬರವಣಿಗೆಗೆ ಎಳೆದಿದ್ದರೂ, ಅವರನ್ನು ಕನ್ನಡಕ್ಕೇ ಉಳಿಸಿದ ಮೌನ ನಿಶ್ಶಬ್ದ ಪ್ರಭಾವ ಮಾತ್ರ ವೆಂಕಣ್ಣಯ್ಯನವರದು. ವೆಂಕಣ್ಣಯ್ಯನವರದು 'ಮನುಷ್ಯ ದೇಹವಲ್ಲ; ಒಂದು ಉಸಿರು; ಒಂದು ಜೀವಗುಣ; ಒಂದು ಬೆಳಕು; ಒಂದು ಪರಿಮಳ' ಎಂದಿದ್ದಾರೆ ವಿ.ಸೀ.

ಶಾರದಾವಿಲಾಸ ಹೈಸ್ಕೂಲಿನ ಉಪಾಧ್ಯಾಯ

ಮಹಾರಾಜಾ ಕಾಲೇಜಿನಲ್ಲಿ ಎಂ.ಎ. ಡಿಗ್ರಿಗಾಗಿ ವ್ಯಾಸಂಗಮಾಡುತ್ತಿದ್ದ ಕಾಲದಲ್ಲಿಯೇ ಶಾರದಾವಿಲಾಸ ಹೈಸ್ಕೂಲಿನಲ್ಲಿ ಪಾಠ ಹೇಳುವ ಕಾರ್ಯವನ್ನೂ ನೋಡಿಕೊಳ್ಳುತ್ತಿದ್ದರು ವಿ.ಸೀ. ಆಗ ಹೈಸ್ಕೂಲು ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನ ಮಹಡಿಯ ಮೇಲೆ ಇತ್ತು. ಅಲ್ಲಿ ನಡೆಯುತ್ತಿದ್ದ ಕ್ಲಾಸುಗಳ ನಡುವೆ ಬಿದಿರ ತಡಿಕೆಗಳೇ ಗೋಡೆಗಳು. ಕ್ಲಾಸಿನ ಹುಡುಗರ ಗಲಾಟೆ, ಅಲ್ಲದೆ ಪಕ್ಕದ ಕ್ಲಾಸಿನಲ್ಲಿ ನಡೆಯುತ್ತಿದ್ದ ಪಾಠ, ಇವೆರಡನ್ನೂ ಮುಳುಗಿಸಿ ಪಾಠ ಹೇಳಬೇಕಾಗಿತ್ತೆಂದೂ, ಅದರಿಂದ ತಮ್ಮ ಗಂಟಲು ಬೆಳೆಯಿತೆಂದೂ, ಮುಂದೆ ವೇದಿಕೆಗಳ ಮೇಲೆ ನಿಂತು ಮಾತನಾಡಲು ಅಭ್ಯಾಸ ದೊರೆಯಿತೆಂದೂ ವಿ.ಸೀ. ನೆನೆಸಿಕೊಂಡಿದ್ದಾರೆ.

ಆ ಶಾಲೆಗೆ ಹುಟ್ಟಿಕೊಂಡಂದಿನಿಂದಲೂ ಹಣದ ಅಭಾವವಂತೆ. ತಮ್ಮನ್ನು ತಾವೇ ಹಳಿದುಕೊಳ್ಳುವ ಸ್ವಭಾವದ ವಿ.ಸೀ. 'ನನ್ನ ಸಂಬಂಧದ ಎಲ್ಲ ಸಂಸ್ಥೆಗಳಿಗೂ ಏಕೊ ಹಾಗೆಯೇ ಆಗಿದೆ, ನಾನು ಅವುಗಳನ್ನು ಬಿಟ್ಟಮೇಲೆ ಅವುಗಳ ಸ್ಥಿತಿ

ಉತ್ತಮಪಟ್ಟಿರುವುದುಂಟು' ಎನ್ನುತ್ತಾರೆ. ಉಪಾಧ್ಯಾಯರಿಗೆ ಸಂಬಳ ಐವತ್ತೋ ಎಪ್ಪತ್ತೋ ರೂಪಾಯಿಗಳು. ಹೆಡ್‌ಮಾಸ್ಟರಿಗೆ ಮಾತ್ರ ನೂರು. ಈ ಕಡಮೆ ಸಂಬಳವನ್ನು ಕೊಡಲೂ ಹಣ ಸಾಕಾಗುತ್ತಿರಲಿಲ್ಲವಂತೆ. ಹಣ ಬಂದ ಬಂದ ಹಾಗೆ ಎಲ್ಲರೂ ಹಂಚಿಕೊಳ್ಳುತ್ತಿದ್ದರಂತೆ. ಯಾರಲ್ಲಿಯೂ ವೈಮನಸ್ಯ ಇರುತ್ತಿರಲಿಲ್ಲವಂತೆ.

ಶಾಲೆಯ ಮೇಲ್ವಿಚಾರಣೆಗೆಂದು ಇದ್ದ ಕಮಿಟಿಗೆ ಕಾರ್ಯದರ್ಶಿಗಳಾಗಿ 'ತಾತಯ್ಯ'ನವರೆಂದು ಪ್ರಸಿದ್ಧರಾದ ಎಂ. ವೆಂಕಟಕೃಷ್ಣಯ್ಯನವರಿದ್ದರು. ಅವರು ಮನೆಯ ಹಿರಿಯರಂತೆ ತಮ್ಮೆಲ್ಲರನ್ನೂ ಆದರದಿಂದ ನೋಡಿಕೊಂಡರು ಎಂದು ವಿ.ಸೀ. ನೆನೆಸಿಕೊಳ್ಳುತ್ತಾರೆ. ಕಮಿಟಿಯಲ್ಲಿದ್ದ ಇತರರಲ್ಲಿ ಕೆಲವರು ಭಾಗ್ಯವಂತರು; ಅವರು ಮನಸ್ಸು ಮಾಡಿದ್ದರೆ ಶಾಲೆಯ ಕಷ್ಟವನ್ನು ನೀಗಿಸಬಹುದಾಗಿತ್ತು, ಆದರೆ ಅವರಿಗೆ ಅಂಥ ಮನಸ್ಸನ್ನು ದೇವರು ಕರುಣಿಸಿರಲಿಲ್ಲ; ಆಕ್ಷೇಪಣೆಗಳನ್ನು ಎತ್ತುವುದರಲ್ಲಿ, ಶಿಸ್ತಿನ ವಿಷಯದಲ್ಲಿ ಮಾತ್ರ ಅವರ ಬಾಯಿ ಯಾವಾಗಲೂ ದೊಡ್ಡದಾಗಿರುತ್ತಿತ್ತಂತೆ. ವೆಂಕಟಕೃಷ್ಣಯ್ಯನವರು ಮಾತ್ರ ತಮ್ಮ ಸ್ವಂತ ಹೊಣೆಗಾರಿಕೆಯಿಂದ ಸಾಲವನ್ನೆತ್ತಿಯಾದರೂ ಹಣ ತಂದು ಶಾಲೆಯ ಕೊರತೆಯನ್ನು ಪೂರೈಸುತ್ತಿದ್ದರಂತೆ. ವೆಂಕಟಕೃಷ್ಣಯ್ಯನವರ ಸಾರ್ವಜನಿಕ ಜೀವನಶ್ರದ್ಧೆಯನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ವಿ.ಸೀ.

ಪರೀಕ್ಷೆ ಮುಗಿದ ಮೇಲೆ ೨೦-೨೫ ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಶಾಲೆಗೆ ಧನಸಂಗ್ರಹಕ್ಕಾಗಿ ಊರೂರು ಸುತ್ತಿ ನಾಟಕಗಳನ್ನಾಡುತ್ತಿದ್ದರಂತೆ. ನಾಟಕಗಳಲ್ಲಿ ವಿ.ಸೀ. ಯವರ ಪಾತ್ರ ಸೂತ್ರಧಾರನದು. ಈ ರೀತಿಯೇ ಅಲ್ಲದೆ 'ಎಂಟ್ರೆನ್ಸ್' ಪರೀಕ್ಷೆಯಲ್ಲಿ ಫೇಲಾದ ಹುಡುಗರಿಗೆ ಬೆಳಗಿನ ಹೊತ್ತು ಎರಡು ಎರಡೂವರೆ ಗಂಟೆ ಪಾಠಹೇಳಿ, ಅಂಥವರಿಂದ ಫೀ ಪಡೆದು ಬಂದ ಹಣವನ್ನು ಉಪಾಧ್ಯಾಯರೆಲ್ಲ ಹಂಚಿಕೊಳ್ಳುತ್ತಿದ್ದರಂತೆ. ಈ ರೀತಿಯ ಕಷ್ಟದ ಪರಿಸ್ಥಿತಿಯಲ್ಲಿ ಶಾರದಾವಿಲಾಸ ಹೈಸ್ಕೂಲಿನಲ್ಲಿ ಬೋಧನಕಾರ್ಯ ಮುಂದುವರಿಯಿತು.

ಮುಂಬಯಿಯ ಕರೆನ್ಸಿ ಆಫೀಸಿನ ಕೆಲಸ ಬಿಟ್ಟು ಬೆಂಗಳೂರಿಗೆ ಹಿಂದಿರುಗಿದ ಮೇಲೆ ವಿ.ಸೀ. ಮತ್ತೆ ತಾವು ಹಿಂದೆ ಪಾಠ ಹೇಳುತ್ತಿದ್ದ ಶಾರದಾವಿಲಾಸ ಹೈಸ್ಕೂಲನ್ನು ೧೯೨೪ ರಲ್ಲಿ ಸೇರಿಕೊಂಡರು. ಸುಮಾರು ಆರು ವರ್ಷ ಕಾಲ ಈ ಶಾಲೆಯಲ್ಲಿ ಪಾಠ ಹೇಳಿ ವಿದ್ಯಾರ್ಥಿಗಳ, ಸಹೋದ್ಯೋಗಿಗಳ ವಿಶ್ವಾಸವನ್ನು ಗಳಿಸಿಕೊಂಡರು. ಅಲ್ಲಿ ಕಳೆದ ವರ್ಷಗಳ ಅನುಭವವನ್ನು ವಿವರಿಸುತ್ತ ಹೇಳುತ್ತಾರೆ :

> ''ನನ್ನ ೪೦-೪೫ ವರ್ಷಗಳ ಉಪಾಧ್ಯಾಯ ವೃತ್ತಿಯ ಅನುಭವದಲ್ಲಿ ಆ ಹೈಸ್ಕೂಲು ವಿದ್ಯಾರ್ಥಿಗಳಿಂದ ಸಿಕ್ಕಿದಷ್ಟು ಪ್ರೀತಿ, ಭಕ್ತಿ, ವಿಶ್ವಾಸ, ಸಹಜ ಸೌಜನ್ಯ, ಉದಾರ ನಿರ್ಮಂಚನೆ, ನಿಷ್ಕಪಟತೆ ಬೇರೊಂದು ಕಡೆ ಸಿಕ್ಕಿಲ್ಲವೆನ್ನಿಸುತ್ತದೆ.... ಇವರು ಬ್ರಾಹ್ಮಣ ವಿದ್ಯಾರ್ಥಿಗಳು, ಇವರು ಅಲ್ಲ, ಇವರು ಮುಸಲ್ಮಾನರು ಎಂಬ ವಿವಕ್ಷೆ ವಿದ್ಯಾರ್ಥಿಗಳಲ್ಲಿಯಾಗಲಿ, ಉಪಾ

ಧ್ಯಾಯರಲ್ಲಿಯಾಗಲಿ ಇರಲಿಲ್ಲ. ಸ್ಕೂಲಿಗೆಲ್ಲ ನಾವು ಮೇಷ್ಟರು. ಅವರೆಲ್ಲ ನಮ್ಮ ವಿದ್ಯಾರ್ಥಿಗಳು. ನಮಗೆ ಸಲ್ಲಿಸಿದ ಉದಾರ ಪ್ರೀತಿಯನ್ನು ನಮ್ಮ ಹೃದಯ ಬರೆದಿಟ್ಟುಕೊಂಡಿದೆ.''

ಶಾರದಾವಿಲಾಸ ಹೈಸ್ಕೂಲು ಪಡೆದುಕೊಂಡ ಕೀರ್ತಿಗೆ ವಿ.ಸೀ. ಯವರು ಆ ಎತನದಲ್ಲಿ ಮಾಡಿದ ಸೇವೆಯೂ ಕಾರಣವೆಂದು ಹೇಳಬಹುದು.

ವಿ.ಸೀ. ಇನ್ನೊಂದು ಸಂದರ್ಭದಲ್ಲಿ ಶಾರದಾವಿಲಾಸ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಕಳೆದ ದಿನಗಳನ್ನು ನೆನೆಸಿಕೊಂಡು ಹೇಳುತ್ತಾರೆ :

> ''.... ಸ್ಕೂಲಿನ ವಿದ್ಯಾರ್ಥಿಗಳ ಭಕ್ತಿ ಶ್ರದ್ಧೆ ಅನನ್ಯಸಾಧಾರಣವಾದುದು. ಸ್ಕೂಲೆಂದರೆ, ಉಪಾಧ್ಯಾಯರೆಂದರೆ ಪ್ರಾಣಾರ್ಪಣೆ ಮಾಡಲು ತಯಾರಿದ್ದ ವಿದ್ಯಾರ್ಥಿಗಳ ಸಂಖ್ಯೆ ನಾನು ಅಲ್ಲಿ ಕಂಡಷ್ಟು ನಲವತ್ತು ನಲವತ್ತೈದು ವರ್ಷಗಳ ನನ್ನ ಉಪಾಧ್ಯಾಯ ಜೀವನದಲ್ಲಿ ಬೇರೆಲ್ಲಿಯೂ ಕಂಡಿಲ್ಲ .... ಇಂದಿಗೂ ಶಾರದಾವಿಲಾಸ ಹೈಸ್ಕೂಲಿನ ವಿದ್ಯಾರ್ಥಿಗಳ ಪ್ರೀತಿ, ನಿಷ್ಠೆ ನನ್ನ ಬದುಕಿನ ಒಂದು ದೊಡ್ಡ ಸ್ಫೂರ್ತಿಯೂ ಸಂತೋಷವೂ ಆಗಿ ಉಳಿದಿದೆ.''
>
> *(ವಿ.ಸೀ. ೧೯೮೦, 'ಹಿರಿಯರು ಗೆಳೆಯರು', ಪು.೨೪)*

ಈ ಎಲ್ಲ ಕಾರಣಗಳಿಂದ ಶಾರದಾವಿಲಾಸ ಹೈಸ್ಕೂಲಿನಲ್ಲಿ ಕೆಲಸ ಮಾಡಿದ ಕಾಲವನ್ನು 'ಮಾನವತೆಯ ದೃಷ್ಟಿಯಿಂದ ಚಿನ್ನದ ಕಾಲ' ಎನ್ನುತ್ತಾರೆ.

ಕಾಲೆಜಿನಲ್ಲಿ ಅರ್ಥಶಾಸ್ತ್ರದ ಅಧ್ಯಯನ ಮಾಡುತ್ತಿದ ಕಾಲದಲ್ಲಿ ಅವರಿಗೆ ಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ ಆಲ್‌ಫ್ರೆಡ್ ಮಾರ್ಷಲನ Principles of Economics ಅನ್ನು ಕನ್ನಡಿಸಬೇಕೆಂಬ ಚಪಲ ಹುಟ್ಟಿತು. ಆದರೆ ಅದು ಸಾಧ್ಯವಾಗಲಿಲ್ಲ. ಈಗ ಕೃಷ್ಣಶಾಸ್ತ್ರಿಗಳ 'ನಿಮ್ಮ ಕಾಗದವನ್ನು ಅಚ್ಚು ಮಾಡುತ್ತೇನೆ' ಎಂಬ ಬೆದರಿಕೆ ವಿ.ಸೀ. ಯವರ ಮನಸ್ಸಿನಲ್ಲಿ ಒಂದು ಅಲೆಯನ್ನೇ ಎಬ್ಬಿಸಿತು. ಕೃಷ್ಣಶಾಸ್ತ್ರಿಗಳ ಮತ್ತು ವೆಂಕಣ್ಣಯ್ಯನವರ ಅಭಿಮಾನ ವಿಶ್ವಾಸಗಳು ವಿ.ಸೀ. ಯವರ ಮನಸ್ಸಿನ ಮೇಲೆ ದೊಡ್ಡ ಪ್ರಭಾವ ಬೀರಿ ಅವರನ್ನು ಕನ್ನಡದ ಸೇವೆಗೆ ಸಿದ್ಧಗೊಳಿಸಿದವು.

ವಿಶೇಷ ಪ್ರಭಾವ ಬೀರಿದ ಹಲವು ಕೃತಿಗಳು

ಮುಂಬಯಿಯಲ್ಲಿದ್ದಾಗ ವಿ.ಸೀ. ಯವರ ಕಾವ್ಯವ್ಯಾಸಂಗ ಮುಂದುವರಿಯುತ್ತಲೇ ಹೋಯಿತು. ಗಯಟೆಯ 'ಫೌಸ್ಟ್' ಅಲ್ಲಿದ್ದ The Spirit of the Macrocosmos' ಮುಂತಾದ ಅಲ್ಲಿನ ಗೀತವನ್ನೂ ಮೊದಲ ಭಾಗದಲ್ಲಿ ಪ್ರಚಂಡವಾದ 'ವಾಲ್‌ಪರ್ಜಸ್ ನೈಟ್' ಮುಂತಾದ ಮತ್ತು 'ಫೌಸ್ಟ್'ನ 'ಗ್ರೆಚೆನ್' ಕಡಕಡೆಯ ಭಾಗಗಳನ್ನೂ ಓದಿ ದೊಡ್ಡ ಪ್ರಬೋಧನೆಯಾಗಿತ್ತು. 'ಅತಿಶಯವಾದ ಒಂದು ಪ್ರೇಮ ಪ್ರಭಾವ ಹೇಗೆ ಫೌಸ್ಟನ್ನು ಮೆಫಿಸ್ಟಾಫಿಲಿಸ್ ಕೈಯಿಂದ ಬಿಡುಗಡೆ ಮಾಡಿ ಉದ್ಧಾರ ಮಾಡಬಲ್ಲ ಸತ್ತ್ವವಾಯಿತು' ಎಂಬುದನ್ನು ಪರಿಚಯ ಮಾಡಿಕೊಂಡರು.

''ಗೆರ್ಹಾರ್ಟ್ ಹೌಪ್‌ಮಾನ್ ಅವರ 'ಸಂಕನ್ ಬೆಲ್' ಎಂಬುದೂ, ಇಬ್ಸನ್ ಬರೆದ ಬ್ರಾಂಡ್, ಪೇರ್ ಫ್ಯೆಂಟ್ ಎರಡೂ ನಾಟಕಗಳು 'ವಿಶಿಷ್ಟ ರೀತಿಯ ದೊಡ್ಡ ಜೀವನದಲ್ಲಿ ನಿಜವಾದ ಪ್ರೇಮ ಹೇಗೆ ಕಾರ್ಯ ಮಾಡಬಲ್ಲದು ಎಂಬ ಅರಿವನ್ನು ಬೆಳೆಸಿವೆ. ''ಗಯಟೆಯವರ ಫೌಸ್ಟ್ ಓದಿದ ಕೂಡಲೆ ಪುನಃ ಮಾರ್ಲೊ ಬರೆದ 'ಡಾ. ಫೌಸ್ಟಸ್' ಓದಿದೆ. ಆವರಣ ಬೇರೆ; ಆಕಾಂಕ್ಷೆ ಬೇರೆ. ಈ ಮನಸ್ಸೆಲ್ಲಿ, ಅದೆಲ್ಲಿ? ಒಳಗೆ ಪ್ರತಿಫಲಿಸಿರುವ ಪ್ರಪಂಚ ಗಳು ಬೇರೆ. ಆದರೂ ಅದೇ ಸುಮಾರು ಕಾಲದಲ್ಲಿ ಓದಿದ್ದ 'ಪ್ರೊಮಿಥಿಯಸ್ ಅನ್ ಬೌಂಡ್' ಎಂಬ ಷೆಲ್ಲಿ ಕವಿಯ ಉದಾರ ವಾಣಿಯೊಂದು ಪ್ರೊಮಿಥಿ ಯಸ್ ಪಾತ್ರದ ಸ್ಫೂರ್ತಿಯನ್ನು ಕೊಟ್ಟಿತ್ತು. ಆ ಮುಂಚೆ ಕಾಲೇಜಿನಲ್ಲಿರು ವಾಗಲೆ ಓದಿದ್ದ ಬ್ರೌನಿಂಗ್ ಕವಿಯ 'ಪ್ಯಾರಸೆಲ್ಸಸ್' - ಕವನವೆನ್ನಲೆ - ನಾಟಕವೆನ್ನಲೆ? - ಧೀಶಕ್ತಿಯ (intellect) ತೋಳಲ್ಲಿ ಮೃತಿಹೊಂದಿಸಿದ ಪ್ರೇಮವನ್ನು (love) ಕುರಿತು Are we not halves of a dissevered world? ಎಂದು ಕಾಣಿಸಿದ ಕಲಿಕೆ ಇನ್ನೊಂದು ಮಹಾವ್ಯಕ್ತಿಯ ಚಾರಿತ್ರ್ಯ ವನ್ನೂ ದೃಷ್ಟಿಯನ್ನೂ ಮನಸ್ಸಿನ ಮೇಲೆ ಮುದ್ರೆಯೊತ್ತಿತ್ತು .... ಶಾರದಾ ವಿಲಾಸ ಹೈಸ್ಕೂಲಿನಲ್ಲಿ ಯಾವುದೋ ಪರೀಕ್ಷೆಯ ಸಮಯಗಳಲ್ಲಿ ದಿನಕ್ಕೆ ೨-೩ ಗಂಟೆ ಹುಡುಗರ ಮೇಲೆ ಗಸ್ತು ತಿರುಗುತ್ತಿರುವಾಗ International Library of Famous Literature ಎಂಬ ಗ್ರಂಥಮಾಲೆ, ಅನೇಕ ಯೂರೋಪಿನ ಮತ್ತು ಇತರ ದೇಶಗಳ ದೊಡ್ಡದೊಡ್ಡ ವಿಮರ್ಶಕರ ಆರಂಭ ಲೇಖನಗಳನ್ನು ಓದಿ ಅವರ ವಿಮರ್ಶನ ಪದ್ಧತಿಗೆ ಮನಸ್ಸು ಮರುಳಾಗಿ, ನಮ್ಮಲ್ಲಿ ಇಂಥ ಸಾಹಿತ್ಯವಿಮರ್ಶೆ ಏಕೊ ಬೆಳೆಯಲಿಲ್ಲವಲ್ಲ ಎಂದು ಒಂದು ಮೂಕಭಾವವಿತ್ತು.... ಪ್ರೊಮಿಥಿಯಸ್, ಪ್ಯಾರಸೆಲ್ಸಸ್, ಫೌಸ್ಟ್, ನಿಬು ಲಿಂಗೆನ್ ಲೈಡ್ - ಈ ಸುತ್ತ ಬೆಳೆದಿರುವ ಪ್ರಪಂಚದ ಪರಿಚಯ ನಮ್ಮ ಜನಕ್ಕೆ ಮಾಡಿಕೊಟ್ಟರೆ ನಮಗೆ ಪರಿಚಿತವಾಗದಿದ್ದ ಒಂದು ಜೀವನರೀತಿ ಹೊಸದಾಗಿ ಅರಿವಾದೀತು ಎನ್ನಿಸುತ್ತಿತ್ತು. ಅವು ಯಾವುವೂ ಶಕ್ಯವಾಗದೆ ನನ್ನ ಜೀವನದ ಒಂದು ವಿಫಲತೆಯನ್ನು ಕಾಣಿಸಿದೆ.''

('ಮುಂಬಯಿ ವಾಸ', ಪು. ೧೪೦)

ವಿ.ಸೀ. ಏನನ್ನು ಸಾಧಿಸಿದರು ಎನ್ನುವುದು ಅಷ್ಟು ಮುಖ್ಯವಲ್ಲ. ತರುಣರಾಗಿದ್ದಾಗಲೇ ಅವರ ಆಶೋತ್ತರಗಳು ಎಷ್ಟು ಉನ್ನತಮಟ್ಟದವಾಗಿದ್ದವು ಎನ್ನುವುದನ್ನು ಗಮನಿಸಬೇಕು. 'ಧಾರುಣಿಯ ನಡಿಗೆಯಲಿ ಮೇರುವಿನ ಗುರಿ ಯಿರಲಿ, ಮೇರುವನು ಮರೆತಂದೆ ನಾರಕಕೆ ದಾರಿ' ಎನ್ನುವ ಮಂಕುತಿಮ್ಮನ ಉಪ ದೇಶ ಜ್ಞಾಪಕಕ್ಕೆ ಬರುತ್ತದೆ. ಕನ್ನಡ ಜನತೆ ಉತ್ತೇಜನವನ್ನು ಕೊಟ್ಟಿದ್ದರೆ ವಿ.ಸೀ. ಏನೇನನ್ನು ಸಾಧಿಸುತ್ತಿದ್ದರೋ ಹೇಳಬಲ್ಲವರಾರು? ತಮ್ಮ ಆಸೆ ಆಕಾಂಕ್ಷೆಗಳು ಅಂದು ಏನೇನಿದ್ದವು ಎಂದು ವಿವರಿಸುತ್ತ ಇನ್ನೊಂದು ಕಡೆ ಹೇಳುತ್ತಾರೆ:

''ಇದೇ ಕಾಲದಲ್ಲಿಯೇ ಮೊದಲೆಲ್ಲೊ ಒಂದು ಸಂಗ್ರಹಿಸಿದ ರೂಪದಲ್ಲಿ ಓದಿದ್ದ ಸರ್ ಜೇಮ್ಸ್ ಫ್ರೇಸರ್ ಅವರ The Golden Bough ಎಂಬ ಪುಸ್ತಕ ಎರಡುಮೂರು ಭಾಗಗಳನ್ನು ಓದಲಾಯಿತು. ಮಾನವ

ಜನಾಂಗಗಳ ಪ್ರಾಚೀನ ನಂಬಿಕೆ, ಅಭ್ಯಾಸ, ನೀತಿ, ಸಾಮಾಜಿಕ ಸಂಬಂಧಗಳು - ಅದರಲ್ಲಿ ಗಂಡು ಹೆಣ್ಣುಗಳ ಸಂಬಂಧ, ದೇವರ ಕಲ್ಪನೆ ಮುಂತಾದ ಹಲವಾರು ಸುಮಾರು ಎಷ್ಟು ಹತ್ತಿರದಲ್ಲಿ ಹೋಲುತ್ತವೆ, ಸಂಸ್ಕೃತಿ, ಧರ್ಮ ಎಂಬ ಯಾವ ಯಾವುವು ಬೇರೆ ಬೇರೆ ದೇಶಗಳಲ್ಲಿ ಬೆಳೆದಿವೆಯೊ ಅವಕ್ಕೆ ಸಂಬಂಧಿಸಿದಂತೆ ಆಚಾರ ವ್ಯವಹಾರಗಳನ್ನು ನಾವು ತುಲನಾತ್ಮಕವಾಗಿ ಅಭ್ಯಾಸ ಮಾಡಿದ ಹೊರತು ಆ ಬಗೆಗೆ ಉದಾರ ನೀತಿ ಬೆಳೆಯುವುದು ಶಕ್ಯವಿಲ್ಲವೆಂಬ ಅರಿವಾಯಿತು. ಅಲ್ಲಿಂದೀಚಿಗೆ ಮಾಲಿನೊವ್‌ಸ್ಕಿ, ಮಾರ್ಗರೆಟ್ ಮೀಡ್, ಪಿಟ್ ರಿವರ್ಸ್ ಮುಂತಾದವರೆಲ್ಲರೂ ಲೋಕದ ಬೇರೆ ಬೇರೆ ಭಾಗಗಳ ಸಮಾಜ ವಿಜ್ಞಾನವನ್ನು, Cultural Anthropology ಮತ್ತು Comparative Religion ಗಳಿಗೆ ಆಧಾರವಾದ ಗ್ರಂಥಗಳನ್ನು ಬರೆದಿದ್ದಾರೆ. ಆ ಬಗೆಗೆ ನಮ್ಮ ವಿಶ್ವವಿದ್ಯಾನಿಲಯವಾಗಲಿ, ತಿಳಿದವರೆಂಬ ಜನವಾಗಲಿ ಯಾವ ಬಗೆಯ ಓಲನ್ನೂ ಪಡೆದಿಲ್ಲ, ಇದು ಎಷ್ಟು ಅಗತ್ಯ ಎನ್ನುವುದು ಮನಸ್ಸಿಗೆ ಬಂದಿತು. ಬರಿಯ ಕಲ್ಪನೆಗಳು! ಎಷ್ಟನ್ನು ಒಬ್ಬನು ಮಾಡುವುದು ಶಕ್ಯ?''

(ಅದೇ, ಪು. ೧೪೦)

ವಿ.ಸೀ.ಯವರ ವ್ಯಾಸಂಗದ ವ್ಯಾಪ್ತಿ ಎಷ್ಟು ವಿಶಾಲವಾಗಿತ್ತೆಂಬುದು ಇಲ್ಲಿ ಉದ್ಧರಿಸಿರುವ ವಾಕ್ಯಗಳಿಂದ ತಿಳಿಯುತ್ತದೆ. ಪಡೆದುಕೊಂಡ ತಿಳಿವನ್ನು, ಇತರರಿಗೆ, ತಮ್ಮವರೇ ಆದ ಕನ್ನಡಿಗರಲ್ಲಿ ಹಂಚಿಕೊಳ್ಳಬೇಕೆಂಬ ಅವರ ಮಹದಾಸೆ ಎಷ್ಟು ಬಲವಾಗಿತ್ತೆನ್ನುವುದೂ ತಿಳಿಯುತ್ತದೆ. ಆ ತಿಳಿವನ್ನು ಕನ್ನಡಕ್ಕೆ ಇಳಿಸುವ ಶಕ್ತಿಯೂ ಅವರಿಗಿತ್ತು.

ಮದುವೆ : ದಾಂಪತ್ಯ ಜೀವನ

ಮಡದಿ ಸರೋಜಮ್ಮನವರು

ಶಾರದಾವಿಲಾಸ ಹೈಸ್ಕೂಲಿನಲ್ಲಿ ಇನ್ನೂ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದಾಗ, ೨೬ನೇ ವಯಸ್ಸಿನಲ್ಲಿ ವಿಜಯಪುರದ ಸರೋಜಮ್ಮನವರೊಡನೆ ವಿ.ಸೀ. ಮದುವೆಯಾಯಿತು. ಮದುವೆಯ ಸಮಾರಂಭದಲ್ಲಿ ಹಿತೈಷಿಗಳಾದ ಕೃಷ್ಣಶಾಸ್ತ್ರಿಗಳೂ, ಶ್ರೀನಿವಾಸಮೂರ್ತಿಗಳೂ, ವೆಂಕಣ್ಣಯ್ಯನವರೂ ಹಾಜರಿದ್ದರಂತೆ. ತಮ್ಮನ್ನು ತಾವೇ ಹಳಿದುಕೊಳ್ಳುವ ಪ್ರವೃತ್ತಿಯ ವಿ.ಸೀ. ಹಲವಾರು ಸಲ ತಮ್ಮ ಸಣಕಲುತನವನ್ನೂ, ಎತ್ತರ ಗಾತ್ರವಿಲ್ಲದ ಆಕಾರವನ್ನೂ ಪ್ರಸ್ತಾಪಿಸುತ್ತಾರೆ. ಮದುವೆಯ ಸಂದರ್ಭದಲ್ಲಿ ಹಳ್ಳಿಯಲ್ಲಿ ನಡೆದ ಮದುವೆಯ ಮೆರವಣಿಗೆಯನ್ನು ಒಂದು ಸಂದರ್ಭದಲ್ಲಿ ಚಿತ್ರಿಸುತ್ತ ಅವರು ಹೇಳಿರುವುದು ಹೀಗೆ — ''ಹಳ್ಳಿಯ ಮೆರವಣಿಗೆಯಲ್ಲಿ (ನನ್ನನ್ನು) ನೋಡಿದವರು ಇದು ಯಾವುದೊ ಹಳೆಯ ಮುದಿ; ಇಂಥ ಮನೆಯ ಹೆಣ್ಣನ್ನು ಯಾವುದೋ ಎರಡನೆಯ ಮದುವೆಗೆ ಕೊಟ್ಟುಬಿಟ್ಟರು'' — ಹೀಗೆಂದು ಊರವರು ಮಾತನಾಡಿಕೊಂಡರಂತೆ (ವಿ.ಸೀ., 'ಕಾಲೆಜ್ ದಿನಗಳು', ಪು.೧೮೬). ಹೀಗಂದುಕೊಂಡದ್ದು ಎಷ್ಟರ ಮಟ್ಟಿಗೆ ನಿಜವೋ ನಮಗೆ ತಿಳಿಯದು. ತಮ್ಮನ್ನು ತಾವೇ ಹೀಯಾಳಿಸಿಕೊಂಡು ಸಂಭ್ರಮ ಪಡುವುದು ವಿ.ಸೀ.ಯವರ ಸ್ವಭಾವವಾಗಿ ಕಾಣುತ್ತದೆ.

ಬೆಳ್ಳಾವೆ ವೆಂಕಟನಾರಣಪ್ಪನವರ ಹರಕೆ

ವಿ.ಸೀ.ಯವರ ಮದುವೆಗೆ ಸಂಬಂಧಿಸಿದ ಇನ್ನೊಂದು ಪ್ರಸಂಗವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಬೆಳ್ಳಾವೆ ವೆಂಕಟನಾರಣಪ್ಪನವರು ವಿ.ಸೀ. ಯವರನ್ನು ಬಲ್ಲ ಹಿರಿಯರು. ತಮಗೆ ಚೆನ್ನಾಗಿ ತಿಳಿದವರ ಮನೆಗಳಲ್ಲಿ ಮದುವೆ ಮುಂಜಿಗಳಾದರೆ ಲಗ್ನದ ಹೊತ್ತಿಗೆ ಹೋಗಿ ಮದುಮಕ್ಕಳಿಗೆ ಆಶೀರ್ವಾದ ಮಾಡಿಬರುತ್ತಿದ್ದುದು ಅವರು ಹಿಂದಿನಿಂದ ಬೆಳೆಸಿಕೊಂಡು ಬಂದಿದ್ದ ಸಂಪ್ರದಾಯ. ಆದರೆ ವಿ.ಸೀ.ಯವರ ಲಗ್ನದ ಸಮಯಕ್ಕೆ ಹೋಗುವುದು ಸಾಧ್ಯವಾಗಿರಲಿಲ್ಲ. ಮದುವೆಯಾಗಿ ಬೆಂಗಳೂರಿಗೆ ಹಿಂದಿರುಗಿದ ಮೇಲೆ ಒಂದು ದಿನ ವಿ.ಸೀ.ಯವರ ಮನೆಗೆ ಬಂದು – ''ಎಲ್ಲಪ್ಪ ನಿಮ್ಮ ಕುಟುಂಬವನ್ನು ಕರೀರಿ'' ಎಂದರಂತೆ. ಮದುಮಕ್ಕಳಿಬ್ಬರೂ ಬಂದು ಅವರ ಕಾಲಿಗೆರಗಿದಾಗ 'ಮಂತ್ಯಾಕ್ಷತೆ ತೆಗೆದುಕೊಂಡು ಬನ್ನಿ' ಎಂದು, ಯಾವುದೋ ಆಶೀರ್ವಚನವನ್ನು ಮೆಲ್ಲನೆ ಹೇಳಿ ಹರಸಿದರಂತೆ. ಅಷ್ಟೇ ಅಲ್ಲದೆ ನಾಚಿಕೊಂಡು ನಿಂತಿದ್ದ ಹೆಣ್ಣು ಮಗಳನ್ನು ಹತ್ತಿರಕ್ಕೆ

ಕರೆದು— ''ಅಮ್ಮ ! ಈ ಮನುಷ್ಯನ ಮನೆಗೆ ಬಂದಿದ್ದೀರಿ. ಸಂತೋಷ . ಈತ ತುಂಬ ಸಾಧು. ಅವನನ್ನು ನೋಡಿಕೊಂಡು ಸಂತೋಷವಾಗಿ ಸಂಸಾರಮಾಡ ಬೇಕಮ್ಮ'' ಎಂದರಂತೆ. ಈ ಸಂದರ್ಭವನ್ನು ನೆನೆಸಿಕೊಂಡು ವಿ.ಸೀ. ಹೇಳಿರುವ ಮಾತುಗಳಿವು :

> ''ಅವರ ಹರಕೆಯಿಂದಾಗಿ ನಮ್ಮ ಬದುಕು ನೇರ್ಪುಗೊಂಡಿದೆ ಯೆಂದು ನಂಬಿದ್ದೇನೆ. 'ಸಾಧು' ಎಂಬ ಮಾತು ಹೇಗೊ ಏನೊ; ಅವರ ಆ ಮಾತು ಮನಸ್ಸಿನಲ್ಲಿ ಮೊದಲಿನಿಂದಲೂ ನಿಂತು, ಆ ಮಾತಿಗೆ ತಕ್ಕ ಹಾಗಾದರೂ ಬದುಕನ್ನು ತಿದ್ದಿಕೊಳ್ಳಬೇಕು; ಅಷ್ಟು ದೊಡ್ಡವರ ಎಣಿಕೆಗೆ ತೂಗುವಂತೆ, ನಿಲ್ಲುವಂತೆ ನನ್ನ ಜೀವ ಸಂಸ್ಕಾರಗೊಳ್ಳಬೇಡವೆ ಎನ್ನಿಸಿ ನನ್ನನ್ನು ಕಾಪಾಡಿದರು.''
>
> (ವಿ.ಸೀ., 'ಹಿರಿಯರು ಗೆಳೆಯರು', ಪು. ೧೮೯)

ಸೊಗಸಿನ ದಿನಗಳ ನೆನಪು

ವಿ.ಸೀ. ತಮ್ಮ ದಾಂಪತ್ಯದ ಸೊಗಸಿನ ದಿನಗಳನ್ನು ಎಲ್ಲಿಯೂ ಹೇಳಿ ಕೊಂಡಿಲ್ಲವಾದರೂ ಅವುಗಳ ಛಾಯೆ ಅವರ ಕೆಲವೊಂದು ಕವನಗಳಲ್ಲಿ ಎದ್ದು ಕಾಣುತ್ತದೆ.

'ಸೆಳೆ' ಎಂಬ ಕವನದಲ್ಲಿ ಹೇಳುತ್ತಾರೆ :

ಯಾವ ಜನ್ಮದ ಕೆಳೆಯೊ ಕಾಣೆನು
ಕಂಡಕೂಡಲೆ ಒಲಿಸಿತು
ಕಣ್ಗೆ ರೂಪವು ಇಳಿವ ಮುನ್ನವೆ ಎದೆಗೆ ಪ್ರೇಮವು ಹರಿಯಿತು.

(ವಿ.ಸೀ. ಸಂಪದ, ಸ್ನೇಹ-ವಿಶ್ವಾಸ, 'ಸೆಳೆ', ಪು.೧೫೨)

ಕವಿ ಪುಟ್ಟಪ್ಪನವರ ಮದುವೆಯ ಸಂದರ್ಭದಲ್ಲಿ ಉಡುಗೊರೆಯಾಗಿ ವಿ.ಸೀ. ಬರೆದುಕೊಟ್ಟ 'ಸಪ್ತಪದಿ'ಯ ಈ ಸಾಲುಗಳನ್ನು ಗಮನಿಸಬೇಕು.

ಯಾರೋ ಎಲ್ಲೋ ಇದ್ದವರಿಬ್ಬರ
ತಂದರು ಸತಿಪತಿ ಗೈದಿಹರು
ಹೋಮವ ಹುಯ್ಯಿಸಿ ಹರಕೆಯನಿಕ್ಕುತೆ
ದಂಪತಿಗಳು ನೀವೆಂದಿಹರು.

ಮನಗಳನರಿಯೆವು ನಡೆಗಳ ಕಾಣೆವು
ಹಿರಿಯರ ಬಯಕೆಗೆ ಬಾಗಿಹೆವು
ಮುಂದಿನ ಬಾಳಿನ ಪಯಣದಲಿಬ್ಬರು
ತೆರಳುತೆ ದಾರಿಯ ನಡೆಯುವೆವು.

(ಅದೇ, 'ಸಪ್ತಪದಿ', ಪು.೧೮೫-೧೮೬)

ಮುಂದೆ ಒಬ್ಬರಿಗೊಬ್ಬರು ಹೊಂದಿಕೊಂಡು ಬಾಳು ಸಾಗಿಸಿದರು.

ಒಬ್ಬರ ಗುಣಕಿನ್ನೊಬ್ಬರು ಸೋಲುತೆ
ಕುಂದನು ಲೆಕ್ಕಿಸದಿದ್ದೇವು.
ಕುಂದಿಗೆ ಕೊರತೆಗೆ ಕೆರಳದ ತೆರದಲಿ
ದಿನವೂ ಸಹನೆಯ ಕಲಿತೇವು. (ಸಪ್ತಪದಿ)

ಬಹುಜನರ ಅನುಭವವು ಇದೇ ಆದರೂ ಎಷ್ಟು ಸುಲಭದ, ತಿಳಿಗನ್ನಡದ, ಹೃದಯಸ್ಪರ್ಶಿ ಮಾತುಗಳಲ್ಲಿ ತಮ್ಮ ದಾಂಪತ್ಯಜೀವನವನ್ನು ಕವಿವಾಣಿಯಲ್ಲಿ ವಿ. ಸೀ. ಚಿತ್ರಿಸಿದ್ದಾರೆ.

ಸರೋಜಮ್ಮನವರು ಐವತ್ತು ವರ್ಷಕಾಲ ಗಂಡನ ಬಾಳಿನ ಸುಖದುಃಖಗಳಲ್ಲಿ ಸಮಭಾಗಿಯಾಗಿ ಸಂಸಾರ ನಡೆಸಿದರು, ಕವಿಯ ಜೀವನಕ್ಕೆ ಒಂದು ನೆಲೆಯನ್ನು, ಭದ್ರತೆಯನ್ನು ಒದಗಿಸಿದರು. ದಾಂಪತ್ಯ ಜೀವನದ ಫಲವಾಗಿ ನಾಲ್ವರು (ಕೃಷ್ಣಮೂರ್ತಿ, ರಾಮಮೂರ್ತಿ, ಸತ್ಯನಾರಾಯಣ, ಮುರಳೀಧರ) ಗಂಡುಮಕ್ಕಳೂ, ಮೂವರು (ಕಮಲಾ, ಸುನಂದಾ, ಉಷಾ) ಹೆಣ್ಣುಮಕ್ಕಳೂ ಹುಟ್ಟಿ ಮನೆಯನ್ನು ಬೆಳಗಿದರು.

ಸಂಸಾರದ ಸುಖದ ದಿನಗಳು ಪ್ರಾರಂಭವಾದವು. ಆ ಕಾಲದ ಒಂದೆರಡು ಕವನಗಳನ್ನಾದರೂ ಉದ್ಧರಿಸಬೇಕೆನ್ನಿಸುತ್ತದೆ. ಮೆಚ್ಚಿದ ಮಡದಿಯ ಕಾಲುಂಗುರ ರವವನ್ನು, ಕೈಬಳೆಗಳ ಮೆಲ್ಲುಲಿಯನ್ನು ಕೇಳಿ ಪುಳಕಿತನಾಗದ ಜವ್ವನಿಗನುಂಟೆ! ಆ ಉಲಿಗಳು ಜೀವನದುದ್ದಕ್ಕೂ ಕವಿಯಲ್ಲಿ ಮೊಳಗುತ್ತಿದ್ದು, ಕಳೆದುಹೋದ ಸುಖದ ದಿನಗಳ ನೆನಪನ್ನು ತಂದುಕೊಡುತ್ತಿರುತ್ತವೆ.

ಉಂಗುರ ರವ ಕೇಳಿ, ಕಾ-ಲುಂಗುರ ರವ,
ಸಂತಸಪಾಂತೆದೆ ಮೊರೆಯುತಲಿದೆಯಿದೊ ॥
ಮೆಲು ಮೆಲು ನಡೆದು ನೀನಡಿಯಿಡುತಿರಲು
ಕಲು ನೆಲ ನಲಿವುದು ಮಾರುಲಿದು,
ಉಲಿ ಮೆಲುತಾನಕೆ ಮಿರುಗುವ ಕೈಬಳೆ
ಘಲುಘಲು ನಿನದವು ಸೇರುತಿರೆ.

(ಸ್ನೇಹ-ವಿಶ್ವಾಸ, 'ಉಂಗುರ ರವ ಕೇಳಿ', ಪು. ೮೦)

ಎಂಥ ಸೊಗಸಿನ ಚಿತ್ರ! ಇನ್ನು ಆ ಸತಿಯನ್ನು ವರ್ಣಿಸಿರುವ ರೀತಿಯೊ!

ಮುಂಗುರುಲು ಮುಂದುಗಡೆ ತೊಂಡಲೆದು ಹಾರುತಿರೆ
ಹಿಂದುಗಡೆ ಭುಜಕಿಳಿದು ತುಂಬುಮುಡಿ ತೂಗುತಿರೆ
ಕುಂಕುಮದ ಪುಡಿ ನೊಸಲ ನಡುವೆ ತಾ ರಂಜಿಸಿರೆ
ದುಂಡುಮಲ್ಲಿಗೆಯೊಂದು ಮುಡಿಯಲ್ಲಿ ನಗುತಲಿರೆ
- ಅದುವೆ ಸಿಂಗರವೆನ್ನ ಕಣ್ಗೆ ಚೆಲುವು.

ಒಂದು ಅಂಗುಲದಂಚಿ ಬಗ್ಗಾದೊತಲಿನ ಸೀರೆ
ಬಿಳಿಯ ಕುಪ್ಪಸ, ತುರುಬು ಗುಂಡು-ಸೆಕ್ಕಿ,
ಚಪ್ಪರದ ಮಲ್ಲಿಗೆಗೆ ತೋಳೆತ್ತಿ ಆಡುತಿರೆ
ಕೈ ಒಳೆಯು ಪಲ್ಟೆಂದು ಪಲುಕೆಂದು ಉಲುಕುತಿರೆ
- ಅದುವೆ ಸಿಂಗರವೆನ್ನ ಕಿವಿಗಳಂಪು.

(ಸ್ನೇಹ-ವಿಶ್ವಾಸ, 'ಸಿರಿ', ಪು. ೧೨೫-೬)

ವಿ.ಸೀ. ತಮ್ಮ ಮಡದಿ ಶ್ರೀಮತಿ ಸರೋಜಮ್ಮನವರೊಂದಿಗೆ.

ವಿ.ಸೀ. ಮನೆಯ ಆತಿಥ್ಯ

ವಿ.ಸೀ.ಯವರ ಮನೆಯ ಆತಿಥ್ಯವನ್ನು, ಅದರ ಸವಿಯನ್ನು ಅನುಭವಿಸಿದ ಎಲ್ಲರೂ ಕೊಂಡಾಡುವವರೆ. ಯಾವ ಹೊತ್ತಿನಲ್ಲಾಗಲಿ, ಬಂದವರು ಯಾರೇ ಆಗಲಿ, ಆತಿಥ್ಯದ ಸವಿಯನ್ನು ಕಾಣದೆ ಆ ಮನೆಯ ಹೊಸಿಲನ್ನು ದಾಟಿದವರಿಲ್ಲ.

ಆ ಬಗೆಯ ಅತಿಥ್ಯದ ಸವಿಯನ್ನುಂಡ ವಿ.ಸೀ.ಯವರ ನಿಕಟವರ್ತಿಯಾದ ಎಸ್.ಆರ್. ರಾಮಸ್ವಾಮಿ ಹೇಳುತ್ತಾರೆ: ''ಅತಿಥಿಗಳು ವಿ.ಸೀ. ಅವರ ಕೋಣೆಯೊಳಗೆ ಕಾಲಿಟ್ಟ ಐದು ನಿಮಿಷಗಳೊಳಗಾಗಿ ವಿ.ಸೀ. 'ನೋಡೂ ....' ಎಂದು ಕೂಗುವರು. ಈ 'ನೋಡೂ ....' ಎಂಬುದು ಪಾರಿಭಾಷಿಕ ಶಬ್ದ. ಇದಕ್ಕೆ ಎರಡರ್ಥ: ಒಂದು, ಭಾರ್ಯೆ ಸರೋಜಮ್ಮನನ್ನು ಉದ್ದೇಶಿಸಿದ ಸಂಬೋಧನೆ. ಇನ್ನೊಂದು, ಅತಿಥಿಗಳು ಬಂದಿದ್ದಾರೆ; ಕಾಫಿ ತೆಗೆದುಕೊಂಡು ಬಾ. ಕೆಲವು ನಿಮಿಷಗಳೊಳಗಾಗಿ ಒಂದು ಪಾವಿನಷ್ಟು ಗಾತ್ರದ ಕಂಚಿನ ಲೋಟಗಳ ಭರ್ತಿ ಕಾಫಿ ಹಾಜರಾಗುವುದು''. (ಎಸ್. ಆರ್. ರಾಮಸ್ವಾಮಿ, 'ವಿ.ಸೀ.ಎಂಬ', ಪು.೨೭). ವಿ.ಸೀ. ಮನೆಗೆ ಹೋದ ನಾವೆಲ್ಲ ಆ ಕಾಫಿಯ ರುಚಿಯನ್ನು ಸವಿದು ಬಾಯಿ ಚಪ್ಪರಿಸಿದ್ದೇವೆ.

ಇಂಥ ಪತ್ನಿಯ ಸೇವೆಯನ್ನು ಎಂದಾದರೂ ಮರೆಯಲಾದೀತೆ? ಆ ಋಣವನ್ನು ಎಂದು ತೀರಿಸುವುದು? ಹೇಗೆ ತೀರಿಸುವುದು? ಆ ಹಿರಿದಾದ ದಾನಕ್ಕೆ ಹೇಗೆ ಪಾತ್ರನಾಗುವುದು? ಕವಿ ಹೇಳುತ್ತಾರೆ:

ಋಣವ ಹೊರಿಸುತ್ತಿರುವೆ, ತೀರಿಸುವೆ ನಾನೆಂತು
ಎಂದಿಗಾ ಸೌಭಾಗ್ಯ ದೊರೆವುದೆನಗೆ
ಧನ್ಯೆ, ತ್ಯಾಗವ ಗೈವೆ ನಿನ್ನಾತ್ಮವರ್ಪಿಸುವೆ
ಇನಿತು ಹಿರಿದಾನಕ್ಕೆ ಪಾತ್ರನಹೆನೆಂತು?

(ಸ್ನೇಹ-ವಿಶ್ವಾಸ, 'ಅಪಾತ್ರ', ಪು. ೧೪೨)

ಇಲ್ಲಿ ಉದ್ಧರಿಸಿರುವ ಪ್ರೇಮಕವನಗಳಲ್ಲಿ ಯಾವ ಆಡಂಬರವೂ ಇಲ್ಲ. ತಿಳಿಯಾದ ಸವಿಗನ್ನಡದ ನುಡಿಗಳು ಕಾಂತೆಯ ಕಾಲುಂಗುರದ ರವದಂತೆ ಮನಸ್ಸಿಗೆ ಅತೀವ ಸಂತೋಷವನ್ನುಂಟುಮಾಡುತ್ತವೆ. ಕವಿಯ ಮನವನ್ನು ಈ ರೀತಿ ಅರಳಿಸಿದ ಸತಿಗೆ ಕೃತಜ್ಞತೆಯನ್ನು ಸಲ್ಲಿಸುತ್ತವೆ.

ಗೃಹಸ್ಥಜೀವನದ ಕ್ಲೇಶಗಳು

ವಿ.ಸೀ.ಯವರ ಗೃಹಸ್ಥಜೀವನ ಎಲ್ಲಕಾಲವೂ ಸುಖಮಯವಾಗಿದ್ದಂತೆ ಕಾಣುವುದಿಲ್ಲ. ಅವರ ಭಾವ ಹೇಳುತ್ತಿದ್ದರಂತೆ - 'ಅದೊಂದು ಹಲವು ನಾಯಕರ ಪಾಳ್ಯ; ಅಲ್ಲಿ ಎಲ್ಲರೂ ಯಜಮಾನರೇ.' ಇದು ಆ ಮನೆಯ ಜೀವನದ ನಿಜಸ್ವರೂಪ. ಅಲ್ಲಿ ಉತ್ಸಾಹಕ್ಕೆ ಎಡೆಯಿಲ್ಲ. 'Always things were in sixes and sevens' ಎಂದು ವಿ.ಸೀ. ಹೇಳಿದ್ದುಂಟು. ವೆಂಕಣ್ಣಯ್ಯನವರು ಒಂದು ಕಡೆ ಶಿವನ ಸಂಸಾರದ ವೈಖರಿಯನ್ನು ಚಿತ್ರಿಸಿದ್ದಾರೆ. ''ಅಲ್ಲಿ ಒಂದು ಸಿಂಹ, ಒಂದು ಎತ್ತು, ಒಂದು ಇಲಿ, ಒಂದು ಹಾವು, ಒಂದು ನವಿಲು! ಜೊತೆಗೆ ತುಂಬುರನ ಸಂಗೀತ, ಭೃಂಗಿಯ ನೃತ್ಯ! ಇನ್ನು ಗಣಗಳೊ — ಪಿಶಾಚ, ಗುಹ್ಯಕ, ಸಿದ್ಧ ಇತ್ಯಾದಿ. ನಡುವೆ ಗೌರಿ. ಹೀಗೆ ಲೋಕದ ವಿರೋಧವೆಲ್ಲ ಅಲ್ಲಿ ಒಂದುಗೂಡಿರುವಾಗ

ಏನು, ಎಷ್ಟು ಸಂತೋಷ ಶಕ್ಯವೊ !'' ತಮ್ಮ ಸಂಸಾರವೂ ಇದರಂತೆಯೇ ಎಂದು ಅಂದುಕೊಳ್ಳುತ್ತಿದ್ದರಂತೆ ವಿ. ಸೀ.

ಹೀಗಿದ್ದರೂ ಇದೆಲ್ಲವನ್ನೂ ಮರೆತು, ಲೇವಡಿ ಮಾಡಿ ನಕ್ಕು, ತಾಳ್ಮೆಯ ಜೀವನ ನಡೆಸಿದ ವಿ. ಸೀ. ದಂಪತಿಗಳ ವಿಷಯವಾಗಿ ನಮ್ಮಲ್ಲಿ ಮೆಚ್ಚಿಗೆ ಸಹಜವಾಗಿ ಮೂಡುತ್ತದೆ. ಎರಡು ಮೂರು ದಶಕಗಳ ಕಾಲ ಸರೋಜಮ್ಮನವರ ಮನಸ್ಸಿನ ಸ್ವಾಸ್ಥ್ಯ ಬೇರೆ ತಪ್ಪಿ, ಅದೂ ವಿ. ಸೀ. ಯವರ ಚಿಂತೆಗೆ ಕಾರಣವಾಗಿತ್ತು.

ಕೈಹಿಡಿದಾಕೆಗೆ ಐವತ್ತು ತುಂಬಿದಾಗ ಹೇಳುತ್ತಾರೆ :

ವರ್ಷವೈವತ್ತು ಇಂದಿವಳಿಗೆ
ಹಣ್ಣಾಯ್ತು ಬಾಳು ; ....
.....
ನಾಲ್ಕು ನರೆ ಕಿವಿಯ ಮೇಲೆ ಬೈತಲೆಯಲ್ಲಿ
ಬೆಳ್ಳಿಯಾಯಿತು ಬದುಕು
ನಾಳೆ ಬಂಗಾರಕ್ಕೆ ಕಾದು.
ಹಣೆಗೆ ಕುಂಕುಮ; ಒಪ್ಪವಿಟ್ಟಂತೆ ದಂತಗಾಂತಿ
ನಂಬಲಾಗದ ನಯದ ತುಂಬು ಶಾಂತಿ.

(ಸ್ನೇಹ-ವಿಶ್ವಾಸ, 'ಈಕೆ', ಪು. ೪೩೫)

ಇಂಥ ಸಾತ್ತ್ವಿಕ ಸೌಂದರ್ಯವನ್ನು ತಮ್ಮ ಜೀವನ ಸಂಗಾತಿಯಲ್ಲಿ ಕಂಡ ವಿ. ಸೀ. ಎಷ್ಟೇ ಕಷ್ಟಗಳನ್ನು ಎದುರಿಸಿರಲಿ, ನಿಜಕ್ಕೂ ಪುಣ್ಯಶಾಲಿಗಳು ಎಂದಂದುಕೊಳ್ಳುತ್ತೇವೆ.

ಆರಿಹೋದ ದೀಪ

'ಬಾಳ ಬಂಧ' ಎಂಬ ತಮ್ಮ ಕವನದಲ್ಲಿ ಹೆಂಡತಿಯ ಕೊನೆಯ ದಿನಗಳನ್ನು ನೆನೆಸಿಕೊಂಡು ವಿ. ಸೀ. ಹೇಳುತ್ತಾರೆ :

ಕೊನೆಗೆ ಆರುವ ಮೊದಲು ದೀಪವು
ತೊಟ್ಟನೊಡೆವುದು ಬೆಳಕನು
ಏನು ಹೊಳಪು ಏನು ಒನಪು !

ಆಡಿಕೊಂಡೆವೆ ಆಟಕಂದು-
'ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಳು ಗಂಡನ'
ಎಷ್ಟು ನಕ್ಕೆ ! ನೀನಂದು ಮಗಳೊಡನೆ

* * *

ಹೇಗೊ ಒತ್ತಂಬದಲಿ
ತೆರೆದೆ ಕಾಂತಿ ಕಳೆಯುವ ಕಣ್ಣನು
ನೋವೊ ತಿಳಿವೊ ನೆಚ್ಚಿಕೊಂಡವರಾರು ?

ಹೆಸರು ಕಿವಿಯಲಿ ನುಡಿಯಲು
ನೀನಿತ್ತೆ ; ಬಂದೆನೆಂದು ಕಡೆಗೆ
ನನ್ನ ಕೈ ಕುಡಿತೆ ಹಾಲಿಗೆ ಕಾದಿದ್ದಂತೆ
ಆಯ್ತು ಹೋಗುವೆನೆಂಬ ತೆರದಲಿ
ನೋಡಿ ಗುರುತಿಸಿ ಒಪ್ಪಿದೆ.

* * *

ಧನ್ಯೆ, ನೀ ಬಂಧ ಕಳಚಿ ಹೊರಟೆ
ಎಂದು ಬಿಡುವುದು ನನಗೆ ನಿನ್ನ ಬಂಧ ?
ಏಕೆ ಬಿಡಬೇಕು ಎನ್ನುವೆಯಲ್ಲ !
ಬೇಡ, ಬಿಡದಿರುವುದೇ ಸಂತೋಷ ;
ಬಾಳ ಬಂಧ

(ಸ್ನೇಹ-ವಿಶ್ವಾಸ, 'ಬಾಳ ಬಂಧ', ಪು.೪೦೮-೯)

ಮಡದಿಯ ಅವಸಾನಕಾಲವನ್ನು ಹೀಗೆ ಚಿತ್ರಿಸುತ್ತಾರೆ :

ಜೊತೆಗೆ ಬಂದವರೆಲ್ಲ ದಾರಿಯಲಿ ಕುಸಿದರು
ಅಯ್ವತ್ತು ವರ್ಷ ಒಡನಿದ್ದ ನಡಸಿದ್ದ
ಕೈಹಿಡಿದ ಹೆಣ್ಣು ಹಿಡಿದಿಹಳು ನೆಲನ

* * *

ಇಂದು ಕಡೆಮುಟ್ಟಿತ್ತು ನಿನ್ನ ಉಸಿರು –
ಇದುವೂ ಭಾಗ್ಯವೇ ಎನುವೆ
ಒಂದು ದಿನ ಮುಂಚು; ಇಂದು ನೀನು
ನಾಳೆ ನಾನು.

(ಸ್ನೇಹ-ವಿಶ್ವಾಸ, 'ಮುಗಿವು', ಪು.೪೧೨)

ಹೀಗೆ ತಮ್ಮ ಮಡದಿಯನ್ನು ಬೀಳ್ಕೊಟ್ಟರು ವಿ.ಸೀ.

''It is difficult in this room that we shared not to think about her all the time .... They were the happiest years of my life. She provided for it a background of secure unalterable devotion, which my nature needed; how am I to get on without it?'' (ಒಂದಾಗಿ ಕೂಡಿ ದಿನ ಕಳೆದ ಈ ಕೊಠಡಿಯಲ್ಲಿ ಅವಳನ್ನು ಮೇಲಿಂದ ಮೇಲೆ ಜ್ಞಾಪಿಸಿಕೊಳ್ಳದೆ ಇರುವುದು ಕಷ್ಟ..... ಅವು ನನ್ನ ಬಾಳಿನ ಅತ್ಯಂತ ಸೊಗಸಿನ ದಿನಗಳು. ಆಕೆ ನನ್ನ ಸ್ವಭಾವಕ್ಕೆ ತೀರ ಅಗತ್ಯವಾದ, ಭದ್ರವಾದ, ಬದಲಾಗದ ಪ್ರೀತಿ ನಿಷ್ಠೆಗಳನ್ನು ಒದಗಿಸಿದ್ದಳು. ಅದಿಲ್ಲದೆ ನಾನು ಬಾಳು ಸಾಗಿಸುವುದಾದರೂ ಹೇಗೆ?) ಎಂದು ಹಿಂದೆಂದೋ ವಿ.ಸೀ. ಓದಿ ಮೆಚ್ಚಿಕೊಂಡಿದ್ದ ಜೆ.ಆರ್. ಅಕರ್‌ಲಿ ಅವರ ಸಾಲುಗಳು ನೆನಪಾದವು.

ನನ್ನ ಮನೆಯ ಲಕುಮಿಯಂತೆ
ನನ್ನ ಭಾಗ್ಯ ತಾರೆಯಂತೆ
ನನ್ನ ಬಾಳ ಬೆಳಕಿನಂತೆ
ನಿಲುವೆಯೆಂದು ನಲಿದು ನಲಿದು ನಲಿಯುತಿದ್ದೆನೆ.

(ಸ್ನೇಹ-ವಿಶ್ವಾಸ, 'ಕಾಣಿಕೆ', ಪು. ೫೮)

ವಿ.ಸೀ. ಬೇಗ ಮನಸ್ಸನ್ನು ಸಮಾಧಾನ ಸ್ಥಿತಿಗೆ ತಂದುಕೊಂಡರು. ಸಮಾಧಾನ ಹೇಳಲು ಬಂದ ಸ್ನೇಹಿತರಿಗೆ ''feel ಆಗೊಲ್ಲ ಎಂದರೆ ಹೇಗಪ್ಪ? ಆದರೆ ಆ feeling ನಮ್ಮನ್ನು ದುರ್ಬಲಗೊಳಿಸದಂತೆ ತಡೆದುಕೊಳ್ಳಬೇಕು ಅಷ್ಟೆ'' ಎಂದರು.

''ಪ್ರತಿದಿನ ಬೆಳಗ್ಗೆ ಮನೆಯ ಮುಂದಲ ಗಿಡದಲ್ಲಿ ಬಿಡುತ್ತಿದ್ದ ಅಂಗೈ ಅಗಲದ ಬಿಳಿಯ ದಾಸವಾಳವನ್ನೂ, ಸಂಜೆ ಅರಳುತ್ತಿದ್ದ ಒಂದು ಹಿಡಿ ಮಲ್ಲಿಗೆ ಹೂವನ್ನೂ ತಮ್ಮ ಹೆಂಡತಿಯ ಭಾವಚಿತ್ರದ ಮುಂದೆ ಇಡುತ್ತಿದ್ದರು : ತಮ್ಮ ಮಮತೆಗೆ, ಮನಸ್ಸಿನ ಮೃದುತೆಗೆ ಸಾಕ್ಷಿಯಾಗಿ !''

ಐವತ್ತು ವರ್ಷದ ಸಹಬಾಳ್ವೆ ಹೀಗೆ ೧೯೭೪ರಲ್ಲಿ ಕೊನೆಗೊಂಡಿತು.

ಪಂಪಾಯಾತ್ರೆ

ಯಾತ್ರೆಯ ಹಿನ್ನೆಲೆ

ವಿ.ಸೀ. ಶಾರದಾವಿಲಾಸ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದ ಕಾಲದಲ್ಲಿಯೇ ಅವರಿಗೆ ವೆಂಕಣ್ಣಯ್ಯನವರ ಮೂಲಕ ಹಿರಿಯರಾದ ಡಿ.ವಿ. ಗುಂಡಪ್ಪನವರ ಮತ್ತು ಮಾಸ್ತಿಯವರ ಪರಿಚಯವಾಗಿತ್ತೆನ್ನುವುದನ್ನು ಈಗಾಗಲೆ ತಿಳಿದಿದ್ದೇವೆ. ಆ ಮಹನೀಯರ ಸಹವಾಸದಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶ ವಿ.ಸೀ.ಯವರಿಗೆ ಒದಗಿತು. ೧೯೨೫ರ ಪರಿಷತ್ತಿನ ವಾರ್ಷಿಕ ಅಧಿವೇಶನ ಬೆಳಗಾವಿಯಲ್ಲಿ ನಡೆಯಿತು. ಅದರಲ್ಲಿ ಭಾಗವಹಿಸಿ ಊರಿಗೆ ಹಿಂದಿರುಗುವಾಗ ದಾರಿಯಲ್ಲಿ ಹಂಪೆಯನ್ನು ನೋಡಿಕೊಂಡು ಬರಬೇಕೆಂಬ ಮನಸ್ಸಾಯಿತು. ಹೀಗೆ ಮೊದಲಾದದ್ದು ಪಂಪಾಯಾತ್ರೆ. ವಿ.ಸೀ.ಯವರ ಸಹಯಾತ್ರಿಕರು ಬೆಳ್ಳಾವೆ ವೆಂಕಟನಾರಣಪ್ಪನವರು(ಯಜಮಾನರು), ಡಿ.ವಿ.ಗುಂಡಪ್ಪನವರು (ರಾಯರು), ಟಿ.ಎಸ್.ವೆಂಕಣ್ಣಯ್ಯನವರು(ವೆಂಕಟೇಶಯ್ಯ), ಎಂ.ಆರ್. ಶ್ರೀನಿವಾಸಮೂರ್ತಿಗಳು (ಮೂರ್ತಿ).

ಯಾತ್ರೆ ಕೈಗೊಂಡಾಗ ವಿ.ಸೀ. ಇನ್ನೂ ೨೬ ವರ್ಷದ ತರುಣರು; ಆದರೆ ಜೊತೆಯಲ್ಲಿದ್ದ ಇತರರೆಲ್ಲರೂ ಹಿರಿಯರು. 'ಒಬ್ಬೊಬ್ಬರೂ ಜೀವನದ ತತ್ತ್ವ ಸಾಧನೆಯಲ್ಲಿ, ಚಾರಿತ್ರ್ಯದಲ್ಲಿ, ತಮ್ಮ ತಮ್ಮ ರೀತಿಯಲ್ಲಿ ಮೇಲ್ಮಟ್ಟವನ್ನು ಸಾಧಿಸಿದ್ದವರು'. ಅಂಥ ಹಿರಿಯರ ಸಾನ್ನಿಧ್ಯ, ಸಾಹಚರ್ಯ, ಪ್ರೀತಿ, ಮನೋವಿಲಾಸ, ಇವರ ಮಟ್ಟದಲ್ಲಿನ ಮಾತುಕತೆ, ಅಭಿಪ್ರಾಯವಿನಿಮಯ, ಅನುಭವಗಳ ಶೋಧನೆ — ಅದೊಂದು 'ಅಮೃತ ಸಂಚಯ' ಎನ್ನುತ್ತಾರೆ ವಿ.ಸೀ. ಇಂಥ ಮಹನೀಯರ ಸಹವಾಸ ಸೌಭಾಗ್ಯ ಆ ತರುಣದಲ್ಲಿಯೇ ವಿ.ಸೀ.ಯವರಿಗೆ ದೊರಕಿದ್ದು ಅವರ ಪುಣ್ಯ. ಆ ಕಾಲದ ಕಡೆ ಹಿನ್ನೋಟ ಬೀರಿ 'ಆ ದಿವಸಗಳನ್ನು ಪುನಃ ಎಲ್ಲಿ ತರಲಿ?' ಎಂದು ಹಂಬಲಿಸಿದ್ದಾರೆ.

ಅಸಾಧಾರಣ ಸನ್ನಿವೇಶದಲ್ಲಿ ನೆರವೇರಿದ ಈ ಯಾತ್ರೆಯ ನೆನಪುಗಳು ಯಾತ್ರೆ ಕೈಗೊಂಡ ಮಹನೀಯರ ಮನಸ್ಸಿನಿಂದ ಅಳಿಸಿಹೋಗದಂತೆ ಚಿರಕಾಲ ಉಳಿಸಿಕೊಳ್ಳುವ ಸಲುವಾಗಿ ವಿ.ಸೀ. ಈ ಪ್ರವಾಸಕಥನವನ್ನು ಬರೆದಂತೆ ತೋರುತ್ತದೆ. ತಮ್ಮೊಂದಿಗೆ ಪ್ರವಾಸ ಮಾಡಿದ ಹಿರಿಯರಿಗೆ ಅವರಿತ್ತ ಪ್ರೀತಿಯ ಕಾಣಿಕೆ 'ಪಂಪಾಯಾತ್ರೆ'.

ಅತ್ಯುತ್ತಮ ಕಲಾಕೃತಿ

ಮುಂಬಯಿ ವಾಸ ಲೌಕಿಕ ಜೀವನದ ಒಂದು ಅಪೂರ್ವ ಚಿತ್ರವಾಗಿದ್ದರೆ, ಅದನ್ನು ಮೀರಿಸಿದ, ಮತ, ಕಲೆ ಸಂಸ್ಕೃತಿಗಳ ವಿಹಂಗಮ ನೋಟವನ್ನು ಒದಗಿಸುವ 'ಪಂಪಾಯಾತ್ರೆ' ಅತ್ಯುತ್ತಮ ಕಲಾಕೃತಿ. ಅದು ವಿ. ಸೀ. ಯವರು ಬರೆದ ಮೊದಲ ಪುಸ್ತಕ. ಅವರು ಇನ್ನೇನನ್ನೂ ಬರೆಯದೆ ಹೋಗಿದ್ದರೂ ಈ ಪುಸ್ತಕವೊಂದೇ ಅವರನ್ನು ಹೊಸಗನ್ನಡ ಗದ್ಯಲೇಖಕರ ಅಗ್ರಪಂಕ್ತಿಗೆ ಸೇರಿಸುವ ಅರ್ಹತೆ ಪಡೆಯುತ್ತಿತ್ತು. 'ಪಂಪಾಯಾತ್ರೆ' ಎರಡು ದಿನಗಳ ಯಾತ್ರೆಯ ವಿವರ ಮಾತ್ರವಲ್ಲ, ಅದೊಂದು ''ಭಾವುಕ ತರುಣನ ಕನಸು''. ಆದ್ದರಿಂದಲೇ ಈ ಕಿರುಪುಸ್ತಕಕ್ಕೆ ಅಷ್ಟೊಂದು ಮಹತ್ತ್ವ ಬಂದಿರುವುದು. ಇಂಥ ಬಗೆಯ ಬರವಣಿಗೆ ಕನ್ನಡಕ್ಕೆ ಆಗಿನ್ನೂ ಹೊಸದು. ಈಗಲೂ ಅಂಥ ಇನ್ನೊಂದು ಬರಹವನ್ನು ಹೆಸರಿಸುವುದೂ ಕಷ್ಟ. ವಿ. ಸೀ. ಯವರೇ ಒಂದು ಕಡೆ ಹೇಳುತ್ತಾರೆ, 'ಇಂಥದು ಇನ್ನೊಂದನ್ನು ಬರೆಯಬಲ್ಲೆನೆಂಬ ಧೈರ್ಯ ನನಗಿಲ್ಲ' ಎಂದು. ಅಷ್ಟು ಅದ್ವಿತೀಯವಾದದ್ದು ಈ ಕೃತಿ.

ಹಾಳು ಹಂಪೆ

ಜಗತ್ತಿನ ಅತಿ ದೊಡ್ಡ ಸಾಮ್ರಾಜ್ಯವೆಂದು ಹೆಸರು ಗಳಿಸಿದ್ದದ್ದು ವಿಜಯನಗರ ಸಾಮ್ರಾಜ್ಯ. ಆ ಸಾಮ್ರಾಜ್ಯಕ್ಕೆ ಒದಗಿದ ದುರವಸ್ಥೆಯನ್ನು ವಿವರಿಸುತ್ತ ಬ್ರಿಟಿಷ್ ಇತಿಹಾಸಕಾರನಾದ ರಾಬರ್ಟ್ ಸಿವೆಲ್ (Robert Sewell) ಹೇಳಿರುವ ಮಾತುಗಳು ಪ್ರಸಿದ್ಧವಾಗಿವೆ:

> Never perhaps in the history of the world has such havoc been wrought so suddenly on so splendid a city teeming with a wealthy and industrious population in the full plenitude of prosperity, one day, and the next seized, pillaged and reduced to ruins amidst scenes of savage massacre and horrors beggering description.
>
> (ಭವ್ಯವಾದೊಂದು ನಗರ, ಒಂದು ಕಾಲಕ್ಕೆ ಉದ್ಯೋಗಶೀಲ ಪುಣ್ಯವಂತರುಗಳಿಂದ ತುಂಬಿದ್ದ ನಗರ, ಅದರ ಮಾರನೆಯ ದಿನವೆ ಕ್ರೂರಕರ್ಮಿಗಳ ಪಾಲಾಗಿ, ಹೇಳಲಾಗದ, ವಿವರಿಸಲಾಗದ ಕ್ರೂರ ಕೃತ್ಯಗಳಿಗೆ ತುತ್ತಾಗಿ ಹಾಳುಬಿದ್ದ ಪ್ರಸಂಗ ಪ್ರಪಂಚದ ಇತಿಹಾಸದಲ್ಲಿ ಬೇರೊಂದು ದೊರೆಯಲಾರದು.)

ಏತಕ್ಕಾಗಿ ಈ ಮಹಾಸಾಮ್ರಾಜ್ಯ ಇಂಥ ಅವದೆಸೆಗೆ ಇಳಿಯಿತು ? ಹೆಸರು ಹೇಳುವವರೇ ಗತಿಯಿಲ್ಲದಂತೆ ಪೂರ್ಣವಾಗಿ ಹಾಳಾಗಿಹೋಯಿತು ? ಇದನ್ನು ಯಾರೂ ಸರಿಯಾಗಿ ವಿಶ್ಲೇಷಿಸಿರುವಂತೆ ಕಾಣುವುದಿಲ್ಲ. ಎಷ್ಟೊಂದು ಭವ್ಯವಾಗಿ

ಬೆಳೆದಿದ್ದ ನಾಡು, ಅದೆಷ್ಟು ಬೇಗ ಎಂಥ ಕಾಡಾಗಿ ಹೋಯಿತು ! ಹಾಳುಬಿದ್ದ ಹಂಪೆಯಲ್ಲಿನ ಕಲ್ಲುಮಣ್ಣು ರಾಶಿಗಳನ್ನು ನೋಡಿ ಬೆಂದ ಹೃದಯದಿಂದ ವಿ.ಸೀ. ನಿಟ್ಟುಸಿರಿಡುತ್ತಾರೆ. ಅವರ ವೇದನೆ ಪಂಕ್ತಿ ಪಂಕ್ತಿಯಲ್ಲೂ ಎದ್ದು ಕಾಣುತ್ತದೆ.

> ''ಪಾಳು ದೇವತೆ ಎಲ್ಲಿಲ್ಲಿಯೂ ವಿಕಟಹಾಸದಿಂದ ತನ್ನ ಪ್ರಭಾವ ವೆಂಥದೆಂಬುದನ್ನು ಬಿಡದೆ ಬೀಸುವ ಉರಿಗಾಳಿಗೆ ಬೀರಿ ಹೇಳಿ ಆ ಪ್ರದೇಶವನ್ನು ಶ್ಮಶಾನವನ್ನಾಗಿ ಮಾಡಿದೆ. ಶ್ಮಶಾನವಲ್ಲದೆ ಮತ್ತೇನು? ರಕ್ತ, ಮಾಂಸ, ರಸ, ರಾಗ, ಬಣ್ಣ, ಕಾಂತಿಗಳಿಂದ ಪರಿಪುಷ್ಪರಾದ ಯುವಕ ಯುವತಿಯರು ನಗುನಗುತ್ತ ಸರಸವಾಡುತ್ತಿದ್ದ ಸುಖಭೂಮಿಯಲ್ಲಿ ಈಗ ವಿಷಧರ ಸರ್ಪಗಳು, ಮುಳ್ಳುಹಂದಿಗಳು, ಕಳ್ಳಕಾಕರು; ಎಲ್ಲಿ ಹೂದೋಟಗಳ ಪರಿಮಳವನ್ನು ಹೊತ್ತುಕೊಂಡು ತಣ್ಣಗೆ ತಂಗಾಳಿ ಬೀಸುತ್ತಿತ್ತೊ ಅಲ್ಲಿ ಈಗ ದಾರುಣ ಉರಿಗಾಳಿ. ಪ್ರಪಂಚದ ಚಕ್ರಾಧಿಪತಿ ಗಳ ಸಂದಣಿಯಲ್ಲಿ ಎಲ್ಲ ಅಂಶಗಳಲ್ಲೂ ಸಮತೂಗಲು ಅರ್ಹರಾಗಿದ್ದ ಸಾಮ್ರಾಟರು ಆಳುತ್ತಿದ್ದ ಆ ಪ್ರದೇಶದಲ್ಲಿ ಮುಳ್ಳುಪೊದೆ; ಅವರ ದರ್ಪ ಪೌರುಷಗಳು ಪ್ರತಿಧ್ವನಿತವಾಗುತ್ತಿದ್ದ ಅರಮನೆಗಳಲ್ಲಿ ನರಿ ಗೂಗೆಗಳ ಕರ್ಕಶಧ್ವನಿ; ಪಾಳುದೇವತೆಯ ಕುಹಕದ ಅಟ್ಟಹಾಸ. ಅತ್ಯುತ್ತಮ ಸೌಂದರ್ಯ ಕಾಂತಿಯಿಂದ ಬೆಳಗುತ್ತಿದ್ದ ಮಂಟಪ, ಗುಡಿ, ಪ್ರಾಸಾದ, ಅರಮನೆ ಇವುಗಳಿದ್ದ ಕಡೆ ಪದಚ್ಯುತವಾದ ದೇವತಾವಿಗ್ರಹಗಳು; ಒಡೆದುಬಿದ್ದಿರುವ, ಇನ್ನೂ ಬೀಳುತ್ತಲೇ ಇರುವ ಕಟ್ಟಡಗಳು; ತಮಗೆ ಬಂದಿರುವ ದುರ್ಗತಿಯಾದರೂ ಎಂಥದೆಂಬುದನ್ನು ನೋಡಿ ಜನರು ನೀತಿಗೊಳ್ಳಲೆಂದು ರಾಶಿರಾಶಿಯಾಗಿ ಭೂಶ್ಲಿಷ್ಟವಾದ - ಬರಿಯ ಕಲ್ಲು ಗುಪ್ಪೆಗಳಂತಿರುವ ಕಂಬ, ವೇದಿಕೆ, ಸೂರುಗಲ್ಲು. ವಿಜಯನಗರ ಧ್ವಂಸವಾದುದಂತೂ ಹಾಗಿರಲಿ; ಆ ರಾಜರ ಇಂದ್ರಸದೃಶವಾದ ವೈಭವಗಳೂ, ಉಚ್ಚಾಯಾಭಿಲಾಷೆಗಳೂ, ಮಹಾಸನ್ನಾಹಗಳೂ ಕಾರ್ಯಮುಖೇನ ಅಮರತ್ವವನ್ನು ಪಡೆಯಬೇಕೆಂದು ಅವರು ಮಾಡಿದ ಅದ್ಭುತ ಪ್ರಯತ್ನಗಳೂ ಒಟ್ಟಿಗೆ ಇಲ್ಲಿ ನಾಶಪಡೆದು, ಅವರ ವೈಭವರಂಗವನ್ನು ಈ ಮಹಾ ಶ್ಮಶಾನವನ್ನಾಗಿ ಮಾಡಿದೆ.''
>
> *(ವಿ.ಸೀ. ಸಂಪದ, ಸಮಗ್ರಗದ್ಯ, 'ಪಂಪಾಯಾತ್ರೆ', ಪು.೨೨-೨೩)*

ಪ್ರಕೃತಿ ವರ್ಣನೆ

ಪ್ರವಾಸಕಥನದಲ್ಲಿ ಅಲ್ಲಲ್ಲೆ ರಮಣೀಯ ಪ್ರಕೃತಿವರ್ಣನೆಗಳು ಬರುತ್ತವೆ. ಯಾವ ಭೂವಿಜ್ಞಾನಿಯೂ ಮೆಚ್ಚಿ ತಲೆದೂಗಬಹುದಾದಂಥ ಬೆಟ್ಟ ಗುಡ್ಡಗಳ, ನದಿ ತಟಾಕಗಳ ಚಿತ್ರಗಳು ಕಣ್ಣ ಮುಂದೆ ನಿಲ್ಲುತ್ತವೆ. ಕೆಲವು ಉದಾಹರಣೆಗಳನ್ನು ಕೊಡಬಹುದು. ವಿರೂಪಾಕ್ಷ ದೇವಸ್ಥಾನ ಬಿಟ್ಟು ಮುಂದೆ ಹೋಗುತ್ತ ಬೆಟ್ಟದ ನಡುವಿನ ಕಿರುದಾರಿಯಲ್ಲಿ ಸಾಗುತ್ತಿರುವಾಗ ಕಾಣುವ ದೃಶ್ಯವನ್ನು ಹೀಗೆ ವರ್ಣಿಸುತ್ತಾರೆ :

''.... ಕಣ್ಣು ಹಾಯುವವರೆಗೂ ಸುತ್ತಲೂ ಏನು ಸುಂದರ ದೃಶ್ಯಗಳು! ನೂರಾರು ವರುಷಗಳಿಂದ ಸುಮಾರು ಒಂದೇ ಸಮನಾಗಿ ತಮ್ಮ ಸ್ಥಿತಿಯನ್ನು ಕಾಪಾಡಿಕೊಂಡು ಪ್ರಪಂಚದ ಕಷ್ಟಸುಖಗಳನ್ನು ಮಂಗಳ ಅಮಂಗಳಗಳನ್ನು ಅವಿಚಲಿತ ದೃಷ್ಟಿಯಿಂದ ನೋಡುತ್ತ ದೃಢವಾಗಿ ಪಟುವಾಗಿ ನಿಂತಿರುವ ಪರ್ವತಗಳು; ಪರ್ವತ ಶಿಖರಗಳ ಮೇಲೆ ಆಕಾಶದ ಬಿಳಿ ಮೋಡಗಳಿಂದ ಸುತ್ತುವರಿಯಲ್ಪಟ್ಟು ಸೇವೆಗೊಳ್ಳುತ್ತ ಸಿಡಿಲುಬಳ್ಳಿಗಳೊಡನೆ ಸರಸವಾಡುತ್ತ ಉಚ್ಚ ಪೀಠಗಳ ಮೇಲಿರುವ ದೇವಾಲಯ, ತಪೋಗೃಹ, ಆಶ್ರಮಗಳು; ಬೆಟ್ಟಗಳ ನಡುನಡುವೆ ದೂರದಲ್ಲಿ ಒಂದರ ಹಿಂದೆ ಒಂದು, ಒಂದಕ್ಕಿಂತ ಒಂದು ಹೆಚ್ಚು ಎತ್ತರವಾಗಿ ಶಿಖರಗಳ ಹಂತದಂತೆ ದೂರದ ಆಕಾಶಕ್ಕೆ ಏರಿ ಕಾಣುತ್ತಿರುವ ದೇವಾಲಯಗಳ ಮಹಾದ್ವಾರ ಗೋಪುರಗಳು; ಎಡಗಡೆ ಹತ್ತಿರದಲ್ಲಿಯೆ ಕಲ್ಲುಬಂಡೆಗಳ ಹಿಂದೆ ಕಲಕಲನಾದದಿಂದ ಹರಿಯುತ್ತಿರುವ ತರಂಗಿಣೀ ತುಂಗಭದ್ರೆಯ ಕೋಲಾಹಲ .....''

(ಅದೇ, ಪು.೧೧-೧೨)

ಹೀಗೆ ಮುಂದುವರಿಯುತ್ತದೆ ಸೊಗಸಿನ ದೃಶ್ಯಗಳ ವರ್ಣನೆ. 'ಪಾಂಡಿತ್ಯ, ಕಲಾವಿಮರ್ಶೆ, ಹರಟೆ, ಸೂಕ್ಷ್ಮದರ್ಶನ, ತಿಳಿಯಾದ ಹಾಸ್ಯಗಳ ಭಟ್ಟಿ ಪಂಪಾಯಾತ್ರೆ' ಎಂದಿದ್ದಾರೆ ಅ.ನ. ಕೃಷ್ಣರಾಯರು.

ವಿಜಯನಗರ ಸಾಮ್ರಾಟರಾಗಿ ವೈಭವದಿಂದ ಮೆರೆದ ಕೃಷ್ಣದೇವರಾಯ, ಅಚ್ಯುತರಾಯ, ರಾಮರಾಯ ಇವರುಗಳು ತುಲಾಭಾರ ಮಾಡಿಸಿಕೊಂಡು ಸುವರ್ಣದಾನವನ್ನು ಮಾಡಿದುದರ ಕುರುಹಾಗಿ ನಿಂತಿರುವ ದಾನಸ್ತಂಭಗಳನ್ನು ನೋಡಿ, ಆ ರಾಜರುಗಳ ದರ್ಪ ಮತ್ತು ಉದ್ದಂಡ ಡಂಭವೃತ್ತಿಯನ್ನು ಊಹಿಸಿಕೊಂಡು ವಿ.ಸೀ. ಹೇಳುತ್ತಾರೆ :

''ನಮ್ಮದು ಅತಿವೃಷ್ಟಿ ಅನಾವೃಷ್ಟಿಯ ಖಂಡ. ಇಲ್ಲಿ ಯಾವ ವಿಷಯದಲ್ಲಿಯೂ ಜನರಲ್ಲಿ ಸಮತೆಯಾಗಲಿ, ಸ್ಥಿಮಿತಗತಿಯಾಗಲಿ ಇರದು. ಈ ಸ್ವಭಾವ ಉಷ್ಣದೇಶಗಳವರಾದ ನಮಗೆ ಸೃಷ್ಟಿಕರ್ತನು ಕೊಟ್ಟ ಅಖಂಡ ಶಾಪವೆಂದು ತೋರುವುದು.''

(ಅದೇ, ಪು.೧೮)

ಮುಂದೆ ವಿಠಲಸ್ವಾಮಿಯ ಗುಡಿ ಎದುರಾಗುತ್ತದೆ. ದ್ರಾವಿಡಶೈಲಿಯ ವಾಸ್ತುರಚನೆಯಲ್ಲಿ ಈ ತೆರನಾದ ಇನ್ನೊಂದು ಶಿಲ್ಪಕೃತಿ ಇಲ್ಲವೇನೊ ಎಂದು ಬೆರಗಿನಿಂದ ನಿಲ್ಲುತ್ತಾರೆ. ಆ ಸೌಂದರ್ಯವನ್ನು ನೋಡಿದರೆ ಅದು ಸಾಧ್ವಿಯ ಸೌಂದರ್ಯದಂತೆ ಅವರ ಕಣ್ಣಿಗೆ ತೋರುವುದಿಲ್ಲ. ಅತುಳಲಾವಣ್ಯವತಿಯಾಗಿ, ಹಾವಭಾವವಿಲಾಸಗಳಿಂದ ಲೋಕವನ್ನು ಬೆರಗುಮಾಡಿ ಸೋಲಿಸುವ ನಾರಿಯ ಅಥವಾ ಚಿರವೈಧವ್ಯ ಪರಿಣತವಾಗಿ ವ್ಯರ್ಥವಾದ ಸೌಂದರ್ಯದಂತೆ ಅವರ ಕಣ್ಣಿಗೆ ತೋರುತ್ತದೆ *(ಅದೇ, ಪು.೨೮)*.

ಕಲ್ಯಾಣಮಂಟಪದ ಅಂದ ಚೆಂದಗಳನ್ನು ಕಂಡು ಮರುಳಾಗಿ 'ಭವ್ಯ ಗಾನವೊಂದು ಘನೀಭೂತವಾಗಿ ಶಿಲಾಕೃತಿಯಾಗಿ ಪರಿಣಮಿಸಿದಂತೆ ಇಲ್ಲಿನ ನೋಟ. ಈ ರಾಜರ ಕಲಾಭಿರುಚಿ, ಅಲಂಕಾರದೃಷ್ಟಿ, ರಸಿಕತೆ, ಇವುಗಳನ್ನು ಏನೆಂದು ಹೇಳೋಣ! ಆ ಚಿತ್ರಗಾರರು ಶಿಲ್ಪಿಗಳು ತಾನೆ ಎಂಥವರು? ಯಾವ ಚಕ್ರವರ್ತಿಯ ವಿವಾಹಮಂಟಪ ಈ ತೆರನಾದ ಶಿಲ್ಪಕೌಶಲವನ್ನು ತೋರ ಬಲ್ಲದು? ಕಲ್ಯಾಣಮಂಟಪವೆಂದರೆ ಇದಕ್ಕಲ್ಲವೆ ಆ ಹೆಸರು ಸಲ್ಲತಕ್ಕದ್ದು?'' ಎನ್ನುತ್ತಾರೆ (ಅದೇ, ಪು.೨೧).

ಇಂಥ ಭಾವನೆಗಳು ಸಾಮಾನ್ಯರಾದವರಲ್ಲಿ ಉದಿಸಲಾರವು. ಚಿಂತನ ಶೀಲನಾದ ವ್ಯಕ್ತಿ ಮಾತ್ರ ಈ ರೀತಿ ಅಪರೂಪದ ಸನ್ನಿವೇಶಗಳನ್ನು ಕಂಡು ಸ್ಪಂದಿಸಬಲ್ಲ.

ಪಂಪಾಸರಸ್ಸನ್ನು ಕಂಡಾಗ, ಅಲ್ಲಿಗೆ ಮಂಗಲಯಾನ ಮಾಡುತ್ತ ಬಂದಿಳಿದ ಕ್ರೌಂಚ ಬಲಾಕ ಪಂಕ್ತಿಗಳನ್ನು ನೋಡಿದಾಗ, ವಿ.ಸೀ. ಯವರ ಕವಿಹೃದಯ ಉಕ್ಕಿ ಹರಿಯುತ್ತದೆ. ಸರಸ್ಸನ್ನು ಕಂಡಕೂಡಲೆ ಮನಸ್ಸಿನಲ್ಲಿದ್ದ ಎಲ್ಲ ಅಲ್ಪ ಭಾವನೆಗಳೂ, ದೇಹದ ಎಲ್ಲ ತಾಪಗಳೂ ಮಾಯವಾಗುತ್ತವೆ. ಶಾಂತಿ ಆವರಿಸುತ್ತದೆ.

> ''ಎಲ್ಲೆಲ್ಲಿಯೂ ನಿಶ್ಶಬ್ದ. ಆದರೆ ಆ ನಿಶ್ಶಬ್ದತೆಯು ಯಾವ ನಿರ್ಜೀವ ವಸ್ತುವಿನ ನಿಶ್ಶಬ್ದತೆಯಂತೆ ಇಲ್ಲ; ಮೂಢನ ಅಥವಾ ಗರ್ವಿಯ ಮೌನದಂತೆಯೂ ಇಲ್ಲ. ಶಬ್ದಕ್ಕೆ ಇಲ್ಲಿ ಸ್ಥಳವಿಲ್ಲ ಅವಕಾಶವಿಲ್ಲ. ಅಷ್ಟೇ. ವ್ಯವಹಾರ ಪ್ರಪಂಚ ಈ ಭೂಭಾಗದ ಹೊರ ಎಲ್ಲೆಗೆ ಬಹುದೂರದಲ್ಲಿ ಎಲ್ಲಿಯೋ ಕೊನೆಗೊಂಡಂತಿದೆ. ಅದಕ್ಕೂ ಇದಕ್ಕೂ ಯಾವ ವಿಧವಾದ ಸಂಪರ್ಕವೂ ಇಲ್ಲ. ಬೆಟ್ಟಗಳು ಕೂಡ ಇಲ್ಲಿ ನಮ್ರತೆಯಿಂದ ಉಚ್ಚ ಮನೋಭಾವದಿಂದ, ನಿರ್ಮಲ ಚಿತ್ತದಿಂದ ಸರಸ್ಸಿಗೆ ಮರ್ಯಾದೆಯಿತ್ತು ಅದರ ಶಾಂತಿಯನ್ನು ಕಾಪಾಡಿಕೊಂಡು ಬಂದಿವೆ....''
>
> (ಅದೇ, ಪು.೨೮)

ಹಾಸ್ಯಮಯ ಸನ್ನಿವೇಶಗಳು

ಉತ್ತಮ ದರ್ಜೆಯ ಹಾಸ್ಯ ನಮ್ಮ ಬರವಣಿಗೆಯಲ್ಲಿ ತೀರ ಅಪರೂಪದ ವಸ್ತು. ಹಾಸ್ಯತಮ ಸನ್ನಿವೇಶಗಳನ್ನು ಗುರುತಿಸಿ ನಯವಾದ ನಗುವನ್ನು ಹುಟ್ಟಿಸುವ ಕಲೆ ಶ್ರೇಷ್ಠಮಟ್ಟದ್ದು. ಈ ಕಲೆಯನ್ನು ವಿ.ಸೀ. ತಮ್ಮ ಎಳೆವಯಸ್ಸಿನಲ್ಲೆ ಸಾಧಿಸಿಬಿಟ್ಟಿದ್ದರು.

ಪ್ರವಾಸದುದ್ದಕ್ಕೂ ಹಾಸ್ಯಕರ ಸನ್ನಿವೇಶಗಳು ಒಂದಾಗುತ್ತಲೊಂದು ಎದುರಾಗುತ್ತವೆ. ಇವುಗಳ ವರ್ಣನೆ ಈ ಪ್ರವಾಸಕಥನದಲ್ಲಿ ರಸವತ್ತಾದ ಭಾಗ. ಪುಣ್ಯಕ್ಷೇತ್ರವಾದ ಹಂಪೆಯಲ್ಲಿನ ಮೊಳದುದ್ದದ ಮೊಂಡರಗಪ್ಪೆಗಳ, ಗೇಣುದ್ದದ ಚೇಳುಗಳ ಹಾವಳಿ; ಕಡುನಿಷ್ಠರಾದ 'ಯಜಮಾನರ' ಅಡುಗೆಯ ಪರಿಚಾರಿಕೆ; ಕಾಫಿ ಮಾಡಿಕೊಟ್ಟು ಇತರ ಯಾತ್ರಿಗಳ ಮನ ಒಲಿಸಿಕೊಂಡ ಪ್ರಸಂಗ; ಯಾತ್ರಿ

ಕರ ಭಾಗ್ಯದೇವತೆಯಾದ ಚೆನ್ನಮ್ಮ , ಅವಗ ಬೆಳಗುತ್ತಿರುವ ದೀಪಿಯಂದಾದ ಉಪಕಾರ; ಧಾರಾಕಾರವಾಗಿ ಸುರಿಯುವ ಮಳೆ, ಮಳೆಯ ಜೊತೆಗೆ ಗಾಳಿ; ಆ ಸನ್ನಿವೇಶದಲ್ಲಿ ಸಹಾಯಕ್ಕೆ ಒದಗದೆ ದುರ್ಗಮನೀಯವಾಗಿ ಸ್ವತಂತ್ರವೃತ್ತಿಯನ್ನು ಅವಲಂಬಿಸಿದ ಭಟ್ರಿಗಳು; ಆಲೆಯ ಮನೆಯಲ್ಲಿ ವಿಶ್ರಾಂತಿಗೆಂದು ತಂಗಿದ್ದ ವಿವಿಧ ರೀತಿಯ ಜನ, ಅವರ ಸಹಾವಳಿ; ಈ ಮಧ್ಯೆ ಕಾಲಿಗೆ ಹಾಕಿಕೊಂಡಿದ್ದ ಎಕ್ಕಡ ಕೈಕೊಟ್ಟು ಭಾರಿ ಅಸಂಗತ ನಡೆದದ್ದು; ಮೂರ್ತಿಯವರ ಗೇಲಿ; - ಇಂಥವು ಒಂದೇ ಎರಡೇ! ಸಾಮಾನ್ಯವಾದ ದಿನದಿನ ನಡೆಯುವ ಸನ್ನಿವೇಶಗಳ ವರ್ಣನೆಯಲ್ಲಿನ ಲಘು ಹಾಸ್ಯ, ಓದುಗರ ಮನಸ್ಸನ್ನು ಒಲಿಸುತ್ತ, ತಿಳಿ ನಗುವನ್ನು ಮೂಡಿಸುತ್ತ ಬರಹ ಸಾಗುತ್ತದೆ. ವಿಜಯನಗರ ಸಾಮ್ರಾಜ್ಯ ಏನೇ ಆಗಲಿ, ಆ ವಿಷಯವೇ ಮರೆತು ನಗೆಯ ಕಡಲಿನಲ್ಲಿ ಓಲಾಡುತ್ತೇವೆ.

ಪ್ರತಿಕ್ರಿಯೆ

'ಪಂಪಾಯಾತ್ರೆ' ಪುಸ್ತಕರೂಪದಲ್ಲಿ ಅಚ್ಚಾಗಿ ಕೈಸೇರಿದಾಗ, ಯಾತ್ರಿಗಳಲ್ಲಿ ಒಬ್ಬರಾದ ಡಿ.ವಿ.ಜಿ. ತಮಗುಂಟಾದ ಸಂತೋಷವನ್ನು ತಡೆಯಲಾರದೆ ಬರೆದ ಮಾತುಗಳಿವು :

> "..... What a regard - nay, reverence and affection have you brought into your delineation of friends! I am nearly ashamed of receiving the tribute you pay me; it is so much more than I consider my due and digest."
>
> (ಅದೆಷ್ಟು ಗೌರವ, ಗೌರವಕ್ಕಿಂತ ಹೆಚ್ಚಾಗಿ ಎಂಥ ಪೂಜ್ಯಭಾವ, ಮರ್ಯಾದೆ ವಿಶ್ವಾಸಗಳನ್ನು ನಿಮ್ಮ ಮಿತ್ರರುಗಳ ಚಿತ್ರಣದಲ್ಲಿ ತೋರಿದ್ದೀರಿ. ನಿಮ್ಮ ಪ್ರಶಂಸೆಯ ಮಾತುಗಳನ್ನು ಒಪ್ಪಿಕೊಳ್ಳಲು ನನಗೆ ನಾಚಿಕೆಯಾಗುತ್ತದೆ. ಅರಗಿಸಿ ಜೀರ್ಣಿಸಿಕೊಳ್ಳಲು ಆಗದ ಪ್ರಶಂಸೆಯ ಮಾತುಗಳು ನಿಮ್ಮವು.)
>
> (ಪತ್ರ, ೧೨ ನವೆಂಬರ್ ೧೯೩೭)

ಮುಂದುವರಿಯುತ್ತ ಬಿ.ಸೀ. ಯವರ ಶೈಲಿಯನ್ನು, ಅವರ ವರ್ಣನೆಗಳ ಸೊಗಸನ್ನು ಮುಕ್ತಕಂಠದಿಂದ ಹೊಗಳುತ್ತಾರೆ :

> "..... Your descriptions are most admirable. I had no idea at first that you had put such superb prose into what you described to me as playful stuff meant for light reading. No, it is really exquisite writing, fit only for careful reading - if all its beauty should be felt, of course. You have no doubt begun to talk in a light vein, but your throat develops and swells as you proceed. Good! Really good!!"

(ನಿಮ್ಮ ನಿರೂಪಣೆ ಅತ್ಯಂತ ಸೊಗಸಿನದು. ಹುಡುಗಾಟದ ಹವ್ಯಾಸ. ವಿರಾಮ ವೇಳೆಯಲ್ಲಿ ಓದಲು ತಕ್ಕುದಾದ ಲಘು ಪ್ರಬಂಧ ಎಂದು ಮೊದಲಿಗೆ ವಿವರಿಸಿದ್ದ ನಿಮ್ಮ ಈ ಬರಹ ಇಂಥ ಅದ್ಭುತ ಗದ್ಯವಾಗಿ ಪರಿಣಮಿಸುವುದೆಂದು ನಾನೆಣಿಸಿರಲಿಲ್ಲ. ಇಲ್ಲ! ಇದು ತುಂಬ ನಾಜೂಕಿನ ಶ್ರೇಷ್ಠತಮವಾದ ಬರವಣಿಗೆ. ಅದರ ಸೊಗಸನ್ನು ಅನುಭವಿಸಬೇಕೆನ್ನುವ ವರು ಶ್ರದ್ಧೆಯಿಂದ ಓದಬೇಕಾದದ್ದು. ಲಘುವಾಗಿ ಹಾಸ್ಯಶೈಲಿಯಲ್ಲಿ ಮೊದಲು ಮಾಡಿದ್ದರೂ ಬರಬರುತ್ತ ಬರವಣಿಗೆ ಮುಂದುವರಿದಂತೆ ನಿಮ್ಮ ಧ್ವನಿ ಹಿಗ್ಗಿ, ಓಜಸ್ಸಿನಿಂದ ಉಬ್ಬಿ ಮುಂದುವರಿಯುತ್ತದೆ. ಭೇಷ್, ಭೇಷ್!)

('ವಿ.ಸೀ. 'ಒಳ', ಪು. ೨೭೩)

ಈ ತೀರ್ಪಿನಲ್ಲಿ ನಾವೆಲ್ಲರೂ ಭಾಗಿಗಳಾಗುತ್ತೇವೆ. ನಮ್ಮ ಮೆಚ್ಚಿಗೆಯ ಹೂಮಾಲೆಯನ್ನು ವಿ.ಸೀ. ಯವರ ಕೊರಳಿಗೆ ಹಾಕಬಯಸುತ್ತೇವೆ. ಸಹೃದಯರೆಲ್ಲರ ಮೆಚ್ಚಿಗೆಯನ್ನು ಕಂಡು ತರುಣ ವಿ.ಸೀ. ಯವರ ಮನಸ್ಸು ಉಬ್ಬಿರಬೇಕು.

ವಿ.ಸೀ. ಯವರ ಬಾಲ್ಯದ ಗೆಳೆಯರು ವರದರಾಜಯ್ಯಂಗಾರ್ಯರು. ಇವರು ಐ.ಸಿ.ಎಸ್. ಪದವಿ ಗಳಿಸಿ ಭಾರತ ಸರಕಾರದಲ್ಲಿ ಉನ್ನತ ಅಧಿಕಾರಿಗಳಾಗಿದ್ದು, ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದಲ್ಲಿ ಪ್ರಧಾನಿ ಪಂಡಿತ ನೆಹರು ಅವರ ಆಪ್ತಕಾರ್ಯದರ್ಶಿಯಾಗಿ ಕೆಲಸ ಮಾಡಿದವರು. ತರುವಾಯ ರಿಸರ್ವ್ ಬ್ಯಾಂಕಿನ ಗವರ್ನರರಾದರು. ಅವರು 'ಪಂಪಾಯಾತ್ರೆ' ಓದಿದಾಗ ಐ.ಸಿ.ಎಸ್. ಅಧಿಕಾರಿಯ ಮನಸ್ಸಿನಲ್ಲಿ ಹುಟ್ಟಿದಂಥ, ಆ ವೃತ್ತಿಗೆ ಸ್ವಾಭಾವಿಕವಾದಂಥ ಪರಿಭಾಷೆಯನ್ನುಪಯೋಗಿಸಿ ತಮ್ಮ ಭಾವನೆಗಳಿಗೆ ಈ ರೀತಿ ರೂಪುಕೊಟ್ಟಿದ್ದಾರೆ:

"The idea struck me that if you were an Englishman and had done similar work in English, you would probably have had a flat in London and a country house - and a fat bank balance. ..... This is courageous work, the work you are doing" (3.1.1928).

(ನನಗೊಂದು ಭಾವನೆ ಹೊಳೆಯಿತು; ನೀವೇನಾದರೂ ಇಂಗ್ಲಿಷಿನವರಾಗಿದ್ದು, ಇಂಗ್ಲಿಷಿನಲ್ಲಿ ಇಂಥ ಪ್ರಬಂಧವನ್ನು ಬರೆದಿದ್ದರೆ ಲಂಡನ್ ನಗರದಲ್ಲಿ ಫ್ಲ್ಯಾಟ್ ಒಂದು ನಿಮಗೆ ಇರುತ್ತಿತ್ತು. ತೋಟದಲ್ಲಿ ಮನೆಯೊಂದಿರುತ್ತಿತ್ತು. ಬ್ಯಾಂಕಿನಲ್ಲಿ ತುಂಬಿ ತುಳುಕುವ ಹಣವಿರುತ್ತಿತ್ತು..... ದಿಟ್ಟತನದ ಕೆಲಸ, ನೀವು ಮಾಡುತ್ತಿರುವ ಕಾರ್ಯ.)

('ವಿ.ಸೀ. 'ಒಳ', ಪು.೨೮೨)

ಹಾ.ಮಾ.ನಾಯಕರು ಆಕಾಶವಾಣಿಯಲ್ಲಿ ವಿ.ಸೀ. ಯವರ ಬಗ್ಗೆ ಮಾತನಾಡುತ್ತ 'ಪಂಪಾಯಾತ್ರೆ'ಯನ್ನು 'ಕೃತಿರತ್ನ' ಎಂದು ಕರೆದಿದ್ದಾರೆ. ಉತ್ತಮ ಶೈಲಿಗೆ, ಕನ್ನಡ ಗದ್ಯದ ಸುಂದರತೆಗೆ ಸಾಕ್ಷಿ, ಕನ್ನಡ ಗದ್ಯಸಾಹಿತ್ಯದ ಒಂದು ಮೈಲಿಗಲ್ಲು ಎಂದಿದ್ದಾರೆ (ಹಾ.ಮಾ.ನಾಯಕ, ೧೯೫೩, ಪು.೧೮).

ಕನ್ನಡಿಗರ ಕಲಾವಿಮುಖತೆ

'ಪಂಪಾಯಾತ್ರೆ' ಪುಸ್ತಕರೂಪದಲ್ಲಿ ಮೊದಲು ಪ್ರಕಟವಾದದ್ದು ೧೯೨೮ರಲ್ಲಿ. ಅದು ಮರುಮುದ್ರಣವನ್ನು ಕಾಣಲು ನಾಲ್ಕು ವರ್ಷ ಕಾಯಬೇಕಾಯಿತು. ಅದೂ ಪಠ್ಯಪುಸ್ತಕವಾಗಿ ಆಯ್ಕೆಯಾದ ಕಾರಣದಿಂದ; ಓದುಗರು ತೋರಿಸಿದ ಆಸಕ್ತಿಯಿಂದಲ್ಲ. ಮೂರನೆ ಮುದ್ರಣ ಕಾಣಲು ನಲವತ್ತು ವರ್ಷಗಳೇ ಬೇಕಾದವು. ಹಲವು ಕೋಟಿ ಜನಸಂಖ್ಯೆಯಿರುವ ಕನ್ನಡ ರಾಜ್ಯದಲ್ಲಿ, ಇಂಥ ಉತ್ತಮ ಕೃತಿಯನ್ನು ಕೊಂಡು ಓದುವಂಥ ಮಹನೀಯರು ಮೂರು ಸಾವಿರ ಜನವೂ ದೊರೆಯದೆ ಹೋದರೆ? ಇಷ್ಟು ಅಭಿಮಾನಶೂನ್ಯರೆ ಕನ್ನಡಿಗರು? ಕಲೆ ಸಂಸ್ಕೃತಿಗಳಲ್ಲಿ, ಉತ್ತಮ ಸಾಹಿತ್ಯದಲ್ಲಿ, ಅವರಿಗೆ ಅಭಿರುಚಿಯೇ ಇಲ್ಲದೆ ಹೋಗಿದೆಯೆ? ಕನ್ನಡಿಗರ ಕಲಾವಿಮುಖತೆಯನ್ನು ಕಂಡು ನಿಟ್ಟುಸಿರಿಡುವಂತಾಗುತ್ತದೆ.

ಈಚಿನ ವರ್ಷಗಳಲ್ಲಿ ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯ ತಲೆಯೆತ್ತಿದೆ. ಈ ವಿದ್ಯಾನಿಲಯದ ಹೊಸಿಲನ್ನು ಮೆಟ್ಟುವ ಪ್ರತಿಯೊಬ್ಬ ವಿದ್ಯಾರ್ಥಿಯ ಕೈಯಲ್ಲೂ 'ಪಂಪಾಯಾತ್ರೆ'ಯ ಪ್ರತಿಯೊಂದನ್ನು ಕೊಡುವುದು ಸೂಕ್ತಕ್ರಮವಾಗಿ ಕಾಣುತ್ತದೆ. ವಿದ್ಯಾರ್ಥಿ ಪುಸ್ತಕವನ್ನು ಓದಿದಾಗ ಅವನ ಮನಸ್ಸಿನಲ್ಲಿ ತನ್ನ ನಾಡಿನ ಬಗ್ಗೆ, ತನ್ನ ತಾಯ್ನುಡಿಯ ಬಗ್ಗೆ, ತನ್ನ ದೇಶದ ಇತಿಹಾಸದ ಬಗ್ಗೆ, ಹೆಮ್ಮೆ ಮೂಡುವುದರಲ್ಲಿ ಸಂದೇಹವಿಲ್ಲ. ತಿಳಿಗನ್ನಡ ಗದ್ಯ ಶೈಲಿಯು ಎಷ್ಟು ಸೊಗಸಿನದು ಎನ್ನುವುದರ ಅರಿವಾಗುತ್ತದೆ. ಬರೆದರೆ ಹೀಗೆ ಬರೆಯಬೇಕು ಎನ್ನುವ ಹಂಬಲ ಮೂಡುತ್ತದೆ. ಉತ್ತಮವಾದ ಆದರ್ಶ ಕಣ್ಣ ಮುಂದೆ ನಿಲ್ಲುತ್ತದೆ. ಇದಕ್ಕಿಂಥ ಹೆಚ್ಚಿನದು ವಿದ್ಯಾರ್ಥಿಗೆ ಇನ್ನೇನು ಬೇಕು!

ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕ

ಕನ್ನಡ ಶಿಕ್ಷಣದ ಆಧುನೀಕರಣ

೧೯೨೭ರ ಸುಮಾರಿಗೆ ಬಿ.ಎಂ. ಶ್ರೀಕಂಠಯ್ಯನವರು ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರಾಗಿ ನೇಮಕವಾದರು. ಆಗ ಕನ್ನಡ ಅಧ್ಯಯನಕ್ಕೆ ಹೊಸತೊಂದು ಶಕ್ತಿ ದೊರೆತಂತಾಯಿತು. ಕನ್ನಡ ಸಾಹಿತ್ಯದ ಅಭಿವೃದ್ಧಿ ಸಾಧಿಸಲು ಶ್ರೀಕಂಠಯ್ಯನವರ ಮಾರ್ಗದರ್ಶನದಲ್ಲಿ ವಿಶ್ವವಿದ್ಯಾನಿಲಯ 'ಕನ್ನಡ ಪ್ರಕಟನ ಸಮಿತಿ' ಒಂದನ್ನು ರೂಪಿಸಿತು. ಪ್ರಸಿದ್ಧರಾದ ಗ್ರಂಥಕರ್ತರನ್ನು ಆಯ್ದು, ಅವರಿಂದ ಕನ್ನಡ ಗ್ರಂಥಗಳನ್ನು ಸಿದ್ಧಪಡಿಸುವ ಪ್ರಯತ್ನ ಅಂದು ಮೊದಲಾಯಿತು. ಹಳಗನ್ನಡ ಸಾಹಿತ್ಯಕೃತಿಗಳ ಪರಿಚಯ ವಿದ್ಯಾರ್ಥಿಗಳಿಗೆ ಆಗಬೇಕೆಂಬ ಉದ್ದೇಶದಿಂದ ಉತ್ತಮ ಕಾವ್ಯಸಂಗ್ರಹಗಳು ಹೊರಬಿದ್ದವು. ಶುದ್ಧಪಾಠವನ್ನು ಒಳಗೊಂಡು, ಕವಿ-ಕಾವ್ಯಪರಿಚಯ ಮಾಡಿಕೊಡುವ ಪೀಠಿಕಾಪ್ರಕರಣ, ಶಬ್ದಕೋಶ ಮತ್ತು ಇತರ ಟಿಪ್ಪಣಿಗಳಿಂದ ಕೂಡಿದ ಪುಸ್ತಕಗಳು ವಿದ್ಯಾರ್ಥಿಗಳ ಮನಸ್ಸನ್ನು ಒಲಿಸಿಕೊಳ್ಳಲು ಸಹಾಯಕವಾದವು.

ಅದುವರೆಗೂ ಕಾಲೇಜು ವಿದ್ಯಾರ್ಥಿಗಳಿಗೆ ಕಾವ್ಯಬೋಧನೆ ಸಾಂಪ್ರದಾಯಿಕ ರೀತಿಯಲ್ಲಿ ನಡೆಯುತ್ತಿತ್ತು. ಇದು ಬದಲಾಗಬೇಕೆಂದೂ, ಕನ್ನಡ ಶಿಕ್ಷಣವನ್ನು ಆಧುನಿಕಗೊಳಿಸಬೇಕೆಂದೂ ಶ್ರೀಕಂಠಯ್ಯನವರು ಯೋಚಿಸಿ ಅದಕ್ಕಾಗಿಯೇ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರು. ಅರ್ಥಶಾಸ್ತ್ರದಲ್ಲಿ ಎಂ.ಎ. ಪದವೀಧರರಾಗಿ, ಕನ್ನಡದಲ್ಲಿ ವಿಶೇಷ ಆಸಕ್ತಿ ವಹಿಸಿ, ಆ ಹೊತ್ತಿಗಾಗಲೆ ಪ್ರಬುದ್ಧ ಕರ್ಣಾಟಕದಲ್ಲಿ ಕವನಗಳನ್ನೂ ವಿಮರ್ಶಾತ್ಮಕ ಲೇಖನಗಳನ್ನೂ ಬರೆದು ಎಲ್ಲರ ಕಣ್ಣಿಗೂ ಬಿದ್ದಿದ್ದ, ಶಾರದಾವಿಲಾಸ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಹೆಸರುಗಳಿಸಿದ್ದ ವಿ.ಸೀ.ಯವರ ಮೇಲೆ ಶ್ರೀಕಂಠಯ್ಯನವರ ಗಮನ ಹರಿಯಿತು. ಅವರನ್ನು ಕನ್ನಡ ಅಧ್ಯಾಪಕರನ್ನಾಗಿ ಆರಿಸಿಕೊಂಡರು. ೧೯೨೮ರಲ್ಲಿ ವಿಶ್ವವಿದ್ಯಾನಿಲಯದ ಆದೇಶದಂತೆ ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವಿ.ಸೀ. ಆಯ್ಕೆಯಾದರು. ಮುಂದೆ ಹದಿನೈದು ವರ್ಷ ಕಾಲ ಅಧ್ಯಾಪಕರಾಗಿ ಅಲ್ಲಿ ಮುಂದುವರಿದು, ಅನೇಕಾನೇಕ ವಿದ್ಯಾರ್ಥಿಗಳ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡರು.

'ನಿವೇದನ' ಬೋಧಿಸಿದ ಗುರು

೧೯೩೨ರಿಂದ ೧೯೩೪ರವರೆಗೆ ಎರಡು ವರ್ಷ ಕಾಲ ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೇಜು ವಿಜ್ಞಾನ ವಿದ್ಯಾರ್ಥಿಯಾಗಿ ವಿ.ಸೀ.ಯವರ

ಕನ್ನಡ ಪಾಠ ಕೇಳುವ ಭಾಗ್ಯ ನನ್ನದಾಗಿತ್ತು. ಅದೇ ವರ್ಷವೆ ವಿದ್ವಎದ್ಯಾನಿಲಯ ದವರು ಕನ್ನಡ ಪ್ರಕಟನ ಸಮಿತಿಯ ಮೊದಲನೆಯ ಹೊತ್ತಿಗೆಯಾಗಿ ರಾಘವಾಂಕ ಕವಿಯ 'ಹರಿಶ್ಚಂದ್ರಕಾವ್ಯ ಸಂಗ್ರಹ'ವನ್ನು ಹೊರತಂದಿದ್ದರು. ಈ ಕಾವ್ಯವೇ ನಮ್ಮ ಪುಣ್ಯದಿಂದ ಪಠ್ಯಪುಸ್ತಕವಾಗಿ ಆ ವರ್ಷ ಆಯ್ಕೆಯಾಗಿತ್ತು. ವಿ.ಸೀ.ಯವರು ಈ ಕಾವ್ಯ ಪಾಠ ಮಾಡಿದ ರೀತಿಯನ್ನು, ಕನ್ನಡದಲ್ಲಿ ತಾತ್ಪಾರಭಾವನೆಯನ್ನು ತಾಳಿದ್ದ ವಿದ್ಯಾರ್ಥಿಗಳಲ್ಲಿ ಆಸಕ್ತಿ ಹೇಗೆ ಹುಟ್ಟಿಸಿದರೆನ್ನುವುದನ್ನು ಈಗಾಗಲೆ ಪ್ರಸ್ತಾಪಿಸಿದ್ದೇನೆ. ಭಾಗ್ಯವಶಾತ್ ನಮಗಿಟ್ಟಿದ್ದ ಪಠ್ಯಪುಸ್ತಕಗಳೆಲ್ಲವೂ ಅತಿ ಶ್ರೇಷ್ಠ ವರ್ಗಕ್ಕೆ ಸೇರಿದವಾಗಿದ್ದವು. ಮೊದಲನೆಯ ವರ್ಷ ಹರಿಶ್ಚಂದ್ರ ಕಾವ್ಯ ಸಂಗ್ರಹವಾಗಿದ್ದರೆ ಎರಡನೆಯ ವರ್ಷ ಡಿ.ವಿ.ಜಿ.ಯವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಮತ್ತು 'ನಿವೇದನ' ವ್ಯಾಸಂಗಕ್ಕೆ ನಿಯಮಿತವಾಗಿದ್ದವು. ಇವು ಸುಲಭಕ್ಕೆ ಅರ್ಥಮಾಡಿಕೊಂಡು ಜೀರ್ಣಿಸಿಕೊಳ್ಳುವ ಪುಸ್ತಕಗಳಲ್ಲ. ಅವುಗಳ ಅಧ್ಯಯನಕ್ಕೆ ಬಹು ಪರಿಶ್ರಮ ಬೇಕು. ಆ ಗದ್ಯ ಪದ್ಯ ಕಾವ್ಯಗಳಲ್ಲಡಗಿದ್ದ ಸಾರ ಸಂಪತ್ತೆಲ್ಲವನ್ನೂ ಹೊರತಂದು ಅದನ್ನು ನಮಗೆ ಧಾರೆಯೆರೆದವರು ವಿ.ಸೀ. ಅವರ ಕ್ಲಾಸುಗಳು ದಿವಸದ ಮೊದಲಲ್ಲಿರಲಿ, ಕೊನೆಯಲ್ಲಿರಲಿ ಕೂಡಲು ಜಾಗವಿರುತ್ತಿರಲಿಲ್ಲ. ನಮ್ಮ ಕ್ಲಾಸಿಗೆ ಸೇರದ ಇತರರೂ, ಕಿಟಕಿಯ ಬಳಿ, ಬಾಗಿಲ ಬಳಿ, ನಿಂತು ಪಾಠ ಕೇಳುತ್ತಿದ್ದರು. ಈ ರೀತಿ ವಿದ್ಯಾರ್ಥಿಗಳ ಮನವನ್ನು ಆಕರ್ಷಿಸಿದ ಬೇರೊಬ್ಬ ಗುರುವನ್ನು ಹೆಸರಿಸುವುದು ಕಷ್ಟ.

ಎರಡನೆಯ ವರ್ಷ ಡಿ.ವಿ.ಜಿ.ಯವರ 'ನಿವೇದನ'ದಲ್ಲಿನ ಕವನಗಳ ಪಾಠ ಹೇಳಿದರು. ಆ ಪಾಠಗಳ ಸೊಗಸನ್ನು ವರ್ಣಿಸಲು ನನಗೆ ಮಾತುಗಳೇ ಬಾರವು. ಸಂಸ್ಕೃತಭೂಯಿಷ್ಠವಾದ ಪದಪಂಕ್ತಿಗಳು ವಿ.ಸೀ. ಅವರ ಬಾಯಿಂದ ತೈಲಧಾರೆಯಂತೆ ಒಂದೇ ಸಮನಾಗಿ ಹೊರಬೀಳುತ್ತಿದ್ದವು. ಅವುಗಳ ನಾದಮಾಧುರ್ಯಕ್ಕೆ ನಾವು ತೀರ ಮನಸೋತಿದ್ದೆವು. ಕೊಡಗಿನ ಪ್ರಕೃತಿ ಸೌಂದರ್ಯವನ್ನು ವರ್ಣಿಸುತ್ತ:

ಗಿರಿಗಳ, ಕಂದರಗಳ, ನಿರ್ಝರಿಗಳ, ವಿಪಿನಗಳ,
ವಕ್ರಪಥಗಳ, ದರಸುಂದರ ಶಮಕರ ರೂಪಂಗಳ,
ಅರಿವೊಡೆ ನೀಂ ನಡೆದು ನೋಡು ಕೊಡಗಿನ ಬೆಡಗಂ

* * *

ಮಂದಪರಿಮಳಿತ ಶೀತಲ ವಾತ ಸಂಚಲಿತ ಕುಸುಮ ಕಿಸಲಯ ಪ್ರಸರ

ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ಮೆಟ್ಟಲು ವಾಮನರೂಪವನ್ನು ತಾಳಿ ಬಂದ ಹರಿಯನ್ನು ಕಂಡು :

ನೀಂ ಹರಿಯ ಕಿರಿಯನಂ ಗೈದೆಯಲ್ಲೆ ಬಲೀಂದ್ರಾ

ಎಂದೂ, ಬೇಲೂರಿನ ಶಿಲಾಬಾಲಿಕೆಯರನ್ನು ಕುರಿತು :

ಶ್ರವಣಕೆ ಸಿಲುಕದ ಲಲಿತಾರವ ಸುಖಮಂ,
ರಸನೆಗೊದವದ ಅಮೃತ ದ್ರವಮಂ,
ಎವೆಯಿಕ್ಕದ ನಯನಗಳಂ ಸವಿವುದು ನೀವು
ಎಂಬ ಮಾಯಕಾತಿಯರಿವರಾರ್?

ಎಂದೂ ಪ್ರಶ್ನಿಸಿದ್ದು; ಶಿಲ್ಪಿವರಕುವರಿಯರು ಒಬ್ಬೊಬ್ಬರನ್ನೂ — ''ಶೃಂಗಾರ ವಲ್ಲರಿಯೆ, ಮಾಧುರ್ಯ ಮಂಜೂಷೆ, ಮುಗ್ಧ ಮೋಹನ ವದನೆ, ಪ್ರಣಯ ಪ್ರರೋಹೆ'' ಎಂದು ಕರೆದಿದ್ದು;

ಅವ್ಯಕ್ತ ನಿನದದಿಂ,
ಅಕಲಂಕಿತಾಂಗದಿಂ,
ಅನ್ಯೂನ ಕರುಣತೆಯಿನ್,
ಅಮಿತ ಯಶದಿಂ
ಚಿರಕಾಲಮೆಸೆವುದೌ ಚಿತ್ತವೇಧನಿಯರಿರ

* * *

ನಿಮಗೆ ಜನ್ಮವನಿತ್ತ ಚಿತ್ರಚತುರರ ಚಿತ್ತದೇಕಾಗ್ರ
ಭಕ್ತಿದೀವಿಗೆಯ ಬೆಳಗಿ ..... ಪೊಳೆಯಿರೌ

ಎಂದು ಹಾರೈಸಿದ್ದು; ಈ ಸಾಲುಗಳು ಈಗಲೂ — ಅರುವತ್ತು ವರ್ಷಗಳು ಉರುಳಿಹೋದ ನಂತರವೂ — ಇನ್ನೂ ಕಿವಿಯಲ್ಲಿ ಮೊಳಗಿ ನನ್ನ ವಿದ್ಯಾರ್ಥಿ ದಿನಗಳ ನೆನಪನ್ನು ತರುತ್ತವೆ.

ಡಿ.ವಿ.ಜಿ.ಯವರ ಮಗ ಬಿ.ಜಿ.ಎಲ್. ಸ್ವಾಮಿ ಮತ್ತು ನಾನು ಸಮ ವಯಸ್ಕರು. ಕಾಲೇಜಿನಲ್ಲಿ ಒಟ್ಟಿಗೇ ಓದುತ್ತಿದ್ದೆವು. ಅವರು ತೆಗೆದುಕೊಂಡದ್ದು ಸಸ್ಯಶಾಸ್ತ್ರ, ನನ್ನದು ಭೂಶಾಸ್ತ್ರ. ನಾವಿಬ್ಬರೂ ವಿ.ಸೀ.ಯವರಿಂದ ವಿವಿಧ ರೀತಿಯಲ್ಲಿ ಪ್ರಭಾವಿತರಾದವರು. ವಿ.ಸೀ. ಪಾಠಕ್ರಮವನ್ನು ಸ್ವಾಮಿ ಮೆಚ್ಚಿಕೊಂಡದ್ದು ಹೀಗೆ :

> ''ಕಾವ್ಯವೇ ಆಗಲಿ, ನಾಟಕವೇ ಆಗಲಿ, ವಿ.ಸೀ.ಯವರು ಓದಬೇಕು ಇತರರು ಕೇಳಬೇಕು, ಅದರ ರಮ್ಯತೆಯನ್ನು ಅನುಭವಿಸಬೇಕು. ವಿ.ಸೀ. ಯವರ ಓದುಗಾರಿಕೆಯಲ್ಲಿ ಜೀವಸ್ವರವಾಗಿ ಮಿಡಿಯುತ್ತಿದ್ದದ್ದು ಧ್ವನಿ. ..... ಹಳಗನ್ನಡವಾಗಲಿ, ಹೊಸಗನ್ನಡವಾಗಲಿ, ಪದ್ಯವಾಗಲಿ, ಗದ್ಯವಾಗಲಿ ನಾಟಕವಾಗಲಿ, ವಿ.ಸೀ. ಅವರ ಕೊರಳಲ್ಲಿ ಒಂದು ಅಪೂರ್ವವಾದ ವರ್ಚಸ್ಸು, ಶಕ್ತಿ ಮಾಧುರ್ಯಗಳಿಂದ ರೂಪುಗೊಂಡು ಹೊರಬರುತ್ತಿದ್ದವು. ಇವರ ಓದುಗಾರಿಕೆಯ ಬಾಣಿಯನ್ನು ಅನುಕರಿಸಹೋದವರು ಅಪರೂಪ. ಅನುಸರಿಸಿ ಗೆದ್ದವರಂತೂ ಇಲ್ಲವೆಂದೇ ಹೇಳಬೇಕು''.
>
> *(ಸ್ವಾಮಿ : 'ಪಂಚಕಲಶ ಗೋಪುರ', ಪು.೯೨)*

ಇದು ವಿ.ಸೀ.ಯವರ ವಾಚನವೈಖರಿ. ಅದರ ಮುಂದೆ ಮಿಕ್ಕೆಲ್ಲವೂ ನೀರಸ, ಸಪ್ಪೆ.

ಕನ್ನಡ ಪಾಠವನ್ನು ಇಂಗ್ಲಿಷ್ ಮಾಧ್ಯಮದ ಮೂಲಕ ಬೋಧಿಸುವ ಹೊಸ ಬಗೆಯ ಅಧ್ಯಾಪಕರು ಎಂದು ವಿ.ಸೀ. ಹೆಸರು ಗಳಿಸಿದ್ದರು. ಕನ್ನಡ ಮಾತು ಎಷ್ಟು ಸುಲಭವಾಗಿ ಅವರ ಬಾಯಿಂದ ಹೊರಬರುತ್ತಿದ್ದವೊ ಅಷ್ಟೇ ಸುಲಭವಾಗಿ ಇಂಗ್ಲಿಷ್ ವಾಕ್ಯಗಳೂ ಹೊರಹೊಮ್ಮುತ್ತಿದ್ದವು. ಅವನ್ನು ಕೇಳುವುದೇ ಒಂದು ಸೊಗಸು. ''ಜೀವನದಲ್ಲಿ ಸಾರವತ್ತಾದದ್ದು, ಶ್ರೀಮಂತವಾದದ್ದು, ಉನ್ನತವಾದದ್ದು, ಆನಂದದಾಯಕವಾದದ್ದು ಏನೆಲ್ಲ ಇದೆಯೋ ಅವುಗಳ ಕಡೆ ವಿದ್ಯಾರ್ಥಿಗಳ ಗಮನ ಹರಿಸಿದ ಆಚಾರ್ಯಪುರುಷ ವಿ.ಸೀ.''

ಪಾಠ ಮಾಡುವಾಗ ಕಾವ್ಯಭಾಗದ ಸಾರವೆಲ್ಲವನ್ನೂ ಭಟ್ಟಿ ಇಳಿಸಿ ವಿದ್ಯಾರ್ಥಿಗಳಿಗೆ ತಿಳಿಸುತ್ತಿದ್ದರು. ಇದಿಷ್ಟೇ ಅಲ್ಲ, 'ನೀವು ತಿಳಿಯಬೇಕಾದ್ದು ಇನ್ನೂ ಬೇಕಾದಷ್ಟು ಇದೆ. ಉತ್ತಮವಾದದ್ದು ಎಂದೆನಿಸಿರುವುದನ್ನು ಮಾತ್ರ ನಾನು ಕಾಣಿಸಿದ್ದೇನೆ. ಮಿಕ್ಕುದನ್ನು ನೀವು ಕಷ್ಟಪಟ್ಟು ವ್ಯಾಸಂಗ ಮಾಡಿ ಮುಂದೆ ತಿಳಿದುಕೊಳ್ಳಲು ಪ್ರಯತ್ನಿಸಬೇಕು' ಎಂದು ಹೇಳುತ್ತಿದ್ದರು. ಆಚಾರ್ಯನಾದವನ ಮುಖ್ಯ ಕರ್ತವ್ಯ ಇದೇ ಅಲ್ಲವೆ ?

'ಗುರು ಮಾವುಲೀ'

ಗುರು ಶಿಷ್ಯ ಸಂಬಂಧವನ್ನು ಸೂಚಿಸುವುದಕ್ಕೆ ಮರಾಠಿ ಭಾಷೆಯಲ್ಲಿ 'ಗುರು ಮಾವುಲೀ' ಎಂಬ ಪದ ವಾಡಿಕೆಯಲ್ಲಿದೆಯಂತೆ. 'ಮಾವುಲೀ' ಎಂದರೆ ಆಗ ತಾನೆ ಕರು ಹಾಕಿದ ಹಸು ಎಂದರ್ಥವಂತೆ. ಹಸಿದ ಕರು 'ಅಂಬಾ' ಎನ್ನುವ ಮೊದಲೇ ಹಸು ತನ್ನ ಕೆಚ್ಚಲಿನಲ್ಲಿ ಹಾಲಿನ ಒತ್ತಡವನ್ನು ತಡೆಯಲಾರದೆ ಧಾವಿಸಿ ಬಂದು ಮೊಲೆಯನ್ನು ಊಡುತ್ತದೆ. ಶಿಷ್ಯವತ್ಸಲನಾದ ಗುರು ಇದೇ ರೀತಿ ಜ್ಞಾನ ಪೀಯೂಷವನ್ನು ಶಿಷ್ಯನಿಗೆ ಊಡಿಸುತ್ತಾನಂತೆ. ಎಷ್ಟು ಸಮರ್ಪಕವಾದ ಹೋಲಿಕೆ ! ವಿ.ಸೀ.ಯವರ ವಿದ್ಯಾದಾನದ, ಶಿಕ್ಷಣಕ್ರಮದ ಹಿಂದಿನ ಮನೋಧರ್ಮ ಈ ಬಗೆಯದು.

ವಿ.ಸೀ.ಯವರ ಜ್ಞಾನಸಂಪತ್ತು

ವಿ.ಸೀ. ಬಹುಶ್ರುತರು. ಅವರ ಜ್ಞಾನಾರ್ಜನೆ ಅಪಾರವಾದದ್ದು. ಈ ಜ್ಞಾನಸಂಪತ್ತು ಅವರ ಅಧ್ಯಾಪಕತನಕ್ಕೆ ವಿಶೇಷ ಮೆರಗನ್ನು ಕೊಟ್ಟಿತ್ತು. ಇಂಗ್ಲಿಷ್ ಕನ್ನಡ ಸಾಹಿತ್ಯಗಳಲ್ಲಿ ಉತ್ತಮವಾದ ಕೃತಿಗಳೆಲ್ಲದರ ಪರಿಚಯವಿತ್ತು ಅವರಿಗೆ. ಅರ್ಥಶಾಸ್ತ್ರದಲ್ಲಿನ ಅವರ ಜ್ಞಾನ, ಆಗಿನ ಕಾಲದ ವಿದ್ವಾಂಸರ ಜ್ಞಾನಕ್ಕೆ ಸರಿಸಮನಾಗಿತ್ತು. ರಾಜ್ಯಶಾಸ್ತ್ರ ತತ್ತ್ವಶಾಸ್ತ್ರಗಳಲ್ಲಿ ಕೂಡ ಆಳವಾದ ಪಾಂಡಿತ್ಯ ಸಂಪಾದಿಸಿಕೊಂಡಿದ್ದರು. ವಿ.ಸೀ.ಯವರನ್ನು ಹತ್ತಿರದಿಂದ ಬಲ್ಲ ಪಿ.ವಿ. ಜೋಶಿಯವರು ಹೇಳುತ್ತಾರೆ :

''ವಿ.ಸೀ.ಯವರ ವಿದ್ಯಾರಣ್ಯದಲ್ಲಿ ಪ್ರವೇಶಪಡೆದವರಿಗೂ ಕೂಡ ಅಲ್ಲಿ ಎತ್ತರವಾದ ಶಿಖರ ಯಾವುದು? ಸಾಹಿತ್ಯವೋ? ಸಂಗೀತವೋ? ಅರ್ಥ ಶಾಸ್ತ್ರವೋ? ತತ್ತ್ವಶಾಸ್ತ್ರವೋ? ನಿಷ್ಠುರವಾದ ನ್ಯಾಯವೋ? ಹೆಂಗರುಳಿನ ಲೋಕಕಾರುಣ್ಯವೋ? ಯಾವುದೊ? ಯಾವುದೊ? ಎಂದು ದಿಗಿಲಾಗುತ್ತದೆ. ಆ ಪ್ರದೇಶಕ್ಕೆ ಪ್ರವೇಶಿಸುವ ಭಾಗ್ಯ ಒಮ್ಮೆ ದೊರೆತರೆ ಆ ಗುರು ತನ್ನ ಶಿಷ್ಯನ 'ಯೋಗಕ್ಷೇಮಂ ವಹಾಮ್ಯಹಂ' ಎನ್ನುತ್ತಾರೆ. ಅವರ ಜೊತೆ ನಡೆಯುವಾಗ ಎಷ್ಟು ಎತ್ತರಕ್ಕೆ ನಮ್ಮನ್ನು ಏರಿಸಿದ್ದಾರೆಂಬುದೇ ತಿಳಿಯುವುದಿಲ್ಲ. ಶಕ್ತವಾದ ಆ ಬುದ್ಧಿಯ ಸಂಚಾರ ಅಷ್ಟು ಲೀಲಾಜಾಲವಾಗಿ ನಡೆಯುತ್ತದೆ.''

ಕನ್ನಡದಲ್ಲಿ ಏನಿದೆ? ಏನಿಲ್ಲ? - ಎಂಬೆರಡನ್ನು ತೋರಿಕೊಟ್ಟ ಮಹಾನುಭಾವರು ವಿ.ಸೀ. ಎಂದು ಕೊಂಡಾಡಿದ್ದಾರೆ ಶಿವರಾಮ ಕಾರಂತರು. ತಾವು ಪಾಠ ಹೇಳುವ ಕಾಲದಲ್ಲಿ ಕಣ್ಣಿನ ಮುಂದೆ ಚಿತ್ರ ಕಟ್ಟುವ ಅನೇಕ ಉದಾಹರಣೆಗಳನ್ನು ಹೇಳಿ, ವಿದ್ಯಾರ್ಥಿಗಳಲ್ಲಿ ಕನ್ನಡದ ಮೇಲೆ ವಿಶೇಷ ಮಮತೆ ಹುಟ್ಟುವಂತೆ ಮಾಡುತ್ತಿದ್ದವರು ಅವರು.

'ವಿದ್ಯೆಯ ಫಲ ವಿನಯ, ಸಂಸ್ಕಾರ; ಕೇವಲ ಪಾಂಡಿತ್ಯವಲ್ಲ' ಎಂದಿದ್ದಾರೆ ವಿ.ಸೀ. 'ಒಂದು ವ್ಯಕ್ತಿ, ಒಂದು ಉತ್ತಮ ಬದುಕಿನ ರೂಪಣ ಅದರಿಂದ ಸಿದ್ಧಿಸಬೇಕು. ಯಾವುದು ನಮ್ಮ ಮನಸ್ಸನ್ನು ಬಿಡುಗಡೆ ಮಾಡುವುದೋ ಅದೇ ವಿದ್ಯೆ' ಎನ್ನುತ್ತಾರೆ. ಈ ತತ್ತ್ವವನ್ನು ಅನುಸರಿಸಿಯೇ ತಮ್ಮ ಬೋಧನಕ್ರಮವನ್ನು ರೂಪಿಸಿಕೊಂಡವರವರು. ವಿದ್ಯಾರ್ಥಿಗಳ ದೃಷ್ಟಿಯ ದಿಗಂತವನ್ನು ವಿಸ್ತರಿಸಲು ಹಂಬಲಿಸುತ್ತಿದ್ದರು. ಇದನ್ನು ಕಂಡೇ ಬಿ.ಎಂ. ಶ್ರೀ ಯವರು 'ಇತರರಿಗೆ depth ಇರಬಹುದು ಸೀತಾರಾಮಯ್ಯ: ಆದರೆ ನಿಮ್ಮ width ಯಾರಿಗೂ ಇಲ್ಲ' ಎಂದಿದ್ದರಂತೆ. ಈ ವಿವರಣೆಯಲ್ಲಿ ಉತ್ಪ್ರೇಕ್ಷೆ ಇಲ್ಲ.

''ಪಾಠ ಹೇಳುವವರು ಎಲ್ಲವನ್ನು ಹೇಳಿಬಿಡದೆ, ನಮ್ಮ ಊಹೆಗೂ ಓದಿಗೂ ಯೋಚನೆಗೂ ಅಷ್ಟು ಬಿಡಬೇಕೇನೊ ಎನ್ನಿಸುತ್ತದೆ. ವಿಷಯದ ವ್ಯಾಪ್ತಿಗೆ ನಮ್ಮ ಮನಸ್ಸು ತೆರೆದು, ಚಿಂತನವನ್ನು ಕೆರಳುವಂತೆ ಹತ್ತು ಪ್ರಶ್ನೆಗಳನ್ನು ಕೇಳಲು ವಿದ್ಯಾರ್ಥಿಗೆ ಪ್ರಚೋದನೆ ಬರುವಂತೆ ಪಾಠ ನಡೆಸಿದರೆ ಮೇಲೇನೊ ಎನಿಸುತ್ತದೆ.'' ಕಾಲೇಜು ದಿನಗಳಲ್ಲಿ ನಡೆದ ವಿದ್ಯಾಭ್ಯಾಸ ಕ್ರಮವನ್ನು ನೆನಸಿಕೊಂಡು ವಿ.ಸೀ. ಆಡಿದ ಮಾತುಗಳಿವು. ಉಪಾಧ್ಯಾಯರಾಗಿ ಪಾಠ ಹೇಳಲು ಮೊದಲು ಮಾಡಿದಾಗ ಈ ಕ್ರಮವನ್ನೆ ತಾವೂ ಮುಂದುವರಿಸಿದರು. ವಿದ್ಯಾರ್ಥಿಗಳ ಮನಸ್ಸು ಅರಳುವಂತೆ ಮಾಡಿ ಅವರ ಮುಂದೆ ಹೊಸದೊಂದು ಭಾಗ್ಯದ ಬಾಗಿಲು ತೆರೆಯುವಂತೆ ಮಾಡಿ ಧನ್ಯರಾದರು. ಕಾಲೇಜಿನಲ್ಲಿ ಮಾತ್ರ ಅವರದು ಅಧ್ಯಾಪಕ ವೃತ್ತಿ. ಮನೆಗೆ ಬಂದ ಮೇಲೆ ಅವರು ಕೊನೆಯವರೆಗೂ ವಿದ್ಯಾರ್ಥಿಯಾಗಿಯೇ ಉಳಿದಿದ್ದರು. ವಿದ್ಯಾರ್ಜನೆಯಲ್ಲಿ ಸದಾಕಾಲವೂ ಆಸಕ್ತರಾಗಿರುತ್ತಿದ್ದರು.

ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕಿದ್ದ ಶೋಚನೀಯ ಸ್ಥಿತಿ

ಆ ಕಾಲದಲ್ಲಿ ಕನ್ನಡಕ್ಕೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಗೌರವ ಸ್ಥಾನವಿರಲಿಲ್ಲ. ಇದನ್ನು ಆಗಲೆ ಪ್ರಸ್ತಾಪಿಸಿದ್ದಾಗಿದೆ. ಕನ್ನಡಕ್ಕೂ ಇತರ ದೇಶ ಭಾಷೆಗಳಿಗೂ ಬೇರೆ ಕಟ್ಟಡವಿರಲಿಲ್ಲ. ಸಾರ್ವಜನಿಕ ಶೌಚಾಲಯದ ಬಳಿಯ ಹೆಂಚಿನ ಮನೆ ಕನ್ನಡಕ್ಕೆ ಸಾಕೆಂದು ಎಣಿಸಿದ್ದ ಕಾಲ ಅದು. ಕನ್ನಡಕ್ಕಾಗಿ ಕೆಲಸ ಮಾಡುತ್ತಿದ್ದ ಜನರೆಲ್ಲರೂ ತುಂಬ ಕಷ್ಟದಲ್ಲಿದ್ದರು. ನಿಷ್ಠುರ ಆಕ್ಷೇಪಗಳ ಜೊತೆಗೆ Little Kannada Men ಎಂಬ ಲೇವಡಿಯ ಮಾತನ್ನು ಕೇಳಬೇಕಾಗಿತ್ತು. ವಿಶ್ವವಿದ್ಯಾನಿಲಯದ ಸೆನೆಟ್ ಕೌನ್ಸಿಲ್ ಸಭೆಗಳಲ್ಲಿ ಕನ್ನಡದ ಪರವಾಗಿ ವಾದಿಸಲು ಎದ್ದುನಿಂತರೆ ಅಂಥವರನ್ನು The Kannada Knights ಎಂದು ಕುಚೋದ್ಯದಿಂದ ಕರೆಯುತ್ತಿದ್ದರಂತೆ. 'ಕೇಳು ಜನಮೇಜಯರಾಯ, ಇಷ್ಟೇ ತಾನೆ ನಿಮ್ಮ ಕನ್ನಡ' ಎಂದು ಹಂಗಿಸುತ್ತಿದ್ದರಂತೆ. ಇಂಥ ಕಷ್ಟದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಒಲುಮೆಯನ್ನು ಗಳಿಸಿ, ಕನ್ನಡಕ್ಕೆ ಸ್ಥಾನಮಾನಗಳನ್ನು ದೊರಕಿಸಿಕೊಡಲು ಪ್ರಯತ್ನಪಟ್ಟ ಮೊದಲಿಗರಲ್ಲಿ ವಿ.ಸೀ. ಒಬ್ಬರಾದರು. ಅವರು ಅಂದು ಪಟ್ಟ ಕಷ್ಟವನ್ನು ಈಗಿನವರು ಊಹಿಸಿಕೊಳ್ಳಲೂ ಆಗದು.

ಅನುಪಮ ಓದುಗಾರಿಕೆ

ಮಹಿಳಾ ಅಧ್ಯಾಪಕಿಯರಲ್ಲಿ ವಿಶೇಷ ಯಶಸ್ಸು ಗಳಿಸಿಕೊಂಡಿರುವ ಚಿ.ನ. ಮಂಗಳಾ ವಿ.ಸೀ.ಯವರ ಶಿಷ್ಯೆ. ಅವರ ಓದುಗಾರಿಕೆಯಿಂದ ತಾವು ಹೇಗೆ ಪ್ರಭಾವಿತರಾದೆನೆನ್ನುವುದನ್ನು ವಿವರಿಸುತ್ತ ಹೇಳುತ್ತಾರೆ :

> ''ವಿ.ಸೀ. ಅವರಲ್ಲದೆ ಇನ್ನು ಯಾರಾದರೂ ಅಧ್ಯಾಪಕರು 'ದುಃಖ ಸೇತು'ವನ್ನು ಓದಿ ಹೇಳಿದ್ದರೆ ನಾನು ಇಂಗ್ಲಿಷ್ ಗೀತೆಗಳ ಬಗೆಗೆ ಈಗ ಬೆಳಸಿಕೊಂಡಿರುವ ಒಂದು ರೀತಿಯ ವೈಯಕ್ತಿಕ ಒಲವನ್ನು ಬೆಳಸಿಕೊಳ್ಳುತ್ತಿದ್ದೆನೊ ಇಲ್ಲವೊ. ಆದರೆ ತರಗತಿಯಲ್ಲಿ ಮೊದಲ ದಿನವೇ ವಿ.ಸೀ. 'ದುಃಖಸೇತು'ವನ್ನು ಓದಿದ ರೀತಿ, ಹೆಣ್ಣುಮಕ್ಕಳ ಬಗ್ಗೆ ಕವಿಯ ಅನುಕಂಪ, ಆ ಅನುಕಂಪದ ಅಭಿವ್ಯಕ್ತಿಯಾಗಿ ಮೂಡಿಬಂದ ಕವನದ ಸಾಲುಗಳು ಕಾವ್ಯಜೀವನದ ಪ್ರಪಂಚ ಮಾತ್ರವಲ್ಲ, ಅದು ಕವಿಮನೋಧರ್ಮದ ಬಿಂಬ ಎಂಬುದರ ಅರಿವು — ಇವು ನನಸಾದ ಕಾವ್ಯಾನುಭವ. ಕಾವ್ಯದ ಬಗೆಗೆ ಲಕ್ಷಣಗ್ರಂಥಗಳು ಏನೇ ಹೇಳಲಿ, ವಿಮರ್ಶಕರು ಏನೇ ಬರೆಯಲಿ, 'ಕಾವ್ಯ'ದ ಓದು ಬರಹ ಎಂದೂ ಒಂದು ಆಂತರಿಕ ರಸಾನುಭವ ಎನ್ನುವುದು ನನ್ನ ದೃಢವಾದ ನಂಬಿಕೆ.''

ವಿ.ಸೀ. ಯವರಂತೆ ಪದ್ಯವನ್ನಾಗಲಿ, ಗದ್ಯವನ್ನಾಗಲಿ ಓದುವವರು ಇಲ್ಲವೇ ಇಲ್ಲ ಎಂದರೂ ಸಲ್ಲುತ್ತದೆ. ಅಷ್ಟು ಅನುಪಮವಾಗಿತ್ತು ಅವರ ಓದುಗಾರಿಕೆ. ಅವರಂತೆ ಓದಬೇಕೆಂಬ ಹಂಬಲ ಎಲ್ಲ ವಿದ್ಯಾರ್ಥಿಗಳಲ್ಲೂ ಮೂಡುತ್ತಿತ್ತು. ಇದೊಂದು ವಿ.ಸೀ.ಯವರ ಬಹು ದೊಡ್ಡ ಸಾಧನೆ.

ಮೊದಲಿಗೆ ಮುನ್ನಡೆ ನೀಡದಿಹೋದ ವಿಶ್ವವಿದ್ಯಾನಿಲಯ

ಇಪ್ಪತ್ತೆಂಟು ವರ್ಷಗಳಷ್ಟು ದೀರ್ಘಕಾಲ ವಿ.ಸೀ. ವಿಶ್ವವಿದ್ಯಾನಿಲಯದ ಸೇವೆ ಸಲ್ಲಿಸಿದರು. ಉತ್ತಮ ಅಧ್ಯಾಪಕರೆಂದು ಹೆಸರು ಪಡೆದಿದ್ದರು. ವಿದ್ಯೆಯನ್ನು ಗೌರವಿಸಬೇಕಾದ ವಿಶ್ವವಿದ್ಯಾನಿಲಯ ಮಾತ್ರ ಅವರನ್ನು ಕಡೆಗಣಿಸಿಬಿಟ್ಟಿತು. ಉಪಪ್ರಾಧ್ಯಾಪಕ ಪದವಿಗೆ ಯಾವಯಾವುದೊ ಕಾರಣ ಹೇಳಿ ಬಡ್ತಿ ಕೊಡದೆ ತುಂಬ ಅನ್ಯಾಯ ಮಾಡಿತು. ಇದರಿಂದ ವಿ.ಸೀ. ಬಹಳವಾಗಿ ಸೊಂದರೆಂದು ಬೇರೆ ಹೇಳಬೇಕಾಗಿಲ್ಲ. ಆ ನೋವಿಗೆ ಕಾರಣ ತಮ್ಮನ್ನು ಹಿಂದೆ ತಳ್ಳಿಬಿಟ್ಟರೆಂದಲ್ಲ, ತಮ್ಮ ಪರವಾಗಿ ತಮ್ಮ ಅಚ್ಚುಮೆಚ್ಚಿನ ವಿದ್ಯಾಗುರುಗಳು ಒಂದು ಮಾತನ್ನೂ ಆಡದೆ ಕೈಬಿಟ್ಟರಲ್ಲ ಎಂದು. ಆದರೂ ತಮ್ಮ ಮನಸ್ಸಿನಲ್ಲುಂಟಾದ ಕಹಿಯನ್ನು ಎಂದಿಗೂ ಹೊರತೋರಿಸಲಿಲ್ಲ. ಸರಕಾರದ ಸೇವೆಯಲ್ಲಿ ಇಂಥ ಸನ್ನಿವೇಶಗಳು ಅನಿವಾರ್ಯ ಎಂದುಕೊಂಡು ಸಮಾಧಾನ ಸ್ಥಿತಿಯಲ್ಲಿದ್ದರು.

ಅರ್ಥಶಾಸ್ತ್ರದ ಎಂ.ಎ. ಪದವೀಧರರಾಗಿ ಉತ್ತಮ ಪ್ರಶಸ್ತಿಗಳಿಸಿಕೊಂಡವರಾಗಿದ್ದರೂ, ಕನ್ನಡಕ್ಕೆ ಮನ ಒಲಿದವನೆಂದು ಅರ್ಥಶಾಸ್ತ್ರ ವಿಭಾಗದವರೂ ವಿ.ಸೀ.ಯವರನ್ನು ದೂರವಿಟ್ಟರು. ಅಲ್ಲಿಯೂ ಮನ್ನಣೆ ದೊರೆಯಲಿಲ್ಲ. ಯಾವುದೇ ವಿಶ್ವವಿದ್ಯಾನಿಲಯ ಹೆಮ್ಮೆ ಪಡಬಹುದಾದಂಥ ವ್ಯಕ್ತಿ ವಿ.ಸೀ. ಆದರೆ ಅವರ ಹೆಚ್ಚುಗಾರಿಕೆಯನ್ನು ಗಮನಕ್ಕೆ ತಂದುಕೊಳ್ಳದೆ ಅದು ಅವರನ್ನು ನಿರ್ಲಕ್ಷಿಸಿಬಿಟ್ಟಿತು. ೧೯೫೫ ರಲ್ಲಿ ಸೇವಾವಧಿ ಕೊನೆಗೊಂಡರೂ ಪ್ರಾಧ್ಯಾಪಕ ಪದವಿ ಮಾತ್ರ ವಿ.ಸೀ. ಅವರಿಗೆ ದೊರಕದೆ ಹೋಯಿತು.

ಮುಂದೆ ಎಷ್ಟೋ ವರ್ಷಗಳು ಕಳೆದುಹೋದ ಮೇಲೆ ಉಪಪ್ರಾಧ್ಯಾಪಕ ಪದವಿಯನ್ನು ಕೊಡಲೂ ಹಿಂದೆ ಹಿಂಜರಿದಿದ್ದ ವಿಶ್ವವಿದ್ಯಾನಿಲಯ, ಗೌರವ ಡಾಕ್ಟೊರೇಟ್ ಪದವಿಗಾಗಿ ವಿ.ಸೀ. ಅವರನ್ನು ಆರಿಸಿ, ಆಧುನಿಕ ಕನ್ನಡ ಸಾಹಿತ್ಯದ ಆಚಾರ್ಯರೆಂದು ಕರೆದು ತಾನು ಹಿಂದೆಸಗಿದ ಅನ್ಯಾಯವನ್ನು ಸ್ವಲ್ಪಮಟ್ಟಿಗಾದರೂ ಸರಿಪಡಿಸಲು ಪ್ರಯತ್ನಿಸಿತು.

ಕನ್ನಡ ಸಾಹಿತ್ಯ ಪರಿಷತ್ತು : ಡಿ.ವಿ. ಗುಂಡಪ್ಪನವರೊಡನೆ ಸ್ನೇಹ

ಗುಂಡಪ್ಪನವರೊಡನೆ ವಿ.ಸೀ.ಯವರ ಸಂಬಂಧ ಅತಿ ನಿಕಟವಾದದ್ದು. ವಿ.ಸೀ.ಯವರಿಗೆ ಗುಂಡಪ್ಪನವರ ಪರಿಚಯವಾದದ್ದು ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ವಾರ್ಷಿಕೋತ್ಸವ ಕಾಲದಲ್ಲಿ. ಇನ್ನೂ ಇಪ್ಪತ್ತನಾಲ್ಕು ವರ್ಷದ ತರುಣರಾದ ವಿ.ಸೀ.ಯವರ ಪರಿಚಯವನ್ನು ವೆಂಕಣ್ಣಯ್ಯನವರು ಗುಂಡಪ್ಪನವರಿಗೆ ಮಾಡಿಕೊಟ್ಟರು. ಆ ಹೊತ್ತಿಗಾಗಲೆ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾಗಿದ್ದ 'ಒಲವು' ಎಂಬ ಕವನ ಗುಂಡಪ್ಪನವರ ಮನಸ್ಸನ್ನು ಆಕರ್ಷಿಸಿತ್ತು. ೧೯೩೩ರ ಸುಮಾರಿಗೆ ಕನ್ನಡ ಸಾಹಿತ್ಯ ಪರಿಷತ್ತಿಗೆಂದು ಹೊಸದೊಂದು ಕಟ್ಟಡ

ಸಿದ್ಧವಾಯಿತು. ಅದೇ ಹೊತ್ತಿಗೆ ಗುಂಡಪ್ಪನವರು ಪರಿಷದುಪಾಧ್ಯಕ್ಷರಾಗಿ ನೇಮಕ ಗೊಂಡರು. ಅಂದು ಮೊದಲುಗೊಂಡು ಪರಿಷತ್ತಿನ ಚಟುವಟಿಕೆ ಒಂದೇ ಸಮನೆ ಹೆಚ್ಚುತ್ತ ಹೋಯಿತು. ಉಪನ್ಯಾಸಗಳು ಮೇಲಿಂದ ಮೇಲೆ ಜರುಗುತ್ತಿದ್ದುವು. ವಸಂತ ಸಾಹಿತ್ಯೋತ್ಸವ ಅತಿ ವಿಜೃಂಭಣೆಯಿಂದ ನೆರವೇರುತ್ತಿತ್ತು. ವಿದ್ಯಾರ್ಥಿಗಳಾದ ನಾವು ಸಂಭ್ರಮದಿಂದ ಆ ಉತ್ಸವಗಳಲ್ಲಿ ಭಾಗವಹಿಸುತ್ತಿದ್ದೆವು. ಅದೇ ಸುಮಾರಿಗೆ ಬಿಂದೂರಾಯರ, ಕಳಲೆ ಸಂಪತ್ಕುಮಾರಾಚಾರ್ಯರ ಭಾರತ ವಾಚನ ಹುಡುಗರನ್ನು ಆಕರ್ಷಿಸುತ್ತಿತ್ತು. ಈ ಕಾರ್ಯಕ್ರಮಗಳಲ್ಲೆಲ್ಲ ಗುಂಡಪ್ಪನವರ ಬಲಗೈಯಾಗಿ ನಿಂತು ಸಕಲ ವಿಧದಲ್ಲಿಯೂ ಪರಿಷತ್ತು ಮುಂದೆ ಬರುವಂತೆ ನೋಡಿಕೊಂಡವರು ವಿ.ಸೀ. ಆ ಕಾಲದಲ್ಲಿ ಪರಿಷತ್ತಿನ ಗೌರವ ಕೋಶಾಧ್ಯಕ್ಷರಾಗಿಯೂ ಕೆಲಸ ಮಾಡಿದರು. ಗುಂಡಪ್ಪನವರು ಕೊನೆಯುಸಿರೆಳೆಯುವವರೆಗೂ ಅವರೊಡನೆ ಸಂಪರ್ಕವಿಟ್ಟುಕೊಂಡು ಆಪ್ತ ಶಿಷ್ಯನಂತೆ ನಡೆದುಕೊಂಡರು. ೧೯೭೪ ರ ಸುಮಾರಿಗೆ ತಮ್ಮ 'ಪಂಪಾಯಾತ್ರೆ'ಯ ನಾಲ್ಕನೇ ಆವೃತ್ತಿಯಲ್ಲಿ ಗುಂಡಪ್ಪನವರ ಬಗ್ಗೆ ವಿ.ಸೀ. ಹೇಳಿರುವ ಮಾತುಗಳು ಹೃದಯಸ್ಪರ್ಶಿಯಾಗಿವೆ.

> ''ರಾಯರು ಎರಡು ಮೂರು ವರ್ಷಗಳಿಂದ ಬಹುಶಃ ಹಾಸಿಗೆ ಹಿಡಿದಿದ್ದಾರೆ. ದೇಹದ ಕಷ್ಟ, ಅಶಕ್ತಿಗಳು ಎಷ್ಟೇ ಅವರನ್ನು ಒತ್ತಿ ನೋವಿ ಗೀಡುಮಾಡುತ್ತಿರಲಿ ಅವರ ಮನಸ್ಸು, ಆಲೋಚನಾಶಕ್ತಿ, ಭೌಮವಾದ ಅದರ ನಿಲುಕು, ವಿವೇಚನಾ ವಿಚಕ್ಷಣತೆ, ಅಚ್ಚಳಿಯದೆ ಇವೆ. ಹೃದಯದಲ್ಲಿ ಸವಿ ಮೃದು ಹಣ್ತನ ಇನ್ನಷ್ಟು ವ್ಯಾಪಕವಾಗಿದೆ. ಎಷ್ಟು ವಿಧವಾಗಿ ಲೋಕದ ವಿಚಾರಗಳನ್ನೂ ಮನಸ್ಸಿನ ಕಲ್ಪನೆಗಳನ್ನೂ ಅಭಿಪ್ರಾಯ ಪ್ರಪಂಚವನ್ನೂ ಹೊಕ್ಕು ತೂಗಿ ಪರಿಶೀಲಿಸಿ ತೀರ್ಮಾನಗಳಿಗೆ ಬರಬಹುದೋ ಅಷ್ಟೂ ಜಾಗೃತವಾಗಿ ಇವೆ. ಇದನ್ನೆಲ್ಲ ಆವರಿಸಿಕೊಂಡು ಅವರ ಮಾನವತೆ, ಹೃದಯಜ್ಞತೆ, ಒಂದು ಲಘು ಹಾಸ್ಯಭಾವ, ಉಲ್ಲಾಸ, ಅವರ ಎಡೆಗೆ ಹೋದವರಿಗೆಲ್ಲ ಎಂದಿನಂತೆಯೇ ದೊರೆಯುತ್ತಿದೆ. ಅದನ್ನು ಅರಿತು ಹತ್ತಿರದ ಜನಕ್ಕೆ ಎಷ್ಟು ಶಕ್ತಿ ಸಂತೋಷಗಳನ್ನು ತಂದುಕೊಡುತ್ತವೊ ಅಷ್ಟುಮಟ್ಟಿಗೆ ರಾಷ್ಟ್ರಕತನದ ಹೊಣೆಗಾರಿಕೆಯನ್ನು ನಿರ್ವಹಿಸುವ, ಈ ದೇಶದ ಹಿತವನ್ನು ಸಾಧಿಸುವ ಕ್ರಿಯಾಕಲಾಪ ಅವರವು. ಆ ಸಂಬಂಧದ ಆಲೋಚನೆಗಳೂ ಶುದ್ಧವಾಗುತ್ತವೆ. ಅದು ನಂದಾದೀಪವಾಗಲೆಂದು ಹಾರೈಸಿ ಈಗ ಪುನಃ ಅದಕ್ಕೆ ಕಾಣಿಕೆ ಅರ್ಪಿಸುತ್ತಿದ್ದೇನೆ.''
>
> *('ಲಲಿತಪ್ರಬಂಧ ಸಂಪುಟ', ಪು. ೩೨೩)*

ವಿ.ಸೀ. ಯವರು ಕೊಟ್ಟಿರುವ ಡಿ.ವಿ.ಜಿ. ಯವರ ಕೊನೆಯ ದಿನಗಳ ಈ ಚಿತ್ರ ಹಿರಿಯ ಬಾಳೊಂದಕ್ಕೆ ಅವರು ಸಲ್ಲಿಸಿದ ಗೌರವ ಕಾಣಿಕೆಯೆಂದು ಪರಿಗಣಿಸಬೇಕು.

ಏಕೀಕರಣ ಸಾಧಿಸಲು ನೆರವಾದ ಸಾಹಸ

ಹಳೆಯ ಮೈಸೂರಿನವರಾದ ನಮಗೆ ಆ ಕಾಲದಲ್ಲಿ ಕನ್ನಡ ನಾಡಿನ ಉತ್ತರ ಭಾಗಗಳ ಪರಿಚಯವೇ ಇರಲಿಲ್ಲ. ಯಾರೂ ಆ ಕಡೆ ಹೋಗುವ ತೊಂದರೆಯನ್ನೆ ತೆಗೆದುಕೊಳ್ಳುತ್ತಿರಲಿಲ್ಲ. ಕನ್ನಡ ದೇಶವನ್ನು ಪರಿಚಯಿಸಿಕೊಳ್ಳುವ ಸಲುವಾಗಿ ಯಾತ್ರೆ ಕೈಗೊಂಡ ಮೊದಲಿಗರಲ್ಲಿ ವಿ.ಸೀ. ಒಬ್ಬರೆಂದು ಹೇಳಬೇಕು. ಈ ಯಾತ್ರೆ ಪಂಪಾಯಾತ್ರೆಯಿಂದ ಎಳೆತನದಲ್ಲೆ ಮೊದಲಾಯಿತು. ಆಮೇಲಿನ ದಿವಸಗಳಲ್ಲಿ ಅದೇ ಬಗೆಯ ಯಾತ್ರೆಗಳು ಹಲವಾರನ್ನು ಕೈಗೊಂಡರು. ೧೯೩೧ರಲ್ಲಿ ಕಾರವಾರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. ಹೋದಲ್ಲೆಲ್ಲ ತಮ್ಮ ಸರಳತೆಯಿಂದ, ಅದ್ಭುತ ಮಾತುಗಾರಿಕೆಯಿಂದ ಆ ಕಡೆಯ ಜನರ ಮನವನ್ನು ಒಲಿಸಿಕೊಂಡರು. ಪ್ರಾಯಶಃ ಶಿವರಾಮ ಕಾರಂತರನ್ನು ಬಿಟ್ಟರೆ ವಿ.ಸೀ.ಯವರಂತೆ ಕನ್ನಡ ನಾಡಿನ ಯಾತ್ರೆಯನ್ನು ಆ ಕಾಲದಲ್ಲಿ ಪದೇ ಪದೇ ಕೈಗೊಂಡವರು ಇನ್ನೊಬ್ಬರಿರಲಾರರು. ಪರಿಷತ್ತಿನ ಅಧಿಕಾರಿಗಳಾದ ಡಿ.ವಿ.ಜಿ., ಬಿ.ಎಂ.ಶ್ರೀ. ಮತ್ತು ಮಾಸ್ತಿಯವರೊಂದಿಗೆ ಸುತ್ತಿದ್ದೇ ಅಲ್ಲದೆ ತಾವೇ ಬೇರೆಯಾಗಿ ಉಪನ್ಯಾಸ ಕೊಡುವುದಕ್ಕೆಂದು ಬಂದ ಆಹ್ವಾನಗಳು ಯಾವುದನ್ನೂ ತಿರಸ್ಕರಿಸದೆ, ಎಷ್ಟೋ ವೇಳೆ ಸ್ವಂತ ಖರ್ಚಿನಿಂದ ದೂರದ ಊರುಗಳಿಗೆ ಹೋಗಿ ಕನ್ನಡ ಪ್ರಚಾರ ನಡಸಿ, ನಾಡಿನ ಏಕೀಕರಣಕ್ಕಾಗಿ ಬಹುವಾಗಿ ಶ್ರಮಿಸಿದರು. ನಾಡು, ನುಡಿ, ಸಂಸ್ಕೃತಿಗಳ ರಾಯಭಾರಿಯಂತೆ ನಡೆದುಕೊಂಡರು.

ಕಾರಂತರು ಹೇಳುತ್ತಾರೆ : ''ನನಗೂ (ವಿ.ಸೀ.) ಅವರಿಗೂ ಕಾಣಿಸುವ ಸಮಾನವೃತ್ತಿ ಎಂದರೆ ಕನ್ನಡ ನಾಡನ್ನು ಯಾವುದೋ ನೆಪದಿಂದ ಸುತ್ತಿ ಏನೇನೊ ವಿಚಾರಗಳ ಮೇಲೆ ಭಾಷಣಮಾಡುವುದು. ಅದಕ್ಕೆ ವಾರ್ಷಿಕ ಸಾಹಿತ್ಯಸಮ್ಮೇಳನ ಗಳು, ವಸಂತೋತ್ಸವಗಳು, ನಾಡಹಬ್ಬಗಳು ಅನುಕೂಲ ಮಾಡಿಕೊಡುತ್ತಿದ್ದವು. ಉತ್ತರ ಕರ್ನಾಟಕದ ಸಾಹಿತಿಗಳೊಡನೆ ಮೊದಲಾದ ಪರಿಚಯ ಬಹುಬೇಗ ಗಾಢ ಸ್ನೇಹವಾಗಿ ಪರಿಣಮಿಸಿತು. ಆ ಸ್ನೇಹಿತರು ಕೂಡ ವಿ.ಸೀ.ಯವರೊಂದಿಗೆ ಬೆಸೆದ ಸ್ನೇಹವನ್ನು ತಮ್ಮ ಬದುಕಿನ ಒಂದು ಭಾಗ್ಯವೆಂದು ಗಣಿಸಿದರು. ಯಾವ ಸ್ವಲಾಭವನ್ನೂ ಸ್ವಾರ್ಥವನ್ನೂ ಅಪೇಕ್ಷಿಸದ ವಿ.ಸೀ.ಯವರ ದೊಡ್ಡ ಗುಣದಿಂದ ಮೊದಲು ಅಂಕುರವಿಟ್ಟ ಸ್ನೇಹ ಬೆಳೆಯುತ್ತ ಹೋಯಿತೇ ಹೊರತು ಕುಗ್ಗಲಿಲ್ಲ.''

ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವಾಸ ಕೈಗೊಂಡದ್ದಂತೂ ಅದೆಷ್ಟು ಸಲವೋ. ಪ್ರಾಯಶಃ ಅಲ್ಲಿನ ಕಡಲ ತೀರ ಅವರನ್ನು ಬಹುವಾಗಿ ಆಕರ್ಷಿಸಿರಬೇಕು. ಪಂಜೆ ಮಂಗೇಶರಾಯರ, ಗೋವಿಂದ ಪೈಗಳ, ಕಾರಂತರ ವಿಶ್ವಾಸವನ್ನು ಬಹುಬೇಗ ಗಳಿಸಿಕೊಂಡರು. ಅವರೊಂದಿಗೆ ಕಡಲಂಚಿನಲ್ಲಿ ಬಹುದೂರ ನಡೆದು, ಮೆರೆಯುತ್ತಿರುವ ಕಡಲಿನ ಗಾಂಭೀರ್ಯವನ್ನು ಅನುಭವಿಸಿದರು.

''ಒಡೆದ ಕರ್ನಾಟಕ ಒಂದಾಗಬೇಕಾಗಿದ್ದ ಕಾಲದಲ್ಲಿ ಕನ್ನಡಿಗರ ಪರವಾಗಿ

ತಮ್ಮ ಬದುಕಿನಿಂದ, ಮಾತಿನಿಂದ, ವಿಚಾರಶೀಲತೆಯಿಂದ ಸಮಗ್ರ ಕರ್ನಾಟಕ ದೇಶದ — ಅದು ಗುಲ್ಬರ್ಗ ಇರಲಿ, ಹೈದರಾಬಾದು ಇರಲಿ, ದಕ್ಷಿಣ ಕನ್ನಡವೇ ಇರಲಿ — ಮೈಸೂರಿನ ಗಡಿಯನ್ನು ದಾಟಿಹೋಗಿ ದೇಶದ ನೆನಪನ್ನು ಉಳಿಸಿದ ವ್ಯಕ್ತಿಗಳಲ್ಲಿ ವಿ.ಸೀ. ಪ್ರಮುಖರು'' ಎಂದು ಸಾರಿದ್ದಾರೆ ಕಾರಂತರು. ''ಅವರು ಆಸಕ್ತಿ ತಾಳಿದ ವಿಷಯಗಳ ಕ್ಷೇತ್ರ, ಅವರ ತಿಳಿವಿನ ವಿಸ್ತಾರ ಮತ್ತು ಅವರ ಸ್ನೇಹಿತರ ಬಳಗ ದೊಡ್ಡದು. ಈ ನಿಮ್ಮ ಬೆಂಗಳೂರಿನಲ್ಲಿ ಅವರಿಗೆಷ್ಟು ಜನ ಮಿತ್ರರಿದ್ದರೊ ನಾನರಿಯೆ. ಆದರೆ ಬಿಜಾಪುರದಲ್ಲಿ ಎಷ್ಟೊಂದು ಮಿತ್ರರಿದ್ದರು, ಧಾರವಾಡದಲ್ಲಿ ಎಷ್ಟೊಂದು ಸ್ನೇಹಿತರಿದ್ದರು ಎಂಬುದನ್ನು ಬಲ್ಲೆ. ಹೊರಗಿನ ಜನ ಅವರಿಗೆ ಎಷ್ಟೊಂದು ಮನ್ನಣೆಯನ್ನು ಕೊಡುತ್ತಿದ್ದರು ಎನ್ನುವುದನ್ನು ಬಲ್ಲೆ. ಅದೆಲ್ಲ ಸಾಧ್ಯವೆ ಎಂದು ಅಚ್ಚರಿ ಪಡಬೇಕಾಗಿಲ್ಲ. ಅವರ ಸ್ನೇಹಪರತೆ, ವಿಶಾಲ ತಿಳಿವು ಮತ್ತು ವಿಚಾರ ವಿನಿಮಯ ಪರಿಪಾಠದಿಂದ ಅವರು ಬಹಳ ಜನರಿಗೆ ಪ್ರಿಯರಾಗಿದ್ದರು'' (*ಶಿವರಾಮ ಕಾರಂತರ ಲೇಖನಗಳು, ೧೯೯೩, ಪು.೨೦೯*).

''ಇವತ್ತು ಕರ್ನಾಟಕವನ್ನು ಕುರಿತು ಜನಗಳ ಮನಸ್ಸಿನಲ್ಲಿ ಆದರ ಭಾವ ಹುಟ್ಟಿಸುವ ಕೆಲಸವನ್ನು ಉಪದೇಶದಿಂದ, ತಮ್ಮ ವ್ಯಕ್ತಿತ್ವದಿಂದ ಉಂಟುಮಾಡಿದವರಿದ್ದರೆ ಅದು ಅಪ್ಪಟ ಮೈಸೂರಿನವರಾಗಿದ್ದ ವಿ.ಸೀ.ಯವರು'' ಎನ್ನುತ್ತಾರೆ ಕಾರಂತರು.

ಪ್ರಶಂಸೆ ಎಂದರೇನೆನ್ನುವುದನ್ನೇ ಅರಿಯದ ಕಾರಂತರು ಮುಕ್ತಕಂಠದಿಂದ ಈ ರೀತಿ ಹೊಗಳಬೇಕಾದರೆ ವಿ.ಸೀ.ಯವರ ಹೆಚ್ಚುಗಾರಿಕೆ ಎಷ್ಟರಮಟ್ಟಿನದು ಎನ್ನುವುದರ ಕಲ್ಪನೆಯನ್ನು ಮಾಡಿಕೊಳ್ಳಬಹುದು. ಈ ಬಗೆಯ ಹೆಚ್ಚುಗಾರಿಕೆಯನ್ನು ಕಂಡ ಬಿ.ಎಂ. ಶ್ರೀಕಂಠಯ್ಯನವರು ವಿ.ಸೀ.ಯನ್ನು ಕುರಿತು 'ಯಾರು ಈ ಕಾರ್ಯವನ್ನು ಮಾಡಲಿ ಬಿಡಲಿ; ನಾವು ಮಾತ್ರ ಮುಂದುವರಿಸೋಣ. We shall be the living bridges across the Tungabhadra' (ತುಂಗಭದ್ರೆಯ ಉತ್ತರ ದಕ್ಷಿಣಗಳನ್ನು ಸೇರಿಸಲು ನಾವು ಜೀವಂತ ಸೇತುವೆಯಾಗೋಣ) ಎಂದಿದ್ದರಂತೆ. ಎಂದಂತೆಯೇ ಇಬ್ಬರೂ ನಡೆದುಕೊಂಡರು, ಜೀವಂತ ಸೇತುವೆಯೇ ಆದರು. ಏಕೀಕರಣಕ್ಕಾಗಿ ದುಡಿದ ಈ ಮಹನೀಯರನ್ನು ಕನ್ನಡಿಗರು ಮರೆಯಕೂಡದು.

'ಪ್ರಬುದ್ಧ ಕರ್ನಾಟಕ'

ವಿ.ಸೀ. ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸುತ್ತಿದ್ದ ಕಾಲದಲ್ಲಿ ಕನ್ನಡಕ್ಕೆ ಹೆಚ್ಚಿನ ಸ್ಥಾನಮಾನಗಳಿರಲಿಲ್ಲ. ಕನ್ನಡ 'ಮುನಷಿ' ಎಂದು ವಿದ್ಯಾರ್ಥಿಗಳ ಅನಾದರಣೆಗೆ ಗುರಿಯಾಗಬೇಕಾಗಿತ್ತು. ಇಂಥ ಶೋಚನೀಯ ಸ್ಥಿತಿಯಿಂದ ಅದನ್ನು ಮೇಲೆತ್ತಿ ಗೌರವವನ್ನು ಸಂಪಾದಿಸಿಕೊಡುವುದಕ್ಕೆ ಮುಖ್ಯ ಕಾರಣರಾದವರು ಕನ್ನಡದ ಅಶ್ವಿನೀ ದೇವತೆಗಳೆಂದು ಹೆಸರಾದ ಅಂಬಳೆ ಕೃಷ್ಣಶಾಸ್ತ್ರಿಗಳು,

ತಳುಕಿನ ವೆಂಕಣ್ಣಯ್ಯನವರು. ಅವರು ತಮ್ಮ ಉದ್ದೇಶ ಸಾಧನೆಗಾಗಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕರ್ನಾಟಕ ಸಂಘವೊಂದನ್ನು ಸ್ಥಾಪಿಸಿ, ಸಂಘದ ಅಂಗವಾಗಿ 'ಪ್ರಬುದ್ಧ ಕರ್ನಾಟಕ' ಎಂಬ ಹೆಸರಿನಲ್ಲಿ ಪತ್ರಿಕೆಯೊಂದನ್ನು ೧೯೧೯ರ ಯುಗಾದಿಯ ದಿನ ಹೊರತಂದರು. ಕನ್ನಡ ಭಾಷಾ ಬೆಳವಣಿಗೆಯಲ್ಲಿ ಇದು ಚರಿತ್ರಾರ್ಹ ದಿನ. ಪತ್ರಿಕೆಯು ಸಾಧಿಸಲು ಹೊರಟ ಗುರಿಯನ್ನು ನಿರ್ದೇಶಿಸುತ್ತ ಮೊದಲ ಸಂಪಾದಕರಾದ ಕೃಷ್ಣಶಾಸ್ತ್ರಿಗಳು ಹೇಳಿದ ಮಾತುಗಳಿವು :

> ''ಜನಗಳಿಗೆ ಸಾಹಿತ್ಯವು ಬೇಕಿಲ್ಲವೆಂದು ನಾವು ನಂಬಲಾರೆವು! ಇದರಲ್ಲಿ ಅವರಿಗೆ ಇರುವ ಆಸಕ್ತಿಯಿಂದಲೇ ಉತ್ತಮವಾದ ಸಾಹಿತ್ಯಕ್ಕೆ ಶಾಶ್ವತವಾಗಿ ನಿಲ್ಲುವ ಸಾಮರ್ಥ್ಯ ಬಂದಿದೆ..... ನಮ್ಮ ಮುಖ್ಯ ಕೆಲಸವೆಂದರೆ ಕಾವ್ಯಸೃಷ್ಟಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವುದು.
>
> ಸಾಹಿತ್ಯವನ್ನೆಲ್ಲ ತುಲನಪೂರ್ವಕವಾಗಿ ವಿಮರ್ಶೆ ಮಾಡಿ ನಮ್ಮ ಕವಿಗಳಲ್ಲಿರುವ ಗುಣದೋಷಗಳೇನು, ಸತ್‌ಕಾವ್ಯದ ಲಕ್ಷಣಗಳೇನು ಎನ್ನುವುದನ್ನು ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರ ಮಾಡಿ ..... ಒಟ್ಟಿನಲ್ಲಿ ಯಾವುದರಿಂದ ನಮ್ಮ ದೇಶವು ಉತ್ಸಾಹಗೊಂಡು ಜೀವಕಳೆಯಿಂದ ತುಂಬಬಹುದೋ, ಯಾವುದರಿಂದ ಗ್ರಂಥಗಳ ರಸಾಸ್ವಾದನೆ ಮಾಡಿ ಆನಂದವನ್ನು ಪಡೆಯಬಹುದೋ, ಯಾವುದರಿಂದ ಕನ್ನಡ ಕಾವ್ಯಮಾಲೆಯು ಶ್ರೇಷ್ಠವಾದ ರೀತಿಯಲ್ಲಿ ಬೆಳೆಯಬಹುದೆಂದು ನಮಗೆ ದೃಢವಾಗಿ ನಂಬಿಕೆಯಿದೆಯೋ, ಅಂಥ ವಿಷಯಗಳನ್ನೆ ಕನ್ನಡಿಗರಿಗೆ ಕಾಣಿಕೆಯಾಗಿ ತಂದು ಒಪ್ಪಿಸುವ ಕೆಲಸವನ್ನು 'ಪ್ರಬುದ್ಧ ಕರ್ನಾಟಕ'ಕ್ಕೆ ಒಪ್ಪಿಸಿದ್ದೇವೆ.''
>
> *(ಎ.ಆರ್. ಕೃಷ್ಣಶಾಸ್ತ್ರಿ, 'ಪ್ರಬುದ್ಧ ಕರ್ನಾಟಕ', ಬೆಳ್ಳಿಯ ಸಂಚಿಕೆ ೧೯೪೪, ಪು.೬)*

ಈ ರೀತಿಯ ಉನ್ನತ ಆದರ್ಶಗಳನ್ನಿಟ್ಟುಕೊಂಡು, 'ಅಹಂ ಕರೋಮಿ ಇತಿ ವೃಥಾಭಿಮಾನಃ ?' (ನಾನು ಮಾಡಿದೆ ಎನ್ನುವ ವೃಥಾಭಿಮಾನ) ಎಂಬ ಟೀಕೆಯ ಸೋಂಕಿಲ್ಲದಂತೆ ನಡೆಸಿಕೊಂಡು ಈ ಪತ್ರಿಕೆ ಸಲ್ಲಿಸುತ್ತ ಬಂದಿರುವ ಸೇವೆಯನ್ನು ಎಲ್ಲರೂ ಬಲ್ಲರು. ವಿದ್ಯಾರ್ಥಿದೆಸೆಯಿಂದಲೇ ವಿ.ಸೀ. ಪ್ರಬುದ್ಧ ಕರ್ನಾಟಕದ ಕೆಲಸಕ್ಕೆ ಹೆಗಲುಕೊಟ್ಟರು. ಅವರ ಮೊದಲ ಕವಿತೆ 'ಒಲವು' ಮತ್ತು ಮೊದಲ ಪ್ರಬಂಧ 'ಪಂಪಾಯಾತ್ರೆ' ಪ್ರಕಟವಾದದ್ದು ಪ್ರಬುದ್ಧ ಕರ್ನಾಟಕದಲ್ಲಿ. ಆ ಮೊದಲ ದಿನಗಳಲ್ಲಿ ಸಹಾಯಕ್ಕೆ ಒದಗಿದ ಜನ, ಅವರಿಂದ ಬಂದ ಲೇಖನಗಳ ಸೊಗಸನ್ನು ನೆನಸಿಕೊಂಡು ಸಂಪಾದಕರಾದ ಕೃಷ್ಣಶಾಸ್ತ್ರಿಗಳು ನೇಮಿಚಂದ್ರನ ಪ್ರಸಿದ್ಧ ಕವನವೊಂದನ್ನು ಉದಾಹರಿಸುತ್ತಾರೆ :

ಬೆಲೆಯಿಂದಕ್ಕುಮೆ ಕೃತಿ, ಗಾ
ವಿಲ, ಭುವನದ ಭಾಗ್ಯದಿಂದಮಕ್ಕುಂ, ನೋಳ್ಪಂ
ಬೆಲೆಗೊಟ್ಟು ತಾರ ಮಧುವಂ,
ಮಲಯಾನಿಲನಂ, ಮನೋಜನಂ, ಕೌಮುದಿಯಂ

(ನೇಮಿಚಂದ್ರ)


ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘದ ಹಿತೈಷಿಗಳು ಮತ್ತು ಲೇಖಕ ಸದಸ್ಯರು
(೨೫ - ಫೆಬ್ರುವರಿ - ೧೯೫೬)
ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ, ಅವರೊಡನೆ ಒಂದು ಸಂಜೆ

ಇಂಥ ಸಾಹಿತ್ಯ ಸೇವಕರು 'ಪ್ರಬುದ್ಧ ಕರ್ಣಾಟಕ'ಕ್ಕೆ ದೊರೆತದ್ದು 'ಭಗವಂತನ ದಯೆ, ನಾಡಿನ ಪುಣ್ಯ'.

ಪತ್ರಿಕೆ ಪ್ರಾರಂಭವಾದಾಗಿನಿಂದ ಹದಿಮೂರು ವರ್ಷಗಳ ಕಾಲ ಕೃಷ್ಣ ಶಾಸ್ತ್ರಿಗಳು ಸಂಪಾದಕರಾಗಿದ್ದುಕೊಂಡು ಅದನ್ನು ಮುಂದಕ್ಕೆ ತಂದರು. ೧೯೩೨ ರಲ್ಲಿ ಪತ್ರಿಕೆಯನ್ನು ನಡೆಸುವ ನೇರ ಜವಾಬುದಾರಿಯನ್ನು ವಿಶ್ವವಿದ್ಯಾನಿಲಯ ವಹಿಸಿಕೊಂಡಿತು.

ಪತ್ರಿಕೆಯ ಕಾರ್ಯವನ್ನು ನೋಡಿಕೊಳ್ಳುವ ಕೆಲಸವನ್ನು ವಿಶ್ವವಿದ್ಯಾನಿಲಯ ಗ್ರಂಥಪ್ರಕಾಶನ ಸಮಿತಿಗೆ ಒಪ್ಪಿಸಿತು. ಸಮಿತಿಯ ಅಧ್ಯಕ್ಷರಾದ ಬಿ.ಎಂ. ಶ್ರೀಕಂಠಯ್ಯನವರು ಮುಖ್ಯ ಸಂಪಾದಕರಾದರು. ವೆಂಕಣ್ಣಯ್ಯನವರೂ, ಕೃಷ್ಣ ಶಾಸ್ತ್ರಿಗಳೂ ಸಂಪಾದಕರಾದರು. ತೀ.ನಂ.ಶ್ರೀಕಂಠಯ್ಯ, ವಿ.ಸೀತಾರಾಮಯ್ಯ ಮತ್ತು ಕೆ.ವಿ. ಪುಟ್ಟಪ್ಪ ಇವರುಗಳು ಸಮಿತಿಯ ಸದಸ್ಯರಾದರು. ಹೆಸರಿಗೆ ಸಮಿತಿ, ಆದರೆ ಎಲ್ಲ ಕಾರ್ಯವನ್ನು ನಡೆಸಿಕೊಂಡು ಹೋಗುವವರು ಒಬ್ಬರೋ ಇಬ್ಬರೋ. ೧೯೩೯ ರಲ್ಲಿ ವೆಂಕಣ್ಣಯ್ಯನವರು ಹಠಾತ್ತನೆ ತೀರಿಕೊಂಡು ಸಂಪಾದಕನ ಎಲ್ಲ ಜವಾಬುದಾರಿಯೂ ಮತ್ತೆ ಕೃಷ್ಣಶಾಸ್ತ್ರಿಗಳ ಹೆಗಲ ಮೇಲೆ ಬಿತ್ತು. ೧೯೪೨ ರಲ್ಲಿ ಬಿ.ಎಂ. ಶ್ರೀಕಂಠಯ್ಯನವರು ನಿವೃತ್ತಿ ಹೊಂದಿ ಗ್ರಂಥಪ್ರಕಾಶನ ಸಮಿತಿಯ ಅಧ್ಯಕ್ಷ ಪದವಿ ಕೃಷ್ಣಶಾಸ್ತ್ರಿಗಳದಾಯಿತು. ಮಹಾರಾಜ ಕಾಲೆಜಿನಲ್ಲಿ ಕನ್ನಡ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವವರು ಪತ್ರಿಕೆಯ ಸಂಪಾದಕತ್ವವನ್ನು ನೋಡಿಕೊಳ್ಳಬೇಕೆಂದು ವಿಶ್ವವಿದ್ಯಾನಿಲಯ ನೇಮಿಸಿತು. ಆಗತಾನೆ ಬಡತಿ ಹೊಂದಿ ಅಸಿಸ್ಟೆಂಟ್ ಪ್ರೊಫೆಸರಾಗಿ ಮಹಾರಾಜ ಕಾಲೆಜನ್ನು ಸೇರಿದ್ದ ವಿ.ಸೀತಾರಾಮಯ್ಯನವರು ಪತ್ರಿಕೆಯ ಸಂಪಾದಕರಾದರು.

'ಪ್ರಬುದ್ಧ ಕರ್ಣಾಟಕ'ದ ಸಂಪಾದಕ

೧೯೪೨ ರಿಂದ ಹಿಡಿದು ಮುಂದಿನ ಐದು ವರ್ಷಗಳ ಕಾಲ ವಿ.ಸೀ. ಪ್ರಬುದ್ಧ ಕರ್ಣಾಟಕ ಪತ್ರಿಕೆಯ ಸಂಪಾದಕರಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದರು. ಪತ್ರಿಕೆ ಹಲವಾರು ಬಗೆಯ ಲೇಖನಗಳನ್ನೊಳಗೊಂಡು ಮೈತುಂಬಿಕೊಂಡು ಹೊರಬೀಳುತ್ತಿತ್ತು.

ಇದೇ ಸುಮಾರಿಗೆ 'ಕನ್ನಡ ನಾಡಿನ ಚಿನ್ನದ ಗಣಿಗಳು' ಎಂಬ ವೈಜ್ಞಾನಿಕ ಪ್ರಬಂಧವೊಂದನ್ನು ಪ್ರಕಟನೆಗೆಂದು ಪ್ರಬುದ್ಧ ಕರ್ಣಾಟಕಕ್ಕೆ ನಾನು ಕಳುಹಿಸಿ ಕೊಟ್ಟಿದ್ದೆ. ಲೇಖನವನ್ನು ಎಚ್ಚರಿಕೆಯಿಂದ ತಿದ್ದಿ, ಕೈಬಿಡಬೇಕಾದ ಭಾಗಗಳನ್ನು ಸೂಚಿಸಿ ಲೇಖನವನ್ನು ಪರಿಷ್ಕರಿಸಲು ಸೂಚನೆಕೊಟ್ಟು, ಕೆಲವು ಉತ್ತೇಜನಕರ ಮಾತುಗಳನ್ನು ಬರೆದು ವಿ.ಸೀ. ಹಿಂದಕ್ಕೆ ಕಳುಹಿಸಿಕೊಟ್ಟರು. ಅವರು ಸೂಚಿಸಿದ ತಿದ್ದುಪಡಿಗಳನ್ನು ನಾನು ಮಾಡಿದ್ದೇನೆಯೊ ಇಲ್ಲವೊ ಎಂಬುದನ್ನು ತಾಳೆ ನೋಡಿ, ಮುಂದಿನ ಒಂದು ಸಂಚಿಕೆಯಲ್ಲಿ ಪ್ರಕಟಿಸಿದರು. ನಾನು ಕಳುಹಿಸಿದ್ದ ಚಿತ್ರಗಳನ್ನು

ಮುದ್ರಿಸುವುದಕ್ಕೆ ವಿಶೇಷವಾದ ಬೆಲೆಬಾಳುವ ಕಾಗದವನ್ನು ಉಪಯೋಗಿಸಿದ್ದರು. ನನ್ನ ಆ ಚೊಚ್ಚಲು ಬರವಣಿಗೆ ಇಷ್ಟು ಸರ್ವಾಂಗ ಸುಂದರವಾಗಿ ಹೊರ ಬಿದ್ದುದನ್ನು ಕಂಡು ನನಗಾದ ಸಂತೋಷ ಅಷ್ಟಿಷ್ಟಲ್ಲ. ವಿ.ಸೀ.ಯವರಿಂದ ನನಗೆ ಹೀಗೆ ಪ್ರೋತ್ಸಾಹ ದೊರೆಯಿತು. ಪ್ರಬುದ್ಧ ಕರ್ಣಾಟಕದ ಬರಹಗಾರರ ಪಂಕ್ತಿಯಲ್ಲಿ ನಾನೂ ಸೇರಿದೆನೆಂದು ಹೆಮ್ಮೆಪಟ್ಟುಕೊಂಡೆ. ನನ್ನಂತೆಯೇ ಇತರ ಎಷ್ಟೋ ಮಂದಿ ತರುಣರು ಬೆಳಕಿಗೆ ಬಂದರು. ಲೇಖನಗಳ ವೈವಿಧ್ಯ ಹೆಚ್ಚಿತು.

೧೯೪೪ರಲ್ಲಿ ಪ್ರಬುದ್ಧ ಕರ್ನಾಟಕದ ಬೆಳ್ಳಿಯ ಹಬ್ಬದ ಸಂಚಿಕೆ ಪ್ರಕಟವಾಯಿತು. ಅದಕ್ಕಾಗಿ ವಿ.ಸೀ. ತುಂಬ ಎಚ್ಚರಿಕೆ ವಹಿಸಿದ್ದರು. ಆದರೆ ಮೊದಲ ಸಂಪಾದಕರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳು ಕಾಲಕಾಲಕ್ಕೆ ಪತ್ರಿಕೆಯನ್ನು ಹೊರತರುವುದರಲ್ಲಿ ತೋರಿಸುತ್ತಿದ್ದ ಎಚ್ಚರಿಕೆಯನ್ನು ಮಾತ್ರ ವಿ.ಸೀ. ವಹಿಸದೆ ಹೋದರು. ಪತ್ರಿಕೆ ತಡವಾಗಿ ಬರಲು ಕಾರಣಗಳು ಅನೇಕವಿದ್ದಿರಬಹುದು. ಆದರೆ ಸಕಾಲಕ್ಕೆ ಪತ್ರಿಕೆಯನ್ನು ಹೊರತರುವ ಸಂಪಾದಕನ ಹೊಣೆಗಾರಿಕೆಯನ್ನು ಎ.ಆರ್. ಕೃಷ್ಣಶಾಸ್ತ್ರಿಗಳಂತೆ ನಿರ್ವಹಿಸದೆ ಎಡವಿದರು.

ಸಂಪಾದಕರಾಗಿದ್ದ ಕಾಲದಲ್ಲಿ, ಸಂಪಾದಕೀಯ ಲೇಖನ ಹೊರತಾಗಿ ಬೇರಾವ ತಮ್ಮದೇ ಆದ ಪ್ರಬಂಧವಾಗಲೀ ಕವನವಾಗಲಿ ಪತ್ರಿಕೆಯಲ್ಲಿ ಪ್ರಕಟವಾಗದಂತೆ ಎಚ್ಚರ ವಹಿಸಿದ್ದರು. ಈ ಹಿಂದೆ ಬೆಂಗಳೂರಿನಲ್ಲಿದ್ದಾಗ ಕರ್ಣಾಟಕ ಸಂಘದ ಕೋಶಾಧ್ಯಕ್ಷರಾಗಿ, ಉಪಾಧ್ಯಕ್ಷರಾಗಿದ್ದ ಕಾಲದಲ್ಲೂ ತಮ್ಮ ಯಾವುದೇ ಪುಸ್ತಕವನ್ನು ಸಂಘದವರು ಪ್ರಕಟಿಸಲು ಅನುಮತಿ ನೀಡಿರಲಿಲ್ಲ. ಇದೊಂದು ವಿ.ಸೀ. ಅವರು ತೋರಿಸಿದ ದೊಡ್ಡ ಗುಣ.

ಇಪ್ಪತ್ತೈದು ವರ್ಷಗಳಿಗೂ ಹೆಚ್ಚು ಕಾಲ ಒಂದಲ್ಲ ಒಂದು ರೀತಿಯಲ್ಲಿ ವಿ.ಸೀ. ಪ್ರಬುದ್ಧ ಕರ್ಣಾಟಕ ಪ್ರಕಟನ ಕಾರ್ಯದಲ್ಲಿ ನೆರವಾಗಿದ್ದರು. ಕೊನೆಯ ಐದು ವರ್ಷಗಳು ಸಂಪಾದಕತನದ ಪೂರ್ಣ ಜವಾಬುದಾರಿಯನ್ನು ಹೊತ್ತರು. ಅವರು ಪತ್ರಿಕೆಗೆ ಸಲ್ಲಿಸಿದ ಸೇವೆಯನ್ನು ಸುಲಭವಾಗಿ ಮರೆಯುವಂತಿಲ್ಲ.

ಪ್ರಬುದ್ಧ ಕರ್ಣಾಟಕ ಏನನ್ನು ಸಾಧಿಸಲು ಹೊರಟಿತು? ಅದರ ಮುಂದಿದ್ದ ಧ್ಯೇಯಗಳೇನು? - ವಿ.ಸೀ.ಯವರ ಈ ಮಾತುಗಳನ್ನು ಗಮನಿಸಬೇಕು :

> ''ಕನ್ನಡವು ಆಧುನಿಕ ಸತ್ತ್ವವಾಗಬೇಕು. ಪ್ರಚಲಿತವಾಗಿ ಮುನ್ನಡೆವ ಚೈತನ್ಯವಾಗಬೇಕು. ಸರ್ವತೋಮುಖವಾದ ಬೆಳವಣಿಗೆಯನ್ನು ಸಾಧಿಸುವಂತಾಗಬೇಕು. ಕನ್ನಡದ ಮನೆ ಜನ ಲೋಕದಲ್ಲಿ ಒಂದು ದೊಡ್ಡ ಒಕ್ಕಲಾಗಿ ಉಳಿದು ಬೆಳೆಯಬೇಕಾದರೆ ಅದರ ನೋಟ ಹಿನ್ನೋಟವಾಗಿ, ಅದರ ಸ್ಥಿತಿ ಯಥಾಸ್ಥಿತಿ ಆಗಿ ಮುಗಿಯಬಾರದು. ಕೇವಲ ಪ್ರಾಚ್ಯಸಂಶೋಧನೆಯಲ್ಲಿಯೇ ಪ್ರಾಗ್ವೈಭವವನ್ನು ಮೆಲುಕುವುದರಲ್ಲಿಯೇ ನಿರತವಾಗಿ ಪರಿಸಮಾಪ್ತಿಯಾದರೆ ಸಾಲದು. ಇಂದಿನ ಜೀವನದ ಸಮಸ್ತಕಾರ್ಯಗಳಿಗೂ, ವಿಶ್ವದ ಎಲ್ಲ ವಿದ್ಯೆಗಳಿಗೂ ಅದರ ಮನಸ್ಸು ತೆರೆದು ಹೂಡದಾದರೆ, ಅದರ ಉತ್ಸಾಹ ಇಂದಿನ ವಸ್ತುಶಕ್ತಿಗಳ ಕಡೆಗೆ ತಿರುಗದಾದರೆ ಅದಕ್ಕೆ ಭವಿಷ್ಯವಿಲ್ಲ.''
>
> *(ವಿ.ಸೀ. ಪ್ರಬುದ್ಧ ಕರ್ಣಾಟಕ, ಬೆಳ್ಳಿಯಸಂಚಿಕೆ, ೧೯೪೪, ಪು.೯೬)*

ಇದು ಪತ್ರಿಕೆ ಇಟ್ಟುಕೊಂಡ ಗುರಿ. ಇವೆಲ್ಲವನ್ನೂ ಅದು ಸಾಧಿಸಿತೆಂದು ನಮ್ಮ ಅಭಿಪ್ರಾಯವಲ್ಲ. ಪತ್ರಿಕೆ ಕನ್ನಡ ಜನತೆಯಲ್ಲಿ ಹೊಸ ಚೈತನ್ಯ ಮೂಡಿಸಿತು. ಉತ್ತಮ ಸಾಹಿತ್ಯವೆಂದರೆ ಯಾವುದು, ಹೊಸಗನ್ನಡದ ಬರವಣಿಗೆಯ ಅಂದ ಚೆಂದಗಳೇನು ಎನ್ನುವುದನ್ನು ರೂಪಿಸಿತು. ಕನ್ನಡದಲ್ಲಿ ವಿಮರ್ಶೆಯ ಕಾರ್ಯ ಯಾವ ರೀತಿ ನಡೆಯಬೇಕು ಎನ್ನುವುದನ್ನು ತೋರಿಸಿತು. ಈ ದಾರಿಯಲ್ಲಿ ವಿ.ಸೀ. ಯವರ ದುಡಿಮೆ ಕಡಮೆಯದೇನಲ್ಲ.

ವಿಶ್ವವಿದ್ಯಾನಿಲಯದಿಂದ ನಿವೃತ್ತಿ

ಸರಕಾರದ ಲೆಕ್ಕದಲ್ಲಿ ಕತ್ತೆಯೂ ಒಂದೆ, ಕುದುರೆಯೂ ಒಂದೆ. ಐವತ್ತೈದು ವರ್ಷಗಳಾದ ಮೇಲೆ ಕೆಲಸದಿಂದ ನಿವೃತ್ತಿಹೊಂದಬೇಕೆನ್ನುವುದು ನಿಯಮ. ಯಾರು ಎಷ್ಟೇ ದಕ್ಷರಾಗಿರಲಿ, ಅವರ ಸೇವೆ ಎಷ್ಟೇ ಅವಶ್ಯಕವಾಗಿರಲಿ, ಅವೊಂದೂ ಗಣನೆಗೆ ಬಾರವು. ವಿಶ್ವವಿದ್ಯಾನಿಲಯವೂ ಸರಕಾರದ ಅಂಗವಾದುದರಿಂದ ಐವತ್ತೈದು ವರ್ಷ ಮುಗಿದ ತಕ್ಷಣ ಸೇವೆಯಿಂದ ಬಿಡುಗಡೆ ಮಾಡಿ, ನಿವೃತ್ತಿಯ ನಿರೂಪವನ್ನು ಹೊರಡಿಸಿ, ವಿ.ಸೀ. ಯವರನ್ನು ಮನೆಗೆ ಕಳುಹಿಸಿಕೊಟ್ಟಿತು. ಇಪ್ಪತ್ತೆಂಟನೆ ವಯಸ್ಸಿನಲ್ಲಿ ಅಧ್ಯಾಪಕರಾಗಿ ವಿಶ್ವವಿದ್ಯಾನಿಲಯದ ಹೊಸಿಲನ್ನು ಮೆಟ್ಟಿದ ವಿ.ಸೀ. ತಮ್ಮ ಐವತ್ತೈದನೆಯ ವಯಸ್ಸಿನಲ್ಲಿ ನಿಲಯವನ್ನು ಬಿಟ್ಟು ಹೊರಬಂದರು.

ವಿ.ಸೀ. ತಮ್ಮ ಜೀವಿತದಲ್ಲಿ ಏನೇನನ್ನೊ ಸಾಧಿಸಬೇಕೆಂದಿದ್ದರು. ಅವರು ಸಾಧಿಸಿದ್ದು ಸ್ವಲ್ಪವೇನಲ್ಲ. ಯಾರೇ ಆಗಲಿ ಹೆಮ್ಮೆ ಪಡಬಹುದಾದಂಥ ಸಾಧನೆ ಅವರದಾಗಿತ್ತು. ಹಾಗಿದ್ದರೂ ಮಾಡಬೇಕೆನಿಸಿದ್ದ ಎಲ್ಲವನ್ನು ಮಾಡಲಾಗಲಿಲ್ಲ ವಲ್ಲ ಎನ್ನುವ ಕೊರತೆ ಅವರ ಮನಸ್ಸನ್ನು ಕಾಡುತ್ತಿತ್ತು. ಬಿಜಾಪುರಕ್ಕೆ ಒಮ್ಮೆ ಹೋಗಿದ್ದಾಗ ಗೋಲಗುಂಬಜಿನ ಹತ್ತಿರವಿರುವ ಅರ್ಧಮರ್ದ ಕಟ್ಟಿ ನಿಂತಿರುವ 'ಬಾರಾ ಕಮಾನ 'ನ್ನು ನೋಡಿ ಅವರು ಹೇಳಿದ ಮಾತುಗಳು ಜ್ಞಾಪಕಕ್ಕೆ ಬರುತ್ತವೆ.

> I have much love for this piece. It is just like our own lives. All our lives are unbuilt like this, very ambitious, ever unfulfilled, yet symbolizing the infinite possibilities of human aspirations.
>
> (ಈ ಕೃತಿಯನ್ನು ಕಂಡರೆ ನನಗೆ ಹೆಚ್ಚಿನ ಒಲವು. ಏಕೆಂದರೆ ಅದು ನಮ್ಮೆಲ್ಲರ ಬಾಳಿನಂತೆಯೇ ಇದೆ. ಎಲ್ಲರ ಬಾಳೂ ಇದರಂತೆಯೇ ಅಸಂಪೂರ್ಣ. ಆಕಾಂಕ್ಷೆಯೇನೊ ಮಹತ್ತರವಾದದ್ದು. ಆದರೆ ಎಂದಿಗೂ ಸಾಧನೆ ಕಾಣದ್ದು. ಆದರೂ ಮಾನವನ ಅನಂತಾನಂತ ಬಯಕೆಗಳ ಕುರುಹಾಗಿ ಉಳಿದಿರುವಂಥದ್ದು.)



ಬಿಜಾಪುರದಲ್ಲಿರುವ ಕಟ್ಟಿಮುಗಿಯದ ಬಾರಾ ಕಮಾನ್ ಕಟ್ಟಡ.

'ಹಣ ಪ್ರಪಂಚ'
ಮತ್ತು ಇತರ ಶಾಸ್ತ್ರಪ್ರಬಂಧಗಳು

ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಮೊದಲ ವರ್ಷಗಳಲ್ಲಿ ಪ್ರಕಟವಾದ 'ಹಣ ಪ್ರಪಂಚ' ಕನ್ನಡ ಭಾಷೆಯಲ್ಲಿನ ಶಾಸ್ತ್ರೀಯ ಗ್ರಂಥಗಳಲ್ಲಿ ಪ್ರಥಮ ಸ್ಥಾನವನ್ನು ಸಂಪಾದಿಸಿಕೊಂಡಿದೆ. ವಿ.ಸೀ. ವಿಶ್ವವಿದ್ಯಾನಿಲಯವನ್ನು ಕನ್ನಡ ಅಧ್ಯಾಪಕರಾಗಿ ಸೇರಿದ್ದರೂ ಅವರು ಮೂಲತಃ ಅರ್ಥಶಾಸ್ತ್ರವೇತ್ತರು ಎನ್ನುವುದನ್ನು ಮರೆಯಲಾಗದು. ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದರು. ಬಂಗಾರದ ಪದಕವನ್ನು ಗಳಿಸಿಕೊಂಡಿದ್ದರು. ಸಾಹಿತ್ಯದ ಕಡೆ ಒಲವು ಎಷ್ಟೇ ಇದ್ದರೂ ಅರ್ಥಶಾಸ್ತ್ರದ ಮೇಲಿನ ಆಸಕ್ತಿ ಮಾತ್ರ ಕಡಮೆಯಾಗಿರಲಿಲ್ಲ. ಜೀವನದುದ್ದಕ್ಕೂ ಅರ್ಥಶಾಸ್ತ್ರದ ಗ್ರಂಥಗಳನ್ನು, ನಿಯತಕಾಲಿಕೆಗಳನ್ನು ಓದುತ್ತ ತಮ್ಮ ಜ್ಞಾನವನ್ನು ಬಲಪಡಿಸಿಕೊಳ್ಳುತ್ತ ಬಂದಿದ್ದರು.

ಮೈಸೂರು ವಿಶ್ವವಿದ್ಯಾನಿಲಯ ೧೯೨೭ರ ಸುಮಾರಿಗೆ ಕನ್ನಡ ಗ್ರಂಥ ಮಾಲೆಯೊಂದನ್ನು ಪ್ರಾರಂಭಿಸಿತೆನ್ನುವ ವಿಷಯವನ್ನು ಆಗಲೆ ತಿಳಿದಿದ್ದೇವೆ. ಉತ್ತಮ ಕಾವ್ಯಸಂಗ್ರಹಗಳು ಮಾತ್ರವಲ್ಲ, ನವೀನ ಕಾಲಕ್ಕೆ ಬೇಕಾದ, ಜನ ಸಾಮಾನ್ಯರಿಗೆ ಹೆಚ್ಚಿನ ಜ್ಞಾನವನ್ನು ಒದಗಿಸಬಲ್ಲ ಶಾಸ್ತ್ರೀಯ ಗ್ರಂಥಗಳ ರಚನೆಯೂ ಈ ಗ್ರಂಥಮಾಲೆಯ ಮುಖ್ಯ ಗುರಿಯಾಗಿತ್ತು. ಕಾವ್ಯಮೀಮಾಂಸೆಯ ಮೇಲೆ ಎರಡು ಪುಸ್ತಕಗಳನ್ನು ಹೊರತರಬೇಕೆಂದು ವಿಶ್ವವಿದ್ಯಾನಿಲಯ ಉದ್ದೇಶಿಸಿತ್ತು. ಭಾರತೀಯ ಕಾವ್ಯಮೀಮಾಂಸೆಯ ಮೇಲೆ ಪುಸ್ತಕವೊಂದನ್ನು ರಚಿಸುವಂತೆ ತೀ.ನಂ.ಶ್ರೀಕಂಠಯ್ಯನವರನ್ನು ಕೇಳಿಯಾಗಿತ್ತು. ಪಾಶ್ಚಾತ್ಯ ಕಾವ್ಯಮೀಮಾಂಸೆಯ ಮೇಲಿನ ಪುಸ್ತಕವನ್ನು ರಚಿಸಲು ವಿ.ಸೀ. ಇಚ್ಛೆ ವ್ಯಕ್ತಪಡಿಸಿದ್ದರಂತೆ. ಆದರೆ ವಿಶ್ವವಿದ್ಯಾನಿಲಯದ ಮುಖ್ಯಸ್ಥರಾಗಿದ್ದ ಎನ್.ಎಸ್. ಸುಬ್ಬರಾಯರು 'ಪಾಶ್ಚಾತ್ಯ ಕಾವ್ಯಮೀಮಾಂಸೆಯ ಮೇಲೆ ಯಾರು ಬೇಕಾದರೂ ಬರೆಯುತ್ತಾರೆ ಸೀತಾರಾಮಯ್ಯ,. Finance ಮೇಲೆ ಬರೆಯಬಲ್ಲವರು ವಿರಳ, ನೀವು ಆ ವಿಷಯದ ಮೇಲೆ ಬರೆಯಿರಿ' ಎಂದು ಪ್ರೇರೇಪಿಸಿದರಂತೆ. ಹೀಗೆ ಮೊದಲಾದದ್ದು 'ಹಣಪ್ರಪಂಚ' ಕೃತಿರಚನೆ. ಪುಸ್ತಕ ೧೯೩೭ರಲ್ಲಿ ಮೊದಲಿಗೆ ಹೊರಬಿದ್ದಾಗ ಅತ್ಯುತ್ತಮವಾದ ಶಾಸ್ತ್ರಗ್ರಂಥ ಎಂದು ಕೂಡಲೆ ಹೆಸರು ಪಡೆಯಿತು. ಶಾಸ್ತ್ರೀಯ ವಿಷಯಗಳನ್ನು ಎಷ್ಟೊಂದು ಸಮರ್ಪಕವಾಗಿ ಕನ್ನಡದಲ್ಲಿ ಬರೆಯಬಹುದು, ತಿಳಿಸಬಹುದು ಎನ್ನುವುದನ್ನು ಸಿದ್ಧಪಡಿಸಿ ತೋರಿಸಿ

ದಂತಾಯಿತು. ಈಗಲೂ ಕೂಡ ನಮ್ಮ ಇತರ ಯಾವ ದೇಶಭಾಷೆಯಲ್ಲೂ ಕ್ಲಿಷ್ಟವಾದ, ಅತ್ಯಂತ ಜಟಿಲವಾದ ಹಣಪ್ರಪಂಚದ ಮೇಲಿನ ಪುಸ್ತಕ ಇಂಥದು ಬೇರೊಂದಿರಲಾರದು.

'ಹಣ ಎಂದರೇನು? ಅದರ ಉತ್ಪತ್ತಿ ಹೇಗೆ? ಆವಶ್ಯಕತೆ ಉಪಯೋಗ ಗಳೇನು? ಅಳತೆ ಹೇಗೆ? ಅದನ್ನು ಸಂಗ್ರಹಿಸುವ ಬಗೆ ಯಾವುದು? ಜನ ಜೀವನದಲ್ಲಿ ಹಣದ ಪ್ರಭಾವದಿಂದ ಯಾವ ಹೆಚ್ಚು-ಕಡಮೆ, ಮೇಲು-ಬೀಳು ಉಂಟಾಗುವುವು? ಹಣದ ಸಂಗ್ರಹದಲ್ಲಿಯೂ ಹಂಚಿಕೆಯಲ್ಲಿಯೂ ಯಾವ ನಿಯಮಗಳನ್ನು ಅನುಸರಿಸುವುದು ಮೇಲು? ಅದರ ಮೂಲಕ ಕೈಗಾರಿಕೆ, ವ್ಯಾಪಾರ, ಸಂಪದಭಿವೃದ್ಧಿ ಮುಂತಾದವು ಹೇಗೆ ನಡೆಯುವುವು? ಜನರೂ ಸಂಸ್ಥೆಗಳೂ ಸರಕಾರದವರೂ ಹಣ ಸಂಗ್ರಹ ಕಾರ್ಯದಲ್ಲಿ ಹೇಗೆ ಬೆರೆಯುತ್ತಾರೆ? ಅವರಲ್ಲಿ ಯಾವ ಸಂಬಂಧಗಳು ಉಂಟಾಗುತ್ತವೆ? ಯಾವ ಸ್ಥಾನ ಎಲ್ಲಿ ಎಷ್ಟು? ಒಟ್ಟು ಸಮಾಜದ ಮಂಗಳಕ್ಕೂ ಈ ಎಲ್ಲರ ಕಾರ್ಯಕ್ಕೂ ಕೆಳೆ ಇದೆಯೆ? ಹಣದ ಉತ್ಪತ್ತಿ ಹಂಚಿಕೆಗಳ ಪರಿಣಾಮಗಳಲ್ಲಿ ಒಳ್ಳೆಯದನ್ನು ಹೆಚ್ಚಿಸಿ, ಕೆಟ್ಟದನ್ನು ಕಡಮೆ ಮಾಡುವ ಉಪಾಯಗಳಾವುವು? ಹಣದ ಪೇಟೆಯ ಮತ್ತು ಹಣ ಪ್ರಪಂಚದ ವ್ಯವಸ್ಥೆ ಹೇಗಿರಬೇಕು? ಇಂಡಿಯಾ ದೇಶದಲ್ಲಿ ಈಗ ಹಣ ಸಂಗ್ರಹದ ಸ್ಥಿತಿ ಹೇಗಿದೆ?' — ಈ ಮುಂತಾದ ವಿಷಯಗಳ ಚರ್ಚೆ ಈ ಪುಸ್ತಕದಲ್ಲಿ ದೊರೆಯುತ್ತದೆ. ೩೬೬ ಪುಟಗಳಿರುವ ಈ ಪುಸ್ತಕ ಹಣ ಪ್ರಪಂಚವನ್ನು ಕುರಿತ ಒಂದು ವಿಶ್ವಕೋಶ.

ಪುಸ್ತಕಕ್ಕೆ ಮುನ್ನುಡಿಯನ್ನು ಬರೆಯುತ್ತ, ಸ್ವಯಂ ಅರ್ಥಶಾಸ್ತ್ರ ತಜ್ಞರಾದ ಎನ್.ಎಸ್. ಸುಬ್ಬರಾಯರು — 'Finance ಎಂಬ ಒಟ್ಟು ಹೆಸರಿನಲ್ಲಿ ಅಡಕವಾಗಿರುವ ಅತಿ ತೊಡಕಿನ ವಿಷಯಗಳನ್ನು ವಿವರಿಸುವುದರಲ್ಲಿ ಸೀತಾರಾಮಯ್ಯನವರು ಪಾಂಡಿತ್ಯವನ್ನು ತುಂಬಿದ ತಿಳಿವಳಿಕೆಯನ್ನು ಪ್ರಯೋಗಿಸಿದ್ದಾರೆಂದು ನಾನು ಖಚಿತವಾಗಿ ಹೇಳಬಲ್ಲೆನು' ಎಂದಿದ್ದಾರೆ.

'ಕವಿಯಾದವನು ಶಾಸ್ತ್ರವನ್ನು ಬರೆದರೆ ಎಷ್ಟು ಸೊಗಸಾಗುತ್ತದೆಂಬುದನ್ನು ನಾವು 'ಹಣಪ್ರಪಂಚ'ದಲ್ಲಿ ಕಾಣಬಹುದು' ಎಂದಿದ್ದಾರೆ ಹಾ.ಮಾ. ನಾಯಕರು.

ಈಗಿನ ಹವಾಲ ಹಗರಣದಲ್ಲಿ, ದೇಶ ಹೊರಲಾರದ ಸಾಲದ ಹೊರೆಯನ್ನು ಹೊತ್ತು ನರಳುತ್ತಿರುವ ಕಾಲದಲ್ಲಿ, ಹಣದುಬ್ಬರದ ಪರಿಸ್ಥಿತಿಯಲ್ಲಿ, ವಿದೇಶೀಯರು ಹೇರಳ ಹಣ ತಂದು ಹಣವ್ಯವಸ್ಥೆಯಲ್ಲಿ ವಿರುಪೇರು ಉಂಟು ಮಾಡುತ್ತಿರುವ ಕಾಲದಲ್ಲಿ, ಹಣದ ವಿಷಯವಾದ ಜ್ಞಾನ ದೇಶದ ಆಗು ಹೋಗುಗಳಲ್ಲಿ ಆಸಕ್ತಿಯಿರುವ ಎಲ್ಲರಿಗೂ ಅನಿವಾರ್ಯ. ಆ ತಿಳಿವಳಿಕೆ ಹೆಚ್ಚಿದಷ್ಟೂ ದೇಶಕ್ಕೆ ಕ್ಷೇಮ.

ಸದ್ಯದ ನಮ್ಮ ದುಃಸ್ಥಿತಿ

ನಮ್ಮ ಅರ್ಥನೀತಿಯೆಲ್ಲವೂ ಪಾಶ್ಚಾತ್ಯ ಪದ್ಧತಿಗಳ ಅನುಕರಣವೇ ಆಗಿದೆ. ಬ್ರಿಟಿಷರ ಆಳ್ವಿಕೆಗೆ ಹಿಂದೆ ನಮ್ಮಲ್ಲಿಯೂ ಭಾರತೀಯವೆನ್ನಬಹುದಾದ ಅರ್ಥವ್ಯವಸ್ಥೆಯೊಂದು ಇದ್ದಿರಬೇಕಲ್ಲವೆ? ಮೊಗಲರ ಕಾಲದಲ್ಲಿ, ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ, ನಮ್ಮ ಅರ್ಥವ್ಯವಸ್ಥೆ ಯಾವ ರೀತಿ ಇತ್ತು? ಬ್ರಿಟಿಷರು ತಮ್ಮ ವ್ಯವಸ್ಥೆಯನ್ನು ನಮ್ಮ ಮೇಲೆ ಹೇರದಿದ್ದರೆ ನಮ್ಮಲ್ಲಿನ ಹಣಕಾಸಿನ ವಹಿವಾಟು ಯಾವ ರೀತಿ ಬೆಳೆಯುತ್ತಿತ್ತೊ ಹೇಳಬಲ್ಲವರಾರು. ಈಗ ನಮಗೆ ಪರಿಚಿತವಾಗಿರುವ ವ್ಯವಸ್ಥೆಯಲ್ಲಿ ಹಣವಂತರು ಇನ್ನೂ ಹೆಚ್ಚು ಹಣವಂತರಾಗುತ್ತಿದ್ದಾರೆ. ಬಡವರ ಬಡತನ ಹೆಚ್ಚುತ್ತಲೇ ಹೋಗುತ್ತಿದೆ. ಎಲ್ಲೆಲ್ಲೂ ಸ್ಪರ್ಧೆ ಪೈಪೋಟಿ ತಾಂಡವವಾಡುತ್ತಿದೆ. ಸಮಾಧಾನವೆನ್ನುವುದು ಮಾಯವಾಗಿದೆ. ಇಂಥ ಸ್ಥಿತಿಯನ್ನು ಕಂಡೇ ಏನೋ ಗೀತೆ ಹೇಳಿರುವುದು :

ಕಾಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾ.....
ಚಿಂತಾಂ ಅಪರಿಮೇಯಾಂ ಚ ಪ್ರಲಯಾಂತಾಂ ಉಪಾಶ್ರಿತಾಃ
ಕಾಮೋಪಭೋಗಪರಮಾ ಏತಾವದಿತಿ ನಿಶ್ಚಿತಾಃ
ಈಹನ್ತೇ ಕಾಮಭೋಗಾರ್ಥಂ, ಅನ್ಯಾಯೇನ ಅರ್ಥಸಂಚಯಾನ್॥

(ಕಾಮನೆಗಳು ಪೂರಯಿಸುವುದಿಲ್ಲ; ಡಂಭಕ್ಕೂ ಮದಕ್ಕೂ ಮಿತಿಯೇ ಇಲ್ಲ; ಜಗತ್ತು ಪ್ರಲಯದಿಂದ ಕೊನೆಯಾಗುವವರೆಗೂ ಮಿತಿಯಿಲ್ಲದಷ್ಟು ಚಿಂತೆಗಳು; ಕಾಮೋಪಭೋಗವೇ ಪರಮಪುರುಷಾರ್ಥ; ಹೀಗೆ ನಿಶ್ಚಯಿಸಿ ಅದಕ್ಕೆ ಬೇಕಾಗುವ ಹಣವನ್ನು ಅನ್ಯಾಯಮಾರ್ಗದಲ್ಲಿ ದೊರಕಿಸಿಕೊಳ್ಳಲು ಯತ್ನಿಸುತ್ತಾರೆ)

ಸದ್ಯದ ನಮ್ಮ ಸ್ಥಿತಿಯನ್ನು ಸರಿಯಾಗಿ ಸಂಗ್ರಹಿಸಿದೆಯಲ್ಲವೆ ಗೀತೆಯ ಈ ಸಾಲುಗಳು? ಈ ಸ್ಥಿತಿಯೇ ಶ್ರೇಷ್ಠವಾದದ್ದೆಂದು ನಂಬಿ ನಾವು ಈ ಮಾರ್ಗದಲ್ಲಿ ನಡೆದು ಹೋಗಬೇಕೆ? ಬೇರೆ ಸಮರ್ಪಕವಾದ ವ್ಯವಸ್ಥೆ ಒಂದು ಇರಬೇಕಲ್ಲವೆ? ಆ ಕಡೆ ಗಮನ ಕೊಡಬೇಡವೆ?

'ಯದೃಚ್ಛಾಲಾಭಸಂತುಷ್ಟೋ.... ವಿಮತ್ಸರಃ'
(ದೊರೆತಷ್ಟರಿಂದ ತೃಪ್ತಿಪಟ್ಟುಕೋ .... ಅಸೂಯೆ ಪಡಬೇಡ)

'ಮೂಢ! ಜಹೀಹಿ ಧನಾಗಮತೃಷ್ಣಾಂ'
(ಎಲೋ ಮೂಢ! ಧನವನ್ನು ಗಳಿಸಬೇಕೆಂಬ ಆಸೆಯನ್ನು ಬಿಡು)

'ಅರ್ಥಂ ಅನರ್ಥಂ ಭಾವಯ ನಿತ್ಯಂ'
(ಧನದಿಂದ ಅನರ್ಥ, ನಿತ್ಯವೂ ಇದನ್ನು ಚಿಂತಿಸು)

'ನಿಜಕರ್ಮೋಪಾತ್ತಂ ವಿತ್ತಂ ತೇನ ವಿನೋದಯ ಚಿತ್ತಂ'
(ನಿನ್ನ ಸ್ವಕರ್ಮದಿಂದ ಏನನ್ನು ಸಂಪಾದಿಸಿದ್ದೀಯೋ ಅಷ್ಟರಿಂದ ಮನಸ್ಸನ್ನು ನೆಮ್ಮದಿಯಾಗಿಟ್ಟುಕೋ)

ಭಾರತ ಸಂಸ್ಕೃತಿಯ ಈ ಮುಖ್ಯ ಸೂತ್ರಗಳನ್ನು ಅರ್ಥಶಾಸ್ತ್ರಜ್ಞರಾದ ವಿ.ಸೀ. ಒಪ್ಪುತ್ತಿದ್ದರೊ ಇಲ್ಲವೊ ತಿಳಿಯದು. ಇಂದಿನ ಭಾರತವಂತೂ, ಹಿಂದಿನಿಂದ ಬೆಳೆದು ಬಂದಿರುವ ಆಚಾರ ಸಂಪ್ರದಾಯಗಳನ್ನು ಗಾಳಿಗೆ ತೂರಿಬಿಟ್ಟಿದೆ. ಹಣ ಗಳಿಸುವುದೇ ಜೀವನದ ಮುಖ್ಯ ಗುರಿಯಾಗಿದೆ. ಹಣ ವಿಕಟಾಟ್ಟಹಾಸದಿಂದ ಎಲ್ಲೆಲ್ಲಿಯೂ ತಾಂಡವವಾಡುತ್ತಿರುವುದನ್ನು ಕಾಣುತ್ತಿದ್ದೇವೆ. ನ್ಯಾಯ ಮಾರ್ಗದಿಂದಾಗಲಿ ಅನ್ಯಾಯದಿಂದಾಗಲಿ, ಅಂತೂ ಹಣ ಸಂಪಾದನೆ ಮಾಡ ಬೇಕು; ಹಾಗೆ ಸಂಪಾದಿಸಿದ ಹಣವನ್ನು ಸ್ವಂತ ಸುಖಕ್ಕೆ ಉಪಯೋಗಿಸಿಕೊಳ್ಳ ಬೇಕು, ಭೋಗ ಭಾಗ್ಯಗಳನ್ನು ದೊರಕಿಸಿಕೊಳ್ಳಬೇಕು, ಎನ್ನುವುದೇ ಎಲ್ಲರ ಮುಖ್ಯ ಧ್ಯೇಯವಾಗಿದೆ. ಸ್ವಪ್ರಯೋಜನ ದೃಷ್ಟಿಯಿಂದ ಕೆಲಸಮಾಡಕೂಡದು; ಲೋಕಹಿತ ದೃಷ್ಟಿಯಿಂದ ಮಾಡಬೇಕು ಎನ್ನುವ ಉಪದೇಶ ಈಗ ಯಾರ ಕಿವಿಯ ಮೇಲೂ ಬೀಳುವುದೇ ಇಲ್ಲ. ಬಿದ್ದರೂ ಅದನ್ನು ಆಚರಣೆಗೆ ತರುವಂಥ ಮನೋವೃತ್ತಿ ಇಲ್ಲವೇ ಇಲ್ಲ. ಇದು ಸರಿಯೆ? ಭೋಗೈಕ ತತ್ಪರತೆಯೇ ನಮ್ಮ ಜೀವನದ ನಿತ್ಯಸೂತ್ರವಾಗಬೇಕೆ ?

ಅಂಧಾನುಕರಣೆಯಿಂದ ಹಿರಿದಾದ್ದು ಏನನ್ನೂ ನಾವು ಸಾಧಿಸಲಾರೆವು. ಭಾರತೀಯ ದೃಷ್ಟಿಕೋನವೂ ಒಂದಿದೆಯೆಂದು ನಾವು ಒಪ್ಪಬೇಕಲ್ಲವೆ? ನಮ್ಮ ಪೂರ್ವಸಂಪ್ರದಾಯಕ್ಕೆ, ಸ್ವಭಾವಕ್ಕೆ, ವ್ಯತಿರಿಕ್ತವಾದ ಆಚಾರಗಳನ್ನು ಯುಕ್ತಾ ಯುಕ್ತ ವಿವೇಚನೆಯಿಲ್ಲದೆ ಅಂಧ ರೀತಿಯಿಂದ ಅನುಕರಿಸುವುದು ಸಾಧು ವಾಗದು. ಹಿಂದಿನಿಂದ ಬಂದ ಸಂಸ್ಕೃತಿಯ ವಿಷಯದಲ್ಲಿ ಅಭಿಮಾನವನ್ನು ತಾಳದೆ, ಎಲ್ಲವನ್ನೂ ಕೀಳೆಂದು ತುಚ್ಛೀಕರಿಸಿ, ಪಾಶ್ಚಾತ್ಯರ ಆಚಾರವಿಚಾರಗಳನ್ನು, ವೇಷ ಭೂಷಣಗಳನ್ನು ಅನುಕರಿಸಹೊರಟಿರುವುದು ಸರಿಯಲ್ಲ. ನಾವು ಯಾವ ದಾರಿಯಲ್ಲಿ ಮುಂದೆ ಸಾಗಬೇಕು ಎನ್ನುವುದರ ಕಡೆ ನಾಡಿನ ಎಲ್ಲ ಬುದ್ಧಿವಂತರೂ ಗಮನಕೊಡಬೇಕಾದದ್ದು ತೀರ ಅವಶ್ಯವಾಗಿದೆ. ನಮಗೆ ಯಾವುದು ಉಚಿತವೊ ಅದನ್ನು ಮಾತ್ರ ಸ್ವೀಕರಿಸಬೇಕೇ ಹೊರತು ಪಾಶ್ಚಾತ್ಯರು ಅನುಸರಿಸಿರುವ ಮಾರ್ಗವೇ ಸರಿಯಾದ್ದೆಂದು, ಅವರ ಸಂಸ್ಥೆಗಳು ಸೂಚಿಸುವ ಕ್ರಮಗಳೆಲ್ಲವೂ ಅಂಗೀಕಾರಯೋಗ್ಯವೆಂದು ತಿಳಿದು ನಮ್ಮ ದೇಶದ ಆರ್ಥಿಕ ವ್ಯವಸ್ಥೆಯನ್ನೆ ತಲೆ ಕೆಳಗಾಗಿಸುವುದು ಸರಿಯಾಗಲಾರದು.

ಪಾಶ್ಚಾತ್ಯರನ್ನು ಅನುಸರಿಸುತ್ತ ಬೃಹದ್ಯಾತ್ರದ ಕೈಗಾರಿಕೆಗಳನ್ನು ಸ್ಥಾಪಿಸುತ್ತ ಹೋಗುವುದು; ಕಾರ್ಮಿಕನನ್ನು ಅವನು ಮನುಷ್ಯನಲ್ಲ, ಅವನು ಯಂತ್ರದ ಒಂದು ಭಾಗ ಮಾತ್ರ ಎಂದು ಪರಿಗಣಿಸುವುದು; ಸೂಪರ್ ಬಜಾರ್‌ಗಳನ್ನು ಕಟ್ಟಿ ವ್ಯಾಪಾರವನ್ನು ಕೆಲವರ ಕೈಯಲ್ಲಿ ಕೇಂದ್ರೀಕೃತಗೊಳಿಸುವುದು, ಇವು ಸಲ್ಲವು. ಹೀಗೆ ಮಾಡಿದ್ದೇ ಆದರೆ ಸಣ್ಣ ಕೈಗಾರಿಕೆಗಳು ಮುಚ್ಚುತ್ತವೆ, ನಿರುದ್ಯೋಗ ಹೆಚ್ಚುತ್ತದೆ. ಲಕ್ಷಾಂತರ ಸಣ್ಣ ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಮುಚ್ಚಿ ಅನಾಥರಾಗಬೇಕಾಗುತ್ತದೆ.

ನಮ್ಮ ದೇಶಕ್ಕೆ ಸರಿಹೊಂದುವ ಆರ್ಥಿಕ ವ್ಯವಸ್ಥೆ ಯಾವುದು ಎನ್ನುವುದರ ಬಗ್ಗೆ ಚರ್ಚೆ ನಡೆಯಬೇಕಾಗಿದೆ.

ಸಾಲದ ಹೊರೆ

ಕೇಂದ್ರಸರ್ಕಾರ ರಾಜ್ಯಸರ್ಕಾರಗಳು ಸದಾಕಾಲವೂ ಹಣದ ಅಭಾವದಿಂದ ತಲ್ಲಣಿಸುತ್ತಿವೆ. ಯಾವ ಅಭಿವೃದ್ಧಿಕಾರ್ಯ ಕೈಗೊಳ್ಳಬೇಕಾದರೂ ವಿದೇಶಗಳಿಂದ ಸಾಲವೆತ್ತುತ್ತ ಹೋಗುವ ದುರವಸ್ಥೆಗೆ ಇಳಿದಿದ್ದೇವೆ. ದೇಶದ ಋಣಭಾರ ಊಹೆಗೂ ಮೀರಿದಷ್ಟು ಅಧಿಕವಾದದ್ದು. ಬಡ್ಡಿಯ ರೂಪದಲ್ಲಿ ಪ್ರತಿವರ್ಷ ತೆರಬೇಕಾದ ಹಣ ೬೦,೦೦೦ ಕೋಟಿಯಾಗಿದೆಯಂತೆ! ಈ ಭಾರವನ್ನು ದೇಶ ತಡೆಯಬಲ್ಲದೆ? ಹಣದ ಅಪಮೌಲ್ಯ, ಏರುತ್ತಲೇ ಹೋಗುತ್ತಿರುವ ಬೆಲೆ, ನಿರುದ್ಯೋಗ, ಹಣದ ದುರುಪಯೋಗ, ಭೋಗ ಲಾಲಸೆ, ಹಳ್ಳಿಗಳ ಅವನತಿ, ಪಟ್ಟಣಗಳಲ್ಲಿನ ಜನಸಾಂದ್ರತೆ, ಪರಿಸರ ಮಾಲಿನ್ಯ, ಕುಡಿಯುವ ನೀರಿನ ಅಭಾವ – ಈ ಬಗೆಯ ಅವ್ಯವಸ್ಥೆಗಳಿಗೆ ಪರಿಹಾರ ಒದಗುವುದು ಎಂದಿಗೆ?

ವಿ.ಸೀ. ಯವರಂಥ ಪ್ರಖರ ಬುದ್ಧಿಯ ವಿದ್ವಾಂಸರು ಎಂದಿಗಿಂತ ಇಂದು ನಮಗೆ ಅತ್ಯಗತ್ಯವಾಗಿ ಬೇಕಾಗಿದ್ದಾರೆ.

ಹಣದ ಸದ್ವಿನಿಯೋಗದ ಆವಶ್ಯಕತೆ

ಸರಕಾರಗಳೇನೊ ಉತ್ಸಾಹದಿಂದ ಅಭಿವೃದ್ಧಿಕಾರ್ಯಗಳಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸುತ್ತಿವೆ. ಆದರೆ ಆ ಹಣ ಸರಿಯಾಗಿ ವಿನಿಯೋಗವಾಗುತ್ತಿದೆಯೆ ಎನ್ನುವ ಕಡೆ ಗಮನ ಎಳ್ಳಷ್ಟೂ ಸಾಲದು. ಹತ್ತು ಕೋಟಿ ರೂಪಾಯಿ ಕೆಲಸವಾಗ ಬೇಕಾದಾಗ, ಮುಕ್ಕಾಲುವಾಸಿ ಹಣ ಸಂಬಳ ಸಾರಿಗೆಗಳಿಗೇ ವ್ಯಯವಾಗಿ ಮುಖ್ಯ ಕೆಲಸಕ್ಕೆ ಕಾಲು ಭಾಗ ದೊರೆಯುವುದಾದರೆ ಇದು ಸರಿಯೆ? ವಿ.ಸೀ. ಹೇಳುತ್ತಾರೆ:

> ''ನಾಡ ಕೆಲಸ ಎಲ್ಲರ ಕೆಲಸ. ಅದು ಬದುಕಿದರೆ ನಾವು ಬದುಕಿದೆವು, ಅದರ ಸ್ವತ್ತನ್ನು ಸ್ವಾರ್ಥಕ್ಕೆ ಬಳಸಿಕೊಂಡರೆ, ಪೋಲುಮಾಡಿದರೆ, ಕಣ್ಮರೆ ಮಾಡಿದರೆ ಅದಕ್ಕೆ ದ್ರೋಹವಾಗುವುದು ಎಂಬ ಮನಸ್ಸು ಬೆಳೆಯಬೇಕು. ಧರ್ಮ, ಶ್ರದ್ಧೆ, ಕ್ರಿಯೆ, ಗಮನ, ಸಂತತ ಯತ್ನ, ಒಟ್ಟು ಶೀಲಶಕ್ತಿ ಆ ಸಾಧನೆಗೆ ಮುಡಿಪಾದಲ್ಲದೆ ಆಗದು. ಯಾವ ಪಕ್ಷ ಅಧಿಕಾರಕ್ಕೆ ಬಂದರೂ ನಾಡು, ಜನ, ವೃತ್ತಿಗಳು ಇವೇ ತಾನೆ? ಈ ನಾಡೇ ಬಾಳಬೇಕಾದ್ದು. ಈ ಜನವೇ ಅದಕ್ಕೆ ದುಡಿಯಬೇಕಾದ ಜನ.
>
> ನಮ್ಮ ನಾಡಿಗೆ ಈ ಬಗೆಯ ಕೆಲಸದ ಪ್ರಮಾಣ ಹೊಸತು. ಜನದ ಕೈಗೊ, ಅಧಿಕಾರಕ್ಕೊ ನೂರಾರು ಕೋಟಿ ರೂಪಾಯಿ ವ್ಯವಸ್ಥೆ ಬಂದಿದೆ. ಅಧಿಕಾರ, ಪ್ರೋತ್ಸಾಹಗಳು ಬುದ್ಧಿ ಕೆಡಿಸುವಷ್ಟು ದೊಡ್ಡವು. ಅದನ್ನು ಜೀರ್ಣಿಸಿಕೊಂಡು ಅವುಗಳ ಪ್ರಯೋಜನ ನಾಡಿಗಾಗುವಂತೆ ಮಾಡುವ ಪುಣ್ಯ ಅಧಿಕಾರಿಗಳದಾಗಬೇಕು.''
>
> (ವಿ.ಸೀ, 'ಹಣಪ್ರಪಂಚ', ೧೯೫೮, ಪು. ೩೬೫)

ರಾಜಕಾರಣಿಗಳೂ, ಅಧಿಕಾರಿಗಳೂ ಈ ಪುಸ್ತಕವನ್ನು ಓದಿದರೆ ಅವರಿಗೆ ತಮ್ಮ ಜವಾಬುದಾರಿ ಎಷ್ಟು ಮಹತ್ತ್ವದ್ದು ಎನ್ನುವುದರ ಅರಿವಾದೀತೊ ಏನೊ. ಅವರು ಓದುವ ಮನಸ್ಸು ಮಾಡಿಯಾರೆ ?

ಕಾರ್ಮಿಕ ವರ್ಗದವರೂ, ಆಫೀಸು, ಬ್ಯಾಂಕ್‌ಗಳ ನೌಕರರೂ ಎಲ್ಲರೂ ತಮ್ಮ ತಮ್ಮ ಸಂಪಾದನೆಯ ಕಡೆಗೆ, ಸಂಬಳ ಸವಲತ್ತುಗಳ ಕಡೆಗೆ ಮಾತ್ರ ಗಮನ ಕೊಡುತ್ತಾರೆ. ಆದರೆ ''ಎಂಟು ಗಂಟೆ ಕೆಲಸ ಒಪ್ಪಿಕೊಂಡು ಎರಡೂವರೆ ಗಂಟೆ ಗಳಷ್ಟೂ ಕೆಲಸಮಾಡದಿದ್ದರೆ ಆ ದೇಶ ಬೆಳೆಯುವುದು ಹೇಗೆ ? ರಾಷ್ಟ್ರಪ್ರೇಮ ಬೆಳೆಸಿಕೊಳ್ಳದಿದ್ದರೆ ರಾಷ್ಟ್ರದ ಐವತ್ತು ಕೋಟಿ ಜನರೂ ಅಷ್ಟೇ ಸಂಖ್ಯೆಯ ಸೊನ್ನೆ ಗಳಿದ್ದಂತಾಗುವುದು'' ಎನ್ನುತ್ತಾರೆ ವಿ.ಸೀ.

'ವ್ಯವಹಾರ ಧರ್ಮ'

'ಹಣಪ್ರಪಂಚ' ಪ್ರಕಟಿಸಿದ ಕೆಲವು ವರ್ಷಗಳ ನಂತರ ಧರ್ಮ ಎಂದರೇನು? ಕಾನೂನು ಎಂದರೇನು? ಅದರ ಸ್ವರೂಪ, ರಚನೆ ಎಂಥವು? ಸಾಮಾಜಿಕ ಜೀವನದಲ್ಲಿ ಕಾನೂನಿನ ಸ್ಥಾನ ಎಷ್ಟರಮಟ್ಟಿನದು? ನ್ಯಾಯ ವೆಂದರೇನು? ಈ ಗಹನವಾದ ವಿಷಯಗಳು ಎಲ್ಲರಿಗೂ ತಿಳಿಯುವಂತೆ ಬಹು ಸುಲಭ ಶೈಲಿಯಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರಿಗಾಗಿ ಕಿರುಹೊತ್ತಿಗೆ ಯೊಂದನ್ನು ಬರೆದುಕೊಟ್ಟರು. ಧರ್ಮಶಾಸ್ತ್ರ, ಕಾನೂನು ಮತ್ತು ನ್ಯಾಯ - ಈ ಮೂರು ವಿಷಯಗಳ ಮೇಲೆ ಬರೆದ ಪ್ರಬಂಧಗಳನ್ನು 'ವ್ಯವಹಾರಧರ್ಮ' ಎಂಬ ಶೀರ್ಷಿಕೆಯಲ್ಲಿ ೧೯೪೭ ರಲ್ಲಿ ಪ್ರಕಟಿಸಿದರು.

> ''ನಾಡಿನ ಬದುಕು ಎಂದರೆ ಬರಿಯ ಹತ್ತುಜನರ ಬೇರೆ ಬೇರೆ ಬದುಕಿನ ಕಥೆಯಲ್ಲ. ಅವುಗಳ ಜೊತೆಗೆ ಅವರು ಮಾಡಿದ ಯೋಚನೆ, ಆಡಿದ ಮಾತು, ನಡೆದ ನಡವಳಿಕೆ ಸೇರುತ್ತವೆ. ಅವರ ಆಶೆ, ಉತ್ಸಾಹ, ಸಾಧನೆ, ಸೋಲು, ಅಪಮಾನ ಸೇರುತ್ತವೆ. ಅವರು ಕಟ್ಟಿದ ಕೆರೆ, ಕಾಲುವೆ, ಕುಂಟೆ, ಸೇತುವೆ, ಅರಮನೆ; ಗುರುಮನೆ, ಗುಡಿ ಗೋಪುರ, ಹಾಸಿದ ರಸ್ತೆ, ನಟ್ಟ ಸಾಲುಮರ, ತೋಪು; ನಡಸಿದ ಸತ್ರ, ಅರವಟ್ಟಿಗೆ, ಮಾಡಿದ ದಾನಧರ್ಮ, ಗೆದ್ದ ಸೋತ ಯುದ್ಧತಂತ್ರ ಸೇರುತ್ತವೆ. ಶಾಂತಿಕಾಲದ ಸುಖಜೀವನದಲ್ಲಿ ಸಂರಕ್ಷಣೆಗೆ ಏನೇನು ಅಗತ್ಯವೋ ಅದನ್ನೆಲ್ಲಾ ಅವರು ಯಾವ ರೀತಿಯಲ್ಲಿ ಒದಗಿಸಿಕೊಳ್ಳುತ್ತಿದ್ದರು, ಅದರಿಂದ ಯಾವ ಬಗೆಯ ನಯವನ್ನು ಹದವನ್ನು ಉಂಟುಮಾಡಿಕೊಂಡರು ಎಂಬ ಅಂಶ ಸೇರುತ್ತದೆ. ಯುದ್ಧಕಾರ್ಯದಲ್ಲಿಯೂ, ಆತ್ಮರಕ್ಷಣೆಯಲ್ಲಿಯೂ, ಹೇಗೆ ತೊಡಗಿ ಗೆಲವು ಬಾಳು ಬಾಳುತ್ತಿದ್ದರು ಎಂಬುದೂ ಇದಕ್ಕೆ ಸಂಬಂಧಿಸಿದುದೇ. ಇವೆಲ್ಲಕ್ಕೂ ಹೊಂದುವಂತಹ ಯಾವ ಯಾವ ಸಂಸ್ಥೆಗಳನ್ನು ಅವರು ಕಟ್ಟಿಕೊಂಡರು? ತಮ್ಮೊಳಗೂ ಇತರರಲ್ಲಿಯೂ ಯಾವ ರೀತಿ ನಡೆದುಕೊಂಡು ಸಾರ್ಥಕವಾದ ಬದುಕನ್ನು ಬದುಕುತ್ತಿದ್ದರು? ಅವರ ಮನಸ್ಸಿನ ಪ್ರವೃತ್ತಿ ಎಂಥಾದ್ದು ? ಯಾವುದು ಅವರನ್ನು ಉತ್ಸಾಹಗೊಳಿಸಿ ಶ್ರದ್ಧಾವಂತರನ್ನಾಗಿ ಮಾಡಿತ್ತು ?

ಯಾವುದರ ರಕ್ಷಣೆಗಾಗಿಯೂ, ಸಾಧನೆಗಾಗಿಯೂ ಬದುಕಲು ಸಿದ್ಧರಿದ್ದರು? ಅಗತ್ಯವಿದ್ದರೆ ಯಾವುದಕ್ಕಾಗಿ ಸಾಯಲು ಸಿದ್ಧವಿದ್ದರು? ಯಾವುದರ ಕಡೆ ಅವರ ಮನಸ್ಸು ಒಲಿಯುತ್ತಿರಲಿಲ್ಲ - ಎಂಬುದನ್ನು ತಿಳಿದರೆ ನಾಡಿನ ಜೀವನದ ಸ್ವರೂಪ ಗೊತ್ತಾಗುವುದು.

(ವಿ.ಸೀ., 'ವ್ಯವಹಾರಧರ್ಮ', ೧೯೪೭, ಪು. ೩-೪)

ಹೀಗೆ ಸುಲಭವಾದ ವಾಕ್ಯಗಳಲ್ಲಿ ಧರ್ಮವೆಂದರೇನು? ಸಂಸ್ಕಾರವೆಂದರೇನು? ಹಿಂದೂ ಜನರ ಸಂಸ್ಕೃತಿ ಎಂಥದು? ಅವರ ಆಚಾರ, ವ್ಯವಹಾರ, ಸಂಪ್ರದಾಯ ಎಂಥವು - ಎನ್ನುವುದನ್ನು ಈ ಪ್ರಬಂಧದ ಮೊದಲ ಭಾಗದಲ್ಲಿ ವಿವರಿಸಿದ್ದಾರೆ. ''ಇನ್ನೊಬ್ಬರಿಂದ ಕೇಳಿ ತಮಗಾಗಿ ತೆಗೆದುಕೊಳ್ಳುವುದಕ್ಕಿಂತ ಇನ್ನೊಬ್ಬನಿಗೆ ಕೊಡುವೆನೆನ್ನುವ ದಾರಿ ಹಿರಿದಾದುದು - ಇತರರಿಗೆ ನೆರವಾಗುವ ಶಕ್ತಿ ಸಾಮರ್ಥ್ಯಗಳಿಸಬೇಕು, ದಾನದ, ತ್ಯಾಗದ ಮನಸ್ಸು ಬೆಳೆಸಬೇಕು, ಇವು ನಮ್ಮ ಸಂಸ್ಕೃತಿಯ ಲಕ್ಷಣ, ಹಿಂದೂ ಧರ್ಮದ ಸಾರ' ಎಂದು ಒತ್ತಿ ಹೇಳುತ್ತಾರೆ.

ಈ ಪ್ರಬಂಧವನ್ನು ಓದುತ್ತಾ, ಈಗ ಎರಡು ಸಾವಿರ ವರ್ಷಗಳ ಹಿಂದೆ ನಮ್ಮ ದೇಶದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಜೀವನ ಯಾವರೀತಿ ಇತ್ತು ಎನ್ನುವುದರ ಅರಿವು ನಮಗುಂಟಾಗುತ್ತದೆ. ನಮ್ಮ ಆಚಾರ ವ್ಯವಹಾರಗಳಲ್ಲಿ ಕಾಲಕಾಲಕ್ಕೆ ಯಾವ ರೀತಿ ಬದಲಾವಣೆಗಳುಂಟಾಗುತ್ತಾ ಬಂದಿವೆ, ಇನ್ನು ಎಷ್ಟು ಆಗಬೇಕಾಗಿವೆ ಎನ್ನುವುದರ ಕಡೆಗೂ ನಮ್ಮ ಗಮನ ಹರಿಯುತ್ತದೆ.

ಇಲ್ಲಿ ನಾವು ಕಾಣುವುದೆಲ್ಲವೂ ವಿಚಾರಪೂರಿತವಾದ ಸೊಗಸಿನ ಬರವಣಿಗೆ. ''ಇಂತಹ ಅನರ್ಘ್ಯರತ್ನಗಳ ಮೂವತ್ತಾರೇ ಪುಟಗಳ ಸಂಗ್ರಹ ಇತ್ತೆಂಬುದನ್ನು ನಮ್ಮ ಸಾಹಿತ್ಯಪ್ರಪಂಚ ಇಂದು ಮರೆತಿದೆ'' ಎಂದು ದುಃಖಿಸಿದ್ದಾರೆ ಪಿ.ವಿ. ಜೋಶಿಯವರು. ''ಅದೊಂದು 'ಸಂದ ಜೀವನದ ರೀತಿ'ಯಾಗಿ ಉಳಿಯಬಾರದು. ನಮ್ಮ ತಲೆಮಾರಿನವರು ಹಿಂದಿನವರನ್ನು ಮಾತ್ರ ನೆನೆದುಕೊಂಡು ಈ ದುರವಸ್ಥೆಗೆ ಕಣ್ಣೀರಿಡುವುದಕ್ಕಿಂತ ಹೆಚ್ಚಿನದನ್ನು ಸಾಧಿಸಲು ಪ್ರಯತ್ನಪಡಬೇಕು'' ಎಂದು ಆಶಿಸಿದ್ದಾರೆ.

ಈ ಸಂಗ್ರಹದಲ್ಲಿ ಸೇರಿರುವ ಎರಡನೆ ಲೇಖನ 'ಕಾನೂನಿ'ಗೆ ಸಂಬಂಧಪಟ್ಟದ್ದು. ದೇಶದೊಳಗಿನ ಎಲ್ಲ ಕಾರ್ಯಗಳೂ ಒಂದು ಅಂಕೆಗೆ ಒಳಪಟ್ಟು ನಡೆಯುತ್ತವೆ. ಈ ಅಂಕೆಯನ್ನು ವಿಧಿಸುವುದೇ ಕಾನೂನು. ಇದು ಪೂರ್ತಿಯಾಗಿ ರಾಜಕೀಯ ಜೀವನಕ್ಕೆ ಸಂಬಂಧಿಸಿದ್ದು. ಎಲ್ಲರನ್ನೂ ರಕ್ಷಿಸುವ, ಪೋಷಿಸುವ ಅಧಿಕಾರ ಉಳ್ಳದ್ದು. ವಿ.ಸೀ. ಹೇಳುತ್ತಾರೆ :

''ಎಲ್ಲ ಮುಖವಾದ ಏಳಿಗೆ, ಸೌಭಾಗ್ಯ, ಎಲ್ಲೆಲ್ಲಿಯೂ ಸಮಾಧಾನ, ಸಮರಸ, ಹೊಂದಿಕೆ, ಸುಸೂತ್ರವಾಗಿ ನಡೆಯುವ ವ್ಯವಸ್ಥೆ, ದಿನದಿನವೂ ಹೊಸ ಹೊಸ ಸಂತೋಷಕ್ಕೂ ಮೇಲ್ಮೈಗೂ ನಡೆಯುತ್ತಿರುವ ಮುನ್ನಡೆ - ಇವೇ

ಒಳ್ಳೆಯ ರಾಜ್ಯದ ಲಕ್ಷಣ; ಎಲ್ಲ ತೃಪ್ತಿಯೂ ಇರುತ್ತದೆ, ಇದು ನೆರವೇರುವಂತೆ ಆ ದೇಶದ ಕಾನೂನೂ ರಾಜ್ಯಪದ್ಧತಿಯೂ ರಚಿತವಾಗಬೇಕು.'

(ಅದೇ, ೧೯೪೭ ಪು. ೪೩)

ರಾಜ್ಯದ ಆಡಳಿತ ನಿರ್ವಹಿಸುವ ಅಂಗಗಳು ಮೂರು; ೧) ಶಾಸನದ ಅಂಗ (Legislature), ೨) ಕಾರ್ಯಾಂಗ (Executive), ಮತ್ತು ನ್ಯಾಯ ನಿರ್ಣಯ ಮಾಡುವ ಅಂಗ (Judiciary). ಈ ಮೂರು ಮುಖ್ಯ ಅಂಗಗಳ ಕಾರ್ಯ ವ್ಯಾಪ್ತಿಯನ್ನು, ಅವುಗಳ ಇತಿ ಮಿತಿಯನ್ನು ಸುಲಭವಾಗಿ ಗ್ರಹಿಸುವಂತೆ ವಿವರಣೆ ನೀಡಿದ್ದಾರೆ ವಿ.ಸೀ.

''ವ್ಯವಹಾರಧರ್ಮ'ದಲ್ಲಿ ಸೇರಿರುವ ಮೂರನೆಯ ಪ್ರಬಂಧ 'ನ್ಯಾಯ'ವನ್ನು ಕುರಿತದ್ದು. 'ಸಿವಿಲ್ ಲಾ' ಎಂದರೇನು? 'ಕ್ರಿಮಿನಲ್ ಲಾ' ಎಂದರೇನು? ಕೇಡು ನಡೆಯದ ಹಾಗೆ ನೋಡಿಕೊಳ್ಳುವುದು, ನಡೆದಾಗ ಅದನ್ನು ಪತ್ತೆ ಮಾಡುವುದು, ಕೇಡಿಗರನ್ನು ನಿರ್ಬಂಧದಲ್ಲಿಡುವುದು, ವಿಚಾರಣೆ ನಡೆಸುವುದು, ನ್ಯಾಯಾಸ್ಥಾನಗಳ ರಚನೆ, ನ್ಯಾಯಾಧಿಪತಿಯಾದವನು ಶುಚಿಯಾಗಿದ್ದು, ಲಾಭ ಪ್ರಲೋಭನೆಗಳಿಗೆ ಒಳಗಾಗದೆ ತೀರ್ಪುಕೊಡುವ ಆವಶ್ಯಕತೆ, ಅವರಿಗೆ ಕೊಡ ಬೇಕಾದ ಸ್ಥಾನಮಾನಗಳು, ಹೈಕೋರ್ಟುಗಳು, ಅವುಗಳ ಅಧಿಕಾರ ವ್ಯಾಪ್ತಿ, ನ್ಯಾಯವಾದಿಗಳು, ಅವರ ಕಾರ್ಯವೈಖರಿ, ವಾದಕೌಶಲ್ಯ - ಇವೆಲ್ಲವನ್ನೂ ಎಳೆ ಎಳೆಯಾಗಿ ಬಿಡಿಸಿ ವಿವರಿಸಿದ್ದಾರೆ. ಇಷ್ಟೆಲ್ಲ ಸ್ವಾರಸ್ಯಕರ ವಿಷಯಗಳನ್ನು ಸಣ್ಣ ಹೊತ್ತಿಗೆಯೊಂದರಲ್ಲಿ ತಿಳಿಸುವುದು ಸಾಧ್ಯವೆ ಎಂದು ವಿಸ್ಮಯಪಡುತ್ತೇವೆ.

''ಒಂದು ಜನಾಂಗದ ಸತ್ಯವನ್ನೋ, ಧರ್ಮವನ್ನೋ ಕಾಣಬೇಕಾದರೆ ಅದರ ಕಾನೂನು, ನ್ಯಾಯಮಂಡಲ, ಧರ್ಮವಿವೇಚನೆಗಳನ್ನು ಪರಿಶೀಲಿಸಿದರೆ ಸಾಕು. ಜೀವನಕ್ಕೆ ಎಷ್ಟು ಮುಖವೋ, ಪ್ರಕಾರವೋ, ವ್ಯಾಪ್ತಿಯೋ, ಅಷ್ಟು ಮುಖ, ಅಷ್ಟು ಪ್ರಕಾರ, ಅಷ್ಟು ವ್ಯಾಪ್ತಿ, ಜನ ನಾವು ನಿರ್ಮಿಸಿಕೊಳ್ಳುವ ಶಾಸನ ಪ್ರಪಂಚಕ್ಕೆ. ಜನದ ಮನಸ್ಸು, ಮಾತು ನಡತೆಗಳ ಮಟ್ಟಕ್ಕಿಂತ ಉನ್ನತವಾಗಿ ಅದರ ನ್ಯಾಯಶಾಸನ ಎಂದಿಗೇ ಆಗಲಿ ಏರಲಾರದು. ಆ ಮಟ್ಟವನ್ನು ಸಂತತವಾಗಿ ಎತ್ತಿ ಮನುಷ್ಯಲೋಕವನ್ನು ದೇವತ್ವಕ್ಕೆ ಎತ್ತುವ ಧಾರ್ಮಿಕ ಸಾಹಸ ಪುಣ್ಯಶಾಲಿಗಳ ಭಾಗಕ್ಕೆ ಬರುತ್ತದೆ. ನಯದಿಂದ ನ್ಯಾಯ, ನ್ಯಾಯದಿಂದ ನಯ; ಇವೆರಡರಿಂದ ಧರ್ಮ; ಧರ್ಮದಿಂದ ಈ ಎಲ್ಲ - ಪರಸ್ಪರವಾಗಿ ಬೆಳೆಯಬೇಕು, ಬೆಳಗಬೇಕು. ಸ್ವಂತ ಪ್ರಯೋಜನದಷ್ಟೇ ಹೆರವರದೂ ಸರಿ; ಸ್ವದೇಶ ಸ್ವಕಾಲಗಳಷ್ಟೇ ಪರದೇಶ ಅನ್ಯಕಾಲಗಳಿಗೂ ಗೌರವ ಸಲ್ಲಬೇಕು ಎಂಬ ಎಣಿಕೆ ಯಾವ ಜನಕ್ಕೆ ಸಹಜವಾಗುವುದೋ, ಆ ಜನರೇ ನಯಜ್ಞರು, ನ್ಯಾಯವಂತರು, ಧರ್ಮಿಷ್ಠರು. ಅಂಥ ಜನವರ್ಗವನ್ನು ನಿರ್ಮಿಸಿ ಬೆಳೆಸುವ ಸೌಭಾಗ್ಯ ಎಲ್ಲ ರಾಷ್ಟ್ರಗಳ ಪಾಲಿಗೂ ಉಂಟಾಗಲಿ.''

(ಅದೇ, ಪು. ೮೯-೯೦)

ಹೀಗೆ ಹೇಳಿ 'ವ್ಯವಹಾರಧರ್ಮ'ದ ನಿರೂಪಣೆಯನ್ನು ಮುಗಿಸುತ್ತಾರೆ. ಕೇವಲ ಅಕ್ಷರ ಕಲಿತ ವಯಸ್ಕರು ಮಾತ್ರವಲ್ಲ, ಎಲ್ಲ ನಾಗರಿಕ ವ್ಯಕ್ತಿಗಳೂ ತಿಳಿದಿರಲೇಬೇಕಾದ ವಿಷಯಗಳನ್ನು ಸುಲಭವಾಗಿ ವಿವರಿಸಿದ್ದಾರೆ. ಈ ದಿಕ್ಕಿನಲ್ಲಿ ಕನ್ನಡದಲ್ಲಿ ದೊರಕುವ ಏಕೈಕ ಕೃತಿ ಇದು. ಅತಿ ಸರಳ ಭಾಷೆಯಲ್ಲಿ ಅತ್ಯಾಧುನಿಕ ವಿಷಯಗಳನ್ನು ವಿವರಿಸುವ ಪ್ರಯತ್ನ ವಿ.ಸೀ.ಯವರದು.

ಸರಕಾರ ನಡೆಸುವ ಹೊಣೆಗಾರಿಕೆಯನ್ನು ಹೊತ್ತ ಅಧಿಕಾರಿಗಳು, ಶಾಸನಗಳನ್ನು ರೂಪಿಸುವವರು, ಜನಸಾಮಾನ್ಯರು ಎಲ್ಲರೂ ಧರ್ಮ, ಕಾನೂನು, ನ್ಯಾಯಗಳ ಸ್ವರೂಪದ ಸ್ಥೂಲ ಪರಿಚಯ ಮಾಡಿಕೊಳ್ಳಲು ಈ ಚಿಕ್ಕ ಪುಸ್ತಕ ಸಹಕಾರಿಯಾಗಿದೆ.

'ಸಂವಿಧಾನ ಮತ್ತು ಕಾನೂನು'

ಸಂವಿಧಾನದ ಕಾನೂನು (Constitutional Law) ಮತ್ತು ಅಂತರಾಷ್ಟ್ರೀಯ ಕಾನೂನು (International Law) - ಈ ವಿಷಯಗಳಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ವಿ.ಸೀ. ಆಸಕ್ತಿಯನ್ನು ಬೆಳೆಸಿಕೊಂಡಿದ್ದಂತೆ ತೋರುತ್ತದೆ. ಮುಂಬಯಿಯಲ್ಲಿ ಕಳೆದ ದಿವಸಗಳಲ್ಲೂ ಈ ಆಸಕ್ತಿ ಮುಂದುವರಿಯಿತು. ಈ ವಿಷಯಗಳ ಬಗ್ಗೆ ತಮ್ಮ ತಿಳಿವಳಿಕೆಯನ್ನು update ಮಾಡುತ್ತಲೇ ಇದ್ದರು. ನಾಲ್ಕು ದಶಕಗಳ ಕಾಲ ಅವರ ಚಿಂತನೆ ಅಭಿಪ್ರಾಯ, ವಿಮರ್ಶೆ ವಿಶ್ಲೇಷಣೆಗಳನ್ನು ೧೯೭೫-೧೯೭೬ರ ಸುಮಾರಿನಲ್ಲಿ ದಿನಕ್ಕೆ ಅರ್ಧ ಅಥವಾ ಒಂದು ಘಂಟೆಯ ಕಾಲಾವಧಿಯಲ್ಲಿ ಯಾವುದೇ ಪೂರ್ವಸಿದ್ಧತೆಯಿಲ್ಲದೆ ಹೇಳಿ ಬರೆಯಿಸಿದರಂತೆ. ಬರಹ ಸಿದ್ಧವಾಗಿದ್ದರೂ ಪ್ರಕಟಿಸುವವರು ಯಾರೂ ಮುಂದೆ ಬಾರದೆ ಹಸ್ತಪ್ರತಿ ಹಾಗೆಯೇ ಉಳಿದುಕೊಂಡಿತ್ತು. ೧೯೭೯ರಲ್ಲಿ ಪ್ರಾರಂಭವಾದ ಬಿ.ಎಂ.ಶ್ರೀ. ಪ್ರತಿಷ್ಠಾನದವರು ಪ್ರಚಲಿತ ವಿಷಯಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಲು ಉತ್ಸುಕತೆ ತೋರಿದ್ದರಿಂದ, ಬೆಳಕು ಕಾಣದ ವಿ.ಸೀ.ಯವರ ಈ ಕೃತಿ ಅವರು ತೀರಿಕೊಂಡ ಹಲವಾರು ವರ್ಷಗಳು ಕಳೆದ ನಂತರ ೧೯೯೨ ರಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ದಶಮಾನೋತ್ಸವ ಮಾಲೆಯಲ್ಲಿ ಆರನೆಯ ಕೃತಿಯಾಗಿ ಹೊರ ಬಿದ್ದಿತು.

ಕೃತಿಗೆ ಮುನ್ನುಡಿ ಬರೆದಿರುವ ಭಾರತ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರೂ, ಧೀಮಂತ ನ್ಯಾಯವಾದಿಗಳೂ ಆದ ಇ.ಎಸ್. ವೆಂಕಟರಾಮಯ್ಯನವರು 'ಸಂವಿಧಾನ ಮತ್ತು ಕಾನೂನು' ಪುಸ್ತಕವನ್ನು ಅರಿಸ್ಟಾಟಲನ 'ದಿ ಪಾಲಿಟಿಕ್ಸ್' ಶೈಲಿಯಲ್ಲಿ ಪ್ರಕಟವಾಗಿರುವ ಒಂದು ಪ್ರಕರಣ ಗ್ರಂಥ ಎಂದು ಮೆಚ್ಚಿಕೊಂಡಿದ್ದಾರೆ. ರಾಜಪ್ರಭುತ್ವ (Monarchy), ಗಣತಂತ್ರ (Republic), ಪ್ರಜಾಸ್ವಾತಂತ್ರ್ಯ (Liberty), ಸಮಾನತೆ (Equality), ಸಾರ್ವಭೌಮತ್ವವುಳ್ಳ ರಾಷ್ಟ್ರಗಳು (Sovereign States) ಮತ್ತು ಅವುಗಳ ಧರ್ಮ

ಮತ್ತು ಪರಸ್ಪರ ಸಂಬಂಧ, ಅಂತರರಾಷ್ಟ್ರೀಯ ಸಂಸ್ಥೆ (U.N.O.) ಇವುಗಳ ಕರಾರುವಾಕ್ಕಾದ ವಿವರಣೆ ಈ ಪುಸ್ತಕದಲ್ಲಿ ದೊರೆಯುತ್ತದೆ. 'ಕನ್ನಡನಾಡಿನ ಪ್ರಜಾ ಸಮೂಹಕ್ಕೆ ಇದು ಬಹಳ ಉಪಯೋಗವಾದ ಪುಸ್ತಕ. ಪ್ರಗತಿಪರವಾದ ಸುಧಾರಣೆಗಳನ್ನು ಜಾರಿಗೆ ತರಲು ಇಚ್ಛೆಯುಳ್ಳವರು, ರಾಜ್ಯಶಾಸ್ತ್ರದ ವಿದ್ಯಾರ್ಥಿಗಳು ಈ ಪುಸ್ತಕದಿಂದ ವಿಶೇಷ ಪ್ರಯೋಜನವನ್ನು ಪಡೆಯುತ್ತಾರೆಂದು ನಂಬಿದ್ದೇನೆ' ಎಂದಿದ್ದಾರೆ.

ಡಿ.ವಿ.ಜಿ.ಯವರ 'ರಾಜ್ಯಾಂಗತತ್ತ್ವಗಳು' ಪುಸ್ತಕವನ್ನು ಬಿಟ್ಟರೆ ಸಂವಿಧಾನ, ಕಾನೂನು ಮತ್ತು ಅಂತಾರಾಷ್ಟ್ರೀಯ ಕಾನೂನುಗಳಿಗೆ ಸಂಬಂಧಿಸಿದಂತೆ ಬೇರಾವ ಉತ್ತಮ ದರ್ಜೆಯ ಪುಸ್ತಕಗಳು ಬಹುಶಃ ದೊರೆಯಲಾರವು.

'ಭಾರತದಲ್ಲಿ ಯೋಜನೆ'

ಭಾರತದ ಆರ್ಥಿಕ ವ್ಯವಸ್ಥೆಯನ್ನು ಕುರಿತು ವಿ.ಸೀ. ಬರೆದ ಇನ್ನೊಂದು ಪುಸ್ತಕ 'ಭಾರತದಲ್ಲಿ ಯೋಜನೆ'. ಇದನ್ನು ಪ್ರಕಟಿಸಿದವರು ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯ. ಪುಸ್ತಕ ಬೆಳಕು ಕಂಡದ್ದು ೧೯೬೨ ರಲ್ಲಿ. ಈ ಪುಸ್ತಕದಲ್ಲಿ ಭಾರತದ ಇಂದಿನ ಆರ್ಥಿಕ ಪರಿಸ್ಥಿತಿ, ಅದರಲ್ಲಿ ಬದಲಾವಣೆಗಳಾಗಬೇಕಾದುದರ ಆವಶ್ಯಕತೆ, ಪಂಚವಾರ್ಷಿಕ ಯೋಜನೆಗಳ ಕಲ್ಪನೆ, ಅವುಗಳ ಹಿನ್ನೆಲೆ, ಇಟ್ಟುಕೊಂಡ ಗುರಿ, ಸ್ಥಾಪಿತವಾದ ಉದ್ಯೋಗ ಕೈಗಾರಿಕೆಗಳು, ಈ ಬೆಳವಣಿಗೆಗೆ ಬೇಕಾಗುವ ಹಣ, ಒದಗಿಸುವ ಬಗೆ – ಇವೇ ಮುಂತಾದ, ಸಾಮಾನ್ಯ ನಾಗರಿಕ ತಿಳಿಯಬೇಕಾದ ಸಂಗತಿಗಳ ವಿವರವಿದೆ.

ಬ್ರಿಟಿಷರ ಆಳ್ವಿಕೆಯ ಕೊನೆಯ ದಿನಗಳಲ್ಲಿ ಭಾರತ ಮುಟ್ಟಿದ್ದ ದುಃಸ್ಥಿತಿಯನ್ನು ವಿವರಿಸುತ್ತ ವಿ.ಸೀ. ಹೀಗೆಂದಿದ್ದಾರೆ :

> ''ನಾಡಿನ ವೀರ್ಯ, ಉತ್ಪಾದನಾ ಶಕ್ತಿ ತುಂಬಾ ಕುಗ್ಗಿದವು. ಒಂದು ಕ್ಷಾಮ ಬಂದರೆ ಅನ್ನದ ದಾಸ್ತಾನು, ಕೈಗಾಪು, ಇಲ್ಲ ; ಒಂದು ಅಂಟುರೋಗ ಬಂದರೆ ತಡೆಯುವ ಶಕ್ತಿ ಇಲ್ಲದೆ ಹತ್ತಾರು ಲಕ್ಷ ಜನ ಸಾಯುವ ದುಃಸ್ಥಿತಿ; ಜನರಲ್ಲಿ ಭೀತಿ, ಅಸಹಾಯತೆ, ತಬ್ಬಲಿತನ ; ವೀರವೂ ಸಾಹಸದ ಬಾಳೂ ಮರೆತುಹೋದೀತೇನೊ ಎಂಬ ಶಂಕೆ ; ಅದಕ್ಕೆ ತಕ್ಕ ಹಾಗೆ ವಿಧಿ, ಕರ್ಮ, ದೇವರು ಎಂದು ಹೆಸರನ್ನೆತ್ತಿ ಜಡವಾಗುವ ಆಲಸಪ್ರವೃತ್ತಿ ; ಜಾತಿ, ಕೋಮು, ಮತ, ಮಡಿ, ಸ್ಪೃಶ್ಯ, ಅಸ್ಪೃಶ್ಯ ಎಂಬ ಭಿನ್ನಭಾವ ; ಭಾಷೆ, ಪ್ರಾಂತ ಎಂಬ ಕಾರ್ಪಣ್ಯ....''
>
> (ವಿ.ಸೀ. 'ಭಾರತದಲ್ಲಿ ಯೋಜನೆ', ಪು. ೧)

ಈ ಸ್ಥಿತಿಯಿಂದ ನಾವು ಬಹು ದೂರವೇನೂ ಸಾಗಿಬಂದಿಲ್ಲ. ಬಡತನ ಎನ್ನುವುದು ನಮ್ಮ ಜನರನ್ನು ಇನ್ನೂ ಕಿತ್ತು ತಿನ್ನುತ್ತಿದೆ. ಮಾಡಬೇಕಾದ ಕೆಲಸ ಅಪಾರವಾಗಿದೆ. ಜನ ಎಚ್ಚತ್ತುಕೊಳ್ಳಬೇಕು. ಧೈರ್ಯತಂದುಕೊಳ್ಳಬೇಕು, ಮುನ್ನಡೆಯಬೇಕು. ಅವಕಾಶ ಅನಂತವಾಗಿದೆ ಎಂದು ಹಂಬಲಿಸಿದ್ದಾರೆ ವಿ.ಸೀ.

''ಎಲ್ಲ ಏಳಿಗೆಗೂ ಮೂಲ, ಒಂದು ಕಡೆ ಪ್ರಕೃತಿದತ್ತವಾದ ನೆಲ, ಜಲ, ಗಿರಿ, ಖನಿ, ಕಾನನ ಸಂಪತ್ತು ; ಇನ್ನೊಂದು ಕಡೆ ಜನರ ಸಂಖ್ಯೆ, ಜನದ ಗುಣ, ಅವರ ಯೋಗ್ಯತೆ, ಸಾಹಸ, ಅವರು ನಿರ್ಮಾಣ ಮಾಡಿಕೊಳ್ಳುವ ಮುಟ್ಟುಗಳು, ಉಪಕರಣಗಳು . ಇವೇ ಸಾಧನಗಳು, ಇವೇ ಶಕ್ತಿಗಳು.''

(ಅದೇ, ಪು. ೩)

ಸ್ವತಂತ್ರ ಭಾರತದ ಜನ ತಮಗೆ ಎಲ್ಲ ಭಾಗ್ಯಗಳೂ ಒಡನೆಯೇ ಬೇಕೆಂದು ಆಸೆಪಟ್ಟರು. ಆ ಗುರಿಯ ಸಾಧನೆಗಾಗಿ ಪ್ರಯತ್ನಗಳು ನಡೆದವು. ರಾಜ್ಯಾಂಗ ರಚನೆಯಾಯಿತು. ರಾಜ್ಯ ತನ್ನ ಮುಂದಿಟ್ಟುಕೊಂಡ ಗುರಿಗಳು ಯಾವುವು ಎನ್ನುವುದನ್ನು ಬಹು ಸಮರ್ಪಕವಾಗಿ ವಿ.ಸೀ. ಸಂಗ್ರಹಿಸಿದ್ದಾರೆ.

''ಗುರಿಗಳಲ್ಲಿ ಮುಖ್ಯವಾದವು ಸಾಮಾಜಿಕ ನ್ಯಾಯ, ಸರ್ವಜನ ಸಮಾನತೆ ..... ಜನವರ್ಗದಲ್ಲಿ ಯಾರು ಯಾರಿಗೂ ಮೇಲಲ್ಲ , ಬೀಳಲ್ಲ. ಸರಕಾರದ ವೃತ್ತಿಯಲ್ಲಿ , ಕಾನೂನಿನ ಕಣ್ಣಿನಲ್ಲಿ , ಎಲ್ಲರೂ ಸಮಾನರು. ಅವಕಾಶಗಳನ್ನು ಎಲ್ಲರಿಗೂ ಕಲ್ಪಿಸಿಕೊಡಬೇಕು.... ವಯಸ್ಕ ರಾದವರೆಲ್ಲರಿಗೂ ರಾಜಕೀಯವಾದ, ವ್ಯಾವಹಾರಿಕವಾದ ಸಮಾನ ಹಕ್ಕು ಗಳುಂಟು. ಇದರಲ್ಲಿ ಗಂಡು ಹೆಣ್ಣೆಂಬ ಭೇದವಿಲ್ಲ . ಈ ನಾಡಿನಲ್ಲಿ ಬಹುಕಾಲದಿಂದ ಬಳಕೆಯಲ್ಲಿರುವ ವರ್ಣವ್ಯವಸ್ಥೆಯಲ್ಲಿ ಅಸಮತೆ ಅಡಗಿದೆ. ಅದನ್ನು ತೊಡೆದುಹಾಕದ ಹೊರತು ಪ್ರಜೆಗಳಲ್ಲಿ ಸಮಾನತೆ ಎಲ್ಲಿ ಬಂತು ? ಅಸಮತೆ ಅಳಿದಲ್ಲದೆ ನಿಜವಾದ ಪ್ರಜಾಸತ್ತೆ ಸ್ಥಾಪಿತವಾಗುವುದಿಲ್ಲ. ಆದ್ದರಿಂದ ಮುಖ್ಯವಾಗಿ ಸ್ಪೃಶ್ಯ-ಅಸ್ಪೃಶ್ಯ ಎಂಬ ಅಸಮಾನತೆಯನ್ನು ಸಮಾಜ ಜೀವನದಿಂದ ತೊಡೆದುಹಾಕುವುದು ಸರಕಾರದ ಕರ್ತವ್ಯ.....''

ಮುಂದಿರುವವರ ಸಮಕ್ಕೆ ಹಿಂದುಳಿದವರನ್ನು ತರುವ ಪ್ರಯತ್ನ ಸತತವಾಗಿ ನಡೆಯುತ್ತ ಬಂದಿದೆ. ಈ ದಾರಿಯಲ್ಲಿ ಗಣನೀಯವಾದ ಪ್ರಗತಿಯನ್ನು ದೇಶ ಸಾಧಿಸಿದೆ ಎಂದು ಹೇಳಬಹುದು.

ಈಗಿನ ರಾಜಕಾರಣಿಗಳು, ಸಮಾಜಸೇವಾಸಕ್ತರು ಈ ಕಡೆ ಗಮನವಿತ್ತರೆ ದೇಶದ ಪ್ರಗತಿ ತ್ವರಿತಗತಿಯಲ್ಲಿ ಸಾಗಬಲ್ಲದೇನೊ ಎನ್ನುತ್ತಾರೆ ವಿ.ಸೀ.

''ಭಾರತ ಹಳ್ಳಿಗಳ ನಾಡು. ಐದೂವರೆ ಲಕ್ಷ ಹಳ್ಳಿಗಳು ಬೆಳೆದರೆ ಮಾತ್ರ ಭಾರತದ ಮುನ್ನಡೆ ಸಾಧ್ಯವಾಗುವುದು. ಹಳ್ಳಿಗಳಲ್ಲಿರುವವರೆಲ್ಲರ ಆರ್ಥಿಕ ಶಕ್ತಿ, ವ್ಯಕ್ತಿಗಳ ಸಾರ್ವಜನಿಕ ಗುಣ, ಸಮಾಜಸಂತೋಷ ಸರ್ವತೋಮುಖವಾಗಿ ಬೆಳೆಯಬೇಕಲ್ಲವೆ ? ಅವರ ವ್ಯವಸಾಯ, ಜಲ ಸಮೃದ್ಧಿ , ಗೋಸಂಪತ್ತಿ , ಸಣ್ಣ ಕೈಗಾರಿಕೆಗಳು, ಸ್ಥಳದ ಕ್ರಿಯಾವ್ಯವಸ್ಥೆಗಳು, ವಿದ್ಯಾಸೌಕರ್ಯ, ಆರೋಗ್ಯ ಹೆಚ್ಚಿ ಪ್ರತಿಯೊಬ್ಬರ ಬಾಳೂ ಶಕ್ತವಾಗಿ , ಪುಷ್ಟವಾಗಿ , ಸಂಪನ್ನವಾಗಿ ನಗುವಿನದಾಗಬೇಕು; ಸಾಹಸದ್ದಾಗಬೇಕು. ಆಗ ನಾಡಿನ ಬಾಳು ತುಂಬಿದ ಬಾಳಾಗುತ್ತದೆ.''

(ಅದೇ, ಪು.೬)

ಇದೇ ರೀತಿ ದೇಶದಲ್ಲಿ ಆಗಬೇಕಾದ ಕಾರ್ಯಗಳ ವಿವರಗಳನ್ನು ವಿ. ಸೀ. ತಮ್ಮ ಅನುಪಮವಾದ ಗದ್ಯಶೈಲಿಯಲ್ಲಿ ಒದಗಿಸಿದ್ದಾರೆ. ಹೈಸ್ಕೂಲು ಕಾಲೇಜು ವಿದ್ಯಾರ್ಥಿಗಳು ಈ ಪುಸ್ತಕದಲ್ಲಿ ಅಡಕವಾಗಿರುವ ವಿಷಯಗಳನ್ನು ಗ್ರಹಿಸಿ, ಅದರಂತೆ ನಡೆದುಕೊಳ್ಳಲು ಪ್ರಯತ್ನಪಟ್ಟರೆ, ನಮ್ಮ ಸ್ಥಿತಿ ಎಷ್ಟೋ ಸುಧಾರಿಸೀತು.

ಸದ್ಯದ ಪರಿಸ್ಥಿತಿಯ ರೂಪಾಂತರವಾಗಬೇಕಾದ ಅಗತ್ಯ, ಅದನ್ನು ಸಾಧಿಸುವುದಕ್ಕೆ ಬೇಕಾಗುವ ಹಣ, ಭಾರಿ ಯಂತ್ರಾಗಾರಗಳ ನಿರ್ಮಾಣ, ಖಾಸಗಿ ಮತ್ತು ಸರಕಾರಿ ವಲಯಗಳ ನಡುವಿನ ವ್ಯತ್ಯಾಸ, ಯೋಜನೆಗಳ ಹಿನ್ನೆಲೆ, ಯೋಜನೆಗಳು ಇಟ್ಟುಕೊಂಡ ಗುರಿಗಳು, ಉದ್ಯೋಗ ಕೈಗಾರಿಕೆಗಳು, ಭಾರಿ ನೀರಾವರಿ, ವಿದ್ಯುತ್ ಉತ್ಪಾದನ ಯೋಜನೆಗಳ ವಿವರಗಳು, – ಇಂಥವೇ ಇನ್ನೂ ಅನೇಕ ಮುಖ್ಯ ವಿಷಯಗಳ ಪ್ರಸ್ತಾಪ ಈ ಪುಸ್ತಕದಲ್ಲಿ ಅಡಕವಾಗಿದೆ. ಇದರ ವ್ಯಾಸಂಗದಿಂದ ರಾಷ್ಟ್ರದ ಅಭಿವೃದ್ಧಿಗೆ ಸಂಬಂಧಿಸಿದ ಎಷ್ಟೋ ವಿಷಯಗಳನ್ನು ತಿಳಿಯಬಹುದು. ಭಾಷೆ ಸರಳವಾಗಿರುವುದರಿಂದ ಜಟಿಲವಾದ ಸಮಸ್ಯೆಗಳೂ ಸುಲಭವಾಗಿ ಅರ್ಥವಾಗುತ್ತವೆ. ಇಂಥ ಕೃತಿಗಳನ್ನು ವಿ.ಸೀ.ಯವರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ರಚಿಸಬೇಕಾಗಿತ್ತು ಎನ್ನಿಸುತ್ತದೆ. ಆದರೆ ಓದುವವರು ಯಾರು? ಎಷ್ಟು ಜನಕ್ಕೆ ಈ ಹೊಸ ವಿಷಯಗಳನ್ನು ತಿಳಿಯುವ ಆಸಕ್ತಿ ಇದೆ?

> ''ಒಂದು ಕಲ್ಪನೆ, ಕನಸು ನನಸಾದರೆ ಒಂದು ನಾಡು ಬದುಕುತ್ತದೆ. ಒಂದು ಜನತೆ ಕ್ರಿಯಾವಂತವಾಗಿ ತನ್ನನ್ನು, ತನ್ನ ಕಾಲವನ್ನು ಕೃತಾರ್ಥವನ್ನಾಗಿ ಮಾಡುತ್ತದೆ. ಅದು ಪೌರುಷ, ಪೌರಧರ್ಮ; ರಾಷ್ಟ್ರಧರ್ಮ; ಅದೇ ಲೋಕಹಿತ. ನಾಡ ಬದುಕು ಆರ್ಥಿಕ ಲೌಕಿಕ ಹಿರಿಮೆಯ ಮೇಲೆ ಕಟ್ಟಿನಿಂತಾಗ, ಭಾರತೀಯನೊಬ್ಬೊಬ್ಬನೂ ಶಕ್ತಿ ಧರ್ಮಗಳ ಕೇಂದ್ರವಾಗುವಂತೆ ಬೆಳೆದಾಗ, ಭಾರತ ಸುಭದ್ರವಾಗುವುದು; ದೀನತೆ, ಹೀನತೆ, ಅಧೀನತೆ ಹೋಗಿ ಪುನಃ ಈ ನಾಡವರು 'ಅಜೀತಾಃಸ್ಯಾಮ' ಎಂದು ಹೇಳುವಂತಾಗುವುದು. ಯೋಜನೆಯ ಪರಮಾಕಾಂಕ್ಷೆ ಅದು.''

– 'ಭಾರತದಲ್ಲಿ ಯೋಜನೆ' ಪುಸ್ತಕದ ಕೊನೆಯ ವಾಕ್ಯ ಇದು. ವಿ.ಸೀ. ಅವರ ಕಲ್ಪನೆ ನನಸಾಗುವಂತೆ ಭಾರತಭಾಗ್ಯವಿಧಾತ ಕರುಣಿಸಬೇಕು. ಜನತೆ ಎಚ್ಚತ್ತುಕೊಂಡು, ಧೈರ್ಯದಿಂದ ಗುರಿಯತ್ತ ನಡೆದರೆ ಆ ದಿನವನ್ನೂ ನಾವು ಕಂಡೇವೇನೊ ಎಂದೆನಿಸುತ್ತದೆ.

ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ

೧೯೫೫ರಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕ ವೃತ್ತಿಯಿಂದ ವಿ.ಸೀ. ನಿವೃತ್ತರಾದರಷ್ಟೆ. ಅವರ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಿಕೊಳ್ಳಲು ಬೆಂಗಳೂರು ಆಕಾಶವಾಣಿ ಕೇಂದ್ರ ಮುಂದೆ ಬಂದಿತು. ಅವರನ್ನು ಕೇಂದ್ರದ ಕಾರ್ಯಕ್ರಮ ನಿರ್ಮಾಪಕರನ್ನಾಗಿ ನೇಮಕ ಮಾಡಿಕೊಂಡಿತು. ವಿ.ಸೀ. ಮೂರು ವರ್ಷಕಾಲ, ಎಂದರೆ ೧೯೫೫ ರಿಂದ ೧೯೫೮ ರವರೆಗೆ, ಈ ಕೆಲಸದಲ್ಲಿ ಮುಂದುವರಿದರು. ತಮ್ಮ ಹೊಸ ಹುದ್ದೆಗೆ ಆವಶ್ಯಕವಾದ ಪ್ರಸಾರತಂತ್ರವನ್ನು ಕಲಿತು ಎಲ್ಲರೂ ಆಶ್ಚರ್ಯ ಪಡುವಂತೆ ತಮಗೆ ವಹಿಸಿದ ಕಾರ್ಯವನ್ನು ನಿರ್ವಹಿಸಿದರು. ಅವರ ಕೆಲಸ ಎಷ್ಟು ಸಮರ್ಪಕವಾಗಿತ್ತು ಎನ್ನುವುದನ್ನು ವಿವರಿಸುತ್ತ ಎಚ್.ಕೆ. ರಂಗನಾಥ್ ಹೇಳುತ್ತಾರೆ :

> ''ಪ್ರಸಾರ ಮಾಧ್ಯಮದ ಅದೆಷ್ಟು ಪ್ರಭೇದಗಳಲ್ಲಿ ಅವರ ಸಿದ್ಧ ಹಸ್ತ ಆಡಿ, ಜರಡೆಯಾಡಿ, ಜಳ್ಳುಕಳೆದು ಕಾಳುಮಾತುಗಳನ್ನು ಮೇಲೆತ್ತಿ ತಂದಿತೆಂದು ಕಂಡುಕೊಂಡಾಗ ಅವರ ಮೇಲಿನ ಗೌರವ ಮತ್ತೊಂದು ಮೆಟ್ಟಲು ಮೇಲೇಳುತ್ತದೆ. ಭಾಷಣ, ವ್ಯಾಖ್ಯಾನ, ವಿಚಾರ ಸಂಕಿರಣ, ಪದ್ಯವಾಚನ, ಧ್ವನಿಚಿತ್ರರಚನ, ನಾಟಕ ನಿರ್ದೇಶನ, ಪುಸ್ತಕ ವಿಮರ್ಶನ, ಪರಿಣತರೊಂದಿಗೆ ಸಂದರ್ಶನ, ಕವಿ ಸಮ್ಮೇಲನ, ಸರ್ವಧರ್ಮಮಥನ, ಸ್ತ್ರೀ ಸಮಸ್ಯೆಗಳ ವಿವೇಚನ, ನೆನಪಿನ ಪ್ರಕರಣ, ವಿದ್ಯಾರ್ಥಿ ಬೋಧನ, ದೇಶ ವಿದೇಶಗಳಲ್ಲಿನ ಆರ್ಥಿಕ, ಸಾಮಾಜಿಕ, ತಾತ್ವಿಕ ಮತ್ತು ರಾಜಕೀಯ ರಂಗಗಳಲ್ಲಿನ ಸಂಘರ್ಷಣ ಹಾಗೂ ಸೂಕ್ಷ್ಮತೆಗಳ ನಿಷ್ಕೃಷ್ಟ ದರ್ಶನ — ಹೀಗೆ ಒಂದೆ, ಎರಡೆ. ಅಲ್ಲದೆ ತಿಳಿದವರಿಗೂ, ತಿಳಿಯದವರಿಗೂ, ಮಕ್ಕಳಿಗೂ, ಮಹಿಳೆಯರಿಗೂ ಹಳ್ಳಿಯ ಬಂಧುಗಳಿಗೂ ತುಂಬ ರುಚಿಸುವಂತೆ, ಆ ವರ್ಗದ ತಿಳಿವಿಗೆ ತಕ್ಕಂತೆ, ಪ್ರಸಾರದಲ್ಲಿ ಮಾತ್ರ ಫಲಕೊಡಬಹುದಾದ ಮಾತುಗಳನ್ನು ಆರಿಸಿ, ವಾಕ್ಯಗಳನ್ನು ಹೆಣೆದು ತಮ್ಮ ಶ್ರೀಮಂತ ಧ್ವನಿಯನ್ನು ರೂಢಿಸಿಕೊಂಡು ಮಾತುಮಾತಿಗೆ ಜೀವ ತುಂಬಿ ಪ್ರಸಾರವೆಂದರೆ ಹೀಗಿರಬೇಕು ಎನ್ನುವಂತೆ ಮಾಡಿದ ನಿಷ್ಣಾತ ಪ್ರಸಾರಕರಾಗಿದ್ದರು ವಿ.ಸೀ.''

ಆ ಕಾಲದಲ್ಲಿ ವಿ.ಸೀ.ಯವರಿಗೆ ಅನೇಕ ಗಣ್ಯ ವ್ಯಕ್ತಿಗಳ ಪರಿಚಯವಾಯಿತು. ಕೆಲವೊಂದು ಸಂದರ್ಭಗಳಲ್ಲಿ, ಆಗ ಪರಿಚಯಿಸಿಕೊಂಡ ವ್ಯಕ್ತಿಗಳ ಚಿತ್ರಗಳನ್ನು ಕೊಟ್ಟಿರುವುದುಂಟು. ವಿಖ್ಯಾತ ವಿಜ್ಞಾನಿ ಸಿ.ವಿ.ರಾಮನ್ ಅವರ ಮೆಚ್ಚಿನ ಮಡದಿ ಲೋಕಸುಂದರಿಯವರ ಸುಂದರ ಚಿತ್ರಣ ಇದು :

> ''ಶ್ರೀಮತಿಯವರ ಅಭಿಮಾನ ಸಾಮಾನ್ಯವಾದದ್ದಲ್ಲ. ಆಕೆಯ ಸತೀತ್ವ ಬಹು ವಿಚಕ್ಷಣೆಯದು. ಆದರೂ ಯಾರಾದರೂ ತಮ್ಮನ್ನು 'ಲೇಡಿ

ರಾಮನ್' ಎಂದು ಮಾತ್ರ ಕರೆದರೆ 'ನನಗೆ ಬೇರೆ ಹೆಸರೂ ಇದೆ ನನ್ನದಾಗಿ' ಎಂದು ಹೇಳಿದುದುಂಟು. ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ, ಮಹಿಳಾ ಕಾರ್ಯಗಳಲ್ಲಿ ಅವರು ಬೆಂಗಳೂರಿನ ಬಹು ಗಣ್ಯಸ್ಥಾನಗಳನ್ನು ಪಡೆದಿದ್ದಾರೆ. ಅವರ ಉಡುಗೆ ತೊಡುಗೆ ನೋಡತಕ್ಕಂಥವು.''

(ವಿ.ಸೀ., 'ಹಿರಿಯರು ಗೆಳೆಯರು', ಪು.೧೧೬)

ಆಕಾಶವಾಣಿಯ ಮಾಧ್ಯಮದಲ್ಲಿ ರಾಮನ್ ಅವರ ಭಾಷಣಗಳನ್ನು ಪ್ರಸಾರಮಾಡುವ ಅವಕಾಶ ವಿ.ಸೀ.ಯವರಿಗೆ ಆಗಿಂದಾಗ್ಗೆ ದೊರೆಯುತ್ತಿತ್ತು. ರಾಮನ್ ಅವರ ಭಾಷಣಗಳ ಸೊಗಸು ಎಂಥದೆನ್ನುವುದನ್ನು ವಿ.ಸೀ.ಯವರ ಮಾತಿನಲ್ಲೆ ತಿಳಿಯಬೇಕು :

''ಆ (ರಾಮನ್ ಅವರ) ಭಾಷಣದ ವೈಭವ ವಿಜ್ಞಾನಿಗಳು ಇನ್ನಾರಿಂದಲೂ ನಾನು ಕೇಳಿದ್ದಿಲ್ಲ. ಯಾವ ಸಾಹಿತ್ಯವಿಶಾರದರೂ ಇಷ್ಟು ಸರಸವಾಗಿ, ತಿಳಿಯಾಗಿ, ಖಚಿತವಾಗಿ, ವಿಶದವಾಗಿ ವಿಷಯವನ್ನು ಬೆಳಸಲಾರರು. ಅವರು ಆಡುವ ಮಾತಿನಲ್ಲಿ, ಬಳಸುವ ಮಾತುಗಳಲ್ಲಿ, ಪದಪುಂಜಗಳಲ್ಲಿ ಇಂಗ್ಲಿಷಿನಲ್ಲಿ ಅತ್ಯಂತ ಹೊಸದಾಗಿ ಪ್ರಚಲಿತವಾದವು ಇರುತ್ತಿದ್ದವು. ಸುಮಾರು ಆ ದಿನಗಳಲ್ಲಿ fashion ಆಗಿ ಬರುವ ಯಾವುದೋ ವಾಕ್ಯವಿಶೇಷ, ನುಡಿಗಟ್ಟು ಇರುತ್ತಿದ್ದವು. ಅವರ ಮಾತನ್ನು ಕೇಳುತ್ತಿದ್ದರೆ ಆ ಆಕೃತಿ ವಿಶೇಷ, ಆ ಕಣ್ಣ ಚಲನೆ, ಆ ಶಾಸ್ತ್ರವೇ ಮೈವೆತ್ತಂತೆ, ಅದೇ ನುಡಿದಂತೆ ಇರುತ್ತಿದ್ದ ಒಂದು ಜೀವಕಳೆ, ನಡುನಡುವೆ ಇನ್ನಾರನ್ನೊ ಏನನ್ನೊ ಕುರಿತು ಟೀಕೆಮಾಡುವ ಅಥವಾ ಹೊಗಳುವ ಮಾತಿನ ಮೋಡಿ ಇರುತ್ತಿತ್ತು. ಸರಸವಾದ ವಚೋವಿಲಾಸ ಅದನ್ನು ಭಾಷಣಕಲೆಯ ಒಂದು ಪ್ರದರ್ಶನವನ್ನಾಗಿ ಮಾಡುತ್ತಿತ್ತು. ವಿಜ್ಞಾನ ಮಾತ್ರವೇ ಅಲ್ಲ, ಭಾಷಣದ ಒಂದು ವೈಭವ ಎಂದೆನಿಸುತ್ತಿತ್ತು. ಒಂದು ವಿಷಯವನ್ನು ಕುರಿತು ಹತ್ತಾರು ವರ್ಷಕಾಲ ಸಂಶೋಧನೆ ನಡೆಸಿ, ಕ್ಲಿಷ್ಟವಾಗಿದ್ದ ಅದನ್ನು ಸುಲಭಮಾಡಿ ಬೆಳಸಿ ಹೇಳುವ ಚಾತುರಿಯಿಂದಾಗಿ ಆ ವಿಷಯದ ಪರಿಚಯ ಸುತರಾಂ ಇಲ್ಲದಿದ್ದ ನಮಗೆ — ನಮ್ಮಂಥ ನಾಡಾಡಿಗಳಿಗೆ — ಅದರ ಸ್ವರೂಪ ಸಮಗ್ರವಾಗಿ ತಿಳಿಯಿತೇನೊ ಎಂಬಷ್ಟು ತೃಪ್ತಿ, ವಿಶ್ವಾಸ ಉಂಟಾಗುತ್ತಿದ್ದವು.''

(ಅದೇ, ಪು.೧೧೮)

ಸ್ವಯಂ ಉತ್ತಮ ಭಾಷಣಕಾರರಾದ ವಿ.ಸೀ. ಈ ರೀತಿ ಭಾಷಣ ಕಲೆಯಲ್ಲಿನ ಸವಿ ಸೊಗಸುಗಳನ್ನು ಮೆಚ್ಚಿ ವಿವರಿಸಬಲ್ಲವರಾಗಿದ್ದರು. ಇಷ್ಟು ಸಮರ್ಪಕವಾಗಿ ರಾಮನ್ ಅವರ ಮಾತುಗಾರಿಕೆಯ ವೈಭವವನ್ನು, ವಿಷಯಪ್ರತಿಪಾದನೆಯ ಶಕ್ತಿಯನ್ನು, ವರ್ಣಿಸಿರುವುದನ್ನು ಬೇರೆ ಯಾರ ಬರವಣಿಗೆಯಲ್ಲೂ ಕಾಣಲಾರೆವು.

ರಾಮನ್ ನಿರಂಕುಶ ಮನೋವೃತ್ತಿಯವರು. ತಮ್ಮನ್ನು ಮೀರಿಸಿದವರು ಇನ್ನೊಬ್ಬರಿಲ್ಲ ಎನ್ನುವ ಅಹಂಭಾವದಿಂದ ಮೆರೆದವರು. ತಮ್ಮ ಬಗೆಗಿನ ಯಾವ

ಟೀಕೆಯನ್ನೂ ಸಹಿಸದವರು. ಒಮ್ಮೆ ರಾಮನ್ ಅವರ ಭಾಷಣವನ್ನು ಪ್ರಚಾರಕ್ಕೆ ಮುನ್ನ ಧ್ವನಿಮುದ್ರಣ ಮಾಡಿಕೊಳ್ಳುತ್ತಿದ್ದಾಗ ಒಂದೆರಡು ಕಡೆ ಅವರ ಮಾತು ಕ್ಷೀಣವಾಗಿ ತೋರಿತಂತೆ. ಅದನ್ನು ವಿ.ಸೀ. ರಾಮನ್ ಅವರ ಗಮನಕ್ಕೆ ತಂದು ಈ ಭಾಗವನ್ನು ಪುನಃ ರಿಕಾರ್ಡ್ ಮಾಡೋಣವೆ ಎಂದು ಕೇಳಿದರಂತೆ. ಟೀಕೆಯಿಂದ ರಾಮನ್ ಅವರ ಸ್ವಾಭಿಮಾನ ಕೆರಳಿತು. ಉರಿದುಬಿದ್ದು — 'Nonsense, I do not speak words indistinctly' ಎಂದರಂತೆ. ವಿ.ಸೀ. ಸಾವಧಾನವಾಗಿ ಹೆಚ್ಚಿನ ತಾಳ್ಮೆಯಿಂದ 'ಅಪ್ಪಣೆಯಾದರೆ ಒಂದು ನಿಮಿಷದಲ್ಲಿ ಆ ಭಾಗವನ್ನು ನಿಮ್ಮ ಕಿವಿಗೆ ಬೀಳಿಸುತ್ತೇನೆ' ಎಂದು ಹೇಳಿ ಧ್ವನಿಮುದ್ರಕದ ಮೂಲಕ ಅಸ್ಪಷ್ಟವಾಗಿದ್ದ ಭಾಗವನ್ನು ಕೇಳಿಸಿದರಂತೆ. ವಿ.ಸೀ. ಹೇಳಿದ್ದಂತೆಯೇ ಒಂದೆರಡು ಕಡೆ ಮಾತು ಅಸ್ಪಷ್ಟವಾಗಿತ್ತು. ರಾಮನ್ ಕೂಡಲೆ ತಮ್ಮ ತಪ್ಪೊಪ್ಪಿಕೊಂಡು — 'Proper evidence irrefutable' ಎಂದು ಹೇಳಿ 'We shall do the blessed thing again' ಎಂದು ಮತ್ತೆ ತಮ್ಮ ಭಾಷಣ ರಿಕಾರ್ಡ್ ಮಾಡಿಸಿದರಂತೆ. ಅಷ್ಟೇ ಅಲ್ಲದೆ 'you have a finer ear. I should like to be guided by you' ಎಂದರಂತೆ. *(ವಿ.ಸೀತಾರಾಮಯ್ಯ, 'ಹಿರಿಯರು ಗೆಳೆಯರು', ೧೯೮೦, ಪು.೧೨೨-೧೨೩).* ಇದನ್ನು ಕೇಳಿದ ವಿ.ಸೀ. ಬಾಳಿನಲ್ಲಿ ನನಗಿದೊಂದು ಶಿಫಾರಸ್ಸು ಎಂದುಕೊಂಡು ಸಂತೋಷಪಟ್ಟುಕೊಂಡರು.

ಭಾಷಣದ ಧ್ವನಿಮುದ್ರಣ ಮಾಡಿಕೊಡಲು ಬಂದು ಕುಳಿತಿದ್ದ ರಾಮನ್ ಅವರ ಚಿತ್ರಣ ಎಂದಿಗೂ ಮರೆಯಲಾಗದಂಥಾದ್ದು:

> ''ರಾಮನ್ ತಮ್ಮ ಕುರ್ಚಿಯಲ್ಲಿ ದಿಮ್ಮನೆ ಕುಳಿತಿದ್ದರು. ಒಂದು ನಿಮಿಷಕಾಲ ಆ ಆಕೃತಿ ಒಂದು ಬುದ್ಧ ವಿಗ್ರಹದಂತಿತ್ತು. ಆ ಮುಖದ ಪ್ರಶಾಂತ ಮಾಟ, ತುಂಬು ಹಣೆ, ಸುಖಚಿತವಾದ ಮೂಗು ಕಣ್ಣು, ಕೇಳುವುದಕ್ಕೆ ಸಿದ್ಧವಾದ ಮನಸ್ಸು, ಆ ಭಾಷಣವನ್ನು ಕೇಳುತ್ತಿದ್ದ ಹಾಗೆಯೇ ಒಮ್ಮೆಯೋ ಎರಡು ಸಲವೋ ಮುಖ ಹಾಗೆ ಹೀಗೆ ಆಡಿತು, ತುಟಿ ತೆರೆಯಿತು. ಏನೊ ಹೇಳಬೇಕೆಂದು, ಹೇಳಲಿಲ್ಲ.''
>
> *(ಅದೇ, ಪು.೧೨೩)*

ಇಂಥ ಪ್ರಸಂಗಗಳು ಆಕಾಶವಾಣಿಯ ಸೇವಾವಧಿಯ ಕಾಲದಲ್ಲಿ ಎಷ್ಟೋ ನಡೆದಿರಬೇಕು. ಅವುಗಳನ್ನು ವಿ.ಸೀ.ಯವರೇ ಆಗಲಿ, ಆಕಾಶವಾಣಿಯ ಅಧಿಕಾರವರ್ಗದವರೇ ಆಗಲಿ, ಸಂಗ್ರಹಿಸುವ ತೊಂದರೆ ತೆಗೆದುಕೊಂಡಿದ್ದರೆ, ಉತ್ತಮವಾದ ವ್ಯಕ್ತಿಚಿತ್ರಣಗಳ ಸಮೂಹವೇ ನಮಗೆ ದೊರಕಬಹುದಾಗಿತ್ತೇನೊ. ಹಾಗಾಗಲಿಲ್ಲ. ಉತ್ತಮ ಅವಕಾಶ ತಪ್ಪಿಹೋಯಿತು.

'ವಿ.ಸೀ. ನಿತ್ಯ ವಿದ್ಯಾರ್ಥಿಗಳು' ಎನ್ನುತ್ತಾರೆ ಅವರನ್ನು ಹತ್ತಿರದಿಂದ ಕಂಡ ಎಚ್.ಕೆ. ರಂಗನಾಥ್ ಅವರು. 'ಆಕಾಶವಾಣಿಯ ಕಾರ್ಯಕ್ರಮ ನಿರ್ವಹಣೆಯ ಸಂಪುಟದಲ್ಲಿ, ವಿ.ಸೀ. ಅವರ ವಿಷಯ ಪ್ರತಿಪಾದನೆಯ ರೀತಿ, ಮಿಂಚಿನ ಹರಳು

ಗಳಂಥ ಮಾತು, ಆ ಒಂದೊಂದು ಮಾತನ್ನೂ ತೂಕಮಾಡಿತಿದ್ದಿ, ಅರ್ಥೈಸಿ ಹಾವ ಭಾವ ಏನೋದ ವಿಲಾಸಗಳಿಂದ ಸಿಂಗರಿಸುತ್ತಿದ್ದ ಆ ಮಾಟ — ಅದೇ ವಿ.ಸೀ. ಯವರ ವೈಶಿಷ್ಟ್ಯ. ಕನ್ನಡ, ಇಂಗ್ಲಿಷ್ ಭಾಷೆಗಳ ಮೇಲೆ ಪ್ರಭುತ್ವ ಮತ್ತು ಆ ಭಾಷೆಗಳ ಸಾಹಿತ್ಯದಲ್ಲಿ ಪ್ರಗಲ್ಭವಾದ ಪಾಂಡಿತ್ಯಗಳನ್ನು ಪಡೆದವರಾದರೂ ವಿ.ಸೀ. ಯಾವ ಒಂದು ವಿಚಾರದಲ್ಲಿಯೂ ತಮ್ಮದೇ ಕಡೆಯ ಮಾತೆಂದು ಪಟ್ಟುಹಿಡಿದವರಲ್ಲ. ಮತ್ತೊಬ್ಬರ ಅಭಿಪ್ರಾಯ ಗಂಟಲಲ್ಲಿ ಇಳಿಯದಾಗಲೂ, ಅದನ್ನು ಹಳಿದವರಲ್ಲ. ವಿದ್ಯಾರ್ಥಿಗೆ ಇರಬೇಕಾದ ಜ್ಞಾನಪಿಪಾಸೆ ಅವರಲ್ಲಿ ಎಂದಿಗೂ ಹಿಂಗಲಿಲ್ಲ ಎಂದೇ ಅವರು ಪ್ರಸಾರ ರಂಗದಲ್ಲಿ ನಿತ್ಯನವೀನರೆನಿಸಿ ಉಳಿದು ಅದರ ಪ್ರಭೇದಗಳ ಹಾಗೂ ಸಾಹಿತ್ಯ ಕಾರ್ಯಕ್ರಮಗಳ ಸಂಪತ್ತನ್ನು ಹೆಚ್ಚಿಸಿದರು''. ಇಂಥ ಮೆಚ್ಚುಕೆಯ ಮಾತುಗಳಿಂದ ಆಕಾಶವಾಣಿ ಪ್ರಸಾರ ಕಾರ್ಯದಲ್ಲಿ ವಿ.ಸೀ. ತೋರಿಸಿದ ಹೆಚ್ಚುಗಾರಿಕೆಯನ್ನು ಕೊಂಡಾಡಿದ್ದಾರೆ ಎಚ್.ಕೆ. ರಂಗನಾಥ್.

ಒಟ್ಟಿನಲ್ಲಿ ವಿ.ಸೀ. ಯವರು ಆಕಾಶವಾಣಿಯಲ್ಲಿ ಮೂರು ವರ್ಷಕಾಲ ಸಂತೋಷದಿಂದ ಕಳೆದರು. ಅಲ್ಲಿನ ಕಾರ್ಯ ಅವರಿಗೆ ತೃಪ್ತಿಯನ್ನು ತಂದು ಕೊಟ್ಟಿತು.

ಧಾರಾಳತನ

ವಿ.ಸೀ. ಯವರ ಧಾರಾಳತನವನ್ನು ತೋರಿಸುವ ಒಂದು ಸಂದರ್ಭವನ್ನು ಇಲ್ಲಿ ಉಲ್ಲೇಖಿಸಬೇಕು. ಒಂದು ದಿನ ಕುಮಾರವ್ಯಾಸ ಭಾರತದ ಪ್ರಸಂಗಗಳ ಗಮಕ ರೂಪಕದ ಕಾರ್ಯಕ್ರಮದ ರಿಹರ್ಸಲ್ ನಡೆಯುತ್ತಿತ್ತಂತೆ. ಎಷ್ಟು ಹೊತ್ತಾದರೂ ರಿಹರ್ಸಲ್ ಮುಗಿಯುವ ಲಕ್ಷಣವೆ ತೋರಲಿಲ್ಲ. ಅಂದು ಭಾನುವಾರ. ಕಲಾವಿದರೆಲ್ಲ ಹಸಿವಿನಿಂದ ಕಂಗೆಟ್ಟಿದ್ದರು. ಕೂಡಲೆ ವಿ.ಸೀ. ತಮ್ಮ ಸಹಕಾರ್ಯದರ್ಶಿಗೆ 'ಇಂದು ಎಲ್ಲರೂ ಸೇರಿ ಊಟಮಾಡೋಣ. Woodlands ಗೆ ತಿಳಿಸಿಬಿಡಿ' ಎಂದರಂತೆ. ಕಾರ್ಯದರ್ಶಿಗೆ ಸಂಕಟ. ಇಷ್ಟು ಜನಕ್ಕೆ ಊಟ ಹಾಕಿಸುವುದಕ್ಕೆ ಆಫೀಸಿನವರ ಅನುಮತಿ ಪಡೆಯಬೇಕು. ಭಾನುವಾರವಾದ್ದರಿಂದ ಅನುಮತಿ ಪಡೆಯುವ ಹಾಗಿರಲಿಲ್ಲ. ವಿ.ಸೀ. ಕಾರ್ಯದರ್ಶಿ ಹಿಂದೇಟು ಹಾಕುತ್ತಿರುವುದನ್ನು ಕಂಡು ತಾವೇ ಫೋನ್ ಎತ್ತಿಕೊಂಡು ಹೋಟಲಿಗೆ ಆರ್ಡರ್ ಕೊಟ್ಟರು — ಖರ್ಚು ತಮ್ಮದು ಎಂದರು. 'ಯಾಕೆ ಸರ್ ಸುಮ್ಮನೆ ತೊಂದರೆ ತೆಗೆದುಕೊಳ್ಳುತ್ತೀರಿ?' ಎಂದಾಗ 'ಈ ರಸಗಳಿಗೆ ಮತ್ತೊಮ್ಮೆ ಸಿಕ್ಕುತ್ತೇನ್ರೀ. It is my pleasure' ಎಂದುಬಿಟ್ಟರಂತೆ!

ಕಾರ್ಯಕ್ರಮ ವಿತರಣೆಯಲ್ಲಿ ಅವರು ತೋರಿಸುತ್ತಿದ್ದ ದಕ್ಷತೆ, ಎಲ್ಲ ಕಲಾವಿದರನ್ನೂ ಸಮಭಾವದಿಂದ ಗೌರವಿಸುತ್ತಿದ್ದುದು ಅವರನ್ನು ಎಲ್ಲರಿಗೂ ಪ್ರಿಯರನ್ನಾಗಿ ಮಾಡಿತ್ತು. ತಂಬೂರಿಯ ಸಾಮಾನ್ಯ ಕಲಾವಿದನೂ ಅವರ ಪ್ರೋತ್ಸಾಹದಿಂದ ಉಬ್ಬಿಹೋಗುತ್ತಿದ್ದನಂತೆ! ಕಾರ್ಯಕ್ರಮದ ಮಧ್ಯೆ ವಿರಾಮ

ದೊರೆತು ಅವರ ಕೊಠಡಿಗೆ ಹೋದರೆ ಸಾಕು, ವಿ.ಸೀ. ಜೇಬಿನಿಂದ ಐದು ರೂಪಾಯಿ ತೆಗೆದು ಸೋಹನ್ ಹಲ್ವ ತರಿಸುವರು. ಅಷ್ಟೇ ಸವಿಯಾಗಿ ಮಾತ ನಾಡುವರು. ಅವರನ್ನು ನೋಡಬಂದವರಿಗೆ ಹೆಚ್ಚಿಗೆ ಇನ್ನೇನು ಬೇಕು ?

ಗಮಕ ರೂಪಕ

ಆಕಾಶವಾಣಿಯಲ್ಲಿ ನಿರ್ಮಾಪಕರಾಗಿದ್ದಾಗ ಹೊಸ ಪ್ರಯೋಗವನ್ನು ವಿ.ಸೀ. ಜಾರಿಗೆ ತಂದರು. ಹಳಗನ್ನಡ ಕಾವ್ಯವ್ಯಾಸಂಗ ಸಾಮಾನ್ಯ ಬಿ.ಎ., ಬಿ.ಎಸ್‌ಸಿ. ವಿದ್ಯಾರ್ಥಿಗಳು ಮಾಡುವುದಿಲ್ಲ. ಕನ್ನಡವನ್ನು ಐಚ್ಛಿಕವಾಗಿ ತೆಗೆದು ಕೊಂಡಿರುವವರು, ಆನರ್ಸ್ ವಿದ್ಯಾರ್ಥಿಗಳು ಕೆಲವರು, ಚಂಪೂಕಾವ್ಯಗಳ ಕೆಲವು ಭಾಗಗಳನ್ನು ಓದಿರಬಹುದು ಅಷ್ಟೆ. ಆದರೆ ಈ ಚಂಪೂಕಾವ್ಯಗಳ ಪೂರ್ಣ ಪರಿಚಯ ಎಲ್ಲ ವಿದ್ಯಾವಂತ ಕನ್ನಡಿಗರಿಗೂ ಆಗಬೇಕು, ಕಾಲೇಜು ವ್ಯಾಸಂಗ ಮಾಡದವರೂ ಈ ಕಾವ್ಯಗಳ ಸೊಗಸನ್ನು ಅನುಭವಿಸುವಂತೆ ಮಾಡಬೇಕು, ಎಂದು ಇಚ್ಛಿಪಟ್ಟು ಮುಖ್ಯಕವಿಗಳ ಪ್ರಖ್ಯಾತ ಕಾವ್ಯಗಳಿಂದ ಭಾಗಗಳನ್ನು ಆಯ್ದುಕೊಂಡು ಅದನ್ನು ನಾಲ್ಕೈದು ಧ್ವನಿಗಳಿಗೆ ಹಂಚಿ, ನಿವೇದಕನೆಂಬ ಹೆಸರಿನಲ್ಲಿ ಒಬ್ಬರು ಕಥನ ಭಾಗಗಳನ್ನೂ ಅಥವಾ ಸಂಬಂಧ ಸೂಚಕ ಸೂತ್ರಸಂಬಂಧ ಪದ್ಯಗಳನ್ನೂ ಓದಿ ಹೇಳಿ, ಉಳಿದುದನ್ನು ಇತರ ಕಂದಗಳ ಮೂಲಕ ವಾಚನ ಮಾಡಿಸುವ ಒಂದು ಪ್ರಯೋಗ ಕೈಗೊಂಡರು. ಉಚ್ಚಾರ ಸಮರ್ಪಕವಾಗಿದ್ದು, ವೃತ್ತಗಳನ್ನು ಸುಲಭವಾಗಿ ಬಿಡಿಸಿಕೊಂಡು ಅರ್ಥ ಸ್ಪಷ್ಟವಾಗುವಂತೆ, ಸನ್ನಿವೇಶ ಸ್ವಾರಸ್ಯವಾಗುವಂತೆ, ಸ್ವಲ್ಪಮಟ್ಟಿಗೆ ರಾಗವನ್ನು ಉಪಯೋಗಿಸುವಂಥವರು ಬೇಕಾಗಿತ್ತು. ಅವರಿಗೆ ಕವಿಯ ಆಶಯವೇನು ಎಂದು ತಿಳಿಸಬೇಕಾಗಿತ್ತು. ಇವರ ಬೋಧನೆಯಿಂದ ಕೆಲವರು ಬೇಸತ್ತು ಸಿಟ್ಟಿಗೆದ್ದ ಸನ್ನಿವೇಶಗಳೂ ಇದ್ದವು. ಆದರೆ ಎಲ್ಲವನ್ನು ಸರಿತೂಗಿಸಿಕೊಂಡು ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದರು.

ಯಾವುದೇ ಒಂದು ಕಾರ್ಯಕ್ರಮ ನಿರ್ದೇಶನ ನಡೆದಾಗ ಅವರ ಬಳಿ ಇರುವುದೂ ಒಂದು ಶಿಕ್ಷಣವಾಗುತ್ತಿತ್ತು ಎಂದು ಆಕಾಶವಾಣಿಯಲ್ಲಿ ಅವರನ್ನು ಕಂಡವರೆಲ್ಲರೂ ಹೇಳುತ್ತಾರೆ. 'ಕವಿ ಕಾವ್ಯದರ್ಶನ ಮಾಲಿಕೆ' ಬಿತ್ತರಿಸುವ ಮುನ್ನ ನಾಗವರ್ಮನ ಕಾದಂಬರಿಯನ್ನು ಲೀಲಾಜಾಲವಾಗಿ ಓದಿ ಹೇಳಿ ಸಂಗೀತ ಗಾರರಿಗೆ ಅರ್ಥವಾಗುವಂತೆ ತೊಳೆತೊಳೆಯಾಗಿ ಅದರ ಸವಿಯನ್ನು ಬಿಡಿ ಬಿಡಿಯಾಗಿ ವಿವರಿಸುತ್ತಿದ್ದರಂತೆ. ಕಾವ್ಯದ ರಸಭಾಗಗಳಿಗೆ ಯಾವ ರಾಗ ಸರಿಹೋಗುತ್ತದೆ ಎನ್ನುವುದನ್ನು ಸೂಚಿಸುತ್ತಿದ್ದರಂತೆ. ಕವಿ ಸಂಗೀತಬಲ್ಲವನೂ ಆಗಿದ್ದರೆ ಕಾರ್ಯಕ್ರಮ ಎಂಥ ಪೂರ್ಣತ್ವ ಪಡೆಯುತ್ತದೆ ಎನ್ನುವುದನ್ನು ವಿ.ಸೀ. ಅವರ ಅಂದಿನ ಪ್ರೊಡಕ್ಷನ್ ತಂತ್ರದಿಂದ ಕಂಡುಕೊಳ್ಳಬಹುದಾಗಿತ್ತು. ಭರತ

ಬಾಹುಬಲಿಗಳ ಕತೆ ಪ್ರಸಾರ ಮಾಡುವ ಮುನ್ನ ಪೀಠಿಕೆಯಾಗಿ ಪಂಪಕವಿಯ ಕಾವ್ಯದಿಂದ ಆಯ್ದುಕೊಂಡ ಸನ್ನಿವೇಶಗಳನ್ನು ವಿವರಿಸುವಾಗ ಸ್ಟುಡಿಯೋ ಆನರ್ಸ್ ತರಗತಿಯಾಗಿ ಪರಿವರ್ತನೆಗೊಳ್ಳುತ್ತಿತ್ತಂತೆ. ಇದು ವಿ.ಸೀ.ಯವರ ಪ್ರಸಾರಣ ಸಿದ್ಧತೆಯ ವೈಖರಿ.

ಕಂಡವರನ್ನು ಹತ್ತಿರ ತರುವ, ಹತ್ತಿರ ಬಂದವರನ್ನು ತನ್ನವರನ್ನಾಗಿ ಮಾಡುವ, ಪರಿಚಿತನನ್ನು ಗೆಳೆಯನನ್ನಾಗಿಯೂ ಗೆಳೆಯನನ್ನು ಸೋದರನನ್ನಾಗಿಯೂ ಭಾವಿಸುವ ಆತ್ಮೀಯ ಕಲೆ ವಿ.ಸೀ.ಯವರಿಗೆ ಕರತಲಾಮಲಕವಾಗಿತ್ತು ಎಂದು ಹೇಳಿದ ಗೌರೀಶ ಕಾಯ್ಕಿಣಿಯವರ ಮಾತು ಸತ್ಯದ ನುಡಿ, ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲದ್ದು.

ಹೊಸ ನಾಟಕ ಪ್ರಯೋಗಗಳು

ಪ್ರಸಾರ ತಂತ್ರವನ್ನು ಕರಗತ ಮಾಡಿಕೊಂಡಿದ್ದ ವಿ.ಸೀ. ನಾಟಕ ರಚನೆಯಲ್ಲಿ ಹೊಸ ಪ್ರಯೋಗಗಳನ್ನು ಅಳವಡಿಸುವುದರ ಕಡೆ ಗಮನಕೊಟ್ಟರು. ವಿ.ಸೀ. ಅವರ ಪರಮಮಿತ್ರರು ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳು. ಅವರೊಂದಿಗೆ ಸುತ್ತಾಡುತ್ತಿದ್ದ ಸಮಯದಲ್ಲಿ ಸ್ವಾರಸ್ಯಕರವಾದ ಅನೇಕ ಪುರಾಣ ಕಥೆಗಳ ಪ್ರಸ್ತಾಪ ಬರುತ್ತಿತ್ತಂತೆ. ಹೀಗೆ ಶಾಸ್ತ್ರಿಗಳು ಹೇಳಿದ್ದರಲ್ಲಿ ಮನಸ್ಸನ್ನು ಬಹುವಾಗಿ ಆಕರ್ಷಿಸಿದ ಕತೆಯೊಂದನ್ನು ಆಧರಿಸಿ 'ಶ್ರೀಶೈಲ ಶಿಖರ' ಎಂಬ ನಾಟಕವನ್ನು ವಿ.ಸೀ. ರಚಿಸಿದರು. ಕತೆ ಸಾಮಾನ್ಯವಾದದ್ದು. ಮುಗ್ಧಭಕ್ತಿಯ ಕಾರಣ ಜೀವನ ಸಿದ್ಧಿಯನ್ನು ಪಡೆದುಕೊಂಡ ಬೆಲೆವೆಣ್ಣೊಬ್ಬಳ ಕಥೆ. ಒಳದೃಶ್ಯಗಳು, ನಾಟಕದೊಳಗೆ ನಾಟಕ, ಹಿಂದಣ ಬೆಳಕು ನೋಟಗಳು (flash-back scenes) ಇವೆಲ್ಲವನ್ನೂ ಈ ನಾಟಕದಲ್ಲಿ ಅಳವಡಿಸಿದೆ. ಇಂಥ ನಾಟಕವನ್ನು ಪ್ರದರ್ಶಿಸುವುದಕ್ಕೆ ಬಹುಬಗೆಯ ರಂಗವ್ಯವಸ್ಥೆ ಬೇಕು. ರಂಗಮಂದಿರ ವಿಶಾಲವಾಗಿರಬೇಕು. ಪ್ರದರ್ಶನಕ್ಕೆ ಹೇರಳವಾದ ಹಣ ಜೊತೆಮಾಡಿಕೊಳ್ಳಬೇಕು. ಪ್ರದರ್ಶನ ತಂತ್ರಗಳು ಬೇಕು. ಇವನ್ನು ನಮ್ಮಲ್ಲಿ ಎಲ್ಲಿಂದ ತರುವುದು ? ಹೀಗಾಗಿ ನಾಟಕ, ಪ್ರಯೋಗ ಕಾಣದೆ ಹಿಂದೆಯೇ ಉಳಿಯಿತು. ಆಕಾಶವಾಣಿ ಬಿಟ್ಟ ಹಲವಾರು ವರ್ಷಗಳಾದ ಮೇಲೆ ಈ ನಾಟಕ ಪುಸ್ತಕ ರೂಪದಲ್ಲಿ ಪ್ರಕಟವಾಯಿತು.

ವಿಶಾಲವಾದ ನಾಟಕರಂಗದ ಮೇಲೆ, ಬೆಳಕುಗಳ ಆಟದ ವ್ಯತ್ಯಾಸ ಮಾಡುವ ಸಲಕರಣೆಗಳನ್ನು ಅಳವಡಿಸಿಕೊಂಡು ಈ ನಾಟಕವನ್ನು ರಂಗದ ಮೇಲೆ ಕಾಣಬೇಕೆಂಬ ಆಸೆ ಬಲವಾಗಿತ್ತು ವಿ.ಸೀ.ಯವರಿಗೆ. ಅವರ ಕಾಲದಲ್ಲಿ ಇದು ಸಾಧ್ಯವಾಗಲಿಲ್ಲ. ಮುಂದೆಂದಾದರೂ ಆದೀತೊ ಏನೊ. ಈ ನಡುವೆ ವಿ.ಸೀ.ಯವರಿದ್ದಾಗಲೆ ಈ ನಾಟಕ ಕಥೆ 'ಪಾಪ-ಪುಣ್ಯ' ಎಂಬ ಹೆಸರಿನ ಚಲನ ಚಿತ್ರವಾಗಿ ತೆರೆ ಕಂಡಿತ್ತು.

ಇದೇ ಸುಮಾರಿಗೆ ಸುಪ್ರಸಿದ್ಧ ನಾಟಕಕಾರರಾದ ಜಾರ್ಜ್ ಬರ್ನಾರ್ಡ್ ಷಾ ಅವರ ಎರಡು ಜನಪ್ರಿಯ ನಾಟಕಗಳನ್ನು ವಿ.ಸೀ. ಕನ್ನಡಕ್ಕೆ ಅನುವಾದ ಮಾಡಿದರು. ಇದೊಂದು ಮಹತ್ತರವಾದ ಸಾಧನೆ ಎಂದೇ ಹೇಳಬೇಕು. ''ಲೋಕದ ಬಾಳು ಹೆಚ್ಚು ಸತ್ಯನಿಷ್ಠವಾಗಿ, ನಗೆ ಸಂತೋಷಗಳಿಂದ ತುಂಬಬೇಕೆಂದು ೫೦-೬೦ ವರ್ಷ ಕಾಲ ಶ್ರಮಿಸಿದಾತ'' ಎಂದು ಷಾನನ್ನು ಮೆಚ್ಚಿಕೊಂಡಿದ್ದರು ವಿ.ಸೀ. ''ಷಾ ನಾಟಕದಲ್ಲಿ ಕಾಣಿಸುವ ಮನೋವಿಲಾಸದ ಜೊತೆಗೆ ಅಲ್ಲಿನ ಹಾಸ್ಯಗರ್ಭ ಅದ್ಭುತವಾದದ್ದು. ಅವರ ನಗೆಯ ಬಗೆ ಅವರಿಗೇ ವಿಶಿಷ್ಟ. ಆ ಬಗೆಯ ಹಾಸ್ಯ ಐರಿಷ್. ಇಂಗ್ಲಿಷಿನಲ್ಲಿ ವಾಗ್ಮಿಗಳಾಗಿ, ನಾಟಕಕಾರರಾಗಿ, ನಾಟಕ ಸಂಗೀತಗಳ ವಿಮರ್ಶಕರಾಗಿ, ಇಂಗ್ಲಿಷ್ ಸಾಹಿತ್ಯಕ್ಕೂ ವಿಮರ್ಶೆಗೂ ಮಾಡಿರುವ ಸೇವೆ ಅತಿಶಯವಾದ್ದು'' ಎಂದು ಷಾ ಬರವಣಿಗೆಯನ್ನು ಮೆಚ್ಚಿಕೊಂಡಿದ್ದಾರೆ. ತಾವು ಮೆಚ್ಚಿಕೊಂಡದ್ದನ್ನು ಇತರರಿಗೂ ಹಂಚಬೇಕೆಂಬ ಉತ್ಕಟವಾದ ಮನೋಧರ್ಮ ವಿ.ಸೀ.ಯವರದ್ದು. ಕೀರ್ತಿಶಾಲಿಯಾದ ಷಾ ಅವರ ಒಂದು ನಾಟಕವೂ ಕನ್ನಡದಲ್ಲಿಲ್ಲವಲ್ಲ, ಈ ಕೊರತೆಯನ್ನು ಪೂರೈಸಬೇಕು ಎಂದು ಅನುವಾದ ಕಾರ್ಯವನ್ನು ಕೈಗೊಂಡರು. ತಮ್ಮನ್ನು ತಾವೇ ಹಳಿದುಕೊಳ್ಳುವ ಸ್ವಭಾವದವರಾದ ವಿ.ಸೀ. ಇದನ್ನು 'ಅವಿವೇಕಿಯ ಸಾಹಸ' ಎಂದಿದ್ದಾರೆ.

''ಪಾಶ್ಚಾತ್ಯರು ಎಂಥೆಂಥ ವಿಷಯಗಳನ್ನು ಆರಿಸಿಕೊಳ್ಳುತ್ತಾರೆ ; ಸಂಭಾಷಣೆ ಎಷ್ಟು ಚುರುಕಾಗಿ ಅರ್ಥವತ್ತಾಗಿ, ಧೃತಿವಿಲಾಸವುಳ್ಳದ್ದಾಗಿ ನಡೆಯುತ್ತದೆ; ದೃಷ್ಟಿ ಸಿದ್ಧಿ ಯಾವ ಬಗೆಯವು'' ಎಂಬುದನ್ನು ಕನ್ನಡಿಗರಿಗೆ ಪರಿಚಯಿಸಬೇಕೆಂಬ ಘನ ಉದ್ದೇಶದಿಂದ ಷಾ ಅವರ ನಾಟಕಗಳ ಅನುವಾದ ಕಾರ್ಯವನ್ನು ವಿ.ಸೀ. ಕೈಗೊಂಡಂತೆ ಕಾಣುತ್ತದೆ.

''ಶಿಲ್ಪಿಯಾದ ಪಿಗ್ಮೇಲಿಯನ್ ತಾನು ನಿರ್ಮಿಸಿದ ಸ್ತ್ರೀಮೂರ್ತಿಯಲ್ಲಿ ಮೋಹಗೊಂಡು, ಅದಕ್ಕೆ ಜೀವದಾನ ಮಾಡಿಸಿಕೊಂಡು, ಆ ಕಲಾಸುಂದರಿಯನ್ನು ಮದುವೆಯಾದನೆಂಬುದು ಗ್ರೀಕ್ ಪುರಾಣದ ಒಂದು ಕಥೆ. ಇದನ್ನೆ ಷಾ ಆಧಾರವಾಗಿಟ್ಟುಕೊಂಡು ನಾಟಕ ರಚಿಸಿದ್ದು. ಆದರೆ ಷಾ ಅವರ ಪಿಗ್‌ಮೇಲಿಯನ್ ನಾಟಕದಲ್ಲಿ ದಂತದ ವಿಗ್ರಹದ ಪ್ರಸ್ತಾಪವಿಲ್ಲ. ಎಲಿಸಾ ಡೂಲಿಟ್ಲ್ ಮಾನವ ಹೆಣ್ಣು. ಅಂಥ ಚೆಲುವೆಯೇನಲ್ಲ. ಚೆಲುವೆಯ ಚೆಲುವಿನ ಆರಾಧನೆಯೂ ಇಲ್ಲಿ ಮುಖ್ಯವಲ್ಲ. ಸಾಮಾನ್ಯ ಯುವತಿಯೊಬ್ಬಳಲ್ಲಿ ನಾಟಕದ ಹಿಗ್ಗಿನ್ಸ್ ಸಂಸ್ಕಾರವನ್ನು ತುಂಬುತ್ತಾನೆ. ಅವನ ವೃತ್ತಿಯ ಉತ್ಸಾಹದ ಚಿತ್ರಣವಿದೆ. ಇದ್ದಿಲನ್ನು ವಜ್ರ ಮಾಡುತ್ತೇನೆಂಬಷ್ಟಿದೆ ಆ ವಿಶ್ವಾಸ. ಎಲುಬಿಲ್ಲದ ಮಾನವಿ ಎಂದುಕೊಂಡಿದ್ದದ್ದು ಮಾನವಂತ ಮಾನವಿ ಎಂದು ಕಂಡಾಗ ಅವನಿಗೆ ಪ್ರೀತಿಯುಂಟಾಗುತ್ತದೆ. ಅವನಿಗೆ ತಾನು ಕೈಹಿಡಿದ ಕೆಲಸದಲ್ಲಿ ಎಷ್ಟು ಶ್ರದ್ಧೆ, ಅಭಿಮಾನ, ತದೇಕ ಧ್ಯಾನ ಇದೆ ಎನ್ನುವುದನ್ನು ಷಾ ಬಹು ಸಮರ್ಪಕವಾಗಿ ಎತ್ತಿ ತೋರಿಸಿದ್ದಾರೆ.'' ಸ್ವಯಂ ಬೋಧಕರಾದ ವಿ.ಸೀ.ಯವರಿಗೆ ಹಿಗ್ಗಿನ್ಸ್ ಅನುಸರಿಸಿದ ಶಿಕ್ಷಣಕ್ರಮ, ಕಲಿಯು

ಆಕಾಶವಾಣಿ, ಬೆಂಗಳೂರು ಏರ್ಪಡಿಸಿದ್ದ ಸಾಹಿತ್ಯಗೋಷ್ಠಿಗಾಗಿ ಬಂದಿದ್ದ ಕನ್ನಡ ಸಾಹಿತ್ಯದ ಕೆನೆ – ಪು.ತಿ.ನ., ಬಿ.ಎಂ. ಇದಿನಬ್ಬ, ವಿ.ಸೀ., ರಾಜರತ್ನಂ, ರಾ.ಶಿ., ಬೀಚಿ, ಮಾಸ್ತಿ, ಸಿದ್ಧಯ್ಯ ಪುರಾಣಿಕ್, ಬೇಂದ್ರೆ, ಕೃಷ್ಣಮೂರ್ತಿ ಪುರಾಣಿಕ, ಬೆಟಗೇರಿ.

ವುದರಲ್ಲಿ ಎಲಿಸಾ ತೋರಿಸಿದ ಉತ್ಸಾಹ, ಎರಡೂ ಅತಿಶಯವಾಗಿ ಕಂಡಿರಬೇಕು. ಉತ್ತಮ ದರ್ಜೆಯ ಶಿಕ್ಷಣ ಎಂಥ ಅಮೃತ ಫಲವನ್ನು ಕೊಡಬಹುದು ಎನ್ನುವುದರ ಅರಿವುಂಟಾಗಿರಬೇಕು. ಷಾನ ಈ ನಾಟಕವನ್ನು ವಿ.ಸೀ. ಯವರು ಅನುವಾದಕ್ಕೆತ್ತಿ ಕೊಳ್ಳಲು ಇದೇ ಕಾರಣವಿರಬಹುದು.

'ವಿಷಯದಲ್ಲಿ, ರೀತಿಯಲ್ಲಿ, ತಂತ್ರದಲ್ಲಿ, ಹಾಸ್ಯದಲ್ಲಿ ನಮ್ಮಲ್ಲಿ ಕಾಣದ ಒಂದು ಪ್ರಕಾರ ಈ ನಾಟಕ' ಎನ್ನುತ್ತಾರೆ ವಿ.ಸೀ. ಈ ಎಲ್ಲ ಲಕ್ಷಣಗಳನ್ನೂ ತಮ್ಮ ಅನುವಾದದಲ್ಲಿ ಯಶಸ್ವಿಯಾಗಿ ಸೆರೆಹಿಡಿದಿದ್ದಾರೆ ಎಂದು ಹೇಳಬಹುದು. ಕನ್ನಡವನ್ನು ಶಕ್ತಿಯುತವಾಗಿ ಬಳಸಿದ್ದಾರೆ.

ಅನುವಾದಕ್ಕೆ ಆರಿಸಿಕೊಂಡ ಷಾ ಅವರ ಎರಡನೆ ನಾಟಕ 'ಮೇಜರ್ ಬಾರ್ಬರ'. ಈ ನಾಟಕದಲ್ಲಿ Salvation Army – ಮೋಕ್ಷಚಮುವಿನ ಚಿತ್ರ ದೊರೆಯುತ್ತದೆ. ಕುಡುಕರ, ಪತಿತರ, ದುಷ್ಟರ ಉದ್ಧಾರಕ್ಕಾಗಿ ಎಷ್ಟು ಕಷ್ಟ ಪಡಬೇಕು, ಆ ಕಾರ್ಯಕ್ಕೆ ಎಷ್ಟೊಂದು ಹಣ ಬೇಕು, ಅದನ್ನು ಸಂಪಾದಿಸಲು ಎಷ್ಟೆಲ್ಲ ಒದ್ದಾಡಬೇಕು ಎನ್ನುವುದರ ಚಿತ್ರ ಇಲ್ಲಿ ದೊರೆಯುತ್ತದೆ. ಅಷ್ಟೇ ಅಲ್ಲ, ಗಂಜಿ ರೊಟ್ಟಿಗಾಗಿ ಎಷ್ಟು ಸುಳ್ಳು ಠಕ್ಕು ಆತ್ಮವಂಚನೆ ನಡೆಯುತ್ತದೆ. ಆ ಕಾರ್ಯದ ಪರಿಣಾಮವೂ ಎಷ್ಟು ಕ್ಷಣಿಕ, ಮಾನವಸ್ವಭಾವ ಸಂಸ್ಕಾರ ಎಷ್ಟು ಕಷ್ಟದ, ಸಾವಕಾಶದ ಕೆಲಸ ಎನ್ನುವುದರ ಅರಿವಾಗುತ್ತದೆ.

ಅರ್ಥಶಾಸ್ತ್ರಜ್ಞರಾದ ವಿ.ಸೀ. ಯವರಿಗೆ ಮಹರ್ಷಿಪ್ರಾಯನಾದ ಮಾರ್ಷಲ್ ತನ್ನ *Principles* ನ ಮೊದಲ ಪ್ರಕರಣದಲ್ಲಿ ಹೇಳಿದ ''May we not outgrow the belief that poverty is necessary? ('ಬಡತನ ಇರಲೇಬೇಕು ಎನ್ನುವ ಭಾವನೆ ಬಿಟ್ಟು ನಾವು ಹೊರಬರಲಾರೆವೆ?') ಎಂಬ ಪ್ರಶ್ನೆ ಅತಿ ಗಂಭೀರದ್ದಾಗಿ ತೋರುತ್ತದೆ.

> ''ಬಡತನದಷ್ಟು ದೊಡ್ಡ ಕೇಡು ಲೋಕದಲ್ಲಿ ಇನ್ನಾವುದೂ ಇಲ್ಲ. ಅದರಿಂದ ನಡೆಯದ ಅನ್ಯಾಯವಿಲ್ಲ, ಅದರಿಂದ ಸಮಾಜಕ್ಕೆ ಆಗುವಷ್ಟು ಹಾನಿ ಬೇರೊಂದರಿಂದಿಲ್ಲ. ಸಮಾಜ ಮಾಡುವ ಮಹಾಪರಾಧ ಎಂದರೆ ಬಡತನವನ್ನು ಉಳಿಸಿಕೊಂಡಿರುವುದು; ಬಡವರನ್ನು ದುಡಿಸುವುದು, ಬಡತನದ ಗುಣಗಳನ್ನು ಶ್ಲಾಘಿಸುವುದು, ಅದಕ್ಕೆ ತೃಪ್ತಿಯನ್ನು ತ್ಯಾಗವನ್ನು ಬೋಧಿಸುವುದು, ಅದೇನೊ ಮಹದ್ಗುಣವೆಂಬಂತೆ ಹೊಗಳುವುದು, ಇದರಷ್ಟು ಅಧರ್ಮ ಬೇರೊಂದಿಲ್ಲ. ಇದನ್ನು ನಾಶಮಾಡಿದಲ್ಲದೆ ಸಮಾಜಕ್ಕೂ ಲೋಕಜೀವನಕ್ಕೂ ಗತಿಯಿಲ್ಲ.
>
> ಬಡತನವನ್ನು ಮೊದಲು ನಿವಾರಿಸಿ. ಜನಕ್ಕೆ ಕೆಲಸ ಒದಗಿಸಿ; ಸಂಪಾದನೆ ತಂದುಕೊಡಿ; ಹೊಟ್ಟೆಗೆ ಬಟ್ಟೆಗೆ, ವಿದ್ಯೆಗೆ, ರೋಗಚಿಕಿತ್ಸೆಗೆ, ಇರುವ ವಾಸಕಲ್ಪನೆಗೆ, ವಿನೋದ ವಿಹಾರಕ್ಕೆ, ಜೀವನದ ನೆಮ್ಮದಿಗೆ, ಅವಕಾಶ ಮಾಡಿಕೊಡಿ. ಮನೆಕಟ್ಟಿಕೊಟ್ಟು ಚರಂಡಿಯ ವ್ಯವಸ್ಥೆ ಮಾಡಿಕೊಡಿ,

ಬದುಕಿನಲ್ಲಿ ಅಭಿಮಾನ ತಂದುಕೊಡಿ. ಸ್ವಾಧೀನತೆ ತಂದುಕೊಡಿ. ಸರ್ವ ಪ್ರಕಾರದ ಆಲೋಚನೆಯ ಸ್ವಾತಂತ್ರ್ಯ ಬರುವಂತೆ ಮಾಡಿಕೊಡಿ. ಹಸಿದ ಹೊಟ್ಟೆಯ ಮೇಲೆ ಧರ್ಮ ಹೊರಲೂ, ಪ್ರಸಾರ ಮಾಡಲೂ ಹೋಗಬೇಡಿ ; ಲೌಕಿಕ ಸುಖಕ್ಕೆ ಆಧಾರ ಮಾಡಿಕೊಟ್ಟು, ಧರ್ಮಬುದ್ಧಿ ಬರುವಂತೆ ಮಾಡಿದರೆ ತಾನೆ ಧರ್ಮ, ಭಕ್ತಿ, ತ್ಯಾಗಗಳಿಗೆ ಬೆಲೆ.''

ಈ ಮುಂತಾದ ಪ್ರಗತಿಪರ ಭಾವನೆಗಳನ್ನು ಮುಖ್ಯ ಪಾತ್ರಗಳ ಮೂಲಕ ನುಡಿಸಿದ್ದಾರೆ ಷಾ. ನಾಟಕಗಳ ಉದ್ದೇಶ ಬರಿಯ ಮನರಂಜನೆಯಲ್ಲ; ಅವು ಸಾಧಿಸಬೇಕಾದದ್ದು ಸಮಾಜದಲ್ಲಿ ಸುಧಾರಣೆಯನ್ನು . 'ಕಲೆಗಾಗಿ ಕಲೆ ' ಎನ್ನುವ ತತ್ತ್ವವನ್ನು ಷಾ ಎಂದೂ ಎತ್ತಿ ಹಿಡಿದವರಲ್ಲ.

ಪ್ರಾಕೃತವಾದ ಜೀವವೊಂದನ್ನು ಆರಿಸಿಕೊಂಡು ಶಿಕ್ಷಣವೇತ್ತನೂ ತಜ್ಞನೂ ಆದ ಮೇಧಾವಿ ಹೇಗೆ ಅದನ್ನು ಸಂಸ್ಕಾರಗೊಳಿಸಬಲ್ಲ ಎನ್ನುವುದನ್ನು ಸಿದ್ಧಪಡಿಸಿ ತೋರಿಸುತ್ತದೆ ಪಿಗ್‌ಮೇಲಿಯನ್ ನಾಟಕ. ಮೇಜರ್ ಬಾರ್ಬರದಲ್ಲಿ ಕಾಣಬರುವ ಚಿತ್ರ ಬೇರೆ ಬಗೆಯದು. ಜೀವನವನ್ನು ಬಡತನದಿಂದ, ಕೊಳೆಯಿಂದ, ಪಾಪಕೃತ್ಯಗಳಿಂದ, ವ್ಯಸನಗಳಿಂದ, ಮರ್ಯಾದಸ್ಥ ಜೀವನಕ್ಕೂ ಧರ್ಮ ದೃಷ್ಟಿಗೂ ಹೇಗೆ ತಿರುಗಿಸುವುದು ಸಾಧ್ಯ ಎನ್ನುವುದನ್ನು ನಾಟಕ ತೋರಿಸಿಕೊಡಲು ಯತ್ನಿಸುತ್ತದೆ. ಬಡತನ ಕೇಡು, ತಪ್ಪು, ಅಸಹ್ಯ . ಅದನ್ನು ದ್ವೇಷಿಸಬೇಕು; ಸರ್ವ ಪ್ರಯತ್ನವನ್ನೂ ಮಾಡಿ ನಿರ್ಮೂಲಗೊಳಿಸಬೇಕು; ಇದು ನಾಟಕದ ಉದ್ದೇಶ.

ಅನ್ಯಾಯ ಕಂಡು ಬಾಗದ ಷಾ ಅವರ ಮನೋವೃತ್ತಿ, ಅದನ್ನು ನಾಟಕ ಮಾಧ್ಯಮದ ಮೂಲಕ ನಿರ್ಮೂಲಮಾಡಲು ಅವರು ಪಟ್ಟ ಪ್ರಯತ್ನ, ಹಾಸ್ಯದ ಮೊನೆಯಿಂದ ಜನರ ಮನಸ್ಸನ್ನು ಚುಚ್ಚಿ ಅವರ ಅವಿವೇಕವನ್ನು ಎತ್ತಿತೋರಿಸುವ ಅವರ ಕಲೆ, ಯಾವುದನ್ನು ಹೇಳುವುದಕ್ಕೂ ಹಿಂಜರಿಯದ ಭಯಪಡದ ಅವರ ಧೈರ್ಯ, ಇವು ವಿ.ಸೀ.ಯವರ ಅನುವಾದಗಳ ಮೂಲಕ ಕನ್ನಡಿಗರಿಗೂ ಪರಿಚಯವಾಗುತ್ತವೆ.

ಇಂದಿನ ಸಮಾಜದಲ್ಲಿ ಎರಡು ಮುಖ್ಯ ವರ್ಗಗಳನ್ನು ಕಾಣುತ್ತಿದ್ದೇವೆ. ಒಂದು ಕಡೆ ಹಸಿವಿನಿಂದ ಪರಿತಪಿಸುತ್ತಿದ್ದರೂ ಊಟದ ಮುಖ ಕಾಣದ ಕೂಲಿಗಾರ ವರ್ಗ. ಇನ್ನೊಂದು ಕಡೆ ಭಕ್ಷ್ಯಭೋಜ್ಯಗಳ ರಾಶಿ ಮುಂದಿದ್ದರೂ ಹಸಿವಿಲ್ಲದೆ ತಿನ್ನಲಾಗದ ಶ್ರೀಮಂತ ವರ್ಗ. ಈ ವರ್ಗಗಳನ್ನು ಸೃಷ್ಟಿಸಿ, ನಡೆಸಿಕೊಂಡು ಬರುತ್ತಿರುವ ಸಮಾಜದ ಆರ್ಥಿಕ ವ್ಯವಸ್ಥೆ ಸರಿ ಎನ್ನಲಾದೀತೆ?

ಪರಮ ಸಾತ್ವಿಕ, ವಿಶ್ವ ವಿಖ್ಯಾತ ವಿಜ್ಞಾನಿ ಐನ್‌ಸ್ಟೈನ್ ಷಾನನ್ನು ಮೆಚ್ಚಿಕೊಂಡು ಆಡಿರುವ ಮಾತುಗಳಿವು :

"Only to a tiny minority is it given to fascinate their generation by subtle humour and grace and to hold the mirror up to it by the impersonal agency of art. Today I salute with

sincere emotion that supreme master of this method - who has delighted - and educated us all."

(ಅತಿ ನಯವಾದ ಹಾಸ್ಯದಿಂದ, ಅತೀವ ಸೊಬಗಿನಿಂದ ತನ್ನ ಸಮಕಾಲೀನರ ಮನಸ್ಸನ್ನು ಮೋಹಿಸಬಲ್ಲ, ಕಲೆಯ ಮಾಧ್ಯಮದ ಮೂಲಕ ಅವರ ಮುಖಕ್ಕೆ ಕನ್ನಡಿ ಹಿಡಿದು ಕೂರಿಸಬಲ್ಲ ಶಕ್ತಿ ಎಲ್ಲೋ ಬಹು ಸ್ವಲ್ಪ ಮಂದಿಗೆ ಮಾತ್ರ ದೊರೆತಿರುತ್ತದೆ. ಈ ದಿನ, ಅಂಥ ಮಾಧ್ಯಮವನ್ನು ಬಳಸಿ ನಮ್ಮೆಲ್ಲರನ್ನು ಮುದಗೊಳಿಸಿದ, ಬುದ್ಧಿಕಲಿಸಿದ ಧೀಮಂತ ವ್ಯಕ್ತಿಗೆ ಮನಃ ಪೂರ್ವಕವಾಗಿ ನಮಸ್ಕರಿಸುತ್ತೇನೆ.)

ದೊಡ್ಡವರಲ್ಲಿ ದೊಡ್ಡತನವನ್ನು ಕಾಣುವುದಕ್ಕೆ ತಾನೂ ದೊಡ್ಡವನಾದ ವ್ಯಕ್ತಿಯೇ ಆಗಿರಬೇಕಲ್ಲವೆ ?

ಷಾ ಅವರ ಕ್ರಾಂತಿಕಾರಕ ಭಾವನೆಗಳನ್ನೂ, ಆತನ ಬರವಣಿಗೆಯ ಸೊಗಸನ್ನೂ ಕನ್ನಡಿಗರಿಗೂ ಪರಿಚಯ ಮಾಡಿಸಿಕೊಡುವುದರಲ್ಲಿ ವಿ.ಸೀ. ಯಶಸ್ವಿಯಾಗಿದ್ದಾರೆ ಎಂದೇ ಹೇಳಬೇಕು. ರಂಗದ ಮೇಲೆ ಪ್ರದರ್ಶನವಾದಾಗ ಮಾತ್ರ ಬಯಸಿದ ಫಲ ಸಿದ್ಧಿಸೀತು. ಅಂಥ ರಂಗಪರಿಕರಗಳು, ಪ್ರತಿಭಾವಂತ ನಟವರ್ಗ, ಒಳ್ಳೆಯದನ್ನು ಕಂಡು ಮೆಚ್ಚುವ ಪ್ರೇಕ್ಷಕರು ಎಂದಿನವರೆಗೆ ನಮ್ಮಲ್ಲಿ ತಲೆದೋರುವುದಿಲ್ಲವೋ ಅಲ್ಲಿಯವರೆಗೆ ಈ ನಾಟಕಗಳು ಯಶಸ್ವಿಯಾಗಲಾರವು. ಓದಿಯಾದರೂ ನಾಟಕದಲ್ಲಿನ ಸ್ವಾರಸ್ಯವನ್ನು ಗ್ರಹಿಸಬೇಕು. ನಮ್ಮ ದುರದೃಷ್ಟಕ್ಕೆ ಓದುವವರೂ ಕಡಿಮೆಯಾಗಿದ್ದಾರೆ. ಹೀಗಾಗಿ ನಮ್ಮ ಜನಜೀವನದ ಮೇಲೆ ಹೆಚ್ಚಿನ ಪ್ರಭಾವ ಬೀರಬೇಕಾದ ಈ ನಾಟಕಗಳು ಯಾರ ಕಣ್ಣಿಗೂ ಬೀಳದೆ ಅಜ್ಞಾತವಾಗಿ ಉಳಿದುಬಿಟ್ಟಿವೆ. ಇಂಥ ಬರವಣಿಗೆಯನ್ನು ಓದಲು, ಮನಸ್ಸನ್ನು ವಿಶಾಲಗೊಳಿಸಲು, ಎಂದಿನವರೆಗೆ ಜೀವನದಲ್ಲಿನ ಅನೇಕ ಅವಿವೇಕಗಳನ್ನು ಪರಿಚಯಿಸಿಕೊಳ್ಳಲು ಹಿಂದೆಗೆಯುತ್ತೇವೊ ಅಲ್ಲಿಯವರೆಗೆ ನಾವು ಪ್ರಗತಿಪಥದಲ್ಲಿ ಮುಂದುವರಿಯಲಾರೆವು ಎನ್ನುವುದಂತೂ ಸ್ಪಷ್ಟ. ಮುಂದೆಯಾದರೂ ಈ ನಾಟಕಗಳು ಜನರ ಮನಸ್ಸನ್ನು ಆಕರ್ಷಿಸಿಯಾವು ಎಂಬ ಆಶಯವನ್ನು ಇಟ್ಟುಕೊಳ್ಳಬಹುದು.

ಸಾರ್ಥಕ ಜೀವನವೇನೆನ್ನುವುದನ್ನು ವಿವರಿಸುತ್ತ ಷಾ ಹೇಳುತ್ತಾರೆ :

"This is the true joy in life, the being used for a purpose recognised by yourself as a mighty one, the being thoroughly worn out before you are thrown out on the scrap heap, the being a force of nature, instead of a feverish selfish little clod of ailments and grievances complaining that the world will not devote itself to making you happy."

(ಮಹತ್ತ್ವದ್ದೆಂದು ನೀವೇ ಎಣಿಸಿ ಕೈಗೊಂಡ ವ್ರತಕ್ಕಾಗಿ ನಿಮ್ಮನ್ನು ವಿನಿಯೋಗಿಸಿಕೊಳ್ಳುವುದು; ತಿಪ್ಪೆಯ ಮೇಲೆ ನಿಮ್ಮನ್ನು ಎಸೆಯುವ ಮುಂಚೆ

ಪೂರ್ತಿಯಾಗಿ ಸವೆದು, ಹಿಂಡಿ ಹಿಪ್ಪೆಯಾಗುವುದು; ಲೋಕವು ನಿಮ್ಮ ಸೌಖ್ಯಕ್ಕಾಗಿ ತನ್ನನ್ನು ಮೀಸಲುಮಾಡಿಕೊಳ್ಳುವುದಿಲ್ಲವಲ್ಲ ಎಂದು ಮೂದಲಿಸುತ್ತ ರುಜೆ ಆಕ್ಷೇಪಗಳಿಂದ ಕೂಡಿದ ಜ್ವರಗ್ರಸ್ತ ಸ್ವಾರ್ಥ ಮೃತ್ಪಿಂಡಿಕೆಯಾಗುವುದರ ಬದಲಾಗಿ ಪ್ರಕೃತಿಯ ಒಂದು ಸಾರ ಶಕ್ತಿಯಾಗುವುದು. ನಿಜವಾದ ಜೀವನದ ಸಂತೋಷ ಇದು.)

ಮನಸ್ಸನ್ನು ಚೋದಿಸುವ ಈ ಬಗೆಯ ಸಾಹಿತ್ಯ ಇಂದು ನಮಗೆ ಅಗತ್ಯವಾಗಿ ಬೇಕು. ಈ ಅಗತ್ಯವನ್ನು ಪೂರೈಸಲು ಪಿ.ಸೀ. ಕೈಕೊಂಡ ಈ ಅನುವಾದ ಕಾರ್ಯ ನಿಜಕ್ಕೂ ಸ್ತುತ್ಯವಾದುದು. ಈಗಲ್ಲದಿದ್ದರೂ ಮುಂದೆ ಒಂದು ದಿನ ಬಯಸಿದ ಫಲ ಕೊಟ್ಟೀತು ಎಂಬ ಭರವಸೆ ತಾಳಬಹುದು. ಆಕಾಶವಾಣಿಯಲ್ಲಿ ದುಡಿದ ಮೂರು ವರ್ಷಗಳ ಅವಧಿಯಲ್ಲಿ ಪಿ.ಸೀ.ಯವರ ಲೇಖನಿಯಿಂದ ಇಂಥ ಅಮೂಲ್ಯ ಗ್ರಂಥಗಳು ಹೊರಬಿದ್ದವಲ್ಲ ಎಂದು ನಾವು ಸಂತೋಷಪಟ್ಟುಕೊಳ್ಳಬೇಕು.

ಹೊನ್ನಾವರದಲ್ಲಿ

ಆಕಾಶವಾಣಿಯಲ್ಲಿನ ಹೊಣೆಗಾರಿಕೆಯಿಂದ ಬಿಡುಗಡೆ ಹೊಂದುವ ಕಾಲಕ್ಕೆ ವಿ.ಸೀ.ಯವರಿಗೆ ಅರುವತ್ತು ವರ್ಷ ಸಂದಿತ್ತು. ಮಾನವಜೀವನದಲ್ಲಿ ಅರುವತ್ತರ ಪ್ರಾಯ ಮುಖ್ಯವಾದೊಂದು ಘಟ್ಟ. ಜೀವದ ಜಂಜಡಗಳೆಲ್ಲ ಕಳೆದು ಮನಸ್ಸು ಆಗ ಒಂದು ಸಮಾಧಾನ ಸ್ಥಿತಿಯನ್ನು ಮುಟ್ಟಿರುತ್ತದೆ. ವಿ.ಸೀ. ಕಾಲ ಕಳೆದುಹೋದುದನ್ನು ಅಷ್ಟಾಗಿ ಗಮನಿಸಲಿಲ್ಲ ; ತಮ್ಮ ಅಧ್ಯಯನದ ದಿನ ಚರಿಯ ಕ್ರಮವನ್ನು ಒಂದಿಷ್ಟೂ ಬದಲಿಸದೆ ಎಂದಿನಂತೆಯೇ ಮುಂದುವರಿ ಸುತ್ತ ಹೋದರು.

೧೯೬೪ ರ ಸುಮಾರಿಗೆ ಪಡುವಣ ಕಡಲತೀರದ ಹೊನ್ನಾವರದಲ್ಲಿ ಕಲೆ ಮತ್ತು ವಿಜ್ಞಾನ ಕಾಲೆಜೊಂದನ್ನು ಸ್ಥಾಪಿಸಲು 'ಮಲೆನಾಡು ಪ್ರೋಗ್ರೆಸಿವ್ ಎಜುಕೇಷನ್ ಸಂಸ್ಥೆ'ಯವರು ಮುಂದೆಬಂದಿದ್ದರು. ಅವರ ದೃಷ್ಟಿ ಅದು ಹೇಗೊ ವಿ.ಸೀ.ಯವರ ಕಡೆಗೆ ಬಿದ್ದಿತು. ಹೊಸದಾಗಿ ಹುಟ್ಟಿಕೊಂಡ ಕಾಲೆಜಿನ ಪ್ರಿನ್ಸಿಪಾಲರಾಗಿ ಬಂದು ಕಾಲೆಜನ್ನು ಮುಂದೆ ತರಬೇಕೆಂದು ಸಂಸ್ಥೆಯ ವ್ಯವ ಸ್ಥಾಪಕರು ವಿ.ಸೀ.ಯವರನ್ನು ಬಹುವಾಗಿ ಕೇಳಿಕೊಂಡರು. ಅರವತ್ತೈದು ವರ್ಷ ದಾಟಿದ್ದರೂ, ಮೊದಲಿನ ಹುಮ್ಮಸ್ಸು ಇರದೆ ಹೋಗಿದ್ದರೂ, ಕಡಲ ಮೇಲಿನ ಒಲವು, ಈ ಹೊಸ ಜವಾಬುದಾರಿಯನ್ನು ವಹಿಸಿಕೊಳ್ಳಲು ಅವರನ್ನು ಪ್ರೇರೇಪಿಸಿತು. ದಿನವೂ ಕಡಲಿನ ಸಂಪರ್ಕ ದೊರೆಯುವುದೆಂಬ ಮಹದಾಸೆ ಯಿಂದ, ಪ್ರಿನ್ಸಿ ಪಾಲರ ಕೆಲಸವನ್ನು ವಿ.ಸೀ. ಒಪ್ಪಿಕೊಂಡರು.

ಹೊನ್ನಾವರ ನಮ್ಮ ಕಡಲ ತೀರದ ಅತಿ ಸುಂದರವಾದ ತಾಣ. ಮೂಡಲಿಗೆ ತಿರುಗಿದರೆ ಗೋಡೆಯಂತೆದ್ದಿರುವ ಕಡುನೀಲಿ ಬಣ್ಣದ ಸಹ್ಯಾದ್ರಿ ಪರ್ವತಶ್ರೇಣಿ. ಸದಾಕಾಲವೂ ಹಸಿರು ವನರಾಜಿಯಿಂದ ಶೋಭಿಸುತ್ತಿರುತ್ತದೆ. ಊರ ಸುತ್ತ ಅಲ್ಲಲ್ಲಿ ಕೆಂಪುಮಣ್ಣಿನ ಜಂಬಿಟ್ಟಿಗೆ (Laterite) ಯಿಂದ ಆವೃತವಾದ ಪದವುಗಳು. ಪಡುವಣ ದಿಕ್ಕಿಗೆ ಕಣ್ಣು ಹಾಯಿಸಿದಷ್ಟು ದೂರವೂ ಭೋರ್ಗರೆಯುತ್ತ ಕಂಗೊಳಿಸುತ್ತಿರುವ ನೀಲಿಯ ಕಡಲು. ಊರಿನ ಬುಡದಲ್ಲಿ ವಿಶಾಲ ಪಾತ್ರದಲ್ಲಿ ಹರಿಯುತ್ತಿರುವ ಶರಾವತಿ ನದಿ. ಈ ನಿಸರ್ಗ ಸೌಂದರ್ಯದ ನಡುವೆ ವಿ.ಸೀ. ನಾಲ್ಕು ವರ್ಷಗಳನ್ನು ಸಂತೋಷದಿಂದ ಕಳೆದರು. ನೂರಾರು ಮಂದಿ ವಿದ್ಯಾರ್ಥಿಗಳ, ಹಲವಾರು ಅಧ್ಯಾಪಕರುಗಳ ಒಲವನ್ನು ದೊರಕಿಸಿಕೊಂಡರು. ವಿ.ಸೀ.ಯವರಿಗೆ ಎಪ್ಪತ್ತು ತುಂಬಿದ ಶುಭಸಂದರ್ಭದಲ್ಲಿ ಹೊನ್ನಾವರ ಕಾಲೆಜಿನ ವಿದ್ಯಾರ್ಥಿ ಮತ್ತು ಅಧ್ಯಾಪಕ

ವೃಂದದವರು ಲೇಖನ ಸಂಗ್ರಹವೊಂದನ್ನು ಕಾಣಿಕೆಯಾಗಿ ಅರ್ಪಿಸಿದರು. ಭಕ್ತಿಶ್ರದ್ಧೆಗಳಿಂದ ಅರ್ಪಿಸಿದ ಈ ಕಾಣಿಕೆ ಆ ಊರ ಜನರು ವಿ.ಸೀ.ಯವರಲ್ಲಿ ಎಷ್ಟು ವಿಶ್ವಾಸ ಬೆಳಸಿಕೊಂಡಿದ್ದರು ಎನ್ನುವುದನ್ನು ತೋರಿಸುತ್ತದೆ. ಈ ಮೆಚ್ಚುಗೆಗೆ ಅವರ 'ಪ್ರವಚನ ಪಟುತ್ವ, ಶಿಷ್ಯಾಭಿಮಾನ, ಆಚರಣೀಯ ಆಚಾರವನ್ನುಳ್ಳ ಆಚಾರ್ಯತನ' ಕಾರಣವಾಗಿದ್ದವು.

ಖಾಸಗಿ ಕಾಲೆಜಿನ ಕಷ್ಟ ಕಾರ್ಪಣ್ಯ

ಹೊನ್ನಾವರದ ಕಾಲೆಜ್ ಖಾಸಗಿ ಕಾಲೆಜು. ಅದರ ಆರ್ಥಿಕ ಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ತಿಂಗಳ ಮೊದಲನೆಯ ತಾರೀಖು ಸಂಬಳ ಬಟವಾಡೆಯಾಗುತ್ತಿರಲಿಲ್ಲ. ಇದರಿಂದ ಉಪಾಧ್ಯಾಯರಿಗೆ ಕಷ್ಟವಾಗುತ್ತಿತ್ತು. ವಿ.ಸೀ.ಯವರ ಭರವಸೆಯ ಮೇಲೆ ಬೆಂಗಳೂರಿನಲ್ಲಿದ್ದ ಕೆಲಸವನ್ನು ಬಿಟ್ಟು ಬಂದು ಹೊನ್ನಾವರ ಕಾಲೆಜನ್ನು ಸೇರಿದ ಉಪಾಧ್ಯಾಯರೊಬ್ಬರು ಹೀಗೆ ತೊಂದರೆಗೊಳಗಾಗಿದ್ದುದನ್ನು ಕಂಡು ವಿ.ಸೀ. 'ಬೆಂಗಳೂರಂಥ ಊರಲ್ಲಿದ್ದು ಪ್ರತಿ ತಿಂಗಳು ಒಂದನೇ ತಾರೀಖಿಗೇ ಸಂಬಳ ತೆಗೆದುಕೊಳ್ಳುತ್ತಿದ್ದ ನಿನ್ನನ್ನು ಇಲ್ಲಿಗೆ ತಂದು ಹಾಕಿ ಕಷ್ಟಕ್ಕೆ ಸಿಕ್ಕಿಸಿದೆ ಎಂದುಕೊಳ್ಳಬೇಡ. ನಿನಗೆ ತುಂಬ ತೊಂದರೆ ಇರಬೇಕು. ಇಲ್ಲಿ ಸಂಬಳ ಯಾವಾಗಾಗುತ್ತೋ ತಿಳಿಯದು. ಪೇಪರಿಗೊಂದು ಆರ್ಟಿಕಲ್ ಬರೆದಿದ್ದೆ. ಅವರು ಒಂದು ನೂರು ರೂಪಾಯಿ ಕಳಿಸಿದ್ದಾರೆ. ನಿನಗೆ ಐವತ್ತು ಕೊಡುತ್ತೀನಿ. ಆಗಬಹುದಾ?' ಎಂದರಂತೆ. *(ಖಜಾನೆ ಕೃಷ್ಣಮೂರ್ತಿ, ೧೯೬೯, ಪು.೨೪)*. ಇಂಥ ಧಾರಾಳತನ ವಿ.ಸೀ. ಅವರನ್ನು ಎಲ್ಲರಿಗೂ ಪ್ರಿಯರನ್ನಾಗಿ ಮಾಡಿಸಿತ್ತು. ಎಷ್ಟೋ ವೇಳೆ ಈ ಮಿತಿಮೀರಿದ ಧಾರಾಳತನವೇ ಅವರನ್ನು ಕಷ್ಟನಷ್ಟಗಳಿಗೂ ಈಡುಮಾಡುತ್ತಿತ್ತು. 'He is generous to the extent of ruining himself' ಎಂದು ಇತರರು ಆಡಿಕೊಳ್ಳುತ್ತಿದ್ದದ್ದುಂಟು.

ಉದಾರದೃಷ್ಟಿ

ಈ ಧಾರಾಳತನದ ಮತ್ತೊಂದು ವೈಖರಿಯನ್ನು ಇಲ್ಲಿ ಹೇಳಬೇಕು. ಹೊನ್ನಾವರದಲ್ಲಿ ಅವರ ಮನೆಯಲ್ಲಿ ಕೆಲಸಮಾಡುತ್ತಿದ್ದಾಕೆಗೆ ಅವರು ವರ್ಷಕ್ಕೊಮ್ಮೆ ಕೈತುಂಬ ಹಣ, ಸೀರೆ ಕುಪ್ಪಸಗಳನ್ನು ತಮ್ಮ ಮನೆಯವರ ಕಡೆಯಿಂದ ಕೊಡಿಸುತ್ತಿದ್ದರಂತೆ. ಅದನ್ನು ಕಂಡವರೊಬ್ಬರು ಇದೇಕೆ ಹೀಗೆ ಮಾಡುತ್ತಿದ್ದೀರಿ ಎಂದು ಕೇಳಿದಾಗ ಅವರು 'ಅಪ್ಪಾ! ನೀವು ತಿಂಗಳಿಗೆ ಎಷ್ಟು ಸಿ.ಎಲ್. ತೆಗೆದುಕೊಳ್ಳುತ್ತೀರಿ, ಪಿ.ಎಲ್. ಎಷ್ಟು, ಇ.ಎಲ್. ಎಷ್ಟು? ..... ಇತರರಿಗೇನಾದರೂ ಕೊಡುತ್ತೀರಾ? ಕೊನೆಗೆ ಒಂದು ಭಾನುವಾರವಾದರೂ ರಜ ಕೊಡುತ್ತೀರಾ? ..... ಅಷ್ಟೆಲ್ಲ ಲೆಕ್ಕ ಹಾಕಿದರೆ ಈ ಹಣ, ಈ ಸೀರೆ, ಈ ಕುಪ್ಪಸ ಇವುಗಳ ಬೆಲೆಗೆ

ಸರಿತೂಗುತ್ತದೆಯೆ? ..... ಕೊಡಿ, ಕೊಡಿ; ಕೊಡಬೇಕು' ಎಂದು ಉತ್ತರ ಕೊಟ್ಟರಂತೆ (ಬಜಾನೆ ಕೃಷ್ಣಮೂರ್ತಿ, ೧೯೬೯, ಪು.೨೫).

ವಿ.ಸೀ. ಬಾಳಿದ ರೀತಿಯನ್ನು ಕಂಡ ದಿನಕರ ದೇಸಾಯಿಯವರು ಬರೆದ ಚುಟಕ ಇದು :

ನೀ ಬರೆದುದೆಲ್ಲವೂ ಬೆಳ್ಳಿ ಬಂಗಾರ
ಗದ್ಯಪದ್ಯಗಳೆರಡು ನಿನ್ನ ಶೃಂಗಾರ
ನಿನ್ನ ಹೃದಯದ ಛಾಯೆ ಬಾನಿಗೂ ಬಿಳುಪು
ಬೇರೆಲ್ಲಿ ನೋಡೋಣ ಈ ತರದ ಹೊಳಪು!

(ದಿನಕರ ದೇಸಾಯಿ, ೧೯೬೯, ಪು.೪೨)

ಪರಮಯ್ಯ ಹಾಸ್ಯಗಾರರ ಪರಿಚಯ

ಯಾರೊಡನೆಯೇ ಆಗಲಿ ಸರಸವಾಗಿ ಸುಲಭವಾಗಿ ಬೆರೆಯಬಲ್ಲವರು ವಿ.ಸೀ. ಹೊನ್ನಾವರದಲ್ಲಿ ನೆಲಸಿದ ಸ್ವಲ್ಪ ದಿವಸಗಳಲ್ಲಿಯೇ ಕಾಲೇಜಿನ ವಿದ್ಯಾರ್ಥಿಗಳ ಮೂಲಕ ಹತ್ತಿರದ ಕರ್ಕಿಯ ಯಕ್ಷಗಾನ ಮಂಡಳಿಯ ಹಿರಿಯರಾದ ಪರಮಯ್ಯ ಹಾಸ್ಯಗಾರರ ಪರಿಚಯವಾಯಿತು. ಪರಿಚಯವಾದದ್ದೊಂದೇ ಅಲ್ಲ, ಅವರೊಡನೆ ತೀರ ಆತ್ಮೀಯವಾದ ಗೆಳೆತನವೂ ಬೆಳೆಯಿತು. ಯಕ್ಷಗಾನ ಕಲೆಯಲ್ಲಿ ಅಭಿರುಚಿ ಹೆಚ್ಚಿತು. ''ಯಕ್ಷಗಾನ ಕಲೆಗಾರರನ್ನೆಲ್ಲ ಎರಡು ಮೂರು ದಿನಗಳ ಮಟ್ಟಿಗೆ ಒಂದು ಕಡೆ ಸೇರಿಸಿ, ವಾದ್ಯದವರು, ಭಾಗವತರು, ಪಾತ್ರಧಾರಿಗಳು — ಇವರೆಲ್ಲರೂ ಸೇರಿ, ಕಲೆಗೆ ಸಂಬಂಧಿಸಿದ ನಾನಾ ವಿಷಯಗಳ ವಿವರ, ಚರ್ಚೆ, ಸಂಪ್ರದಾಯ, ಬೇರೆಬೇರೆ ಮನೆತನಗಳ ವಿಷಯ, ವ್ಯಕ್ತಿತ್ವ, ಪ್ರಭಾವ ಪ್ರಭೇದಗಳು; ಇವೊತ್ತಿನ ಅವುಗಳ ವ್ಯತ್ಯಾಸ, ಏರುಪೇರುಗಳು, ಅದರ ಶಕ್ತಿಯನ್ನು ಹೆಚ್ಚು ಮಾಡಿ ಅದರಲ್ಲಿ ಕಂಡುಬರುತ್ತಿರುವ ಕಳೆಯನ್ನು ಕೀಳುವ ಬಗೆ ಹೇಗೆ? ವೇಷಗಳನ್ನು ಸ್ವಲ್ಪಮಟ್ಟಿಗಾದರೂ ಇವೊತ್ತಿನ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಬಹುದೆ? ರಾತ್ರಿಯೆಲ್ಲ ನಡೆಯುವ ಆ ಆಟ ದೊಡ್ಡ ನಗರಗಳ ಆಧುನಿಕ ಸಭಾಸ್ಥಾನಗಳ ಮಿತಿಯಲ್ಲಿ ರೂಪುಗೊಳ್ಳಬೇಕಾದರೆ ಯಾವ ಏರ್ಪಾಡು ಅಗತ್ಯವಾದೀತು? ಎರಡು ಮೂರು ಗಂಟೆಗಳಿಗೆ ಮೀರದ ಯಕ್ಷಗಾನದ ಕತೆಗಳನ್ನು ತರಲು ಏನಾದರೂ ಸುಧಾರಣೆಗಳನ್ನು ಕೈಕೊಳ್ಳಬಹುದೆ? - ಇವೇ ಮುಂತಾದ ಸಂಗತಿಗಳನ್ನು ವಿವೇಚನೆ ಮಾಡುವುದು. ಮಧ್ಯಾಹ್ನ ಊಟ ವಿಶ್ರಾಂತಿ. ಸಂಜೆಯೊಳಗಾಗಿ ಒಂದು ಬಗೆಯ ವೇಷ ಭೂಷಣಗಳಿಗಾಗಿ ವಸ್ತುಸಂಗ್ರಹದ ಪರಿಶೀಲನೆ, ಒಂದು ತಾಳಮದ್ದಲೆಯ ಪ್ರಸಂಗ, ಶಕ್ಯವಾದರೆ ಒಂದೊಂದು ಮೇಳದವರ ಆಟ — ಹೀಗೆ ನಡೆಯಿಸಿದರೆ ಈ ಕಲೆಯ ಒಟ್ಟು ಪ್ರಪಂಚವನ್ನೆಲ್ಲ ಒಟ್ಟಿಗೆ ಕಂಡಂತಾಗುತ್ತಿತ್ತು.'' (ವಿ.ಸೀತಾರಾಮಯ್ಯ, ೧೯೮೦, 'ಹಿರಿಯರು ಗೆಳೆಯರು' ಪು.೩೪೬-೩೪೭).

ಇದು ವಿ.ಸೀ.ಯವರ ಅಭಿಲಾಷೆ. ಆದರೆ ಈ ಬಗೆಯ ಯೋಜನೆ ಕಾರ್ಯಗತವಾಗದೆ ಹೋದದ್ದು ದುರದೃಷ್ಟಕರ. ವಿ.ಸೀ.ಯವರಿಗೆ ಯಕ್ಷಗಾನಕಲೆಯಲ್ಲಿ ವಿಶೇಷ ಅಭಿಮಾನ ಗೌರವಗಳಿದ್ದವು.

ಊರಿನ ಭಾಗ್ಯ

ವಿ.ಸೀ. ಹೊನ್ನಾವರಕ್ಕೆ ಹೋದದ್ದು ಕಾಲೇಜಿಗಷ್ಟೆ ಭಾಗ್ಯವಾಗಿರಲಿಲ್ಲ. ಒಟ್ಟು ಊರಿನ ಭಾಗ್ಯವೇ ಆಗಿತ್ತು. ಇನ್ನೂ ಶೈಶವಾವಸ್ಥೆಯಲ್ಲಿದ್ದ ಕಾಲೇಜಿಗೆ ಆಕರ್ಷಕತೆಯನ್ನೂ ಗೌರವವನ್ನೂ ದೊರಕಿಸಿಕೊಟ್ಟರು. ಅವರ ವಯಸ್ಸು, ಅನುಭವ, ವಿದ್ಯೆ ಮತ್ತು ವಿವೇಕ ಎಲ್ಲ ಶಿಕ್ಷಕರ ಮೇಲೂ ವಿಶೇಷ ಪ್ರಭಾವ ಬೀರಿದವು. ತಾನು ವಿದ್ವಾಂಸನೆಂಬ ಬಿಗುಮಾನವಾಗಲಿ, ಪ್ರಿನ್ಸಿಪಾಲನೆಂಬ ಅಹಂಕಾರವಾಗಲಿ ಕಿಂಚಿತ್ತೂ ಅವರಲ್ಲಿ ಇರಲಿಲ್ಲ.

ಹೊನ್ನಾವರದಲ್ಲಿ ಕರ್ನಾಟಕ ಸಂಘ ಒಂದು ಹುಟ್ಟಿಕೊಳ್ಳಲು ಅವರು ಕಾರಣರಾದರು. ತರುಣರನ್ನು, ಊರಿನ ಹಿರಿಯರನ್ನು ಸೇರಿಸಿ ಸಂಘ ಕಟ್ಟಿದರು. ಹೊನ್ನಾವರಕ್ಕೆ ವಿದ್ವಾಂಸರು ಯಾರೇ ಬರಲಿ ಅವರನ್ನು ಕರೆಸಿ ಅವರ ಉಪನ್ಯಾಸ ಏರ್ಪಡಿಸುತ್ತಿದ್ದರು. ಕಾರ್ಯಕ್ರಮಗಳಲ್ಲಿ ಕೊರತೆ ಏನಾದರೂ ತಲೆದೋರಿದರೆ ತಾವೇ ಉಪನ್ಯಾಸ ಕೊಟ್ಟಾಗಲಿ, ಕಾವ್ಯವಾಚನ ಮಾಡಿಯಾಗಲಿ, ಊರವರನ್ನು ಸಂತೋಷಗೊಳಿಸುತ್ತಿದ್ದರು.

ವಿ.ಸೀ.ಯವರ ಶಿಕ್ಷಣದಿಂದ ಲಾಭಪಡೆದ ವಿದ್ಯಾರ್ಥಿನಿ ಭಾಗೀರಥಿ ಹೇಳುತ್ತಾರೆ :

> ''ವಿ.ಸೀ. ನಮಗೆ ಪಾಠ ಕಲಿಸಿದರು ಎನ್ನುವುದಕ್ಕಿಂತ ಜೀವನದ ರಹಸ್ಯಗಳತ್ತ ನಡೆಸಿಕೊಂಡು ಹೋದರು. ಕೇವಲ ಪದ್ಯಗಳನ್ನಷ್ಟೆ ಕಲಿಸಿ syllabus complete ಮಾಡಿದ್ದರೆ ಹತ್ತರ ಕೂಡ ಹನ್ನೊಂದು ಆಗುತ್ತಿದ್ದರು. ಅವರ ಕ್ಲಾಸುಗಳಲ್ಲಿ ನಮಗಾಗುತ್ತಿದ್ದುದು ವಿಷಯದ ಸಂಪೂರ್ಣ ತಿಳಿವಳಿಕೆಯ ಜೊತೆಗೆ ಜೀವನ ದರ್ಶನ .....
>
> ಅವರ ಅರ್ಥಶಾಸ್ತ್ರದ ಪಾಠಗಳಿಗಿಂತ, ಸಾಹಿತ್ಯ ಪಾಠಗಳು ಬಲು ಸೊಗಸು .... ಮೇಜಿನ ಮೇಲೆ ತಾಳ ಬಡಿಯುತ್ತ .... ಹಾಡುತ್ತಿದ್ದಾಗಿನ ನಿಲುವು, ಭಾವದ ದರ್ಪಣವಾದ ಮುಖ, ಓಹ್! ಇನ್ನೊಮ್ಮೆ ವಿದ್ಯಾರ್ಥಿಯಾಗಿ ಅವರೆದುರು ಕುಳಿತು ಆ ದನಿಯನ್ನು ಕಿವಿ ತುಂಬಿಕೊಳ್ಳುವ ಆಸೆ ಮತ್ತೆ ಗರಿಗೆದರುತ್ತದೆ.
>
> ವಿ.ಸೀ.ಯವರ ಸಹೃದಯ ಅಂತಃಕರಣ, ಎಲ್ಲರನ್ನು ಸಮಾನರಾಗಿ ಕಾಣುವ ವೈಶಾಲ್ಯ, ಇನ್ನೊಬ್ಬರ ಕಷ್ಟದಲ್ಲಿ ಸಹಾನುಭೂತಿಯನ್ನು ತೋರಿಸುವ ಮನಸ್ಸೆ ಸೂಜಿಗಲ್ಲುಗಳಾಗಿ ನಮ್ಮನ್ನು ಸೆಳೆಯಿತು ಎನ್ನಬಹುದು. ಅಧಿಕಾರ ದರ್ಪಗಳಿಂದ ಮನುಷ್ಯರನ್ನು ತಲೆಬಾಗುವಂತೆ ಮಾಡಬಹುದೇ ಹೊರತು ಅವರ ಪ್ರೀತಿ ವಿಶ್ವಾಸಗಳನ್ನು ಪಡೆಯುವುದು ಖಂಡಿತ ಸಾಧ್ಯವಿಲ್ಲ. ಒಂದು ಶಾಲೆಯ ಒತ್ತಾಯದ ಶಿಸ್ತಿನಲ್ಲಿ, ಅಂಜಿಕೆಯ

ಹದ್ನೆಬಟ್ಟಿನಲ್ಲಿ ಬೆಳೆದ ನಾವು ಆ ವೈಶಾಲ್ಯದ ಆರತಿಯಲ್ಲಿ ತಿಳಿದ ನಿಜವಾದ ಅರ್ಥವನ್ನರಿತೆವು. ವಿ.ಸೀ. ಅವರಲ್ಲಿ ನಾನು ಕಂಡಿದ್ದು ಉಪಾಧ್ಯಾಯರನ್ನಲ್ಲ, ಗುರುವನ್ನು. ನಾಲ್ಕು ವರ್ಷ ಕಾಲ ಕಳೆದು ಹೊರಬಂದಾಗ ನಮ್ಮ ಮನಸ್ಸು ಕೃತಕೃತ್ಯ ಭಾವ ತಳೆದು ತಸ್ಮೈ ನಮಃ ಎಂದಿತ್ತು.''

(ಭಾಗೀರಥಿ ೧೯೬೯, ಪು. ೬೬-೬೮)

ಹೊನ್ನಾವರದ ಶಿಷ್ಯವರ್ಗದಲ್ಲಿ ವಿ.ಸೀ. ಬೀರಿದ ಪ್ರಭಾವ ಇಂಥದು.

ಅಜ್ಞಾನ-ತಿಮಿರಾಂಧಸ್ಯ ಜ್ಞಾನಾಂಜನ-ಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ ॥

ಕರ್ನಾಟಕ ವಿಶ್ವವಿದ್ಯಾನಿಲಯದ ಔದಾರ್ಯ

ಹೊನ್ನಾವರದಲ್ಲಿ ಪ್ರಿನ್ಸಿಪಾಲರಾಗಿದ್ದ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ವಿ.ಸೀ.ಯವರನ್ನು ವಿಶ್ವವಿದ್ಯಾನಿಲಯದಲ್ಲಿ ಭಾಷಣಕೂಡ ಬೇಕೆಂದು ಆಹ್ವಾನಿಸಿತು. ಈ ಅನಿರೀಕ್ಷಿತ ಆಹ್ವಾನದಿಂದ ವಿ.ಸೀ. ಅವರಿಗೆ ಸಂತೋಷವಾಯಿತು. ಆ ವಿಶ್ವವಿದ್ಯಾನಿಲಯದ ಮಡಿಲಲ್ಲಿ ಬೆಳೆಯುತ್ತಿರುವ ಕಾಲೇಜೊಂದರಲ್ಲಿ ಎಲ್ಲಿಯೋ ದೂರದಲ್ಲಿ ಮರೆಯಾಗಿದ್ದ ತಮ್ಮನ್ನು ಗೌರವಿಸಿ ಧಾರವಾಡಕ್ಕೆ ಕರೆದುದು ಅದರ ಮತ್ತು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಔದಾರ್ಯಕ್ಕೆ ನಿದರ್ಶನ ಎಂದು ಸಂಭ್ರಮಪಟ್ಟರು. 'ಕಾಡಾಗಿ ಮೇಡಾಗಿ ಇಂಥ ಒಂದು ಪ್ರದೇಶವನ್ನು ವಿದ್ಯೆಯ ನೆಲೆಯಾಗಿ ಒಂದು ಮಹಾನಗರವಾಗಿ ನಿರ್ಮಾಣಮಾಡಿ, ಕಲೆ ಶಾಸ್ತ್ರ ವಿಜ್ಞಾನಗಳಿಗೆ ಅದನ್ನು ತವರು ಮಾಡಿದ ಪುಣ್ಯ' ಕಟ್ಟಿಕೊಂಡ ವಿಶ್ವವಿದ್ಯಾನಿಲಯದ ಉಪಕುಲಪತಿ ದಾನಪ್ಪ ಚಿಂತಪ್ಪ ಪಾವಟೆ ಯವರು ವಿ.ಸೀ. ಇತ್ತ ಉಪನ್ಯಾಸಗಳಿಗೆ ಬಂದು, ಆರಂಭ ಭಾಷಣ ಮಾಡಿ ವಿ.ಸೀ.ಯವರಿಗೆ ಮರ್ಯಾದೆ ಮಾಡಿದರು.

ಆ ಸಂದರ್ಭದಲ್ಲಿ ಅವರಿತ್ತ ಉಪನ್ಯಾಸಗಳಲ್ಲಿ, ಕನ್ನಡ ಸಾಹಿತ್ಯದಲ್ಲಿ ಯಾವುದು ಸಂಪ್ರದಾಯ, ಯಾವುದು ಹೊಸ ಸೃಷ್ಟಿ ಎಂಬುದರ ವಿವೇಚನೆ ಯಿದೆ. ಇದನ್ನೆ 'ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ' ಎಂಬ ಶೀರ್ಷಿಕೆಯಲ್ಲಿ ವಿಸ್ತಾರವಾಗಿ ಬೆಳಸಿ, ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಹೊಸ ಪುಸ್ತಕವನ್ನು ಹೊರತಂದರು. '..... ಇದು ಸಾಹಿತ್ಯ ಚರಿತ್ರೆಯಲ್ಲ ; ವಿವರವಾದ ಅಥವಾ ಕ್ರಮವಾದ ವಿಷಯ ಸಮಾಲೋಚನೆಯೂ ಅಲ್ಲ. ಸುಮಾರು ಯಾವ ಪ್ರಧಾನ ಅಂಶಗಳು ವಿಷಯದಲ್ಲಿ, ರೀತಿಯಲ್ಲಿ, ಸೃಷ್ಟಿಯಲ್ಲಿ ಮೌಲ್ಯನಿರ್ಣಯ ದಲ್ಲಿ ನಮ್ಮ ಸಂಪ್ರದಾಯದ ಅಂಗವಾಗಿ ಹುಟ್ಟಿ ಬೆಳೆದವೋ ಅವುಗಳ ಪರಿಚಯ ವನ್ನು ಸ್ಥೂಲವಾಗಿ ಮಾಡಿಕೊಡುವ ಯತ್ನ' ಎಂದು ಪುಸ್ತಕದ ಮುನ್ನುಡಿಯಲ್ಲಿ ವಿ.ಸೀ. ಹೇಳಿಕೊಂಡಿದ್ದಾರೆ. ''ಈಚಿನ ಕಾಲದಲ್ಲಿ ಅನ್ಯಪ್ರಭಾವಗಳು ಈ

ಸಂಪ್ರದಾಯದ ಮೇಲೆ ಬಿದ್ದು ಹೊಸ ವಿಧಾನಗಳಿಗೂ, ಕೃತಿಗಳಿಗೂ ಅವಕಾಶ ಮಾಡಿ ಕೊಟ್ಟಿವೆ, ಅವುಗಳ ಸ್ವರೂಪ, ಲಕ್ಷಣಗಳು ಎಂಥವು, ಎನ್ನುವುದರ ನಿರ್ದೇಶನವೂ ಇದೆ.'' ಸುಂದರ ಆಕಾರದಲ್ಲಿ ಮುದ್ರಿತವಾಗಿರುವ ಈ ಪುಸ್ತಕ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ವಿಷಯವ್ಯಾಪ್ತಿಯನ್ನು ಸ್ಥೂಲವಾಗಿ ಸೂಚಿಸುವ ಸಂಗ್ರಹವಾಗಿದೆ.

ಹೊನ್ನಾವರದಿಂದ ಹಿಂದಿರುಗಿದ ಮೇಲೆ

೧೯೬೮ ರಲ್ಲಿ ಹೊನ್ನಾವರ ಬಿಟ್ಟು ವಿ.ಸೀ. ಬೆಂಗಳೂರಿಗೆ ಹಿಂದಿರುಗಿದರು. ವಿ.ಸೀ.ಯವರ ಕೈಬರಹವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ ವಿಫಲರಾಗಿದ್ದ ಹೊನ್ನಾವರದ ಊರವರು ಬೀಳ್ಕೊಡುವಾಗ ಟೈಪ್‌ರೈಟರ್ ಒಂದನ್ನು ಅವರಿಗೆ ಉಡುಗೊರೆಯಾಗಿ ಕೊಟ್ಟರಂತೆ!

ಇದೇ ಸುಮಾರಿಗೆ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಸುರೇಂದ್ರ ದಾನಿಯವರು, ತಮ್ಮ ಪತ್ರಿಕೆಗಾಗಿ ಜೀವನದ ಅನುಭವಗಳನ್ನು ಬರೆದುಕೊಡಿ ಎಂದು ಕೇಳಿದರಂತೆ. ದಾನಿಯವರ ನಡವಳಿಕೆ, ಮಾತಿನ ಆದರ, ಸೌಜನ್ಯಗಳನ್ನು ಮೆಚ್ಚಿದ ವಿ.ಸೀ. ಕಾಲೆಜು ದಿನಗಳ ನೆನಪುಗಳನ್ನು ಬರೆದು ಕೊಡಲು ನಿರ್ಧರಿಸಿದರು. ನಾಲ್ಕೆಂಟು ವಾರಗಳಲ್ಲಿ ಮುಗಿಯಬಹುದೆಂದಿದ್ದ ಲೇಖನ ೧೯೬೯ ರ ಮಾರ್ಚಿಯಿಂದ ಹಿಡಿದು ಡಿಸೆಂಬರ್ ಕೊನೆಯವರೆಗೂ 'ಸಂಯುಕ್ತ ಕರ್ನಾಟಕ'ದಲ್ಲಿ ವಾರವಾರವೂ ಅಚ್ಚಾಗಿ ಹೊರಬಂದಿತು. ವಾರ ವಾರವೂ ಹೇಳಿ ಬರೆಸಿದ್ದಾದ್ದರಿಂದ ವ್ಯಾಸಂಗಕಾಲದ ಅವರ ಕಾಲೆಜು ದಿನಗಳ ಎಷ್ಟೋ ಪ್ರಸಂಗಗಳು ನೆನಪಿಗೆ ಬಾರದೆ, ಬರವಣಿಗೆಯ ರೂಪದಲ್ಲಿ ಇಳಿಯದೆ ಹೋದವು. 'ಸಾಹಿತ್ಯ ಕೃತಿಯಾಗಿ ರಚಿಸಲು ನಾನು ತೊಡಗಲಿಲ್ಲ. ಇದೊಂದು ನೆನಪಿನ ಖಂಡ ಮಾತ್ರ' ಎನ್ನುತ್ತಾರೆ ವಿ.ಸೀ.

'ಸಂಯುಕ್ತ ಕರ್ನಾಟಕ' ಆಗ ಉತ್ತರ ಕರ್ನಾಟಕದಲ್ಲಿ ಮಾತ್ರ ಹೆಚ್ಚು ಬಳಕೆಯಲ್ಲಿದ್ದ ಪತ್ರಿಕೆ. ಹಳೆಯ ಮೈಸೂರಿನವರ ಕಣ್ಣಿಗೆ ಈ ಪತ್ರಿಕೆ ಬಿದ್ದಿರಲಿಲ್ಲ. ಆದ್ದರಿಂದ 'ಸಂಯುಕ್ತ ಕರ್ನಾಟಕ'ದಲ್ಲಿ ಬರುತ್ತಿದ್ದ ಲೇಖನಗಳ ಸ್ವಾರಸ್ಯವನ್ನು ಕಂಡವರು, ಈ ನೆನಪುಗಳು ಪುಸ್ತಕರೂಪದಲ್ಲಿ ಬಂದಿದ್ದರೆ ಚೆನ್ನಾಗಿರುತ್ತಿತ್ತು ಎಂದರಂತೆ. ಆದರೆ ಪ್ರಕಟಿಸುವರೊಬ್ಬರು ಮುಂದೆ ಬರಬೇಕಲ್ಲ? ಇಂಡಿಯ ಬುಕ್ ಹೌಸಿನ ಪಿ.ಏನ್. ಕಾಮತ್ ಮತ್ತು ಜಿ.ಕೆ. ಅನಂತರಾಮ್ ಅವರು ಪ್ರಕಟಿಸಲು ಒಪ್ಪಿ ೧೯೭೧ ರಲ್ಲಿ 'ಕಾಲೆಜ್ ದಿನಗಳು' ಪುಸ್ತಕವನ್ನು ಹೊರತಂದರು. ಅವರು ಅಂದು ವಿ.ಸೀ.ಯವರ ಮೇಲಿನ ಅಭಿಮಾನದಿಂದ ಈ ಗ್ರಂಥವನ್ನು ಪ್ರಕಟಿಸಲು ಮುಂದೆ ಬಾರದೆ ಹೋಗಿದ್ದರೆ ಈ ಉತ್ತಮ ಬರಹ ಪುಸ್ತಕರೂಪದಲ್ಲಿ ದೊರೆಯದೆ ವಾರಪತ್ರಿಕೆಯ ಹಾಳೆಯಲ್ಲೆ ಸೊರಗಿ ಹೋಗುತ್ತಿತ್ತು.

ಲಂಡನ್ ಯಾತ್ರೆ

ಪಾಶ್ಚಾತ್ಯರ ನಡೆ ನುಡಿಗಳು, ವೇಷ ಭೂಷಣಗಳು, ಆಚಾರವಿಚಾರಗಳಲ್ಲಿ ಸಂಪ್ರದಾಯಗಳು, ಅವರ ಪಟ್ಟಣಗಳು, ವಸತಿ ಸೌಕರ್ಯಗಳು — ಇವುಗಳನ್ನು ಕಂಡರೆ ಎಳೆತನದಿಂದಲೂ ವಿಶೇಷ ಆಕರ್ಷಣೆ ವಿ.ಸೀ.ಯವರಿಗೆ. ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೆ ತಮ್ಮ ವಿಶಾಲ ಓದುಗಾರಿಕೆಯಿಂದ ಲಂಡನ್ ಪಟ್ಟಣದ ಮುಖ್ಯ ಭಾಗಗಳ, ಬೀದಿಗಳ, ಕಟ್ಟಡಗಳ ಕಲ್ಪನೆ ಮಾಡಿಕೊಂಡಿದ್ದರು. ಅವೆಲ್ಲವನ್ನೂ ಹೋಗಿ ನೋಡಬೇಕು ಎನ್ನುವ ಬಲವಾದ ಆಸೆ ಅಂಕುರಿಸಿತ್ತು. ''ಇಂಗ್ಲೆಂಡಿಗೆ ಹೋಗುವುದು ಶಕ್ಯವಾದರೆ, ಕೇಂಬ್ರಿಡ್ಜಿನಲ್ಲಿ ಮೂರು ತಿಂಗಳಿದ್ದು ಆ ಆವರಣದಲ್ಲಿನ ಯಾವ ಗುಣ, ಬೋಧನೆಯ ಯಾವ ರೀತಿ, ಮೌಲಿಕವಾದ ಅವರ ಕಲ್ಪನಾಶಕ್ತಿ, ಚೈತನ್ಯಗಳನ್ನು ಹೆಚ್ಚಿಸುತ್ತವೆ ಎಂಬುದನ್ನು ಅರಿಯಲು ಮನಸ್ಸಿತ್ತು'' ಎಂದಿದ್ದ ತಮ್ಮ ಆಸೆಯನ್ನು, ಕಾಲೇಜಿನಲ್ಲಿ ಅರ್ಥಶಾಸ್ತ್ರ ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲೇ ವ್ಯಕ್ತಪಡಿಸಿದ್ದುಂಟು.

ತಮ್ಮ ಈ ಚಾಪಲ್ಯವನ್ನು ಅವರು ತಮ್ಮ ಗುರುಗಳಾದ ಎನ್.ಎಸ್. ಸುಬ್ಬರಾಯರಲ್ಲಿ ಯಾವ ಸಂದರ್ಭದಲ್ಲೊ ಹೇಳಿಕೊಂಡಿರಬೇಕು. ಆ ಧಾರಾಳ ಮನಸ್ಸಿನ ಗುರು 'ಆಗಲಿ ತಾಳ್ರಿ, ರಾಮೂನ (ಎಂದರೆ ತಮ್ಮ ಮಗ ರಾಮಚಂದ್ರನನ್ನು) ಅಲ್ಲಿಗೆ (ಎಂದರೆ ಕೇಂಬ್ರಿಡ್ಜಿಗೆ) ಕಳಿಸಬೇಕು ಎಂದಿದ್ದೇನೆ. ಸಾರಿಗೆ ದರಗಳು (transport charges) ಇಷ್ಟರಲ್ಲೆ ಇಳಿಯುವುದೆಂದುಕೊಂಡಿದ್ದೇನೆ. ಅವನ ಜೊತೆಯಲ್ಲಿ ನೀವೂ ಹೋಗಿಬರುವಿರಂತೆ' ಎಂದಿದ್ದರಂತೆ. ''ಉತ್ಪದ್ಯಂತೇ ವಿಲೀಯಂತೇ ದರಿದ್ರಾಣಾಂ ಮನೋರಥಾಃ'' ವಿ.ಸೀ.ಯವರ ಎಳೆತನದ ಆಸೆ ಕೈಗೂಡಲಿಲ್ಲ. ಅದರೆ ತಮ್ಮ ಗುರುಗಳ ಮಾತಿನ ಹಿಂದಿನ ದೊಡ್ಡತನವನ್ನು ಕೃತಜ್ಞತೆಯಿಂದ ನೆನೆಯುವುದನ್ನು ಮಾತ್ರ ಅವರು ಮರೆಯಲಿಲ್ಲ.

ಕಾಲ ಉರುಳಿ ಹೋಯಿತು. ವಿ.ಸೀ. ಎಪ್ಪತ್ತೈದು ವರ್ಷ ದಾಟಿದರು. ಐವತ್ತು ವರ್ಷ ಜೊತೆಯಾಗಿ ಬಾಳಿದ ಮಡದಿಯೂ ತೀರಿಕೊಂಡರು. ಮನಸ್ಸು ಕಂಗಾಲಾಗಿತ್ತು. ಆ ಸಮಯಕ್ಕೆ ಸರಿಯಾಗಿ ಲಂಡನ್ನಿನ ಭಾರತೀಯ ವಿದ್ಯಾಭವನದಲ್ಲಿ ಕಾರ್ಯದರ್ಶಿಯಾಗಿದ್ದ ಮತ್ತೂರು ಕೃಷ್ಣಮೂರ್ತಿ ಅವರಿಂದ ಆಹ್ವಾನ ಬಂದಿತು, ಲಂಡನ್ನಿಗೆ ಕೆಲವು ದಿನಗಳ ಮಟ್ಟಿಗಾದರೂ ಬರಬೇಕೆಂದು. ಎಳೆವಯಸ್ಸಿನ ಹಂಬಲವನ್ನು ತೀರಿಸಿಕೊಳ್ಳಲು ಒಂದು ಅವಕಾಶ ದೊರೆತಂತಾಯಿತೆಂದು ಲಂಡನ್ನಿಗೆ ಪ್ರಯಾಣ ಬೆಳೆಸಲು ವಿ.ಸೀ. ತೀರ್ಮಾನಿಸಿದರು. ಆ ಜನದ ಬದುಕನ್ನು ನೋಡಲು, ಅವರ ಸಂಗೀತವನ್ನು ಕೇಳಲು, ಚಿತ್ರ ನೃತ್ಯ

ನಾಟಕಗಳನ್ನು ಸಂದರ್ಶಿಸಲು ತವಕಿಸಿದರು. ನಾಲ್ಕು ದಶಮಾನಗಳು ಅಲ್ಲಿನ ಎಲ್ಲ ದೊಡ್ಡ ರಸ್ತೆ, ಸಂಸ್ಥೆಗಳ ಹೆಸರು ಕೇಳಿ ಓದಿ ಅರಿತಿದ್ದರು. ಆ ಲೇಖಕ, ಈ ನಟ, ನಾಟ್ಯಶಾಲೆ, ಚಿತ್ರಮಂದಿರ; ಬ್ರಿಟಿಷ್ ಮ್ಯೂಸಿಯಂ; ಲಂಡನಿನ 'ಟವರು', ಅಲ್ಲಿಯೇ ಅಲ್ಲವೆ ಮಕ್ಕಳ ಕಣ್ಣು ಹಿಂಗಿಸಿದ್ದು? ದೊರೆ ಚಾರ್ಲ್ಸ್ ತಲೆ ಕಡಿದದ್ದು, ಬಕಿಂಗ್‌ಹಂ ಅರಮನೆ; ಅದರ ಎದುರಿನ ತೋಟ; ಟ್ರಫಾಲ್ಗರ್ ಚೌಕ; ಪಿಕಡಿಲ್ಲಿ, ಸೇಂಟ್ ಪಾಲ್ಸ್, ಪಾರ್ಲಿಮೆಂಟ್ ಭವನ, ವೆಸ್ಟ್‌ಮಿನ್‌ಸ್ಟರ್ ಮಂದಿರ, ನ್ಯೂಮಾರ್ಕೆಟ್, ಹ್ಯಾಂಪ್‌ಸ್ಟೆಡ್, ಬ್ಲೂಂಸ್‌ಬರಿ ಬೀದಿ – ಇಲ್ಲಿ ಕೇನ್ಸ್ ಇದ್ದದ್ದು, ಅಲ್ಲಿ ಡಿಕನ್ಸ್ ವಾಸಿಸುತ್ತಿದ್ದ ಗೃಹ – ಎಷ್ಟು ಹಿರಿಯರು, ಗರುವರು, ಮುಖ್ಯಮಂತ್ರಿಗಳು, ಕವಿಗಳು, ಲೋಕತಂತ್ರವನ್ನು ಮಾರ್ಪಡಿಸಿದವರು – ಮಾರ್ಕ್ಸ್, ರೂಸೊ, ಇವರುಗಳು ಬಳಸಿದ್ದ ಬ್ರಿಟಿಷ್ ಮ್ಯೂಸಿಯಂ ಪುಸ್ತಕಾಲಯ; ಬ್ಯಾಂಕ್ ಆಫ್ ಇಂಗ್ಲೆಂಡ್; ಪತ್ರಿಕೆಗಳು ಹೊರಡುವ ಫ್ಲೀಟ್ ಸ್ಟ್ರೀಟ್ – ಪುಸ್ತಕದ ಓದಿನಿಂದ ಕಲ್ಪಿಸಿಕೊಂಡ ಚಿತ್ರಗಳನ್ನು ಪ್ರತ್ಯಕ್ಷವಾಗಿ ದರ್ಶಿಸಲು ಹೆಚ್ಚಿನ ಉತ್ಸಾಹದಿಂದ ಬ್ರಿಟನ್ ನೆಲದ ಮೇಲೆ ಕಾಲಿಟ್ಟರು.

ಆದರೆ ವಿ.ಸೀ. ಅದೃಷ್ಟವಂತರಲ್ಲ. ಇಲ್ಲಿಯೂ ಅವರು ಸೋಲನ್ನೆ ಅನುಭವಿಸಬೇಕಾಯಿತು. 'ದಾರುಣೋ ದೈವನಿರ್ಘಾತಃ' (ದೈವ ಕೊಡುವ ಪೆಟ್ಟು ದಾರುಣವಾದುದು). ಎಷ್ಟು ಹಿರಿಯಾಸೆಗಳನ್ನಿಟ್ಟುಕೊಂಡು ಬಂದರೆ ತಾನೆ ಏನು? ಲಂಡನ್ ಸೇರಿದ ಮರುದಿನವೇ ಪಾರ್ಶ್ವವಾಯು ಬೇನೆಗೆ ತುತ್ತಾಗಿ ಬ್ರಿಟಿಷ್ ಆಸ್ಪತ್ರೆಯೊಂದನ್ನು ಸೇರಬೇಕಾಯಿತು. ಲಂಡನ್ನಿನಲ್ಲಿ ಇದ್ದಷ್ಟು ಕಾಲವೂ ಉತ್ತಮ ವೈದ್ಯಕೀಯ ನೆರವು ಅವರಿಗೆ ದೊರೆಯಿತು. ಇಪ್ಪತ್ತುನಾಲ್ಕು ರೋಗಿಗಳಿರುವ ವಾರ್ಡಿನಲ್ಲಿ ಇವರೊಬ್ಬರಾಧರು. ಹದಿನೈದು ದಿನಗಳ ಕಾಲ ಚಿಕಿತ್ಸೆ ನಡೆಯಿತು. ಅಲ್ಲಿನ ದಾದಿಯರು ತೋರಿದ ಪ್ರೀತಿ ವಿಶ್ವಾಸ, ಅವರಿಂದ ಪಡೆದ ಉಪಚಾರ, ಅಲ್ಲಿನ ವೈದ್ಯವಿಚಕ್ಷಣೆ, ಶುಶ್ರೂಷೆ, ಕಂಡು ತುಂಬ ಮೆಚ್ಚಿಕೊಂಡರು. ವಿ.ಸೀ. ಅವರನ್ನು ಪರೀಕ್ಷಿಸಿದ ವೈದ್ಯರು, ಧೈರ್ಯ ಕೊಡುತ್ತ We shall see what British Medicine can do for you ಎಂದರಂತೆ. ಇದೇನು ಸೊಕ್ಕಿನಿಂದ ಆಡಿದ ಮಾತೋ? ವ್ಯಂಗ್ಯವೋ? ವಿ.ಸೀ. ಮಾತ್ರ ಕೃತಜ್ಞತೆಯಿಂದ Given most Royally, Sir ಎಂದು ಉತ್ತರಿಸಿದರಂತೆ. ಈ ಪ್ರಸಂಗ ಬಹುಕಾಲ ಅವರ ಮನಸ್ಸಿನಿಂದ ಮರೆಯಾಗಲಿಲ್ಲ. ಭಾರತಕ್ಕೆ ಹಿಂದಿರುಗಿದ ಮೇಲೆಯೂ ಯಾರನ್ನು ಕಂಡರೂ ಅವರೊಡನೆ ಇದೇ ಮಾತೇ. ಬ್ರಿಟಿಷ್ ವೈದ್ಯರ ನಡವಳಿಕೆಯನ್ನು ಪ್ರಶಂಸಿಸುತ್ತಿದ್ದರು. 'ಈ ಜನದ ನಡೆ ಹಾಗೆ. ನಾಡಿನ ಹೆಮ್ಮೆ, ಆ ನುಡಿ, ಆ ಅಭಿಮಾನ ನಮಗೇಕೆ ಬಾರದೊ' ಎಂದು ಪರಿತಪಿಸುತ್ತಿದ್ದರು ವಿ.ಸೀ.

ಶತಕ ನೂರು ನೂರು ಬಾಳಿದರೆ ಆಯ್ತೆ ?
ಸಂಖ್ಯೆ ಕಾಲ ಕೋಟಿ ಕೋಟಿ ಬೇಕಾರಿಗೆ ?

ಯೋಗ್ಯತೆ, ಮಾನವತೆ, ಗುಣ ಇವೆಯೆ?
ಮಾನವನ ನಾಕಕೆತ್ತಬಲ್ಲ ಶೀಲ, ಬಾಳ ಚಿಲುಮೆಯಿಂಬಿ?
— ಒಳಿತಾಗಲಿ ಈ ಜನಕೆ, ಈ ಚರಿತೆಗೆ.

(ವಿ.ಸೀ., ಸ್ನೇಹ-ವಿಶ್ವಾಸ, – 'ಒಂದೆರಡು ನೋಟ', ಪು. ೪೧೮)

ಎಂದು, ತಮ್ಮನ್ನು ವಿಶ್ವಾಸದಿಂದ ನೋಡಿಕೊಂಡು, ರೋಗ ನಿವಾರಿಸಿದ ವೈದ್ಯಸಮುದಾಯವನ್ನು, ಬ್ರಿಟಿಷ್ ಜನಾಂಗವನ್ನು ವಿ.ಸೀ. ಹರಸಿದ್ದಾರೆ.

ಬೇರೆ ಏನನ್ನು ನೋಡದೆ ಹೋದರೂ, ಪ್ರಸಿದ್ಧ ವಿದ್ಯಾಕೇಂದ್ರಗಳಾದ ಕೇಂಬ್ರಿಡ್ಜ್‌ನ್ನು ಹೊರಗಿಂದಲಾದರೂ ನೋಡುವುದು ಅವರಿಗೆ ಸಾಧ್ಯವಾಯಿತಂತೆ. ಕೇಂಬ್ರಿಡ್ಜಿಗೆ ಭೇಟಿಯಿತ್ತಾಗ ತಮ್ಮ ಮೆಚ್ಚಿಕೆಯ ಅರ್ಥಶಾಸ್ತ್ರಜ್ಞನಾದ ಕೇನ್ಸ್ ಕೆಲಸಮಾಡುತ್ತಿದ್ದ ಕೊಠಡಿ ಯಾವುದೆಂದು ಅಲ್ಲಿನವರು ಯಾರನ್ನೋ ಕೇಳಿದರಂತೆ. ಅವರಿಗೆ ತಿಳಿಯದೋ ಇಲ್ಲವೆ ಅಲಕ್ಷ್ಯವೋ, ಬಯಸಿದ ಉತ್ತರ ಸಿಗದೆ ನಿರಾಶರಾಗಿ ಹಿಂದಿರುಗಬೇಕಾಯಿತಂತೆ. ಆಕ್ಸ್‌ಫರ್ಡ್‌ನ್ನು ನೋಡಲಾಗಲಿಲ್ಲ.

ಟಾಮ್ ಎಂಬ ಸ್ನೇಹಿತನೊಬ್ಬ ವಿ.ಸೀ.ಅವರನ್ನು ಪಿಗ್‌ಮೇಲಿಯನ್ ನಾಟಕ ನೋಡಲು ಕೊಂಡೊಯ್ದನಂತೆ. ಷಾ (Bernard Shaw)ನ ಈ ನಾಟಕವನ್ನು ತುಂಬ ಮೆಚ್ಚಿಕೊಂಡು ಹಿಂದೆಯೇ ಕನ್ನಡಕ್ಕೆ ಅನುವಾದ ಮಾಡಿದ್ದರಲ್ಲವೆ! ಈಗ ನಾಟಕ ನೋಡಿ ಆನಂದಪಟ್ಟರು. ನಾಟಕದ ಕೊನೆಯ ದೃಶ್ಯದ ಒಗಟನ್ನು ಷಾ ಏಕಾಗಿ ಬಿಡಿಸದೆಹೋದ ಎಂದುಕೊಂಡರು.

ಲಂಡನ್ನಿನಲ್ಲಿ ಇನ್ನು ಹೆಚ್ಚುಕಾಲ ನಿಲ್ಲದೆ, ಬೇಗ ಹೋಗಿ ಗೂಡು ಸೇರಿಕೊಳ್ಳೋಣವೆಂದು ಸ್ವದೇಶಕ್ಕೆ ಹಿಂದಿರುಗಿದರು. ಹೋಗುವಾಗ ಹಾರಿ ಹೋದದ್ದು ಬೇರೂತ್, ಜಿನೀವಾ ಮಾರ್ಗವಾಗಿ. ಈಗ ಹಿಂದಿರುಗಿದ್ದು ಪ್ಯಾರಿಸ್, ಫ್ರಾಂಕ್‌ಫರ್ಟ್, ಕುವೈಟ್ ಮಾರ್ಗವಾಗಿ. ಎಷ್ಟೊಂದು ದೇಶಗಳು! ಅವುಗಳಲ್ಲಿ ಸುತ್ತಾಡಿ, ಆ ದೇಶಗಳ ಚರಿತ್ರೆಯ ಅನುಭವವನ್ನು ಪಡೆಯುವುದು ಮಾತ್ರ ಅವರಿಗೆ ಸಾಧ್ಯವಾಗಲಿಲ್ಲ. ಇನ್ನೊಂದು ಜನ್ಮವೆತ್ತಿ ಬಂದರೆ ಸಾಧ್ಯವೋ ಏನೋ ಎಂದುಕೊಂಡರು.

ಭಾರತದಲ್ಲಿಯೇ ಉಳಿದಿದ್ದು ತಮಗೆ ರೋಗ ತಗುಲಿದ್ದರೆ ತಾವು ಉಳಿಯುತ್ತಿರಲಿಲ್ಲವೆಂದು ಅವರು ಭಾವಿಸಿದ್ದರು. ಭಾರತದಲ್ಲಿ ತಮ್ಮನ್ನು ಅಷ್ಟು ಮುತುವರ್ಜಿಯಿಂದ ನೋಡಿಕೊಂಡು ರೋಗ ಗುಣಪಡಿಸುವವರು ಯಾರು? ಈ ವಿಪತ್ತಿನಿಂದ ಪಾರುಮಾಡಿಸುವ ಸಲುವಾಗಿಯೇ ವಿಧಿ ತಮ್ಮನ್ನು ಲಂಡನ್ನಿಗೆ ಕರೆದುಕೊಂಡು ಹೋಗಿ ಪುನಃ ಹಿಂದೆ ಕರತಂದಿತೆಂದು ಮನಸ್ಸಿನಲ್ಲಿ ಅಂದುಕೊಂಡಿದ್ದುಂಟು.

ಇದು ಹೇಗೇ ಇರಲಿ. ತಮ್ಮ ನಾಡಿನ ಮೇಲಿನ ಅಭಿಮಾನ ರಕ್ತದಲ್ಲಿ ಬೇರೂರಿತ್ತು;

ನೀವೇನೆ ಹೇಳಿ, ಬಿಡಿ; ನನ್ನೆಣಿಕೆ ಇದು :
ನನ್ನ ನಾಡಲ್ಲಿಯೇ ನನಗೆ ನೆಲೆ, ನಿಲವು, ಒಲವು, ಸಾವು.
ನೆಲದಲ್ಲಿ ನಟ್ಟು ಬೇರು ಬಿಟ್ಟು ಮರವಾಗಿ ಬೆಳೆದದ್ದು ಇಲ್ಲಿ :
ಎಲ್ಲ ನೆನವು ; ಹರ್ಷ ಕೊಟ್ಟದ್ದು, ನಿಟ್ಟುಸಿರನಿಡಿಸಿದ್ದು
ನನ್ನೆಲ್ಲರೂ ಇದ್ದದ್ದು, ಕಡೆ ಉಸಿರನೆಳೆದದ್ದು.

(ಸ್ನೇಹ ವಿಶ್ವಾಸ, 'ನನ್ನ ನಾಡು ನನಗೆ', ಪು.೪೩೧)

ಅಲ್ಲಿನ ಜನರನ್ನು ನನ್ನವರು ಎಂದು ಹೇಗೆ ಹೇಳುವುದು? ಅವರ ನಡೆ ನುಡಿಗಳೇ ಬೇರೆ. ನಿಜ, ಅಲ್ಲಿ ಎಲ್ಲವೂ ಕ್ರಮವರಿತು ಹಗಲು ಇರುಳು ಕೆಲಸ ನಡೆಯುತ್ತಿರುತ್ತದೆ. ಹೀಗಿದ್ದರೂ ಮನಸ್ಸು ತಾಯಿನಾಡಿನ ಕಡೆಗೇ, ಕ್ರಮರಹಿತ, ಬಡತನದ ಬಾಳುವೆಯ ಕಡೆಗೇ, ಹರಿಯಿತು. ಮತ್ತೆ ನಾಲ್ಕಾರು ಸಾವಿರ ಮೈಲಿ ದಾಟಿ ಹಿಂದಿರುಗಿದರು. ತಮ್ಮ ನಾಡಿನ ಕರೆ ಅವರನ್ನು ಭಾರತಕ್ಕೆ ಕರೆತಂದಿತು. ಅವರು ಹೇಳುತ್ತಾರೆ :

ಓ ಭಾರತೀ, ಕಂದ ನಿನ್ನವನು, ನೀನೆ ಗತಿ, ಮಣ್ಣು, ಬೂದಿ
ಶತ ಶತಮಾನದಿಂದ ನನ್ನವರ ಬಾಳ ಭರಣಕ್ಕೆ ಸಂದದ್ದು ನಾಡು
ಜೀವಿಕೆಗೆಂದು ಬೇರೆ ನಾಡಿಗೋಡುವುದು ಸಿಗ್ಗು
ಮಾನವಂತರು ಬಯೆಸಬಹುದೇ
ಆ ತರುವಲಿತನವನು?

(ಅದೇ, ಪು. ೪೩೨)

ಜೀವಿಕೆಗಾಗಿ, ಹಣ ಸಂಪಾದನೆಗಾಗಿ, ಅಲ್ಲಿನ ಭೋಗಜೀವನಕ್ಕಾಗಿ ಆಸೆಪಟ್ಟು ವಿದೇಶಗಳಿಗೆ, ಅದರಲ್ಲೂ ಅಮೆರಿಕಕ್ಕೆ ಹೊರಡುವ ಯುವಕರ ಮಹಾಪೂರವನ್ನೇ ಈಗ ನಾವು ಕಾಣುತ್ತಿದ್ದೇವೆ. ಇದನ್ನು ಕಂಡು, ವಿ.ಸೀ. ಮುಂದೆ ಒಂದು ದಿನ ಭಾರತ ತಲೆಯೆತ್ತಿ ನಿಲ್ಲಲಾರದೆ, ಇಲ್ಲಿನ ಕಲೆ ಶಾಸ್ತ್ರ, ತಂತ್ರಶಕ್ತಿ ಜಗತ್ತನ್ನು ಬೆಳಗಲಾರದೆ? ಹೀಗೆ ಮಾಡುವುದರಲ್ಲಿ ನನ್ನ ಜೀವ ಸವೆಯಲಿ ಎಂದು ಆಶಿಸುತ್ತಾರೆ.

ಎಂದಿಗಾದೀತೊ ನಮ್ಮ ನಾಡಿನ ಬದುಕು ತುಂಬಿ
ತುಳುಕಿ ಮೈ ಕೈ ತುಂಬಿ ಮೊಗಗಳರಳಿ ತಾವರೆಗಳಂತೆ
ನಮ್ಮ ಮಕ್ಕಳ ಭಾಗ್ಯ ನಕ್ಕು ಹೂ ಹಣ್ಣು ಬೆಳಸಿ!
ಇವಕಾಗಿ ತೆರೆಯಲಾರೆವೆ ಗೈಮೆ ಕಲೆ ಶಾಸ್ತ್ರ ಕ್ರಿಯಾ ತಂತ್ರ?
ಮಾನವತೆ ಹೊಮ್ಮಿ ನಾಲ್ಕು ದಿಕ್ಕುಗಳ ಸೆಳೆವಂತೆ
ಮೀಸಲಾಗಲಿ - ನನ್ನ ಉಳಿದ ಬದುಕು ಅದಕೆ.

(ಅದೇ, ಪು.೪೩೨)

ನಮ್ಮ ನಾಡಿಗಾಗಿ, ನಾಡಿನ ಒಳಿತಿಗಾಗಿ ಈ ರೀತಿ ಹೃದಯ ಮಿಡಿಯುವಂಥವರು ನಮ್ಮಲ್ಲಿ ಎಷ್ಟು ಜನರುಂಟು?

ಮೈಸೂರು ವಿಶ್ವವಿದ್ಯಾನಿಲಯ ಸಲ್ಲಿಸಿದ ಗೌರವ

೧೯೭೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ತನ್ನ ಐವತ್ತಾರನೆಯ ಘಟಿಕೋತ್ಸವದಂದು ವಿ.ಸೀ.ಯವರಿಗೆ ಗೌರವ ಡಿ.ಲಿಟ್. ಪದವಿ ಸಲ್ಲಿಸಿ ಗೌರವಿಸಿತು. ಕನ್ನಡಕ್ಕೆ ಸರಿಯಾದ ಸ್ಥಾನಮಾನಗಳು ಇಲ್ಲದ ಕಾಲದಲ್ಲಿ ಉಪ ಪ್ರಾಧ್ಯಾಪಕ ಪದವಿಯನ್ನೂ ಕೊಡದೆ ಮಾಡಿದ ಅಪಚಾರವನ್ನು ಈಗ ಸರಿ ಪಡಿಸಿತು. ಘಟಿಕೋತ್ಸವದ ದಿನ ಗೌರವಾನ್ವಿತ ವಿ.ಸೀ.ಯವರನ್ನು ಕುಲಾಧಿ ಪತಿಗಳಿಗೂ, ಸಭಾಸದಸ್ಯರಿಗೂ ಪರಿಚಯಮಾಡಿಕೊಡುತ್ತ ಉಪಕುಲಪತಿಗಳು ಹೇಳಿದ ಮಾತುಗಳಿವು :

> ''ಶ್ರೀ ಸೀತಾರಾಮಯ್ಯನವರು ರಾಷ್ಟ್ರಮಟ್ಟದ ಖ್ಯಾತಿ ಗಳಿಸಿರುವ ಕನ್ನಡ ಲೇಖಕರಲ್ಲಿ ಒಬ್ಬರಾಗಿದ್ದು, ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಪ್ರವೇಶ ಪಡೆದಿದ್ದಾರೆ. ಕನ್ನಡ, ಇಂಗ್ಲಿಷ್, ಸಂಸ್ಕೃತ ಸಾಹಿತ್ಯಗಳನ್ನು ಅವರು ಆಳವಾಗಿ ಅಧ್ಯಯನ ಮಾಡಿದ್ದಾರೆ. ಕಲೆ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ತ್ವಶಾಸ್ತ್ರ ಮೊದಲಾದ ವಿಷಯಗಳಲ್ಲಿ ಪರಿಣತಿಯನ್ನು ಸಂಪಾದಿಸಿ ದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅವರು ದೊಡ್ಡ ವಾಗ್ಮಿ. ಕವಿಯಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ, ಪ್ರಬಂಧಕಾರರಾಗಿ, ವಿಚಾರವಾದಿಯಾಗಿ, ಶ್ರೀ ಸೀತಾರಾಮಯ್ಯನವರು ಈ ಅರ್ಧಶತಮಾನ ದಲ್ಲಿ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಅವರು ಕನ್ನಡ ಇಂಗ್ಲಿಷ್‌ಗಳಲ್ಲಿ ಸುಮಾರು ನಲವತ್ತು ಗ್ರಂಥಗಳ, ಅನೇಕ ಬಿಡಿ ಬರಹಗಳ ಲೇಖಕರು. ವೈಚಾರಿಕ, ಶಾಸ್ತ್ರೀಯ ವಿಷಯಗಳನ್ನು ಕನ್ನಡದಲ್ಲಿ ಹೇಗೆ ನಿರೂಪಿಸಬಹುದೆಂಬುದನ್ನು ಸಮರ್ಥವಾಗಿ ತೋರಿಸಿಕೊಟ್ಟ ಆರಂಭದ ಬರಹಗಾರರಲ್ಲಿ ಅವರೊಬ್ಬರು. ಲಲಿತಗದ್ಯಕ್ಕೂ ಶ್ರೀ ಸೀತಾರಾಮಯ್ಯ ನವರು ಮಾದರಿಗಳನ್ನು ನಿರ್ಮಿಸಿದ್ದಾರೆ. ಅವರ ಬರಹದಲ್ಲಿ ಕನ್ನಡ ಗದ್ಯದ ಒಂದು ವಿಶಿಷ್ಟ ಹದವನ್ನು ಕಾಣಬಹುದಾಗಿದೆ. ಫಲವಾಗಿ ಅವರು ಆಧುನಿಕ ಗದ್ಯಶಿಲ್ಪಿಗಳಲ್ಲಿ ಒಬ್ಬರಾಗಿದ್ದಾರೆ. ಏಳು ಸಂಕಲನಗಳ ಅವರ ಕವಿತೆಗಳಲ್ಲಿ ಅವರ ಜೀವನಶ್ರದ್ಧೆ, ಆಶಾವಾದ ಉತ್ಸಾಹಗಳು ತುಂಬಿವೆ. ಅವರ ಕೆಲವು ಕವಿತೆಗಳು ಕನ್ನಡವನ್ನು ಬಲ್ಲ ಎಲ್ಲರಿಗೂ ಚಿರ ಪರಿಚಿತವಾಗಿವೆ. ಕನ್ನಡೇತರರಿಗೆ ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಪರಿಚಯ ಮಾಡಿಕೊಡುವಲ್ಲಿ ಅವರು ಅದ್ವಿತೀಯ ಕೆಲಸ ಮಾಡಿದ್ದಾರೆ. ಅವರು ಇಂಗ್ಲಿಷ್‌ನಲ್ಲಿ ರಚಿಸಿರುವ 'ಮಹಾಕವಿ ಪಂಪ' ಎಂಬ ಗ್ರಂಥ ಈ ಸಂದರ್ಭದಲ್ಲಿ ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದೆ. ಇಂಗ್ಲಿಷ್‌ನಿಂದ ಹಲವು ಮಹತ್ತರ ಕೃತಿಗಳನ್ನು ಅವರು ಕನ್ನಡಕ್ಕೆ ತಂದಿದ್ದಾರೆ. ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಕವಿಕಾವ್ಯಪರಂಪರೆ' ಮಾಲೆ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಅತ್ಯಂತ ಉಪಯುಕ್ತವಾದುದಾಗಿದೆ.

.....ಮಾನ್ಯ ಕುಲಾಧಿಪತಿಗಳೇ, ಇವರೇ ವಿ.ಸೀ. ಎಂಬ ಎರಡಕ್ಷರಗಳ ಹೆಸರಿನಿಂದ ಪ್ರಸಿದ್ಧವಾಗಿರುವ, ಆಧುನಿಕ ಕನ್ನಡದ ಸಾಹಿತ್ಯದ ಆಚಾರ್ಯರಲ್ಲಿ ಒಬ್ಬರಾಗಿರುವ ಶ್ರೀ ವೆಂಕಟರಾಮಯ್ಯ ಸೀತಾರಾಮಯ್ಯ. ಇವರಿಗೆ ಗೌರವ ಡಿ.ಲಿಟ್. ಪದವಿಯನ್ನು ದಯಪಾಲಿಸಬೇಕೆಂದು ನಾನು ತಮ್ಮನ್ನು ಪ್ರಾರ್ಥಿಸುತ್ತೇನೆ.''

ತಾವು ವಿದ್ಯಾರ್ಜನೆ ಮಾಡಿದ ಹೆಮ್ಮೆಯ ವಿಶ್ವವಿದ್ಯಾನಿಲಯ ಈ ರೀತಿ ಗೌರವಿಸಿದುದನ್ನು ಕಂಡು ವಿ.ಸೀ. ಸಂತೋಷಪಟ್ಟಿರಬೇಕು. ಪದವಿಯನ್ನು ಸ್ವೀಕರಿಸಿದ ಸಂದರ್ಭದಲ್ಲಿ ಅವರಾಡಿದ ಮಾತುಗಳು ವಿಶ್ವವಿದ್ಯಾಲಯದ ಮೇಲೆ ತಮಗಿರುವ ಅಭಿಮಾನವನ್ನೂ ಕೃತಜ್ಞತೆಯನ್ನೂ ಸೂಚಿಸುತ್ತವೆ. ಕುಲಾಧಿಪತಿಗಳು, ಉಪಕುಲಪತಿಗಳು ಮತ್ತು ಅಲ್ಲಿ ನೆರೆದಿದ್ದ ವಿದ್ವದ್ ಸಭಾಮಂಡಳಿಯವರನ್ನು ಉದ್ದೇಶಿಸಿ ಮಾತನಾಡುತ್ತ ವಿ.ಸೀ. ಹೇಳಿದರು :

''ಲಕ್ಷಾಂತರ ಜನಕ್ಕೆ ಏಕಕಾಲದಲ್ಲಿ ಸ್ಥಳಸ್ಥಳಾಂತರಗಳಲ್ಲಿ ಸಂತೋಷಕೊಟ್ಟು ಕೀರ್ತಿವಂತರಾದ ಶ್ರೀ ರಾಜಕುಮಾರ್, ವಿದ್ಯಾರ್ಥಿಯಾಗಿ ನಾನು ಕಂಡಾಗಿನಿಂದ ಅವಿಶ್ರಾಂತವಾಗಿ ಅರ್ಥಶಾಸ್ತ್ರ ವ್ಯಾಸಂಗ ಮಾಡುತ್ತಿರುವ ಡಾ.ಗೋಪಾಲ್, ಭೌತವಿಜ್ಞಾನದಲ್ಲಿ ಭಾರತಕ್ಕೆ ಸ್ಥಾನಮಾನ ಕಲ್ಪಿಸಿಕೊಟ್ಟಿರುವ ಡಾ. ಸೇಠ್ನಾ ಇವರ ಜೊತೆಗೆ ಸೇರಿಸಿ ನನಗೆ ಈ ಗೌರವವನ್ನು ದಯಪಾಲಿಸಿದ್ದಕ್ಕಾಗಿ ನನ್ನ ವಿಶ್ವವಿದ್ಯಾನಿಲಯವನ್ನು ವಂದಿಸುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯ ನನಗೆ ತಾಯಿನೆಲ; ಮೊದಲ ಪ್ರವೇಶ ಪರೀಕ್ಷೆಯಿಂದ ತೊಡಗಿ ಎಂ.ಎ.ವರೆಗೂ ಓದಿದವರ ವರ್ಗಕ್ಕೆ ಸೇರಿದವನು ನಾನು. ಕಲಿತಂತಹದೆಲ್ಲವನ್ನೂ ಮಹಾರಾಜಾ ಕಾಲೆಜ್ ಕಲಿಸಿತು. ಆ ಭೂಮಿ ನನಗೆ ಪವಿತ್ರವಾದುದು. ನನ್ನ ಕಾಲದಲ್ಲಿ ಪ್ರಾಚಾರ್ಯರಾಗಿ ನಮಗೆ ವಿದ್ಯಾದಾನ ಮಾಡಿದವರು ಭರತಖಂಡದ ಯಾವ ವಿಶ್ವವಿದ್ಯಾನಿಲಯದಲ್ಲಿಯೂ ಯಾರಿಗೂ ಕಡಿಮೆಯಾದವರಲ್ಲ. ಇತರರಿಗೆ ಅಸೂಯೆತರುವಂಥ ಯೋಗ್ಯತೆಯವರು. ಅವರವರ ವಿಷಯಗಳಲ್ಲಿ ಆ ಕಾಲದಲ್ಲಿ ದೊರಕುವುದನ್ನೆಲ್ಲ ತಿಳಿದು ಕಡೆಯ ಮಾತನ್ನು ನಿಷ್ಕೃಷ್ಟವಾಗಿ ಆಡಬಲ್ಲವರಾಗಿದ್ದರು. ನನಗೆ ಪ್ರಾತಃಸ್ಮರಣೀಯರು. ಅವರು ಮೂಡಿಸಿದ ದೀವಿಗೆ ನನ್ನ ಹೃದಯದಲ್ಲಿ ನಿರಂತರವಾಗಿ ಬೆಳಗಿ ದಾರಿ ಕಾಣಿಸುತ್ತಿದೆ; ಮಹಾಕಾಂಕ್ಷೆಗಳನ್ನು ತಂದುಕೊಟ್ಟಿದೆ. ವಿದ್ಯೆಯಲ್ಲಿ ಶ್ರದ್ಧೆಯಿಂದ ಆಜೀವಪರ್ಯಂತ ವ್ಯವಸಾಯ ಮಾಡಬೇಕೆಂಬ ಆಸೆ ಹುಟ್ಟಿಸಿದುದು ಆ ಗುರುವರ್ಗ. ಬ್ರಹ್ಮಾನಂದದಲ್ಲಿ ಸಾಹಿತ್ಯರಸದಲ್ಲಿ ಹೇಗೋ - ರಸಾನಂದ ಒಂದು ಎನ್ನುತ್ತಾರೆ. ನಮ್ಮ ಈ ಪ್ರಾಚಾರ್ಯರು ನಾನಾ ಬಗೆಯ ಸಿದ್ಧಿಪಡೆದವರು. ಮನಸ್ಸುಗಳು ಪಾಠಕ್ರಮ ಪ್ರವಚನ ವಿಚಕ್ಷಣೆಗಳಲ್ಲಿ ಎಷ್ಟು ವಿಧವಾಗಿ ಬೆಳೆಯಬಹುದು, ಎಷ್ಟು ತೆರನಾದ ಅಭ್ಯಾಸ ಸಾಧನೆ ಇವೆ - ಎಲ್ಲವೂ ಸರಿ - ಎಂದು ಕಾಣಿಸಿದರು. ನಾನು ವಿದ್ಯಾರ್ಥಿಯಾಗಿದ್ದ ಐದು ವರ್ಷ ಕಾಲವೂ ನನಗೆ ಅನ್ನವಸತಿ ಕಲ್ಪಿಸಿ ತಂದೆತಾಯಿಯಂತೆ ನೋಡಿಕೊಂಡರು ಶ್ರೀ ನೀಲಕಂಠರಾಯರು ಮತ್ತು

ಶ್ರೀಮತಿ ಅಚ್ಚಮ್ಮನವರು. ನಾನೂ ಹೆಣ್ಣುಮಕ್ಕಳೇ ಬೆಳೆಸಿ ಬೆಳೆದ ಹುಡುಗ. ಅವರಲ್ಲಿ ಔದಾರ್ಯವನ್ನು, ನಡತೆಯಲ್ಲಿ ದೊಡ್ಡತನವನ್ನು ಕಂಡೆ. ಈ ಹಿರಿಯರಲ್ಲಿ ಬಹುಮಂದಿ ಈಗಿಲ್ಲ. ಅಲ್ಲಿಂದ ಪೂಜ್ಯರೂ ಗೆಳೆಯರೂ ಆಗಿ ಕನ್ನಡನಾಡಿನ ಮಾನ್ಯರು ನನ್ನನ್ನು ತಮ್ಮ ಜೊತೆಗೆ ಸೇರಿಸಿಕೊಂಡು ಒಂದು ಕುಳವನ್ನಾಗಿ ಮಾಡಿದರು. ನಾನಾ ಸಂಸ್ಥೆಗಳಲ್ಲಿ ನನ್ನ ಜೊತೆಗೆ ಕೆಲಸ ಮಾಡಿದವರು ತುಂಬಾ ಪ್ರೀತಿಯನ್ನು ಗೌರವವನ್ನು ತೋರಿಸಿದ್ದಾರೆ. ಕನ್ನಡ ನಾಡನ್ನೆಲ್ಲ ಸುತ್ತಿ ಈ ನಾಡಿನ ಸೌಂದರ್ಯವನ್ನೂ, ಸಜ್ಜನಿಕೆಯನ್ನೂ, ಪ್ರೀತಿಯನ್ನೂ, ಉಪಕಾರವನ್ನೂ ಅತಿಶಯವಾಗಿ ಅನುಭವಿಸುವ ಭಾಗ್ಯ ನನಗೆ ದೊರೆತಿದೆ.

ನಾನು ಏನು ಬರೆದಿದ್ದೇನೊ, ಬಿಟ್ಟಿದ್ದೇನೊ, ಅದಕ್ಕೆ ಏನು ಬೆಲೆಯೋ, ಏನಿಲ್ಲವೊ ನಾ ಕಾಣೆ. ಆದರೆ ಉಪಾಧ್ಯಾಯನಾಗಿ, ಮಿಡಲ್ ಸ್ಕೂಲ್ ತರಗತಿಗಳಿಂದ ಹಿಡಿದು ಸ್ನಾತಕೋತ್ತರ ಎಂ.ಎ. ವಿದ್ಯಾರ್ಥಿಗಳವರೆಗೂ ನಾ ಬಲ್ಲಂತೆ ವಿದ್ಯೋತ್ಸಾಹವನ್ನು ಹರಡಲು ಯತ್ನಿಸಿರುವಾಗ ನನಗೆ ದೊರೆತ ಸಂತೋಷ ಇನ್ನಾತರಲ್ಲಿಯೂ ದೊರೆತಿಲ್ಲ. ಉಪಾಧ್ಯಾಯ ವೃತ್ತಿ ನನಗೆ ದೈವವಿತ್ತ ವರ ಎಂದುಕೊಂಡಿದ್ದೇನೆ. ಉಳಿದುದು ಹೇಗೇ ಇರಲಿ, ಸುಮಾರು ೧೯೧೮ ರಿಂದ ೧೯೬೮ರ ವರೆಗೂ - ಅರ್ಧಶತಮಾನ ಕಾಲ, ನಡುವೆ ಈಚೆಗೆ ಸ್ವಲ್ಪ ಕಾಲ ಬಿಟ್ಟು, ಸಣ್ಣವಯಸ್ಸಿನವರ, ಯುವಕರ ಪ್ರಯೋಜನಕ್ಕಾಗಿ ಶ್ರಮಿಸಿ ಚೇತನವನ್ನೂ, ಶ್ರದ್ಧೆಯನ್ನೂ ಸಂತೋಷವನ್ನೂ ಹೊಸದಾಗಿಟ್ಟುಕೊಳ್ಳುವುದು ಶಕ್ಯವಾಯಿತು. ಯಾವ ವಿದ್ಯೆಗೆ ಏನು ಬೆಲೆಯೋ ; ಆದರೆ ನಿಷ್ಠೆಯಿಂದ ಯಾವ ಕಲಿಕೆಯನ್ನು ಸಾಧಿಸಿದರೂ ಅದು ನಮ್ಮ ಮನಸ್ಸನ್ನು ಕುದುರಿಸುತ್ತದೆ. ಶೀಲವನ್ನು ಬೆಳೆಸುವ ಅಂಗವಾಗುತ್ತದೆ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ತ್ವಶಾಸ್ತ್ರ ನಾನು ವ್ಯಾಸಂಗ ಮಾಡಿ ಪದವಿ ಪಡೆದ ಭಾಗಗಳು. ಸಾಹಿತ್ಯದಲ್ಲಿ ಯಾವ ಪದವಿಯನ್ನೂ ನಾನು ಪಡೆದವನಲ್ಲ. ಅದು ಈ ದಿನ ಈ ಸಭೆ ನನಗೆ ದೊರಕಿಸಿಕೊಡುತ್ತಿರುವ ಮಹಾದಾನ. ಇದಕ್ಕೆ ಕೃತಜ್ಞನಾಗಿದ್ದೇನೆ.

ನನ್ನ ಕಾಲಕ್ಕಿಂತ ಈ ಕಾಲದ ಜೀವನ ಹೆಚ್ಚು ಮುಖವಾದುದು; ಹೆಚ್ಚು ಜಟಿಲವಾದುದು; ನಾಡು ಸ್ವತಂತ್ರವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಒಂದೊಂದೂ ನಮ್ಮ ಶಕ್ತಿಗೆ ಮೀರಿದೆ. ಇಲ್ಲಿನ ಅಗತ್ಯಗಳೂ, ಒತ್ತಾಯಗಳೂ, ಪ್ರಮಾಣಗಳೂ ಬಹುದೊಡ್ಡವು..... ನಾನು ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿ, ಉಚಿತವಾಗಿ ವಿದ್ಯಾರ್ಥಿವೇತನಗಳನ್ನು ಪಡೆದು ಪುಗಸಟ್ಟೆಯಾಗಿ ಓದಿದವನು. ಈ ಮರ್ಯಾದೆಗೂ ನಾನು ಮಾಡಿರುವ ಯಾವ ಒಂದು ಮಹಾಪ್ರಬಂಧವಾಗಲಿ, ಗ್ರಂಥವಾಗಲಿ ವ್ಯವಸಾಯವಾಗಲಿ ಆಧಾರ ಅಥವಾ ಕಾರಣವಲ್ಲ . ಭಗವತ್ ಕೃಪೆ ಇಳಿದ ಹಾಗೆ ಈ ತಾಯ ಹರಕೆ ನನ್ನ ಮೇಲೆ ಸುರಿದಿದೆ.

ಸಾಹಿತ್ಯಕ್ಕೆ ಸಂಬಂಧಪಡದ ಜೀವನದ ಒಂದಂಶವೂ ಇಲ್ಲ. ಜೀವನವೆಂದರೆ ಹೊರಗಿನದು, ಒಳಗಿನದು. ಹೊರಗೂ ಒಳಗೂ ಚೊಕ್ಕವಾಗಿ, ಉದಾತ್ತವಾಗಿ, ದೃಢವಾಗಿ, ಶುಭಾಕಾಂಕ್ಷಿಯಾಗಿ ಬೆಳೆದ ಹೊರತು

ಮನುಷ್ಯನ ಬದುಕು ಸಫಲವಾಗದು. ಮಾತನ್ನು ಕುರಿತು - ಭಾಮಹನು ಹೇಳಿದ - 'ನಾನಾ ಭಾವಾ ವಿಷಯಿಣಾಂ ಅಪರ್ಯಂತ ಅರ್ಥವರ್ತಿನಾಂ ಇಯತ್ತಾ' ಎಂಬ ಮಾತು ಸಾಹಿತ್ಯದ - ಸಾಹಿತ್ಯವೇ ಏಕೆ? ಎಲ್ಲ ಕಲೆ ಶಾಸ್ತ್ರಗಳ ವ್ಯಾಪ್ತಿಗೂ ಅನ್ವಯವಾಗುವಂಥದು. ಬದುಕು ಶಕ್ತಿ ಮನುಷ್ಯನಿಗೆ ಬರುವುದು ಇಲ್ಲಿನ ಕೊಳೆಗಳನ್ನು, ಲೋಪದೋಷಗಳನ್ನು ಶುದ್ಧಿ ಮಾಡಿ ಬಾಳನ್ನು ಮೇಲೆತ್ತುವುದಕ್ಕೆ, ಧೈರ್ಯಸಾಹಸ ತಂದುಕೊಡುವುದಕ್ಕೆ, ಆತ್ಮರಚನೆಗೆ. ಯಾವುದೇ ಕಾರಣದಿಂದಾಗಲಿ ಕೊಳೆ ಕಿರುಚಾಪಲ್ಯ ಕಾರ್ಪಣ್ಯ ಸಾಹಿತ್ಯದಿಂದ ಬೆಳೆವಂತಾದರೆ, ಅಂಥ ಕಲೆ ಸಾಹಿತ್ಯ ಸ್ವಘಾತಕ್ಕೆ ಕಾರಣವಾಗುತ್ತದೆ. ಕ್ರಿಯಾಮುಖವಾದ ಮನಸ್ಸಿನ ಮತ್ತು ಹೃದಯದ ಎಲ್ಲ ವೃತ್ತಿಗಳೂ ಬಾಳಿನ ಉತ್ತಾನತೆಯ ಕಡೆಗೇ ಬೆಳೆದು 'ಅಜಸ್ರ ಸಹಸ್ರ ಚರಿತಾರ್ಥತಾಯ್' ಎಂದು ರವೀಂದ್ರನಾಥರು ಹೇಳಿರುವ ಸಾಧನೆಯನ್ನು ಕೈಗೊಳ್ಳುವ ಶ್ರದ್ಧೆ ಬೆಳೆಸುವಂತಾದರೆ ವಿಶ್ವವಿದ್ಯಾನಿಲಯಗಳ ಕಾರ್ಯ ಪೂಜ್ಯವಾಗುತ್ತದೆ, ಶುಭಸಾಧಕವಾಗುತ್ತದೆ.

ಈ ಗೌರವವನ್ನು ನನಗೆ ಉಂಟುಮಾಡಿಕೊಟ್ಟು ನಾಲ್ವರಲ್ಲಿ ನನಗೊಂದು ಸ್ಥಾನವನ್ನು ದಾನ ಮಾಡಿದ್ದಕ್ಕಾಗಿ ನನ್ನ ವಿಶ್ವವಿದ್ಯಾನಿಲಯಕ್ಕೂ ಈ ವಿದ್ವನ್ಮಂಡಲಿಗೂ, ಇಲ್ಲಿ ನೆರೆದಿರುವ ಸಮಸ್ತ ಸಜ್ಜನವೃಂದಕ್ಕೂ ಕೈಮುಗಿಯುತ್ತೇನೆ. ಪ್ರೀತಿವಿಶ್ವಾಸಗಳ ಭಾರ ಬಹುದೊಡ್ಡ ಭಾರ. ಆದರೆ ಪ್ರಿಯವಾದ್ದು, ಹಿತವಾದ್ದು. ಅದನ್ನು ಹೊತ್ತು ಅದಕ್ಕೆ ಸರಿತೂಗುವ ಪುಣ್ಯ ಅಂಶತಃ ಆದರೂ ನನ್ನ ಜೀವಕ್ಕೆ ಬಂದರೆ ನಾನು ಕೃತಾರ್ಥ. ನಮಸ್ಕಾರ.''

ಸುಸಂಸ್ಕಾರದಿಂದ ಶುದ್ಧಗೊಂಡ ಜೀವ, ವಿಶ್ವವಿದ್ಯಾನಿಲಯದಂಥ ಉನ್ನತ ವಿದ್ಯಾಸಂಸ್ಥೆ ತೋರಿಸಿದ ಆದರ ಗೌರವಗಳಿಗೆ ಯಾವ ರೀತಿ ಸ್ಪಂದಿಸಿತು, ತನ್ನ ಸಜ್ಜನಿಕೆಯನ್ನು ಮೆರೆಯಿತು ಎನ್ನುವುದಕ್ಕೆ ವಿ.ಸೀ.ಯವರ ಕೃತಜ್ಞತಾ ಭಾವದಿಂದ ಉಕ್ಕಿಬಂದ ಈ ಮಾತುಗಳು ಸಾಕ್ಷಿಯಾಗಿ ನಿಲ್ಲುತ್ತವೆ.

ಹೇಳಿ ಬರೆಯಿಸುವ ಕಲೆ

ಎಳೆತನದಲ್ಲಿ ವಿ.ಸೀ. ಅವರ ಲಿಪಿ ಬಹಳ ಅಂದವಾಗಿ, ಮುತ್ತಿನ ಸಾಲಿನಂತಿರುತ್ತಿತ್ತಂತೆ. ಅದು ಏನು ಕಾರಣವೋ ಬಹು ಹಿಂದೆಯೇ ಬೆರಳು ಮತ್ತು ಮೊಳಕೈಗಳ ಮೇಲಿನ ಹತೋಟಿ ಕಳೆದು ಅವರು ಬರೆದದ್ದನ್ನು ಓದುವುದು ಇತರರಿಗೆ ಕಷ್ಟವೇ ಆಗುತ್ತಿತ್ತು. ಕ್ರಮೇಣ ಬರೆಯುವ ಹವ್ಯಾಸವೂ ತಪ್ಪಿಹೋಗಿ ಹೇಳಿದುದನ್ನು ಬರೆದುಕೊಳ್ಳುವ ಲಿಪಿಗಾರರು ಬೇಕಾದರು. ಮೊದಲ ದಿನಗಳಲ್ಲಿ ವಿ.ಸೀ. ಯವರ ಸಹ ಅಧ್ಯಾಪಕರಾದ ಎಸ್. ಮಂಜುನಾಥ್ ಅವರು ಈ ಕೆಲಸದಲ್ಲಿ ಸಹಕರಿಸುತ್ತಿದ್ದರಂತೆ. ಆಮೇಲೆ ಸ್ವಲ್ಪ ಕಾಲ ಕೈವಾರ ರಾಜಾರಾಯರು, ಎಸ್.ಆರ್.ರಾಮಸ್ವಾಮಿಯವರು, ಸಮಯ ದೊರೆತಾಗ ಹಿರಿಯ ಮಗ ಕೃಷ್ಣಮೂರ್ತಿ ಬರವಣಿಗೆಯ ಕೆಲಸ ನಿರ್ವಹಿಸಿದರು. ಆದರೆ ಹೆಚ್ಚಿನ ಸೇವೆ ಸಲ್ಲಿಸಿದವರೆಂದರೆ ಎಂ.ವಿ. ವೆಂಕಟೇಶ ಮೂರ್ತಿಯವರು ಮತ್ತು ಅವರ ತಮ್ಮ ಸತ್ಯನಾರಾಯಣ ಅವರು.

ಬಿ. ವೆಂಕೋಬರಾಯರು

ಇವರೆಲ್ಲರಿಗೂ ಮೊದಲು, ಹೇಳಿದುದನ್ನು ಬರೆದುಕೊಳ್ಳುವ ಕೆಲಸದಲ್ಲಿ ನೆರವಾಗಿದ್ದವರು ಮಿತ್ರರಾದ ಬಿ.ವೆಂಕೋಬರಾಯರು. ಅವರು ಸರ್ಕಾರದ ಆರ್ಕಿಟೆಕ್ಟ್ ಆಗಿದ್ದರು. ಕನ್ನಡದ ಅಭಿಮಾನಿ, ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಆ ಮೊದಲ ದಿನಗಳಲ್ಲಿ ವಿಶೇಷ ಸೇವೆ ಸಲ್ಲಿಸಿದವರು. 'ಕನ್ನಡ ನುಡಿ' ಪತ್ರಿಕೆಯ ಸಂಪಾದಕರೂ ಆಗಿ ಕೆಲಸ ಮಾಡುತ್ತಿದ್ದರು. ವಿ.ಸೀ. ಆಗ ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೆಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ವೆಂಕೋಬರಾಯರು ತಮ್ಮ ಕಚೇರಿಯ ಕೆಲಸ ಮುಗಿಸಿಕೊಂಡು ಸಂಜೆ ಇಂಟರ್‌ಮೀಡಿಯೆಟ್ ಕಾಲೆಜಿಗೆ ತಮ್ಮ ಕಾರಿನಲ್ಲಿ ಬರುತ್ತಿದ್ದರು. ಅಲ್ಲಿಂದ ಇಬ್ಬರೂ ಸೆಕ್ರೆಟೇರಿಯೆಟ್ ಕ್ಲಬ್ಬಿಗೆ ಹೋಗಿ ಪುಷ್ಕಳವಾಗಿ ಉಪಾಹಾರ ಸೇವಿಸಿ ಅಲ್ಲಿಂದ ಪಬ್ಲಿಕ್ ಲೈಬ್ರರಿ ಬಳಿಯ ಸೀಳು ಹಾದಿಯ ಬಳಿ ಕಾರು ನಿಲ್ಲಿಸಿ ಅಲ್ಲಿನ ಕಲ್ಲುಬೆಂಚಿನ ಮೇಲೆ ವಿರಮಿಸುತ್ತಿದ್ದರು. 'ಕನ್ನಡ ನುಡಿ'ಯ ಆ ವಾರದ ಸಂಪಾದಕೀಯ ವಿಷಯವಾಗಿ ಚರ್ಚೆ ಬೆಳೆಯುತ್ತಿತ್ತು. ಆಮೇಲೆ ವಿ.ಸೀ. ಯವರು ಹೇಳುವುದು, ವೆಂಕೋಬರಾಯರು ಬರೆದುಕೊಳ್ಳುವುದು, ಹೀಗೆ ಕೆಲಸ ಮುಂದುವರಿಯುತ್ತಿತ್ತು. ಮಾರನೆಯ ದಿನ ಹೇಳಿಬರೆಯಿಸಿದುದರ ಕರಡು ಸಿದ್ಧವಾಗಿ, ಅದನ್ನು ತಿದ್ದಿಕೊಟ್ಟ ಮೇಲೆ ಮೂರನೆಯ ದಿನ ಅದು

ನಂದೇ ಹುವೇ ನಿಲಿಸ್ಬುಬಿಲ್ಲಿ?

ಭೀಕರಗಾಳಿ ಗುಡುಗುಮಳೆ;
ಉರಿಸಿ ಸೊಗಸುಗಾಬೇಕೆ;
ಅಕ್ಕಿಯ ಕಳಿಕೆದಲತಡಕಿ
ತೆಳ್ಳದ ತೆಳ್ಳಕೆಗಳ ನೆಳಲು;
ತಲೆಯ ಗೀರಕೆ ಸಿಳಲೆ
ಉರಿಸಿ ಸೊಗಸಿಯ ಗೆಬಾಲ
ಒಡಲು ಬಿಸು ಎದೆಕಾನನ ಹೆಣ್ಣಿಗಾಸ; ॥

ಕುಚ್ಚು ಲುಂಗಿಯಾಸವಿಲ್ಲಿ?

ಇಂದ್ರನೀಲಾಕಾಶ
ಇಳೆಯ ಚಾಕಡಿ ಬಿಟ್ಟಿದೆ;
ಮುತ್ತಿಗೆಯ ನಕ್ಷತ್ರಗಳು
ನಟ್ಟಿರುಳ ಬೆಳ್ಳಿ ಬಯಲು;
ದಿವ ಬೇಕಿ ನಿದ್ದೆಯಾಗು

'ಕನ್ನಡ ನುಡಿ'ಯಲ್ಲಿ ಅಚ್ಚಾಗಿ ಹೊರಬೀಳುತ್ತಿತ್ತು. ಹೀಗೆ ಮೊದಲಾಯಿತು ವಿ.ಸೀ. ಅವರ ಹೇಳಿ ಬರೆಯಿಸುವ ಕೆಲಸ.

ಎಂ.ವಿ. ವೆಂಕಟೇಶಮೂರ್ತಿ

ವೆಂಕಟೇಶಮೂರ್ತಿ - ಸತ್ಯನಾರಾಯಣ ಈ ಸಹೋದರರ ಮನೆಯಿದ್ದುದು ವಿ.ಸೀ. ಯವರ ಮನೆಯ ಹತ್ತಿರವೇ. ಆಗ ಅವರಿನ್ನೂ ಹುಡುಗರು; ವಿ.ಸೀ. ಯವರ ಮಕ್ಕಳ ಜೊತೆಗಾರರು. ಆದರೆ ಸಾಹಿತ್ಯದ ಮೇಲೆ ಚಿಕ್ಕಂದಿನಿಂದ ಅಭಿರುಚಿಯನ್ನು ಬೆಳೆಸಿಕೊಂಡವರು. ವಿ.ಸೀ. ಯವರ ಮನೆಗೆ ಆಗಿಂದಾಗ್ಗೆ ಬಂದು ಹೋಗುತ್ತಿದ್ದ ಹಿರಿಯ ಸಾಹಿತಿಗಳಾದ ಮಾಸ್ತಿ, ಬೇಂದ್ರೆ, ಕಾರಂತ ಅವರನ್ನು ನೋಡುವ ನೆಪದಿಂದ ವಿ.ಸೀ. ಯವರ ರೂಮಿನ ಕಿಟಕಿಯ ಮೂಲಕ ಇಣಿಕಿ ನೋಡಿ ತೃಪ್ತಿಪಟ್ಟುಕೊಳ್ಳುತ್ತಿದ್ದರು.

ಕ್ರಮೇಣ ಸಲಿಗೆ ಹೆಚ್ಚಿದಂತೆ ವೆಂಕಟೇಶಮೂರ್ತಿ ತೀರ ಆತ್ಮೀಯರಾದರು. ಕೊನೆ ಕೊನೆಗೆ ವಿ.ಸೀ. ಯವರ ಜೀವನದ ಒಂದು ಭಾಗವೇ ಆಗಿಬಿಟ್ಟರು. ಸಹೋದರರಲ್ಲಿ ಒಬ್ಬರು ತಪ್ಪಿದರೆ ಇನ್ನೊಬ್ಬರು ಸರದಿಯಮೇಲೆ ಸೇವೆಗೆ ಸಿದ್ಧರಾಗಿರುತ್ತಿದ್ದರು; ಲಿಪಿಗಾರರಾಗಿ ಅತ್ಯುತ್ತಮ ಸೇವೆಸಲ್ಲಿಸಿದರು. ಈ ಇಬ್ಬರು ಸಹೋದರರ ಸೇವೆಯನ್ನು ತಂಪುಹೊತ್ತಿನಲ್ಲಿ ನೆನೆಯಬೇಕು.

ವೆಂಕಟೇಶಮೂರ್ತಿ ಹತ್ತಿರ ಹತ್ತಿರ ಇಪ್ಪತ್ತು ವರ್ಷಕಾಲ ವಿ.ಸೀ. ಯವರ ಲೇಖನ ಕಾರ್ಯದಲ್ಲಿ ನೆರವಾದರು. ಅವರು ಹೇಳಿ ಬರೆಸಿದುದನ್ನು ಬರೆದುಕೊಂಡರು, ಬರೆದುಕೊಟ್ಟ ಪ್ರತಿಯನ್ನು ತಿದ್ದಿಯಾದ ಮೇಲೆ ಚೊಕ್ಕವಾಗಿ ಬರೆದು ಅಚ್ಚುಕೂಟಕ್ಕೆ ಸಿದ್ಧಪಡಿಸಿದರು. ಅಚ್ಚಿನ ಕರಡು ಬಂದಾಗ ಅದನ್ನು ತಿದ್ದುವ ಕೆಲಸದಲ್ಲಿ ನೆರವಾದರು. ಇವೆಲ್ಲ ಎಷ್ಟು ಎಚ್ಚರಿಕೆಯಿಂದ ಮಾಡಬೇಕಾದ ಕೆಲಸ ಎನ್ನುವುದನ್ನು ಆ ಕೆಲಸಗಳಲ್ಲಿ ಅನುಭವವಿರುವವರು ಮಾತ್ರ ಬಲ್ಲರು. ಪ್ರತಿದಿನ ಒಂದೆರಡು ಗಂಟೆಗಳ ಕಾಲವಾದರೂ ಒಟ್ಟಿಗೆ ಕಳೆಯಬೇಕಾಗುತ್ತಿತ್ತು. ಎಷ್ಟೋ ವೇಳೆ ಇಡೀ ಹಗಲೆಲ್ಲ ವಿ.ಸೀ. ಯವರ ಮನೆಯಲ್ಲೆ ಉಳಿಯಬೇಕಾದ ಪರಿಸ್ಥಿತಿ ಒದಗುತ್ತಿತ್ತು. ಇಷ್ಟೆಲ್ಲ ಸೇವೆ ಸಲ್ಲಿಸಿದರೂ ಅತ್ಯಂತ ವಿನಯದಿಂದ ವೆಂಕಟೇಶಮೂರ್ತಿ ಹೇಳುತ್ತಾರೆ :

> ''..... ಇದರಿಂದ ವಿ.ಸೀ. ಅವರ ಜೀವಿತಕಾಲದಲ್ಲಿ ಎಷ್ಟು ಪ್ರಯೋಜನವಾಯಿತೊ ಇಲ್ಲವೊ ತಿಳಿಯೆ. ಆದರೆ ನನಗಂತೂ ಒಂದು ಅಪೂರ್ವ ಜ್ಞಾನನಿಧಿ, ವಾತ್ಸಲ್ಯ ಪ್ರಪಂಚ ಸಿಕ್ಕಿದಂತಾಗಿದೆ. ನನ್ನೆಲ್ಲ ದೋಷಗಳನ್ನು ಮನ್ನಿಸಿ ಮನೆಯವರಲ್ಲಿ ಒಬ್ಬನೆಂಬಂತೆ ಪರಿಗಣಿಸಿ, ತಮ್ಮ ನಿರ್ವ್ಯಾಜ ವಿಶ್ವಾಸವನ್ನು ತೋರಿಸಿದ್ದು ಅವರಲ್ಲಿ ನನಗೆ ಗೌರವವನ್ನು ಮೂಡಿಸಿದೆ. ಎಲ್ಲಕ್ಕಿಂತ ಮಿಗಿಲಾಗಿ ಅವರಿಂದ ನನಗೆ ದೊರಕಿದ ಸಾಹಿತ್ಯ ಮತ್ತು ಜೀವನ ಶಿಕ್ಷಣ ನನ್ನ ಬದುಕಿನ ಗುರಿ ಗಮ್ಯ ಜೀವನಧ್ಯೇಯಗಳನ್ನು ರೂಪಿಸಿಕೊಳ್ಳಲು ಮಾರ್ಗದರ್ಶಿಯಾಗಿ, ನನ್ನ ನಡೆ ನುಡಿ ವ್ಯವಹಾರಗಳ

ಮೇಲೆ, ಬುದ್ಧಿ ಭಾವ ಕ್ರಿಯಾ ಪ್ರಪಂಚದ ಮೇಲೆ, ಅಚ್ಚಳಿಯದ ಪ್ರಭಾವವನ್ನು ಬೀರಿದೆ ಮಾತ್ರವಲ್ಲ, ಬದುಕಿನ ಉದ್ದಕ್ಕೂ ಬೆಳೆಯುತ್ತ ಹೋದ ಸೌಭಾಗ್ಯವಾಗಿದೆ.''

(ಸುಮನಾ, ೧೯೮೫, ಪು. ೧೨೩-೧೨೪)

ಗುರುಸಮಾನರಾದ ವಿ.ಸೀ.ಯವರ ಮೇಲೆ ಅದೆಷ್ಟು ಪ್ರೀತಿ ಅಭಿಮಾನ ಬೆಳಸಿಕೊಂಡಿದ್ದರು ಮೂರ್ತಿಯವರು ಎನ್ನುವುದು ಇದರಿಂದ ತಿಳಿಯುತ್ತದೆ. ಲಿಪಿಗಾರರಾಗಿ ಮೂರ್ತಿಯವರು ವಿ.ಸೀ.ಯವರಿಗೆ, ಆ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಸಲ್ಲಿಸಿರುವ ಸೇವೆ ಅಮೂಲ್ಯವಾದದ್ದು.

ವಿ.ಸೀ.ಯವರು ಬರಸುತ್ತಿದ್ದ ರೀತಿಯನ್ನು ಕೊಂಡಾಡುತ್ತ, ಆ ವಿಧಾನ ಒಂದು ಅನುಪಮ ಕಲೆಗಾರಿಕೆ ಎನ್ನುತ್ತಾರೆ ಮೂರ್ತಿ. ದೈವಾನುಗ್ರಹದಿಂದ, ಇಲ್ಲವೆ ಪೂರ್ವಜನ್ಮ ಸಂಸ್ಕಾರದಿಂದ ಸಿದ್ಧಿಸಿರಬೇಕು ಎನ್ನುತ್ತಾರೆ. ಸಾಮಾನ್ಯವಾಗಿ ಬೆಳಗಿನ ಹೊತ್ತು ಸ್ನಾನವಾದ ನಂತರ ಒಂದು ಒಂದೂವರೆ ಗಂಟೆಯ ಕಾಲ, ಸಂಜೆ ಇನ್ನಷ್ಟು ಹೊತ್ತು, ವಿ.ಸೀ. ಹೇಳಿ ಬರೆಯಿಸುತ್ತಿದ್ದರಂತೆ.

''... ವಿಷಯ ಯಾವುದಾದರೂ ಆಗಬಹುದು. ಬರೆದುಕೊಳ್ಳಲು ಕುಳಿತರೆ ಸಾಕು, ಯಾವುದೇ ಪೂರ್ವಸಿದ್ಧತೆ, ಅಭ್ಯಾಸ, ವ್ಯಾಸಂಗ, ಚಿಂತನೆಗಳೂ ಇಲ್ಲದೆ, ತಕ್ಷಣದ ಸ್ಫೂರ್ತಿಯಿಂದ ಎಂಬಂತೆ ವಿ.ಸೀ. ಪುಟಗಟ್ಟಲೆ ಹೇಳಿ ಬರೆಸಲು ತೊಡಗುತ್ತಾರೆ. ಏರಿಲ್ಲದೆ ತಗ್ಗಿಲ್ಲದೆ, ಅಡೆತಡೆಯಿಲ್ಲದೆ ಒಂದೇ ದನಿಯಲ್ಲಿ ಸುಸ್ಪಷ್ಟವಾಗಿ, ಕ್ರಮವಾಗಿ, ಸುವ್ಯವಸ್ಥಿತವಾಗಿ ಬರೆಯಿಸುವುದನ್ನು ಬರೆದುಕೊಳ್ಳುವಾಗೆಲ್ಲ ನಾನು ವಿಸ್ಮಯಗೊಂಡಿದ್ದೇನೆ. ಅವರ ಆ ಅದ್ಭುತ ಸೃಜನಶೀಲತೆಗೆ ಸ್ಮೃತಿಶಕ್ತಿಗೆ ಅಚ್ಚರಿಗೊಂಡಿದ್ದೇನೆ; ಅವರಲ್ಲಿ ಎಷ್ಟು ವಿಷಯ ಸಂಗ್ರಹವಾಗಿದೆಯೊ, ಅವರ ತಲೆ ಒಂದು ವಿಶ್ವಕೋಶವೆ ಆಗಿದೆಯೊ ಎನ್ನುವಷ್ಟು. 'ಬಂದಾಗ ನೀ ಬರುವೆ, ಹೋದಾಗ ಹೋಗುವೆ, ನಿನ್ನ ಮೇಲಧಿಕಾರವಿಲ್ಲವೆನಗೆ' ಎಂದು ಅವರೇ ಕಾವ್ಯದೇವಿಯನ್ನು ಕುರಿತು ಹಾಡಿದ್ದಾರಾದರೂ ತಮ್ಮ ಆ ಮಾತಿಗೆ ತಾವೇ ಒಂದು ಅಪವಾದ ಎಂಬಂತಿದ್ದಾರೆ.''

(ಪ್ರೇಮಕುಮಾರ್, 'ವಿ.ಸೀ.-೭೫', ಪು.೭೩)

ಕಾಲೇಜು ದಿನಗಳು, ಮುಂಬಯಿವಾಸ ನೆನಪುಗಳು, ಶಾಕುಂತಲ ನಾಟಕ ವಿಮರ್ಶೆ, ವಾಲ್ಮೀಕಿ ರಾಮಾಯಣ, ಮಹನೀಯರು, ಹಿರಿಯರು ಗೆಳೆಯರು ವ್ಯಕ್ತಿ ಚಿತ್ರಮಾಲಿಕೆ, ಲಘುಪ್ರಬಂಧಗಳು – ಇವುಗಳನ್ನು ನೆನಪಿನ ಮಾತ್ರದಿಂದ ಹೇಳಿ ಬರೆಯಿಸಲು ಸಾಧ್ಯವಾದೀತೆ! ನಂಬಲಸಾಧ್ಯವಾದ ನೈಪುಣ್ಯ ಇದು. ಇಂಥ ಎಲ್ಲವನ್ನೂ ಬಲ್ಲ, ಬಲ್ಲುದೆಲ್ಲವನ್ನೂ ತಿಳಿಯಹೇಳುವ ಕಲೆಗಾರಿಕೆ, ಶಕ್ತಿ, ಎಷ್ಟು ಜನಕ್ಕುಂಟು? ಈ ರಚನಾ ವಿಲಾಸವನ್ನು ಬೇರೆ ಯಾವ ಬರಹಗಾರರಲ್ಲಿ ಕಾಣಬಹುದು? ಶಾಸ್ತ್ರದ ಮೇಲಿರುವ ಅಕುಂಠಿತ ಬುದ್ಧಿ,

ಅದನ್ನು ಯಾವೊಂದು ತಡೆಯೂ ಇಲ್ಲದೆ ವಿವರಿಸಿ ಹೇಳುವ ಶಕ್ತಿ, ದೈವಾನುಗ್ರಹದಿಂದಲ್ಲದೆ ಬರಿಯ ಅಭ್ಯಾಸದಿಂದ ದೊರಕಲಾರದು.

ವಿ.ಸೀ. ಹೇಳಿ ಬರೆಯಿಸುತ್ತಿದ್ದ ವಿಧಾನದ ಇನ್ನೂ ಹೆಚ್ಚಿನ ವಿವರಗಳನ್ನು ಮೂರ್ತಿ ಒದಗಿಸಿದ್ದಾರೆ :

> ''ಒಂದು ಒಂದೂವರೆ ಗಂಟೆ ಬೆಳಗ್ಗೆ ಅಥವಾ ಸಂಜೆ ನನ್ನ ಅಥವಾ ನನ್ನ ಸೋದರನ ನೆರವು ಅವರಿಗೆ ದೊರೆಯುತ್ತದೆ. ಶನಿವಾರ-ಭಾನುವಾರಗಳಂಥ ರಜೆಯ ದಿನಗಳಲ್ಲಿ ಇನ್ನೊಂದರ್ಧ ಗಂಟೆ ಹೆಚ್ಚಿನ ಅವಕಾಶ ದೊರೆಯುವುದು. ಈ ಅವಧಿಯಲ್ಲಿಯೇ ಅವರ ಎಲ್ಲ ಸಾಹಿತ್ಯ ಕೃಷಿ ನಡೆಯಬೇಕು, ಮುಂದುವರಿಯಬೇಕು. ಅದರಲ್ಲಿ ಮೊದಲ ಐದು ಹತ್ತು ನಿಮಿಷ ಲೋಕಾಭಿರಾಮ ಸಂಭಾಷಣೆ. ಅನಂತರ ಹಿಂದಿನ ದಿನ ನಿಲ್ಲಿಸಿದ್ದಲ್ಲಿನಿಂದ ಮುಂದಕ್ಕೆ ಹೇಳಿ ಬರಸಲು ತೊಡಗುತ್ತಾರೆ. ಐದು ಹತ್ತು ಸಾಲು ಅಥವಾ ಹೆಚ್ಚೆಂದರೆ ಒಂದು ಪುಟ ಹೇಳಿ ಬರೆಸುವಷ್ಟರಲ್ಲಿ ಒಳಗಿನಿಂದ ಬೆಳಗಿನ ಉಪಾಹಾರ ಕಾಫಿ ಸಿದ್ಧವಾಗಿ ಬರುತ್ತದೆ. ಶ್ರೀಮತಿಯವರ ಪ್ರವೇಶವಾದೊಡನೆಯೇ 'ಷುರುವಾಯಿತಲ್ಲಪ್ಪ ಇನ್ನು' ಎಂದು ನನಗೆ ಮಾತ್ರ ಕೇಳಿಸುವಂತೆ ನುಡಿದು, ಶ್ರೀಮತಿಯವರನ್ನು ಪ್ರಸನ್ನಗೊಳಿಸುವ ಸಂಭಾಷಣೆಗೆ ಮನಸ್ಸು ಕೊಡುತ್ತಾರೆ.
>
> ''ಮಾತು ಮುಗಿಯುವ ವೇಳೆಗೆ ತಿಂಡಿ ತಿಂದು ಕಾಫಿ ಕುಡಿದಾಗಿರುತ್ತದೆ. ಹಿಂದೆ ಬರೆಸುತ್ತ ಹೇಳಿ ನಿಲ್ಲಿಸಿದ್ದ ಕೊನೆಯ ಸಾಲನ್ನೊ ಶಬ್ದವನ್ನೊ ಅವರೇ ನೋಡದಿದ್ದರೂ ಯಥಾವತ್ತಾಗಿ ಇನ್ನೊಮ್ಮೆ ಹೇಳಿ - ಅದು ಹೇಗೆ ನೆನಪಿರಿಸಿಕೊಂಡಿರುತ್ತಿದ್ದರೊ! - ಏನಾಗಿತ್ತಪ್ಪ? ಎಂದು ಪ್ರಶ್ನಿಸುತ್ತಾರೆ. 'ಅಷ್ಟೇ ಅಲ್ಲಿಗೇ ನಿಂತಿತ್ತು' ಎಂದು ಆ ಸಾಲನ್ನೊ ಪದವನ್ನೊ ಓದಿದರೆ ಹೌದೆ, Good' ಎಂದುಕೊಂಡು 'ಮುಂದಕ್ಕೇನು? ನನ್ನತಲೆ - ಅಷ್ಟೆ!' ಎನ್ನುವರು ಅರೆನಗುತ್ತ, ಅಂಗೈಯಿಂದ ಒಮ್ಮೆ ತಲೆಯ ಹಿಂಭಾಗವನ್ನು ಸವರಿಕೊಂಡು ಅಥವಾ ಒಂದೆರಡು ಕ್ಷಣ ಕಣ್ಣೆರಡನ್ನೂ ಮುಚ್ಚಿಕೊಂಡು ಹುಬ್ಬಿನ ನಡುವೆಯ ಮೂಗಿನ ಮೇಲುತುದಿಯನ್ನು ಕೈಬೆರಳೆರಡರ ನಡುವೆ ಒತ್ತಿಹಿಡಿದು. ಮುಂದುವರಿಸುತ್ತಾರೆ. ಮುಂದಿನ ಹತ್ತು ಹದಿನೈದು ನಿಮಿಷ ನದಿಯಲ್ಲಿ ನೀರು ಹರಿವಂತೆ ಒಂದೇ ಗತಿಯಲ್ಲಿ ಬರೆಸುತ್ತಾ ಹೋಗುತ್ತಾರೆ..... ಹತ್ತು ನಿಮಿಷಗಳಲ್ಲಿ ನನ್ನ ಅಂದಿನ ಅಲ್ಲಿಯ ಸಮಯಕ್ಕೆ ಮುಕ್ತಾಯ ಒದಗಿ ಬಂದಿತೆಂಬಂತೆ - ಜೀವನೋಪಾಯಕ್ಕಾಗಿ ಅವಲಂಬಿಸಿದ್ದ ನನ್ನ ಕೆಲಸಕ್ಕೆ ಹೊತ್ತಾಗುತ್ತದೆ; ಇನ್ನೇನು ಆ ಬಗೆಗೆ ಸೂಚನೆ ನೀಡಬೇಕು ಎಂದುಕೊಳ್ಳುತ್ತಿರುವಂತೆಯೇ ಅವರೇ ಅದನ್ನು ಅರಿತವರಂತೆ 'ನಿಮಗೆ ಹೊತ್ತಾಯಿತೇನೊ? ಟೈಮ್ ಎಷ್ಟಾಯ್ತು? ನಿಲ್ಲಿಸಿ. Get along' ಎಂದು ಮುಕ್ತಾಯ ಹಾಡುವುದು...''
>
> *(ಅದೇ, ಪು.೭೫)*

ಮರುದಿನವೋ ಅದರ ಮಾರನೆಯ ದಿನವೋ ಹೋಗಲಾಗದೆ ತಪ್ಪಿಸಿಕೊಂಡಾಗ, ಬರವಣಿಗೆಯ ಕೆಲಸ ನಿಂತುಹೋದಾಗ, ಒಮ್ಮೆಯಾದರೂ ಅವರು ತಮ್ಮನ್ನು ಪ್ರಶ್ನಿಸಲಿಲ್ಲ, ಟೀಕಿಸಲಿಲ್ಲ, ಗೊಣಗಲಿಲ್ಲ ಎಂದು ಕೃತಜ್ಞತೆ

ಯಿಂದ ನೆನೆದುಕೊಳ್ಳುತ್ತಾರೆ. ಅದಕ್ಕೆ ಬದಲಾಗಿ 'I am exploiting you people. I have no right to do so' ಎನ್ನುತ್ತಿದ್ದರಂತೆ. 'ಆ ಸೌಹಾರ್ದಕ್ಕೆ ಏನು ಕೊಟ್ಟೇನು? ..... ಆ ಜೀವದ ದೊಡ್ಡತನಕ್ಕೆ ಮೌನವಾಗಿ ಕೈಮುಗಿಯ ಬೇಕೆನ್ನಿಸುತ್ತದೆ' ಎನ್ನುತ್ತಾರೆ ಮೂರ್ತಿ.

ವಿ.ಸೀ. ಕಾಲವನ್ನೆಲ್ಲ ಹೇಳಿಬರೆಯುವುದಕ್ಕೆ ವಿನಿಯೋಗಿಸುತ್ತಿರಲಿಲ್ಲ ವಂತೆ. ಎಷ್ಟೋ ಸಲ ವಿಚಾರ ನಿನಿಮಯಕ್ಕೆ, ವಿಷಯಕ್ಕೆ ನೇರ ಸಂಬಂಧಿಸದ ಚರ್ಚೆಗೆ, ಅಥವಾ ಅದಕ್ಕೆ ಪೂರಕವಾಗಿ ಅವರು ಎಂದೊ ಏನೊ ಓದಿದುದನ್ನು ಮೂರ್ತಿಗೆ ಓದಿ ತೋರಿಸುವುದಕ್ಕೆ ವೆಚ್ಚವಾಗುತ್ತಿತ್ತಂತೆ. ಅವರದೇ ಮಾತಿನಲ್ಲಿ ಅವನ್ನು external excursions ಎಂದು ನಿರ್ದೇಶಿಸುತ್ತಾರೆ. ಹೀಗೆ ಹೇಳಿ ಬರಸುತ್ತಿದ್ದ ವಿಷಯ ಹಲವು ಸಲ ಅಲ್ಲಲ್ಲಿಯೇ ನಿಂತುಹೋದಾಗ — 'ಅಯ್ಯೋ ಬಿಡಿರಿ. ನನ್ನದೇನು ಮಹಾ. ಹಾಳಾಗಲಿ ಬಿಡಿ' ಎಂದೊ, 'ಇದಿಲ್ಲದೆ ಹೋದರೆ ಯಾವ ದೇವರು ಅಳುತ್ತಾನೆ. ಯಾರಿಗೆ ನಷ್ಟ' ಎಂದೊ, ಬಿಟ್ಟಲ್ಲೆ ಬಿಡ್ತು ವಿಠಲಾಚಾರ್ಯನ ಪುರಾಣ ಎಂಬಂತೆ ನನ್ನ ಬರವಣಿಗೆ, ಅದಕ್ಕೇನಂತೆ ನಿಲ್ಲಿಸಿ ಪರವಾಗಿಲ್ಲ' ಎಂದು ಹೇಳಿ ಬರೆಸುತ್ತಿದ್ದುದನ್ನು ಅಲ್ಲಿಗೇ ನಿಲ್ಲಿಸುತ್ತಿದ್ದರಂತೆ. ಮೂರ್ತಿ ಹೇಳುತ್ತಾರೆ :

> ''ಇದರಿಂದ ಅವರ ಕೆಲಸ ಕುಂಠಿತವಾದರೂ, ವಿಷಯದ, ವಸ್ತು ಸತ್ಯದ ಅದೆಷ್ಟು ಮುಖಗಳು, ದೃಷ್ಟಿ, ರೀತಿ, ನೀತಿ, ವ್ಯತ್ಯಾಸಗಳ, ಇತಿಮಿತಿಗಳು, ಅರ್ಥಮೌಲ್ಯಗಳು ದೃಗ್ಗೋಚರವಾಗಿ, ಒಟ್ಟು ಜ್ಞಾನ ಪ್ರಪಂಚದ ಆಳ ವಿಸ್ತಾರ ಉನ್ನತಿಗಳ ಪರಿಚಯ ನನಗಾಗುವಂತಾಗಿ ಒಂದು ಮಹೋಪಕಾರವೇ ಆಗುತ್ತಿರುತ್ತದೆ. ವಿಷಯದ ಬಹುಮುಖ ದರ್ಶನವೇ ಕಣ್ಮುಂದೆ ಕಟ್ಟಿದಂತಾಗುತ್ತದೆ. ರಾಮಾಯಣ, ಪಂಪ, ಶಾಕುಂತಲ ಇವೇ ಮೊದಲಾದ ಅವರ ವಿಮರ್ಶನ ಕೃತಿಗಳ ರೂಪಾಂತರ ಕಾರ್ಯದಲ್ಲಿ ನೆರವಾದಾಗ, ವಾಲ್ಮೀಕಿ, ಪಂಪ ಮತ್ತು ಕಾಳಿದಾಸರ ಕಾವ್ಯಗಳ ಪೂರ್ತಿ ಪರಿಚಯವನ್ನೇ ಅವರು ಒದಗಿಸಿದರೆನ್ನಬೇಕು. ಆ ಕೃತಿಗಳಲ್ಲಿ ಅವರು ಹೆಜ್ಜೆ ಹೆಜ್ಜೆಗೂ ಕಾಣಿಸಿದ ಅರ್ಥಮೌಲ್ಯ, ಪಾತ್ರಗಳ ಹಿರಿಮೆ, ರಚನಾ ಸುಭಗತೆ, ಉಕ್ತಿವಿಲಾಸ, ಛಂದೋವೈವಿಧ್ಯ, ಪದ ಲಾಲಿತ್ಯ, ಕಾವ್ಯಸೌಂದರ್ಯವನ್ನು ವ್ಯಕ್ತಪಡಿಸುವ ಅವರ ರೀತಿ ನನ್ನ ನುಡಿಗೆ ನಿಲುಕದ್ದು; ಅನುಭವದ ಸವಿನೆನಪು ಮರೆಯಲಾಗದ್ದು.
>
> (ಅದೇ, ಪು. ೭೨)

ಈ ಪ್ರಸಂಗವನ್ನು ಎಷ್ಟು ಬೆಳೆಸಿದರೂ ಸಾಲದು ಎನ್ನಿಸುತ್ತದೆ. ಹೇಳಿ ಬರೆಯಿಸುವ ವಿಧಾನವನ್ನು ಕಲೆಯಾಗಿ ಮಾರ್ಪಡಿಸಿದವರು ವಿ.ಸೀ. ಮೂರ್ತಿ ಯವರಂಥ ಸಜ್ಜನರ ಸ್ನೇಹ ಸಹಕಾರಗಳು ಯಾರಿಗೇ ಆಗಲಿ ಸುಲಭಕ್ಕೆ ದೊರೆಯುವಂಥವಲ್ಲ. ವಿ.ಸೀ.ಯವರಿಗೆ ಇಂಥ ಸಹಾಯ ದೊರೆತು ಅವರ ಸಾಹಿತ್ಯಕೃಷಿ ತಡೆಯಿಲ್ಲದೆ ಮುಂದುವರಿಯಲು ಸಾಧ್ಯವಾಯಿತು. ಈ ಬಗೆಯ

ವ್ಯವಸಾಯ ಎಷ್ಟೊಂದು ಉತ್ತಮ ಫಲವನ್ನು ಕೊಟ್ಟಿದೆಯೆನ್ನುವುದನ್ನು ನೆನೆದೇ ಸಂತೋಷದಿಂದ ನಾವು ಪುಲಕಿತರಾಗುತ್ತೇವೆ.

ಎಸ್.ಆರ್. ರಾಮಸ್ವಾಮಿ

ಈ ಸಂದರ್ಭದಲ್ಲಿ ನಿರ್ವ್ಯಾಜ ಸೇವೆ ಸಲ್ಲಿಸಿ ಅನೇಕ ಉದ್ಗ್ರಂಥಗಳನ್ನು ಕನ್ನಡಿಗರಿಗೆ ದೊರಕಿಸಿಕೊಟ್ಟಿರುವ ಮಹನೀಯವ್ಯಕ್ತಿ ಎಸ್.ಆರ್.ರಾಮಸ್ವಾಮಿಯವರನ್ನು ಇಲ್ಲಿ ನೆನಸಿಕೊಳ್ಳಬೇಕು. ವೆಂಕಟೇಶಮೂರ್ತಿಯವರು ಹೇಗೆ ವಿ.ಸೀ.ಯವರ ಬೆಂಬಲಿಗರಾಗಿ ಅವರ ಕೃತಿಗಳನ್ನು ಬರಹರೂಪಕ್ಕಿಳಿಸಿದರೋ ಅದೇ ರೀತಿ ರಾಮಸ್ವಾಮಿಯವರೂ ಸಹ ಪೂಜ್ಯ ಡಿ.ವಿ.ಜಿ. ಯವರ ಮತ್ತು ವಿ.ಸೀ.ಯವರ ಕೃತಿಗಳು ನಮ್ಮ ಕೈಸೇರುವಂತೆ ಮಾಡಲು ವಿಶೇಷ ಶ್ರಮವಹಿಸಿದರು. ಅವರಿಂದಾದ ಸೇವೆ ಎಷ್ಟು ಉತ್ತಮವಾದದ್ದು, ಸ್ವಾರ್ಥರಹಿತವಾದದ್ದು, ಕರ್ತವ್ಯನಿಷ್ಠವಾದದ್ದು, ಎನ್ನುವುದನ್ನು ಡಿ.ವಿ.ಜಿ.ಯವರ ವಾಣಿಯಲ್ಲೇ ಕೇಳಬೇಕು :

> ''ಆರಂಭದಿಂದ ನನ್ನ ಕಣ್ಣೂ ಕೈಯೂ ಆಗಿದ್ದವರು ಚಿ॥ ಎಸ್.ಆರ್. ರಾಮಸ್ವಾಮಿಯವರು. ಟೇಪ್ ರಿಕಾರ್ಡರಿನಿಂದ ಹಸ್ತಪ್ರತಿ ಬರೆದವರು ಅವರು; ಅದನ್ನು ನನ್ನಿಂದ ತಿದ್ದಿಸಿ ಪತ್ರಿಕೆಗೆ ಕೊಟ್ಟವರು ಅವರು; ಬಳಿಕ ಆ ಲೇಖನಮಾಲೆಯನ್ನು ಪುಸ್ತಕ ಮುದ್ರಣಕ್ಕಾಗಿ ಸಿದ್ಧ ಪಡಿಸಿದವರು ಅವರು; ಪರಿಷ್ಕರಣಾವಸರದಲ್ಲಿ ನನಗೆ ಬೇಕಾಗಿದ್ದ ಉದಾಹರಣವಾಕ್ಯಗಳನ್ನು ಮೂಲಗ್ರಂಥಗಳಿಂದ ಹುಡುಕಿ ತೆಗೆದು, ನನಗೆ ಮರೆತುಹೋಗಿದ್ದನ್ನು ಜ್ಞಾಪಕಕ್ಕೆ ತಂದು, ಬರವಣಿಗೆಯಲ್ಲಿ ತೊಡಕು ಕಂಡಾಗ ಸಲಹೆ ಕೊಟ್ಟು, ಜಾಗರೂಕ ಪರಿಶ್ರಮದಿಂದ ವಿಷಯಸೂಚಿಕೆಯನ್ನು ತಯಾರಿಸಿ, ಈ ಕಾರ್ಯದ ಪ್ರತಿಯೊಂದು ಘಟ್ಟದಲ್ಲಿಯೂ ಪ್ರತಿಯೊಂದು ಭಾಗದಲ್ಲಿಯೂ, ಅದು ತಮ್ಮದೇ ಎಂಬಂತೆ ಅಭಿಮಾನೋತ್ಸಾಹಗಳನ್ನು ತೋರಿ, ನನ್ನ ಆತುರ ಅಸಹನೆಗಳಿಗೆ ಹೊಂದಿಕೊಂಡು, ಮಾಡಬೇಕಾದದ್ದನ್ನು ಪೂರ್ವಾಲೋಚನೆಯಿಂದ ಮಾಡಿಟ್ಟು ಕೆಲಸವನ್ನು ಹಗುರಮಾಡಿಕೊಟ್ಟವರು ಶ್ರೀ ಎಸ್.ಆರ್. ರಾಮಸ್ವಾಮಿ. ಇಂಥ ಅವ್ಯಾಜವೂ ಅಂತಃಕರಣಪೂರ್ವಕವೂ ಆದ ಅಭಿಮಾನಕ್ಕೆ ಬೆಲೆ ಕಟ್ಟಲಾದೀತೆ? ಅವರಿಗೆ ನನ್ನ ಪ್ರೀತಿಯ ಆಶೀರ್ವಾದಗಳು.''
>
> *(ಡಿ.ವಿ.ಜಿ. 'ಭಗವದ್ಗೀತಾ ತಾತ್ಪರ್ಯ', ಮುನ್ನುಡಿ, ಪು.೪)*

'ಸತಾಂ ಸದ್ಭಿಃ ಸಂಗಃ ಕಥಮಪಿ ಹಿ ಪುಣ್ಯೇನ ಭವತಿ' *(ಭವಭೂತಿ, ಉತ್ತರರಾಮಚರಿತ)* ಈ ಬಗೆಯ ಸೇವೆ ಭಗವತ್ಕೃಪೆಯಿಂದ ಪುಣ್ಯಶಾಲಿಗಳಾದವರಿಗೆ ಮಾತ್ರ ದೊರೆತೀತು. ಇಂಥ ಮಹನೀಯ ವ್ಯಕ್ತಿಗಳು ನಮ್ಮೊಂದಿಗಿರುವುದು ನಮ್ಮ ಸುಕೃತ. ತಮ್ಮ ದಿನದಿನದ ಅಗತ್ಯಗಳು ಏನಿದ್ದರೂ ಅವೆಲ್ಲವನ್ನೂ ಮರೆತು ಸಾಹಿತ್ಯ ಪರಿಚಾರಿಕೆಯನ್ನೇ ಮುಖ್ಯ ಗುರಿಯಾಗಿಟ್ಟು

ಕೊಂಡು, ತಾವು ಹಿರಿಯರೆಂದು ಮೆಚ್ಚಿಕೊಂಡವರ ಸೇವೆಯನ್ನು ತ್ರಿಕರಣ ಪೂರ್ವಕವಾಗಿ ಮಾಡಿದ ಈ ಮಹಾನುಭಾವರ ಸೇವೆಯನ್ನು ಎಷ್ಟು ಕೊಂಡಾಡಿದರೂ ಸಾಲದು.

ಕೈಲಾಸಂ ಕೃತಿಗಳನ್ನು ಇಡೀ ರಾತ್ರಿ ನಿದ್ದೆಗೆಟ್ಟು ಬರಹಕ್ಕಿಳಿಸಿದ ಕೆ.ವಿ. ಅಯ್ಯರ್ ಅವರು, ಬಿ.ಎಸ್. ರಾಮರಾಯರು; ಡಿ.ವಿ.ಜಿ. ವ್ಯಾಧಿಗ್ರಸ್ತರಾಗಿ ಆಸ್ಪತ್ರೆ ಸೇರಿದಾಗ ಅವರ ಶುಶ್ರೂಷೆಗೆ ನಿಂತು, ಅವರು ಹೇಳಿದುದನ್ನು ಬರವಣಿಗೆಗೆ ಇಳಿಸಲು ನೆರವಾದ ಮಗ ಬಿ.ಜಿ.ಎಲ್. ಸ್ವಾಮಿ, ಡಿ.ಆರ್. ವೆಂಕಟ ರಮಣನ್; ದೃಷ್ಟಿ ಕಳೆದುಕೊಂಡು ಅಸಹಾಯಕರಾದ ವಿದ್ವಾಂಸ ಸೇಡಿಯಾಪು ಕೃಷ್ಣಭಟ್ಟರ ವಿಚಾರಲಹರಿಯನ್ನು ಬರವಣಿಗೆಗೆ ಇಳಿಸಿ ಕೊಟ್ಟು ಮಹೋಪಕಾರ ಮಾಡಿದ ಭಟ್ಟರ ಮೊಮ್ಮಗಳು ಕುಮಾರಿ ಹೇಮಲತಾ ಮತ್ತು ತರುಣ ಸಂಶೋಧಕರಾದ ಪದ್ಮನಾಭ ಕೈಕುಣ್ಣಾಯ - ಇವರುಗಳನ್ನೂ ಈ ಸಂದರ್ಭದಲ್ಲಿ ನೆನಸಿಕೊಂಡು ನಮ್ಮ ಕೃತಜ್ಞತೆಯನ್ನು ಸಲ್ಲಿಸಬೇಕು.

ವಿ.ಸೀ. ಸಂಪದ

ವೆಂಕಟೇಶಮೂರ್ತಿ ಸೋದರರು ವಿ.ಸೀ. ಜೀವಿಸಿದ್ದಾಗ ಅಮೂಲ್ಯವಾದ ಸಾರಸ್ವತ ಸೇವೆಯನ್ನು ಸಲ್ಲಿಸಿದ್ದೇ ಅಲ್ಲದೆ ಅವರು ತೀರಿಕೊಂಡ ಮೇಲೆಯೂ 'ವಿ.ಸೀ. ಸಂಪದ' ಎಂಬ ಹೆಸರಿನಲ್ಲಿ ವಿ.ಸೀ. ಸಂಸ್ಮರಣ ವೇದಿಕೆಯನ್ನು ಸ್ಥಾಪಿಸಿ, ಅವರ ಕೃತಿಗಳ ಸಮಗ್ರ ಸಂಪುಟಗಳನ್ನು ಹೊರತರುವ ಯೋಜನೆ ಹಾಕಿಕೊಂಡು, ಈಗಾಗಲೆ ಹಲವಾರು ಬೃಹತ್ ಸಂಪುಟಗಳನ್ನು ಹೊರತಂದು ಕೃತಾರ್ಥರಾಗಿದ್ದಾರೆ. ಸ್ತುತ್ಯವಾದ ಈ ಪ್ರಯತ್ನವನ್ನು ಸ್ವಾಗತಿಸುತ್ತ ವಿದ್ಯಾಲಂಕಾರ ಎಸ್.ಕೆ. ರಾಮಚಂದ್ರರಾಯರು ಹೇಳಿದ ನಾಲ್ಕು ಮಾತುಗಳನ್ನು ಇಲ್ಲಿ ಉದ್ಧರಿಸಲು ನನಗೆ ಸಂತೋಷವಾಗುತ್ತದೆ.

> ''ಹಿಂದಿನವರಿಗಿಂತ ಇಂದಿನವರೂ, ಇಂದಿನವರಿಗಿಂತ ಮುಂದಿನವರೂ ಹೆಚ್ಚು ಹೆಚ್ಚು ಕೆಲಸವನ್ನೇ ಮಾಡಿಯಾರು. ಆದರೆ ಇವರೆಲ್ಲ ಮಾಡಿದುದನ್ನು ಗುರುತಿಸುವವರಿಗೆ ಬೆಲೆಯಿಲ್ಲವೆ? ವಿ.ಸೀ.ಯವರು ದೊಡ್ಡವರು ; ಅದರಲ್ಲೇನು ಎರಡು ಮಾತಿಲ್ಲ. ಆದರೆ ಅವರು ಕಣ್ಮರೆಯಾದ ಮೇಲೂ ಅವರ ದೊಡ್ಡಸ್ತಿಕೆಯನ್ನು ತಮ್ಮ ಹೃದಯದ ತುಂಬ ತುಂಬಿಕೊಂಡು ಅವರ ನೆನಪನ್ನು ಉಳಿಸಲು ಹವಣಿಸುತ್ತಿರುವ ಈ ಗೆಳೆಯರ ದೊಡ್ಡತನ ಕಡಿಮೆಯಾದುದೇನಲ್ಲ. ನಾಡಿನ ಸಂಸ್ಕೃತಿ ಹಿಗ್ಗುವುದು ಇಂಥವರಿಂದಲೇ.''
>
> *(ರಾಮಚಂದ್ರರಾವ್ ೧೯೯೧, 'ಪ್ರತಿಭೆ ಎಂದರೇನು?' ಪು. ೮)*

ಇಂಥವರ ಸಂತತಿ ಸಾವಿರವಾಗಲಿ, ಸಾಧನ ಸಂಪತ್ತು ಬೆಳೆಯಲಿ ಎಂದು ಹಾರೈಸೋಣ.

ಕವಿ ವಿ.ಸೀ.

ಮೃದುಪದಗತಿಯಿಂ, ರಸಭಾ
ವದ ಪೆರ್ಚಿಂ, ಪಣ್ಯವನಿತೆವೊಲ್, ಕೃತಿ ಸೌಂದ
ರ್ಯದ ಚಾತುರ್ಯದ ಕಣಿಯೆನೆ
ವಿದಗ್ಧ ಬುಧಜನರ ಮನಮನಲೆಯಲಿ ವೇಡಾ

ವಿದಗ್ಧ ಬುಧಜನರ ಮನಸ್ಸನ್ನು ರಂಜಿಸಬೇಕಾದರೆ ಕಾವ್ಯ ಯಾವ ಲಕ್ಷಣ ಗಳನ್ನೊಳಗೊಂಡಿರಬೇಕು ಎನ್ನುವುದನ್ನು ಮಹಾಕವಿ ಪಂಪ ತನ್ನದೇ ಆದ ಬೆಡ ಗಿನ ರೀತಿಯಲ್ಲಿ ಸೂಚಿಸಿದ್ದಾನೆ. ಈ ಅಳತೆಯಿಂದ ತೂಗಿನೋಡಿದರೆ ಎಷ್ಟು ಜನ ನಮ್ಮ ಕವಿಗಳು ತೇರ್ಗಡೆಯಾಗುವರೊ? ಕೃತಿವಿಮರ್ಶೆ ಮಾಡುವ ಸಾಹಸಕ್ಕೆ ಕೈಹಾಕುವವರೇ ನಮ್ಮಲ್ಲಿ ಕಡಿಮೆ. ಕವನಗಳಲ್ಲಿನ ಸ್ವಾರಸ್ಯವನ್ನು ತಿಳಿಸಿ ಕೊಡಲು ಉತ್ತಮದರ್ಜೆಯ ವಿಮರ್ಶಕರು ಬೇಕು. ಕಾವ್ಯ ರಚನೆಯಾದ ಸಂದರ್ಭ ಯಾವುದು, ಸನ್ನಿವೇಶ ಎಂಥದು ಎನ್ನುವ ವಿವರ ತಿಳಿಯಬೇಕು. ಕವನ ಹಾಡುವಂತಿದ್ದರೆ ಯಾವ ಧಾಟಿಯಲ್ಲಿ, ಯಾವ ರಾಗದಲ್ಲಿ ಹಾಡಿದರೆ ಉತ್ತಮ ಎನ್ನುವುದರ ಸೂಚನೆ ದೊರೆಯಬೇಕು. ಆಗ ಮಾತ್ರ ರಸಾನುಭವ ಸಾಧ್ಯ.

ವಿ.ಸೀ.ಯವರದು ಬಹಳ ಸಂಕೋಚ ಪ್ರವೃತ್ತಿ. ಇತರರ ಕೃತಿಗಳನ್ನು ವಾಚನಮಾಡುತ್ತಿದ್ದರೂ ಕಾವ್ಯವಾಚನದಲ್ಲಿ ಅದ್ವಿತೀಯ ಯಶಸ್ಸು ಪಡೆದಿ ದ್ದರೂ, ತಮ್ಮದೇ ಆದ ಕವನಗಳನ್ನು ಸಭೆಗಳಲ್ಲಿ ಎಂದೂ ಹಾಡಿ ತೋರಿಸಲು ಮುಂದಾಗುತ್ತಿರಲಿಲ್ಲ. ಕೃತಿ ರಚನೆಯ ಸಂದರ್ಭ ಎಂಥದು ಎನ್ನುವುದರ ಸೂಚನೆ ಕೂಡ ಇಲ್ಲ. ಕೊನೆಗೆ ಕವನ ಬರೆದ ಕಾಲ ಯಾವುದು ಎನ್ನುವುದರ ಗುರುತೂ ನಮಗೆ ದೊರೆಯುವುದಿಲ್ಲ. ಅವರ ಕವನಗಳ ರಸಾಸ್ವಾದನ ಮಾಡು ವುದರಲ್ಲಿ ಇದೊಂದು ದೊಡ್ಡ ಕೊರತೆ.

ತಮ್ಮ ಶಕ್ತಿಯಲ್ಲಿ ತಮಗೇ ವಿಶ್ವಾಸವಿಲ್ಲವೇನೊ ಎನ್ನುವ ರೀತಿಯಲ್ಲಿ ವಿ.ಸೀ. ನಡೆದುಕೊಳ್ಳುವುದನ್ನು ಈಗಾಗಲೆ ಪ್ರಸ್ತಾಪಿಸಿಯಾಗಿದೆ. ಈ ಆತ್ಮ ಗುಣಾವಮಾನ ಚರ್ಯೆ ಕೆಲವರಲ್ಲಿ ಸ್ವಲ್ಪವಾಗಿಯೋ ಅತಿಯಾಗಿಯೋ ಕಾಣು ತ್ತದೆ. ತಮ್ಮ ಮೊದಲ ಕವಿತೆಗಳನ್ನು ಕುರಿತು ವಿ.ಸೀ. ''ಕನ್ನಡ ಕಾವ್ಯಸಂಪತ್ತು ಬೆಳೆದಿದೆ. ಅವುಗಳಲ್ಲಿ ಉತ್ತಮವಾದವುಗಳ ಎತ್ತರಕ್ಕೆ ಅಥವಾ ಗುಣಸಂಪತ್ತಿಗೆ ಇದು ತೂಗೀತು ಎಂಬ ವಿಶ್ವಾಸ ನನಗಿಲ್ಲ. ಆಟದಲ್ಲಿ ನಾನೂ ನನ್ನ ಕಾಲದಲ್ಲಿ

ಭಾಗವಹಿಸಿದವನು ಎಂದುಕೊಳ್ಳಲು ಸಂತೋಷ'' ಎನ್ನುತ್ತಾರೆ. ಇನ್ನೊಂದು ಕಡೆ 'ಅರಲು ಬರಲು' ಕವನಗಳನ್ನು ಅರ್ಪಿಸುತ್ತ ''ಇಲ್ಲಿನ ಯಾವುದು ಅರಲಂತಿದೆಯೋ ಅಂಥದನ್ನು ಹೀಗೆ ಭಾವಿಸಬಹುದು; ಉಳಿದುದು ನನ್ನಂತೆಯೇ ಬರಲು'' ಎನ್ನುತ್ತಾರೆ. ಕವಿಯೇ ತನ್ನ ಕೃತಿಗಳ ಬಗೆಗೆ ಈ ಬಗೆಯ ನಿರಭಿಮಾನ ತಾಳಿದರೆ ಇತರರು ಅವುಗಳನ್ನು ಮೆಚ್ಚುವುದಾದರೂ ಹೇಗೆ? ವಿ.ಸೀ.ಯವರ ಕವನಗಳು ಹೆಚ್ಚು ಜನಪ್ರಿಯವಾಗದೆಹೋದುದಕ್ಕೆ ಈ ಆತ್ಮಾವಮಾನವೂ ಒಂದು ಕಾರಣವಿರಬಹುದೆಂದು ತೋರುತ್ತದೆ.

ಇತರರು ಮೆಚ್ಚುತ್ತಾರೆ ಎಂದು ಕಾವ್ಯರಚನೆಗೆ ವಿ.ಸೀ.ಯವರು ಕೈಹಾಕಲಿಲ್ಲ. ಕಾವ್ಯ ರಚನೆಯಲ್ಲಿ ಅವರು ತೊಡಗಿದ್ದು ಆತ್ಮನಿವೇದನಕ್ಕಾಗಿ, ಅನುಭವ ನಿರೂಪಣಕ್ಕಾಗಿ.

ಕವನಗಳ ಬೆಲೆ ಏನೊ ಎಷ್ಟೊ? ಬೆಲೆಕಟ್ಟುವ ಕೆಲಸವನ್ನು ಓದುಗರಿಗೆ ಬಿಡಬಾರದೇಕೆ? ತಮಗೆ ತಾವೇ ಅವುಗಳನ್ನು 'ಬರಲು' ಎಂದು ಕರೆಯುವುದೇಕೆ? ಇಂಥ ಕೀಳೆಣಿಕೆ ಕವಿಯಾದವನಿಗೆ ತರವೆ? ತಮ್ಮ ಕವನಗಳಲ್ಲಿ 'ತುಂಬ ಕಲ್ಪನಾವಿಲಾಸ ಇಲ್ಲವಾದರೂ ಒಂದು ಮನಸ್ಸಿನ ಆಸೆ, ಆಕಾಂಕ್ಷೆ, ನಿಲವು ಅದರ ವಾಣಿ ಇಡಲು ಯತ್ನಿಸಿದೆ' ಎಂದು ವಿ.ಸೀ. ಒಂದು ಕಡೆ ತಮ್ಮ ಕವನಗಳ ಬಗ್ಗೆ ಹೇಳಿಕೊಂಡಿದ್ದಾರೆ.

'ಮನಸ್ಸಿನ ಒಂದು ಸ್ಥಿತಿ, ಒದಗಿದ ಯಾವುದೋ ಸನ್ನಿವೇಶ, ಒಲಿದ ಒಂದು ಆವರಣ, ಬಂದ ಒಂದು ಬೇಸರ, ಹುರುಡು, ವಿಜೃಂಭಣ, ಆವೇಗ, ಸಂದೇಹ, ಸೊರಗು ಮುಂತಾದುವನ್ನು ಭಾವಗೀತವು ಒಂದು ವಿಶೇಷ ರೀತಿಯಲ್ಲಿ ಪ್ರತಿಬಿಂಬಿಸುತ್ತದೆ' ಎನ್ನುತ್ತಾರೆ ವಿ.ಸೀ. ಆದರೆ, ಆ ಸನ್ನಿವೇಶದ ಸ್ಥೂಲ ರೂಪವೂ ಓದುಗನ ಮುಂದಿರದೆ ಹೋದರೆ ಅವನು ಕವಿತೆಯ ಅಂತರಂಗದ ಭಾವವನ್ನು ಹೇಗೆ ಗ್ರಹಿಸಿಯಾನು?

ವಿ.ಸೀ.ಯವರ ಕವನಗಳ ಮೊದಲ ಸಂಕಲನ ಗೀತರೂಪದಲ್ಲಿದ್ದರೂ, ಅವುಗಳನ್ನು ಯಾವ ರಾಗದಲ್ಲಿ ಹಾಡಬೇಕು ಎನ್ನುವುದರ ಸೂಚನೆ ಇದ್ದರೂ, ಯಾರೂ ಆ ರಾಗಗಳಲ್ಲಿ ಹಾಡಿ ತೋರಿಸಿದವರಿಲ್ಲ, ಜನರನ್ನು ಮೆಚ್ಚಿಸಿದವರಿಲ್ಲ. ಆಗೊಮ್ಮೆ ಈಗೊಮ್ಮೆ ಆಕಾಶವಾಣಿಯ ಕೇಂದ್ರಗಳಿಂದ ಕೆಲವು ಹಾಡುಗಳು ಕೇಳಿಬರುವುದುಂಟು. ಆದರೆ ಬಾಜಾಬಜಂತ್ರಿಗಳ ಹಿಮ್ಮೇಳಗಳ ಗದ್ದಲದಲ್ಲಿ ಕವಿಯ ಭಾವ ಏನಿತ್ತು ಎನ್ನುವುದನ್ನು ಗುರುತಿಸುವುದೇ ಕಷ್ಟವಾಗುತ್ತದೆ. ಹೀಗಾಗಿ ವಿ.ಸೀ.ಯವರ ಬಹುಮಟ್ಟಿನ ಗೀತಗಳು ಹೆಚ್ಚು ಜನಪ್ರಿಯವಾಗದೆ ಅಜ್ಞಾತವಾಗಿ ಉಳಿದುಬಿಟ್ಟಿವೆಯೆಂದು ತೋರುತ್ತದೆ.

ವಿ.ಸೀ.ಯವರ ಕಾವ್ಯಗಳ ವಿಷಯವಾಗಿ ಆಕಾಶವಾಣಿ ಮೈಸೂರು ಕೇಂದ್ರದಲ್ಲಿ ಭಾಷಣಮಾಡುತ್ತ ಹಾ.ಮಾ.ನಾಯಕರು ಹೇಳಿರುವ ಈ ಮಾತುಗಳನ್ನು ಗಮನಿಸಬೇಕು :

''ನಮ್ಮ ನಾಡಿನ ಸುಪ್ರಸಿದ್ಧ ಕವಿಗಳಲ್ಲಿ ವಿ.ಸೀ.ಯವರೊಬ್ಬರು. ಅದರೆ ಅವರ ಕವಿತೆಗಳಲ್ಲಿ ಪುಟ್ಟಪ್ಪನವರ ಕವಿತೆಗಳಲ್ಲಿ ಕಂಡುಬರುವ ನಿಸರ್ಗವಿಲಾಸ, ಬೇಂದ್ರೆಯವರ ಕವಿತೆಗಳಲ್ಲಿ ಕಂಡುಬರುವ ಜನ ಜೀವನದ ಗತ್ತು, ಪು.ತಿ. ನರಸಿಂಹಾಚಾರ್ಯರ ಕವಿತೆಗಳಲ್ಲಿ ಮೈವೆತ್ತು ನಿಂತ ವೇದಾಂತಿಯ ರಸದೃಷ್ಟಿ ಕಂಡುಬರುವುದಿಲ್ಲ. ಅವರು ಸೂಕ್ಷ್ಮ ಸಂವೇದಿಯಾದ ಕವಿ. ಪದಪದಗಳನ್ನು ಅರ್ಥಮಯವಾಗಿ, ನಾದ ಮಯವಾಗಿ ಜೋಡಿಸುವ ಕುಶಲಶಿಲ್ಪಿ. ಮೃದುಮಧುರವಾದ ಭಾವ ಬಂಧಗಳು, ನಾಜೂಕಿನಿಂದ ಜೋಡಿಸಿದ ಕೋಮಲವಾದ ಪದ ಸಂಪತ್ತು, ಹೃದಯದಿಂದ ಹೃದಯವನ್ನು ಕೂಡುವ ಸೂಕ್ಷ್ಮ ಸನ್ನಿವೇಶ ಗಳು ವಿ.ಸೀ.ಯವರ ಕವಿತೆಗಳಲ್ಲಿನ ಜೀವಂತ ಗುಣ.''

'ಕನ್ನಡ ಸಾಹಿತ್ಯಲೋಕದ ತಾಪಮಾನವನ್ನು ಅಳೆಯುವ ಮಾನದಂಡ' ದಂತಿರುವ ಹಾ.ಮಾ.ನಾಯಕರ ಈ ಮಾತುಗಳಿಗೆ ವಿಶೇಷ ಬೆಲೆಯುಂಟು.

ಹಳೆಯದೊಂದು ನೆನಪು

ಬಹಳ ಹಿಂದಿನ ದಿನದ ನೆನಪು - ಸುಮಾರು ಐವತ್ತು ವರ್ಷಗಳಷ್ಟು ಹಿಂದಿನದು. ಮಲೆನಾಡ ಮದುವೆಯೊಂದಕ್ಕೆ ಹೋದ ಸಂದರ್ಭ. ಮಲೆನಾಡಿನ ಸಂಪ್ರದಾಯದಂತೆ ಲಗ್ನದ ಕಾಲ ನಡುರಾತ್ರಿಯ ಹೊತ್ತು. ಮದುವೆ ದಿನದ ರಾತ್ರಿಯೊ, ಅದರ ಮಾರನೆಯ ದಿನವೊ ನನಗೆ ಈಗ ಸರಿಯಾಗಿ ನೆನಪಿಲ್ಲ, ಸುಶ್ರಾವ್ಯವಾಗಿ, ಸುಮಧುರವಾಗಿ, ಬಹು ಇಂಪಾಗಿ ಹೆಣ್ಣೊಪ್ಪಿಸುವ ಹಾಡೊಂ ದನ್ನು ತರುಣರೊಬ್ಬರು ಹಾಡಿದರು. ಆ ಮಧುರಮಯ ರಾತ್ರಿಯ ಹೊತ್ತಿನಲ್ಲಿ ತೇಲಿಬಂದ ಆ ಹಾಡಿನ ಸಾಲುಗಳು ಆಗ ಇನ್ನೂ ತರುಣನಾದ ನನ್ನ ಮನಸ್ಸನ್ನು ಸೆರೆಹಿಡಿದು ಯಾವುದೋ ಬೇರೊಂದು ಲೋಕಕ್ಕೆ ಕರೆದೊಯ್ದಿದ್ದವು.

ನಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು,
ಕೊಳ್ಳಿರೀ ಮಗುವನ್ನು, ಎಮ್ಮ ಮನೆ ಬೆಳಕನ್ನು,
ನಿಮ್ಮ ಮನೆಯನು ತುಂಬಲೊಪ್ಪಿಸುವೆವು.

ಇದು ಮನೆಯ ಹಿರಿಯರಿಗೆ ಹೇಳಿದ ಮಾತು. ಆಮೇಲೆ ಕೈಹಿಡಿದ ಗಂಡನಿಗೆ -

ನಿನ್ನ ಮಡದಿಯ ಕೊಂಡು ಸುಖವಾಗಿರೌ, ಮಗುವೆ,

ಮತ್ತೆ ಹಿರಿಯರ ಕಡೆ ತಿರುಗಿ :

ನಿಮ್ಮ ಸೊಸೆ, ಸೋದರಿಯು - ಕೊಳ್ಳಿರಿವಳ,
ನಿಮ್ಮ ಕೀರುತಿ ಬೆಳೆಯಲಿವಳ ಸೌಜನ್ಯದಲಿ
ನಿಮ್ಮ ಕುಲ ಶೀಲಗಳು ಪರಿಮಳಿಸಲಿ.

ಹಿರಿಯರ ಹಿಂದೆ ಶೋಕಭಾರದಿಂದ ತಲೆತಗ್ಗಿಸಿ ನಿಂತಿರುವ ಮಗಳನ್ನು ಕುರಿತು -

ನಿಲ್ಲು ಕಣ್ಣೊರೆಸಿಕೊಳು, ನಿಲ್ಲು ತಾಯ್, ಹೋಗುವೆವು
ತಾಯ್ತಂದಿರಾ, ತಂದೆಯರ, ಕೊಳ್ಳಿರಿವಳ;
ಎರಡು ಮನೆಗಳ ಹೆಸರು ಖ್ಯಾತಿಗಳು ಉಳಿವಂತೆ
ತುಂಬಿದಾಯುಷ್ಯದಲಿ ಬಾಳಿ ಬದುಕು.

(ಸ್ನೇಹ-ವಿಶ್ವಾಸ, 'ಮನೆ ತುಂಬಿಸುವುದು', ಪು.೧೦೯)

ಮನಕರಗಿಸುವ ಸನ್ನಿವೇಶ. ಮನಮುಟ್ಟುವ ಮಾತುಗಳು. ಇಂಥ ಕವನ ಶ್ರೇಷ್ಠ ದರ್ಜೆಯದಲ್ಲ ಎನ್ನಲಾದೀತೆ? ವಿ.ಸೀ.ಯವರ ಮಿಕ್ಕ ಕವನಗಳು ಹೇಗೊ ? 'ಲೋಕೋ ಭಿನ್ನರುಚಿಃ' ಎಂದು ಹೇಳುತ್ತಾರಲ್ಲವೆ ? ನನಗಂತೂ ಈ ಕವನ ತುಂಬ ಅಚ್ಚುಮೆಚ್ಚಾದದ್ದು.

ಈ ಸನ್ನಿವೇಶ ವರ್ಣನೆ ತಮ್ಮದೇ ಸ್ವಂತ ಅನುಭವದ ಫಲದಿಂದ ಪ್ರೇರಿತವಾದದ್ದಲ್ಲವೆಂದು ತೋರುತ್ತದೆ. ಕವನ ಬರೆದದ್ದು ೧೯೩೩ ಕ್ಕೂ ಹಿಂದೆ, ಆ ಹೊತ್ತಿಗೆ ವಿ.ಸೀ. ಅವರಿಗೆ ಮದುವೆಗೆ ಸಿದ್ಧವಾದ ಮಗಳಿರಲಿಲ್ಲವೆನ್ನುವುದು ಸ್ಪಷ್ಟ. ಕವನಕ್ಕೆ ಪ್ರೇರಣೆ ತಾವು ಓದಿದ್ದ ಹಿಂದಿನ ಕವಿಗಳ ರಸಮಯ ವರ್ಣನೆಯೇ ಇದ್ದೀತು.

ಲೋಕೋತ್ತರವಾದ ಅಭಿಜ್ಞಾನ ಶಾಕುಂತಲ ನಾಟಕದಲ್ಲಿ ಕಣ್ವಮುನಿಗಳು, ತಮಗೆ ಪರಮಪ್ರಿಯಳಾದ ಸಾಕುಮಗಳು ಶಕುಂತಲೆಯನ್ನು ಗಂಡನ ಮನೆಗೆ ಕಳುಹಿಸುವ ಸನ್ನಿವೇಶವೆತ್ತಿಕೊಂಡು ಪರಮಸುಂದರವಾದ ಎರಡು ಶ್ಲೋಕಗಳನ್ನು ಕಣ್ವರ ಬಾಯಿಂದ ಹೇಳಿಸಿದ್ದಾನೆ ಕವಿ ಕಾಳಿದಾಸ. ಮಗಳಿಗಿತ್ತ ಉಪದೇಶದ ಮಾತುಗಳಿವು :

ಶುಶ್ರೂಷಸ್ವ ಗುರೂನ್
(ಹಿರಿಯರ ಶುಶ್ರೂಷೆ ಮಾಡು)
ಕುರು ಪ್ರಿಯಸಖೀವೃತ್ತಿಂ ಸಪತ್ನೀಜನೇ
(ಸವತಿಯರೊಡನೆ ಪ್ರೀತಿಯಿಂದ ನಡೆದುಕೊ)
ಭರ್ತುಃ ವಿಪ್ರಕೃತಾಪಿ ರೋಷಣತಯಾ ಮಾ ಸ್ಮ ಪ್ರತೀಪಂ ಗಮಃ
(ಗಂಡನು ವಿನಾಕಾರಣವಾಗಿ ಕೋಪಿಸಿಕೊಂಡರೂ
ಪ್ರತಿಹೇಳಬೇಡ)
ಭೂಯಿಷ್ಠಂ ಭವ ದಕ್ಷಿಣಾ ಪರಿಜನೇ
(ಪರಿಜನರಲ್ಲಿ ಹಿತವಾಗಿ ನಡೆದುಕೋ)
ಭಾಗ್ಯೇಷ್ವನುತ್ಸೇಕಿನೀ
(ನಿನಗೆ ದೊರೆತ ಭಾಗ್ಯದಿಂದ ಉಬ್ಬಬೇಡ)
ಯಾಂತ್ಯೇವಂ ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ
(ಹೀಗೆ ಗೃಹಿಣೀಪದವನ್ನು ಗಳಿಸಿಕೊಂಡು ಬಾಳು)

ಮಗಳಿಗೆ ಧೈರ್ಯ ಕೊಡುತ್ತ ಕಣ್ವರು ಮತ್ತೆ :

ಅಭಿಜನವತೋ ಭರ್ತುಃ ಶ್ಲಾಘ್ಯೇ ಸ್ಥಿತಾ ಗೃಹಿಣೀಪದೇ
(ಪಟ್ಟಮಹಿಷಿಯಾಗಿ ಸ್ಥಾಪಿತಗೊಂಡು)

ವಿಭವಗುರುಭಿಃ ಕೃತ್ಯೈಸ್ತಸ್ಯ ಪ್ರತಿಕ್ಷಣಮಾಕುಲಾ
(ಪ್ರತಿಕ್ಷಣವೂ ಮಹಾಕಾರ್ಯಗಳಲ್ಲಿ ಆಸಕ್ತಳಾಗಿರುತ್ತೀಯೆ)

ತನಯಮಚಿರಾತ್ ಪ್ರಾಚೀವಾರ್ಕಂ ಪ್ರಸೂಯ ಚ ಪಾವನಂ
(ಪೂರ್ವದಲ್ಲಿ ಹುಟ್ಟುವ ಸೂರ್ಯನಂಥ ಮಗನನ್ನು
ಪಡೆಯುತ್ತೀಯೆ)

ಮಮ ವಿರಹಜಾಂ ನ ತ್ವಂ ವತ್ಸೇ ಶುಚಂ ಗಣಯಿಷ್ಯಸಿ
(ಮಗು! ನನ್ನ ಅಗಲಿಕೆಯಿಂದ ನಿನಗೆ ಕಷ್ಟವಾಗದು, ಅದನ್ನು
ಸಹಿಸಿಕೊಳ್ಳುತ್ತೀಯೆ)

ಇದಕ್ಕಿಂತ ಹೆಚ್ಚಿನ ವಾತ್ಸಲ್ಯಪೂರ್ಣ ಉಪದೇಶವನ್ನು ಬೇರಾವ ತಂದೆ ಮಗಳಿಗೆ ಕೊಡಬಹುದು? ಓದುತ್ತ ಓದುತ್ತ, ಆ ಸಂದರ್ಭದ ವ್ಯಥೆಯನ್ನು ಅನುಭವಿಸುತ್ತ, ಹೃದಯ ಆರ್ದ್ರವಾಗುತ್ತದೆ. ಕಣ್ಣುಗಳು ಹನಿಗೂಡುತ್ತವೆ.

ಶತಮಾನಗಳು ಉರುಳಿಹೋದಮೇಲೆ ಕನ್ನಡಿಗರ ಹೆಮ್ಮೆಯ ಕವಿ ಪಂಪ ಇದೇ ಸನ್ನಿವೇಶದ ಸ್ವಾರಸ್ಯವನ್ನು ಮನಗಂಡು, ಕಾಳಿದಾಸನ ವಾಣಿಯಿಂದ ಸ್ಫೂರ್ತಿಗೊಂಡು, ತನ್ನದೇ ಆದ ಸೊಬಗಿನ ಶೈಲಿಯಲ್ಲಿ, ಇನಿದಾದ ಕನ್ನಡ ನುಡಿಯಲ್ಲಿ ಚಿತ್ರಿಸಿರುವುದನ್ನು ನೋಡಬಹುದು. ತನ್ನ ಆದಿಪುರಾಣದಲ್ಲಿ ಶ್ರೀಮತಿಯನ್ನು ವಜ್ರಜಂಘನಿಗೆ ಮದುವೆ ಮಾಡಿಕೊಟ್ಟು ಹೆಣ್ಣನ್ನು ಕಳುಹಿಸಿ ಕೊಡುವ ಸಂದರ್ಭವನ್ನು ಹೀಗೆ ವರ್ಣಿಸಿದ್ದಾನೆ :

ಪೊಡಮಡುವ,
ಅಪ್ಪಿಕೊಳ್ವ,
ನೆನೆಯುತ್ತಿರಿಮೆಂಬ,
ಸಮಸ್ತವಸ್ತುವಂ ಕುಡುವ,
ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ,
ಬುದ್ಧಿವೇಳ್ವ,
ಕೈಯೆಡೆ ನಿಮಗೆಂದೊಡಂಬಡಿಪ,
ನಲ್ಲರಗಲ್ಕೆಗೆ ಕಣ್ಣನೀರ್ಗಳಂ ಮಿಡಿವ,
ಬಹುಪ್ರಕಾರ ಜನಸಂಕಟಮೊಪ್ಪಿದುದಾ ಪ್ರಯಾಣದೊಳ್.

ಪ್ರಯಾಣ ಸಮಯದಲ್ಲಿ ಜನರ ಸಂಕಟವನ್ನು ವರ್ಣಿಸಿದ್ದೇ ಅಲ್ಲದೆ ಇನ್ನೊಂದು ಪದ್ಯದಲ್ಲಿ ಮಗುವನ್ನು ಚೆನ್ನಾಗಿ ನೋಡಿಕೊ ಎಂದು ವಜ್ರ ಜಂಘನನ್ನು ಬೇಡಿಕೊಳ್ಳುವ ವರ್ಣನೆ ಇದೆ :

ಬಗೆದುಂ ನಿನ್ನನ್ವಯಾಯೋನ್ನತಿಯನ್, ಇವಳ ಸ್ನೇಹ ಸಂಬಂಧಮಂ, ನೀಂ
ಬಗೆದುಂ, ಸಂದೆಮ್ಮ ನಣ್ಪುಂ ಬಗೆದುಂ, ಅರಿಯದೇನಾನುಮೆಂದಾಗಳ್
ಮೆಲ್ಲಗೆ ನೀಂ ಕಲ್ವಿಪ್ಪುದು, ಎಮ್ಮಂ ನೆನೆದು ಎರ್ದೆಗಿಡದಂತಾಗೆ ಪಾಲಿಪ್ಪುದು,
ಇಂತು ಈ
ಮೃಗಶಾಬೇಕ್ಷಿಯಂ, ಇನಿತನ್ ಆಂ ಬೇಡಿದೆಂ ವಜ್ರಜಂಘಾ

ಮಗಳಿಗೂ ತಂದೆ ಉಪದೇಶ ಮಾಡುತ್ತಾನೆ :

ಮನಮರಿದಂಜಿ ಬೆರ್ಚಿಬೆಸಕಯ್, ನಿಜವಲ್ಲಭನೇನನೆಂದೊಡಂ
ಕಿನಿಸದಿರ್, ಒಂದಿದಗ್ರಮಹಿಷೀಪದದಲ್ಲಿ ಪದಸ್ಥೆಯಾಗು, ನಂ
ದನರನ್ ಅಗಣ್ಯಪುಣ್ಯಧನರಂ ಪಡೆ, ಎಂದು ಅಮರ್ದಪ್ಪಿಕೊಂಡು ತ
ತ್ತನುಜೆಯಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ

ಕಾಳಿದಾಸ ಮಹಾಕವಿಯ ಪ್ರಭಾವ ಪಂಪನ ಮೇಲೆ ಎಷ್ಟರಮಟ್ಟಿಗಿತ್ತೆನ್ನುವುದು ಈ ಪದ್ಯಗಳಿಂದ ಗೊತ್ತಾಗುತ್ತದೆ. ಸನ್ನಿವೇಶದ ವರ್ಣನೆಯಲ್ಲಿ ಕಾಳಿದಾಸನನ್ನು ಮೀರಿಸಿದನೇನೊ ಎಂದು ನಾವು ಮೆಚ್ಚಿ ತಲೆದೂಗುವಂತೆ ಮಾಡುತ್ತದೆ ಹಿತಮಿತಮೃದುವಚನನಾದ ಪಂಪನ ಕಾವ್ಯಸರಣಿ.

''ವಸ್ತು ಒಂದೇ ಆದರೂ ಅದು ಕವಿಗಳ ಸಾಮರ್ಥ್ಯಕ್ಕೆ ಅನುಸಾರವಾಗಿ ನವನವೀನವಾಗಿ ರೂಪುಗೊಳ್ಳುತ್ತದೆ. ಸಮರ್ಥನಾದ ಕವಿಯ ಕೈಯಲ್ಲಿ ಈ ಚಿರಂತನ ವಸ್ತು ಎಷ್ಟರಮಟ್ಟಿಗೆ ಸಾರ್ಥಕತೆಯನ್ನು ಪಡೆಯಬಲ್ಲುದೆಂಬುದಕ್ಕೆ ವಿ.ಸೀ.ಯವರ 'ಮನೆತುಂಬಿಸುವುದು' ಎನ್ನುವ ಕವಿತೆ ಒಂದು ನಿದರ್ಶನ'' ಎನ್ನುತ್ತಾರೆ ಸ್ವಯಂ ಕವಿಗಳಾದ ಶಿವರುದ್ರಪ್ಪನವರು (ವಿ.ಸೀ.೭೫, ಪು.೧೧೩).

ವಿ.ಸೀ.ಯವರ ಹೆಸರು ಜನರ ಮನದಲ್ಲಿ ಚಿರಕಾಲ ಉಳಿಯುವಂತೆ ಮಾಡಬಲ್ಲ ಶಕ್ತಿ ಉಳ್ಳದ್ದು ಮನೆತುಂಬಿಸುವ, ಮನತುಂಬಿಸುವ ಈ ಗೀತೆ.

ಗೀತಗಳು (೧೯೩೧)

ಬಿ.ಎಂ.ಶ್ರೀಯವರ ಇಂಗ್ಲಿಷ್ ಗೀತೆಗಳಿಂದ ಪ್ರಭಾವಿತರಾಗಿ ಕಾವ್ಯ ರಚನೆಗೆ ಕೈಹಾಕಿದ ಮೊದಲಿಗರಲ್ಲಿ ವಿ.ಸೀ.ಯವರೂ ಒಬ್ಬರು. ೧೯೨೩ರಿಂದಲೇ ರಚಿಸುತ್ತ ಬಂದ ಅವರ ಕವನಗಳು, ವೆಂಕಣ್ಣಯ್ಯನವರ, ಕೃಷ್ಣಶಾಸ್ತ್ರಿಗಳ ಪ್ರೋತ್ಸಾಹದಿಂದ 'ಪ್ರಬುದ್ಧ ಕರ್ಣಾಟಕ' ಪತ್ರಿಕೆಯಲ್ಲಿ ಬೆಳಕು ಕಂಡವು. ಈ ಕವನಗಳೇ ಒಟ್ಟುಗೂಡಿ ಮೊದಲ ಬಾರಿಗೆ ೧೯೩೧ರಲ್ಲಿ ಪುಸ್ತಕ ರೂಪದಲ್ಲಿ ಹೊರಬಿದ್ದವು. ತಮ್ಮ ಚೊಚ್ಚಲ ಕವನ ಸಂಕಲನಕ್ಕೆ 'ಗೀತಗಳು' ಎಂದು ಹೆಸರಿಟ್ಟು, ಗುರುಗಳಾದ 'ಶ್ರೀ' ಯವರಿಗೆ ಕಾಣಿಕೆಯಾಗಿ ಸಮರ್ಪಿಸಿ ಧನ್ಯರಾದರು ವಿ.ಸೀ. ಪುಸ್ತಕದ ಮುದ್ರಣದಲ್ಲಿ ವಿಶೇಷ ಆಸಕ್ತಿ ವಹಿಸಿದರು. ಉತ್ತಮವಾದ ಪಾರ್ಚ್‌ಮೆಂಟ್ (ಒಂದು ಬಗೆಯ ಬೆಂಡು ಕಾಗದ) ಉಪಯೋಗಿಸಿದರು. ಸುಪ್ರಸಿದ್ಧ ಚಿತ್ರಕಾರರಾದ ಕೆ.ವೆಂಕಟಪ್ಪ ಮತ್ತು ಶಾಂತಿನಿಕೇತನದ

ನಂದಲಾಲ ಬಸು ಅವರ ಹಲವಾರು ಚಿತ್ರಗಳನ್ನು ತಮ್ಮ ಸಂಗ್ರಹದಲ್ಲಿ ಅಳವಡಿಸಿದರು. ಸಾಧಾರಣ ಮುದ್ರಣದಲ್ಲಿ ವೆಂಕಟಪ್ಪನವರ 'ಅರ್ಧ ನಾರೀಶ್ವರ' ಚಿತ್ರದ ಅಂದ ಎಲ್ಲಿ ಕೆಟ್ಟು ಹೋದೀತೊ ಎಂದು ಅಂಜಿ, ಲಂಡನ್ನಿಗೆ ಕಳುಹಿಸಿ ಕಾಲೊಟ್ಟೈಪಿನಲ್ಲಿ ಮುದ್ರಣ ಮಾಡಿಸಿ ತರಿಸಿದರು. ಪದ್ಯಗಳ ಶೀರ್ಷಿಕೆಗಳನ್ನು ಕಿತ್ತಳೆಬಣ್ಣದ ವರ್ಣದಲ್ಲಿ ಮುದ್ರಿಸಿ ಪುಸ್ತಕದ ಅಂದ ಚೆಂದ ಹೆಚ್ಚುವಂತೆ ನೋಡಿಕೊಂಡರು. ಈ ರೀತಿ ಪುಸ್ತಕ ಪ್ರಕಟಣೆಯಲ್ಲಿ ವಿಶೇಷ ಆಸಕ್ತಿ ವಹಿಸಿದ ಬೇರೊಬ್ಬ ಕವಿಯನ್ನು ಆ ದಿನಗಳಲ್ಲಿ ನಾವು ಹೆಸರಿಸಲಾರೆವು.

ಹೆಸರೇ ಸೂಚಿಸುವಂತೆ ಇಲ್ಲಿ ಸಂಗ್ರಹಗೊಂಡಿರುವ ಕವನಗಳೆಲ್ಲವೂ ಗೀತ ರೂಪದಲ್ಲಿ ಹುಟ್ಟಿದವು. ವಿ.ಸೀ. ಸಂಗೀತ ಜ್ಞಾನವನ್ನು ಸಂಪಾದಿಸಿ ಕೊಂಡವರಾದ್ದರಿಂದ ಒಂದೊಂದು ಗೀತವನ್ನು ಯಾವ ರಾಗದಲ್ಲಿ ಹಾಡಿದರೆ ಉತ್ತಮ ಎನ್ನುವುದನ್ನು ಅವರೇ ಸೂಚಿಸಿದ್ದಾರೆ. ಹಾಗೆ ಹಾಡಿದರೇನೆ ಅವುಗಳ ಸ್ವಾರಸ್ಯ ಅನುಭವವಾದೀತು ಎಂದಿದ್ದಾರೆ.

ಇಲ್ಲಿ ಸಂಗ್ರಹವಾಗಿರುವ ಕವನಗಳ ಸವಿಯನ್ನು ಅನುಭವಿಸಬೇಕಾದರೆ ಅವುಗಳನ್ನು ಹಾಡಿನ ರೂಪದಲ್ಲೆ ಕೇಳಬೇಕು. ಡಿ.ವಿ.ಜಿ.ಯವರೂ, ಮಾಸ್ತಿ ಯವರೂ ಹೊಸಗನ್ನಡ ಕವಿತೆಗೆ ಗೀತದ ಬೆಲೆಯನ್ನು ವಿಶೇಷವಾಗಿ ಅಳವಡಿಸಿ, ಸುಂದರ ಗೀತರೂಪಕಗಳನ್ನು ರಚಿಸಿ ಕೃತಕೃತ್ಯತೆಯನ್ನು ಪಡೆದವರು. ಅವರು ತೋರಿಸಿದ ದಾರಿಯಲ್ಲಿ ದಿಟ್ಟ ಹೆಜ್ಜೆ ಇಟ್ಟು ನಡೆದವರು ವಿ.ಸೀ.

ಬಲ್ಲವನು ನಾನೆಂದು ಬಲು ಮೆರೆದೆನಯ್ಯ
ಎಲ್ಲ ಬಲವೆನತೆಂದು ಮೈಮರೆತೆ
— ನೀನೆನ್ನ ಸಲಹಬೇಕಯ್ಯ

(ಸ್ನೇಹ-ವಿಶ್ವಾಸ, 'ಮೊರೆ', ಪು.೭)

ಎಂದು ತಮ್ಮ ನಿರಹಂಕೃತಿಯನ್ನು ಮೆರೆಯುವ ಈ ಸಾಲುಗಳು ದಾಸರ ಪದಗಳ ಸೊಗಸನ್ನು ಈ ಕವನಗಳಲ್ಲಿಯೂ ಕಾಣುವಂತೆ ಮಾಡುತ್ತವೆ.

* * * *

ಮುಂಗಾರು ಮಳೆಯ ಅಟಾಟೋಪವನ್ನು ವರ್ಣಿಸಿರುವ ಸಾಲುಗಳು ನನಗೆ ಬಹು ಮೆಚ್ಚಿನವು. ಅದರಲ್ಲೂ ಬೇಸಿಗೆಯ ಬೇಗೆಯಿಂದ ನೆಲದ ನೀರು ಹಬೆಯಾಗಿ ಮೇಲೆದ್ದು ಮೋಡವಾಗಿ ರೂಪುಗೊಳ್ಳುವ ಪ್ರಕೃತಿ ವ್ಯಾಪಾರದ ಕಾವ್ಯಮಯ ಚಿತ್ರಣ ಬಲು ಸೊಗಸಿನದು.

ಬೇಸಗೆಯ ತೇಜಃ ಪ್ರಭಾವದಿಂ ಬಸಿರ್ವೊತ್ತ
ಶ್ರಾವಣದ ದುರ್ದಮ್ಯ ಮೇಘಮಾಲೆ!

(ಸ್ನೇಹ-ವಿಶ್ವಾಸ, 'ಮುಂಗಾರು', ಪು.೨೬)

ಈ ಸಾಲುಗಳನ್ನು ಮತ್ತೆ ಮತ್ತೆ ಮನದಲ್ಲಿ ಮೆಲುಕುಹಾಕಿ ಚಪ್ಪರಿಸ ಬೇಕೆನ್ನಿಸುತ್ತದೆ.

* * * *

ಸುಲಭ ಪದಗಳಲ್ಲಿ ಸಫಲತೆಯನ್ನು ಸಾಧಿಸಿರುವ ಪ್ರಕೃತಿವರ್ಣನೆಯ ಕವನ 'ಮಧುಮಾಸ'.

ಹುಲ್ಲರಿಯ ಶಿರದಲ್ಲಿ ಮಾಂದಳಿರ ತಳದಲ್ಲಿ
ಮೊಲ್ಲೆ ಮಲ್ಲಿಗೆ ತೆರೆದು ಬಿರಿಯುತಿರುವಲ್ಲಿ
ಚೆಲ್ವ ಹಸುರ್ಗೊನೆಯಲ್ಲಿ, ನೆಲ್ಲ ಹೊನ್ದೆನೆಯಲ್ಲಿ
ಚೆಲ್ಲಿಹವು ಇಬ್ಬನಿಯ ಮುತ್ತುಗಳಿವಿಲ್ಲಿ.

ಆ ಮಧುಮಾಸವೊ ! — ಎಂಥ ಸೊಗಸಿನ ಕಾಲ

ಹೃದಯದಾಸೆಗಳೆಲ್ಲ ಫಲಿತವಾಗುವ ಕಾಲ
ಮೃದು ಹೃದಯ ಕುಸುಮಗಳು ಅರಳ್ವ ಕಾಲ
(ಸ್ನೇಹ-ವಿಶ್ವಾಸ, 'ಮಧುಮಾಸ', ಪು.೧೯-೨೦)

* * * *

ವಿ.ಸೀ.ಯವರು ನಮ್ಮೆಲ್ಲರಿಗೂ ಪ್ರಿಯರಾಗಿರುವುದು 'ಸ್ನೇಹ'ವೆಂಬ ಅವರ ಕವನದಿಂದ. ಯಾವ ಸಂದರ್ಭದಲ್ಲಿ ಬರೆದರೋ ಅದನ್ನು ತಿಳಿಯಬೇಕೆನ್ನಿಸುತ್ತದೆ. ಕೆಳೆಯ ಸೌಹಾರ್ದ ವೈಭವಕ್ಕೆ ಕಾರಣರಾರೊ ? ಈ ಬಗೆಯ ಸ್ನೇಹ ಸ್ವರ್ಗದಲ್ಲಿ ದೊರೆಯದಿದ್ದರೆ ನನಗೆ ಸ್ವರ್ಗವೂ ಬೇಡ; ನಾನು ಇಲ್ಲೇ ನೂರು ಜನ್ಮಗಳನ್ನು ಕಳೆಯುತ್ತೇನೆ ಎನ್ನುತ್ತಾರೆ. ಮರೆಯಲಾಗದ ಅವರ ಕವನದ ಸಾಲುಗಳು ಇವು :

ಸ್ವರ್ಗದೊಳಗೀ ಸ್ನೇಹ ದೊರೆವುದೇನು?
ಈ ಪರಿಯ ಸೌಹಾರ್ದ ಕೆಳೆಯ ವೈಭವವು?
ಇಲ್ಲದಿರೆ ನನಗಿಲ್ಲೆ ನೂರು ಜನ್ಮಗಳಿರಲಿ
ಎಲ್ಲಪರಿ ಮಮತೆಗಳಸತ್ಯಜೀವನವು !
(ಸ್ನೇಹ-ವಿಶ್ವಾಸ, 'ಸ್ನೇಹ', ಪು.೩೮)

ಈ ಸಾಲುಗಳನ್ನು ನೆನಸಿಕೊಂಡು ಆನಂದಿಸಿದವರು, ಸ್ಫೂರ್ತಿಪಡೆದವರು ಅನೇಕರು. ಕನ್ನಡಿಗರ ಮನದಲ್ಲಿ ಬಹುಕಾಲ ನಿಲ್ಲುವ ಸಾಲುಗಳು ಇವು. 'ನಿತ್ಯ ನಿಶ್ಚಿಂತತೆಯ ಶಾಂತಿ ಸೌಖ್ಯದಲಿ' ಎನ್ನುವುದು ಇದೇ ಕವನದ ಇನ್ನೊಂದು ಸೊಗಸಿನ ಸಾಲು.

* * * *

'ಕಸ್ಮೈ ದೇವಾಯ?' ಕವನ ಬರೆದ ಸಂದರ್ಭ ಯಾವುದೋ? ವಿ.ಸೀ. ಮುಖ್ಯವಾಗಿ ಮನುಷ್ಯಪ್ರಯತ್ನದ ಮೇಲೆ ಭರವಸೆ ಇಟ್ಟವರು. ಅವರಿಗೆ ವಿಧಿ, ಕರ್ಮ, ದೈವ ಮುಂತಾದವುಗಳ ಮೇಲೆ ತಾರುಣ್ಯದಿಂದಲೂ ತುಂಬ ಹೆಚ್ಚಿನ ನಂಬಿಕೆ ಇದ್ದಂತೆ ಕಾಣುವುದಿಲ್ಲ. ಅವರ 'ಕಸ್ಮೈ ದೇವಾಯ' ಕವನವೇ ಇದಕ್ಕೆ ಸಾಕ್ಷಿ. 'ಯಾವ ದೇವರಿಗೆ ನಾನು ಹವಿಸ್ಸನ್ನು ಅರ್ಪಿಸಲಿ?' ಎನ್ನುವ ವೇದ ಮಂತ್ರದ ಪ್ರಶ್ನೆಯೊಂದನ್ನು ಎತ್ತಿಕೊಂಡು ತಮ್ಮ ಮನದಲ್ಲಿ ತಲೆದೋರಿದ ಸಂದೇಹಗಳಿಗೆ ಕಾವ್ಯ ರೂಪ ಕೊಟ್ಟಿದ್ದಾರೆ. ಹಳೆಯಕಾಲದ ಮೂರ್ತಿಗಳು ಅಳಿಸಿ ಹೋಗುತ್ತಲಿವೆ. ಅವರ ಸ್ಥಳಕ್ಕೆ ಇನ್ನಾರು ಬರುತ್ತಾರೊ, ಇಲ್ಲವೆ ಅಳಿದು ಹೋಗುವರೋ ಎನ್ನುವ ಶಂಕೆ ತರುಣಕವಿಯ ಮನದಲ್ಲಿ ಮೂಡಿದೆ :

ಇಲ್ಲದಿರೆ ಬೇರಾವ ದೇವರೇ ಬಾರರೋ
ಇಲ್ಲದೊಂದಕೆ ಹೆಸರನಿತ್ತು ಕರೆಯುವೆವೊ
ಇಲ್ಲದಿರೆ ಮಾನವನ ಸುಗುಣವೇ ದೈವವೊ
ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೊ !

(ಸ್ನೇಹ-ವಿಶ್ವಾಸ, 'ಕಸ್ಮೈ ದೇವಾಯ', ಪು.೫೦)

ದೈವದ ಮೇಲೆ, ವಿಧಿಯ ಲೀಲೆಯ ಮೇಲೆ ನಂಬಿಕೆ ಇಟ್ಟು ನಡೆಯುವವರನ್ನು ಕಂಡರೆ ಆಗದು ವಿ.ಸೀ.ಯವರಿಗೆ. ಹಾಗೆ ನಂಬುವವರನ್ನು 'ನಷ್ಟಸತ್ತ್ವರು' ಎನ್ನುತ್ತಾರೆ. ನಂಬಿಕೆಗಳನ್ನು ಕಿತ್ತೊಗೆದು ಮೇಲೇಳಿ ಎಂದು ಕರೆ ಕೊಡುತ್ತಾರೆ.

ನಾವು ಗೈಯದೊಡಿನ್ನಾರು ಗೈವರು ಕಾರ್ಯ
ನಾವು ನಿಲ್ಲದೊಡಾರು ಮುಂದೆ ನಿಲುವವರು
ನಾವು ದೇಶದ ಯಶದ ಮಂದಿರಕೆ ತಳಪಾಯ
ನಾವು ನಾಳಿನ ಮಾನ ಕಾಯ್ವ ಭಟರು.

ಹುಟ್ಟಿಸಿದ ದೇವನೆಂತೊ ಪೊರೆಯುವನೆಂಬ
ಕಷ್ಟಗಳನಿತ್ತವನೆ ಪರಿಹರಿಪನೆಂಬ
ಸೃಷ್ಟಿಸಮಯದಿ ಬರೆದ ಹಣೆಯಬರಹವಿದೆಂಬ
ನಷ್ಟಸತ್ತ್ವರ ತತ್ವ ದೂಡಿಬಿಡಿರೇಳಿ

(ಸ್ನೇಹ-ವಿಶ್ವಾಸ, 'ಏಳಿ', ಪು.೩೦)

*　　*　　*　　*

'ಕೋಗಿಲೆ' ಎನ್ನುವುದು 'ಗೀತಗಳ'ಲ್ಲಿನ ಇನ್ನೊಂದು ಸುಂದರ ಕವನ. ಪಾಶ್ಚಾತ್ಯ ಕವನದಿಂದ ಪ್ರೇರಿತವಾಗಿ ಬರೆದದ್ದಿರಬೇಕು. ಹಸುರನ್ನೆ ಕಾಣದ, ಬರಡು ಕೊಂಬೆಯ ಮೇಲೆ ಕುಳಿತು ಉಲಿಯುತ್ತಿರುವ ಕೋಗಿಲೆಯನ್ನು ಕಂಡು

ನಮಗೆ ಗೋಚರಿಸದಿಹ
ಹೆರರಾರು ಅರಿಯದಿಹ
ನೀನೊರ್ವ ಕಾಣುತಿಹ

ಹೊಸ ಜೀವ ಸಂಚಾರವಾವುದಿಹುದೋ!
ನೆಲದಿಂದ ಬೇರಿಂಗೆ, ಬೇರಿಂದ ತರುವಿಂಗೆ
ಜೀವರಸವೇರುವುದ ಕಾಣುತಿಹೆಯೊ!

ಒಣಗಿರುವ ಶಾಖೆಗಳ
ಶಾಖೆಯುಪಶಾಖೆಗಳ
ನಾಳ ನಾಳದಿ ಹರಿದು

ಎಳಗೆಂಪು ಮೋಸುಗಳು ಕುಡಿಯಿಟ್ಟವೇನು?
ಹಸುಳೆ ಕುಡಿ ಮೈಗಂಧ ನೀ ಸವಿದೆಯೇನು?
ಶಿಶಿರವಳಿವುದು ಚೈತ್ರ ಬಹುದೆಂಬೆಯೇನು?

(ಸ್ನೇಹ-ವಿಶ್ವಾಸ, 'ಕೋಗಿಲೆ', ಪು.೭೯)

'ಶಿಶಿರವಳಿವುದು ಚೈತ್ರಬಹುದೆಂಬೆಯೇನು?' ಎಂಬುದನ್ನು ಓದಿದಾಗ 'If Winter comes, can Spring be far behind?' ಎಂಬ ಸುಪ್ರಸಿದ್ಧ ಷೆಲ್ಲಿ ಕವಿಯ ಸಾಲುಗಳು ನೆನಪಾಗುತ್ತವೆ.

ದೀಪಗಳು (೧೯೩೩)

'ಗೀತಗಳು' ಪ್ರಕಟವಾದ ಎರಡು ವರ್ಷಗಳೊಳಗೆ ವಿ.ಸೀ.ಯವರ ಮತ್ತೊಂದು ಸಂಕಲನ 'ದೀಪಗಳು' ೧೯೩೩ ರಲ್ಲಿ ಹೊರಬಿದ್ದಿತು. ಈ ಸಂಕಲನದಲ್ಲಿ ಸೇರಿರುವುವೂ ರಾಗಪ್ರಧಾನವಾದ ಕವನಗಳು. ಬಹು ಅಂದವಾಗಿ ಮುದ್ರಣವಾಗಿರುವ ಈ ಕವನಸಂಗ್ರಹ ಯಾರ ಮನವನ್ನೇ ಆಗಲಿ ಆಕರ್ಷಿಸುತ್ತದೆ. 'ಮನೆಯ ಮಕ್ಕಳಿಗೆ ಒಡವೆಗಳಿಲ್ಲದಿದ್ದರೂ ಒಂದು ಒಳ್ಳೆಯ ಬಟ್ಟೆಯನ್ನು ಉಡಿಸಿ ಹೊರಕ್ಕೆ ಕಳುಹಿಸುವ ವಾಡಿಕೆಯಂತೆ, ಉತ್ತಮ ಕಾಗದದ ಮೇಲೆ ಪುಸ್ತಕವನ್ನು ಅಚ್ಚುಮಾಡಿ, ಚಿತ್ರಗಳಿಗೆ ಎಡೆಮಾಡಿಕೊಟ್ಟಿದ್ದೇನೆ' ಎನ್ನುತ್ತಾರೆ ವಿ.ಸೀ. ಕಾವ್ಯನಿರ್ಮಾಣದಂತೆಯೇ ಕಾವ್ಯಪ್ರಕಟನವೂ ಒಂದು ಕಲೆ ಎಂದು ಅವರು ಎತ್ತಿ ತೋರಿಸಿದ್ದಾರೆ. ಈ ಮನೋಧರ್ಮವನ್ನು ಎಷ್ಟು ಕೊಂಡಾಡಿದರೂ ಸಾಲದು. 'A thing of beauty is a joy for ever' (ಚೆಲ್ವುಕೃತಿ ನಿತ್ಯಸಂತೋಷದಾಯಕ).

''ಯಾವ ಅಲಂಕಾರಗಳೂ ಇಲ್ಲದೆ, ಕವಿಸಮಯಗಳಿಗೆ ಅವಕಾಶವಿಲ್ಲದಂತೆ ನೇರವಾಗಿ ನುಡಿದು, ನುಡಿದದ್ದು ಇನ್ನೊಬ್ಬರಿಗೆ ಮಿಡಿತವುಂಟುಮಾಡುವಂತೆ ಆಗಬಾರದೇ? ..... ನಮ್ಮ ಕಾಲದ ಸಾಹಿತ್ಯ ಹಾಗೆ ಬೆಳೆದರೆ ಮೇಲು ಎನ್ನಿಸಿತ್ತು. ನಿರಲಂಕಾರದ, ಹೆಚ್ಚು ಲಯತಾಂಡವವಿಲ್ಲದ, ದಿನಬಳಕೆಯ

ಮಾತು ಪ್ರಪಂಚಗಳ ಸುಳಿವು ಹೆಚ್ಚಾಗಿರುವ, ದಿನಜೀವನದ ಭಾವಗಳನ್ನು ಹೊರಪಡಿಸೋಣವೆಂಬ ಮನಸ್ಸುಂಟಾಯ್ತು. ಕನ್ನಡಕ್ಕೆ ಆಗ ಎಲ್ಲರ ಮನಸ್ಸನ್ನೂ ಹರಿಸಿ ಒಲಿಸಬೇಕೆಂಬ ಅಗತ್ಯವಿತ್ತು'' ಎನ್ನುತ್ತಾರೆ ವಿ.ಸೀ., ತಮ್ಮ ಕಾವ್ಯರಚನೆಯ ಹಿನ್ನೆಲೆಯನ್ನು ವಿವರಿಸುತ್ತ (*ಸ್ನೇಹ-ವಿಶ್ವಾಸ, 'ಹಗಲು ಇರುಳು' ಮುನ್ನುಡಿ, ಪು.೬೨-೮*).

ಸುಲಭವಾದ, ಸರಳವಾದ, ಜನಸಾಮಾನ್ಯರ ದಿನನಿತ್ಯದ ಆಡುಮಾತಿನಲ್ಲಿ ಉದಾತ್ತವಾದ ಭಾವನೆಗಳಿಗೆ ರೂಪುಕೊಡಲು ಸಾಧ್ಯ ಎನ್ನುವುದನ್ನು ತಮ್ಮ ಕವನಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಕೆಲವು ಉದಾಹರಣೆಗಳನ್ನು ಕೊಡಬಹುದು :

'ನಷ್ಟಸತ್ತ್ವ'ರಾದ ನಮ್ಮ ಬಹುಪಾಲಿನ ಜನತೆಯನ್ನು ಎಚ್ಚರಿಸುವ ಹಲವಾರು ಕವಿತೆಗಳು 'ದೀಪಗಳು' ಸಂಕಲನದಲ್ಲಿ ಸೇರಿವೆ. ಅವುಗಳಲ್ಲಿ ಅತಿ ಪ್ರಸಿದ್ಧವಾದದ್ದು 'ಅಭೀಃ' ಎಂಬ ಕವನ. ವಿವೇಕಾನಂದರ ಸ್ಫೂರ್ತಿಯುತ ವಾಣಿಯಿಂದ ಪ್ರಭಾವಗೊಂಡು ಬರೆದ ಕವನ ಇದಂತೆ.

'ಮೂವತ್ತು ಶತಮಾನಗಳ ಮೆಟ್ಟಿ ಕೇಳುತಿದೆ ಕಾಲದಾ ಕರೆಯಂಚಿನಾಚೆಯಿಂದ' ಎಂದು ಹೇಳುತ್ತಾರೆ.

ಮಣಿಯದಿಹ ಮನವೊಂದು, ಸಾಧಿಸುವ ಹಠವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು
— ಅಭೀಃ! ಅಭೀಃ! ಅಭೀಃ! ಎಂಬ ತಾರಕ ವಾಕ್ಯ.

(*ಸ್ನೇಹ-ವಿಶ್ವಾಸ, 'ಅಭೀಃ' ಪು.೧೦೫*)

ಸೊಗಸಾಗಿ ಆಯ್ದ ಮಾತುಗಳು. ಅವುಗಳ ಬಂಧ ಮೆಚ್ಚಿಕೆಯನ್ನು ತರುವಂಥದೇನೊ ನಿಜ. ಆದರೆ ನಮ್ಮ ಆಧುನಿಕ ಭಾರತದಲ್ಲಿ ನಮ್ಮ ಸುತ್ತ ಕಾಣುತ್ತಿರುವ ಪರಿಸ್ಥಿತಿ ಎಂಥದ್ದು? ಅನ್ಯಾಯಗಳ ಪರಂಪರೆ ನಮ್ಮ ಎದುರಿಗೇ ನಡೆಯುತ್ತಿದ್ದರೂ, ಎಲ್ಲವನ್ನು ತಾಳಿಕೊಂಡು 'ನಷ್ಟಸತ್ತ್ವ'ರಾಗಿ ನಾವು ಬಾಳುತ್ತಿದ್ದೇವಲ್ಲವೆ? ಹೀಗೆಯೇ ನಡೆಯುತ್ತಹೋದರೆ ನಾವು ಉದ್ಧಾರವಾಗುವುದು ಎಂದಿಗೆ? ದೇಶ ತಲೆಯೆತ್ತುವುದು ಎಂದಿಗೆ? – ಎಂದು ನಿಟ್ಟುಸಿರು ಬಿಡುವಂತಾಗುತ್ತದೆ. ಅನ್ಯಾಯವನ್ನು ಎದುರಿಸಿ ಹೋರಾಡುವ ಧೈರ್ಯ ನಮಗೆಂದಿಗೆ ಬಂದೀತೋ!

ಸ್ವಾತಂತ್ರ್ಯಪೂರ್ವದ ದಿವಸಗಳಲ್ಲಿ, ಬ್ರಿಟಿಷ್ ಆಳರಸರು ನಡಸುತ್ತಿದ್ದ ದಬ್ಬಾಳಿಕೆಯನ್ನು ಕಂಡು ಅಂದಿನ ಯುವಕರ ಮನಸ್ಸು, ಮಾನಗೆಟ್ಟ ಬಾಳಿನ ತಮ್ಮ ಅಸಹಾಯಕತೆಯಿಂದ ಯಾವ ರೀತಿ ತುಡಿಯುತ್ತಿತ್ತು, ಬಿಡುಗಡೆಗೆ ಒದ್ದಾಡುತ್ತಿತ್ತು ಎನ್ನುವುದನ್ನು 'ಪ್ರಾರ್ಥನೆ' ಎಂಬ ಪದ್ಯ ಎತ್ತಿ ತೋರಿಸುತ್ತದೆ. ಓದುವಾಗ ರಕ್ತ ಕುದಿಯುತ್ತದೆ.

ಇಷ್ಟು ದಿನ ಪ್ರಾಚೀನ ಕರ್ಮವನ್ನುಂಡಾಯ್ತು,
ಘಾತಕರ ಪಾತಕವ ಭೋಗಿಸಾಯ್ತು;
ಎಮ್ಮ ಸೋದರರಕ್ತ ಹರಿಸಿ ಮುಂದಾಳಾಯ್ತು
ಜನತೆ ಮಾನವ ಮೂರಿ ತಿರಿದುದಾಯ್ತು

ಎಮ್ಮ ಮನೆಗಳ ಭಾಗ್ಯ ಹೆರವರಿಗೆ ತೆತ್ತಾಯ್ತು,
ಅವರ ಎಂಜಲನುಂಡು ಬಾಳಿಯಾಯ್ತು;
ಎಮ್ಮ ಗಂಡನು ಹೀರಿ ದಾಸ್ಯಕ್ಕೆ ದೂಡಿದರ
ಪಾದಘಾತವನೆದೆಯಲಾಂತುದಾಯ್ತು.

(ಸ್ನೇಹ-ವಿಶ್ವಾಸ, 'ಪ್ರಾರ್ಥನೆ', ಪು.೮೯-೯೦)

ಸ್ವಾತಂತ್ರ್ಯ ಕೊನೆಗೂ ಬಂದು ಪರತಂತ್ರ ಕೊನೆಗೊಂಡ ಆ ಮಂಗಲ ಸುಪ್ರಭಾತದಂದು ಮನತುಂಬಿ ಬಂದು, ಕವಿ 'ಹರಸು ತಾಯಿ' ಎಂಬ ಕವನದಲ್ಲಿ ಭಾರತ ಭಾಗ್ಯೇಶ್ವರಿಯ ವೈಭವವನ್ನು ಕಂಡು ಮೈಯುಬ್ಬಿ ಹಾಡುತ್ತಾರೆ :

ಸಾಗರದ ಆಳಕ್ಕೆ ಅಡಿಯೂರಿ ಮೇಲೆದ್ದು
ಧವಳಗಿರಿಗೇರಿರುವ ಪರಿಯ ನೋಡಾ!
ನಿನ್ನ ಕೀರುತಿ ಕಳಸ ಗೌರಿಶಂಕರರೆದುರು
ಮೇರುಗಿರಿಯಲಿ ನಟ್ಟ ವಿಭವ ನೋಡಾ!

(ಸ್ನೇಹ-ವಿಶ್ವಾಸ, 'ಹರಸು ತಾಯಿ', ಪು.೧೧೧)

ಮಾನವಜೀವನದ ಕುಂದುಕೊರತೆಗಳನ್ನು ಕಂಡು ನಿರಾಶರಾದವರಲ್ಲ ವಿ.ಸೀ. ಮಾನವ ತನ್ನ ಪ್ರಯತ್ನದಿಂದ ಮುಂದುವರಿಯಬಲ್ಲ, ಅವನು ಮುಂದುವರಿಯುತ್ತಾನೆ ಎನ್ನುವ ದೃಢ ವಿಶ್ವಾಸವಿತ್ತು ಅವರಿಗೆ. ಈ ವಿಶ್ವಾಸ 'ದೀಪಗಳು' ಸಂಕಲನದ ಕೊನೆಯ ಕವನವಾದ 'ವಿಶ್ವಾಸ'ದಲ್ಲಿ ಸೊಗಸಾಗಿ ಮೂಡಿ ಬಂದಿದೆ.

ಮಾನವನೆತ್ತರ ಆಗಸದೇರಿಗೆ
ಏರುವ ವರೆಗೂ ಏರೇವು;
ಮಾನವಹೃದಯಕೆ ವಿಶ್ವವಿಶಾಲತೆ
ಹಾಯುವ ವರೆಗೂ ಹಾದೇವು

* * * *

ಇಹದಲಿ ಒಪ್ಪಲು ಆಗದ ಪರವನು
ಬಯಕೆಯು ಕರೆವುದೆ ಕೈಚಾಚಿ?
ಬಾಳನು ಶೋಧಿಸಿ ಶುಚಿಯನು ಬೆಳೆದರೆ
ಇಹವೇ ಅರಳದೆ ಪರವಾಗಿ?

(ಸ್ನೇಹ-ವಿಶ್ವಾಸ, 'ವಿಶ್ವಾಸ', ಪು.೧೧೩-೧೧೪)

ನಿಳಲು ಬೆಳಕು (೧೯೩೫)

ಈ ಸಂಕಲನದಲ್ಲಿ ಹಲವಾರು ಸುಂದರ ಕವನಗಳಿವೆ. 'ಮುಕ್ತದ್ವಾರ' ನಾಟಕವನ್ನು ಬೆಂಗಳೂರಿನಲ್ಲಿ ಶಿವರಾಮ ಕಾರಂತರು ಮೊದಲು ಪ್ರದರ್ಶಿಸಿದಾಗ ಕಾಲನಟನಾಗಿ ಅವರು ಕುಣಿದುದನ್ನು ಕಂಡ ವಿ.ಸೀ. ತನ್ಮಯರಾಗಿ ರಚಿಸಿದ ಕವನ 'ಕಾಲನಟ' :

ಚಿಗರಿಯಂತೆ ಚಿಗಿಯುತಾನೆ!
ಬುಗುರಿಯಂತೆ ತಿರುಗುತಾನೆ!
ದಿಸೆಯ ಬಾಚಿ ಹಿಂಡುತಾನೆ!
ಕ್ರಾಂತಿಗಿಟ್ಟು ತೊಳಸುತಾನೆ!

* * * *

ಹಿಂದಿನಿಂದ ಮೇಳದಲ್ಲಿ ತಂಗಿ ಕೊರಲನೆತ್ತಿ ಹಾಡೆ
ಮೊರೆವ ವಾದ್ಯವಾದನಕ್ಕೆ ಸೊಕ್ಕಿದಾನೆ –
-ತನ್ನ ಮರೆತು, ಓ ಅಗೋ, ಕುಣಿಯುತಾನೆ.

(ಸ್ನೇಹ-ವಿಶ್ವಾಸ, 'ಕಾಲನಟ', ಪು.೧೧೮)

ಕಾಲನಟನ ರುದ್ರನಾಟ್ಯ ಕಣ್ಣೆದುರಿಗೆ ನಿಂತಂತಾಗುತ್ತದೆ.

'ಶಬರಿ' ಎನ್ನುವುದು ವಿ.ಸೀ.ಯವರ ಇನ್ನೊಂದು ಪ್ರಸಿದ್ಧ ಕವನ. ರಾಮ ಬರುವನೆಂದು ಕಾದಿರುವ ವೃದ್ಧೆಯಾದ ಶಬರಿಯ ಚಿತ್ರ ಇಲ್ಲಿ ಅತ್ಯಂತ ಸುಂದರವಾಗಿ ಮೂಡಿಬಂದಿದೆ. ಮನವೆಲ್ಲ ಬಯಕೆಯಾಗಿ, ಹಗಲೆಲ್ಲ ಕಾದುಕೂಗಿ, ಇರುಳೆಲ್ಲ ಜಾಗರಾಗಿ :

ಬಾ ರಾಮ, ಬಾರ, ಬಾರಾ
ಬಡವರನು ಕಾಯು ಬಾರಾ

(ಸ್ನೇಹ-ವಿಶ್ವಾಸ, 'ಶಬರಿ', ಪು.೧೨೦)

— ಎಂದು ಅರಸುತ್ತಿರುವ ಶಬರಿಯ ಚಿತ್ರ ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ನಿಲ್ಲುತ್ತದೆ.

ಬೆಂಗಳೂರು ನಗರದಲ್ಲಿ 'ಲಾಲ್‌ಬಾಗ್' ಒಂದು ಚೆಲುವಿನ ತಾಣ. ಸಂಜೆಯ ಹೊತ್ತು ವಿರಾಮವಾಗಿ ಆ ಉದ್ಯಾನದ ಕಡೆ ನಡೆದು ಮನಸ್ಸನ್ನು ಗೆಲುವಾಗಿಸಿಕೊಳ್ಳುವುದು ವಿ.ಸೀ.ಯವರ ದೈನಂದಿನ ಸಂಪ್ರದಾಯ. 'ಲಾಲ್‌ಬಾಗ್' ಕವನದಲ್ಲಿ ಆ ಹೂದೋಟದಲ್ಲಿ ಕಾಣುವ ಬಿಳಿ ಹಸುರು ಕೆಂಪು ರಂಗುಗಳ ರಂಜನೆಯ ಸುಂದರ ವರ್ಣನೆಯಿದೆ.

ಮಧುಮಾಸದೀ ಸವಿಯ ಬೆಡಗು ಹೋಹುದು ಬೇಗ
ನಡೆವಾಗ ಇದನುಣಲು ಓಡಿಬನ್ನಿ

(ಸ್ನೇಹ-ವಿಶ್ವಾಸ, 'ಲಾಲ್‌ಬಾಗ್', ಪು.೧೩೧)

- ಎಂದು ಎಲ್ಲರನ್ನೂ ಕೂಗಿ ಕರೆಯುತ್ತಾರೆ.

ವರುಷ ಕಳೆದುಹೋಗುತ್ತದೆ. ಮಾಗಿಯ ಕಾಲ ಕಳೆದು ಹೊರಗಡೆ ಎಲ್ಲವೂ ಹಸುರಿನಿಂದ, ಹೂಗಳಿಂದ ಕಂಗೊಳಿಸುತ್ತಿದೆ. ಆದರೆ ಕವಿಯ ಮನಸ್ಸಿನಲ್ಲಿ ಯಾವ ಹರ್ಷವೂ ಕಾಣದು.

ವರುಷ ಹೋಯಿತು ವರುಷ ಬಂದಿತು
ಹರುಷ ಬಾರದು ಬಾರದು ;
ಹೊರಗಿನೆಲ್ಲಕು ಹೊಸತು ಬಂದರು
ಎಮ್ಮ ಹಳತನ ಹೋಗದು.

(ಸ್ನೇಹ-ವಿಶ್ವಾಸ, 'ವರುಷ ಹೋಯಿತು', ಪು.೧೫೫)

ಗೆಲುವಿನಿಂದ ಸದಾಕಾಲವೂ ಮನ ತುಂಬಿಸಿಕೊಳ್ಳಲು ಬಯಸುತ್ತಿದ್ದ ವಿ.ಸೀ. ಹೀಗೆ ನಿರಾಶರಾಗಿ ನೋವಿನಿಂದ ಏಕೆ ಪರಿತಪಿಸಿದರೋ? ಯಾವ ಸಂದರ್ಭ ಅವರಲ್ಲಿ ಇಂಥ ನಿರಾಸೆ ಮೂಡಿಸಿತೋ ತಿಳಿಯಬಲ್ಲೆವೆ?

* * * *

ತಮ್ಮ ಕವನಗಳು ಕವಿತೆಯೇ ಅಲ್ಲ, ಎಲ್ಲವೂ ಸಪ್ಪೆ ಎಂಬ ಟೀಕೆ ಕೇಳಿ, ಆ ಟೀಕೆಯಿಂದ ನೊಂದು ವಿ.ಸೀ. ಬರೆಯುತ್ತಾರೆ. :

''..... ನನ್ನ ಬೆಳವಣಿಗೆ ಎಂದೂ ಅಷ್ಟೇನೂ ಹೇಳಿಕೊಳ್ಳುವಂಥ ದಾಗಿರಲಿಲ್ಲ. ಈ ನಮ್ಮ ಮಗು ಹುಟ್ಟುವವರಿಗೆಲ್ಲ ಅಣ್ಣ, ಬೆಳೆಯುವವರಿಗೆಲ್ಲ ತಮ್ಮ ಎಂದರು, ನನ್ನನ್ನು ಸಾಕಿದ ತಾಯಿಯರು. ಹುಟ್ಟಿದವರೆಲ್ಲ ನನ್ನ ಅಣ್ಣಂದಿರಾಗಿ ಬೆಳೆಯಲಿ ಎಂದು ನನ್ನ ಹಾರೈಕೆ. ಈ ನಡುವೆ ನನ್ನದೂ ಒಂದು ಕಿರಿಜೀವ. ಇದಕ್ಕೂ ಜಗತ್‌ಸೃಷ್ಟಿಯಲ್ಲಿ ಒಂದು ಸ್ಥಾನವಿದೆ. ಅಷ್ಟಾಗಿ ಇರುವುದರಲ್ಲಿ ನಾನು ತೃಪ್ತ. ಸಪ್ಪೆಯೋ ಉಪ್ಪೊ ಖಾರವೋ ಅದು ನೋಡುವವರ, ಸವಿಯುವವರ ಗೋಜು. ಬೇಡದವರಿಗೆ ಅದರ ಗೊಡವೆಯೇ ಬೇಕಿಲ್ಲವಲ್ಲ!''

(ಸ್ನೇಹ-ವಿಶ್ವಾಸ, 'ನೆಳಲು ಬೆಳಕು', ಮುನ್ನುಡಿ, ಪು.೫೮೨)

ಈ ಕವನ ಸಂಕಲನದಲ್ಲಿನ 'ಹೆಮ್ಮರ' ಎನ್ನುವುದೊಂದು ಅಪೂರ್ವ ಕೃತಿ. ಕಲ್ಲನ್ನು ಸೀಳಿ, ಸಸಿಯಾಗಿದ್ದಾಗ ಒದಗಿದ ಅನಿಷ್ಟಗಳಿಂದ ಪಾರಾಗಿ, ಗಾಳಿಮಳೆ

ಗಳ ಹೊಡೆತವನ್ನು ಲೆಕ್ಕಿಸದೆ, ಬಿಟ್ಟದಡಿಯಲ್ಲಿ ಬೆಳೆದ ಹೆಮ್ಮರವನ್ನು ಕಂಡು ವಿ.ಸೀ.ಯವರ ಕವಿದೃಷ್ಟಿ ಕೆರಳುತ್ತದೆ. ಆ ಮರದಂತೆಯೇ ನಾವೂ ಸಾಹಸಿಗಳಾಗಬೇಕು ಎನ್ನುತ್ತಾರೆ.

ವೀರ ಸಾಹಿಗಳೀರಿ ತುದಿಯಿಂದ ಸುತ್ತಲಿನ
ಸೌಭಾಗ್ಯವಳೆಯುವರು ಕಣ್ಣಿನವರಿಗು;
ಇಂದ್ರನೀಲಾಕಾಶದೊಡಲಲ್ಲಿ ಹುದುಗಿರುವ
ತಾರೆಗಳ ಜೀವಗಳ ಗತಿಯನಳೆಯುವರು
ದಿವ್ಯಮರ್ಮಗಳಂತು ದೇವರಿಗು ಮಿಗಿಲಾದ
ಸತ್ಯಧರ್ಮದ ಕೀರ್ತಿ ವಿವರವರಿಯುವರು.

(ಸ್ನೇಹ-ವಿಶ್ವಾಸ, 'ಹೆಮ್ಮರ', ಪು.೧೬೦)

ಎಂಥ ಉದಾತ್ತ ಕಲ್ಪನೆ! 'ಇಂದು ನಾಳೆಗು ಎಮಗೆ ಗುರುವಾಗಿದೆ' ಹಿರಿಮೆ ಪತಾಕೆ ಎತ್ತಿ ನಿಂತಿರುವ ಈ ಹೆಮ್ಮರ ಎನ್ನುತ್ತಾರೆ.

ದೂರ ಹೋಗಿರುವ ಮಡದಿಯನ್ನು ನೆನೆದು, ಅಗಲಿಕೆಯಿಂದ ಬೇಸತ್ತು ನುಡಿದಿರುವ ಕವನ 'ಅಗಲಿಕೆ'. ಅಗಲಿಕೆಯ ನೋವನ್ನು ಹೇಗೆ ಬಿಂಬಿಸುತ್ತದೆ ನೋಡಿ :

ಇದ್ದಾಗ ಕಾಣಿಸವು ಕೆಳೆಯ ಸೊಗಸು!
ಕಣ್ಗೆ ಹಾಯವು ಬೆಲೆಯು ಸವಿಯು ಮೃದುವು
ಇನಿಸು ದೂರಕೆ ಸರಿದು ಕಿರುಗಾಲ ಕಾಣದಿರೆ
ಸೊರಗಿ ಹಾತೊರೆಯುವುದು ಬಯಕೆ ತೆರೆದು.

(ಸ್ನೇಹ-ವಿಶ್ವಾಸ, 'ಅಗಲಿಕೆ', ಪು.೧೬೨)

ಭಾವಸಂಪತ್ತಿಯಿಂದ ತುಂಬಿತುಳುಕುವ ಇಂಥ ಕವನಗಳನ್ನು ಕಾವ್ಯ ಅಲ್ಲ, ಬರೆದವನು ಕವಿಯಲ್ಲ ಎನ್ನಲಾದೀತೆ? ಕವನಗಳನ್ನು ಸಪ್ಪೆಯೆಂದು ದೂರ ಬಹುದೆ?

ದ್ರಾಕ್ಷಿ ದಾಳಿಂಬೆ (೧೯೪೮)

ಇದು ವಿ.ಸೀ.ಯವರ ನಾಲ್ಕನೆಯ ಕವನಸಂಕಲನ. ಪ್ರಕಟವಾದದ್ದು ೧೯೪೮ರಲ್ಲಿ. ತಮ್ಮ ಕವಿತೆಗಳ ವಿಷಯವಾಗಿ ಬಂದ ದೂರುಗಳ ಸಂಗ್ರಹವೋ ಎನ್ನುವಂತೆ - 'ಮಡಿಗವಿತೆ, ಹಳಸಲೂಟ, ಪ್ರಾಗ್ದೃಷ್ಟಿ, ಕಣ್ಣುಪಟ್ಟಿ ಕಟ್ಟಿದವನ ಕಾಣ್ಕೆ, ಬಂಡವಾಳಷಾಹಿಯ ಕೋಣ, ದಂತದ ಗೋಪುರವಾಸಿ, ಮಧ್ಯಮ ತರಗತಿಯ ಮಂದಮತಿ' ಈ ಬಗೆಯ ಸಂಬೋಧನೆಗಳ ಪಟ್ಟಿಯನ್ನೇ ಕೊಟ್ಟಿದ್ದಾರೆ. ಹೊರ ಪ್ರಪಂಚದಲ್ಲಿನ ಆಗುಹೋಗುಗಳಿಗಿಂತ ಅಂತಃಪ್ರವೃತ್ತಿಗಳ

ಕಡೆಗೇ ವಿ.ಸೀ.ಯವರದು ಹೆಚ್ಚಿನ ಗಮನ. ಪ್ರೇಮ, ನೋವು, ಗೆಲವಿನ ಸಂತೋಷ, ಮಾನಾಪಮಾನ, ಗೌರವ, ಶುಚಿ ಇವುಗಳ ಕಡೆಗೇ ಅವರ ಒಲವು. ಇವುಗಳನ್ನು ನಿತ್ಯಪ್ರಾಚೀನ ನಿತ್ಯನೂತನ ಮನೋವೃತ್ತಿಗಳೆನ್ನುತ್ತಾರೆ. ''ಇದೆಲ್ಲ ಸವಿಯಲ್ಲ; ಇವು ಬೇಡ ಎನ್ನುವ ಅಸಹನೆ ಯಾಕೆ? ಕವಿತೆಗಳಲ್ಲಿ ಕಾವು, ಗುಣ ಶಕ್ತಿ, ಸದಭಿರುಚಿ, ನ್ಯಾಯ ಸಂಸ್ಕಾರಗಳಿದ್ದರೆ ಅವಕ್ಕೆ ಬೆಲೆ ಬರಲಾಗದೆ?'' ಎನ್ನುತ್ತಾರೆ.

ನಾಡಿನ ಉದ್ದಗಲದಲ್ಲೆಲ್ಲ ಸಂಚರಿಸಿ, ಅಲ್ಲಿನ ಚೆಲುವನ್ನು ಕಂಡು ಇನ್ನಿಲ್ಲದ ಸಂತಸಪಟ್ಟವರು ವಿ.ಸೀ. ಭಾರತದ ಇತರ ಅನೇಕ ಭಾಗಗಳ ಪರಿಚಯವೂ ಅವರಿಗೆ ತಕ್ಕಷ್ಟಿತ್ತು. ಹೀಗಾಗಿ ತಮ್ಮ ತಾಯಿನಾಡಾದ ಕನ್ನಡನಾಡಿನ ಬಗ್ಗೆ, ಅದರ ಇತಿಹಾಸದ ಬಗ್ಗೆ, ಅಲ್ಲಿನ ಜನರ ವಿನಯ ಸದ್ಗುಣಗಳ ಬಗ್ಗೆ ವಿಶೇಷ ಅಭಿಮಾನ ತಾಳಿದ್ದರು. ಈ ಅಭಿಮಾನ ಅವರ 'ಕನ್ನಡ ನಾಡು' ಗೀತೆಯಲ್ಲಿ ಎದ್ದುಕಾಣುತ್ತದೆ.

ಬಾನಿನಗಲಕೆ ನೆಲಸಿ ದೆಸೆದೆಸೆಗೆ ಕಟ್ಟಿ
ನಡೆ ನೋಟಕೆರಚಿರುವ ಕಸ್ತೂರಿನಾಡು;
ಅಗೆದಲ್ಲಿ ಹೊಳೆಹೊನ್ನು, ನುಡಿಯು ದಾಂಗುಡಿ ಹಾಡು
ಅಡಿತಳದ ಅರಿಮೆಟ್ಟು, ಗಂಡುಮೆಟ್ಟು -
ವೀರ ಸಿರಿ ಕಲೆಬೀಡು ನನ್ನ ತಾಯ್ನಾಡು

ಕರೆ, ಕೆರೆ; ಕೊಳ, ಹೊಳೆ; ಗಟ್ಟ, ಗಣಿ, ತೋಡು,
ಯಾಲ, ಬಾವನ್ನ, ಮೆಳಸು, ರಸದಾಳಿಯಬ್ಬಿವೊನಲು
ಕಣ್ಗೆ ಲೀಲೆಯ ಚೆಲ್ಲಿ, ದುಮುದುಮುಕಿ ದುಡಿವ ನೀರ್ಮುತ್ತು ಬೀಳು;
ಮಾವಿನಲಿ ಮಾಗಿ, ಹೊಂಬಾಳೆ ತೂಗಿ, ಅರಳೆ ಬೆಳ್ನಗೆ ನಕ್ಕು,
ರೇಸಿಮೆಗೆ ನಯವಾದ ನಯದ ಬೀಡು.

ಇನ್ನು ನಾಡಿನ ಸಿರಿಯೊ, ಜನವೊ, ಮಾನವತೆಯನ್ನು ಮೆರೆದ ಬಾಹುಬಲಿಗಳೊ!

ಇಳೆಯ ಕಣ್ಕೊಳುವ ಸಿರಿ, ಪದವಿ, ಪಟ್ಟದೊಡವುಟ್ಟು ಬಾಳು;
ಯೌವನದ ಸೊಕ್ಕು, ಚಕ್ರರತ್ನದಿ ಬಲಿತ ಕ್ಷಾತ್ರದುರ್ಕು,
ಅಣ್ಣನಬ್ಬರವಿಳಿಸೆ ಕನಲೆದ್ದ ಬಾಹುಬಲ
ಸೋದರತೆ ಮಾನವತೆ ನೆನೆದು ತಿರುಗಿ
ಜಿನತೆ ಕಾರುಣ್ಯಕ್ಕೆ ಸೋತ ಗೆಲವು;
— ಇವ ಮೆರೆವ ಘನತೆಗಳ ನಾಡು.

(ಸ್ನೇಹ-ವಿಶ್ವಾಸ, 'ಕನ್ನಡ ನಾಡು', ಪು.೧೭೧-೧೭೨)

ಇಂಥ ಉತ್ತಮಿಕೆಯನ್ನು ಮೆರೆವ ನಾಡನ್ನು ಕುರಿತು ಯಾವ ಕನ್ನಡಿಗನ ಎದೆ ಉಬ್ಬದಿದ್ದೀತು. ಭಾರತದ ಇತರ ದೇಶಗಳ ಪಂಕ್ತಿಯಲ್ಲಿ ಮನ್ನಣೆ ಪಡೆದು ಬಾಳುವಂತೆ, ಕನ್ನಡಿಗನ ಮನವನ್ನು ಹುರಿದುಂಬಿಸುತ್ತವೆ ಈ ಕವನದ ಸಾಲು ಗಳು.

'ತಂದೆ ಹರಕೆ' ಎನ್ನುವುದು ಈ ಸಂಕಲನದಲ್ಲಿರುವ ಇನ್ನೊಂದು ಹೃದಯ ದಾಳದಿಂದ ಹೊರಹೊಮ್ಮಿದ ಕವನ. ಬರೆದ ಸಂದರ್ಭ ಯಾವುದೋ ತಿಳಿ ಯದು. ಮಕ್ಕಳಿಗೆ ಹೇಳುತ್ತಾರೆ ಕವಿ :

ನನ್ನ ರಕ್ತದಿ ಹುಟ್ಟಿ ಬೆಳೆದಿಹ
ನಾಲ್ಕು ಮಕ್ಕಳು ನಿಲ್ಲಲಿ ;
ನನ್ನ ದಿಬ್ಬಣವವರ ಭುಜದಲಿ
ಮಸಣ ಸೂಡಿಗೆ ನಡೆಯಲಿ.

ನಾನು ಕಟ್ಟಿದ ಮನೆಗೆ ಮಾಡಕೆ
ಹೊನ್ನ ಕಳಸಗಳೇಳಲಿ ;
ಲೋಕ ನಡೆಯುವವರೆಗು ಬೆಳಗುತ
ಮನೆಯ ದೀವಿಗೆ ಬೆಳಗಲಿ.

(ಸ್ನೇಹ-ವಿಶ್ವಾಸ, 'ತಂದೆ ಹರಕೆ', ಪು.೨೦೦)

ತಂದೆಯಾದವನು ಇದಕ್ಕಿಂತ ಹೆಚ್ಚಿನದೇನನ್ನು ಕೇಳಿಕೊಳ್ಳಬಹುದು ?

'ಬೇಲೂರು ಚೆನ್ನಕೇಶವ' ಎಂಬ ಕವನದಲ್ಲಿ ದೇವಾಲಯದ ಕಲಾ ವೈಭವವನ್ನು ಕಂಡು ಹಾಡುತ್ತಾರೆ :

ಕಲ್ಲು ನಾಡಿನ ಕತೆಯ ಹೇಳುತಿದೆಯಿಲ್ಲಿ
ಗೈಮೆ ಆಗಸದತ್ತ ಕೈಯೆತ್ತಿ ತೋರುತಿದೆ
ಕಲೆಗೆ ಕಳಸವ ಕೆತ್ತಿ ಕಣ್ಗೆ ಹಿಡಿದು
ಹಿರಿಯ ಬಾಳಿನ ಬೆಳೆಗೆ ಬೆಳಕನಿಡಿದು

ಬಾಳ ಗಾನವೆ ಘನಿಸಿ ಶಿಲ್ಪವಾಗಿದೆಯಿಲ್ಲಿ
ನಾಡ ಭಾಗ್ಯದ ಚರಿತೆ ರೂಪಾಂತಿದೆ
ರೂಪಿಗಾತ್ಮವ ತುಂಬಿ ಅಮೃತಗೈದಿರಲಿಲ್ಲಿ
ಕಲೆ ಸಫಲವಾಯ್ತೆಂದು ಶಿಲೆ ಸಾರಿದೆ.

(ಸ್ನೇಹ-ವಿಶ್ವಾಸ, 'ಬೇಲೂರು ಚೆನ್ನಕೇಶವ', ಪು.೨೧೩, ೨೧೬)

'ಕಲೆ ಸಫಲವಾಯ್ತೆಂದು ಶಿಲೆ ಸಾರಿದೆ' ಎನ್ನುವ ಸಾಲಿನಲ್ಲಿ ಎಷ್ಟು ಸೊಗಸು, ಸತ್ಯ, ಸೌಂದರ್ಯಗಳು ಅಡಕವಾಗಿವೆ !

ಹೆಜ್ಜೆಪಾಡು (೧೯೫೮)

ಇದು ವಿ. ಸೀ. ಯವರ ಐದನೆಯ ಕವನ ಸಂಕಲನ ; ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದವರು ಪ್ರಕಟಿಸಿದ್ದು. ಕರ್ನಾಟಕ ಸಂಘದ 'ಪ್ರಬುದ್ಧ ಕರ್ನಾಟಕ' ಇನ್ನೂ ಮೂರು ವರ್ಷ ಕೂಡ ದಾಟದಿರುವ ಕಾಲದಿಂದ ಹಿಡಿದು ಪತ್ರಿಕೆಯನ್ನು ಪೋಷಿಸಿಕೊಂಡು ಬರುವುದರಲ್ಲಿ ವಿ. ಸೀ. ನೆರವಾಗಿದ್ದರು. ಆದರೆ ಮುಂದೆ ಕರ್ನಾಟಕ ಸಂಘದ ಕಾರ್ಯನಿರ್ವಾಹಕರಾಗಿದ್ದರಿಂದ ತಮ್ಮ ಕೃತಿಗಳು ಯಾವುವನ್ನೂ ಸಂಘ ಪ್ರಕಟಿಸುವುದಕ್ಕೆ ಅದುವರೆಗೂ ಅನುಮತಿ ಕೊಟ್ಟಿರಲಿಲ್ಲ. ವಿಶ್ವವಿದ್ಯಾನಿಲಯದ ಅಧ್ಯಾಪಕತನದಿಂದ ನಿವೃತ್ತಿ ಪಡೆದು ಸಂಘದ ಸಂಬಂಧ ಕಳೆದುಕೊಂಡನಂತರ, ಸಂಘದ ಕಾರ್ಯದರ್ಶಿಯಾಗಿ ಸಂಘಕ್ಕೆ ಜೀವ ತುಂಬಲು ಹೆಣಗುತ್ತಿದ್ದ ಜಿ.ಪಿ. ರಾಜರತ್ನಂ ಅವರ ಕೋರಿಕೆಗೆ ಮನ್ನಣೆಯಿತ್ತು, 'ಹೆಜ್ಜೆಪಾಡು' ಕವನ ಸಂಗ್ರಹವನ್ನು ಕರ್ನಾಟಕ ಸಂಘದ ಪ್ರಕಟನೆಯಾಗಿ ಹೊರತರಲು ಒಪ್ಪಿದರು.

ಕವನ ಸಂಕಲನದ ಮುಖಪುಟದಲ್ಲಿ ದಾರ್ಶನಿಕ Kierkegaard ನ ಕೆಳಗಿನ ಸಾಲುಗಳು ಕಾಣುತ್ತವೆ :

> Life can only be understood backwards
> But it must be lived forwards.

ಇದನ್ನು ಆಧಾರವಾಗಿಟ್ಟುಕೊಂಡೇ 'ಹೆಜ್ಜೆಪಾಡು' ರೂಪುಗೊಂಡಂತಿದೆ. ವಿ.ಸೀ. ತಮ್ಮ ಮನ್ನುಡಿಯಲ್ಲಿ ಹೇಳುತ್ತಾರೆ :

> ''ಬಾಳಲ್ಲಿ ಹೆಜ್ಜೆ ಇಡುವವರ ಪಾಡು, ಇಟ್ಟವರ ಪಾಡು ಇಲ್ಲಿ ಸ್ವಲ್ಪಮಟ್ಟಿಗೆ ಪ್ರತಿಬಿಂಬಿಸೀತೆಂದು ನಂಬಿದ್ದೇನೆ. ಇವೆಲ್ಲ ನನ್ನ ಹೆಜ್ಜೆಗಳೇ ಎಂದಲ್ಲ ; ನಾನು ಕಂಡವು, ನನ್ನ ಕಿವಿಗೆ ಬಿದ್ದವು - ಎರಡೂ ಇವೆ .....
>
> ಈ ಪದ್ಯದಲ್ಲಿ ಕಾಣುವುದು ನಮ್ಮಂಥವರ ಬಾಳು ; ನನ್ನ ದಾರಿಯ ಕಾಣ್ಕೆ.''
>
> *(ಸ್ನೇಹ-ವಿಶ್ವಾಸ, 'ಹೆಜ್ಜೆಪಾಡು' ಮುನ್ನುಡಿ, ಪು.೫೮೬)*

ಆತ್ಮಗುಣಾವಮಾನಿಯೂ, ನಿರಹಂಕೃತಿಯ ಸಾಕಾರಮೂರ್ತಿಯೂ ಆದ ವಿ.ಸೀ. ತಮ್ಮ ಕವನಗಳ ಬೆಲೆಯನ್ನು ತಾವೇ ಕಟ್ಟುತ್ತ ಹೇಳುತ್ತಾರೆ :

> ''ಈ ಸಣ್ಣ ಪುಸ್ತಕದಲ್ಲಿ ಏನಿದೆಯೊ ಏನಿಲ್ಲವೊ ? ರಸಪುಷ್ಟಿ, ವಿಹಾರ ವಿಲಾಸ, ರೂಪಕಸಮೃದ್ಧಿ, ಪ್ರತಿಮಾಸಂವಿಧಾನ, ಧ್ವನಿಯ ಬೆಡಗು, ಆಧ್ಯಾತ್ಮಿಕತೆ ಕಾಣವೇನೋ. ಇಲ್ಲಿನ ಬರವಣಿಗೆ ನೇರವಾದ್ದು. ಮಾತಿನ ದಾರಿದ್ರ್ಯ ಹುಯಿಲಿಡುತ್ತಿದೆಯೆನ್ನಬಹುದು ಕೂಡ. ಅದಕ್ಕೆ ದಯಮಾಡಿ ಬೇಸರಪಡಬಾರದು.''
>
> *(ಸ್ನೇಹ-ವಿಶ್ವಾಸ, 'ಹೆಜ್ಜೆಪಾಡು', ಮುನ್ನುಡಿ, ಪು.೫೮೯)*

ನಾವೇನು ಮಾಡಿದ್ದೇವೆ, ಜಗತ್ತು ಏಕೆ ನಮ್ಮನ್ನು ಮೆಚ್ಚಬೇಕು? ಕಷ್ಟಗಳನ್ನು ಅಳಿಸಿದ್ದೇವೆಯೆ? ಸಂತಸವನ್ನು ಬೆಳೆಸಿದ್ದೇವೆಯೆ? ನಾಲ್ಕು ಜನರಿಗೆ ಉಪಕಾರ ಮಾಡಿದ್ದೇವೆಯೆ? ಹೀಗೆಂದು ಪ್ರಶ್ನಿಸಿಕೊಳ್ಳುತ್ತಾರೆ ವಿ.ಸೀ.

ಹೆತ್ತವರ ವಂಶಕ್ಕೆ
ಸಾಕಿರುವ ದೇಶಕ್ಕೆ
ಕಲಿಸಿರುವ ಗುರುಗಳಿಗೆ ಕೀರ್ತಿತಂದಿಹೆವೆ ?

ಏನೆಮದು ಉಪಕಾರ
ಜಗವೆಂತು ನೆನೆಯುವುದು
ಏನಗೈದರು ಎಂದು ಭೂಷಿಸುವುದು ?

(ಸ್ನೇಹ-ವಿಶ್ವಾಸ, 'ನಮ್ಮದೇನು?', ಪು.೨೨೯)

ಇಂಥ ಅಂತರಂಗನಮ್ರತೆ ನಮ್ಮಲ್ಲಿ ಎಷ್ಟು ಜನಕ್ಕುಂಟು? ಎಲ್ಲರೂ ತಮ್ಮ ಹೆಚ್ಚುಗಾರಿಕೆಯನ್ನು ಮೆರೆಯುವವರೇ; ಅಧಿಕಾರ, ಕೀರ್ತಿಗಳಿಗೆ ಹಾತೊರೆಯುತ್ತಿರುವವರೇ. ಎಷ್ಟೊಂದು ರೀತಿಯಲ್ಲಿ ಕೊಡುಗೆಯನ್ನು ಕೊಟ್ಟಿದ್ದರೂ, 'ನನ್ನದೇನು ಹೆಚ್ಚು' ಎನ್ನುವ ಈ ಮನೋಭಾವ ಉಳ್ಳ ವಿ.ಸೀ.ಯವರನ್ನು ನಾವು ವಿಶೇಷವಾಗಿ ಮೆಚ್ಚುವಂತೆ ಮಾಡಿದೆ.

ಗಾಂಧಿಯವರನ್ನು ಗುಂಡಿಟ್ಟು ಕೊಲೆಮಾಡಿದಾಗ ಹುಟ್ಟಿದ ಹೃದಯ ವೇದನೆಯಿಂದ ಹೊರಬಿದ್ದ ಕವನ 'ಕೈ ಮುಗಿದ ಗಾಂಧಿ'. ಅಲ್ಲಿನ ಭಾವನಾವೇಶವನ್ನು ಹೇಗೆ ವಿವರಿಸಿ ಹೇಳುವುದು? ಮಾದರಿಗಾಗಿ ಕೆಲವು ಸಾಲುಗಳನ್ನು ಉದ್ಧರಿಸಿ ಸೂಚಿಸಬಹುದು ಮಾತ್ರ.

ಇನ್ನು ನುಡಿವವರಾರು ಮಿದು ಬಗೆಯ ಬೆಳ್ಗಾಂತಿ ನುಡಿಯ !
ಇನ್ನಾರು ನಡೆವರಾ ಬೆಳ್ಗೆಚ್ಚು ನಡೆಯ !
ಬಿಡುಗಡೆಗೆ ನಾಡನ್ನು ನಡಸಿ ಹೊಸಹಾಡ ಹಾಡಿಸಿದಿರಿ.
ಮಕ್ಕಳನು ಹೆಣ್ಗಳನು ಕೆಳಗೆ ಬಿದ್ದಾರ್ತರನು
ಮೇಲೆತ್ತಿ ಸಂತೈಸಿ ಬದುಕಿಸಿದಿರಿ.
ನಯದ ಒಳಗಣ್ ತೆರೆದು ಸರಸ ಹಾಯಿಸಿದಿರಿ.
ಎಂದೆಂದು ಕಿವಿಗೆ ಕೇಳೀತು ನಿಮ್ಮವೇ ಈ ಸಾಧು ನಡೆಯು ;
ಕಣ್ತೆರೆದು ಕಂಡೀತು ಎಲ್ಲೆಲ್ಲು ಆ ಮುಗಿದ ಕೈಯೇ ;
ಎದೆಯ ಸಂಕೋಚದಲಿ ಕಲ್ಲಾದ ಮಾನವತೆ
ಕರಗಿ ಹೊನಲಾಗಿಸುವ ಹಿರಿಯ ನಡೆಯೇ.
ಇದುವೆ ನಿಮ್ಮುದ್ಧಾರ ಚರಿತೆ
ಇದುವೆ ನೀವುತ್ತ ನೆಲನು ;
ನಿಮ್ಮನೇ ನೀಪ್ಪಿತ್ತಿ ಬೆಳಸಿರುವ ಬೆಳಸು.
ಬಾಳ ಚರಿತಾರ್ಥತೆಗೆ ಬೇರೆ ಪಥವೇನುಂಟು
ಓ ತಂದೆ ಗಾಂಧೀ,

ನಿಮ್ಮ ಋಣವೆಂದು ಮುಗಿದೀತು ಇಳೆಗೆ?
ಭಾರತಕೆ ನಿಮ್ಮ ಋಣವೆಂದು ತೀರೀತು?

(ಸ್ನೇಹ-ವಿಶ್ವಾಸ, 'ಕೈ ಮುಗಿದ ಗಾಂಧಿ', ಪು.೨೨೨, ೨೨೪)

ಅರಲು ಬರಲು (೧೯೭೨)

ಈ ಶೀರ್ಷಿಕೆಯ ಸಂಕಲನ ೧೯೭೨ರಲ್ಲಿ ಪ್ರಕಟವಾಯಿತು. ಇಲ್ಲಿ ಒಟ್ಟುಗೂಡಿರುವ ಕವನಗಳು ಮಿಕ್ಕ ಸಂಗ್ರಹಗಳಲ್ಲಿನ ಕವನಗಳಿಗಿಂತ ಭಿನ್ನವಾಗಿರುವಂತೆ ತೋರುತ್ತವೆ. ಪ್ರಾಯಶಃ ಇವೆಲ್ಲವೂ ನಾಡಿಗೆ ಸ್ವಾತಂತ್ರ್ಯ ಬಂದಾದ ಕಾಲದಲ್ಲಿ ಬರೆದಿರಬೇಕು. ಆಕಾಶವಾಣಿಯಲ್ಲಿ ಕೆಲಸಮಾಡುತ್ತಿದ್ದ ಕಾಲದಲ್ಲಿ ದಿನದಿನದ ಅಗತ್ಯಕ್ಕೆ ಬರೆದವೂ ಇವುಗಳಲ್ಲಿ ಸೇರಿರಬೇಕು. ಈ ಸಂಗ್ರಹಕ್ಕೆ ಬಹು ದೀರ್ಘವಾದ ಮುನ್ನುಡಿ ಬರೆದಿದ್ದಾರೆ. ಆದರೆ ಈ ಮುನ್ನುಡಿಯಲ್ಲಿ ಕವನಗಳನ್ನು ಬರೆದ ಸಂದರ್ಭವನ್ನಾಗಲಿ, ಹೊಸ ಬೆಳಕು ಚೆಲ್ಲುವಂಥ ಯಾವುದೇ ಪ್ರಸ್ತಾಪವನ್ನಾಗಲಿ ಮಾಡಿಲ್ಲ. ಅದಕ್ಕೆ ಬದಲು ತಮ್ಮ ಕಾವ್ಯದ ವಿಷಯವಾಗಿ ಬಂದಿರುವ ಆಕ್ಷೇಪಣೆಗಳಿಗೆ, ಕಟುವಾಯಿತೇನೊ ಎನ್ನಬಹುದಾದ ಟೀಕೆಗಳೇ ಮೇಲುಗೈಯಾಗಿವೆ. ಅವರು ಹೇಳುತ್ತಾರೆ :

> ''..... ಇದರಲ್ಲಿನ ಯಾವುದಾದರೂ ಸೊಗಸುವುದಾದರೆ ಅದು ಅರಲು; ಉಳಿದುದು ಬರಲು, ಬತ್ತಲು. ಎಂಥದೇ ಬದುಕಾಗಲಿ, ಎರಡೂ ಸ್ವಲ್ಪಮಟ್ಟಿಗೆ ಕಾಣುತ್ತವೆ. ಇಲ್ಲಿನ ಯಾವುದು ಅರಲಂತಿದೆಯೋ ಅಂಥದನ್ನು ಹಾಗೆ ಭಾವಿಸಬಹುದು. ಉಳಿದುದು ನನ್ನಂತೆಯೇ ಬರಲು.'' (ಸ್ನೇಹ-ವಿಶ್ವಾಸ, ಪು.೫೯೬)
>
> * * * *
>
> ''ಈ ನನ್ನ ಬರವಣಿಗೆಯಲ್ಲಿ ಏನಿದೆಯೊ ಏನಿಲ್ಲವೊ; ಈ ಹಲವು ವರ್ಷಗಳಲ್ಲಿ ನಾನು ನನ್ನ ಹಳೆಯ ಬಗೆಯಲ್ಲಿ ಬರೆದುದನ್ನು ಈಗ ಪ್ರಕಟಿಸುತ್ತಿದ್ದೇನೆ. ಅದರಲ್ಲಿ ತುಂಬ ಕಲ್ಪನಾವಿಲಾಸ ಇಲ್ಲವಾದರೂ ಒಂದು ಮನಸ್ಸಿನ ಆಸೆ. ಆಕಾಂಕ್ಷೆ, ನಿಲವು, ಅದರ ವಾಣಿ ಇರಲು ಯತ್ನಿಸಿದೆ.'' *(ಅದೇ, ಪು.೬೨೫)*

ಹಳಬರಾದವರಿಗೆ ಅಶ್ಲೀಲವೆಂದು ತೋರಿಬರುವ, ಈಚಿನ ಆಧುನಿಕವೆಂದು ಕರಸಿಕೊಳ್ಳುವ ಬರವಣಿಗೆಯನ್ನು ಕುರಿತು ಹೇಳುತ್ತ :

> ''.... ಲೋಕದಲ್ಲಿ ಯಾರು ಕಾಣರು - 'ವಿಣ್ಮೂತ್ರ ಅಮೇಧ್ಯ ಮಧ್ಯೇ' ಮನುಷ್ಯನು ಹುಟ್ಟಿದ್ದು ಎಂದು? .... ಅದನ್ನು ಕುರಿತು ಜನ ಯಾವ ಯಾವ ಮಾತನ್ನಾಡಿಲ್ಲ? .... ಈ ಸಂಬಂಧದಲ್ಲಿ ಎಷ್ಟು ಶೃಂಗಾರ ನಿರ್ಮಾಣವಾಗಿದೆ. ಹಾಸ್ಯ, ಆಕ್ರೋಶ, ಕ್ರೋಧ, ಅಸೂಯೆ, ಕೊಲೆ, ಕಾರ್ಪಣ್ಯ, ಸ್ವಾರ್ಥ, ದ್ವೇಷ ಹುಟ್ಟಿ ಲೋಕವನ್ನು ಹಿಂಸಿಸಿಲ್ಲ! ವಿಕಟ ಗೊಳಿಸಿಲ್ಲ! ಹಾಗೆಂದರೆ ಎಷ್ಟು ಸುಖ ಸಂತೋಷಗಳನ್ನು ಊಡಿಲ್ಲ!

ಮೋಹ, ಮಮತೆ, ಸೌಂದರ್ಯ ಕಲೆಗಳು, ಮಹಾಸೌಧಗಳು ಹುಟ್ಟಿಲ್ಲ!....'' (ಅದೇ, ಪು.೬೨೦)

* * * *

''ಮದ್ಯ, ಅಕ್ರಮ ಸಂಭೋಗ, ಅವನ್ನು ಸೂಚಿಸುವ ಕೀಳು ಮಾತು ಯಾವ ಕಾಲದಲ್ಲಿ ಜನಕ್ಕೆ ಗೊತ್ತಿರಲಿಲ್ಲ? ಹೆಣ್ಣುಗಂಡುಗಳ ಸಂಬಂಧದಲ್ಲಿ ಶುಚಿ ಮೈ ಇನ್ನೊಂದು ಮೈಗೆ ಪ್ರಿಯವಾಗಿ ಪ್ರೀತಿ ಗೌರವಗಳನ್ನು ಅರ್ಪಿಸುತ್ತದೆ. ತಾಯಿ ತಂಗಿ ಮಗಳು, ತಂದೆ ತಮ್ಮ ಮಗ, ಇವರನ್ನು ಶುಚಿ ಪ್ರೀತಿಯಲ್ಲಿ ಕಾಣುವ ಮನಸ್ಸು, ಗಂಡು ಹೆಣ್ಣಿನ ಸಂಬಂಧದಲ್ಲಿ ಕೊಳೆಯ ಮಾತುಗಳನ್ನಾಡಲು ಇಷ್ಟ ಪಡುತ್ತಿರಲಿಲ್ಲ; ಹೇಸುತ್ತಿತ್ತು. ಅಂಥದನ್ನು ಅಸಭ್ಯವೆನ್ನುತ್ತಿತ್ತು. ಪ್ರಾಕೃತರಂಥವರು, ವಿದ್ಯಾವಿನಯ ಸಂಸ್ಕಾರವಿಲ್ಲದವರು ಹೀಗೆ ನುಡಿಯುವುದಿಲ್ಲವೆ?'' (ಅದೇ, ಪು.೬೨೧-೬೨೨)

ಹೀಗೆ ಹೇಳಿ ಭರತಮುನಿ ನಾಟಕದಲ್ಲಿ ಯಾವುದನ್ನು ಪ್ರಯೋಗಿಸ ಕೂಡದು ಎಂದು ಹೇಳಿರುವ ಮಾತನ್ನು ವಿ.ಸೀ. ಉದ್ಧರಿಸುತ್ತಾರೆ :

ಚುಂಬನಾಲಿಂಗನಂ ಚೈವ ತಥಾ ಗುಹ್ಯಂ ಚ ಯದ್ಭವೇತ್
ದಂತಂ, ನಖಕ್ಷತಂ, ಛೇದ್ಯಂ, ನೀವೀಸಂಸ್ರನಮೇವ ಚ
ಸ್ತನಾಧರವಿಮರ್ದಂ ಚ ರಂಗಮಧ್ಯೇ ನ ಕಾರಯೇತ್
ಭೋಜನಂ ಸಲಿಲಕ್ರೀಡಾಂ ತಥಾ ಲಜ್ಜಾಕರಂ ತು ಯತ್

ಇನ್ನು ನಾಟಕದಲ್ಲಿ ಬರುವ ಮಾತುಗಳೊ, ಅವು ಯಾವ ರೀತಿ ಇರಬೇಕು:

ವಾಕ್ಯೈಃ, ನಾತಿಶಯೈಃ, ಶ್ರಾವ್ಯೈಃ, ಮಧುರೈಃ, ನ ಅತಿ ನಿಷ್ಠುರೈಃ
ಹಿತೋಪದೇಶ ಜನನೈಃ .... ಕಾರ್ಯಂ ತು ನಾಟಕಂ

ಇದೆಲ್ಲ ಹಳೆಯ ಕಾಲದ್ದು, ಮಡಿ, ಮುದಿ ಎಂದು ಓಸರಿಸಬಹುದೆ? ಇಂದಿನ ಟಿವಿ ಚಿತ್ರಣಗಳಲ್ಲಿನ ಮಾನಮರ್ಯಾದೆಯಿಲ್ಲದ ಕುಣಿತವನ್ನು, ಅಂಗಾಂಗಗಳ ಪ್ರದರ್ಶನವನ್ನು ಸ್ವಾಗತಿಸುವುದು ತರವೆ? ವಿ.ಸೀ. ಮುನ್ನುಡಿಯಲ್ಲಿ ಹೇಳುವಂತೆ ''ಒಂದು ದಂ ವಿಸ್ಕಿ, ಮರಿಹುಆನ LSD ತೆಗೆದುಕೊಂಡ ಹೊರತು ಬಗೆ ಕೆರಳದವರಿಗೆ ಎಳನೀರು, ಹಾಲು ಹೇಗೆ ಮೆಚ್ಚೀತು?''

ಇಷ್ಟೆಲ್ಲ ಮಾತುಗಳನ್ನು ವಿ.ಸೀ. 'ಅರಲು ಬರಲು' ಮುನ್ನುಡಿಯಲ್ಲಿ ಬೆಳಸಿದರೇಕೊ ತಿಳಿಯದು. ಅವರ ಮನ ನೋಯಿಸಿದ ಟೀಕೆ ಯಾವುದೊ? ಈ ವಿಸ್ತಾರವಾದ ವಿವರಣೆ ಕೊಡುವುದರ ಬದಲು ತಮ್ಮ ಕವನಗಳ ರಚನೆಯ ಸನ್ನಿವೇಶ ಯಾವುದು ಎನ್ನುವುದನ್ನು ತಿಳಿಸಿದ್ದರೆ ನಮಗೆ ಹೆಚ್ಚಿನ ಉಪಕಾರವಾಗುತ್ತಿತ್ತು ಎನ್ನಿಸುತ್ತದೆ.

ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತ ವಿ.ಸೀ. ಮತ್ತೆ ಹೇಳುತ್ತಾರೆ :

''ಎಲ್ಲ ಬಗೆಯ ಕವಿತೆಗೂ ಒಂದೇ ಬಗೆಯ ಮಾನದಂಡವನ್ನು ಬಳಸುವ ಚಟ ತಪ್ಪು ರೀತಿ. ಕವನದಲ್ಲಿ ಗೇಯ, ಕಥನ, ವರ್ಣನ, ಭಾವಪ್ರಕಾಶನ, ವಿಚಾರ ಪ್ರತಿಪಾದನ, ನಾಟಕೀಯತೆ, ವಿಡಂಬನೆ, ಎಲ್ಲ ಇರಬಲ್ಲದು .... ಕೇವಲ ಕಥನಕೃತಿಯನ್ನು ಇದು Reflective ಅಲ್ಲ, Lyrical ಅಲ್ಲ, Dramatic ಅಲ್ಲ ಎಂದು ಮುಂತಾದ ಇಲ್ಲದುದನ್ನು ಎತ್ತಿ, ಉದ್ದಿಷ್ಟವಲ್ಲದುದನ್ನು ಲೋಪ ಎಂದೆಣಿಸುವ ರೀತಿ ಸರಿಯಲ್ಲ. ತಮ್ಮ ರೀತಿಯ ಅರ್ಥಕಲ್ಪನೆಗೆ ಹೊಂದುವಂತೆ ಕೃತಿ ಬೆಳೆದಿಲ್ಲವೆಂಬುದು ವಿಮರ್ಶೆಯಲ್ಲ.''

'ಇನ್ನೊಬ್ಬರ ಹಾಗೆ ನಾನೇಕೆ ಬರೆಯಬೇಕು' ಎಂದು ಹೇಳುತ್ತ ಷೇಕ್ಸ್‌ಪಿಯರನ ನಾಟಕದಲ್ಲಿನ ಒಂದು ಸನ್ನಿವೇಶವನ್ನು ಉದ್ಧರಿಸುತ್ತಾರೆ. ಒಬ್ಬ ಕಥಾನಾಯಕಿಯ ಹೆಸರು ತನಗೆ ಒಪ್ಪಲಿಲ್ಲ ಎಂದು ಒಬ್ಬಾತ ಟೀಕಿಸಿದನಂತೆ. ಷೇಕ್ಸ್‌ಪಿಯರ್ ನಾಯಕಿಯ ಬಾಯಲ್ಲಿ ಹ[illegible]ವ ಉತ್ತರ ಇದು -

To please you was not part of the intention of my parents.

ಮುಖಕ್ಕೆ ಹೊಡೆವಂಥ ಉತ್ತರವಲ್ಲವೆ ಇದು? 'ಟೀಕಾಕಾರರನ್ನು ತೃಪ್ತಿಪಡಿಸುವುದಕ್ಕಾಗಿ ನಾನು ಕಾವ್ಯ ರಚಿಸಲಿಲ್ಲ. ನನ್ನ ಮನಸ್ಸಂತೋಷಕ್ಕಾಗಿ ರಚಿಸಿದ್ದೇನೆ' ಎಂದು ವಿ.ಸೀ. ಸಮರ್ಥಿಸಿಕೊಳ್ಳುತ್ತಾರೆ (*ಸ್ನೇಹ-ವಿಶ್ವಾಸ, 'ಅರಲು ಬರಲು', ಮುನ್ನುಡಿ, ಪು.೫೯೬-೬೨೬*).

'ಅರಲು ಬರಲು' ಸಂಕಲನವನ್ನು ಸಮೀಕ್ಷಿಸಿದ ಎಂ.ರಾಜಗೋಪಾಲಾಚಾರ್ಯರು ಮುಖ್ಯವಾದೊಂದಂಶದ ಕಡೆ ನಮ್ಮ ಗಮನ ಸೆಳೆದಿದ್ದಾರೆ. ಅವರು ಹೇಳುತ್ತಾರೆ : ''ಅರಲು ಬರಲಿ'ನ ಮೊದಲ ಮತ್ತು ಕೊನೆಯ ಕವಿತೆಗಳು ಕ್ರಮವಾಗಿ 'ಇನ್ನೇನು ಬೇಕು' - 'ಸಾಕು' ಎಂಬವು ಒಂದು ದೃಷ್ಟಿಯಿಂದ ಈ ಸಂಕಲನವನ್ನೇ ಪ್ರತಿಬಿಂಬಿಸುತ್ತವೆ. ಮೊದಲಿನದರಲ್ಲಿ ಮನುಷ್ಯನ ಆಶೋತ್ತರಗಳು ಎಷ್ಟು ಅಪ್ರತಿಹತವಾಗಿವೆ .... ಕೊನೆಯದರಲ್ಲಿ ತನ್ನ ಸಾಧನೆ-ಸಿದ್ಧಿಗಳು ಮುಂದಿನವರಿಗೆ ಹೇಗನಿಸಬಹುದೋ? ತನ್ನ ಬದುಕಿನ ಕೊಡುಗೆ ಮುಂದಿನವರಿಗೆ ಸ್ವಲ್ಪವಾದರೂ ಬೆಳಕು ತೋರಿಸಿದರೆ ಅಷ್ಟೇ ಸಾಕು ಎಂಬ ಮಿತಿಯ ಅರಿವಿದೆ'' (*ವಿ.ಸೀ. ೭೫, ಪು.೧೩೯*).

ನನ್ನ ನುಡಿ, ನನ್ನ ನಡೆ ; ನನ್ನ ಕಣ್ ಬೆಳಕು
ಮನದ ತಿಳಿ, ನಯ ಹಿತವಾಗೆ ನಾಲ್ವರಿಗೆ
ಬೆಳಕು ಕಂಡೀತು ; ಧೈರ್ಯವನ್ನೂಡೀತು
ಎಂಬ ನಚ್ಚಾದರೊಳಿತು

(*ಸ್ನೇಹ-ವಿಶ್ವಾಸ, 'ಸಾಕು', ಪು.೩೯೩*)

ಇತರ ಯಾವ ಕಾವ್ಯಸಂಕಲನಕ್ಕೂ ದೊರೆಯದ ಸಾಹಿತ್ಯ ಅಕಡೆಮಿಯ

ಪ್ರಶಸ್ತಿ 'ಅರಲು ಬರಲು'ವಿಗೆ ದೊರೆಯಿತು. ವಿ.ಸೀ.ಯವರ ಮನಸ್ಸಿಗೆ ತೃಪ್ತಿಯಾಯಿತೊ ಇಲ್ಲವೊ ನಮಗೆ ತಿಳಿಯದು.

ನಮ್ಮ ಜನಕ್ಕೆ ಬಂದಿರುವ ಬಡತನ ಅನ್ನವಸನದ್ದಲ್ಲ, ಮಹತ್ತಾದುದನ್ನು ಸಾಧಿಸಬೇಕೆನ್ನುವ ಛಲ ಇಲ್ಲದಿರುವುದೇ ಕಡುಬಡತನ. ಅಂತಾಗದಿರಲಿ ನಮಗೆ ಎನ್ನುತ್ತಾರೆ ವಿ.ಸೀ.

ಅನ್ನವಸನದ್ದಲ್ಲ ಬಡತನವು ಲೋಕಕ್ಕೆ
ಮನದ ಮಹದಾಸೆಗಳ ಕೊರೆಯೊಂದೆ, ಕಡುಬಡತನ,
ಅವುಗಳದೆ ಜಾಡ್ಯ, ಅವುಗಳವೆ ಸೋಲು, ಸೊರಗು.
ಅಂತಾಗದಿರಲೆಮಗೆ.

(ಸ್ನೇಹ-ವಿಶ್ವಾಸ, 'ಇನ್ನೇನು ಬೇಕು', ಪು.೨೮೬)

ಎಪ್ಪತ್ತು ದಾಟಿದ ವಿ.ಸೀ.ಯವರಿಗೆ ಮುಪ್ಪಿನ ಛಾಯೆ ಕವಿಯತೊಡ ಗಿತು. ನಡಿಗೆ ಕಡಿಮೆಯಾಯಿತು, ರಕ್ತದ ಒತ್ತಡ ಹೆಚ್ಚಿತು, ಬುದ್ಧಿಯ ಚುರುಕು ಕುಂದುತ್ತ ಹೋಯಿತು, ಕಣ್ಣು ಮಂಜಾಯಿತು. ಅಡವರಿಸುತ್ತ ಬಂದ ಮುಪ್ಪಿ ನಿಂದ ಎಲ್ಲ ಚಟುವಟಿಕೆಗಳೂ ನಿಂತು ಅಸಹಾಯ ಸ್ಥಿತಿ ಮುಟ್ಟಿರುವ ತಮ್ಮ ಅಳಲನ್ನು 'ಮುಪ್ಪು ಮುಪ್ಪೆ' ಎಂಬ ಕವನದಲ್ಲಿ ತೋಡಿಕೊಂಡಿದ್ದಾರೆ :

ಹೆಜ್ಜೆಯಲೊ ನಡೆಯಲೊ
ನೆತ್ತರೊತ್ತಡದಲೊ ಕಾಲತತ್ತರದಲೊ
ತಲೆಯ ಹಗುರದಲೊ ಭಾರದಲ್ಲೊ
ಹೆಜ್ಜೆ ಇಟ್ಟಿರುವೆ ಒಡಲಲ್ಲಿ, ಮುಪ್ಪೆ
ಇನ್ನಿಲ್ಲ ಧಾರಾಳ ನಡಗೆ -

(ಸ್ನೇಹ-ವಿಶ್ವಾಸ, 'ಮುಪ್ಪು ಮುಪ್ಪೆ', ಪು.೩೮೭)

ಹಗಲು ಇರುಳು (೧೯೮೧)

'ಅರಲು ಬರಲು' ಪ್ರಕಟವಾದ ಒಂಬತ್ತು ವರ್ಷಗಳ ನಂತರ ೧೯೮೧ ರಲ್ಲಿ ಪ್ರಕಟವಾದ ವಿ.ಸೀ.ಯವರ ಕೊನೆಯ ಕವನಸಂಕಲನ ಇದು. ಇಲ್ಲಿನ ಕವನಗಳು ಇಳಿವಯಸ್ಸಿನಲ್ಲಿ ಮಾತ್ರ ಬರೆದುವಲ್ಲ. ಆಗಾಗ ಬರೆದ ಕೆಲವು ಸ್ವಂತದ ಮತ್ತು ಹೊರಗಿನ ಅನಿಸಿಕೆಗಳನ್ನು ಈ ಸಂಕಲನದಲ್ಲಿ ಸೇರಿಸಿದೆ. ಇಲ್ಲಿ ಸಂಗ್ರಹವಾಗಿರುವ ಕವನಗಳಲ್ಲಿ ಉಲ್ಲಾಸ ಉಕ್ಕಿ ಹರಿಯದೆ ಹೋದರೂ, ಜೀವನದಲ್ಲಿ ಅನುಭವಿಸಿದ ನೋವು ನಲಿವುಗಳ ಚಿತ್ರಣವಿದೆ.

'ನಾನಿಲ್ಲವೆ' ಎನ್ನುವುದೊಂದು ಸುಂದರ ಕವನ. ಅಲೆಯುತ್ತಿರುವ ಚರ್ಯೆಯುಳ್ಳ ಗಂಡನನ್ನು ಕುರಿತು ಕೈಹಿಡಿದವಳು ಹೇಳುತ್ತಾಳೆ :

ಇನ್ನೊಬ್ಬರ ಗೊಡವೆಯೇಕೆ
ನಾನಿಲ್ಲವೆ
– ನಿಮಗೆ?
ಹಗಲು ಇರುಳು !

* * *

ಹಣ್ಣು ತಟ್ಟೆಯಲಿದೆ
ಬಟ್ಟಲಲಿ ಪಾಯಸವಿದೆ
ಉಣಬಾರದೆ ?
ಸಿಹಿ ಸಿಹಿ ಸಿಹಿ
ತುಟಿ, ಮೈ, ಮಾನ
ತೆರೆದಿದೆ ಕಾದು
– ನಿಮಗೆ
ನಾನಿಲ್ಲವೆ ?

(ಸ್ನೇಹ-ವಿಶ್ವಾಸ, 'ನಾನಿಲ್ಲವೆ', ಪು.೪೧೪)

'ಅಳಿಯನಳಿದ ವಾರ್ತೆ' ಎನ್ನುವುದು ಒಂದು ದುರಂತ ಕವನ. ಯಾರ ಬಾಳಿನಲ್ಲೆ ಆಗಲಿ ಮನೆಯ ಬೆಳಕಾದ ಮಗಳ ಕುಂಕುಮಭಾಗ್ಯ ಅಳಿಸಿಹೋಗಿ, ಅವಳು ವಿಧವೆಯಾಗಿ ಪಡಬಾರದ ಪಾಡನ್ನು ಎದುರಿಸಬೇಕಾಗಿ ಬರುವ ಪ್ರಸಂಗ ದುರ್ಭರವಾದ ದುಃಖಕ್ಕೆ ಕಾರಣವಾದದ್ದು. ಕವಿ ತಮ್ಮ ಅಳಲನ್ನು ಹೀಗೆ ತೋಡಿಕೊಂಡಿದ್ದಾರೆ :

ಏನಿದೀ ದುರ್ವಿಧಿಯ ವ್ಯಾಪಾರ
ಏತಕಿಂತಿದು ಬಡಿಯಿತೊ
ಚಿಲ್ಲಿ ಹೊಳೆಯುವ ಬಾಳ ದೀಪವು
ಆರಿ ಕತ್ತಲ ಕವಿಸಿತು .

ಗರ್ಭಿಣಿಯಾದ ಈ ಮಗಳ ಮುಂದಿನ ಗತಿಯೇನು ?

ಎಂತು ಉಸಿರನು ನಿಲಿಸಿ ಬಲಿಸಿ
ಜೀವ ಓಡಿವಳೊ ಉಳಿವಳೊ
ಒಡಲ ತುಂಬಿದ ಹಸುಳೆ ಕಂದನ -
ನೆಂತು ಹೊರುವಳೊ ಹೆರುವಳೊ.

ಹೊರಗಿನ ಲೋಕಕ್ಕೆ ಇದು ಯಾವ ಲೆಕ್ಕ. ಎಂದಿನಂತೆ ಎಲ್ಲವೂ ಸಾಗುತ್ತಿದೆ. ಆದರೆ ಒಡವೆಗೆ ನೆರವಾಗುವವರಾರು ?

ಎಂದಿನಂತೆಯೆ ಹಗಲು ಹಬ್ಬಿದೆ
ದಿನದ ಅಬ್ಬರ ಮೊಳಗಿದೆ

ಇಲ್ಲಿ ತೆರೆಯದು ಯಾರ ಹರಕೆಯು
ಬಡವೆಯಿವಳೀ ನೆರವಿಗೆ.

(ಸ್ನೇಹ-ವಿಶ್ವಾಸ, 'ಅಳಿಯನಳಿದ ವಾರ್ತೆ', ಪು.೪೨೫-೬)

ದುಃಖದಿಂದ ಕರಗುವ ಹೆಂಗರುಳಿನ ಯಾತನೆ ಈ ಸಾಲುಗಳಲ್ಲಿ ಹೊರಹೊಮ್ಮುತ್ತದೆ.

ಗುಂಡಪ್ಪ (ಡಿ.ವಿ.ಜಿ.)ನವರಿಗೂ ವಿ.ಸೀ. ಯವರಿಗೂ ವಯಸ್ಸಿನ ಅಂತರ ಸುಮಾರು ೧೩ ವರ್ಷಗಳು. ಆದರೂ ಹಿರಿಯರಾದ ಡಿ.ವಿ.ಜಿ., ವಿ.ಸೀ. ಯವರಲ್ಲಿ ತೋರಿಸಿದ ಸ್ನೇಹ, ವಿಶ್ವಾಸ, ಅಭಿಮಾನ ಮರೆಯಲಾಗದ್ದು. ವಿ.ಸೀ. ಯವರಂತೂ ಡಿ.ವಿ.ಜಿ. ಅವರ ವಿದ್ವತ್ತಿಗೆ ಮಾರುಹೋಗಿದ್ದರು. ತುಂಬ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಿಗೆ ಪಾಠ ಹೇಳುವಾಗಲಂತೂ ಡಿ.ವಿ.ಜಿ. ಅವರನ್ನು ತಮ್ಮ ಆರಾಧ್ಯ ದೈವವೇನೊ ಎನ್ನುವಷ್ಟರ ಮಟ್ಟಿಗೆ ಹೊಗಳಿ, ಪೂಜಿಸಿ, ಆ ಮಹಾ ವಿದ್ವನ್ಮಣಿಯ ವಿಷಯವಾಗಿ ವಿದ್ಯಾರ್ಥಿಗಳಲ್ಲಿ ಗೌರವ, ಹೆಮ್ಮೆ ಉಂಟಾಗುವಂತೆ ಮಾಡುತ್ತಿದ್ದರು.

ಗುರುಸಮಾನರಾದ ಗುಂಡಪ್ಪನವರು ತೀರಿಕೊಂಡಾಗ ಬರೆದ ಕೆಲವು ಸಾಲುಗಳಿವು :

ಗಂಡುಬಾಳ್ ನಿಮ್ಮದು ಗುಂಡಪ್ಪ
ಎಂಬತ್ತಕ್ಕೆ ಇನ್ನೈದೊ ಆರೊ ಸೇರಿ ಬಾಳಿದಿರಿ
ಧೈರ್ಯ ನುಡಿದಿರಿ : ನಕ್ಕು ನಗಿಸಿ,
ನಿಮ್ಮ ನೋವನು ಯಾರಿಗೂ ಮರೆಮಾಡಿ
ಹೊರ ಜೀವವೆಲ್ಲ ಸಾರ್ವಜನಿಕಕೆ ದುಡಿದಿರಿ.

ಕೊನೆಕೊನೆಗೆ ಆ ಹಿರಿಯ ಜೀವದಲ್ಲಾದ ಮಾರ್ಪಾಟನ್ನು, ಅವರು ತಮ್ಮನ್ನು ನಡೆಸಿಕೊಂಡ ಬಗೆಯನ್ನು ನೆನೆಯುತ್ತ :

ಕಡು ಸಿಹಿಯಾಯ್ತು ಒರಟು ಮಿದುವಾಯ್ತು -
ಬರುಬರುತ ಕಡೆಗೆ ನಿಮ್ಮ ಮಾತು, ನೀತಿ
ಉಳಿದುದೊಂದೇ ಕಣ್ಗೆ; ಗುಣದೋಷ
ವೊಂದನೂ ಲೆಕ್ಕಿಸದ ಸುಮನೋವಿಲಾಸ.
ಬಾಳ್ಗೆ ದೀಪವಾಗಿದ್ದೊಂದು ಬೆಳಕು
ಆರಿಹೋಯಿತು ನಮಗೆ ಕಾಯವಾಗಿ.

(ಸ್ನೇಹ-ವಿಶ್ವಾಸ, 'ಗುಂಡಪ್ಪ', ಪು.೪೦೩, ೪೦೪)

ಕಾಯವಾಗಿ ಆ ಬೆಳಕು ಆರಿಹೋದರೂ, ಅವರು ಉಳಿಸಿ ಹೋಗಿರುವ ನುಡಿಗಟ್ಟುಗಳು ಮಾತ್ರ ಎಂದೆಂದಿಗೂ ಮಾರ್ಗದರ್ಶನ ಮಾಡುತ್ತ ಹೋಗುತ್ತವೆ ಎನ್ನುತ್ತಾರೆ :

ಅದರಿದೆ ದೃತವಾದ ನಿಮ್ಮ ಕೊರಲು -
ಹೊಳಲುಗೊಡುವ
ನುಡಿಯಾಗಿ ನಡೆಯಾಗಿ ಉಲ್ಲಾಸವಾಗಿ

ತಮ್ಮ ಬಾಳಿಗೆ ಒಂದು ಮೆರುಗನ್ನು ಕೊಟ್ಟು, ಕಡೆಯವರೆಗೂ ಹಿತ ಚಿಂತಕರಾಗಿ ಸ್ನೇಹಸೌಹಾರ್ದಗಳಿಂದ ನಡಸಿಕೊಂಡ ಗುಂಡಪ್ಪನವರನ್ನು ಕವಿ ಹೀಗೆ ಬೀಳ್ಕೊಂಡಿದ್ದಾರೆ. ಇಂಥ ಸ್ನೇಹಸೌಭಾಗ್ಯ ಯಾರಿಗುಂಟು, ಯಾರಿಗಿಲ್ಲ.

*　　*　　*　　*

ವಿ.ಸೀ. ತಮ್ಮ ಟೀಕಾಕಾರರಿಗೆ ಇತ್ತ ಕೊನೆಯ ಉತ್ತರ ಇದು.

ಒಬ್ಬರಿಗೆ ನನ್ನ ಬಗೆಯೊಪ್ಪಲ್ಲ ; ಕವಿತೆ ಇನ್ನೊಬ್ಬರಿಗೆ.
ಚಿಂತೆಯೇಕೆ? ಅವರನೊಪ್ಪಿಸಲು ನಾ ಬರೆದೆನೆ ?
ಬಗೆಗೆ ಏನೊ ಚಪಲ ; ಬೆರಳ್ಗೆ ಲೇಖನಿಗೆ ಬೇಸಾಯ.

ಇದ ಕೇಳಿ ನೋಡಿ ನಗಬಹುದು ಅವರಿವರು
ಯಾರಿಗಾದರು ಒಪ್ಪಿತೇ, ಅಯಿತು ; ಇಲ್ಲದಿರೆ ಬೇಡ.
ನನಗೆ ತಿಳಿದಂತೆ ತಾನೆ ಬರೆದೇನು, ಬದುಕೇನು ನಾನು?

ನುಡಿದೇನು, ನಡೆದು ಮುಗಿಸೇನು, ನನ್ನದದು ಅಷ್ಟೆ,
ಅವರವರ ಗರಿಮೆ ಹಿರಿಮೆ ಅವರವರವು.
ಚಿಂತನ ಸ್ವತಂತ್ರ ; ಮಣಿತ ಮತ್ತಾರಿಗಿಲ್ಲ ;
ಯಾರಿಗಾರೂ ಅಲ್ಲ.
ನಡೆ ಮನವೇ ನಿನ್ನಷ್ಟಕ್ಕೆ ನೀನು.

(ಸ್ನೇಹ-ವಿಶ್ವಾಸ, 'ಬೇರೆ ಬೇರೆಯವರಿಗೆ', ಪು.೪೨೫)

*　　*　　*　　*

ವಿ.ಸೀ. ಯವರ ಕಾವ್ಯಗಳ ಅವಲೋಕನ ದೀರ್ಘವಾಯಿತೇನೊ. ಜೀವನ ಚರಿತ್ರೆಯಲ್ಲಿ ಈ ಬಗೆಯ ಕೃತಿಪರಿಚಯ ಪ್ರಯತ್ನ ಮಾಡಬೇಕಿತ್ತೆ ಎಂದು ಪ್ರಶ್ನಿಸಬಹುದು. ಸುಸಂಸ್ಕಾರ ಹೊಂದಿದ, ಕುಸುಮಕೋಮಲ ಸದೃಶವಾದ ಜೀವವೊಂದು, ಜೀವನದ ವಿವಿಧ ಸನ್ನಿವೇಶಗಳಲ್ಲಿ ಯಾವ ರೀತಿ ಸ್ಪಂದಿಸಿತು, ತಲೆಯೆತ್ತಿ, ಧೈರ್ಯತಾಳಿ, ಮುಂದೆ ನಡೆಯುತ್ತ ಹೋಯಿತು ಎನ್ನುವುದನ್ನು ತಿಳಿಯುವುದಕ್ಕೆ ಈ ಕವನಗಳು ಸಹಕಾರಿ. ಅವುಗಳ ಸವಿ, ಕವಿಯ ಆಕೃತಿಯಂತೆ ಮೊದಲನೆಯ ದೃಷ್ಟಿಗೆ ಎದ್ದು ತೋರದೆ ಹೋದರೂ, ಆಳವಾಗಿ ಅಭ್ಯಾಸ ಮಾಡುತ್ತ ಹೋದಂತೆ ಅವುಗಳಲ್ಲಿನ ಭಾವಸಂಪತ್ತಿ ಎಷ್ಟು ಹೆಚ್ಚಿನದು ಎನ್ನುವುದು ಮಂದಟ್ಟಾಗುತ್ತ ಹೋಗುತ್ತದೆ. ವಿ.ಸೀ. ತಮ್ಮ ಕಾವ್ಯಗಳ ಮೂಲಕ ನಮ್ಮ ಮನಸ್ಸಿನಲ್ಲಿ ಅಮರರಾಗಿ ಉಳಿಯುತ್ತಾರೆ.

ಹೆಚ್ಚಿನ ಪ್ರಚಾರ ಅಗತ್ಯ

ವಿ.ಸೀ. ಯವರ ಕೆಲವು ಗೀತೆಗಳು 'ಗೀತಾಂಜಲಿ' ಎಂಬ ಶೀರ್ಷಿಕೆಯಲ್ಲಿ (ಸಂಗೀತ ನಿರ್ದೇಶನ ಪದ್ಮಚರಣ್ ಅವರಿಂದ) ಕ್ಯಾಸೆಟ್ ರೂಪದಲ್ಲಿ ದೊರೆಯುತ್ತದೆ. ಪ್ರಖ್ಯಾತ ಸಂಗೀತಗಾರರಾದ ರಾಜಕುಮಾರಭಾರತಿ, ಎಂ.ಎಸ್. ಶೀಲಾ, ರತ್ನಮಾಲಾ, ನರಸಿಂಹನಾಯಕ್, ಕೃಷ್ಣ ಕಾರಂತ್ ಅವರುಗಳು ವಿ.ಸೀ. ಗೀತಗಳನ್ನು ಸುಶ್ರಾವ್ಯವಾಗಿ ಹಾಡಿದ್ದಾರೆ. 'ನಗುವ ಬೀಸಿಗೆ ಬಂದಿದೆ', 'ಮಧು ಮಾಸ ಬಂದಿಹುದು', 'ಕಾದಿರುವಳು ಶಬರಿ', 'ಸ್ವರ್ಗದೊಳಗೀ ಸ್ನೇಹ ದೊರೆವುದೇನು', 'ವರುಷ ಬಂದಿತು ವರುಷ ಹೋಯಿತು ಹರುಷ ಬಾರದು ಬಾರದು', 'ಮಾನವನೆತ್ತರ ಅಗಸದೇರಿಗೆ', 'ನಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು' - ಈ ಜನಪ್ರಿಯ ಕವನಗಳನ್ನು ಎಲ್ಲರೂ ಕೇಳಿ ಆನಂದಿಸಬಹುದು. ಗೀತಗಳ ಗೇಯತ್ವ, ಅಲ್ಲಿನ ಭಾವಸೌಂದರ್ಯ ಎಂಥದು ಎನ್ನುವುದನ್ನು ಸ್ವಲ್ಪಮಟ್ಟಿಗಾದರೂ ಸವಿಯಬಹುದು. ವಿ.ಸೀ. ಯವರೇ ವಾಚನ ಮಾಡಿದ ಕವನಗಳ ಧ್ವನಿಮುದ್ರಣವನ್ನು ಆಕಾಶವಾಣಿಯವರಾಗಲಿ, ಇತರರೇ ಆಗಲಿ ದೊರಕಿಸಿದರೆ ಮಹದುಪಕಾರವಾದೀತು. ಪ್ರಸಿದ್ಧ ಕನ್ನಡ ಕವಿಗಳ ಕಾವ್ಯಗಳನ್ನು ಪ್ರಚಾರಮಾಡುವ ದಿಕ್ಕಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು, ಅಕಡೆಮಿಗಳು, ಸಂಘಗಳು ಹೆಚ್ಚಿನ ಪಾತ್ರ ವಹಿಸಬೇಕಾಗಿದೆ. ಉತ್ತಮವಾದ ಕವನಗಳನ್ನು ಆಯ್ದು ಮನಮೆಚ್ಚುವಂತೆ, ಮನಸೆಳೆಯುವಂತೆ ಉತ್ತಮ ಕಾಗದದ ಮೇಲೆ ಅಚ್ಚುಕಟ್ಟಾಗಿ ಮುದ್ರಿಸಿ ರಸಿಕರ ಕೈಯಲ್ಲಿಡುವ ಪ್ರಯತ್ನ ನಡೆಯಬೇಕಾಗಿದೆ. ಕವಿಗೋಷ್ಠಿಗಳು ದೇಶದ ಉದ್ದಗಲವೂ ನೆರೆಯಬೇಕು. ವಿಮರ್ಶಕರಾದವರು ಈ ಕವನಗಳಲ್ಲಿನ ಸ್ವಾರಸ್ಯವನ್ನು ವಿವರಿಸಬೇಕು. ಈ ಎಲ್ಲ ರೀತಿಯಲ್ಲಿ ವಿ.ಸೀ. ಅವರ ಚಿತ್ರ ನಮ್ಮ ಮುಂದೆ ಉಳಿಯುವಂತೆ, ಅವರ ನುಡಿ ನಮ್ಮ ಕಿವಿಯಲ್ಲಿ ಮೊಳಗುವಂತೆ ನೋಡಿಕೊಳ್ಳಬೇಕು. ಮುಂದಿನ ಪೀಳಿಗೆಯವರಿಗೆ ನಾವು ಸಲ್ಲಿಸಬೇಕಾದ ಕರ್ತವ್ಯ ಇದು.

ವಿಮರ್ಶಕ ವಿ.ಸೀ.

''ವಿಮರ್ಶೆ ಎಲ್ಲ ಸಂದರ್ಭಗಳಲ್ಲಿಯೂ ಸಹನಶೀಲವಾಗಿರಬೇಕು, ವಿವೇಕಯುತವಾದ ಸಾಕಲ್ಯವನ್ನು ಪಡೆಯಬೇಕು. ಅದು ಸಾಹಿತ್ಯ ಸೃಷ್ಟಿಗೆ ಪ್ರೇರೇಪಣೆ ಕೊಡಬೇಕು; ನಡಸಬೇಕು; ಹಳ್ಳಕೊಳ್ಳ ಎಲ್ಲಿದೆ ಮಾರ್ಗದಲ್ಲಿ ಎಂಬುದನ್ನು ತೋರಿಸಬೇಕು. ಎಲ್ಲಿ ಯಾವುದಾದರೂ ಒಂದು ಭಾಗ ಕೆಟ್ಟಿತು, ನೀರಸವಾಯಿತು, ಬೇಸರ ತಂದಿತು - ಎಂದು ತಿಳಿಸಬೇಕು.

''ವಿಮರ್ಶೆ ಒಂದು ಪಂಜು; ರಾಜದಂಡವಲ್ಲ. ಅದು ಎಲ್ಲ ಬಗೆಯ ಬೆಲೆಕಾಣ್ಕೆಯ ಪ್ರಕಾಶಕ್ಕೂ ಅವಕಾಶ ಮಾಡಿಕೊಡಬೇಕು; ಶಾಸನ, ವಿಧಿ ಮಾಡಬಾರದು; ಅಡ್ಡ ಬರಬಾರದು; ತೆಗಳಿ ನುಡಿಯಬಾರದು. ಅದು ನೆರವು; ಒಡನಾಡಿ, ಸಾಹಿತ್ಯಸಾಹಸದಲ್ಲಿ ಜೊತೆ ನಡೆಯುವ ಸಂಗಡಿಗ, ಆತ್ಮಶಕ್ತಿ.''

ಈ ಸೂತ್ರವಾಕ್ಯ ವಿ.ಸೀ. ಪಿ.ಇ.ಎನ್. ಸಾಹಿತ್ಯ ಸಮ್ಮೇಳನದಲ್ಲಿ ಕೊಟ್ಟ ಅಧ್ಯಕ್ಷ ಭಾಷಣದಿಂದ ಆಯ್ದದ್ದು. ವಿಮರ್ಶೆಯ ಬಗೆಗಿದ್ದ ಅವರ ಮನೋಧರ್ಮವೇನೆನ್ನುವುದನ್ನು ಅವು ಚೆನ್ನಾಗಿ ಪ್ರತಿಬಿಂಬಿಸುತ್ತವೆ. ''ವಿಮರ್ಶೆ ವ್ಯಕ್ತಿನಿರಪೇಕ್ಷವಾಗಬಾರದು, ತೀರ ವೈಜ್ಞಾನಿಕವಾಗಿ ಹಿಮಗಡ್ಡೆಯಂತೆಯೂ ಇರಬಾರದು. ಸಾಹಿತ್ಯ ವಿಮರ್ಶೆಯೆನ್ನುವುದು ಅಂತಃಕರಣಪೂರಿತವಾದ ಮಾನವ್ಯ ಪ್ರಭಾವವಾಗಿರಬೇಕು'' ಎನ್ನುವುದು ಅವರ ನಿಲವು.

ಇಂಥ ಆದರ್ಶಗಳನ್ನಿಟ್ಟುಕೊಂಡು ಸಾಹಿತ್ಯ ವಿಮರ್ಶೆ ಮಾಡಲು ಹೊರಟ ವಿ.ಸೀ. ಕನ್ನಡ ವಿಮರ್ಶಕರಲ್ಲಿ ಎತ್ತರದ ಸ್ಥಾನವನ್ನು ಪಡೆದುಕೊಂಡರು. ಕರ್ಣಾಟಕ ಕಾದಂಬರಿ, ಅಭಿಜ್ಞಾನ ಶಾಕುಂತಲ, ಶ್ರೀಯವರ ಅಶ್ವತ್ಥಾಮನ್, ವಾಲ್ಮೀಕಿ ರಾಮಾಯಣ - ಈ ಕೃತಿಗಳ ಮೇಲಿನ ಅವರ ದೀರ್ಘವಿಮರ್ಶೆಗಳು ಐ.ಬಿ.ಎಚ್. ಪ್ರಕಾಶನದ 'ಕವಿಕಾವ್ಯ ಪರಂಪರೆ'ಯ ಪ್ರಧಾನ ಸಂಪಾದಕರಾಗಿ ಸುಮಾರು ಇಪ್ಪತ್ತಮೂರಕ್ಕೂ ಹೆಚ್ಚಿನ ಕಾವ್ಯಗಳ ವಿಷಯವಾಗಿ ಅವರು ಸಮೀಕ್ಷಾರೂಪವಾಗಿ ಒದಗಿಸಿರುವ ಬರಹಗಳು, ಸುಮಾರು ಹತ್ತಿಪ್ಪತ್ತು ವರ್ಷ 'ಹಿಂದೂ' ಪತ್ರಿಕೆಯಲ್ಲಿ ಮಾಡಿದ ಪುಸ್ತಕಾವಲೋಕನಗಳು, ಅವರ ವಿಮರ್ಶನ ಹಿರಿಮೆಯ ಸಂಕೇತಗಳಾಗಿ ಉಳಿದಿವೆ. ಇವೇ ಅಲ್ಲದೆ 'ಪ್ರಬುದ್ಧ ಕರ್ಣಾಟಕ', 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', 'ಕನ್ನಡ ನುಡಿ' – ಈ ಪತ್ರಿಕೆಗಳ ಸಂಪಾದಕರಾಗಿದ್ದ ಕಾಲದಲ್ಲಿಯೂ ಅನೇಕ ಕಿರುವಿಮರ್ಶೆಗಳನ್ನು ಒದಗಿಸಿದ್ದಾರೆ. ವಿ.ಸೀ. ಯವರ ವಿಮರ್ಶನಶಕ್ತಿ ಅಸಾಧಾರಣವೆಂದು ಆ ಕಲೆಯಲ್ಲಿ ಪರಿಣತರಾದನೇಕರು ಒಪ್ಪಿಕೊಂಡಿದ್ದಾರೆ.

ಉತ್ತಮ ವಿಮರ್ಶಾ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ವಿರಳ. ಇದೊಂದು ದೊಡ್ಡ ಕೊರತೆ. ಸಾಹಿತ್ಯದ ಬಗ್ಗೆ ನಮ್ಮ ಜನ ತೋರಿಸುವ ಅನಾಸಕ್ತಿಗೆ ವಿಮರ್ಶೆಯ ಅಭಾವವೂ ಕಾರಣವೆಂದು ತೋರುತ್ತದೆ. ಕೃತಿಗಳ ಪರಿಚಯ ಮಾಡಿಕೊಡಬೇಕು; ಕೃತಿಕಾರನ ವ್ಯಕ್ತಿತ್ವದ ಕಡೆಗೂ ಬೆಳಕು ಚೆಲ್ಲಬೇಕು. ರಸಾಸ್ವಾದನೆಗೆ ಇದು ಅತ್ಯಗತ್ಯವಾಗಿ ನಡೆಯಬೇಕಾದ ಕೆಲಸ.

ಸಾಹಿತ್ಯದಲ್ಲಿನ ಉತ್ತಮ ಕೃತಿಗಳನ್ನು ಪ್ರೌಢ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿ ನೇಮಿಸುವುದೂ, ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಟೀಕೆ ಟಿಪ್ಪಣಿಗಳಿಂದೊಡಗೂಡಿದ ಅವಲೋಕನಗಳನ್ನು ಸಿದ್ಧಪಡಿಸುವುದೂ ಒಂದು ಒಳ್ಳೆಯ ಸಂಪ್ರದಾಯವಾಗಿ ಬೆಳೆದು ಬಂದಿದೆ. 'ಸಾಹಿತ್ಯ ಪರಿಚಾರಿಕೆ' ಎಂದು ಹೆಸರಿಟ್ಟುಕೊಂಡು ಉತ್ತಮ ಕಾವ್ಯಗಳ ಪರಿಚಯಮಾಡಿಕೊಡುವ ಕಾರ್ಯದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದವರು ಜಿ.ಪಿ.ರಾಜರತ್ನಂ. ಅವರು ವಹಿಸಿದ ಆಸಕ್ತಿಯ ಫಲವಾಗಿ ವಿ.ಸೀ.ಯವರ ಅತ್ಯುತ್ತಮ ವಿಮರ್ಶಾಕೃತಿಯಾದ 'ಅಭಿಜ್ಞಾನ ಶಾಕುಂತಲ ನಾಟಕ ಪರಿಚಯ' ಮೈತುಂಬಿಕೊಂಡು ಹೊರಬಂದಿತು. ಮಹಾಕವಿ ಕಾಳಿದಾಸನ ಶಾಕುಂತಲ ಹೇಗೆ ಸರ್ವಜನರ ಆದರಣೆಗೆ ಪಾತ್ರವಾಗಿದೆಯೋ ಅದೇ ರೀತಿ ವಿ.ಸೀ.ಯವರ ಕೃತಿಯೂ ಕೂಡ ಶ್ರೇಷ್ಠಮಟ್ಟದ ವಿಮರ್ಶಾಗ್ರಂಥವಾಗಿ ಕಂಗೊಳಿಸುತ್ತಿದೆ.

ಇಷ್ಟು ಅಡಕವಾಗಿ, ಇಷ್ಟೊಂದು ಸಮರ್ಪಕವಾಗಿ, ಇಷ್ಟೊಂದು ಸರ್ವಸುಂದರವಾಗಿ ಕೃತಿಯೊಂದರ ಹೆಚ್ಚುಗಾರಿಕೆಯನ್ನು ಓದುಗರ ಮುಂದಿಡುವುದು ಸಾಧ್ಯವೆ ಎಂದು ವಿಸ್ಮಯ ಪಡುವಂತಾಗುತ್ತದೆ.

ಕವಿ ರವೀಂದ್ರರೂ ಗಯಟೆಯ ಮೆಚ್ಚುಗೆಯನ್ನು ಅಕ್ಷರಶಃ ನಿಜವೆಂದು ಒಪ್ಪಿ ತತ್ತ್ವಮಂಡನೆ ಮಾಡಿದ್ದಾರೆ. 'ದೇಶ, ಕಾಲ, ಭಾಷೆ ಇವುಗಳಲ್ಲಿ ಬೇರೆ ಬೇರೆಯಾದ ಇಬ್ಬರು ಮಹಾಕವಿಗಳು ಮೂರನೆಯ ಒಬ್ಬ ಮಹಾಕವಿಯ ಕೃತಿಯನ್ನು ಕುರಿತು ಈ ಮಾತನ್ನು ನುಡಿದಿರುವುದು ಸೌಹಾರ್ದದ ಒಂದು ಸುಗ್ಗಿ; ಸಾಹಿತ್ಯ ಕಾಣಿಸುವ ಸಾರ್ವದೇಶಿಕ ಸಾರ್ವಕಾಲಿಕ ಸಂಪತ್ತಿಯ ಕಾಣಿಕೆ' ಎನ್ನುತ್ತಾರೆ ವಿ.ಸೀ.

ವಿ.ಸೀ.ಯವರ 'ಅಭಿಜ್ಞಾನ ಶಾಕುಂತಲ ನಾಟಕ ಪರಿಚಯ' ವಿಮರ್ಶೆಯ ಸೊಗಸನ್ನು ಓದಿಯೇ ಅನುಭವಿಸಬೇಕು. ಅದನ್ನು ವಿವರಿಸಿ ಹೇಳಲಾಗದು. ವಿ.ಸೀ.ಯವರ ವಿಮರ್ಶಾಕೃತಿಗಳಲ್ಲಿ ಅದು ಅತ್ಯುತ್ತಮವಾದದ್ದು ಎಂದು ನನ್ನಣಿಕೆ. ಅವರ ಅಧ್ಯಾಪಕತನಕ್ಕೆ ಕಿರೀಟವಿಡುವಂಥಾದ್ದು. ನಮಗೆಲ್ಲ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳ ಹುಚ್ಚು ಹಿಡಿಸಿದ ವಿಮರ್ಶಕರು ವಿ.ಸೀ.

'ಅಭಿಜ್ಞಾನ ಶಾಕುಂತಲ ನಾಟಕ (ಪರಿಚಯ)' ೧೯೪೩

ಶಾಕುಂತಲ ನಾಟಕವನ್ನು ವಿ.ಸೀ. ತೂಕಮಾಡಿ ನೋಡಿರುವ ರೀತಿ

ಅತ್ಯಂತ ಸೊಬಗಿನದು. ಕೆಲವೇ ವಾಕ್ಯಗಳಲ್ಲಿ ಎಷ್ಟು ಸಮರ್ಪಕವಾಗಿ ನಾಟಕದ ಹೆಚ್ಚುಗಾರಿಕೆಯನ್ನು ವಿ.ಸೀ. ವಿಶದಪಡಿಸಿದ್ದಾರೆ ಎನ್ನುವುದನ್ನು ಈ ಕೆಳಗೆ ಕಾಣಿಸಿರುವ ಸಾಲುಗಳಿಂದ ಗ್ರಹಿಸಬಹುದು.

> ''.... ಶಾಕುಂತಲ ನಾಟಕ ನಮ್ಮ ನಾಡಿಗೆ ಭೂಷಣ. ಯಾವುದನ್ನು ಒಂದು ಕಾಲದಲ್ಲಿ ಆರ್ಯವೃತ್ತಿ, ಆರ್ಯಧರ್ಮ, ಆರ್ಯವಿಚಕ್ಷಣೆ, ನಯವ್ಯವಸ್ಥೆ ಎಂದು ನಮ್ಮ ಸಂಸ್ಕೃತಿ ಒಪ್ಪಿತೋ, ಅದರ ಒಂದು ರಸಚಿತ್ರ ಈ ನಾಟಕದಲ್ಲಿ ವರ್ಣಿತವಾಗಿದೆ. ಆಶ್ರಮದಲ್ಲಿ, ಹೆಣ್ಣು ಹೆಣ್ಣುಗಳಲ್ಲಿ, ಹೆಣ್ಣು ಗಂಡುಗಳ ಏಕಾಂತದಲ್ಲಿ, ಅತಿಥಿ ಸತ್ಕಾರಗಳಲ್ಲಿ, ವ್ಯವಹಾರ ನಯಗಳಲ್ಲಿ, ಸಭೆ ಉಪವನ ರಾಜಾಲಯಗಳಲ್ಲಿ, ಹಿರಿಕಿರಿಯರಲ್ಲಿ, ಒಡೆಯ ಭೃತ್ಯರಲ್ಲಿ, ಅಧಿಕಾರದಲ್ಲಿ, ಪಶು ಪಕ್ಷಿ ಪ್ರಾಣಿಗಳ ಸಂಬಂಧದ ನಡತೆಯಲ್ಲಿ ಯಾವುದು ಹಸನಾದ ವೃತ್ತಿ ಯಾವುದಲ್ಲ, ಯಾವುದು ವಶಿತ್ವ ಯಾವುದು ಚಪಲ, ಯಾವುದು ಕಾಮ ಯಾವುದು ಪ್ರೇಮ, ಯಾವುದು ಇವೆಲ್ಲಕ್ಕೂ ಮೀರಿದ ಜೀವನದ ತಪಸ್ಸು, ಸಿದ್ಧಿ, ದಿವ್ಯಜ್ಞಾನದ ವಿಶದ ಪ್ರಭಾವ ಎಂಬುದರ ರಂಜಕ ಅದ್ಭುತ ಚಿತ್ರಗಳು ನಾಟಕದ ತುಂಬ ಇವೆ.
>
> ಇಂಥ ಕೃತಿಗಳು ಒಂದು ನಾಡಿನ ಬೆಳಕು; ಬಾಳದಾರಿಯ ದೀವಿಗೆ, ಸರಸ ಜೀವನದ ಒಂದು ಸ್ಫೂರ್ತಿಯಾಗಿ ಸಂಸ್ಕೃತಿ ಸಾಧನೆಯ ಸಂಕೇತವೂ ಪತಾಕೆಯೂ ಆಗಿರುತ್ತವೆ.''
>
> *('ಅಭಿಜ್ಞಾನ ಶಾಕುಂತಲ ನಾಟಕ', ಪು.೧೧೮)*

> ''ಒಂದು ಜಳ್ಳುಮಾತು, ಅವಿವೇಕದ ವರ್ಣನೆ ಇಲ್ಲಿಲ್ಲ. ನಯ, ನುಣುಪು, ಪರಿಣತಿ, ಸೌಂದರ್ಯ, ಪಕ್ವತೆ, ತುಂಬು ಕವಿತೆಯ ಸೌಭಾಗ್ಯ, ಎಷ್ಟು ಬೇಕೊ ಅಷ್ಟನ್ನು ಮಾತ್ರ, ಯಾವುದು ಬೇಡವೊ ಅದಕ್ಕೆ ಲವಲೇಶ ಕ್ಕಾದರೂ ಎಡೆಗೊಡದೆ ಈ ನಾಟಕ ಸಾಧಿಸುತ್ತದೆ.''

ಮೂಲ ಮಹಾಭಾರತದಲ್ಲಿ ಅತಿ ಒರಟು ಒರಟಾಗಿರುವ ಶಾಕುಂತಲೋಪಾಖ್ಯಾನವನ್ನು ಕಾಳಿದಾಸ ಮಹಾಕವಿಯು ಯಾವ ರೀತಿ ಮಾರ್ಪಡಿಸಿಕೊಂಡು, ಲೋಕೋತ್ತರವಾದ ಸತ್ಯವನ್ನು ಹೊರತಂದ, ಎನ್ನುವುದನ್ನು ವಿವರಿಸುತ್ತ ವಿ.ಸೀ. ಹೇಳುತ್ತಾರೆ :

> ''ಕಣ್ವಾಶ್ರಮ ಒಂದು ವಿದ್ಯಾಲಯ : ಅಂಥಲ್ಲಿ ಧರ್ಮ, ನೀತಿ ಕಲಿಸಿ, ಅಭ್ಯಾಸ ಮಾಡಿಸಬಹುದು; ಅದು ಪರೀಕ್ಷೆ ಕೊಡಬೇಕಾದ್ದು. ಅಲ್ಲಿಯೊ ಎಲ್ಲಿಯೊ ಪಾಲಕರು ಎದುರಿಗಿಲ್ಲದಿರುವಾಗ, ಲೋಕ ಪರೀಕ್ಷೆ ಮಾಡುವಾಗ. ಲೋಕದ ಎದುರು ಒಂದು ರೀತಿ ತೇರ್ಗಡೆಯಾಯಿತು, ಶಕುಂತಲೆಯ ಜೀವ, ಪುರುಕುಲದ ಚಕ್ರವರ್ತಿಗೆ ಆಸೆಪಟ್ಟು ಅವನ ಪ್ರೇಮವನ್ನು ಸಂಪಾದಿಸಿದಾಗ. ಆದರೆ ಇನ್ನೊಂದು ಪರೀಕ್ಷೆಯಲ್ಲಿ ಉತ್ತೀರ್ಣವಾಗಲಿಲ್ಲ. ರಹಸ್ಯವಾಗಿಸಿತು ಆ ಪ್ರೀತಿಯನ್ನು. ಲೋಕದಲ್ಲಿ ತನ್ನನ್ನು ತಬ್ಬಲಿ ಮಾಡಿಕೊಂಡಿತು. ತಂದೆ ತನ್ನನ್ನು ಕೊಡುವವರೆಗೂ ಕಾಯಲಿಲ್ಲ. ಇನ್ನೊಂದು : ತಂದೆ ತನಗೆ ನೇಮಿಸಿದ್ದ ಅತಿಥಿ ಸತ್ಕಾರವನ್ನು ಮರೆತು ಋಷಿಯ ಶಾಪಕ್ಕೀಡಾಯಿತು. ಕಲಿತದ್ದು ನಮ್ಮ ನಡತೆಯಲ್ಲಿ,

ಜೀವನದಲ್ಲಿ ರೂಪಗೊಂಡು ಉತ್ತೀರ್ಣವಾಗಬೇಕು. ಇಲ್ಲವಾದರೆ ಲೋಕದಲ್ಲಿ ಅದು ಗೆಲ್ಲಲಾರದು. ಲೋಕ ಅದನ್ನು ಮುರಿಯುತ್ತದೆ, ಗಾಸಿಗೊಳಿಸುತ್ತದೆ....."

(ಅದೇ, ಪು.೧೧೩)

ವಿಮರ್ಶೆಯ ಈ ಒಳನೋಟ ನಮ್ಮ ಕಣ್ಣು ತೆರೆಯಿಸುವಂಥದ್ದು. ಕಾವ್ಯ ವ್ಯಾಸಂಗದಿಂದ ನಮಗೆ ದೊರಕಬೇಕಾದ್ದು ಸುಖಾನುಭವ ಮಾತ್ರವಲ್ಲ, ಅದರ ಜೊತೆಗೆ ಜೀವನ ಶೋಧನೆಯೂ ನಡೆಯಬೇಕು, ಬುದ್ಧಿಗೆ ಸಂಸ್ಕಾರ ದೊರೆಯಬೇಕು ಎನ್ನುವುದನ್ನು ಇಲ್ಲಿ ವಿ.ಸೀ. ಎತ್ತಿ ತೋರಿಸಿದ್ದಾರೆ.

ವಿಮರ್ಶೆಯ ಸೊಗಸಿನ ಅಂಶಗಳು

ಕಾಳಿದಾಸ ತನ್ನ ನಾಟಕದಲ್ಲಿ ಯಾವ ರೀತಿ 'ಸುಂದರವಾದ ನಯವಾದ ಗಂಭೀರವಾದ ಬದುಕಿನ ವಿಲಾಸ'ವನ್ನು ಚಿತ್ರಿಸಿದ್ದಾನೆ, ಸಂಸ್ಕಾರಗೊಂಡ ಒಂದು ಜೀವದ ಗತಿಯನ್ನು ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾನೆ ಎನ್ನುವುದನ್ನು ತಿಳಿಯುವುದಕ್ಕೆ ವಿ.ಸೀ. ಅವರ ವಿಮರ್ಶೆ ಉತ್ತಮ ಸಹಕಾರಿ.

ಕಣ್ವಾಶ್ರಮಕ್ಕೂ ಮಾರೀಚಾಶ್ರಮಕ್ಕೂ ಇರುವ ಅಂತರದ ವಿವರವಾದ ಪರಿಶೀಲನೆ ವಿ.ಸೀ.ಯವರ ಅವಲೋಕನದಲ್ಲಿ ಒಂದು ಮುಖ್ಯವಾದ ಭಾಗ. ಪ್ರಿಯಂವದೆ, ಅನಸೂಯೆ, ಗೌತಮಿ, ಶಾರ್ಙ್ಗರವ, ಶಾರದ್ವತ, ಇವರು ಕಾಳಿದಾಸ ಸೃಷ್ಟಿಸಿದ ವ್ಯಕ್ತಿಗಳು. ದೂರ್ವಾಸ ಶಾಪ, ಉಂಗುರದ ಪ್ರಸಂಗ, ಶಾಪದ ಫಲವಾಗಿ ರಾಜನಿಗುಂಟಾದ ಮರೆವು, ತಿರಸ್ಕೃತಳಾದ ಮಗಳನ್ನು ಮೇನಕೆ ಮೇಲಕ್ಕೆತ್ತಿ ಕೊಂಡೊಯ್ಯುವುದು, ಬೆಸ್ತರ ಮೂಲಕ ಉಂಗುರ ದೊರೆತು ರಾಜನಿಗೆ ಹಳೆಯ ನೆನಪು ಮರುಕಳಿಸುವುದು, ಮಾರೀಚಾಶ್ರಮ, ಅಲ್ಲಿನ ಶುಚಿ, ತಪೋನಿಷ್ಠೆ - ಇವೆಲ್ಲವೂ ಕವಿಯ ಕಲ್ಪನಾವಿಲಾಸ. ಇವು ಹೇಗೆ ಒಂದು ಹೊಸ ಲೋಕವನ್ನೇ ಸೃಷ್ಟಿಸಿವೆ. 'ಕಣ್ಬೇಟವಾಗಿ ಕಾಮವಾಗಿ ಮೊದಲಾದದ್ದು ಶುಚಿ ಪ್ರೇಮವಾಗಿ ಮಂಗಳಕರವಾಗಿ' ಪರಿಣಾಮಗೊಳ್ಳುವಂತೆ ಮಾಡಿರುವ ಕವಿಕೌಶಲ್ಯದ ಎಲ್ಲ ಹಂತಗಳನ್ನೂ ಗುರುತಿಸಿ ಧನ್ಯರಾಗುತ್ತೇವೆ. ಇದನ್ನು ವಿ.ಸೀ. ವಿವರಿಸಿರುವ ರೀತಿ ಬಲು ಸೊಗಸು, ಬಲು ಸೊಗಸು.

ದುಷ್ಯಂತನಿಂದ ತಿರಸ್ಕೃತಳಾದ ಶಕುಂತಲೆಯ ಮನಸ್ಸಿನಲ್ಲಿ ಏನೇನು ಭಾವನೆಗಳು ಹಾದುಹೋದುವು, ಅವಕ್ಕೆ ವಿ.ಸೀ. ರೂಪುಕೊಟ್ಟಿರುವ ರೀತಿ ನೋಡಿ :

"ಆಗ್ರಹ, ಆಸೆ, ನಿರಾಸೆ, ದುಃಖ ಒತ್ತಿಬಂದು – ಪುರುವಂಶದಲ್ಲಿ ಹುಟ್ಟಿ, ಧರ್ಮ ಕಂಚುಕ ತೊಟ್ಟು ಬಂದವನು ಎಂದು ವಿಶ್ವಾಸವಿಟ್ಟರೆ, ಬಾಯ ಮಧು, ಹೃದಯಸ್ಥಿತ ವಿಷವುಳ್ಳ ಅನಾರ್ಯನಾದ ಇವನ ಕೈಗೆ ಸಿಕ್ಕಿಕೊಂಡೆನೇ, ಇವನ ಕಿತವದಿಂದ ಸ್ವಚ್ಛಂದಚಾರಿಣಿಯಾದೆನೇ."

(ಅದೇ, ಪು.೪೪)

– ಎಂದುಕೊಂಡಳಂತೆ. ಎಷ್ಟು ಮಾರ್ಮಿಕವಾಗಿ ಆ ಮುಗ್ಧ ಮಹಿಳೆಯ ಮನೋಭಾವವನ್ನು ವಿ.ಸೀ. ವರ್ಣಿಸಿದ್ದಾರೆ.

ಕಾಳಿದಾಸನು ಮಹಾಭಾರತದ ಮೂಲಕಥೆಯಲ್ಲಿ ಮಾಡಿರುವ ಒಂದೊಂದು ಮಾರ್ಪಾಟಿನ ಸೊಗಸೂ ಎಷ್ಟು ಕಲಾಪೂರ್ಣವಾದದ್ದು ಎನ್ನುವುದನ್ನು ಅತ್ಯಂತ ಕುಶಲತೆಯಿಂದ ಎತ್ತಿ ತೋರಿಸುತ್ತ ಹೋಗುತ್ತಾರೆ. ಮೊದಲ ಓದಿಗೆ ನಮಗೆ ತೋರದೆ ಹೋದ ಎಷ್ಟೋ ಅಂಶಗಳ ಕಡೆ ನಮ್ಮ ಗಮನವನ್ನು ಹರಿಹಾಯಿಸುತ್ತಾರೆ. ಷೇಕ್ಸ್‌ಪಿಯರನ ದುರಂತ ನಾಟಕಗಳಲ್ಲಿ ಹುದುಗಿರುವ ನವನವೀನವಾದ ಸೊಗಸುಗಳನ್ನು ಖ್ಯಾತ ವಿಮರ್ಶಕ ಬ್ರಾಡ್ಲೆ ಹೇಗೆ ಎತ್ತಿ ತೋರಿಸುತ್ತ ಹೋಗುತ್ತಾನೊ ಹಾಗೆಯೇ ವಿ.ಸೀ. ಅವರೂ ತಮ್ಮ ಕೃತಿಯಲ್ಲಿ ಕಾಳಿದಾಸನ ಕಲಾಕೌಶಲ್ಯವನ್ನು ನಮಗೆ ಪರಿಚಯಿಸುತ್ತ ಹೋಗುತ್ತಾರೆ.

ಹೇಮಕೂಟದ ಮಾರೀಚಾಶ್ರಮ ಪ್ರಸಂಗವೂ ಕೂಡ ಕಾಳಿದಾಸ ಮಾಡಿಕೊಂಡ ಮಹೋನ್ನತ ಕಲ್ಪನೆ. ಸ್ವರ್ಗಕ್ಕೂ ಅಧಿಕವಾದ ನಿವೃತ್ತಿಸ್ಥಾನ ಅದು ಎಂದು ಚಿತ್ರಿಸಿದ್ದಾನೆ. ಅಲ್ಲಿರುವ ಎಲ್ಲರೂ ರಾಗದ್ವೇಷಾದಿಗಳನ್ನು ಕಳೆದುಕೊಂಡ ಪರಿಶುದ್ಧ ವ್ಯಕ್ತಿಗಳಾಗಿದ್ದಾರೆ. ದುಷ್ಯಂತ - ಶಕುಂತಲೆಯರ ಪುನಃ ಸಮಾಗಮಕ್ಕೆ ಎಂಥ ಮಹೋನ್ನತ ಆವರಣವನ್ನು ಕಲ್ಪಿಸಿದ್ದಾನೆ ಕಾಳಿದಾಸ. ಈ ಪ್ರಸಂಗವನ್ನು ಓದುತ್ತ ಓದುತ್ತ ನಾವು ಕಾವ್ಯತೀರ್ಥದಲ್ಲಿ ಮಿಂದು ಪರಿಶುದ್ಧರಾದೆವೆನ್ನುವ ಅನುಭವವಾಗುತ್ತದೆ.

ಶಕುಂತಲೆಯಲ್ಲಿ ನಾಟಕದುದ್ದಕ್ಕೂ ಆಗುತ್ತ ಬಂದಿರುವ ಪರಿವರ್ತನೆಯ ಚಿತ್ರಣ ಕಾಳಿದಾಸನ ಕಾವ್ಯದಲ್ಲಿ ಪರಮಸುಂದರವಾದ ಭಾಗ. ಆ ಪರಿವರ್ತನೆಯ ವಿವಿಧ ಘಟ್ಟಗಳನ್ನು ಎಳೆಎಳೆಯಾಗಿ ಬಿಡಿಸಿ ನಮ್ಮ ಗಮನವನ್ನು ಸೆಳೆಯುತ್ತಾರೆ ವಿ.ಸೀ.

> ''ಮೊದಲಂಕಗಳ ಕಿಸಲಯ ಕುಸುಮ ಕೋಮಲೆಯಾದ, ಲತಾ ಭಗಿನಿಯಾದ, ನವಮಾಲಿಕೆಯಂತಿದ್ದ, ತಾವರೆಯೆಲೆಯ ಬೀಸಣಿಗೆಯಿಂದ, ಶೈತ್ಯೋಪಚಾರಗೊಳ್ಳುತ್ತ ಶುಕೋದರದಂತೆ ಮೃದುವಾದ ನಲಿನೀಪತ್ರದಲ್ಲಿ ಪ್ರಿಯನಿಗೆ ಪ್ರಣಯ ಸಂದೇಶವನ್ನು ಬರೆದು ಕಳಿಸಿದವಳೆಲ್ಲಿ? ಸಖಿಯರಿಂದ ಸಿಂಗರಗೊಂಡು ವನದೇವಿಯರಿತ್ತ ದುಕೂಲ, ಲಾಕ್ಷಾರಸ, ಆಭರಣ ಮುಂತಾದುವನ್ನು ಧರಿಸಿ ಕಣ್ವಾಶ್ರಮದಿಂದ ಗಂಡನ ಮನೆಗೆ ಹೊರಟ ಆಶ್ರಮಶ್ರೀ ಎಲ್ಲಿ? ಅವಗುಂಠನವತಿಯಾಗಿ ರಾಜಸಭೆಯಲ್ಲಿ ಬೆಳ್ಳಗಾದ ಹಣ್ಣೆಲೆಗಳ ನಡುವೆಯ ಕಿಸಲಯದಂತೆ ಕಂಡ ಆ ಶಕುಂತಲೆಯೆಲ್ಲಿ? ರಾಜನ ಕಠಿನತೆಗೆ ಬಾಡಿ, ಕೊರಗಿ, ಬದುಕು ಬೇಸರವೆನಿಸಿ, ಭೂತಾಯಿಗೆ ಪ್ರಾರ್ಥನೆಮಾಡಿಕೊಂಡು ಅಪ್ಸರ ಸನ್ನಿಧಿಯ ಮಡಿಲಲ್ಲಿ ಆಕಾಶಕ್ಕೇರಿದಾಕೆಯೆಲ್ಲಿ?..... ಏಕವೇಣಿಯಾಗಿ ವ್ರತನೇಮಗಳಿಂದ ಕಂದಿದ ಮುಖವುಳ್ಳವಳಾಗಿ, ಮಲಿನಾಂಬರವುಟ್ಟ ಈ ತಪಸ್ವಿನಿಯೆಲ್ಲಿ?''
>
> *(ಆದೇ, ಪು.೫೮)*

ಹೀಗೆ ಮರ್ಮಭೇದಕವಾದ ಮಾತುಗಳಲ್ಲಿ ಶಕುಂತಲೆಯಲ್ಲಾದ ಪರಿವರ್ತನೆಯನ್ನು ವಿವರಿಸುತ್ತಾರೆ. ಇದನ್ನು ಓದುವವರೆಗೂ ನಾವು ಕಣ್ಣುರುಡರಾಗಿರುತ್ತೇವೆ. ಕಾವ್ಯವನ್ನು ಓದಿ ನಮಗೆ ನಾವೇ ಸಂತೋಷಪಟ್ಟರಬಹುದು. ಆದರೆ ಗುರುವಾದವನು ನಮ್ಮ ಕೈ ಹಿಡಿದು ನಡಸಿಕೊಂಡು ಹೋಗುತ್ತ, ಒಂದೊಂದು ಸನ್ನಿವೇಶದಲ್ಲೂ ಹುದುಗಿರುವ ರಸವನ್ನು ಕಾಣಿಸುತ್ತ ಹೋಗುವಾಗ ನಮ್ಮ ರಸಾನುಭವ ಹತ್ತುಪಟ್ಟು ಹೆಚ್ಚುತ್ತದೆ. ವಿ.ಸೀ. ಗುರುವಿನಿಂದ ಈ ದಾರಿಯಲ್ಲಿ ನಮಗಾಗಿರುವ ಉಪಕಾರ ಅಷ್ಟಿಷ್ಟಲ್ಲ.

ಶಾಕುಂತಲ ನಾಟಕದ ಹೆಚ್ಚುಗಾರಿಕೆಯನ್ನು, ಕವಿ ಕಾಳಿದಾಸನ ಕೌಶಲ್ಯವನ್ನು ಮೆಚ್ಚಿಕೊಳ್ಳುತ್ತ ವಿ.ಸೀ. ಹೇಳುತ್ತಾರೆ :

> ''ಕವಿ ತನ್ನ ಕಾಲದ ಕಲಾವಿಲಾಸವನ್ನೆಲ್ಲ ಬಲ್ಲವನು; ಆಗಿನ ಮೃದು ಸಂಸ್ಕಾರದ ಹೃದಯವನ್ನರಿತವನು. ತನ್ನ ಬದುಕಿನಲ್ಲಿ ಅದರ ಸವಿಯನ್ನು ಅನುಭವಿಸಿದವನು. ರಾಜರ, ವಿದ್ವಾಂಸರ, ರಸಜ್ಞರ ಮನ್ನಣೆ ವಿಶ್ವಾಸಗಳನ್ನು ಪಡೆದವನು. ಎರಡೆರಡು ಭಾವಕವಿತೆ, ಕಥಾಕಾವ್ಯ, ಶೃಂಗಾರ ಪ್ರಧಾನ ನಾಟಕಗಳನ್ನು ಬರೆದು ಈವರೆಗಾಗಲೇ ಕವಿತೆಯಲ್ಲಿ, ನಾಟಕ ರಚನೆಯಲ್ಲಿ ನುರಿತವನು. ಆತನ ಮನಸ್ಸಿಗೂ ಲೋಕಾನುಭವಕ್ಕೂ., ಭಾವಸಂಪತ್ತಿಗೂ, ಕೈಗೂ ಒಂದು ನುರಿತ, ನುಣುಪು, ತುಂಬು ಬಂದಿದ್ದವಾಗಿ ಆತನ ಕವಿತಾಶಕ್ತಿಯ ಪರಿಪೂರ್ಣಫಲ ಶಾಕುಂತಲ ನಾಟಕದಲ್ಲಿ ಕಾಣುವಂತಾಯಿತು.''
>
> *(ಅದೇ, ಪು.೨)*

ಕಾಳಿದಾಸ ನಮ್ಮ ರಾಷ್ಟ್ರದ ಹೆಮ್ಮೆಯ ಕವಿ. ಅವನ ಕೃತಿ ಶಾಕುಂತಲ ಜಗತ್ತಿನ ಯಾವುದೇ ಶೃಂಗಾರಕಾವ್ಯಕ್ಕೆ ಸರಿಸಮನಾಗಿ ನಿಲ್ಲಬಲ್ಲದು. ಅಲ್ಲಿನ ಶುಚಿಯಾದ ನಡತೆ, ಸಂಸ್ಕಾರಗೊಂಡ ಜೀವಿಗಳು ಹೇಗೆ ನಡೆದುಕೊಳ್ಳಬೇಕೆನ್ನುವುದನ್ನು ತೋರಿಸುವುದಕ್ಕೆ ಉತ್ತಮ ನಿದರ್ಶನವಾಗಿದೆ. ನಮ್ಮ ಯುವಕ ಯುವತಿಯರು ವಿಶ್ವದ ಕವಿವರೇಣ್ಯರೆಲ್ಲರೂ ಮೆಚ್ಚಿಕೊಂಡಿರುವಂಥ ಈ ಕಾವ್ಯವನ್ನು ವ್ಯಾಸಂಗಮಾಡಿ ತಮ್ಮದಾಗಿಸಿಕೊಳ್ಳಬೇಕು. ಜೀವನದಲ್ಲಿ ಆಗ ಅವರು ಹೊಸದೊಂದು ಸವಿಯನ್ನು ಕಾಣುತ್ತಾರೆ ಎನ್ನುವುದರಲ್ಲಿ ಸಂದೇಹವಿಲ್ಲ. ವಿ.ಸೀ.ಯವರ ವಿಮರ್ಶೆ ಈ ಅನುಪಮ ಕಾವ್ಯಸೌಧವನ್ನು ಪರಿಚಯಿಸಲು ಸಹಾಯವಾಗುವ ಜ್ಞಾನಮಯಪ್ರದೀಪ. ಕಾವ್ಯ ಎಷ್ಟು ಸೊಗಸಿನದೋ ಅದರ ವಿಮರ್ಶೆಯೂ ಅಷ್ಟೇ ಸೊಗಸಿನದು. ವಿಮರ್ಶೆಯೂ ಒಂದು ಕಾವ್ಯದಂತಿದೆ.

ಸುಸಂಸ್ಕೃತ ಮನಸ್ಸಿನ ಸ್ಪಂದನ

ವಿಮರ್ಶೆಯಲ್ಲಿ ವಿ.ಸೀ.ಯವರದು ಎಂಥ ಸೂಕ್ಷ್ಮದೃಷ್ಟಿ ಎನ್ನುವುದನ್ನು ಮಹಾಭಾರತದಲ್ಲಿನ ಒಂದು ಸನ್ನಿವೇಶವನ್ನು ಅವರು ವಿಶ್ಲೇಷಿಸಿರುವ ರೀತಿಯಿಂದ ತಿಳಿಯಬಹುದು.

ಸಂದರ್ಭ : ಕೃಷ್ಣನು ಕರ್ಣನನ್ನು ಪಾಂಡವರ ಕಡೆ ಒಲಿಸಿಕೊಳ್ಳಲು ಮಾಡಿದ ಸನ್ನಾಹ. ಕರ್ಣನು ಕುಂತಿಯ ಜ್ಯೇಷ್ಠ ಪುತ್ರ , ಪಾಂಡವರಿಗೆಲ್ಲ ಹಿರಿಯ ಎಂದು ತಿಳಿಸಿಯಾದ ಮೇಲೆ ಕೃಷ್ಣನ ಬಾಯಿಂದ ವ್ಯಾಸರು ಈ ಮಾತು ಹೇಳಿಸಿದ್ದಾರೆ - 'ಷಷ್ಠೇ ಚ ತ್ವಾಂ ತಥಾಕಾಲೇ ದ್ರೌಪದ್ಯುಪಗಮಿಷ್ಯತಿ' ('ಆರನೆಯ ಹೆಂಡತಿಯಾಗಿ ದ್ರೌಪದಿ ನಿನ್ನನ್ನು ಕೂಡಿಯಾಳು'). ದ್ರೌಪದಿಯ ವಿಷಯವಾಗಿ ಕೃಷ್ಣ ಇಂಥ ಮಾತನ್ನು ಆಡಬಹುದೆ ? ವಿ.ಸೀ. ಹೇಳುತ್ತಾರೆ - ''ಈ ಮಾತು ಆ ಸನ್ನಿವೇಶಕ್ಕೆ ಅಗತ್ಯವಾಗಿತ್ತೇನೊ. ಅಂಥ ಮನುಷ್ಯನೂ ಅಂಥ ಮಾತನ್ನು ಆಡಬೇಕಾಗಿ ಬಂದಿತೇನೊ – ಹೇಳಲಾರೆ. ಕೃಷ್ಣನ ನಿಃಸ್ವಾರ್ಥ ಜೀವನದಲ್ಲಿ ಕೂಡ ಅಂಥ ಪ್ರಸಂಗ ಒಂದರಲ್ಲಿ ಅವನು ತೇಲಲಿಲ್ಲ..... ಆಕೆ ದೂರದಲ್ಲಿದ್ದಾಳೆ. ಪಾಂಡವರ ನೆಚ್ಚಿನ ಹೆಂಡತಿ. ಒಮ್ಮೆ ಕೂಡ ಅವರಲ್ಲಿ ಯಾರೂ ಆಕೆಗೆ ಹೀನಾಯ ಸುಳಿವಂತೆ ನುಡಿದಿಲ್ಲ, ನಡೆದಿಲ್ಲ. ಮದುವೆಯಾಗಿ ಎಷ್ಟೋ ವರ್ಷ ಸಂದು ಉಪಪಾಂಡವರು ಹುಟ್ಟಿದ್ದಾರೆ. ಇಂಥವಳನ್ನು ಕುರಿತು ಯಾರೂ ಈ ಮಾತನ್ನು ಆಡುವುದು ಸರಿಯಾಗದು.'' *('ಒಳ್ಳೆಯ ಮನುಷ್ಯ ಒಳ್ಳೆಯ ಬದುಕು', ಪು.೨)*

ವಿ.ಸೀ.ಯವರ ಸುಸಂಸ್ಕೃತ ಮನಸ್ಸು ಈ ಸಂದರ್ಭವನ್ನು ಹೇಗೆ ಕಂಡಿತು ಎನ್ನುವುದನ್ನು ಇಲ್ಲಿ ನಾವು ಗಮನಿಸಬೇಕು. ಆ ಮನಸ್ಸು ಹೆಣ್ಣಿನ ವಿಷಯದಲ್ಲಿ ಒಂದು ಅವಹೇಳನದ ಮಾತನ್ನೂ ಸಹಿಸದು. ವ್ಯಕ್ತಿ ಎಷ್ಟೇ ದೊಡ್ಡವನಾಗಿರಲಿ, ಸಂದರ್ಭ ಎಂಥದೇ ಇರಲಿ, ಅವನ ಬಾಯಿಂದ ಇಂಥ ಅನಾಗರಿಕ ಮಾತು ಬರಬಾರದು ಎನ್ನುವುದು ವಿಮರ್ಶಕ ವಿ.ಸೀ. ಅವರ ಮತ. ಅದನ್ನು ಸರಿಯಲ್ಲ ಎನ್ನಲಾದೀತೆ?

ವಾಲ್ಮೀಕಿ ರಾಮಾಯಣದಲ್ಲಿನ ಇನ್ನೊಂದು ಸಂದರ್ಭ, ಅಹಲ್ಯಾ ಪ್ರಸಂಗ , ಬಹು ಕವಿಗಳ , ಬಹು ವಿಮರ್ಶಕರ ಮನ ಸೆಳೆದಿದೆ. ಈ ಪ್ರಸಂಗದಲ್ಲಿ ವಿ.ಸೀ.ಯವರ ಮನ ಸೆಳೆದಿದ್ದು ಇಂದ್ರನ ಮೋಸವಲ್ಲ , ಗೌತಮ ಕೊಟ್ಟ ಶಾಪವಲ್ಲ; ಅಹಲ್ಯೆಗೆ ಆದ ಅನ್ಯಾಯವೂ ಅಲ್ಲ. ಅವರಿಗೆ ಮುಖ್ಯವಾಗಿ ಕಂಡದ್ದು ಬೇರೆಯದೇ ಆದ ಸನ್ನಿವೇಶ. ರಾಮಲಕ್ಷ್ಮಣರು ವಿಶ್ವಾಮಿತ್ರರೊಡನೆ ಜನಕ ರಾಯನ ಆಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿ ಜನಕ ಮಹಾರಾಜನ ಪುರೋಹಿತ ನಾದ ಶತಾನಂದನ ದರ್ಶನವಾಗುತ್ತದೆ. ಶತಾನಂದ ಗೌತಮ-ಅಹಲ್ಯೆಯರಿಗೆ ಹುಟ್ಟಿದ ಮಗ. ವಿಶ್ವಾಮಿತ್ರರು ಗೌತಮರ ಆಶ್ರಮಕ್ಕೆ ಹೋದುದನ್ನು ಕೇಳಿ ತಿಳಿದ ಶತಾನಂದ ಕೇಳುವ ಮೊದಲ ಪ್ರಶ್ನೆ ಇದು : 'ನನ್ನ ತಾಯಿ-ತಂದೆ ಒಟ್ಟಿಗೆ ಸೇರಿದರೆ ? ತಂದೆ ತಾಯಿಯನ್ನು ಕ್ಷಮಿಸಿದರೆ?' ತಾಯಿಯ ವಿಷಯವಾಗಿ ಅವನ ಮನಸ್ಸಿನಲ್ಲಿ ಕಳವಳ ಎಷ್ಟಿತ್ತು ಎನ್ನುವುದನ್ನು ಕವಿ ಎತ್ತಿ ತೋರಿಸಿದ್ದಾನೆ. ಈ ಪ್ರಸಂಗವನ್ನು ಮಧುರವಾಗಿ ಚಿತ್ರಿಸಿರುವ ಕವಿ ವಾಲ್ಮೀಕಿ ಎಂಥ ಮಹಾನುಭಾವ ಎಂದು ವಿ.ಸೀ. ಮೆಚ್ಚಿಕೊಳ್ಳುತ್ತಾರೆ. ಆ ವಿಷಯವನ್ನು ಪಾಠ ಹೇಳುವಾಗ

ಗಂಟಲು ಬಿಗಿದು ಗದ್ಗದಿತರಾಗುತ್ತಿದ್ದರಂತೆ. (ಶೇಷಗಿರಿರಾವ್, ೧೯೯೧, ಪು. ೧೭-೧೮)

ವಿ.ಸೀ. ಯವರ ವಿಮರ್ಶಾದೃಷ್ಟಿ ಎಷ್ಟು ಸೂಕ್ಷ್ಮವಾದದ್ದು ಎನ್ನುವುದನ್ನು ತೋರಿಸುವುದಕ್ಕೆ ಇನ್ನೊಂದು ನಿದರ್ಶನ ಕೊಡಬಹುದು. 'ಕರ್ಣಾಟಕ ಕಾದಂಬರಿ'ಯಲ್ಲಿ ಗಿಳಿ, ಶೂದ್ರಕ ಮಹಾರಾಜನಿಗೆ ಆಶೀರ್ವಾದ ಮಾಡುವ ಪ್ರಸಂಗ ಬರುತ್ತದೆ. ಕವಿ ಗಿಳಿಯ ಬಾಯಲ್ಲಿ 'ನಿನ್ನ ಹಗೆಗಳ ಹೆಂಡಿರು ವಿಧವೆಯರಾಗಲಿ' ಎಂದು ಹೇಳಿಸಿದ್ದಾನೆ. ಇದನ್ನು ಟೀಕಿಸುತ್ತ ವಿ.ಸೀ. ಹೇಳುತ್ತಾರೆ:

> ''ರಾಜನಿಗೆ ಜಯವಾಗಲಿ ಎನ್ನಿ, ರಾಜನ ಹಗೆಗಳು ಹೆಸರಿಲ್ಲದೆ ಅಳಿದರು ಎನ್ನಿ, ಅವರ ಹೆಂಡಿರು ವಿಧವೆಯರಾಗಲಿ ಎಂಬ ಬರ್ಬರತೆಯ ಮೂಲಕ ಏಕೆ ಹರಸಬೇಕು? ಇವನಿಗೆ ಕೆಡುಕು ಮಾಡದ ಹೆಣ್ಣುಗಳ ಅಳಲು, ವೈಧವ್ಯದ ನೋವು, ಬೇಗೆ ಕಣ್ಣೀರುಗಳನ್ನು ಮಹಾಪೂರವಾಗಿ ವರ್ಣಿಸಿ, ಹೆಣ್ಣುಗಳಾದ ಅವರಿಗೆ ತಾಳಲಾಗದ ಅಳುವನ್ನು ತರುವುದು ಏನು ವೀರವರ್ತನೆ? ಹಿಂದೂ ಸಮಾಜದಲ್ಲಿ ವೈಧವ್ಯದುಃಖ ಅಳೆಯತೀರದ್ದು; ನುಡಿದು ಮುಗಿಯದ್ದು. ಈ ದೇಶದಲ್ಲಿ ಆ ಚಿತ್ರದ ಉರಿಬೇಗೆಯನ್ನು ಬಾಯಿ ಚಪ್ಪರಿಸುತ್ತ ವರ್ಣಿಸಬಾರದೆನ್ನಿಸುತ್ತದೆ.''
>
> (ವಿ.ಸೀ. ೧೯೫೭, 'ಕರ್ಣಾಟಕ ಕಾದಂಬರಿ', ಪು.೬೩)

ಪ್ರೇಮದ ಶುಚಿ ಸಂಪತ್ತಿಯನ್ನು ಬೆಳಗುವ ಮಹಾಕಾವ್ಯದಲ್ಲಿ ಮಂಗಳಾಚರಣದಂತಿರುವ ಈ ಪದ್ಯವನ್ನು ಗಿಳಿಯ ಬಾಯಲ್ಲಿ ಹೇಳಿಸುವುದು ಸರಿಯಲ್ಲವೆನ್ನಿಸುವುದು. ಕವಿಯ ವಾಕ್ಕಿನಲ್ಲಿ ಇರುವ ಬರ್ಬರತೆಯನ್ನು ಗಮನಿಸಿ ಅದನ್ನು ತೋರಿಸಿರುವುದು ವಿ.ಸೀ. ಯವರ ಮೇಲ್ಮಟ್ಟದ ವಿಮರ್ಶಾಶಕ್ತಿಯನ್ನು ಎತ್ತಿ ತೋರಿಸುತ್ತದೆ ಎನ್ನುತ್ತಾರೆ ಕೆ. ಎಸ್. ನರಸಿಂಹಸ್ವಾಮಿ.

ಒರಟು ಒರಟಾಗಿರುವ ಮೂಲಕಥೆ ಕುಶಲನಾದ ಕವಿಯ ಕೈಯಲ್ಲಿ ಎಂಥ ಸುಂದರಾಕೃತಿಯಾಗಿ ಪರಿಣಾಮಗೊಳ್ಳುತ್ತದೆ ಎನ್ನುವುದನ್ನು 'ಕರ್ಣಾಟಕ ಕಾದಂಬರಿ' ವಿಮರ್ಶೆಯಲ್ಲಿ ವಿ.ಸೀ. ಮನಮುಟ್ಟುವಂತೆ ನಿರೂಪಿಸಿದ್ದಾರೆ.

> ''ಕಾದಂಬರಿಯ ಮೂಲ ಬೃಹತ್ಕಥೆ. ಆದರೆ ಅಲ್ಲಿನದೆಲ್ಲ ಎಷ್ಟು! ವಿಗ್ರಹಶಿಲ್ಪಿಗೆ ಸಿಕ್ಕುವ ಕಲ್ಲಿನಂತೆ. ಶ್ರೇಷ್ಠ ಕವಿಯ ಕಣ್ಣಿಗೆ ಪದಾರ್ಥ ಬಿದ್ದ ಕೂಡಲೆ ಅದಕ್ಕೆ ಇಲ್ಲದಿದ್ದ ಆಕೃತಿ ಮೂಡುತ್ತದೆ; ಚೆಲುವು ಹೊಮ್ಮುತ್ತದೆ; ರಸ ತುಂಬುತ್ತದೆ; ಕಲ್ಪನೆ ಕೆರಳುತ್ತದೆ. ನೆಲ, ನೀರು, ಬಾನುಗಳ ಮೇಲೆ ಹಿಂದೆ ಕಾಣದಿದ್ದ ಪ್ರಪಂಚವೊಂದು ಹುಟ್ಟಿಕೊಂಡು, ತಾರೆಗಳ ತಿಳಿವನ್ನು ಅಣಕಿಸುತ್ತ ತಾನೇ ನಿಜವೆಂಬ ಭ್ರಾಂತಿ ಉಂಟುಮಾಡುತ್ತದೆ. ಎದುರ ಲೋಕ ಒರಟು, ಇದು ನಯ, ಹಸನು ಮಾಡಿದುದು, ಶೋಧಿಸಿದ್ದು, ಭವ್ಯವಾದ್ದು ಎಂಬಂತೆ ತೆಗೆದುಕೊಂಡ ಕಥೆಯನ್ನು ನಯಮಾಡಿ ರಸಕೃತಿಯಾಗಿ ಸಾವಿಲ್ಲದ ಸೌಭಾಗ್ಯವನ್ನಾಗಿಸಿದ ಕೀರ್ತಿ ಬಾಣಭಟ್ಟನದು.''
>
> (ಅದೇ, ಪು.೨೨)

ವಿಮರ್ಶೆಯ ವಿಮರ್ಶೆ

'ತುಲ್ಯನಿಂದಾಸ್ತುತಿರ್ಮೌನೀ' ನಿಂದೆಯಿಂದ ಕುಗ್ಗದ, ಸ್ತುತಿಯಿಂದ ಉಬ್ಬದ ಸ್ಥಿತಪ್ರಜ್ಞರು ನಮ್ಮಲ್ಲಿ ಎಷ್ಟು ಜನರುಂಟು? ವಿ.ಸೀ. ತಮ್ಮ ಕೃತಿಗಳ ಮೇಲೆ ಟೀಕೆಯನ್ನು ಬಹುವಾಗಿ ಮನಸ್ಸಿಗೆ ಹಚ್ಚಿಕೊಂಡವರಲ್ಲ. ಎಷ್ಟೋ ಸಂದರ್ಭಗಳಲ್ಲಿ ಮೌನವಾಗಿ ಸುಮ್ಮನಿದ್ದರೂ ಒಮ್ಮೊಮ್ಮೆ ಕೆರಳಿರುವುದೂ ಉಂಟು. ಎಸ್.ವಿ. ರಂಗಣ್ಣನವರು ಶ್ರೇಷ್ಠ ವಿಮರ್ಶಕರಲ್ಲೊಬ್ಬರು. ಮುದ್ದಣ ಕವಿಯ ರಾಮಾಶ್ವಮೇಧವನ್ನು ಸಾಮಾನ್ಯ ಚಿತ್ರವೆಂದು ಕಟುವಾಗಿ ಟೀಕಿಸಿದವರು ಅವರು. ವಿ.ಸೀ.ಯವರ ಶಾಕುಂತಲ ನಾಟಕ ವಿಮರ್ಶೆಯೂ ರಂಗಣ್ಣನವರ ಟೀಕೆಗೆ ಒಳಗಾಯಿತು. ಅದಕ್ಕೆ ವಿ.ಸೀ. ಪ್ರತಿಕ್ರಿಯಿಸಿದ ರೀತಿ ಅವರ ಮನೋಧರ್ಮವನ್ನು ಬಿಂಬಿಸುತ್ತದೆ. ಟೀಕಾಕಾರರನ್ನು ಸುಮ್ಮನಾಗಿಸುತ್ತದೆ. ಮೆಚ್ಚಿಕೆಯ ಮಾತನಾಡುತ್ತಲೆ ಮನ ಚುಚ್ಚುವಂತಹ ಮಾತುಗಳನ್ನು ಬಳಸುವುದರಲ್ಲಿ ಅವರು ಹಿಂಜರಿಯುವುದಿಲ್ಲ. ರಂಗಣ್ಣನವರ ಟೀಕೆಯನ್ನು ಕುರಿತು ಅವರು ಮಾಡಿದ ಮರುಟೀಕೆ ಎಷ್ಟು ಖಾರವಾಗಿದೆ ನೋಡಿ :

> ''ಈಚೆಗೆ ಪ್ರೊ. ಎಸ್.ವಿ. ರಂಗಣ್ಣನವರು 'ಶಾಕುಂತಲ ನಾಟಕ ವಿಮರ್ಶೆ' ಎಂಬ ಉದ್ಗ್ರಂಥವನ್ನು ಬರೆದು ಈ ನಾಟಕದ ತಂತ್ರವನ್ನು ಅಭ್ಯಾಸಮಾಡುವವರಿಗೆ ಮಹೋಪಕಾರಮಾಡಿದ್ದಾರೆ. ಅವರ ಪಾಂಡಿತ್ಯ, ಉದ್ಯೋಗಶೀಲತೆ ಅದ್ಭುತವಾದವು. ಇನ್ನೂರು ಪುಟದ ವಿಮರ್ಶೆಯ ಒಡಲಲ್ಲಿ ಸುಮಾರು ೨೨೬ ಅಭಿಪ್ರಾಯಗಳನ್ನು ಖಂಡಿಸಿ ಅವರ ನಾಲ್ಕೈದು ಮಹಡಿಗಳ ಕಲ್ಪನೆ ಮತ್ತು ವಿಮರ್ಶೆಯ ವಿಲಾಸವನ್ನು ಬೆಳೆಸಿದ್ದಾರೆ. ಬಡವನಾದ ನನ್ನ ಮನೆಗೆ - ನನಗೂ ಏನೊ! - ಮಹಡಿಯೇ ಇಲ್ಲ. ನನ್ನ ಪುಸ್ತಕದಲ್ಲಿನ ೩-೪ ವಾಕ್ಯಖಂಡಗಳನ್ನು ತೆಗೆದುಕೊಂಡು ಅಲ್ಲಿ ಟೀಕೆ ಮಾಡಿದ್ದಾರೆ. ನನ್ನ ಜೊತೆಗೆ ನನಗಿಂತ ಎಷ್ಟೋ ದೊಡ್ಡ ವಿದ್ವಾಂಸರೆಲ್ಲರ ಮೇಲೂ ಅವರ ಕಟು ಟೀಕೆ ಬೀಳುವುದರಿಂದ ಅದು ನನ್ನನ್ನು ಮಾತ್ರವೇ ಒತ್ತುವ ಆಗ್ರಹವಾಗದ್ದು ಒಂದು ಸಮಾಧಾನ : ನನ್ನ ದೃಷ್ಟಿಯಂಥದು ಅವರಿಗೆ ನೀರಸ. ಸೂತ್ರಧಾರನ ಗ್ರೀಷ್ಮ ವರ್ಣನೆಯ ಪದ್ಯವೇ ಅವರಿಗೆ ನೀರಸ ..... ಅವನ್ನೆಲ್ಲ ಕುರಿತು ನಾನು ಏನನ್ನೂ ಹೇಳಬಯಸುವುದಿಲ್ಲ. ಆದರೆ ಅವನ್ನು ಮಾರ್ಪಡಿಸಲು ನನಗೆ ಅಗತ್ಯ ತೋರುತ್ತಿಲ್ಲ. ನನ್ನಂತೆಯೂ ಈ ನಾಟಕವನ್ನು ನೋಡಬಹುದು. ಸಂಯೋಜಕ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ಯಾರೂ ತಿಳಿಸಬಹುದು. ಅವರವರು ಅರ್ಥಮಾಡಿಕೊಂಡಂತೆ, ಅವರವರ ಬೆಲೆಗಳಂತೆ ವಿಮರ್ಶೆ ನಡೆಯುತ್ತದೆ. ಅದೇ ಸಹಜ. ಸರಿ. ವಿಮರ್ಶೆಯ ವಿಮರ್ಶೆ ಗಾಟಿಕ್ಕುವ ಕೆಲಸ: ನನಗಿಂತ ಅವರು ಹೆಚ್ಚು ಓದಿದವರು; ಸಾಹಿತ್ಯದಲ್ಲಿ ಹೆಚ್ಚು ಅನುಭವವುಳ್ಳವರು. ಇವರ ಪಾತಾಳಗರಡಿಯ ಇನ್ನೂರಲ್ಲಿ ಮೂರು ನಾಲ್ಕು ಕೊಕ್ಕಿಗಳಿಗೆ ಮಾತ್ರ ಸಿಕ್ಕಿ ಉಳಿದುದು ಸದ್ಯಕ್ಕಾದರೂ ನನ್ನ ಭಾಗ್ಯ. ರೀತಿಯನ್ನು ಕುರಿತು ಒಂದು ಮಾತಾಡಬಹುದೇನೊ : ಪುಷ್ಪಾಪಚಯದಲ್ಲಿ ಹೂವನ್ನು ಆಯುವವರುಂಟು; ತಿರಿಯುವವರು

ಬಿಡಿಸುವವರು ಉಂಟು; ಕುಯ್ಯುವವರುಂಟು. ಈ ಕಾರ್ಯದಲ್ಲಿ ಗಿಡ ಕೆಟ್ಟು ಹೂ ನಲುಗಿದರೆ ಕಟುಕತನವಾದೀತು.''

('ಅಭಿಜ್ಞಾನ ಶಾಕುಂತಲ ನಾಟಕ', ಪು.೭-೮)

ಟೀಕಾಕಾರರ ಮೇಲಿನ ಟೀಕೆಯ ಒಂದು ನಿದರ್ಶನ ಇದಾದರೆ ಇನ್ನೊಂದು ಬಗೆಯ ಅವರ ಉತ್ತರ ತಮ್ಮ ಕಾವ್ಯದ ಮೇಲಿನ ವಿಮರ್ಶೆಗೆ ಸಂಬಂಧಿಸಿದ್ದು. ಖ್ಯಾತ ವಿಮರ್ಶಕರೊಬ್ಬರು ಮಣ್ಣಿನ ಸಂಬಂಧವಿಲ್ಲದ ವಿ.ಸೀ. ಯವರ ಕಾವ್ಯ ಸಪ್ಪೆ ಎಂದು ಟೀಕಿಸಿದ್ದಕ್ಕೆ ಪ್ರತಿಯಾಗಿ ಹೇಳಿದ ಮಾತುಗಳಿವು :

''ನನ್ನಂಥವರಿಗೆ 'ಮಣ್ಣ' ಸಂಪರ್ಕವಿಲ್ಲದ್ದರಿಂದ ನನ್ನ ಕವಿತೆ ಸಪ್ಪೆ ಎನ್ನುತ್ತಾರೆ – ಈ ಬೆಡಗಿನ ವಿದ್ವದ್ ವಿಮರ್ಶಕರು. ಇವರು ಮೆಚ್ಚುವ ಹಲವರಿಗೂ ಅದಿಲ್ಲ. ಅವರ ಬರವಣಿಗೆಯಲ್ಲಿಯೂ ವಿವೇಚನೆಯಲ್ಲಿಯೂ ಬರುವ ಮಾತುಗಳೇ ನಮ್ಮವಲ್ಲ; ನಮ್ಮ ಜನಕ್ಕೆ ಅರ್ಥವಾಗುವವಲ್ಲ.... ಎಲ್ಲ ವಿಲಾಯತಿಯಿಂದ ಹೊರತಿಣಿಕಿ ತಂದ ಪರಕೀಯತೆಗಳು.''

('ಸಮಗ್ರಗದ್ಯ ೧', ಪು.vi)

ಈ ಟೀಕೆ ಅಸಾಧುವಾಯಿತೇನೊ ಎನ್ನಿಸುತ್ತದೆ. ವಿ.ಸೀ.ಯವರ ಬಹು ಮಟ್ಟಿನ ಬರವಣಿಗೆಯೂ ಪಾಶ್ಚಾತ್ಯ ಸಾಹಿತ್ಯದ ಸಂಪರ್ಕದಿಂದ ಪ್ರೇರಿತವಾದದ್ದಲ್ಲವೆ ? ವಿಲಾಯತಿಯಿಂದ ಬಂದ ಸರಕೆಂದು ಅದನ್ನು ತಿರಸ್ಕರಿಸಬಹುದೆ? ಮನಸ್ಸಿಗೆ ಉಂಟಾದ ವ್ಯಥೆಯಲ್ಲಿ ಇಂಥ ತೂಕ ತಪ್ಪಿದ ಮಾತುಗಳು ಹೊರ ಬೀಳುವುದುಂಟು.

ಅಪಕ್ವವಾದ ವಿಮರ್ಶೆಯಿಂದ ನೊಂದೊ ಏನೊ ಇನ್ನೊಂದು ಕಡೆ ಹೇಳುತ್ತಾರೆ :

''ಕವಿತಾವಿಮರ್ಶೆಗೆ ಅರ್ಥಜ್ಞತೆ, ಹೃದಯಗ್ರಹಣ ಬೇಕು ಎಂಬುದು ಅತಿ ಪ್ರಾಥಮಿಕ ಅಂಶ. ತಿಳಿಯುವ ಮುಂಚೆ ತೀರ್ಮಾನ ಮಾಡುವವರ, ಆ ಆತುರವುಳ್ಳವರ ಮುಂದೆ ಯಾರ ಮಾತೇನು ನಡೆಯಬಲ್ಲದು? ಹಾಗೆಯೇ ತಮ್ಮ ಅಭಿಪ್ರಾಯವೇ ಸಾರ್ವಕಾಲಿಕ ಸತ್ಯ, ಸರ್ವಥಾಸಿದ್ಧ ತತ್ತ್ವವಾಗಿರಬೇಕಿಲ್ಲವೆಂಬುದನ್ನು ಬರೆದವರೂ ಯೋಚನೆ ಮಾಡಬಲ್ಲವರಿರಬಹುದು ಎಂಬುದನ್ನು ಅರಿತರೆ ಅನೇಕ ಅಹಂಕಾರಗಳಿಗೆ ಮದ್ದು ದೊರೆತೀತು. 'ವಿಮರ್ಶೆ'ಯ ಅನೇಕ ಅವಿವೇಕಗಳು ಕಡಮೆಯಾದಾವು. ಸದ್ಯ ಭಗವಂತನ ಇಚ್ಛೆ ಹಾಗಿಲ್ಲವೇನೊ.''

('ಹೆಜ್ಜೆಪಾಡು', ಪು. xiv-xv)

ಇನ್ನೊಂದು ಸಂದರ್ಭದಲ್ಲಿ ಉತ್ತಮ ವಿಮರ್ಶೆಯ ಲಕ್ಷಣವೇನು ಎನ್ನುವುದನ್ನು ವಿವರಿಸುತ್ತ ಹೇಳುತ್ತಾರೆ :

""If a review does not set one to think about a whole subject, why should it exist and why should one write it at all. ..... He (reviewer) should cull out such a meaning from the words and sentences, and then should comment in such a manner as to bring out an additional meaning out of it."

(ವಿಮರ್ಶೆ ಓದುಗನ ಮನಸ್ಸಿನಲ್ಲಿ ಒಟ್ಟು ವಿಷಯದ ಮೇಲಿನ ಕಲ್ಪನೆ ಮೂಡುವಂತೆ ಮಾಡದೆ ಹೋದರೆ ಅಂಥ ವಿಮರ್ಶೆ ಏಕಿರಬೇಕು? ಅಂಥದನ್ನು ಬರೆಯಲು ಏಕಾದರೂ ತೊಡಗಬೇಕು? ವಿಮರ್ಶಕನಾದ ವನು ಪದಗಳು ವಾಕ್ಯಗಳಲ್ಲಿನ ಸ್ವಾರಸ್ಯವನ್ನು ಮೊದಲು ಗ್ರಹಿಸಿ ಆಮೇಲೆ ಅವುಗಳಿಂದ ಇನ್ನೂ ಹೆಚ್ಚಿನ ಅರ್ಥ ಹೊಮ್ಮುವಂತೆ ತನ್ನ ಟೀಕೆಯನ್ನು ಬೆಳೆಸಬೇಕು.)

ಇಂಥ ಉನ್ನತ ಆದರ್ಶವನ್ನು ಎದುರಿಗಿಟ್ಟುಕೊಂಡದ್ದರಿಂದಲೆ ಅವರ ಬರವಣಿಗೆ ವಿದಗ್ಧಬುಧಜನರ ಮನವನ್ನು ರಂಜಿಸಿತು; ಕಾವ್ಯವ್ಯಾಸಂಗದಲ್ಲಿ ಹೊಸ ಆಸಕ್ತಿಯೊಂದನ್ನು ಜನರಲ್ಲಿ ಮೂಡಿಸಿತು.

ಇನ್ನೊಂದು ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯ ಉತ್ತಮಿಕೆ ಅಡಗಿರುವುದು ಎಲ್ಲಿ ಎನ್ನುವುದನ್ನು ನಿರ್ದೇಶಿಸುತ್ತ ಹೇಳುತ್ತಾರೆ :

''ನಿಜವಾಗಿ ಭಾರತೀಯತನದ ಜೀವಕಳೆ ಇರುವುದು ಸತ್ಯ ಕಾಮ ಜಾಬಾಲಿಯ ಕತೆಯಲ್ಲಿ, ನಚಿಕೇತನ ಕತೆಯಲ್ಲಿ, ಸಾವಿತ್ರಿಯ ಕತೆಯಲ್ಲಿ. ನಿನ್ನ ತಂದೆ ಯಾರೊ ಕಾಣೆ ಎಂದು ಹೇಳುವ ತಾಯಿ, ನನ್ನ ತಂದೆ ಯಾರೊ ಕಾಣೆ ಎಂದು ಗುರುವಿಗೆ ನುಡಿಯುವ ಹುಡುಗ, ಇದನ್ನು ಮೆಚ್ಚುವ ಗುರು ಇವರ ಕಥೆಯಲ್ಲಿ; ನನಗೆ ಬೇರೆ ಯಾವ ವೈಭವವೂ ಬೇಡ, ಜ್ಞಾನ ಬೇಕು ಎಂದು ಯಮನನ್ನೆ ಕೇಳುವ ಹುಡುಗನ ಕಥೆಯಲ್ಲಿ . ಇದು ಭಾರತೀಯ ಸಂಸ್ಕೃತಿ. ಮತ್ತೆ ಇದನ್ನು ಪಡೆಯುವುದು ಹೇಗೆ ಎನ್ನುವುದೇ ಪ್ರಶ್ನೆ.''

ಇಂದಿನ ಕಾಲದಲ್ಲಾಗಿರುವ ಜ್ಞಾನವಿಪರ್ಯಾಸವನ್ನು ಅಣಕ ಮಾಡುತ್ತ ಶಿವರಾಮ ಕಾರಂತರು 'ಗ್ನಾನ' ಎಂಬ ಪುಸ್ತಕ ಬರೆದರು. ಅದಕ್ಕೆ ಮುನ್ನುಡಿ ಬರೆದುಕೊಡಬೇಕೆಂದು ಕಾರಂತರು ವಿ.ಸೀ.ಯವರನ್ನು ಕೇಳಿದರಂತೆ. ವಿ.ಸೀ. ಪುಸ್ತಕವನ್ನು ಓದಿ ನೋಡಿ, ಅದರ ತೂಕಮಾಡಿ, ಇದು 'It is an ass that kicks on all sides' ಎಂದರಂತೆ. ಇದನ್ನೆ ಕಾರಂತರು 'ಸುತ್ತಲೂ ಲತ್ತೆ ಕೊಡುವ ಕತ್ತೆ' ಎಂದು ಅತಿ ಸಮರ್ಪಕವಾದ ಅನುವಾದಮಾಡಿ ಪ್ರಕಟಿಸಿದರು. ವಿ.ಸೀ.ಯವರ ವಿಮರ್ಶಕ ಬುದ್ಧಿಗೆ ಈ ಪ್ರಸಂಗವೂ ಒಂದು ನಿದರ್ಶನ.

ಕವಿ ಕಾವ್ಯ ವಿಮರ್ಶೆ

ಮಾಸ್ತಿಯವರ 'ಸುಬ್ಬಣ್ಣ' ಕಥೆಯನ್ನು ಕುರಿತು ಆಡಿರುವ ಮಾತುಗಳು ವಿ.ಸೀ. ಎಂಥ ಗುಣಗ್ರಾಹಿ ಎನ್ನುವುದನ್ನು ಸೂಚಿಸುತ್ತವೆ :

> ''ಸುಬ್ಬಣ್ಣದಂಥ ಪುಸ್ತಕ ಕನ್ನಡ ಕಥಾಪ್ರಪಂಚಕ್ಕೆ ಒರಿದು. ಅದರ ಅಡಕ, ಕಲಾವಿಚಕ್ಷಣೆ, ಮಾನವಜೀವನದ ಆಳದಲ್ಲಿ ಕಾರ್ಯ ಮಾಡುವ ಪ್ರವೃತ್ತಿಗಳ ಅಂತರ್ದೃಷ್ಟಿ, ಆಗ್ಗೆ ಅಷ್ಟೇನೂ ಹಿಂದಿನಕಾಲದ್ದಲ್ಲದ ಮೈಸೂರಿನ ಗೃಹಜೀವನ, ಅದರ ರಾಗರಂಜನ, ಕಲ್ಲಿನ ಹಾಗಿದ್ದ ಒಂದು ಜೀವ ಹೇಗೆ ಮೃದುವಾಗಿ ತನ್ನ ಬಗೆಯ ಸಿದ್ಧಿಯನ್ನೂ ಪರಿಣಾಮ ರಮಣೀಯತೆಯನ್ನೂ ಪಡೆಯಿತು ಎಂಬ ಚಿತ್ರ ಸ್ವಲ್ಪ ಅವಕಾಶದಲ್ಲಿ ತುಂಬಿಕೊಂಡು ಅಲ್ಲಿ ರೂಪಗೊಂಡ ಹಾಗೆ ನಮ್ಮ ಕಡೆಯ ಇತರ ಯಾವ ಕಥೆಗಳಲ್ಲಿಯೂ ಆಗಿರಲಿಲ್ಲ.''
>
> *('ಪಂಪಾಯಾತ್ರೆ'ಯ ಮುನ್ನುಡಿ)*

ಕೆ.ಎಸ್. ನರಸಿಂಹಸ್ವಾಮಿಯವರ ಕವನಗಳನ್ನು ಮೆಚ್ಚಿಕೊಂಡವರಲ್ಲಿ ಮೊದಲಿಗರು ವಿ.ಸೀ. ಯಾವ ರೀತಿಯಲ್ಲಿ ತರುಣ ಕವಿಗೆ ಪ್ರೋತ್ಸಾಹವಿತ್ತರೆನ್ನುವುದನ್ನು ಅವರು ಬರೆದ ಪತ್ರವೊಂದರಿಂದ ತಿಳಿಯಬಹುದು :

> ''ಪ್ರೇಮದ - ಅದರ ವಿರಸದ ಚಿತ್ರಗಳು ನಿಮ್ಮ ಎಂದಿನ ಕೈವಾಡಕ್ಕೆ ಮಾತ್ರ ಸಾಧ್ಯವಾದವು. ಆ ನಯದ ಜಾಣತನದ ವಿಲಾಸ ಬೇರೊಬ್ಬರಿಗೆ ಬಾರದು. ಒಳ ಜೀವಾಳ ಧ್ವನಿಯ ಕತೆಗಳೂ ಹಾಗೆಯೇ. 'ಅಕ್ಕಿಯಾರಿಸುವಾಗ' ಪದ್ಯ ಚೆನ್ನಾಗಿದೆ. ಮೊದಲೆರಡು ಸಾಲಿನ ಸಿರಿತನದ ಕೊರೆ ಮುಂದಿನ ಭಾಗಗಳ ಸಂಪತ್ತಿನಲ್ಲಿ ತೇಲಿ ಮಾಯವಾಗುತ್ತದೆ. ಬಳೆ, ಬೆರಳು, ಹರಳು, ಮರುಳು ಮಾಡುತ್ತವೆ. ಜಲ್ಲೆನ್ನುವುದು ಓದುವವರ ಎದೆ. ಇಷ್ಟು ಅಲ್ಪಾವಕಾಶದಲ್ಲಿ ಈ ಮೋಹನವನ್ನು ಇನ್ನಾರು ಕವಿಸಿ ಸೆರೆ ಹಿಡಿದಾರು? ಪದ್ಯದ ಕುಂದಣ, ಅಚ್ಚುಕಟ್ಟು ನಿಮ್ಮವೆ.''

ಇಂಥ ಕಾಗದವನ್ನು ಓದಿ ಉತ್ಸಾಹಗೊಳ್ಳದ ತರುಣ ಕವಿ ಉಂಟೇ?

ನರಸಿಂಹಸ್ವಾಮಿಯವರಂಥ ಹುಟ್ಟು ಕವಿಗೆ ಸ್ಫೂರ್ತಿಯನ್ನು ನೀಡಿ, ಅವರ ವೈಚಾರಿಕತೆಯನ್ನು ಬೆಳೆಸಿ, ಅದು ಸಾರ್ಥಕವಾದುದನ್ನು ಕಂಡು ಧನ್ಯರಾದವರು ವಿ.ಸೀ. 'ಅವರಂಥ ಹಿರಿಯರು ನನ್ನ ಬದುಕಿಗೆ ಆಸರೆಯಂತಿದ್ದರು. ಅವರ ಪ್ರೌಢವಾದ ಸಲಹೆ ವಿಮರ್ಶೆಗಳಿಗೆ ನನ್ನ ಕವಿತೆಗಳು ಋಣಿಯಾಗಿವೆ' ಎಂದು ತಮ್ಮ ಕೃತಜ್ಞತೆಯನ್ನು ಪಂಪಪ್ರಶಸ್ತಿ ಪಡೆದ ಸಂದರ್ಭದಲ್ಲಿ ನರಸಿಂಹಸ್ವಾಮಿಯವರು ಸೂಚಿಸಿದ್ದಾರೆ.

ವಿ.ಸೀ. ಯವರ ಬಗೆಗೆ ನರಸಿಂಹಸ್ವಾಮಿಯವರಿಗೆ ಅಪಾರ ಗೌರವವಿತ್ತು. ಅವರನ್ನು 'ಸಹೃದಯಿ, ಗುರು, ಮಾರ್ಗದರ್ಶಕ' ಎಂದು ಸ್ಮರಿಸಿಕೊಂಡಿದ್ದಾರೆ. ವಿದ್ಯಾರ್ಥಿಯಾದವನು ಕಾಲೇಜಿನ ಆವರಣದಲ್ಲಿ ಏನೆಲ್ಲ ವಿದ್ಯೆ ಕಲಿಯಬಹುದಾ

ಗಿತ್ತೋ ಅದೆಲ್ಲವನ್ನೂ ವಿ.ಸೀ. ನನಗೆ ಸಂಜೆಯ ವಿಹಾರ ಸಮಯದಲ್ಲಿ ಹೇಳಿ ಕೊಡುತ್ತಿದ್ದರು. Modern Literature ಬಗ್ಗೆ ನನಗೇನಾದರೂ ಗೊತ್ತಿದ್ದರೆ ಅದಕ್ಕೆ ವಿ.ಸೀ. ಅವರೇ ಕಾರಣ. ಅವರಂತಹ ಗುರು ಅಪರೂಪ. ಜಗತ್ತಿನ ಸಾಹಿತ್ಯದ ಸೊಬಗನ್ನು ಅವರು ಪ್ರೀತಿಯಿಂದ ನನಗೆ ಉಣಬಡಿಸಿದರು; ನಾನು ಶ್ರೀಮಂತ ನಾದೆ '' ಎಂದಿದ್ದಾರೆ. 'ಪ್ರಥಮ ರಾಜನಿಗೆ', 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ', 'ರೈಲ್ವೆ ನಿರ್ಮಾಣದಲ್ಲಿ' - ಅವರಿಗೆ ತುಂಬ ಪ್ರಿಯವಾದ ಕವಿತೆಗಳು. ಆ ಮೂರನ್ನೂ ವಿ.ಸೀ. ಅನುವಾದ ಮಾಡಿದ್ದರಂತೆ. 'ರೈಲ್ವೆ ನಿರ್ಮಾಣದಲ್ಲಿ' ಅನುವಾದ ಮಾಡುವಾಗ "What a hell' ಮಾತೇ ಇಲ್ಲ, ಏನು ಅನುವಾದ ಮಾಡೋದು' ಎಂದಿದ್ದರಂತೆ. (ನರಹಳ್ಳಿ ಬಾಲಸುಬ್ರಹ್ಮಣ್ಯ, ೧೯೯೦, ಪು. ೪೬-೪೭)

'ಬರೀ ಗಂಡ ಹೆಂಡತಿ ವಿಚಾರಾನೇ ಎಷ್ಟು ದಿವಸಾಂತ ಬರ್ಕೊಂಡಿರ್ತೀರಿ, ಅದರಿಂದಾಚೆಗೂ ಯೋಚನೆ ಮಾಡಿ' ಎಂದು ನರಸಿಂಹಸ್ವಾಮಿಯವರನ್ನು ಎಚ್ಚರಿಸಿದರಂತೆ ವಿ.ಸೀ. 'ಅವರು ಎಂದೂ ನನ್ನ ಬರವಣಿಗೆಯ ಮೇಲೆ ಒತ್ತಾಯ ಹೇರಲಿಲ್ಲ. ...ಹೊಸ ಹೊಸ ಮಾದರಿಗಳನ್ನು ಕೊಡೋರು, ಅವರ ಮಾತಿನಲ್ಲಿ ನನಗೆ ಅಪಾರ ನಂಬಿಕೆ ಇತ್ತು'' ಎಂದಿದ್ದಾರೆ ನರಸಿಂಹಸ್ವಾಮಿ (ಅದೇ ಪು. ೫೦)

ಡಿ.ವಿ.ಜಿ.ಯವರನ್ನು ಅವರ ಜನಸೇವೆಗಾಗಿ ಅಲ್ಲದೆ ಅದಕ್ಕೂ ಹೆಚ್ಚಿನ ಸಾಹಿತ್ಯಸೇವೆಗಾಗಿ ಬಹುವಾಗಿ ಮೆಚ್ಚಿಕೊಂಡವರು ವಿ.ಸೀ. ಅವರ ಸಾಹಿತ್ಯದೃಷ್ಟಿ ಕವಿತಾಮೌಲ್ಯವನ್ನು ಗುರುತಿಸುತ್ತ ಹೇಳಿರುವ ಮಾತುಗಳಿವು :

> ''ಸಾಹಿತ್ಯ ಬರಿಯ ವಿನೋದ, ವಿಲಾಸ ಮಾತ್ರ ಅಲ್ಲ; ಉತ್ತಮ ಜೀವನಕ್ಕೆ ಸಾಧನ, ಒಂದು ಉಪಯುಕ್ತಿ; ಉತ್ತೇಜಕ ಉತ್ಪಾದಕ ಶಕ್ತಿ; ಒಳಬದುಕಿನ ಮಹಾವಾಣಿ, ಅದರ ಪ್ರವಾದಿ – ಎಂಬ ಮಾತು ಗುಂಡಪ್ಪನವರಿಗೆ ಹೆಚ್ಚು ಪ್ರಿಯ. ಅದು ಚಿಗುರು, ಹೂವೇ ಅಲ್ಲ, ಹಣ್ಣೂ ಬಿತ್ತೂ ಹೌದು; ಸವಿಮಾತ್ರವೇ ಅಲ್ಲ, ಷಡ್ರಸ; ನವರಸಗಳ ರಂಗ. ಅದೊಂದು ಶಕ್ತಿ. ಇಷ್ಟೇ ಅಲ್ಲ; ಒಂದು ಸೌಭಾಗ್ಯದ ಸಿದ್ಧಿ, ಜೀವನ ಪರಿಪಾಕಕ್ಕೂ ಬಹುಮುಖ ಸಿದ್ಧಿಗೂ ಅಗತ್ಯವಾದ್ದು. ಉತ್ತಮ ಸಂಸ್ಕಾರದ ಪ್ರತಿಫಲನ ಅದು – ಎಂಬುದು ಅವರ ನಂಬಿಕೆ. ಅಲ್ಪರಂಜನೆಯಿಂದ ಅವರಿಗೆ ತೃಪ್ತಿಯಿಲ್ಲ. ಯಾವ ಯೋಚನೆ, ಮಾತು, ಕ್ರಿಯೆ, ಜೀವನದ ಸಂತೋಷವನ್ನು ಮೆರಸುವುವೊ, ಹೃದ್‌ಭಾವ, ಚಿದ್‌ಭಾವ, ಆನಂದಭಾವಗಳನ್ನು ಬಲಿಸಿ, ಸರಸಜೀವನಕ್ಕೆ ಪೋಷಣೆಕೊಡುವುವೊ ಆ ಎಲ್ಲದರ ನಿರ್ಮಾಣ, ಪ್ರಚಾರ, ಭೋಗ, ವಿಮರ್ಶೆಗಳ ಕಡೆಗೂ ಅವರ ಒಲವು ಹೆಚ್ಚು. ಅವರ ಕವಿತೆಯಲ್ಲಿ ಎಂದೇ ಆಗಲಿ ಶ್ರದ್ಧೆ, ಅರ್ಥಪುಷ್ಟಿ. ಬುದ್ಧಿಯ ವಿಲಾಸ ಪ್ರಧಾನ. ಅವರ ಕೃತಿಬಂಧ ಬಿಗಿ; ಬಳಸುವ ಮಾತು ಆರಿಸಿದ್ದು. ಬೇಕೆನ್ನಿ

ಸಿದಾಗ ತಿಳಿಯಾಗಿ ಸುಲಭವಾಗಿ ಬರೆಯಬಲ್ಲರಾದರೂ ಪ್ರೌಢಿ, ಖಚಿತತೆ, ಬಂಧಗೌರವಗಳದೇ ಅವರಲ್ಲಿ ಪ್ರಾಬಲ್ಯ..''

('ಕವಿಕಾವ್ಯದೃಷ್ಟಿ', ಪು. ೧೩೧)

ಹೀಗೆ ಕೆಲವೇ ಆರಿಸಿದ ವಾಕ್ಯಗಳಲ್ಲಿ ಡಿ.ವಿ.ಜಿ.ಯವರ ಕಾವ್ಯದ ಒಟ್ಟು ಸ್ವರೂಪದ ಪರಿಚಯಮಾಡಿಕೊಡುತ್ತಾರೆ. ದೇವಮಂದಿರಗಳಲ್ಲಿ ಸೌಂದರ್ಯ ಮುದ್ರಿಕೆಯರಾದ ಶಿಲಾಬಾಲಿಕೆಯರ ಸ್ಥಾನವೇನು ಎನ್ನುವುದನ್ನು ವಿಶ್ಲೇಷಿಸುತ್ತ ವಿ.ಸೀ. ಹೇಳುತ್ತಾರೆ :

''ಆನಂದ, ಪ್ರೇಮ, ಜೀವನಾಧಾರತೆ ಇವಲ್ಲವೆ ದೇವರ ಲಕ್ಷಣಗಳು? ಇವುಗಳಿಗೆ ಕಾರಣವಾದ ಕಲಾಕೃತಿಗಳಿಂದ ಸೊಗಸು ಹಾಯುತ್ತದೆ. ಬಾಳ ದಾರಿ ಸುಗಮವಾಗುತ್ತದೆ. ಅದೇ ದೇವರಿಗೆ ನಿಮ್ಮಂಥ ಚೆಲ್ವು ಕೃತಿಗಳು ಸಲ್ಲಿಸುವ ಸೇವೆ, ಬಾಳಲ್ಲಿ ನಿಮ್ಮ ಕಾರ್ಯ ....ವಿಶ್ವತಂತ್ರ ರಹಸ್ಯ ಬೋಧನದ ಉತ್ಸಾಹವಿದು. ವಿಶ್ವಶಿಲ್ಪಿಯ ಸಭೆಯಲ್ಲಿ ಉಚಿತವೇ ಸರಿ. ಇದರಿಂದ ಲೋಕಹರುಷ ಬೆಳೆಯಲಿ. ಜನರಲ್ಲಿ ಸೌಹಾರ್ದ ಆರ್ದ್ರತೆ ಹರಡಲಿ. ..... ಕುದಿವ ಲೋಕಕ್ಕೆ ನೀವು ಮುದದ ತಣಿವನ್ನು ಬೀರಿ, ಜನದ ಮತಿವಿಕಾರ ಅಳಿಯಲಿ, ಸರಸತೆ ಲೋಕಕ್ಕೆ ಊಡಿ ಬರಲಿ ಎಂಬುದು ಆಶಯ.''

(ಅದೇ, ಪು.೧೩೧)

೫೩ ಮುದ್ದು ಹೆಸರುಗಳನ್ನಿಟ್ಟು ಈ ಶಿಲ್ಪಚತುರೆಯರನ್ನು ಕರೆದು ವರ್ಣಿಸಿ ಅವರು ಒಬ್ಬೊಬ್ಬರಿಗೂ ಒಂದೊಂದು ಹಾಡು ಹಾಡಿ ದೇವನಿಗೆ ಅವರ ನಿವೇದನೆಯನ್ನು ಅರುಹುತ್ತಾರೆ.

''ಕೇಳಿ, ನೋಡಿ, ಅನುಭವಿಸಿ. ಏನು ಕೋಲಾಹಲ! ಕೇಶವರಂಜನಾತುರವಾದ ಈ ಚೆಲುವಿನ ಸಂಭ್ರಮ!..... ಈ ಸರಸ ಸಂರಂಭ ಸತತವಾಗಿ ನಡೆದಿದೆ. ತನ್ನ ಕಣ್ಣಿಗೆ ಕಂಡಂತೆ, ಉಳಿಯಲ್ಲಿ ರೂಪುಗೊಂಡಂತೆ, ಕಾಣಿಸಿದ ಶಿಲ್ಪಿಗೂ ಮಾಡಿಸಿದ ಅರಸನಿಗೂ ಅವರು ಕಂಡಂತೆ ನಮಗೂ ನಾಳೆಯವರಿಗೂ ಕುಂದದ ಆನಂದವಾಗಿ ಚಿರನವ್ಯವಾಗಿ, ಅಮರ ಸಂಕೇತವಾಗಿ ಈ ಕಲಾಮಂಡಲ, ಈ ದಿವ್ಯಾನುಭವ ನಿಂತಿದೆ. ಅಲ್ಲಿ ಅಡಗಿರುವುದು ದೇವೋಪಾಸನ ದೀಕ್ಷೆಯೆನ್ನಿ, ಲಾವಣ್ಯಾರ್ಥವಿಕಾಸವೆನ್ನಿ; ಸಂತುಷ್ಟ ಜೀವೋತ್ಸವವೆನ್ನಿ ; ಧರಾಸ್ವರ್ಗೈಕ ಸಂಸಿದ್ಧಿಯೆನ್ನಿ – ಇದು ಕಲೆಯ ಪರಿಷತ್ತು. ಚೆಲುವಿನ ಔತಣ.''

(ಅದೇ, ಪು. ೧೩೩)

ವಿ.ಸೀ.ಯವರು 'ಬೇಲೂರು ಶಿಲಾಬಾಲಿಕೆ'ಯರಲ್ಲಿನ ಕಲಾ ಸೌಂದರ್ಯವನ್ನು ಯುವಕರಾದ ನಮಗೆ ವಿವರಿಸಿ ಅರುವತ್ತೈದು ವರ್ಷಗಳಿಗೂ ಹೆಚ್ಚಿನ ಕಾಲ ಉರುಳಿಹೋಗಿದೆ. ಅಂದಿನ ರಸಾನುಭವವನ್ನು ಇಂದು ಮತ್ತೆ

ಅನುಭವಿಸುತ್ತಿದ್ದೇವೆ. ಸಹೃದಯ ವಿಮರ್ಶಕನಾದವನು ಈ ರೀತಿಯಲ್ಲಲ್ಲವೆ ಕಾವ್ಯಸೌಂದರ್ಯವನ್ನು ಹೊರತರಬೇಕು ? ವಿ.ಸೀ. ಉತ್ತಮ ಕವಿಗಳು ಮಾತ್ರ ವಲ್ಲ ; ಅದಕ್ಕೂ ಹೆಚ್ಚಿನ ವಿಮರ್ಶಕರಾಗಿ, ಕವಿಕಾವ್ಯ ಪರಿಚಯ ಮಾಡಿಕೊಡುವವರ ಪಂಕ್ತಿಯಲ್ಲಿ ಉನ್ನತಸ್ಥಾನ ಪಡೆದು ವಿರಾಜಮಾನರಾಗಿ ಉಳಿದಿದ್ದಾರೆ.

ಕೆ.ವಿ. ಪುಟ್ಟಪ್ಪನವರ ಕವಿತಾಶಕ್ತಿಯ ಮೇಲೆ ತುಂಬ ಅಭಿಮಾನ ಬೆಳಸಿಕೊಂಡವರು ವಿ.ಸೀ. ಪುಟ್ಟಪ್ಪನವರು ತಮ್ಮನ್ನು ದಾಟಿ ಮೇಲೇರಿ ಹೋದವರೆಂದು ಅವರ ವಿಷಯವಾಗಿ ಮನಸ್ಸನ್ನು ಕಹಿಮಾಡಿಕೊಂಡವರಲ್ಲ , ಮಾತ್ಸರ್ಯದಿಂದ ಸಂಕಟಪಟ್ಟವರಲ್ಲ. ಎಷ್ಟು ಸಹಜವಾಗಿ, ಸರಳವಾಗಿ, ನಿಷ್ಕಪಟ ಮನೋಭಾವದಿಂದ ತಮ್ಮ ಮೆಚ್ಚಿಕೆಯನ್ನು ಸೂಚಿಸಿದ್ದಾರೆನ್ನುವುದಕ್ಕೆ ಕೆಳಗೆ ಕಾಣಿಸಿರುವ ಪತ್ರಗಳು ಸಾಕ್ಷಿ. ಈ ಪತ್ರಗಳನ್ನು ಪುಟ್ಟಪ್ಪನವರೇ ತಮ್ಮ 'ನೆನಪಿನ ದೋಣಿ' ಯಲ್ಲಿ ಉದ್ಧರಿಸಿದ್ದಾರೆ.

> "I have always been delighted with the original freshness of your poems and the daring gallop of your numbers. They have the heartfelt touch with the earth and like beautiful real flowers grow out of it.
>
> ..... Yours are the only poems which are cheerful and bright where wealth of poetic imagery and illumination rises hand in hand with .... living zest for things.
>
> ..... Believe me, it is the opinion of many of us that yours is the finest strain of original poetry we have had in recent years and you are destined to be perhaps the most considerable poet of our times. There is nothing in modern Kannada to equal it in daring, richness and exuberance - variety, God's plenty."

ಷೇಕ್ಸ್‌ಪಿಯರನ 'Tempest' ನಿಂದ ಪ್ರಭಾವಿತರಾಗಿ 'ಬಿರುಗಾಳಿ' ಎಂಬ ಹೆಸರಿನಲ್ಲಿ ಅದನ್ನು ಅನುವಾದಿಸಿ ಪುಟ್ಟಪ್ಪನವರು ಪ್ರಕಟಿಸಿದಾಗ ವಿ.ಸೀ. ಬರೆಯುತ್ತಾರೆ :

> "Kannada-knowing people ought to be really grateful to you for the sustained pleasure you are supplying them through your poems, plays and sketches. I am particularly grateful to the beautiful lyrics contained in 'ಬಿರುಗಾಳಿ'. The same cheer, the same grace and music, the same deftness and lightness of touch feature in the original and the translation. I see Ariel in them. And I make bold to confess that only KVP is capable of such a rendering. I heartily congratulate you on it."

ಪ್ರಾಯಶಃ ಇನ್ನು ಯಾವ ಸಮಕಾಲೀನ ಕವಿಯೂ ಪುಟ್ಟಪ್ಪನವರನ್ನು ಹೀಗೆ ಮುಕ್ತಕಂಠದಿಂದ ಹೊಗಳಿರಲಾರರು.

ಪರಗುಣಶೀಕರಮುದಧಿಂ ಕೃತ್ವಾ ತತ್ರೈವ ಖೇಲದ್ಭ್ಯಃ
ಅಚ್ಛಾತ - ಮತ್ಸರೇಭ್ಯಃ ತೇಭ್ಯಃ ಸದ್ಭ್ಯೋ ನಮೋಽಸ್ತು ವಿದ್ವದ್ಭ್ಯಃ

(ಅಸೂಯೆಯನ್ನರಿಯದ ವಿದ್ವಾಂಸರು ಅವರು; ಇತರರ ಗುಣದ
ಒಂದು ಹನಿಯನ್ನು ಒಂದು ಸಮುದ್ರವನ್ನಾಗಿ ಮಾಡಿ ಅದರಲ್ಲಿ
ಓಲಾಡುವ ಸಜ್ಜನರು ಅವರು; ಅವರಿಗೆ ನಮಸ್ಕಾರ.)

ವಿ.ಸೀ. ಇಂಥ ಅಸೂಯೆಯನ್ನರಿಯದ ವಿಮರ್ಶಕ ವಿದ್ವಾಂಸರು. ಅವರನ್ನು ನೆನಪಿಗೆ ತಂದುಕೊಂಡು ನಮಸ್ಕರಿಸೋಣ.

* * * *

೧೯೫೧ರಲ್ಲಿ ಪ್ರಕಟವಾದ 'ಮಹಾಭಾರತದ ಐವರು ಮಾನ್ಯರು' ಎನ್ನುವುದು ವಿ.ಸೀ. ಯವರ ಇನ್ನೊಂದು ಕೃತಿ. ವ್ಯಾಸಮಹಾಭಾರತದ ಪ್ರಮುಖ ವ್ಯಕ್ತಿಗಳಾದ ನಳ-ದಮಯಂತಿ, ಸಾವಿತ್ರಿ, ರುರು-ಪ್ರಮದ್ವರೆ, ಸುಕನ್ಯೆ-ಚ್ಯವನ ಮುಂತಾದ ಪುರಾಣವ್ಯಕ್ತಿಗಳ ಕಥೆಯನ್ನು ಆರಿಸಿಕೊಂಡು, ಆ ಪ್ರಾಮಾಣಿಕರಾದ ವ್ಯಕ್ತಿಗಳು ಎಂಥ ಕಷ್ಟಕಾಲದಲ್ಲಿಯೂ ಹೇಗೆ ನಡೆದುಕೊಂಡರೆನ್ನುವುದನ್ನು ಎತ್ತಿ ತೋರಿಸುವುದೇ ಇಲ್ಲಿನ ಉದ್ದೇಶ. ಹಳೆಯ ಕಥೆಗಳಲ್ಲಿ ಹೊಸ ದರ್ಶನವನ್ನು ಕಾಣಿಸಲು ವಿ.ಸೀ. ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಪುಸ್ತಕದುದ್ದಕ್ಕೂ ಜೀವಕಳೆಯಿಂದ ತುಂಬಿತುಳುಕುವ ವಾಕ್ಯ ಸಮುದಾಯಗಳು ದೊರೆಯುತ್ತವೆ. ''ಯುವ ಜನಾಂಗದ ಶೀಲಸಂವರ್ಧನೆಗೆ, ಆರೋಗ್ಯಕರ ಮಾನಸಿಕ ಬೆಳವಣಿಗೆಗೆ ಇಂಥ ದಾಂಪತ್ಯಚಿತ್ರಗಳ ವಿವೇಚನೆಯ ಬೆಳಕು ಅಮೃತಸತ್ತ್ವವಾಗಬಲ್ಲವು; ಎಂದಿಗೂ'' ಎನ್ನುತ್ತಾರೆ ವೆಂಕಟೇಶಮೂರ್ತಿಯವರು. (ಸುಮನಾ, ೧೯೮೫, ಪು. ೯೧)

ಮಹನೀಯರು (೧೯೭೦)

ಗುಂಡ್ಮಿ ರಾಮಕೃಷ್ಣ ಐತಾಳರು ವಿ.ಸೀ. ಯವರ ಬಗೆಗೆ ವಿಶೇಷ ಅಭಿಮಾನ ತಾಳಿದವರು. ವಿ.ಸೀ. ಯವರ ಪುಸ್ತಕ ಒಂದನ್ನಾದರೂ ಪ್ರಕಟಿಸಬೇಕೆಂಬ ಆಸೆ ಇತ್ತಂತೆ ಅವರಿಗೆ. ಅವರ ಆಸೆಯನ್ನು ಪೂರೈಸುವ ಸಲುವಾಗಿ ತಾವು ಬೇರೆ ಬೇರೆ ಸಮಯಗಳಲ್ಲಿ ಬರೆದಿದ್ದ ಹಲವಾರು ವ್ಯಕ್ತಿಗಳ ವ್ಯಕ್ತಿಚಿತ್ರಗಳನ್ನು, ಅವುಗಳ ಜೊತೆಗೆ ಹೊಸವು ಕೆಲವನ್ನು ಸೇರಿಸಿ, ಪ್ರಕಟನೆಗಾಗಿ ಐತಾಳರ ಕಡೆಗೆ ವಿ.ಸೀ. ಕಳುಹಿಸಿಕೊಟ್ಟರು. ಈ ಸಂಕಲನವೇ 'ಮಹನೀಯರು' ಎಂಬ ಶೀರ್ಷಿಕೆಯಲ್ಲಿ ೧೯೭೦ರಲ್ಲಿ ಪ್ರಕಟವಾಯಿತು. ಈ ಬಗೆಯ ವ್ಯಕ್ತಿಚಿತ್ರಗಳ ಸಂಕಲನ ಆಗ್ಗೆ ತೀರ

ಹೊಸದು. ಡಿ.ವಿ.ಜಿ.ಯವರೇನೊ ತಮ್ಮ 'ಜ್ಞಾಪಕಚಿತ್ರಶಾಲೆ'ಯಲ್ಲಿ ಅನೇಕ ಬಗೆಯ ವ್ಯಕ್ತಿಗಳ ಪರಿಚಯ ಮಾಡಿಕೊಟ್ಟಿದ್ದರು, ನಿಜ. ಆದರೆ ಅವು ಸುದೀರ್ಘವಾದ ವ್ಯಕ್ತಿಚಿತ್ರಣಗಳಲ್ಲ. ಕೆಲವು ಸ್ವಾರಸ್ಯಕರ ಸನ್ನಿವೇಶಗಳನ್ನು ಮಾತ್ರ ತಮ್ಮ ನೆನಪಿನ ಬೊಕ್ಕಸದಿಂದ ಆಯ್ದು ಆ ವ್ಯಕ್ತಿಗಳು ನಮ್ಮ ಕಣ್ಣಮುಂದೆ ನಿಲ್ಲುವಂತೆ ಡಿ.ವಿ.ಜಿ. ಮಾಡಿದರು. ವಿ.ಸೀ.ಯವರ ವ್ಯಕ್ತಿಚಿತ್ರಣಗಳಾದರೋ ಬೇರೆಯೇ ರೀತಿಯವು. ಅವರಿಗೆ ಸನ್ನಿವೇಶಗಳು ಮುಖ್ಯವಾಗಿರಲಿಲ್ಲ. ತಾವು ಮೆಚ್ಚಿಕೊಂಡ ಮಹನೀಯರಲ್ಲಿ ಏನೇನು ಗುಣಗಳಿದ್ದವು? ಅವರ ಸಜ್ಜನಿಕೆ ಎಂಥದು? ಅವರ ಬದುಕಿನ ರೀತಿ ನೀತಿಗಳು ಎಂಥವು?- ಇವುಗಳ ಕಡೆಗೇ ಅವರ ಹೆಚ್ಚಿನ ಗಮನ ವಿತ್ತು. ಜೀವನದ ವಿವರಗಳಿಗಿಂತ ಹೆಚ್ಚಾಗಿ ಆ ವ್ಯಕ್ತಿಗಳ ಸ್ವಭಾವವೆಂಥಾದ್ದು, ತಮ್ಮ ಜೊತೆಯವರೊಡನೆ ಅವರು ಯಾವ ರೀತಿ ನಡೆದುಕೊಂಡರು, ಯಾವ ರೀತಿ ಬದುಕಿದರು, ತಮ್ಮ ಸುತ್ತಲವರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡರು ಎನ್ನುವುದರ ಚಿತ್ರಣವೇ ಅವರ ಮುಖ್ಯ ಗುರಿಯಾಗಿತ್ತು. 'ಮಹನೀಯರು' ಎಂಬ ಸಂಕಲನ ಬಿಡುಗಡೆಯಾದ ಎಂಟು ವರ್ಷಗಳ ನಂತರ ಇನ್ನೂ ದೀರ್ಘವಾದ, ಹಲವಾರು ವ್ಯಕ್ತಿಗಳ ಚಿತ್ರ 'ಹಿರಿಯರು ಗೆಳೆಯರು' ಸಂಕಲನ ಹೊರಬಿತ್ತು. ಈ ಎರಡು ಪುಸ್ತಕಗಳೂ ವಿ.ಸೀ. ಸಂಪದದವರ ಸಾಹಸದಿಂದ 'ವ್ಯಕ್ತಿಚಿತ್ರಸಂಪುಟ' ಎಂದು ಎರಡು ಭಾಗಗಳಲ್ಲಿ ಈಚೆಗೆ ಹೊರಬಿದ್ದಿವೆ. ಅಮೂಲ್ಯವಾದ ಈ ಬರಹಗಳು ಎಲ್ಲರಿಗೂ ಈಗ ಸುಲಭವಾಗಿ ದೊರೆಯುವಂತಾಗಿದೆ.

ತಾವು ಮೆಚ್ಚಿಕೊಂಡ ಮಹನೀಯರನ್ನು ಮಾತ್ರ ಚಿತ್ರಣಕ್ಕೆ ಆರಿಸಿಕೊಂಡರು ವಿ.ಸೀ. ಸಾಲಿಗ್ರಾಮ ರಾಮಚಂದ್ರರಾಯರು ಹೇಳುವಂತೆ ತಮಗೆ ಆಗದವರನ್ನು ಎತ್ತಿಕೊಂಡು ಅವರ ಮೇಲೆ ಅಪವಾದಗಳ ಹೊರೆ ಹೊರಿಸಿ, ಬರಹದಲ್ಲಿ ಶೂಲಕ್ಕೇರಿಸುವ ಗೊಡವೆಗೆ ಹೋಗಲಿಲ್ಲ. ರಾಯರು ಹೇಳಿರುವ ಮತ್ತೊಂದು ಮಾತನ್ನು ಇಲ್ಲಿ ಸ್ಮರಿಸಬೇಕು :

> ''ವಿ.ಸೀ. ಅವರು ವ್ಯಕ್ತಿಚಿತ್ರಣವನ್ನು ಕೈಗೊಂಡದ್ದು ನಾಡಿನ ಚರಿತ್ರಕಾರರಿಗೆ ಸಾಮಗ್ರಿಯನ್ನು ಒದಗಿಸಲೆಂದಲ್ಲ, ಇದ್ದು ಹೋದವರ ದಾಖಲೆಯನ್ನು ನಮೂದಿಸಲೆಂದಲ್ಲ, ಓದುಗರ ಮನೋರಂಜನೆಗಲ್ಲ. ಆದರೆ ತಾವು ತಮ್ಮ ಬದುಕಿನಲ್ಲಿ ಶ್ರೇಷ್ಠವೆಂದೂ, ಅಗತ್ಯವೆಂದೂ ಕಂಡುಕೊಂಡ ಮೌಲ್ಯಗಳು ಕೇವಲ ಕಲ್ಪನೆಯ ಕೂಸುಗಳಲ್ಲ, ಪ್ರಯೋಗಕ್ಕೆ ಬರಲಾರವೆಂಬಂಥವಲ್ಲ, ಯಾವುದೋ ಒಬೀರಾಯನ ಕಾಲದಲ್ಲಿ ಪುರಾಣಪುರುಷರ ಬದುಕಿನಲ್ಲಿದ್ದುವು ಅಷ್ಟೆ ಎನ್ನುವಂತಿಲ್ಲ ಎಂಬುದನ್ನು ಮನಗಾಣಿಸಲು ಇಲ್ಲಿ ವಿ.ಸೀ. ಹೊರಟವರು. ಇದೇ ಮೌಲ್ಯಗಳ ಮೂರ್ತ ಪ್ರತಿನಿಧಿಗಳು ಇಲ್ಲಿ ಎಣೆಕೆಗೆ ಬಂದಿರುವ ಮಹನೀಯರು.
>
> *(ವ್ಯಕ್ತಿಚಿತ್ರ ಸಂಪುಟ, ಭಾಗ ೧, ಪು. xxvii)*

ವ್ಯಕ್ತಿಚಿತ್ರಣ ಕಾರ್ಯದಲ್ಲಿ ವಿ. ಸೀ. ಬಳಸಿರುವ ವಿಧಾನ ಮೆಚ್ಚತಕ್ಕಂಥದ್ದು. ಅದರಲ್ಲಿ 'ರಂಧ್ರಾನ್ವೇಷಣೆಯಿಲ್ಲ, ಕುಚೋದ್ಯವಿಲ್ಲ, ವ್ಯಂಗ್ಯವಿಲ್ಲ. ಅವರ ಲೇಖನಿ ಕತ್ತಿಯಲ್ಲ; ಕುಸುಮ. ಅವರ ಮಾತು ಚುಚ್ಚುವುದಿಲ್ಲ, ಮೆಚ್ಚುಗೆಯದು. ಅವರು ವಿದ್ವಾಂಸರಾದರೂ ದೋಷದೃಷ್ಟಿಪರರಲ್ಲ, ಸಹೃದಯರು.' ಈ ಮಾತುಗಳನ್ನು ವಿ.ಸೀ.ಯವರ ಎಲ್ಲ ಬರಹಕ್ಕೂ ಧಾರಾಳವಾಗಿ ಅನ್ವಯಿಸಬಹುದು. 'ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್, ನ ಬ್ರೂಯಾತ್ ಸತ್ಯಮ್ ಅಪ್ರಿಯಮ್' ಈ ದಾರಿಯನ್ನು ಅನುಸರಿಸಬೇಕಲ್ಲವೆ ಎಲ್ಲ ವಿಮರ್ಶಕರು ? ವಿ.ಸೀ. ಈ ವಿಧಾನವನ್ನು ಮೆಚ್ಚಿಕೊಂಡು ಅದಕ್ಕೆ ಅನುಸಾರವಾಗಿ ನಡೆದುಕೊಂಡರು. ತತ್ಫಲವಾಗಿ ಅವರು ಚಿತ್ರಿಸಿರುವ ವ್ಯಕ್ತಿಗಳೆಲ್ಲರೂ ನಮಗೆ ಪ್ರಿಯರಾಗುತ್ತಾರೆ, ಜೀವಕಳೆಯಿಂದ ತುಂಬಿಕೊಂಡು ನಮ್ಮ ಎದುರು ನಿಲ್ಲುತ್ತಾರೆ.

ಮಹರ್ಷಿಪ್ರಾಯರಾದ ತಮ್ಮ ಗುರುಗಳು ಎಂ. ಹಿರಿಯಣ್ಣನವರ ವಿಷಯವಾಗಿ ವಿ.ಸೀ. ಬರೆದಿರುವ ಮಾತುಗಳು ಮರೆಯಲಾಗದ್ದು. ತಮ್ಮ ಗುರುಗಳು ಬದುಕಿದ ರೀತಿಯನ್ನು, ಆ ಜೀವದ ಲಕ್ಷಣವನ್ನು ನೆನಪಿಗೆ ತಂದುಕೊಂಡು ಹೇಳುತ್ತಾರೆ :

> ''ನಾನಿಲ್ಲಿದ್ದೇನೆ ನೋಡಿ ಎಂದು ಇತರರ ಕಣ್ಣಿಗೆ ಬೀಳಿಸಿಕೊಳ್ಳುವ ಜೀವವಲ್ಲ. ತಾನು ಇದ್ದಕಡೆ ಇದ್ದು ಬೆಳೆದು ಮಾಡಬೇಕಾದುದನ್ನು ಮಾಡಿ ಕಣ್ಮರೆಯಾಯಿತು.''

ಈ ಕೆಲವೇ ಮಾತುಗಳಲ್ಲಿ ಪೂಜ್ಯ ಹಿರಿಯಣ್ಣನವರು ಬಾಳಿದ ಬಗೆಯನ್ನು ನಮ್ಮ ಕಣ್ಣಮುಂದೆ ನಿಲ್ಲಿಸುತ್ತಾರೆ. ಮೂರುಹೊತ್ತೂ ತಮ್ಮ ಹೆಚ್ಚುಗಾರಿಕೆಯನ್ನೆ ಮುಂದುಮಾಡುತ್ತ ಬೊಬ್ಬೆಹೊಡೆಯುತ್ತ ಕಾಲಕಳೆಯುವ ಆಧುನಿಕ ಮುಖಂಡರ ನಡವಳಿಕೆಯನ್ನು ಕಂಡವರಿಗೆ, ನಮ್ಮ ಹಿರಿಯರು ಅನುಸರಿಸಿದ ಮಾರ್ಗ ಎಷ್ಟು ಘನತೆಯಿಂದ ಕೂಡಿದ್ದು ಎನ್ನುವುದರ ಅರಿವಾಗುತ್ತದೆ. ವ್ಯಕ್ತಿಚಿತ್ರಣ ಮೂಡಿಸುವಾಗ ವಿ.ಸೀ. ಹೀಗೆ ಉತ್ತಮ ಆದರ್ಶಗಳು ಯಾವುವು ಎನ್ನುವುದರ ಕಡೆಗೆ ನಮ್ಮ ಗಮನ ಹರಿಸಿ ಅಂಥ ಆದರ್ಶಗಳ ಮಾಲೆಯನ್ನೇ ವ್ಯಕ್ತಿಚಿತ್ರ ಸಂಪುಟದಲ್ಲಿ ನಮ್ಮ ಮುಂದಿರಿಸಿದ್ದಾರೆ.

ಇಲ್ಲಿ ಚಿತ್ರಿಸಿರುವ ವ್ಯಕ್ತಿಗಳಲ್ಲಿ ಮಾನವ ಸಂಸ್ಕೃತಿಯೇ ಸಂಗ್ರಹವಾಗಿರುವುದನ್ನು ಕಂಡರು ವಿ.ಸೀ. 'ಅವರ ಪ್ರೀತಿ, ಕೆಳೆಯಲ್ಲಿನ ಸವಿ, ಅನುಭವದ ಆಳವಿಸ್ತಾರ, ಎಲ್ಲಕ್ಕೂ ತೆರೆದ ಮನಸ್ಸು, ಸರ್ವವನ್ನೂ ಭಗವದ್ವಿಲಾಸವೆಂದು ಒಪ್ಪಿಕೊಳ್ಳುವ ರೀತಿ' - ಇವೆಲ್ಲವನ್ನೂ ತುಂಬ ಮೆಚ್ಚಿಕೊಂಡು, ತಮಗುಂಟಾದ ಸಂತೋಷವನ್ನು ಅನುಪಮವಾದ ಗದ್ಯಶೈಲಿಯಲ್ಲಿ ನಿರೂಪಿಸಿ ಕೃತಾರ್ಥರಾಗಿದ್ದಾರೆ.

ಹಿರಿಯರು ಗೆಳೆಯರು (೧೯೮೦)

೧೯೮೦ರಲ್ಲಿ ಪ್ರಕಟವಾದ 'ಹಿರಿಯರು ಗೆಳೆಯರು' ವಿ.ಸೀ.ಯವರ ಕೊನೆಯ ಸಂಕಲನ. ಇದರಲ್ಲಿ ಮುವ್ವತ್ತನಾಲ್ಕು ವ್ಯಕ್ತಿಗಳ ಜೀವನವನ್ನು ಅವ

ಬೇಂದ್ರೆಯವರೊಡನೆ

ಲೋಕಿಸಿದ್ದಾರೆ. 'ನನ್ನ ಬದುಕಿಗೆ ಸಂತೋಷವನ್ನು ಗುಣಗರಿಮೆಯನ್ನು ತಂದ, ಕಾಣಿಸಿದ, ಆ ಮೂಲಕ ನನ್ನ ಜೀವದ ಸಂಸ್ಕಾರಕ್ಕೆ ನೆರವಾದವರ ಚಿತ್ರಗಳು' ಇವು ಎಂದು ವಿ.ಸೀ. ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಇಲ್ಲಿ ಆಯ್ಕೆಯಾಗಿರುವ ವ್ಯಕ್ತಿಗಳೆಲ್ಲರೂ ಪ್ರಖ್ಯಾತರಲ್ಲ. 'ಎಲ್ಲರೂ ಒಂದು ಬಗೆಯವರೂ ಅಲ್ಲ - ಸಾಹಿತಿಗಳು ಮಾತ್ರವೇ ಅಲ್ಲ. ಕೆಲವರಂತೂ ಹಗಲು-ರಾತ್ರಿ ನನ್ನ ಜೊತೆಗೆ ಇದ್ದವರು, ನಾನಾ ಬಗೆಯಲ್ಲಿ ನನಗೆ ನೆರವುಕೊಟ್ಟು ನನ್ನ ಬದುಕಿಗೆ ಹತ್ತಿರದಲ್ಲಿ ನಿಂತು ನಡೆದವರು, ನುಡಿದವರು. ಇದು ಒಂದು ಬಗೆಯ ಪ್ರೀತಿಯ ಕಾಣಿಕೆ' ಎಂದಿದ್ದಾರೆ.

ಕನ್ನಡದ ಹಿರಿಯರೊಂದಿಗೆ (೧೯೨೮), ವಿ.ಸೀ. ಕುಳಿತಿರುವವರಲ್ಲಿ ಬಲದಿಂದ ಎರಡನೆಯವರು,
ಕುಳಿತಿರುವವರಲ್ಲಿ ಎಡದಿಂದ ಎರಡನೆಯವರು ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ, ಇತರರು : ಮಾಸ್ತಿ ವೆಂಕಟೇಶ ಅಯ್ಯಂಗಾರ್,
ಪಂಜೆ ಮಂಗೇಶರಾಯರು, ಪ್ರೊ.ಟಿ.ಎಸ್. ವೆಂಕಣ್ಣಯ್ಯ, ಎಂ.ಆರ್. ಶ್ರೀನಿವಾಸಮೂರ್ತಿ, ನಿಟ್ಟೂರು ಶ್ರೀನಿವಾಸರಾವ್

ಈ ಬಗೆಯ ವ್ಯಕ್ತಿಚಿತ್ರಗಳು ನಮ್ಮಲ್ಲಿ ತೀರ ಅಪರೂಪ. ಜೀವಂತ ವ್ಯಕ್ತಿಗಳ ವಿಷಯವಾಗಿ ಏನನ್ನಾದರೂ ಬರೆದರೆ ಅವರು ತಪ್ಪು ತಿಳಿದುಕೊಂಡಾರೋ ಏನೋ ಎನ್ನುವ ಸಂದೇಹ ಚಿತ್ರಣ ಕೆಲಸಕ್ಕೆ ಮುಂದುವರಿದ ಕೈಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡುತ್ತದೆ. ಈ ಕಾರಣದಿಂದ ಮರೆಯಲಾಗದ, ಮರೆಯಲೇಬಾರದ ಎಷ್ಟೋ ಹಿರಿಯ ವ್ಯಕ್ತಿಗಳ ಜೀವನಚಿತ್ರ ನಮಗೆ ದೊರೆಯದೆ ಹೋಗುವ ಸಂಭವವೇ ಹೆಚ್ಚು. 'ಹಿರಿಯರು ಗೆಳೆಯರ'ಲ್ಲಿ ಹಲವರ ಚಿತ್ರಗಳಾದರೂ ನಮಗೆ ದೊರೆಯುವಂತಾಯಿತಲ್ಲ ಎಂದು ನಾವು ಸಮಾಧಾನಪಟ್ಟುಕೊಳ್ಳಬೇಕಾಗಿದೆ. ಇಷ್ಟೊಂದು ಮಂದಿ ತುಂಬುಹೃದಯ ಸಂಪನ್ನರ ವ್ಯಕ್ತಿಚಿತ್ರಗಳು ಒಂದು ಕಡೆ ಅಡಕವಾಗಿ ಬೇರೆಲ್ಲಿಯೂ ದೊರೆಯುವುದಿಲ್ಲ. ಈ ವ್ಯಕ್ತಿಚಿತ್ರ ಸಂಪುಟ ವಿ.ಸೀ.ಯವರ ಗುಣಗ್ರಾಹಕಶಕ್ತಿಗೆ, ಓಜಸ್ಸಿನ ಗದ್ಯಶೈಲಿಗೆ ಅತ್ಯುತ್ತಮ ನಿದರ್ಶನವಾಗಿ ನಿಲ್ಲುತ್ತದೆ.

ಈ ಸಂಕಲನದಲ್ಲಿ ಸೇರದೆ ಹೋಗಿರುವ, ವಿ.ಸೀ.ಯವರ ಜೀವನದ ಮೇಲೆ ಪ್ರಭಾವ ಬೀರಿದ ಇನ್ನೂ ಹಲವಾರು ಮಂದಿ ಇದ್ದಾರೆ. ಮುಖ್ಯವಾಗಿ ಶ್ರೀರಂಗ, ರಾಶಿ, ರಾಜರತ್ನಂ, ಗೋಕಾಕ್, ಇನಾಂದಾರ್, ನರಸಿಂಹಸ್ವಾಮಿ, ಪಿ. ವಿ. ಜೋಶಿ, ರಾಮಕೃಷ್ಣ ಐತಾಳ ಮುಂತಾದವರನ್ನು ಹೆಸರಿಸಬಹುದು. ಇವರುಗಳೆಲ್ಲರ ವಿಷಯವಾಗಿಯೂ ಕೂಡ ವಿ.ಸೀ. ಬರೆಯಬೇಕೆಂದಿದ್ದರಂತೆ. ಹಿಂದೆ ಬರೆದ ಚಿತ್ರಗಳೇ ಬೆಳಕು ಕಾಣದೆ ಅಜ್ಞಾತವಾಸ ಮಾಡಬೇಕಾದ ಸ್ಥಿತಿಯನ್ನು ಕಂಡು ಬೇಸರಗೊಂಡು ಬರೆಯಲು ಮುಂದಾಗಲಿಲ್ಲವೊ ಏನೊ. ಕೊನೆಕೊನೆಯಲ್ಲಂತೂ ಅನಾರೋಗ್ಯವೇ ಕಾರಣವಾಗಿ ವ್ಯಕ್ತಿಚಿತ್ರಣ ಕಾರ್ಯ ನಿಂತೇ ಹೋಯಿತು. ನಷ್ಟ ನಮ್ಮದು.

ವಿ.ಸೀ.ಯವರು ತಮ್ಮದೇ ಆದ ಆತ್ಮಕಥನವನ್ನು ರಚಿಸಲು ತೊಡಗಲಿಲ್ಲ. ಆದರೆ ಅವರ ವಿಪುಲವಾದ ವ್ಯಕ್ತಿಚಿತ್ರಣ ಕೃಷಿ ಕ್ಷೇತ್ರದಲ್ಲಿ, ತಮ್ಮ ಜೀವನದ ಮೇಲೆ ಗಮನಕ್ಕೆ ಬಾರದಂತೆಯೇ ಕಾರ್ಯಭಾರ ಮಾಡಿ, ಪ್ರಭಾವ ಬೀರಿ, ಉಸಿರು ತುಂಬಿ, 'ನನ್ನನ್ನು ನಾನಾಗಿ ಮಾಡಿದ' ವ್ಯಕ್ತಿಗಳಿಗೆ ವಂದನೆ ಸಲ್ಲಿಸುವ ವ್ಯಾಜದಲ್ಲಿ, ತಮ್ಮ ಒಲವು ಯಾವ ಕಡೆಗೆ, ಪಕ್ಷಪಾತ ಎಂಥವರಲ್ಲಿ ಎನ್ನುವುದು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿಯಾದರೂ ಎದ್ದು ಕಾಣುತ್ತದೆ. ವಿ.ಸೀ.ಯವರ ಹೃದಯಶ್ರೀಮಂತಿಕೆ ತಿಳಿಯಬೇಕಾದವರೆಲ್ಲರೂ ವ್ಯಕ್ತಿಚಿತ್ರ ಸಂಪುಟವನ್ನು ಓದಲೇಬೇಕು. ಇಪ್ಪತ್ತನೇ ಶತಮಾನದ ಕನ್ನಡದ ಬೆಳವಣಿಗೆಯ ಪಕ್ಷಿನೋಟ ಇಲ್ಲಿ ದೊರೆಯುತ್ತದೆ.

'ಮಹಾಕವಿ ಪಂಪ' (೧೯೭೫)

ನ್ಯಾಷನಲ್ ಬುಕ್ ಟ್ರಸ್ಟಿನ ಕಾರ್ಯದರ್ಶಿಗಳಾಗಿದ್ದ ಮಂಜೇರಿ ಈಶ್ವರನ್ ಪಂಪಕವಿಯ ವಿಷಯವಾಗಿ ಇಂಗ್ಲಿಷ್‌ನಲ್ಲಿ ಪುಸ್ತಕ ಬರೆದುಕೊಡುವಂತೆ ವಿ.ಸೀ.

ಯವರನ್ನು ಕೇಳಿಕೊಂಡರಂತೆ. ಅದರಂತೆ ಅವರು ಬರೆದುಕೊಟ್ಟರು. ಪುಸ್ತಕ ೧೯೬೬ ರಲ್ಲಿ ಪ್ರಕಟವಾಯಿತು. ಕನ್ನಡದ ಅನುವಾದವನ್ನೂ ಪ್ರಕಟಿಸುತ್ತೇವೆಂದು ಒಪ್ಪಿಕೊಂಡಿದ್ದ ಟ್ರಸ್ಟಿನವರು ಅದೇಕೋ ಪ್ರಕಟಿಸಲು ಮುಂದೆ ಬಾರದೆ ಜಾರಿಕೊಂಡರಂತೆ. ಸಿದ್ಧಪಡಿಸಿದ ಪುಸ್ತಕ ಜನರ ಕೈಗೆ ದೊರಕದೆ ಹೋಯಿತಲ್ಲ ಎನ್ನುವ ಕೊರಗು ಉಳಿಯಿತು. 'ಬರೆದ ಪುಸ್ತಕ ಹೊರಗೆ ಬಾರದಿದ್ದರೆ ತಾಯಿ ಹೊಟ್ಟೆಯಲ್ಲಿಯೇ ಮಗು ವರ್ಷಗಟ್ಟಲೆ ಕುಳಿತಂತೆ ಆಗುತ್ತದೆ. ಆ ಕಷ್ಟವನ್ನು ತಾಯಿ ಬಲ್ಲಳು' ಎಂದಿದ್ದಾರೆ ವಿ. ಸೀ. ಕನ್ನಡ ಅಧ್ಯಯನ ಸಂಸ್ಥೆಯ ಹಾ. ಮಾ. ನಾಯಕರು ಪ್ರಕಟಿಸಲು ಒಪ್ಪಿದ್ದರಿಂದ ಮಹಾಕವಿ ಪಂಪನ ಮೇಲಿನ ಈ ಉತ್ತಮ ವಿಮರ್ಶಾಕೃತಿ ೧೯೭೫ ರಲ್ಲಿ ಹೊರಬರಲು ಸಾಧ್ಯವಾಯಿತು.

ಪಂಪನ ಕಾವ್ಯರಚನಾಶಕ್ತಿ ಎಷ್ಟು ಅದ್ಭುತವಾದದ್ದು ಎನ್ನುವುದನ್ನು ತಿಳಿಯುವುದಕ್ಕೆ ಈ ವಿಮರ್ಶನಗ್ರಂಥ ಹೆಚ್ಚು ಸಹಕಾರಿಯಾಗಿದೆ. ಆ ಶಕ್ತಿ ಎಷ್ಟು ಅಮೋಘವಾದದ್ದು ಎನ್ನುವುದನ್ನು ವಿ. ಸೀ. ಯವರ ಮಾತಿನಲ್ಲೇ ಕೇಳಬೇಕು :

> ''ಒಂದು ಮಾತಿನ ಎರಕ ಒಂದು ಪದ್ಯದ ಕೆಲಸವನ್ನು ಮಾಡುತ್ತದೆ; ಒಂದು ಪದ್ಯ ಒಂದು ಒಟ್ಟು ಪ್ರಸಂಗವನ್ನು ಚಿತ್ರಿಸಿ ಮುಗಿಯುತ್ತದೆ. ಪಂಪನ ಕಾವ್ಯರಚನೆ ಅಷ್ಟು ಅಡಕ; ಅಷ್ಟು ಕಾರ್ಯಕಾರಿ. ಅವನ ಭಾಷೆ ನಿಶಿತವಾದ ಆಯುಧ. ಮಾತುಗಳನ್ನೂ, ನುಡಿಗಟ್ಟುಗಳನ್ನೂ ಲಯಗಾನವನ್ನೂ ಹೊಮ್ಮಿಸುವುದರಲ್ಲಿ ಅವನ ಪದರಚನಾಶಕ್ತಿ ಎಷ್ಟು ಅದ್ಭುತವೆಂಬುದನ್ನು ತೋರಿಸುತ್ತದೆ. ಅಗತ್ಯಕ್ಕೆ ತಕ್ಕಂತೆ ಅದು ಹೇಗೆ ಹೊಂದಿಕೊಳ್ಳುತ್ತದೆ ಎಂಬುದು ಗೊತ್ತಾಗುತ್ತದೆ. ಹಾಗೆಯೇ ಅವನ ಭಾಷಾ ಸಂಪತ್ತಿ; ಹೇಗೆಂದರೆ ಹಾಗೆ ಅರ್ಥವತ್ತಾಗಬಲ್ಲ ಭಾಷಾಪ್ರೌಢಿಮೆಯಲ್ಲಿ ತಾನೇ ತಾನು. ಕನ್ನಡ ಭಾಷೆ ಇಷ್ಟು ಹೆಚ್ಚು ಶಕ್ತಿಯಿಂದ ಇನ್ನಾರಿಂದಲೂ ಪ್ರಯುಕ್ತವಾಗಿಲ್ಲ.''
>
> (*'ಸಾಹಿತ್ಯಾಲೋಕನ' ಪು. ೨೭೦*)

ಪದ್ಯರಚನೆಗೆ ತಾನು ಏಕೆ ಕೈಯಿಟ್ಟ, ಏನು ಫಲವನ್ನು ಬಯಸಿದ ಎಂದು ವಿವರಿಸುವ ಪಂಪನ ವಿಶೇಷ ಪದ್ಯ ನಾವು ಎಂದೆಂದಿಗೂ ಮರೆಯಲಾಗದಂಥಾದ್ದು.

ಕವಿತೆಯೊಳಾಸೆಗೆಯ್ವ ಫಲಮಾವುದೋ
ಪೂಜೆ ನೆಗಳ್ತೆ ಲಾಭಮ್ ಎಂಬಿವೆ ವಲಮ್;
ಇಂದ್ರಪೂಜೆ,
ಭುವನಸ್ತುತಮೆನಿಪ್ಪ ನೆಗಳ್ತೆ,
ಮುಕ್ತಿಸಂಭವಿಸುವ ಲಾಭಮ್ - ಎಂಬಿವೆ
ಜಿನೇಂದ್ರ ಗುಣಸ್ತುತಿಯಿಂದೆ ತಮಗೆ ತಾಮೆ ಸಾರವೆ ?
ಪೆರರೀವುದೇಂ? ಪೆರರ್ ಮಾಡುವುದೇಂ ?
ಪೆರರಿಂದಮಪ್ಪುದೇಂ?

ಆದಿಪುರಾಣ

ಜೈನಪುರಾಣಗಳಲ್ಲೆಲ್ಲ ಪರಮೋತ್ತಮವಾದ ಕೃತಿ ಪಂಪನ ಆದಿಪುರಾಣ. 'ಮಾನವ ಯೋಗ್ಯತೆಯನ್ನು ಒಂದು ಬದುಕು ಹೇಗೆ ರೂಪಿಸಿ ಉತ್ಥಾನತೆಯನ್ನು ಪಡೆಯುತ್ತದೆ' ಎನ್ನುವುದರ ನಿದರ್ಶನ ಇಲ್ಲಿ ದೊರೆಯುತ್ತದೆ. ''ಇಲ್ಲಿನ ವಿಷಯ ತುಂಬಾ ಸಂಪನ್ನವಾದುದು; ಅಸಾಧಾರಣವಾದುದು; ಪ್ರತಿ ಮಜಲಲ್ಲಿಯೂ ಚಿತ್ತಾಪಹಾರಕವಾದ ತುಂಬು ಸೌಂದರ್ಯವೂ, ಶಕ್ತಿಯೂ ಬೆಳಗುವ ಸನ್ನಿವೇಶಗಳಿಂದ ಮಜಲು ಮಜಲಾಗಿ ಕಥೆ ಕಟ್ಟಿ ನಿಲ್ಲುತ್ತದೆ.'' ಈ ಕೃತಿ ಜೈನ ಮತದ ಒಂದು ಕೈಪೊತ್ತಿಗೆ ಮಾತ್ರವಲ್ಲ. ಅದು 'ಒಬ್ಬ ಮಹಾಪುರುಷನ ಜೀವನ ಧರ್ಮದಲ್ಲಿ ತೊಡಗಿ, ವಿಸ್ತಾರಗೊಂಡು ಅದರ ಉನ್ನತಿಯ ಶಿಖರಕ್ಕೆ ಹೇಗೆ ಸಲ್ಲುತ್ತದೆ ಎಂಬುದರ ಜೀವಂತ ಪ್ರತಿಪಾದನೆ' ಎನ್ನುತ್ತಾರೆ ವಿ.ಸೀ. ('ಮಹಾಕವಿ ಪಂಪ', ಪು. ೪೦)

ಭರತ ಬಾಹುಬಲಿಗಳ ನಡುವೆ ಉಂಟಾಗುವ ಸ್ಪರ್ಧೆ, ಅಣ್ಣತಮ್ಮಂದಿರು ಯಾವ ರೀತಿ ನಡೆದುಕೊಂಡರು ಎನ್ನುವುದನ್ನು ಪಂಪ ತನ್ನ ಆದಿಪುರಾಣದಲ್ಲಿ ವಿಸ್ತರಿಸುವ ರೀತಿ 'ಕನ್ನಡ ಕಾವ್ಯಪ್ರಪಂಚದಲ್ಲಿ ಶಿಖರಪ್ರಾಯವಾದ ಪ್ರಸಂಗ'. ಆದಿಪುರಾಣದ ಧಾರ್ಮಿಕ ಪ್ರಕರಣಗಳು ತಮ್ಮ ತಮ್ಮ ವಿಶಿಷ್ಟ ಸಮಯಗಳಲ್ಲಿ ಹಿರಿಯವಾಗಿದ್ದರೆ ಈ ಪ್ರಸಂಗ ತುಂಬು ಹೊಮ್ಮಿಗೆಯಲ್ಲಿರುವ ವೀರದ ಸಮಸ್ತ ಅಂಶಗಳನ್ನೂ ಮುಡಿಗೆ ಮುಟ್ಟಿಸುತ್ತದೆ. ಚಾರಿತ್ರ್ಯ, ಗೌರವ, ಮಾನವಗುಣದ ಮೂಲಭೂತ ಗರಿಮೆ – ಇವು ಜನತ್ವಸಿದ್ಧಿಯ ಈಚೆಯ ಮಟ್ಟಗಳಲ್ಲಿ ಯಾವ ಪರಮೋನ್ನತಿಗೆ ವಿಳುತ್ತವೆ ಎಂಬುದರ ನಿಲವಾಗುತ್ತದೆ' ಎಂದಿದ್ದಾರೆ. ಅಷ್ಟೇ ಅಲ್ಲ, ಇದು 'ರಸಭಾವಗಳಿಂದ ಕೂಡಿದ ಧರ್ಮಾಮೃತ' - ಇದರಲ್ಲಿ 'ಧಾರ್ಮಿಕ ಜನಜನಿತ ಆನಂದ ಸಂದೋಹ ವಿದ್ಯಾರಸವಿದೆ' - 'ಸರಸ್ವತಿಯ ವಾಗ್ಭೂಮಿದೆ' ಇದರ ಮೇಲೆ ಅಚ್ಚೊತ್ತಿದೆ. ಆದಿತೀರ್ಥಂಕರೇಶ್ವರನ ಚರಿತ 'ವಾಕ್ಕಮಾಣಿಕ್ಯ ಕೋಶ' — ಹೀಗೆ ಬಹುಬಗೆಯಲ್ಲಿ ಈ ಕೃತಿಯ ಹೆಚ್ಚುಗಾರಿಕೆಯನ್ನು ಕೊಂಡಾಡಿದ್ದಾರೆ ವಿ.ಸೀ.

ಪಂಪಭಾರತ

ಪಂಪನ ಕೃತಿಗಳು ನಮಗೆ ದೊರೆತಿರುವುದು ಎರಡೇ ಎರಡು - ಒಂದು ಆದಿಪುರಾಣ, ಇನ್ನೊಂದು ಭಾರತ.

ಧೃತರಾಷ್ಟ್ರ, ವಿದುರ, ದುರ್ಯೋಧನ - ಈ ಮೂರು ವ್ಯಕ್ತಿಗಳ ಮೂಲ ಸ್ವಭಾವ - ಎಲ್ಲರಿಗೂ ಮುಂಚೆ ಕುಂತಿಯ ಮಗನಾಗಿ ಹುಟ್ಟಿದ ದುರದೃಷ್ಟಶಾಲಿ ಕರ್ಣನ ಕತೆ - ಮಾದ್ರಿ ಪಾಂಡು ಪ್ರಸಂಗ - ರಾಜಸೂಯ ಯಾಗದ ಸಮಯದಲ್ಲಿ ಶಿಶುಪಾಲನ ಮೊದಲೆ - ಅಲ್ಲಿಂದೀಚೆಗೆ ದ್ಯೂತಕ್ಕೂ, ಪೀನಾಯಕ್ಕೂ, ಕತೆಗೆ ಮುಖ್ಯ ಯುದ್ಧಗಳಿಗೆ ಕಾರಣವಾದ ಘಟನಾ ಪರಂಪರೆಗಳು -

ಸಭೆಯಲ್ಲಿ ದ್ರೌಪದಿಗೆ ಆದ ಅಪಮಾನ - ಪಾಂಡವರ ವನವಾಸ - ಅರ್ಜುನನ ತಪಶ್ಚರ್ಯೆ - ದ್ರುಪದ ರಾಜ್ಯದಲ್ಲಿನ ಒಂದು ವರ್ಷಕಾಲದ ಅಜ್ಞಾತವಾಸ - ಕೀಚಕ ಪ್ರಸಂಗ - ಕೃಷ್ಣನ ದೂತಕಾರ್ಯ - ಕರ್ಣಕುಂತಿಯರ ನಡುವಿನ ಮಾತು - ಯುದ್ಧ ರಂಗದ ವಿವರ - ಕರ್ಣಾರ್ಜುನರ ಕಾಳಗ - ಕರ್ಣಾವಸಾನ - ಈ ಎಲ್ಲ ಪ್ರಸಂಗಗಳಲ್ಲೂ ಪಂಪನ ನಿರೂಪಣೆಯ ಸ್ವಾರಸ್ಯವೇನು ಎನ್ನುವುದನ್ನು ವಿ.ಸೀ. ಪರಿಚಯಮಾಡಿಕೊಟ್ಟಿದ್ದಾರೆ.

ಕವಿವಾಣಿಯಲ್ಲಿನ ಶಕ್ತಿ, ಅಲ್ಲಿನ ಓಜಸ್ಸು ಎಂಥದು ?

> ''ಕವಿತೆಯನ್ನು ಮೂಲ ಮಾತುಗಳಲ್ಲಿಯೇ ಓದಬೇಕು, ಕೇಳಬೇಕು; ಇನ್ನೊಂದು ಅದಕ್ಕೆ ಸಾಟಿಯಿಲ್ಲ. ಇಲ್ಲಿನ ನುಡಿಗಟ್ಟು ತುಂಬ ಅಡಕವಾದುದು; ಖಚಿತವಾದುದು. ಜನರ ಬಳಕೆಯ ಮಾತಿನ ಅರ್ಥವಂತಿಕೆ, ಜಿಗಟು, ಅಷ್ಟು ಅಪ್ತವಾದ ಜೀವಂತ ಪ್ರಯೋಗ ಇದೆ. ಮಾತುಗಳೂ ಪದ್ಯಗಳೂ ಕಿಡಿಯನ್ನೂ ಬೆಂಕಿಯನ್ನೂ ಕಾರುತ್ತವೆ. ಗುಡುಗಿನ ಮೊಳಗುಗಳಂತೆ ಕೇಳುತ್ತವೆ. ಭಯಗೊಳಿಸುವಂತೆ, ಅಪಾಯಕರವಾಗಿ ಎಂಬಂತೆ ಸಿಡಿಲು ಸಿಡಿಯುತ್ತದೆ.''
>
> *('ಪಂಪ ಮಹಾಕವಿ', ಪು. ೧೭೧-೧೭೨)*

> ''ಸತ್ವ, ಶಕ್ತಿ, ಚಾರಿತ್ರ್ಯ, ಸನ್ನಿವೇಶಗಳಲ್ಲಿ ಬೆಳಗಿ ಅವನ್ನು ಪ್ರಕಾಶಗೊಳಿಸುವ ಯೋಗ್ಯತೆ ದರ್ಶನ ವಿಶಾಲತೆಗಳಲ್ಲಿ ಇಲ್ಲಿ ನಮಗೆ ದೊರಕುವುದು ಚೊಕ್ಕ ಬಂಗಾರ; ಸೀಸದ ಗಟ್ಟಿಯಲ್ಲ. ಅದನ್ನೂ ಜೀವಂತವಾದ ಮಹಾಕೃತಿಯಾಗಿ ತನ್ನ ಕುಶಲಕರ್ಮದಲ್ಲಿ ಕವಿ ಮಾಡಿತೋರಿಸುತ್ತಾನೆ. ಇದನ್ನು ಸಾಧಿಸುವ ಕಾವ್ಯಶಕ್ತಿ ಕನ್ನಡದಲ್ಲಿ ಇನ್ನು ಯಾವ ಇತರ ಕೃತಿಯಲ್ಲಿಯೂ ಸಮಗಣನೆ ಪಡೆಯಲಾರದು. ಅಂತಹ ಒಳಬೆಳಗನ್ನು ಬಳಸಿಕೊಳ್ಳಲೆಳಸಿ ಇತರರು ಅವನಿಂದ ದೊರೆತಿರುವ ಉಪಕಾರ ಎಷ್ಟು ಎಂದು ಮಾತ್ರ ಕಾಣಿಸಿಯಾರು.''
>
> *(ಅದೇ, ಪು. ೧೮೯-೧೯೦)*

ಪಂಪ ತನ್ನ ಭಾರತದಲ್ಲಿ ಎಂಟು ಮಂದಿ ವೀರರನ್ನು ಆರಿಸಿಕೊಂಡು, ಇವರಿಂದ ಭಾರತ ಲೋಕಪೂಜ್ಯವಾಯಿತು ಎಂದಿದ್ದಾನೆ.

ಚಲದೊಳ್ ದುರ್ಯೋಧನಂ,
ನನ್ನಿಯೊಳ್ ಇನತನಯಂ,
ಗಂಡಿನೊಳ್ ಭೀಮಸೇನಂ,
ಬಲದೊಳ್ ಮದ್ರೇಶನ್
ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ,
ಚಾಪವಿದ್ಯಾಬಲದೊಳ್ ಕುಂಭೋದ್ಭವಂ,
ಸಾಹಸದ ಮಹಿಮೆಯೊಳ್ ಫಲ್ಗುಣಂ,
ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲ್,
ಇವರ್ಗಳಿನ್ ಈ ಭಾರತಂ ಲೋಕಪೂಜ್ಯಂ

ಏಂಟು

ಈ ಏಳುಮಂದಿಯನ್ನು ಮಾತ್ರ ಪಂಪ ಏಕೆ ಆರಿಸಿಕೊಂಡ ಎಂಬ ಕೌತುಕವಾದ ಅಂಶವನ್ನು ತಮ್ಮ ವಿಮರ್ಶದರ್ಶನದ ಕೊನೆಯ ಭಾಗದಲ್ಲಿ ವಿ.ಸೀ. ವಿಚಾರಕ್ಕೆ ಒಳಪಡಿಸಿದ್ದಾರೆ. ಇದು ಈ ವಿಮರ್ಶನಗ್ರಂಥದಲ್ಲಿ ಸಾರವತ್ತಾದ ಭಾಗ. ದುರ್ಯೋಧನನ ವಿಷಯವಾಗಿ ಹೇಳುತ್ತ 'ನುಡಿದುದನೆಯ್ದೆ ತುತ್ತ ತುದಿಯೆಯ್ವುವಿನಂ ನುಡಿದಂ ವಲಂ ಚಲಂ' - 'ಈ ನಿಷ್ಠುರ ನಿಶ್ಚಲತೆ ವೀರಪ್ರಮಾಣದಲ್ಲಿ ನಿಂತು ಮಹಾಕಾವ್ಯದ ಉನ್ನತ ಸ್ಥಾನಕ್ಕೆ ಅವನನ್ನು ಏರಿಸುವ ಹಿರಿಮೆ ಉಳ್ಳದ್ದಾಗುತ್ತದೆ. ಆದುದರಿಂದಲೇ ಕವಿಯ ಪ್ರಶಂಸೆ' ಎನ್ನುತ್ತಾರೆ.

'ತನಗಾಗಲಿ ಇತರರಿಗಾಗಲಿ ಫಲಪರಿಣಾಮ ಏನೇ ಬರಲಿ ಕೊಟ್ಟ ಮಾತನ್ನು ಮುರಿದವನಲ್ಲ' ಕರ್ಣ. ಅವನ ಈ ಉದಾರತೆ ಸಾಧಾರಣಮಟ್ಟದಿಂದ ಅವನನ್ನು ಬಹುಮೇಲಕ್ಕೆ ಎತ್ತುತ್ತದೆ.

ಕವಿ ಆರಿಸಿಕೊಂಡಿರುವ ಮೂರನೆಯ ಪಾತ್ರ ಭೀಮ. 'ಗಂಡು' ಅವನ ಲಕ್ಷಣ. 'ಪಾಂಡವರ ಕಡೆ ಗಂಡಸರಲ್ಲಿ ಅವನು, ಹೆಂಗಸರಲ್ಲಿ ದ್ರೌಪದಿ. ಇವರಿಬ್ಬರೂ ಸಾಧಾರಣ ಮಾನವವರ್ಗದ ಅತ್ಯುಚ್ಚ ಮಾದರಿಗಳು' ಎನ್ನುತ್ತಾರೆ. ಅಣ್ಣನ ಮರ್ಯಾದೆಯನ್ನು ಕಾಪಾಡುತ್ತ, ಆತನಿಗೆ ಒಳಪಟ್ಟು ನಡೆಯುವ ಮನಸ್ಸು ಅವನ ಶೀಲದಲ್ಲಿ ಗಮನಿಸಬೇಕಾದ ಲಕ್ಷಣ. ಅಷ್ಟೇ ಅಲ್ಲದೆ 'ಕೌರವ ಪಾಂಡವರ ಕೋಟಲೆಗಳಲ್ಲಿ, ಪಟ್ಟ ಕ್ಲೇಶಗಳಲ್ಲಿ ಬಹುಭಾಗ ಅವನದು; ದ್ರೌಪದಿಯದು.'

ಪಂಪನ ಮಹಾಪುರುಷರ ಪಟ್ಟಿಗೆ ಶಲ್ಯ ಸೇರಿರುವುದು ಸೋಜಿಗ. ಭೀಷ್ಮ ಮಹೋನ್ನತಿಗೆ ನಿಲ್ಲುವ ಚಾರಿತ್ರ್ಯವುಳ್ಳವನು ಎನ್ನುವುದರಲ್ಲಿ ಸಂದೇಹವಿಲ್ಲ. ಚಾಪವಿದ್ಯಾಪರಿಣತಿಯಲ್ಲಿ ಪರಾಕಾಷ್ಠೆ ಪಡೆದವನು ದ್ರೋಣ. ಮಹಾಭಾರತದ ಯುದ್ಧರಂಗಕ್ಕೆ ಪಾತ್ರಗಳನ್ನು ವ್ಯಕ್ತಿಗಳನ್ನು ತಯಾರು ಮಾಡಿದ ಸೂತ್ರಧಾರ ಅವನು. ಅದೇ ಅವನನ್ನು ಮಹನೀಯರ ವರ್ಗಕ್ಕೆ ಸೇರಿಸಿದ ಕಾರಣವಿರಬೇಕು.

ಅರ್ಜುನ ಪಂಪನ ಕತೆಯ ಕಥಾನಾಯಕ. ಎಂಥ ಸಂದರ್ಭ ಬಂದರೂ ಅವನ ಕೊರಳಿಗೆ ಹೂಮಾಲೆ ಹಾಕುವುದು ಪಂಪನಿಗೆ ಸಹಜ. ಬಾಳಲ್ಲೂ ನಡವಳಿಕೆಯಲ್ಲೂ ತನ್ನ ನಾಯಕನು ಆದರ್ಶ ಪುರುಷ. ಅವನಲ್ಲಿ ಆರೋಪಿಸಬಲ್ಲ ದೌರ್ಬಲ್ಯವೇ ಇಲ್ಲವೇನೋ ಎಂಬಂತೆ ಅವನ ಚಿತ್ರಣ.

ಹೆಸರಿಸಿದ ಲೋಕಪೂಜ್ಯರಲ್ಲಿ ಕೊನೆಯವನು ಧರ್ಮಪುತ್ರ. ನಿರ್ಮಲ ಚಿತ್ತ ಇವನು. ಇನ್ನೊಬ್ಬರಿಗೆ ಕೇಡು ಮಾಡುವವನಲ್ಲ. ಅಜಾತಶತ್ರು. ಭೀಷ್ಮ, ಧೃತರಾಷ್ಟ್ರರಿಗೆ, ಕೊನೆಗೆ ದುರ್ಯೋಧನನಿಗೂ ಅವನನ್ನು ಕಂಡರೆ ಗೌರವ. ಅವನಲ್ಲಿನ ಪಗಡೆಯಾಟದ ದೌರ್ಬಲ್ಯವೊಂದನ್ನು ಬಿಟ್ಟರೆ ಅವನು ಮಿಕ್ಕಂತೆ ಅತ್ಯಂತ ಸಹನಶೀಲನಾದ ವ್ಯಕ್ತಿ.

ಲೋಕಪೂಜ್ಯರನ್ನಾಗಿ ಮಾಡಿದ ಈ ಮಹಾನ್ ವ್ಯಕ್ತಿಗಳ ಪಂಕ್ತಿಯಲ್ಲಿ ಕೃಷ್ಣನ ಹೆಸರನ್ನು ಪಂಪ ಏಕೆ ಸೇರಿಸದೆಹೋದ? ಈ ವಿವಾದಾತ್ಮಕ ವಿಚಾರ

ವನ್ನು ವಿ.ಸೀ. ಎವರವಾಗಿ ವಿಶ್ಲೇಷಿಸಿದ್ದಾರೆ. ಭಾರತದ ಉದ್ದಕ್ಕೂ ಕೃಷ್ಣನ ನಡವಳಿಕೆಯಲ್ಲಿ 'ಯಾವುದೋ ಅತಿಮಾನುಷ ಅಂಶ'ವಿರುವುದನ್ನು ಮುಂದಿಟ್ಟು 'ಕೃಷ್ಣನ ಸ್ಥಾನ ಪ್ರತ್ಯೇಕ ವರ್ಗದ್ದು, ಭಾರತವನ್ನು ಲೋಕಪೂಜ್ಯವಾಗಿ ಮಾಡುವುದಕ್ಕೆ ಒದಗಿದ ನರರ ನಡುವೆ ಅವನನ್ನು ಸೇರಿಸಬೇಕಾಗಿರಲಿಲ್ಲ' ಎಂದೂ, 'ಅರ್ಜುನನ ಜಯಕ್ಕೆ ಕೃಷ್ಣನು ಕಾರಣ' ಎಂದೂ ಸೂಚಿಸುವುದಕ್ಕೆ ಪಂಪನಿಗೆ ಆಸಕ್ತಿ ಇದ್ದಿರಲಾರದು - ಎಂದು ಎರಡು ಕಾರಣಗಳನ್ನು ಕೊಟ್ಟಿದ್ದಾರೆ. ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಅಟ್ಟಕ್ಕೇರಿಸುವಲ್ಲಿ, ಕೃಷ್ಣನನ್ನು ಕಡೆಗಣಿಸಿ ಪಂಪ ಎಡವಿದ್ದಾನೆಂದು ಹೇಳದೆ ವಿಧಿಯಿಲ್ಲ. ಭಾಗವತ ಭಕ್ತನಾದ ಕುಮಾರವ್ಯಾಸ ತನ್ನ ಭಾರತಕಥನದಲ್ಲಿ ಕೃಷ್ಣನಿಗೆ ಎಂಥ ಅಗ್ರಸ್ಥಾನ ಕೊಟ್ಟು ಧನ್ಯತೆಯನ್ನು ಪಡೆದಿದ್ದಾನೆ ಎನ್ನುವುದನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬಹುದು.

ನಮ್ಮ ಹಿರಿಯ ಕವಿಗಳು ಸ್ತ್ರೀಪಾತ್ರಗಳನ್ನು ವರ್ಣಿಸುವುದರಲ್ಲಿ ತಳೆದ ಧೋರಣೆ ವಿ.ಸೀ.ಯವರ ಟೀಕೆಗೆ ಒಳಗಾಗುತ್ತದೆ. ಅವರು ಹೇಳುತ್ತಾರೆ :

> ''ಸ್ತ್ರೀವರ್ಣನೆಗಳಲ್ಲಿ ರಸಸೂಸುವ ವರ್ಣನೆಗಳಿರುತ್ತವೆ - ಇನ್ನೇನನ್ನೂ ಅವರ ವಿಷಯಗಳಲ್ಲಿ ಹೇಳಲಾಗುವುದಿಲ್ಲವೇನೋ ಎಂಬಷ್ಟು. ಎಂದಿಗೂ ಅಷ್ಟೇ - ಗಂಡಿನ ಆಸೆಗಳನ್ನು ತೀರಿಸುವುದಕ್ಕಾಗಿ ಮಾತ್ರ ಹುಟ್ಟಿ ಬದುಕಿದ್ದಾರೇನೋ ಎಂಬಷ್ಟು ರಂಜಕ ಆ ವರ್ಣನೆಗಳು. ಪ್ರತಿಯೊಂದು ಹೆಣ್ಣುಜೀವವೂ ತನ್ನದೇ ಆದ ಭಾವಪ್ರಪಂಚದ ನಡತೆ ಕಾಣಿಸುವ ಸ್ವತಂತ್ರ ಜೀವ, ಆಕಾಂಕ್ಷೆ ಉಳ್ಳ ವ್ಯಕ್ತಿಯಾಗುವಂತಿದ್ದರೆ ಚೆನ್ನಾಗುತ್ತಿತ್ತು.''
>
> *(ಅದೇ, ಪು. ೨೯೭)*

ಸ್ತ್ರೀಸ್ವಾತಂತ್ರ್ಯದ ಇಂದಿನ ದಿವಸಗಳಲ್ಲಿ ಈ ಟೀಕೆ ಎಷ್ಟು ಸಾಧುವಾದದ್ದು ಎನ್ನುವುದನ್ನು ಬೇರೆಯಾಗಿ ಒತ್ತಿ ಹೇಳಬೇಕಾಗಿಲ್ಲ.

ಇನ್ನು ಪಂಪನ ವಾಗ್ವಿಲಾಸ, ಕವಿತಾಶಕ್ತಿ ಎಷ್ಟು ವಿಸ್ಮಯಕರವಾದದ್ದು ಎನ್ನುವುದರ ಕಡೆ ಗಮನ ಹರಿಸಿರುವ ವಿ.ಸೀ.ಯವರ ಮಾತುಗಳಿಂದ ಮಹಾಕವಿ ಪಂಪನ ಮೇಲಿನ ಪರಿಚಯವನ್ನು ಮುಗಿಸಬಹುದು.

> ''ಒಂದು ಬಗೆಯ ಬರವಣಿಗೆಗೆ ಪಂಪನದು ಮೇಲ್ಪಂಕ್ತಿಯಾಯಿತು. ಅಡಕವಾಗಿ, ಸಂಗ್ರಹವಾಗಿ ಆದರೂ ಪೂರ್ಣಾಭಿವ್ಯಂಜಕವಾಗಿ ಅದು ಶಕ್ತವಾಗಿತ್ತು. ಎಂಥ ಅಗತ್ಯವನ್ನೂ ಪೂರ್ತಿ ಸಾಧಿಸುವಷ್ಟು ಚೆನ್ನಾಗಿ ಕೃತಕಾರ್ಯವಾಗುವ ಬರವಣಿಗೆ ಅದು.''
>
> *(ಅದೇ, ಪು. ೨೯೮)*

'ಹಿತಮಿತ ಮಧುರ ಪ್ರಸನ್ನ ಗಂಭೀರ ವಚನ'ನಲ್ಲವೆ ಅವನು. ಆತನ

ಬರವಣಿಗೆಯನ್ನು ವಿಶೇಷಗೊಳಿಸುವ ಲಕ್ಷಣಗಳೇ ಅವು ಎನ್ನುತ್ತಾರೆ. ಸ್ವಯಂ ವಾಗ್ಮಿಗಳಾದ, ಮಾತುಗಳ ಶಕ್ತಿಯನ್ನು ಬಲ್ಲವರಾದ ವಿ.ಸೀ. ಪಂಪನ ಸಾಲುಗಳ ನಾದಗುಣವನ್ನು ತುಂಬ ಮೆಚ್ಚಿಕೊಂಡಿದ್ದಾರೆ. ಅವುಗಳನ್ನು 'ನಾಲಿಗೆ ನುಡಿಯ ಬೇಕು; ಕಿವಿ ಕೇಳಬೇಕು. ಇದು ಒಂದು ಕಲಾಸಾಹಸ' ಎನ್ನುತ್ತಾರೆ.

> ''ಪಂಪನಂತಹ ಉನ್ನತಿಯ ಕವಿಯ ಶಬ್ದಪ್ರಯೋಗಶಕ್ತಿಯನ್ನಾಗಲಿ ಅವನ ರಚನಾಶಿಲ್ಪವನ್ನಾಗಲಿ ಪ್ರಶಂಸಿಸಹೋಗುವುದು ಅಧಿಕ ಪ್ರಸಂಗ. ಅವನ ಸಣ್ಣ ದೊಡ್ಡ ಗದ್ಯಪದ್ಯಖಂಡಗಳಲ್ಲಿ ಯಾವುದನ್ನೇ ತೆಗೆದುಕೊಂಡರೂ ಅವನ ಕಾಲದ ಅಥವಾ ಪ್ರಾಚೀನರ ಅಥವಾ ಈಗಿನ ಕಾಲದ ಯಾವ ವಿದ್ವದ್ ವಿಮರ್ಶಕರೇ ಆಗಲಿ, ಯಾವುದನ್ನು ಗುಣವೆಂದು ಎಣಿಸಿ ಒಪ್ಪಬಲ್ಲರೋ ಆ ಪ್ರತಿಯೊಂದು ನಯವನ್ನೂ ಉಕ್ತಿ ಚಮತ್ಕಾರವನ್ನೂ ಸುಮಾರು ಅವನಿಂದ ಎತ್ತಿ ಉದಾಹರಿಸಬಹುದು. ಎಷ್ಟೋ ಪದ್ಯಗಳು ಮನಸ್ಸಿನ ಮೇಲೆ ಪ್ರಭಾವ ಬೀರುವಂತಹವು; ಕೆಲವು ಶಬ್ದಸೌಭಾಗ್ಯಗಳನ್ನು ಕಾಣಿಸಬೇಕೆಂದು ಮಾತ್ರವೇ ಬರೆದವು. ಇನ್ನು ಕೆಲವು ಅರ್ಥದ ಏಕಾಗ್ರತೆಯನ್ನು ಹಿಡಿದಂತಿವೆ; ಇನ್ನು ಕೆಲವು ನೇರವಾಗಿ ಚೊಕ್ಕವಾಗಿ ಭಾವಪ್ರಕಾಶನಕ್ಕಾಗಿ ರಚಿಸಿದ ಒಂಟಿ ಚಿತ್ರಗಳು.''
>
> *(ಅದೇ, ಪು. ೩೦೭)*

> ''ಇವೆಲ್ಲ ಹೇಗೇ ಇರಲಿ, ಪಂಪನ ಕೃತಿ ನಮ್ಮ ಚಂಪೂ ಸಂಪ್ರದಾಯದಲ್ಲಿ ಉತ್ತಮ ಸಾಧನೆ. ವಿಷಯದ ಆಯ್ಕೆಯಲ್ಲಾಗಲಿ, ಬಳಸುವ ಶೈಲಿಯಲ್ಲಾಗಲಿ ಸಾಧನೆಯ ಉಜ್ವಲತೆಯಲ್ಲಾಗಲಿ ನಾಡಿನ ಕೃತಿಮಂಡಳದಲ್ಲಿ ಶಿಖಿರಸ್ಥ ಕೃತಿ ..... ಹಳತು ಆದರೂ ಹೊಸತು; ಜೀವಶಕ್ತಿ ಉಳ್ಳದ್ದು; ಮರಳಿ ಹೊಸದಾಗುವಂತೆ ಅದಕ್ಕೆ ಕಳೆ ಕೊಡುವುದಕ್ಕೆ ಸತ್ವವೂ ಕುಶಲತೆಯೂ ಅವನಲ್ಲಿತ್ತು.'
>
> *(ಅದೇ, ಪು. ೨೧೫)*

> "ನಮ್ಮ ಮೊದಲ ಮಹಾಕವಿಯೇ ಒಂದು ಸಾವಿರ ವರ್ಷಕ್ಕಿಂತ ಹೆಚ್ಚಾಗಿ ಈ ಭಾಷೆಯಲ್ಲಿ ಸರ್ವಶ್ರೇಷ್ಠ ಕವಿಯಾಗಿ ಉಳಿದುಕೊಂಡು ಬಂದ ಸಂಗತಿ ಕನ್ನಡ ಜನರ ಸೌಭಾಗ್ಯ.''
>
> *(ಅದೇ, ಪು. ೩೨೫)*

ಹೀಗೆಂದು ಹೇಳಿ ಪಂಪನ ಕೃತಿಗಳ ಅವಲೋಕನವನ್ನು ಮುಕ್ತಾಯಗೊಳಿಸಿದ್ದಾರೆ ವಿ.ಸೀ. ಈ ವಿಮರ್ಶೆಯನ್ನು ಓದಿದ ಎಂಥವರಿಗೂ ನಮ್ಮ ಮಹಾಕವಿಯ ಮೇಲೆ ಅಭಿಮಾನ ತಾಳುವಂತಾಗುತ್ತದೆ. ಕವಿಯ ಮಹಾಕೃತಿಗಳಾದ 'ಆದಿಪುರಾಣ', 'ಭಾರತ'ಗಳನ್ನು ಓದಿ ರಸಾಸ್ವಾದನೆ ಮಾಡಬೇಕೆನ್ನುವ ಉತ್ಸಾಹ ಬಲಿಯುತ್ತದೆ. ಇದೇ ಅಲ್ಲವೆ ಉತ್ತಮ ವಿಮರ್ಶೆ ಸಾಧಿಸಬೇಕಾದ್ದು?

'ವಾಲ್ಮೀಕಿ ರಾಮಾಯಣ' (೧೯೭೬)

ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಂ.

(ರಾಮಾ ರಾಮಾ ಎಂದು ಮಧುರವಾಗಿ ವಾಲ್ಮೀಕಿ ಕವಿ ಕೋಗಿಲೆ ಮರದ ಕೊಂಬೆಯ ಮೇಲೆ ಕುಳಿತು ಹಾಡುತ್ತಿದೆ. ಅದನ್ನು ವಂದಿಸುತ್ತೇನೆ.)

ಈ ಸುಂದರ ಕವನದಿಂದ ಮೊದಲಾಗುತ್ತದೆ ವಿ.ಸೀ.ಯವರ ರಾಮಾಯಣ ವಿಶ್ಲೇಷಣೆ. ಈ ಗ್ರಂಥ ಮೊದಲಿಗೆ ನವದೆಹಲಿಯ ಸಾಹಿತ್ಯ ಅಕಾಡೆಮಿಯವರಿಗಾಗಿ ಇಂಗ್ಲಿಷಿನಲ್ಲಿ ಬರೆದದ್ದು. ಆಮೇಲೆ ಅಕಾಡೆಮಿಯವರಿಗಾಗಿಯೇ ಕನ್ನಡ ಅನುವಾದ ಮಾಡಲಾಯಿತು. ಮೂಲರಾಮಾಯಣದ ಕತೆ ಬಹಳ ಹಿಂದಿನ ಕಾಲದಿಂದಲೂ ಬಳಕೆಯಲ್ಲಿದ್ದಿರಬೇಕು. ಆ ಕತೆಯನ್ನು, ಕತೆಗೆ ಸಂಬಂಧಿಸಿದ ಘಟನೆಗಳನ್ನು ಸೌಹಾರ್ದದಿಂದ ನೋಡಿ ''ತನ್ನ ಕಾಲದ ಜನ ಜೀವನದಲ್ಲಿ ಯಾವುದು ಅತ್ಯುತ್ತಮವೆಂದು ಆತನಿಗೆ ತೋರಿತೋ ಅದನ್ನೆಲ್ಲ ರಾಮಾಯಣ ಪ್ರತಿಫಲಿಸುವಂತೆ ಮಾಡಿದ್ದಾನೆ ವಾಲ್ಮೀಕಿ.''

ರಾಮಾಯಣ ಕಾಲದ ಸಮಾಜದಲ್ಲಿ ಮೂರು ಮಾದರಿಗಳನ್ನು ವಿ.ಸೀ. ಗುರುತಿಸಿದ್ದಾರೆ. ಒಂದು ಆರ್ಯರು; ಇವರು ಉತ್ತರಭಾರತದ ನಿವಾಸಿಗಳು. ಎರಡನೆಯವರು ವಾನರರು; ಇವರು ಪ್ರಾಯಶಃ ದಂಡಕದಲ್ಲಿ - ಬಹುಶಃ ಈಗಿನ ಹಂಪೆಯಲ್ಲಿ ವಾಸಿಸುತ್ತಿದ್ದರು. ಇದಕ್ಕೂ ದಕ್ಷಿಣದಲ್ಲಿ, ಲಂಕೆಯಲ್ಲಿ ಮೂರನೆಯ ಗುಂಪಿನವರಾದ ರಾಕ್ಷಸರು ಆಳುತ್ತಿದ್ದರು. ಯಾರ ಆಡಳಿತಕ್ಕೂ ಒಳಪಡದ ದಂಡಕಾರಣ್ಯ ಪ್ರದೇಶದಲ್ಲಿ ಋಷಿಗಳು ಆಶ್ರಮಗಳನ್ನು ಕಟ್ಟಿಕೊಂಡು ಯಜ್ಞ ಹವನಾದಿಗಳಲ್ಲಿ ತೊಡಗಿದ್ದರು. ಇವರ ಜೀವನವನ್ನು ವಿರೋಧಿಸುತ್ತ ರಾಕ್ಷಸರು ಕಾಟಕೊಡುತ್ತಿದ್ದರು. ರಾಕ್ಷಸರ ಹಾವಳಿಯನ್ನು ತಡೆಯಲು ನಾಯಕನೊಬ್ಬ ಬೇಕಾಗಿತ್ತು. ದಶರಥನ ಮಗನಾದ ರಾಮನಲ್ಲಿ ಇಂಥ ಯೋಗ್ಯತೆ ಸಿದ್ಧವಾಗುತ್ತಿತ್ತು. ಉತ್ತರ ರಾಜ್ಯದ ಮನೆತನದಲ್ಲಿ ಅವನು ಹುಟ್ಟಿ ಬಂದ ಕೌಟುಂಬಿಕ ಘಟನೆಗಳು ರಾಕ್ಷಸರ ಹಾವಳಿಯಿಂದ ಆರ್ಯರನ್ನು ರಕ್ಷಿಸಿಕೊಳ್ಳುವ ಸಾರ್ವಜನಿಕವಾದ ಕಾರ್ಯಸಾಧನೆಯಲ್ಲಿ ಪರಿಣಾಮಗೊಳ್ಳುತ್ತವೆ. ಇದು ವಿ.ಸೀ. ನಮಗೊದಗಿಸಿರುವ ರಾಮಾಯಣ ಕತೆಯ ಚಾರಿತ್ರಿಕ ಮತ್ತು ಭೌಗೋಲಿಕ ಹಿನ್ನೆಲೆ.

ರಾಮಾಯಣ ಕತೆ ಬೆಳೆದಿರುವುದರ ಸೂಕ್ಷ್ಮ ಪರಿಚಯ ಮಾಡಿಕೊಡುತ್ತ ಅಲ್ಲಲ್ಲಿ ಸೂತ್ರರೂಪದ ವಾಕ್ಯಗಳ ಮೂಲಕ ಚಿತ್ರ ಕಣ್ಣಮುಂದೆ ನಿಲ್ಲುವಂತೆ ಮಾಡುತ್ತಾರೆ. ಅಯೋಧ್ಯಾಕಾಂಡದ ಕತೆ ಮುಗಿಸುತ್ತ - 'ಈ ಕಾಂಡ ರಾಮಾಯಣದಲ್ಲಿ ದೊಡ್ಡದು. ಅಲ್ಲಿನ ಮಾನವೀಯತೆ ಅತಿಶಯವಾದುದು.

ಇಂದಿನ ಬಳಕೆ ಪ್ರಯೋಗದಲ್ಲಿ ಒಂದು ರಾಜಮನೆತನವನ್ನು ಕುರಿತ ಅತ್ಯುತ್ತಮ ವಾದ ಒಂದು ಸಾಕ್ಷಿಚಿತ್ರ' ಎನ್ನುತ್ತಾರೆ.

ಅರಣ್ಯಕಾಂಡ ದಂಡಕಾರಣ್ಯದಲ್ಲಿ ಋಷಿಗಳೊಡನೆ ಕಳೆದಕಾಲ. ಅಲ್ಲಿ ರಾಕ್ಷಸರಿಂದಾಗುವ ಕೆಡುಕು; ಅದರ ಭೀತಿ ರಾಮಾಯಣದ ಎರಡನೆಯ ಕ್ರಿಯಾಕಲ್ಪವಾಗುತ್ತದೆ. ಕಿಷ್ಕಿಂಧಾಕಾಂಡ ವಾನರರ ಪ್ರಸಂಗ; ರಾಮಾಯಣ ಕಥಾಸನ್ನಿವೇಶಕ್ಕೆ ಹೊಸದಾಗಿ ಸೇರಿಕೊಳ್ಳುವ ಮೂರನೆಯ ಕಥನ. ಮುಂದಿನದು ಸುಂದರಕಾಂಡ. ಆಮೇಲೆ ಯುದ್ಧಕಾಂಡ - ರಾಕ್ಷಸರೊಡನೆ ಭೀಕರ ಯುದ್ಧ - ರಾವಣನ ಹತ್ಯೆ. ಇಷ್ಟು ಹೊತ್ತಿಗೆ ಹದಿನಾಲ್ಕು ವರ್ಷದ ಅವಧಿ ಮುಗಿದು ಸೀತಾರಾಮಲಕ್ಷ್ಮಣರು ಅಯೋಧ್ಯೆಗೆ ಹಿಂದಿರುಗುತ್ತಾರೆ. ಆರನೆಯ ಕಾಂಡವಾದ ಯುದ್ಧಕಾಂಡ ಸಾರ್ವತ್ರಿಕವಾಗಿ ಆಶೀರ್ವಚನದಿಂದ ಒಂದು ಮಹಾಕೃತಿಗೆ ಸಹಜವಾದ ಸಮಾಪ್ತಿಯನ್ನು ಕಾಣುತ್ತದೆ.

ಹೀಗೆ ಮುಖ್ಯಕತೆಯ ವಿಸ್ತಾರವನ್ನು ವಿವರಿಸಿ ವಿಮರ್ಶಕ ವಿ.ಸೀ. ರಾಮಾಯಣ ಕತೆಯಲ್ಲಿ ಕಾಣಬರುವ ಕುಟುಂಬ ಜೀವನದ ಮೂರು ಬಗೆಗಳ ಕಡೆ ನಮ್ಮ ಗಮನವನ್ನು ಹರಿಸುತ್ತಾರೆ; ಅಯೋಧ್ಯೆಯ ರಾಜನಾದ ದಶರಥನ ಮನೆಯ ಸಂಸಾರದ ಚಿತ್ರ, ಕಿಷ್ಕಿಂಧೆಯಲ್ಲಿನ ವಾಲಿಸುಗ್ರೀವರ ವಾನರಸಂಸಾರ ಚಿತ್ರ ಮತ್ತು ಲಂಕೆಯಲ್ಲಿನ ರಾಕ್ಷಸ ರಾವಣನ ಜೀವನಚಿತ್ರ.

ದಶರಥನ ಸಂಸಾರದ ಚಿತ್ರದಲ್ಲಿ ರಾಮನ ಮದುವೆ ಒಂದು ಮಂಗಳ ಕರವಾದ ಸನ್ನಿವೇಶ. ಆ ಸಂದರ್ಭದಲ್ಲಿನ ನಡವಳಿಕೆಯನ್ನು ಕುರಿತು ಹೇಳಿರುವ ಮಾತುಗಳು ವಿ.ಸೀ. ಅವರ ವಿಮರ್ಶನಕೌಶಲ್ಯದ ಮೇಲ್ಪಟ್ಟವನ್ನು ತೋರಿಸುತ್ತದೆ.

> ''ಮದುವೆಯ ಮಂಗಳವನ್ನು ಕುರಿತು ಜನಕನಿಗೂ ದಶರಥನಿಗೂ ನಡುವೆ ಬೆಳೆಯುವ ಮರ್ಯಾದೆಗಳು ಚೆಲುವಾದ ಚಿತ್ರಗಳು; ತುಂಬ ಗೌರವಯುತವಾದವು. ಒಟ್ಟು ಒಂದು ಸಂಸ್ಕೃತಿಯೇ ಇಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಆ ರಾಜಧಾನಿಯಲ್ಲಿ ಒಂದು ಆರ್ಯಮನೆತನದ ಮನೆಯಲ್ಲಿ ಕಾಣುವ ಸಾಂಸಾರಿಕ ಜೀವನ ಸಂಬಂಧಗಳು, ನಡವಳಿಕೆಗಳು, ಉತ್ತಮವೆನ್ನಬಹುದಾದ ಜೀವನದ ಒಂದು ಪ್ರಕಾರ ಅಲ್ಲಿ ಸಂಪೂರ್ಣವಾಗಿ ದೊರಕುತ್ತವೆ.''
>
> ('ವಾಲ್ಮೀಕಿ ರಾಮಾಯಣ', ಪು. ೫೧)

ಕಿಷ್ಕಿಂಧೆಯ ವಾನರರ ಚಿತ್ರ ಇನ್ನೊಂದೇ ಬಗೆಯದು. ಅಲ್ಲಿನ ಜೀವನವನ್ನು ವಿಶ್ಲೇಷಿಸುತ್ತಾ ವಿ.ಸೀ. ಹೇಳುವುದು ಹೀಗೆ :

> ''ಸ್ತ್ರೀ ಸಂಬಂಧದಲ್ಲಿ ವಾನರವರ್ಗ ಸಡಿಲವಾಗಿ ನಡೆದುಕೊಳ್ಳುತ್ತಿತ್ತೆನಿಸುತ್ತದೆ. ಸುಗ್ರೀವನಿಂದ ವಾಲಿಗೆ, ವಾಲಿಯಿಂದ ಸುಗ್ರೀವನಿಗೆ ರುಮ ತಾರೆಯರು ಕೈಬದಲಾದಾಗ ಅವರಿಗೆ ಯಾವ ಚಿಂತೆಯೂ ಬಂದ ಹಾಗೆ ಕಾಣಲಿಲ್ಲ.''
>
> (ಅದೇ, ಪು. ೫೭)

ಈ ಚಿತ್ರದ ಪಕ್ಕದಲ್ಲಿ ರಾಮ-ಸೀತೆಯರ ನಡತೆಯನ್ನು ತೂಗಿ ನೋಡಬೇಕು. ಹೆಂಡತಿಯ ವಿಷಯವಾಗಿ ಸಣ್ಣಸಂಶಯ ಸುಳಿದರೂ ಅದನ್ನು ದೊಡ್ಡದುಮಾಡಿ ಸೀತೆಯನ್ನು ಅಗ್ನಿಪರೀಕ್ಷೆಗೆ ಒಡ್ಡುತ್ತಾನೆ ರಾಮ.

> ''ರಾಕ್ಷಸ ಕುಟುಂಬಗಳಲ್ಲಾಗಲಿ, ವಾನರ ಕುಟುಂಬಗಳಲ್ಲಾಗಲಿ ಬಳಕೆಯಲ್ಲಿರುವ ಸ್ಥಿತಿಗತಿಗಳನ್ನು ಪರಿಶೀಲಿಸಿದರೆ ಒಂದು ಉತ್ತಮ ಆರ್ಯ ಕುಟುಂಬ ಎಷ್ಟು ಹೆಚ್ಚು ಕಟ್ಟುನಿಟ್ಟಿನದು, ಶುಚಿಯದು, ಸಂಸ್ಕಾರ ಗೊಂಡದ್ದು, ಮೇಲ್ತರದ ನಯನೀತಿಗಳದು ಎಂದು ಗೊತ್ತಾಗುತ್ತದೆ.''
>
> *(ಅದೇ, ಪು.೫೭)*

ಹೀಗೆಯೇ ಮುಂದಿನ ಅಧ್ಯಾಯಗಳಲ್ಲಿ ರಾಮಾಯಣದ ಮುಖ್ಯವ್ಯಕ್ತಿಗಳ ಶೀಲಸ್ವಭಾವ ಮತ್ತು ಗುಣಗಳ ಪರಿಶೀಲನೆ ಮುಂದುವರಿಯುತ್ತದೆ. ಓದುಗರಾದ ನಾವು ಗಮನಿಸದೆಹೋದ ಎಷ್ಟೋ ಸನ್ನಿವೇಶಗಳನ್ನು ಗುರುತಿಸಿ ನಮ್ಮ ಗಮನವನ್ನು ಅತ್ತ ಕಡೆ ಹರಿಸಿ ನಮ್ಮ ರಸಾನುಭವ ಹೆಚ್ಚುವಂತೆ ಮಾಡುತ್ತಾರೆ ವಿ.ಸೀ. ಇದು ಉತ್ತಮ ವಿಮರ್ಶಕನಲ್ಲಿ ನಾವು ಅಪೇಕ್ಷಿಸುವ ಮುಖ್ಯ ಗುಣ. ರಾಮನ ಸದ್ಗುಣಗಳಲ್ಲಿ ಮೂರು ವಿಶೇಷಗಳನ್ನು ವಿ.ಎಸ್.ಶ್ರೀನಿವಾಸ ಶಾಸ್ತ್ರಿಗಳು ಒತ್ತಿ ಹೇಳುತ್ತಿದ್ದರಂತೆ. ಅವನ್ನು ವಿ.ಸೀ. ನೆನಪಿಗೆ ತಂದುಕೊಂಡು ಸುಸಂಸ್ಕೃತನಾಗಬೇಕಾದರೆ ಯಾವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎನ್ನುವುದರ ಕಡೆ ನಮ್ಮ ಗಮನವನ್ನು ಹರಿಸಿದ್ದಾರೆ :

> ''(ರಾಮ) ಸ್ಮಿತಭಾಷಿ - ಮಂದಹಾಸದಿಂದ ಮಾತನಾಡುವವನು; ಮೃದುಭಾಷಿ, ಪೂರ್ವಭಾಷಿ ಎಂಬುವು ಆ ಮಾತುಗಳು. ಮೃದುವಾಗಿ ಮಾತನಾಡುವವನು, ಯಾರೊಡನೆಯೂ ಮೊದಲು ಮಾತನಾಡುವವನು ಎಂಬುದು. ಯಾವ ರಾಜನ ಸಂಬಂಧದಲ್ಲಿಯೇ ಆಗಲಿ, ಜನ ನಾಯಕನಲ್ಲಿಯೇ ಆಗಲಿ, ಪ್ರೀತಿಯುಂಟುಮಾಡುವ ಗುಣಗಳು. ಇಂಥ ಗುಣಾಂಶ ಅವರೂಪವಾಗಿರುವ ಪ್ರಪಂಚದಲ್ಲಿ, ಕಾಲದಲ್ಲಿ ಅವು ಸ್ವಭಾವಜನ್ಯವಲ್ಲದಿರುವಾಗ ಸಂಸ್ಕಾರದ ಅಂಗಗಳಾಗಿ ಕಲಿತು ಅಭ್ಯಾಸ ಮಾಡಬೇಕಾಗುತ್ತದೆ. ಆಗ ಲೋಕ ಒದುಕಿಗೆ ಹೆಚ್ಚು ಪ್ರಿಯವಾಗುತ್ತದೆ; ನಯ ನಾಗರಿಕವುಳ್ಳದ್ದಾಗುತ್ತದೆ.''
>
> *(ಅದೇ, ಪು. ೬೯)*

ರಾಮನ ನಡವಳಿಕೆಯಲ್ಲಿ ಎಲ್ಲವೂ ಮೆಚ್ಚುವಂಥವಲ್ಲ. ಕೆಲವು ಸಂದರ್ಭಗಳಲ್ಲಿ ಅದು ವಿಚಿತ್ರರೂಪವನ್ನು ತಾಳುವುದನ್ನು ಎತ್ತಿ ತೋರಿಸುತ್ತಾರೆ. ರಾಕ್ಷಸನ ಸೆರೆಯಲ್ಲಿ ಒಕ್ಕಿ ಕಂಗಾಲಾದ ಸೀತೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸುವಾಗ ಅವನು ಆಡುವ ಮಾತುಗಳು ಎಂಥವು ? ಅಂಥ ಘನವಾದ ವ್ಯಕ್ತಿ ಹಾಗೆನ್ನ

ಬಹುದೆ ? ಈ ನಡತೆಯನ್ನು ಟೀಕಿಸುತ್ತ ವಿ.ಸೀ. ಹೇಳುತ್ತಾರೆ :

''ಮೂಲಭೂತವಾಗಿ ಗುಂಡಿನಲ್ಲಿ ಅನಾದಿಕಾಲದಿಂದಲೂ ಇದ್ದಿರುವ ಪ್ರಾಕೃತಭಾವ ಇಲ್ಲಿ ಉಕ್ಕಿಬಂದಂತೆ ಕಾಣುತ್ತದೆ. ಲೋಕದ ಮತ್ತು ತನ್ನ – ಇಬ್ಬರ ದೃಷ್ಟಿಯಲ್ಲಿಯೂ ತನ್ನ ನಡತೆಯನ್ನೂ ಅವಳ ನಡತೆಯನ್ನೂ ಪ್ರಮಾಣೀಕರಿಸುವ ನಡತೆಯ ಒಂದು ಕಠಿಣ ವಿಧಾನವಾಗುತ್ತದೆ ಅತನ ನಡತೆ.''

(ಅದೇ, ಅಡಿ ಟಪ್ಪಣಿ ಪು. ೭೫)

ಈ ಸಂದರ್ಭದಲ್ಲಿ ರಾಮನ ಕರ್ತವ್ಯಶೀಲತೆಯನ್ನು ತೋರಿಸುವುದು ವಾಲ್ಮೀಕಿಯ ಉದ್ದೇಶವಾಗಿರಬಹುದು. ಆದರೆ ಅನಾಥೆ ಸೀತೆಯ ಪಾಡೋ !

''ಆ ಸಮಯದಲ್ಲಿ ಸೀತೆ ಆಂತರ್ಯದಲ್ಲಿ ಹೇಗೆ ಭಾವಿಸಿಕೊಂಡಳೊ - ಅದನ್ನು ಒಂದು ವಾಕ್ಯದಲ್ಲಾದರೂ ಕವಿ ಸಾಧಾರಣ ಮರ್ತ್ಯರಿಗೆ ತಿಳಿಸಿದ್ದರೆ ಮೇಲಾಗುತ್ತಿತ್ತೆನ್ನಿಸುತ್ತದೆ.''

ನಮ್ಮ ಮನಸ್ಸಿನ ಭಾವನೆಗಳನ್ನೇ ವಿ.ಸೀ. ಹೇಳಿದ್ದಾರಲ್ಲವೆ ?

ಭರತ-ಲಕ್ಷ್ಮಣರು ಹಿರಿಯಣ್ಣನಾದ ರಾಮನ ಕೈಂಕರ್ಯದಲ್ಲಿ ನಡೆದುಕೊಂಡ ರೀತಿಯನ್ನು ಮೆಚ್ಚುತ್ತ ವಿ.ಸೀ. ಹೇಳಿರುವ ಮಾತುಗಳಿವು :

''ಶೀಲಸಾಧನೆಯಲ್ಲಾಗಲಿ ನಡತೆಯಲ್ಲಾಗಲಿ ಅವರು ಮಾದರಿಯಾಗಿದ್ದಾರೆ – ತಮ್ಮ ತಮ್ಮ ಬಗೆಯಲ್ಲಿ. ಭಾರತೀಯ ಸಾಹಿತ್ಯದಲ್ಲಿ ಇದನ್ನು ಹೋಲುವಂತಹ ನಿದರ್ಶನ ಇನ್ನೊಂದಿಲ್ಲ. ರಾಮನಿಗೆ ಈ ಇಬ್ಬರ ನಿಃಸ್ವಾರ್ಥ ಪ್ರೀತಿಯಲ್ಲಿ ಕಾಣಿಸುವ 'ಬಂಧುಪ್ರೇಮ', ಸೋದರಿಕೆ, ಅವರಿಗೆ ಅವನಲ್ಲಿರುವ ವಿಶ್ವಾಸದ ಕೊಡುಗೆ ಹೇಗೊ ಇಂತಹ ಇಬ್ಬರು ಮಹಾನುಭಾವರಿಗೆ ರಾಮನು ಸ್ಫೂರ್ತಿಕೊಟ್ಟಿದ್ದನೆಂಬುದಕ್ಕೆ ದೊಡ್ಡ ಕಾಣಿಕೆ.''

(ಅದೇ, ಪು.೯೧)

ಸೀತೆಯನ್ನು ಕಂಡರೆ ಅತೀವ ಅನುಕಂಪ ವಿ.ಸೀ. ಅವರಿಗೆ - ಯಾರಿಗೆ ತಾನೇ ಅಲ್ಲ ! ಆಕೆಯ ವ್ಯಕ್ತಿತ್ವ, ಶೀಲಗಳು ಎಷ್ಟು ಉನ್ನತವಾದವು. 'ರಾಮನ ಬದುಕಿನಲ್ಲಿ ಇಂಥ ಹೆಂಡತಿ ಇದ್ದುದು ಒಂದು ಪುಣ್ಯಾಂಶ'; 'ಅವಳ ಬದುಕು ವಾಸ್ತವ - ಆದರ್ಶಗಳ ಒಂದು ಅಸಾಮಾನ್ಯ ಮಿಶ್ರಣ' ಎನ್ನುತ್ತಾರೆ. ಇಂಥ ಸೀತೆಯನ್ನು ರಾಮ ಅತ್ಯಂತ ಕಠಿಣವಾಗಿ ನಡೆಸಿಕೊಳ್ಳುತ್ತಾನೆ. ಆಕೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸುವಾಗ ಆತನಾಡುವ ಮಾತುಗಳು ಆತನ ಘನತೆಗೆ ತಕ್ಕುದಲ್ಲ. ಸೀತೆಯೇ ಹೇಳುವಂತೆ :

''ಕಿಂ ಮಾಂ ಅಶದ್ಧಶಂ ವಾಕ್ಯಂ, ಈದೃಶಂ ಶ್ರೋತ್ರದಾರುಣಂ
ರೂಕ್ಷಂ ಶ್ರಾವಯಸೇ, ವೀರ, ಪ್ರಾಕೃತಂ ಪ್ರಾಕೃತಾಮಿವ –''

(ಓ ವೀರ! ಈಗ ನಾನು ಕೇಳುತ್ತಿರುವ ಮಾತುಗಳು ಎಂಥವು: ನಿನ್ನ ಯೋಗ್ಯತೆಗಾಗಲಿ ನನ್ನದಕ್ಕಾಗಲಿ ತಕ್ಕುವಲ್ಲ. ಕೇಳಲು ದಾರುಣವಾದವು. ಒರಟು ಗ್ರಾಮ್ಯನೊಬ್ಬನು ಇನ್ನೊಬ್ಬ ಗ್ರಾಮ್ಯನಿಗೆ ಆಡುವಂಥವು).

ಇನ್ನೇನು ಮಾಡುತ್ತಾಳೆ ಸೀತೆ. ನೋವಿನ ಉಮ್ಮಳದಲ್ಲಿ ಕಣ್ಣೀರು ಕರೆಯುತ್ತ 'ಸೌಮಿತ್ರಿ! ಚಿತೆಯನ್ನು ಸಿದ್ಧಮಾಡು. ವ್ಯಸನಕ್ಕೆ ಅದೇ ಚಿಕಿತ್ಸೆ. ಕೆಟ್ಟ ಅರೋಪಣೆಯನ್ನು ಹೊತ್ತು ಇನ್ನು ಬದುಕಲು ನನಗೆ ಉತ್ಸಾಹವಿಲ್ಲ' ಎನ್ನುತ್ತಾಳೆ.

ಯಥಾ ಮೇ ಹೃದಯಂ ನಿತ್ಯಂ ನಾಪಸರ್ಪತಿ ರಾಘವಾತ್
ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ

(ನನ್ನ ಹೃದಯ ಎಂದೆಂದಿಗೂ ರಾಘವನನ್ನೇ ಭಜಿಸಿದ್ದರೆ, ಓ ಪಾವಕ, ಲೋಕದ ಮೇಲೆ ನಡೆಯುವ ಎಲ್ಲ ಜಂತುವನ್ನೂ ಕಾಣುವ ಸಾಕ್ಷೀ, ನನ್ನನ್ನು ಕಾಪಾಡು)

ಉರಿಯುತ್ತಿರುವ ಬೆಂಕಿಯನ್ನು ಸೀತೆ ಹೊಗುವ ದೃಶ್ಯ ಅತಿ ದಾರುಣವಾದದ್ದು. ತನ್ನ ಶುಚಿ ಹೃದಯವೊಂದನ್ನು ಬಿಟ್ಟರೆ ಆಕೆ ಒಂಟಿ. ಅಗ್ನಿ ದೇವನು ಆಕೆಯ ಶರೀರವನ್ನು ಸುಡಲಿಲ್ಲ. ಯಾವ ಕೆಡುಕೂ ಆಗದಂತೆ ಆಕೆ ಹೊರಗೆ ಬರಲು ನೆರವಾದ. ಬದಲು ಆ ಜನ ಸಂದಣಿಯ ಮುಂದೆ ರಾಮನಿಗೆ ಅತನು ಆಕೆಯನ್ನು ಬಹುಮಾನವಾಗಿ ಕೊಟ್ಟನು; ಆಕೆಯ ಪಾತಿವ್ರತ್ಯಕ್ಕೂ ಶುಚಿಗೂ ತಾನು ಪ್ರಮಾಣವೆಂಬಂತೆ' (ಅದೇ, ಪು. ೧೦೬), ಇಂಥ ಸಾರ್ವಜನಿಕ ಪ್ರಮಾಣ ಲೋಕಕ್ಕೆ ಬೇಕಿತ್ತಂತೆ. 'ರಕ್ಷಿತಾಂ ಸ್ವೇನ ತೇಜಸಾ' - ಸ್ವಂತ ತೇಜಸ್ಸಿನಿಂದಲೇ ರಕ್ಷಣೆ ಪಡೆದವಳು ಸೀತೆ.

ವಿ.ಸೀ. ಇನ್ನೂ ಒಂದು ಮಾತು ಸೀತೆಯ ಪರವಾಗಿ ಇಲ್ಲಿ ಆಡಿದ್ದಾರೆ:

''ಹೆಣ್ಣಾಗಿ ಹೆಂಡತಿಯಾಗಿದ್ದವಳನ್ನು ಒಂದು ಒಟ್ಟು ಲೋಕವೇ ನೋಡುತ್ತಿರುವಂತೆ ಅಪಮಾನಕ್ಕೆ ಆಕೆಯ ಗಂಡನೇ ಈಡುಮಾಡುತ್ತಿರುವಾಗ ಆಕೆಗೆ ಬೇರೆ ಗತಿ ಎಲ್ಲಿ?..... ಈ ಪರೀಕ್ಷೆ, ಸಂಕಟ, ಸೀತೆ ನಿಂತ ಈ ಪರಮೋನ್ನತ ನಿಲವು - ಇವು ಇಲ್ಲಿ ಮುಖ್ಯ; ಮನುಷ್ಯರ ಮತ್ತು ಸಮಾಜದ ಸ್ವೀಕಾರ ಅಷ್ಟು ಮುಖ್ಯವಲ್ಲ. ಅತ್ಯಪಮಾನಕರ, ಹೀನಾಯ ಸಂದರ್ಭದಲ್ಲಿಯೂ ಸೀತೆಯ ನಡವಳಿಕೆಯ ಗಾಂಭೀರ್ಯ, ಉನ್ನತಿ ದೊಡ್ಡವು. ಭರತನಿಂದ ಹೆಮ್ಮೆ ಪಡುವುದು ಈ ಸೀತೆಯ ವಿಷಯದಲ್ಲಿ. ಸಚ್ಚಾರಿತ್ರದ ಮಾರ್ಗದರ್ಶಿಯಂತೆ ಅಸಂಖ್ಯಾತವಾದ ತಲೆಮೊರೆಗಳ ಸ್ತ್ರೀ ಪುರುಷರು ಈ ಶುಚಿಯನ್ನೂ ದೊಡ್ಡತನವನ್ನೂ ಪ್ರೀತಿಯಿಂದ ಆರಾಧಿಸಿದ್ದಾರೆ.''

(ಅದೇ ಪು. ೨೨೦)

ಇನ್ನು ಹನುಮಂತನೋ? ''ರಾಮಕಥೆಯೂ ರಾಮಾಯಣದ ಕೀರ್ತಿಯೂ ಉಳಿಯುವವರೆಗೂ ಭೂಮಿಯ ಮೇಲೆ ಇರತಕ್ಕದ್ದೆಂದು ಹನುಮಂತನಿಗೆ ದೊರಕಿದ ವರದಿಂದ ಅವನು ಭಾರತದ ಚಿರಂಜೀವಿಗಳಲ್ಲಿ ಒಬ್ಬ'' (ಅದೇ, ಪು.೧೧೯) ಎಂದು ಅವನ ಮಹತ್ತಾದ ಒರಿಮೆಯನ್ನು ಕೊಂಡಾಡಿದ್ದಾರೆ.

ಹೀಗೆಯೇ 'ವಾಲ್ಮೀಕಿ ರಾಮಾಯಣ'ದ ಸೊಗಸಿನಂಶಗಳನ್ನು ಸೂಚಿಸುತ್ತ ಹೋಗಬಹುದು. ಆದರೆ ಇಷ್ಟು ಹೇಳಿದುದು ಸಾಕೆನಿಸುತ್ತದೆ ಪಿ.ಸೀ. ಯವರ ಸಹೃದಯ ವಿಮರ್ಶೆಯ ಕುಶಲತೆಯನ್ನು ತೋರಿಸುವುದಕ್ಕೆ. ರಾಮಾಯಣ ಭಾರತಗಳಲ್ಲಿನ ಒಂದೊಂದು ಪ್ರಸಂಗವೂ ಅವರ ಮನಸ್ಸಿನಲ್ಲಿ ಅನೇಕ ಬಗೆಯ ಆಲೋಚನಾ ತರಂಗಗಳನ್ನು ಎಬ್ಬಿಸುತ್ತಿತ್ತು. ವಿಭೀಷಣನ ವಿಷಯ ಪ್ರಸ್ತಾಪ ಮಾಡುವಾಗ - 'ದೇಶಭಕ್ತಿ, ರಾಜಭಕ್ತಿ ಸಂಬಂಧಗಳಲ್ಲಿ ಭೀಷ್ಮ, ವಿಭೀಷಣ, ಬ್ರೂಟಸ್, ಕೊರಿಯೊಲೇನಸ್ ಇವರನ್ನು ವಿಷಯವಾಗಿಟ್ಟುಕೊಂಡು ಒಂದು ದೊಡ್ಡ ತಾರತಮ್ಯ ವಿವೇಚನೆಯನ್ನು ಮಾಡಬಹುದೆನಿಸುತ್ತದೆ' ಎನ್ನುತ್ತಾರೆ. ಪ್ರಕಾಶನ ಜವಾಬುದಾರಿಯನ್ನು ಹೊತ್ತುಕೊಳ್ಳುವವರು ಮುಂದೆ ಬಂದಿದ್ದರೆ, ಬರೆಯುವಂತೆ ಒತ್ತಾಯಿಸಿದ್ದರೆ, ಇದೇ ಬಗೆಯ ವಿಮರ್ಶಾಗ್ರಂಥಗಳನ್ನು ಸಿದ್ಧಪಡಿಸುತ್ತಿದ್ದರೆನ್ನುವುದರಲ್ಲಿ ಸಂದೇಹವಿಲ್ಲ. ಪಿ.ಸೀ. ಅವರಿಗೆ ನಿಸ್ಸಂದೇಹವಾಗಿ ಆ ಯೋಗ್ಯತೆ ಇತ್ತು.

ವಾಲ್ಮೀಕಿ ಕವಿಗಳು ರಾಮನ ಗುಣಗಾನ ಮಾಡುವಾಗ 'ಅಕ್ಲಿಷ್ಟ ಕರ್ಮಣಃ' ಎಂಬ ಪದವನ್ನು ಹಲವು ಬಾರಿ ಉಪಯೋಗಿಸುತ್ತಾರೆ. ಯಾವ ಮಹತ್ತಾದ ಕಾರ್ಯವನ್ನೂ ಲೀಲಾಜಾಲವಾಗಿ, ಯಾವ ತೊಂದರೆಯಿಲ್ಲದಂತೆ ನಿರ್ವಹಿಸಬಲ್ಲವನು ಅವನು ಎನ್ನುವುದು ಕವಿಯ ಅಭಿಪ್ರಾಯ. ವಾಲ್ಮೀಕಿ ಮುನಿಗಳ ಕವಿತೆಯೂ ಇದೇ ರೀತಿ 'ಅಕ್ಲಿಷ್ಟ, ಅಕರ್ದಮ, ವಸ್ತು ವ್ಯಕ್ತಿ, ಸನ್ನಿವೇಶ, ಪ್ರಯತ್ನವಿಲ್ಲದೆ ನುಡಿಯುತ್ತವೆ, ಅಭಿವ್ಯಕ್ತಗೊಳ್ಳುತ್ತವೆ' ಎನ್ನುತ್ತಾರೆ.

> ''ಕೃತಿ ಮುಗಿದ ಸಾವಿರಾರು ವರ್ಷಗಳ ಮೇಲೆಯೂ ಅದನ್ನು ಈ ನಾಡಿಗೆ ಪ್ರಿಯವಾಗಿ ಮಾಡಿದ ಯಾವ ಘೋಷ, ಬೀಸು, ಗಾನಗಳವೆಯೊ ಅವು ಕೃತಿಯನ್ನು ವಿಶಿಷ್ಟವಾಗಿ ಮಾಡುತ್ತವೆ. ನಮ್ಮ ಸಾಹಿತ್ಯದಲ್ಲಿ ಇನ್ನಾವ ಕೃತಿಗೂ ಜನಪ್ರೀತಿಯಲ್ಲಿ ಇಂತಹ ಪರಮ ಪ್ರಾಧಾನ್ಯವಿಲ್ಲ. ಇಲ್ಲಿನ ನಾದವೈಭವವೂ ಮಾಧುರ್ಯವೂ ಉನ್ಮಾದ ಉಂಟು ಮಾಡುವಂಥವು.''
>
> (ಅದೇ, ಪು. ೨೦೪)

ಪಿ.ಸೀ. ಎಂಥ ಸಹೃದಯ ವಿಮರ್ಶಕರು, ಅವರ ವಾದ ವೈಖರಿ ಎಂಥಾದ್ದು, ಅವರ ವ್ಯಕ್ತಿಚಿತ್ರಣ ಎಷ್ಟು ಸೂಕ್ಷ್ಮವಾದದ್ದು ಎನ್ನುವುದನ್ನು ಸೂಚಿಸುವುದಕ್ಕೆ ಇಲ್ಲಿ ಉದಾಹರಿಸಿದ ಕೆಲವೇ ನಿದರ್ಶನಗಳು ಸಾಕಾದಾವು.

'ಸಾಹಿತ್ಯಾಲೋಕನ' (೧೯೭೯)

ಮದರಾಸಿನ 'ಹಿಂದು' ಪತ್ರಿಕೆ ಹಿಂದೆ ಸಾಹಿತ್ಯಕ್ಕೆಂದೇ ಮೀಸಲಾದ ಸಾಪ್ತಾಹಿಕವೊಂದನ್ನು ಹೊರತರುತ್ತಿತ್ತು. ಅದರ ಮುಖ್ಯಸೂತ್ರಧಾರರಾಗಿ ಎನ್. ರಘುನಾಥ ಅಯ್ಯರ್ ಅವರು ಕೆಲಸ ಮಾಡುತ್ತಿದ್ದರು. ಅವರನ್ನು 'ಸಂಚಾರಿ ವಿಶ್ವಕೋಶ' (Moving Encyclopedia) ಎಂದು ಅಂದಿನವರೆಲ್ಲರೂ ಗೌರವಿಸುತ್ತಿದ್ದರು. ಪ್ರಾಯಶಃ ಡಿ.ವಿ.ಜಿ. ಮುಖಾಂತರವಾಗಿಯೊ ಏನೊ ರಘುನಾಥ ಅಯ್ಯರ್ ಅವರ ದೃಷ್ಟಿಗೆ ವಿ.ಸೀ. ಬಿದ್ದರು. ಅಯ್ಯರ್ ಅವರು ದೊರಕಿಸಿಕೊಟ್ಟ ಅವಕಾಶದಿಂದ 'ಹಿಂದು' ಪತ್ರಿಕೆಗಾಗಿ ಹತ್ತು ಹನ್ನೆರಡು ವರ್ಷ ಕಾಲ ಅವಲೋಕನಗಳನ್ನು ಪ್ರಕಟಿಸತೊಡಗಿದರು. ವಿ.ಸೀ. ಆ ಸಂದರ್ಭವನ್ನು ನೆನೆಸಿಕೊಂಡು ಹೇಳುತ್ತಾರೆ :

> ''ಆಗ ಕನ್ನಡಕ್ಕೆ ಭಾರತದಲ್ಲಿ ಸಾಮಾನ್ಯರಲ್ಲಿ, ಒಂದು ಹೆಸರು, ಸ್ಥಾನ ಇರಲಿಲ್ಲ. ದಕ್ಷಿಣದ ನಮ್ಮನ್ನೆಲ್ಲ 'ಮದ್ರಾಸಿಲೋಗ್' ಎಂದೇ ಕರೆಯುತ್ತಿದ್ದರು. ಕನ್ನಡವೆಂಬುದೊಂದು ಇದೆ. ಅದಕ್ಕೆ ಸಾವಿರ ವರ್ಷ ಮೀರಿದ ಸಾಹಿತ್ಯ ಸಂಪ್ರದಾಯವಿದೆ; ಹೊಸ ಕಾಲದಲ್ಲಿ ಗುಣಾನ್ವಿತವಾದ ಸಾಹಿತ್ಯವನ್ನು ನಿರ್ಮಾಣಮಾಡುತ್ತಿದೆ; ಅದರ ಸ್ವರೂಪ ಇಂಥದು ಎಂದು ಕನ್ನಡಿಗರಲ್ಲದವರಿಗೆ ಪರಿಚಯ ಮಾಡಿಕೊಡಬೇಕು ಎಂಬ ಉದ್ದೇಶ ನನಗೆ ಪ್ರಧಾನವಾಗಿತ್ತು.''
>
> (*'ಸಾಹಿತ್ಯಾಲೋಕನ', ಮುನ್ನುಡಿ ಪು. ೯*)

ರಘುನಾಥ ಅಯ್ಯರ್ ಅವರು ವಿ. ಸೀ. ಯವರನ್ನು ಬಹು ಗೌರವದಿಂದ ನೋಡಿಕೊಂಡರಂತೆ. ಅದನ್ನು ಕಂಡು ಮದ್ರಾಸಿನ ಹಲವಾರು ವಿದ್ವಾಂಸರು ಅಸೂಯೆಪಟ್ಟದ್ದೂ ಉಂಟಂತೆ ! ಮುವ್ವತ್ತು ನಲವತ್ತು ವರ್ಷಗಳಿಗೂ ಹೆಚ್ಚಿನ ಕಾಲ ಇಂಗ್ಲಿಷ್ ಕನ್ನಡ ಸಂಸ್ಕೃತ ಸಾಹಿತ್ಯಗಳ ಮೇಲೆ, ನಾಡಿನ ಸಂಸ್ಕೃತಿಯ ಮೇಲೆ ಕನ್ನಡದಲ್ಲೂ ಇಂಗ್ಲೀಷಿನಲ್ಲೂ ವಿ.ಸೀ. ಭಾಷಣಗಳನ್ನು ಮಾಡಿದ್ದರು. ಈಗ 'ಹಿಂದು' ಪತ್ರಿಕೆಯಲ್ಲಿ ಅವಕಾಶ ದೊರೆತಾಗ ಅವಲೋಕನ ಕಾರ್ಯವನ್ನು ಯಶಸ್ವಿಯಾಗಿ ಮುಂದುವರಿಸಿದರು.

> ''ನಾವು ದೊಡ್ಡಜನ. ನಮ್ಮ ಸಾಹಿತ್ಯ ಸಂಸ್ಕೃತಿ ನಾಗರಿಕತೆ ದೊಡ್ಡವು. ಆದರೆ ಇಂದು ಅದೆಲ್ಲ ಯಾರಿಗೂ ಬೇಕಿಲ್ಲವಾಗಿದೆ. ಕ್ಷುದ್ರ ಆಸಕ್ತಿಗಳನ್ನು ಬೆಳಸಿಕೊಂಡು ನಾವು ಸಣ್ಣ ಮನಸ್ಸಿನ, ನಡತೆಯ, ಆಕಾಂಕ್ಷೆಯ ಜನರಾಗುತ್ತಿದ್ದೇವೆ. ಮಹತ್ವಾಕಾಂಕ್ಷೆಯೇ ಇಲ್ಲವಾಗಿದೆ. ನಮ್ಮ ಸ್ಥಿತಿ ಇನ್ನೂ ಬಹು ಹಿಂದೆ ಟಾಗೂರರು ವರ್ಣಿಸಿದ "We are still rag-pickers from other dust-bins" ಎಂಬಂತೆಯೇ ಇದೆ.''

ಇದು ವಿ.ಸೀ. ಯವರ ಕೊರಗು. ನಮ್ಮ ನಾಡು, ನಮ್ಮ ಜನ ಪ್ರಾಮಾಣಿಕತೆಗೆ, ಸತ್ಯಧರ್ಮವನ್ನು ಅವಲಂಬಿಸಿದ ನಡೆಗೆ ಪ್ರಸಿದ್ಧಿಯಾದವರು. ಈಗೇನೊ

ಕಾಲಾಂತರದಲ್ಲಿ ಅವನತಿಯ ಸ್ಥಿತಿಗಿಳಿದಿದ್ದೇವೆ ಎಂದಿಗಿಂತಲೂ ಇಂದು ಉತ್ತಮ ಆದರ್ಶಗಳು ನಮ್ಮನ್ನು ತಿದ್ದಬೇಕಾಗಿವೆ. ಹಳೆಯದನ್ನು ಕಳವೆಯೆಂದು ತಳ್ಳಹಾಕದೆ ಅದರಲ್ಲಿನ ಒಳ್ಳೆಯದನ್ನು ಗ್ರಹಿಸಬೇಕಾಗಿದೆ. ಸ್ವವಿಮರ್ಶೆ ನಡೆಯಬೇಕಾಗಿದೆ.

ಬರವಣಿಗೆ ಸುಲಭವಾಗಿರಬೇಕು. ಹೆಚ್ಚಿನ ಪ್ರಯಾಸವಿಲ್ಲದೆ ಅರ್ಥ ಗ್ರಹಿಸುವಂತಾಗಬೇಕು. ಈ ರೀತಿ ಬರೆಯಲು, ಅದಷ್ಟು ಮಟ್ಟಿಗೆ ದಿನಬಳಕೆಯ ಮಾತುಗಳನ್ನು ಉಳಿಸಿಕೊಂಡು, ಅದೇ ಶೈಲಿಯಲ್ಲಿ ಬರೆಯುವ ಅಭ್ಯಾಸ ಮಾಡಿಕೊಂಡಿದ್ದರು ವಿ.ಸೀ. ಒಂದು ಸಂದರ್ಭದಲ್ಲಿ ಅವರು ಹೇಳಿದ್ದಾರೆ: 'ಶಾಂತವಾಗಿ ಸರಳವಾಗಿ ಬರೆದ ಪ್ರಸಂಗಗಳಲ್ಲಿ ಕೂಡ ಚೆಲುವಿರುತ್ತದೆ. ಅಬ್ಬರ ಸುಲಭ. ತಿಳಿ ಸರಳತೆ ಕಷ್ಟ. ''Clearness is the varnish of noble minds.' ತಿಳಿಯಾಗಿ, ಸರಳವಾಗಿ ಬರೆಯುವ ಕಲೆಯನ್ನು ನಾವೆಲ್ಲರೂ ಅಭ್ಯಸಿಸಬೇಕು.

ಈ ಬಗೆಯ ಉದ್ದೇಶಗಳನ್ನಿಟ್ಟುಕೊಂಡು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದಿದ್ದ ಲೇಖನಗಳೆಲ್ಲವನ್ನೂ ಒಟ್ಟಿಗೂಡಿಸಿ 'ಸಾಹಿತ್ಯಾಲೋಕನ' ಎಂದು ಹೆಸರಿಟ್ಟು ೧೯೭೯ರಲ್ಲಿ ಪ್ರಕಟಿಸಿದರು. ಈ ಸಂಗ್ರಹದಲ್ಲಿ ಒಟ್ಟು ನಲವತ್ತ ಮೂರು ಲೇಖನಗಳಿವೆ. ಲೇಖನಗಳನ್ನು 'ಕಾವ್ಯ ಮೀಮಾಂಸೆ', 'ಛಂದಸ್ಸು', 'ಕಾವ್ಯ' ಮತ್ತು 'ನಾಡು, ನುಡಿ, ಸಾಹಿತ್ಯ' ಎಂದು ವರ್ಗೀಕರಿಸಲಾಗಿದೆ. ಪುಸ್ತಕ ಪ್ರಕಾಶಕರು 'ನಮ್ಮ ಕಾಲದ ಬಹುಶ್ರುತರೊಬ್ಬರ ಬುದ್ಧಿ ಹೃದಯಗಳಿಗೆ ಕನ್ನಡಿ 'ಸಾಹಿತ್ಯಾಲೋಕನ' ಎಂದಿದ್ದಾರೆ. 'ಇವರ ಬರಹಗಳಲ್ಲಿ ಕೆನೆಗಟ್ಟಿರುವ ಸೃಜನ ಶೀಲತೆಗೆ ವೈಚಾರಿಕತೆಯ ಶಿಸ್ತಿದೆ; ವಿಮರ್ಶೆ ವಿಶ್ಲೇಷಣೆಗೆ ಕಲೆಯ ಲೇಪವಿದೆ. ಕಾವ್ಯ-ಕಲೆಗಳ ಹುಟ್ಟು, ಸ್ವರೂಪ, ಪ್ರಕಾರ, ಉದ್ದೇಶ, ಕಾರ್ಯ, ಇವನ್ನು ಕುರಿತ ಗಾಢವಾದ ತಿಳಿವಳಿಕೆ, ಆಳವಾದ ವಿವೇಚನೆಗಳು ಇಲ್ಲಿನ ಬರಹಗಳಲ್ಲಿ ಧಾರಾಳವಾಗಿ ಕಾಣಿಸಿಕೊಳ್ಳುತ್ತವೆ. ಯಾವುದೇ ಪಂಥ ಸಿದ್ಧಾಂತಗಳಿಗೆ ಜೋಲದ ಮುಕ್ತಮನಸ್ಸಿನ ವಿದ್ವತ್ಪೂರ್ಣ ವಿಚಾರಧಾರೆ ಎಲ್ಲರನ್ನೂ ಆಕರ್ಷಿಸುತ್ತದೆ' ಎಂದಿದ್ದಾರೆ.

ಕನ್ನಡನಾಡಿನ ದೇಶ ಕಾಲಗಳ ಚರಿತ್ರೆ, ಕುಮಟಾ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣ, ಭಾರತ ಕಾವ್ಯ ಮೀಮಾಂಸೆ ವಿಷಯವಾಗಿ ಮಾಡಿದ ಭಾಷಣಗಳು, ಹುಮಾಯೂನ ಕಬೀರರ Poetry, Monads and Society ಎಂಬ ಗ್ರಂಥ ಅವಲೋಕಿಸುತ್ತ 'Aryan Path' ನಲ್ಲಿ ಬರೆದ ಸಮೀಕ್ಷೆಯ ಅನುವಾದ, ರಾಮಾಯಣ, ಶಾಕುಂತಲ, ಕಾದಂಬರಿ, ತೆಲುಗು-ಕನ್ನಡ ಸಂಬಂಧ, ವ್ಯಾಕರಣ ಛಂದಸ್ಸಿಗೆ ಸಂಬಂಧಪಟ್ಟ ವಿಷಯಗಳು, — ಇವೆಲ್ಲವುಗಳ ಮೇಲಿನ ವಿಮರ್ಶಾತ್ಮಕ ಲೇಖನಗಳನ್ನು ಈ ಅವಲೋಕನದಲ್ಲಿ ಕಲೆಹಾಕಲಾಗಿದೆ. ಇದೊಂದು ವಿ.ಸೀ.ಯವರ ಉತ್ತಮ ವಿಮರ್ಶಾಕೃತಿ ಸಂಗ್ರಹ.

''ಯಾವುದನ್ನು ಪಾಶ್ಚಾತ್ಯ ಸಾಹಿತ್ಯಮೀಮಾಂಸೆಯಲ್ಲಿ ವಿಮರ್ಶೆ ಎನ್ನುತ್ತಾರೋ, ಆ ಒಂದು ಪರಿಚಯಾತ್ಮಕ, ವಿಚಾರಾತ್ಮಕ, ನಿರ್ಣಾಯಕ ವಿವೇಚನೆ ಅಥವಾ ವೈಚಾರಿಕ ರೀತಿ, ಚಾರಿತ್ರಿಕ ಪರಿಶೀಲನೆ, ತಾರತಮ್ಯ ವಿವೇಕ, ಸ್ಥಾನ ನಿರ್ದೇಶನ'' - ಇಂಥ ವಿಸ್ತಾರವಾದ ಬರವಣಿಗೆ ನಮ್ಮಲ್ಲಿ ಬರಲಿಲ್ಲ - ಎನ್ನುತ್ತಾರೆ ವಿ.ಸೀ. ತೀ.ನಂ.ಶ್ರೀಯವರ 'ಭಾರತೀಯ ಕಾವ್ಯಮೀಮಾಂಸೆ'ಯ ಅವಲೋಕನ ಮಾಡುತ್ತ ಹೇಳುತ್ತಾರೆ :

> ''ನಾವು ಪಾಶ್ಚಿಮಾತ್ಯರನ್ನು ಅನುಕರಿಸುವುದು ತಕ್ಕುದಲ್ಲ; ನಮ್ಮವರೇ ಆದ ಪ್ರಾಚೀನರನ್ನೂ ಕಣ್ಣುಮುಚ್ಚಿಕೊಂಡು ಅನುಸರಿಸುವುದು ತಕ್ಕುದಲ್ಲ. ಅವರೆಲ್ಲರ ಹೇಳಿಕೆಗಳನ್ನು ಗ್ರಹಿಸಿ ನಮ್ಮ ಕಾಲದಲ್ಲಿ ನಾವು ಮುಂದುವರಿಯಬೇಕು. ಆದರೆ ಆಧುನಿಕ ತತ್ತ್ವಮೀಮಾಂಸೆ, ಮನಃಶಾಸ್ತ್ರ, ಸೌಂದರ್ಯಶಾಸ್ತ್ರಗಳ ಲಹರಿ, ಯೋಗ, ವಿಜ್ಞಾನ ಮುಂತಾದುವು ಕೊಡಬಲ್ಲ ನೆರವು, ಸಹಾಯವನ್ನು ಕುರಿತು ಮಾತನಾಡುವಾಗ ನಮ್ಮಲ್ಲಿಗೆ ಹೊಸ ತಳಮಳವೂ, ಕ್ಲೇಶವೂ ಖಂಡಿತ ಹರಿದು ಬಂದಾವು. ಅವೂ ಅರಣ್ಯಗಳು. ಅಲ್ಲಿರುವ ಸ್ವಾತಂತ್ರ್ಯಗಳೆಷ್ಟೋ ಅಲ್ಲಿನ ಅರಾಜಕತೆಯೂ ಅಷ್ಟೇ ವಿಸ್ಮಯಕರ - ಭೀಕರ...ಆಲೋಚನೆಯ ಸಾಹಸಗಳು ಎಷ್ಟು ಬಗೆಯವೋ ಅಲ್ಲಿನ ಉತ್ಸಾಹಗಳೂ ವಿಜೃಂಭಣೆಗಳೂ ಅಷ್ಟೇ ದೊಡ್ಡವು.....
>
> ಲೋಕಸಾಹಿತ್ಯ ಒಂದು. ಕಾಲ ದೇಶ ಇವಾವುವೂ ಇಂದು ಸಾಹಿತ್ಯ ಪರಿಶೀಲನೆಗಳಿಗೆ ಮಿತಿಗಳಲ್ಲ. ಪೂರ್ವ, ಪಶ್ಚಿಮಗಳೆರಡು ಹೋಳಾಗಿ ಒಡೆದಿದ್ದರೂ ಒಂದೇ ಪ್ರಪಂಚದ ಎರಡು ಅರ್ಧಭಾಗಗಳು. ಈ ಎರಡರಲ್ಲಿ ಯಾವ ಒಂದೂ – ಖಂಡಿತವಾಗಿ ಆಲೋಚನೆಯ ಯಾವ ಅಂಶವೂ – ಇನ್ನೊಂದರ ಕಡೆ ಗಮನಕೊಡದೆ, ಅದರ ಸಾರವತ್ತಾದ ಅಂಶವನ್ನು ಗೌರವಿಸದೆ, ಎಣಿಕೆಗೆ ತಂದುಕೊಳ್ಳದೆ ಮುಂದುವರಿಯಲಾರದು.''
>
> *('ಅದೇ', ಪು. ೬೦)*

ವಿ.ಸೀ. ಹೇಳಿರುವ ಮಾತುಗಳು ಎಲ್ಲ ಸಾಹಿತ್ಯ ವಿಮರ್ಶಕರೂ ಗಮನದಲ್ಲಿಟ್ಟುಕೊಳ್ಳಬೇಕಾದ್ದು.

ಕೃತಿಯೊಂದನ್ನು ವಿಮರ್ಶಿಸುವ ಮುನ್ನ ಎಷ್ಟೊಂದು ಬಗೆಯ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ ಎನ್ನುವುದನ್ನು ಮಾನ್ಯ ಹಿರಿಯಣ್ಣನವರ ಲೇಖನಗಳ ಅವಲೋಕನ ಮಾಡುತ್ತಾ ವಿ.ಸೀ. ವಿಶದಪಡಿಸುತ್ತಾರೆ :

> ''ಕೃತಿಗಾರನ ಮನಸ್ಸಿನಲ್ಲಿ ಕೃತಿ ಹುಟ್ಟುವ ಮುಂಚೆ ಪ್ರಚೋದನೆ ಹೇಗೆ ಬಂತು, ಅವನ ಮನಸ್ಸಿನ ಸ್ಥಿತಿ ಏನು, ಆಶೋತ್ತರ, ರುಚಿಗಳು ಎಂಥವು, ಆವರಣ ಎಂಥದು, ಸಾಮಗ್ರಿ ಎಂಥದು, ಏನು ವ್ಯಕ್ತಗೊಳಿಸಲು ಯತ್ನಿಸಿದ್ದಾನೆ; ರಚನಾತಂತ್ರ ಯಾವುದು, ನಡುವೆ ಯಾವ

ಅಂಶಗಳು ಹೇಗೆ ಸೇರಿಕೊಂಡಿವೆ, ಕಡೆಗೆ ನಿರ್ಮಾಣವಾದ ಕೃತಿ ಯಾವುದು, ಅದನ್ನು ನೋಡಿದವರು ಯಾವ ಬಗೆಯ ಕಲಾನುಭವ ಪಡೆಯುತ್ತಾರೆ, ಅವರ ಗುಣ ರುಚಿ ಮಟ್ಟ ಎಂಥವು, ಕೃತಿಯನ್ನೂ ಅದರ ಪ್ರಯೋಜನವನ್ನೂ ಹೇಗೆ ಬಳಸಿಕೊಳ್ಳುತ್ತಾರೆ ? ಕೃತಿಕಾರ, ಕೃತಿ, ಮೌಲ್ಯ ನಿರ್ಣಯ ಇವು ಸಮಸಮವೇ? ತನ್ನ ಕೃತಿಯನ್ನು ಕುರಿತು ಅವನ ಅಭಿಪ್ರಾಯ ಎಂಥದು ? ಕೃತಿ ಅದನ್ನು ಸಾಧಿಸಿದೆಯೆ ? ಒಂದು ಕಾಲ ಮತ್ತು ಅದರ ಪರಿಮಂಡಲಕ್ಕೆ ಅದರ ಸ್ಫೂರ್ತಿ ಪ್ರಯೋಜನ ಎಂಥವು? ತಾಂತ್ರಿಕವಾಗಿ ಅದರ ಬೆಲೆ ಎಷ್ಟು? ಕಲೆಗಾರನ ಕಲ್ಪನೆ ಹೇಗೆ ಮೂರ್ತ ಗೊಂಡಿದೆ.''

(ಅದೇ, ಪುಟ ೯೨)

ಇವೆಲ್ಲವೂ ಪರಿಶೀಲನೆಗೆ ಒಳಗಾಗಬೇಕು. ಇದೀಗ 'ಕಲಾನುಭವ' ಎಂಬ ಪ್ರಪಂಚದ ನೆಲಸು - ವಿಸ್ತಾರ ಎನ್ನುತ್ತಾರೆ ವಿ.ಸೀ.

ಇನ್ನೊಂದು ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯಲ್ಲಿನ ವಿನಯದ ಮೌಲ್ಯವನ್ನು ಕನ್ನಡಿಗರು ಎತ್ತಿ ಹಿಡಿದಿರುವಂತೆ ಬೇರೆ ಯಾರೂ ಎತ್ತಿಲ್ಲ ವೆನ್ನುತ್ತಾರೆ.

''ಹಿಂದಿನ ಕಾಲದಲ್ಲಿ ಹೊಯ್ಸಳ, ಚಾಳುಕ್ಯ, ರಾಷ್ಟ್ರಕೂಟ, ವಿಜಯನಗರ ರಾಜ್ಯಗಳು (ಈ ಮೌಲ್ಯಗಳನ್ನು) ಸಂಗ್ರಹಿಸಿದವು; ಉಳಿಸಿ ಬೆಳಸಿದವು. ಹೊಸ ದೃಷ್ಟಿಯ ಅಗತ್ಯ ಹುಟ್ಟಿಕೊಂಡಿರುವ ಈ ಕಾಲ ದಲ್ಲಿಯೂ ಹಾಗೆಯೇ ನಡೆಯುತ್ತಿದೆ. ಬರಲಿರುವ ಶತಮಾನ ಗಳಲ್ಲಿಯೂ ಹೀಗೆಯೇ ಇದ್ದೀತೆಂಬ ನಿರೀಕ್ಷೆಯಿದೆ. ಒಟ್ಟು ಭರತ ಖಂಡದ ಕ್ಷೇಮ ಸಾಧಿಸಲು ರಚಿಸಿದ ಯಾವ ಯೋಜನೆಯಲ್ಲಿಯೂ ಕನ್ನಡ ಜನರ ವಿಶ್ವಾಸವೂ ಭಕ್ತಿಯೂ ಖಂಡಿತವಾಗಿ ನೆರೆಯುವುವೆಂದು ನಾಡಿನ ನಾಯಕರು ನೆಚ್ಚಿಕೊಂಡಿದ್ದಾರೆ.''

(ಅದೇ, ಪು. ೨೭೮)

ಕನ್ನಡಿಗರ ಮೇಲಿನ ಹೆಚ್ಚಿನ ಅಭಿಮಾನ ವಿ.ಸೀ.ಯವರ ಈ ಪ್ರಶಂಸೆಗೆ ಕಾರಣವಾಗಿರಬೇಕು. ಇದಷ್ಟನ್ನು ಮಾತ್ರ ಹೇಳದೆ ಮುಂದುವರಿಯುತ್ತ, 'ಇಂತಹ ವಿಶ್ವಾಸದ ಕಾಣಿಕೆ ಕೊಟ್ಟು ಇತರರೊಡನೆ ಸಹಕರಿಸುವ ಬುದ್ಧಿ ಈ ಪ್ರಾಂತದ ದುರ್ಬಲತೆಯ ಅಂಶವಾದುದೂ ಉಂಟು' ಎಂದು ಎಚ್ಚರಿಸಿದ್ದಾರೆ. ಇದರಿಂದಾಗಿ 'ಹೆಚ್ಚು ಆಕ್ರಮಣಶಾಲಿ ಕೋಮುಗಳವರು, ಜನವರ್ಗಗಳವರು ಕನ್ನಡಿಗರ ಮೇಲೆ ಬಿದ್ದು ಅವರನ್ನು ಶೋಷಿಸುವಂತಾಗಿದೆ.' ಹಾಗಾದರೆ ವಿನಯ ಶೀಲತೆಯೂ ದೋಷವೆ ? ವಿ.ಸೀ. ಹೇಳುತ್ತಾರೆ :

''ಸಹಜವಾಗಿ ನ್ಯಾಯವಾಗಿ ಅವರಿಗೆ ದೊರಕಬೇಕಾದ ಹಕ್ಕು ಅಧಿ ಕಾರಗಳನ್ನು ಶೋಷಕರು ಅವರಿಗೆ ಇಲ್ಲವಾಗಿಸುತ್ತಾರೆ. ನಮ್ಮ ಜನ ತಮಗೆ

ಬರಬೇಕಾದ್ದಕ್ಕಾಗಿ ಹಿಸ್ಸೆಯ ಒತ್ತಾಯ ಹಾಕಿಲ್ಲ; ಗಟ್ಟಿಯಾಗಿ ಕೂಗಿಲ್ಲ; ನಾಯಕತನಕ್ಕಾಗಿ ನಡೆದ ಕಾದಾಟಗಳಲ್ಲಿ ನುಗ್ಗಿ ಹೋಗಿಲ್ಲ. ಇದನ್ನು ಒಂದು ಬಗೆಯ ಮನೋಧರ್ಮದ ದೋಷವೆನ್ನಬಹುದೇ ಹೊರತು ಆತ್ಮವಿಶ್ವಾಸದಲ್ಲಿಯಾಗಲಿ ಸಾಮರ್ಥ್ಯದಲ್ಲಿಯಾಗಲಿ ದೋಷವೆನ್ನ ಲಾಗದು. ಸ್ವಲ್ಪಮಟ್ಟಿಗೆ ಆದರೂ ಇದು ಆತ್ಮದ ಒಂದು ಸದ್ಗುಣ.''

(ಅದೇ, ಪು. ೨೭೮)

ವಿ.ಸೀ.ಯವರ ಮೇಲಿನ ವಿಶ್ಲೇಷಣೆಯ ಸತ್ಯತೆಯನ್ನು ಇಂದಿಗೂ ನಡೆಯುತ್ತಿರುವ ಕನ್ನಡಿಗರ ಶೋಷಣೆಯಿಂದ ತಿಳಿಯಬಹುದು. ನಾಡಿನ ನದಿ ವಿವಾದಗಳಲ್ಲಿ, ಗಡಿನಾಡುಗಳ ವಿಂಗಡಣೆಯ ವಿಷಯಗಳಲ್ಲಿ, ನಗರದ ಆಯಕಟ್ಟಿನ ಭಾಗಗಳನ್ನು ಆಕ್ರಮಿಸಿಕೊಳ್ಳುವುದರಲ್ಲಿ ನಮ್ಮವರು ಹಿಂದೆ ಬೀಳುತ್ತಿರುವುದನ್ನು ದಿನವೂ ಕಾಣುತ್ತಿದ್ದೇವೆ. ಒಳ್ಳೆಯತನಕ್ಕೆ, ವಿನಯಶೀಲತೆಗೆ ಸ್ಥಾನವೇ ಇಲ್ಲವೇನೊ ಎಂದು ಶಂಕಿಸುವಂತಾಗಿದೆ.

ಅಮರೇಂದ್ರೋನ್ನತಿ ಖೇಚರೇಂದ್ರವಿಭವಂ,
ಭೋಗೀಂದ್ರ ಭೋಗಂ,
ಮಹೇಂದ್ರ ಮಹೈಶ್ವರ್ಯಂ
ಇವೆಲ್ಲಂ ಅಧ್ರುವಂ
ಇವಂ ಬೇಳ್ಪಂತು ಬೇಳಲ್ಲೆನ್,
ಉತ್ತಮ ದೀಕ್ಷಾವಿಧಿಯುಂ,
ಸಮಾಧಿ ಮರಣಂ, ಕರ್ಮಕ್ಷಯಂ,
ಬೋಧಿಲಾಭಂ ಅಮೋಘಂ
ದೊರೆಕೊಳ್ವುದಕ್ಕೆಮಗೆ ಮುಕ್ತಿ ಶ್ರೀಮನೋವಲ್ಲಭಾ

'ನನಗೆ ಇಂದ್ರ ಪದವಿ ಬೇಡ. ಭೋಗಭಾಗ್ಯ ಬೇಡ. ಇವನ್ನು ಬೇಡುವ ಬೆಳ್ಕು ನಾನಲ್ಲ. ನನಗೆ ಬೇಕಾದ ಉನ್ನತಿ ಉತ್ತಮ ದೀಕ್ಷಾವಿಧಿ, ಸಮಾಧಿ ಮರಣ, ಕರ್ಮಕ್ಷಯ, ತಪ್ಪದೆ ಬರುವ ಬೋಧಿಲಾಭ, ಅಂಥ ಸಾವು ನನಗೆ ಬರಲಿ' ಎಂದು ಕನ್ನಡಿಗರ ಹೆಮ್ಮೆಯ ಕವಿ ಪಂಪ ಮುಕ್ತಿ ಶ್ರೀಮನೋವಲ್ಲಭನಾದ ಜಿನನನ್ನು ಪ್ರಾರ್ಥಿಸಿರುವ ಪದ್ಯವನ್ನು ಉದ್ಧರಿಸಿ, ಈ ಆದರ್ಶ ಕನ್ನಡಿಗರಿಗೆ ಸ್ಫೂರ್ತಿದಾಯಕವಾಗಬೇಕಾದ್ದು ಎಂದಿದ್ದಾರೆ.

ಗೊಮ್ಮಟೇಶ್ವರ ವಿಗ್ರಹವಿರುವುದೂ ಕನ್ನಡನಾಡಿನಲ್ಲಿಯೇ. ಒಂದೇ ಕಲ್ಲಲ್ಲಿ ಕಡೆದಿರುವ ಈ ವಿಗ್ರಹದ ಉನ್ನತಿಯನ್ನು ಕುರಿತು ವಿ.ಸೀ. ಇತ್ತಿರುವ ವಿವರಣೆ ಎಷ್ಟು ಸಂಪನ್ನವಾದ್ದು :

''ಆ ಬೆಟ್ಟವೇ ನೆಲದಿಂದ ಮೇಲೆ ಐನೂರು ಅಡಿಗಳಿಗಿಂತ ಹೆಚ್ಚು ಎತ್ತರವಿರುವ ಅಖಂಡವಾದ ಒಂದು ಕಗ್ಗಲ್ಲ ಬಂಡೆ ; ಭೂಮಿ ತಪಸ್ಸು ಮಾಡಿ ಎದ್ದಂತೆ. ಶಾಂತಿಯ ಮಹಾಪ್ರತೀಕ ವಿಗ್ರಹ. ಜಗದ್ವಿಜಯಿಯನ್ನು

ಗೆದ್ದ ಒಟ್ಟಾತ. ತಪ್ಪಸ್ಸಿದ್ಧಿ ಪಡೆದುದರ ಸ್ಮಾರಕ. ಈ ತಿಲಿಯಲ್ಲಿ ಆ ಜೀವನದ ಸಂದೇಶ ಪುನಃ ಪುನಃ ಎಷ್ಟೋ ನಾಡುಗಳಲ್ಲಿ ನುಡಿಗಳಲ್ಲಿ ಕೇಳಿಸಿದೆ; ಪ್ರತಿಧ್ವನಿ ಕೊಟ್ಟಿದೆ. ಆದರೆ ಅದರಿಂದ ಪ್ರಯೋಜನ ಪಡೆದಿರುವುದು ಮಾತ್ರ ಸೊನ್ನೆ.''

(ಅದೇ. ಪು. ೨೮೯)

ಲೋಕ ಇದರಿಂದ ಪ್ರಯೋಜನ ಪಡೆಯದೆ ಹೋಗಿರುವುದು ನಿಜವಿರ ಬಹುದು. ಆದರೆ 'ಲೋಕವನ್ನು, ಕಾಮವನ್ನು, ಕರ್ಮವನ್ನು , ಸಂಸಾರವನ್ನು, ಅಜ್ಞಾನವನ್ನು, ಎಲ್ಲ ಕಾರ್ಪಣ್ಯಗಳನ್ನು ಗೆದ್ದದ್ದು ಮನುಷ್ಯಜೀವನ ಪರಮತ್ವ ಸಿದ್ಧಿಯನ್ನು ಪಡೆದ ನಿದರ್ಶನ ' ಎಂದು ಹೇಳಿ ನಮ್ಮ ಸಂಸ್ಕೃತಿಯ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ.

ಪಂಪ 'ಮನುಷ್ಯಜಾತಿ ತಾನ್ ಒಂದೆ ವಲಂ' ಎಂದು ಸಾವಿರ ವರ್ಷಗಳ ಹಿಂದೆಯೇ ನುಡಿದಿದ್ದಾನೆ . ಈ ಸತ್ಯವನ್ನು ಪ್ರಪಂಚ ತಿಳಿಯುವುದು ಎಂದಿಗೆ? 'ಕನ್ನಡದ ಕವಿ ಲೋಕಹಿತದ ಇಂಥ ಕನಸೊಂದನ್ನು ಕಂಡನಲ್ಲ ಎಂದು ನಾವು ಹೆಮ್ಮೆಪಡಬೇಕಾಗಿದೆ ' ಎಂದಿದ್ದಾರೆ ವಿ.ಸೀ.

ಬಸವಣ್ಣನವರು

ಅಚ್ಚ ಕನ್ನಡಿಗರಾಗಿ ಧರ್ಮಪ್ರಚಾರಕ್ಕೆ ಹೆಸರಾದವರು ಕಲ್ಯಾಣದ ಬಸವಣ್ಣನವರು. ಅವರು ಯಾವ ರೀತಿ, ಹೊಸ ಬಗೆಯ ಶ್ರದ್ಧೆ ಉತ್ಸಾಹ ಗಳಿಂದ, ಸಾಮಾನ್ಯರಿಗೆ ಹಿಂದೆ ಅವಕಾಶವಿಲ್ಲದಿದ್ದ ಮಾರ್ಗದಲ್ಲಿ ಗಂಡು-ಹೆಣ್ಣು, ಕುಲದ ಕೀಳು-ಮೇಲು ಎಂಬ ಭೇದಗಳನ್ನು ನಿರಾಕರಿಸಿ, ಎಲ್ಲರಿಗೂ ಅವಕಾಶವನ್ನು ದೊರಕಿಸಿಕೊಟ್ಟರು ಎನ್ನುವುದನ್ನು ವಿ.ಸೀ. ಸಾಹಿತ್ಯಾಲೋಕನ ದಲ್ಲಿ ಸೇರಿರುವ ಇನ್ನೊಂದು ಲೇಖನವೊಂದರಲ್ಲಿ ಎತ್ತಿ ತೋರಿಸಿದ್ದಾರೆ.

> ''ಅಚ್ಚಕನ್ನಡದಲ್ಲಿ - ತಿಳಿಯಾದ ಸರಳವಾದ ಕನ್ನಡದಲ್ಲಿ ಮನಸ್ಸನ್ನು ನಿವೇದನ ಮಾಡಿಕೊಳ್ಳುವ ಆವರಣವನ್ನು ಕಟ್ಟಿತು. ಎಲ್ಲ ಜಾತಿ ಗಳವರೂ, ಕಸುಬುಗಳವರೂ ಅವರವರ ವೃತ್ತಿ ರೀತಿ ಅನುಭವಗಳನ್ನು ತಾವು ಕಂಡಂತೆ ಹೇಳಿಕೊಳ್ಳುವಾಗ ಆವರೆಗೂ ನಾಡಿನಲ್ಲಿ ಲಭಿಸದಿದ್ದ ಪದ ಸಂಪತ್ತಿ, ಅನುಭವ ವೈವಿಧ್ಯ , ಸಮಾನತೆ ದೊರಕುವಂತಾಯಿತು.''
>
> (ಅದೇ ಪು. ೩೨೩)

'ಶಾಸ್ತ್ರಧರ್ಮ, ತರ್ಕ ಮುಂತಾದವನ್ನು ಕಂಡರೆ ನನಗೆ ಸ್ವಲ್ಪ ಭಯ. ಆತ್ಮ-ಅಧ್ಯಾತ್ಮ, ಪುರುಷ-ಪುರುಷೋತ್ತಮ, ಸಮಾಧಿ-ತುರೀಯಾವಸ್ಥೆ, Mysticism ಮಂತಾದವು ನನ್ನ ಕಲ್ಪನೆಗಿಂತ ಎತ್ತರ. ಅದನ್ನು ಕುರಿತ ಗ್ರಂಥಗಳನ್ನು ಓದಿದ್ದೇನಾದರೂ ನನಗೆ ಮನಸ್ಸಿನ ಹಿತವನ್ನು ತಂದಿರುವುದು ಮಾನವನ

ಹೃದಯ ವೈಶಾಲ್ಯ, ಅದರಲ್ಲಿನ ಕಾವು ನೋವು, ಅದರ ಆಸೆ ಆಕಾಂಕ್ಷೆಗಳು, ಕಷ್ಟವೊ ಸುಖವೊ ಒದಗಿರುವಾಗ ಲೋಕನಿಂದೆ, ಅಯಶಸ್ಸು, ಸೋಲು-ಗೆಲವು ಕಂಡಾಗ ಮನುಷ್ಯನು ಯಾವ ರೀತಿ ನಡೆದುಕೊಳ್ಳುತ್ತಾನೆ, ನುಡಿಯುತ್ತಾನೆ, ಅಲ್ಲಿನ ಜೀವಗುಣ, ಹೃದ್ವಿಲಾಸ ಕೋಮಲವಾದ್ದೆ? ಕಠಿಣವಾದ್ದೆ? ಅದರ ನಯ ನೀತಿಗಳೇನು? ನಿಷ್ಠೆ ಪಕ್ಷಪಾತಗಳೇನು? ಅವು ಅವನನ್ನು ಉತ್ತಮ ಮನುಷ್ಯನನ್ನಾಗಿ ಮಾಡಿವೆಯೆ ಎಂಬಂತಹ ಸಂಗತಿಗಳು ನನ್ನ ಮನಸ್ಸಿಗೆ ಹೆಚ್ಚು ಪ್ರಿಯ' ಎನ್ನುತ್ತಾರೆ ವಿ.ಸೀ. ಇದೇ ಕಾರಣವಾಗಿ ಅವರಿಗೆ ಬಸವಣ್ಣನವರ ವಚನಗಳಲ್ಲಿ ಹೆಚ್ಚಿನ ಆಸಕ್ತಿ. ಅವರು ಹೇಳುತ್ತಾರೆ :

> ''ಅಚ್ಚಕನ್ನಡನುಡಿ ಹೇಗೆ ವಚನಗಳಲ್ಲಿ ರೂಪುಗೊಳ್ಳುತ್ತದೆ, ಎಷ್ಟು ದೊಡ್ಡ ತತ್ತ್ವಗಳನ್ನು ಎಷ್ಟು ಸುಲಭವಾಗಿ ನಿರಾಳವಾಗಿ ನುಡಿಯಬಲ್ಲದು, ಅದು ನಿಜವಾದ ಅನುಭವದಿಂದ ತೀರ್ಮಾನವಾಗಿ ಸಹಜವಾಗಿ ಹೊಮ್ಮಿದಾಗ ತತ್ತ್ವದ ಮಾತುಗಳೂ ವಿದ್ವತ್ತಿನ ಅಬ್ಬರವನ್ನು ತೋರಬೇಕಾಗಿಲ್ಲ ಎಂಬುದಕ್ಕೆ ದೊಡ್ಡ ನಿದರ್ಶನವಾಗುತ್ತದೆ; ಮಾದರಿಯಾಗುತ್ತದೆ. ಮಾತು ಮುತ್ತಿನಂತೆ: ಒಂಟಿಯಾಗಿಯೂ ಹೊಳೆವುದು; ಬೆಲೆಯುಳ್ಳದ್ದು; ಮಾಲೆಯಾಗಿಯೂ ಪ್ರಕಾಶ ಬೀರತಕ್ಕದ್ದು; ತಾನು ಹೆಚ್ಚಾಗಿ ಬೆಡಗುಗೊಳ್ಳದೆ ಧರಿಸಿದವರನ್ನು ಮೆರೆಸುವಂಥದು. ವಾಕ್ಯ ವಾಕ್ಯಗಳು, ವಾಕ್ಯಗಳ ಭಾಗಗಳ ಪುನರುಕ್ತಿ, ಒಂದರ ಮೇಲೊಂದು ನುಗ್ಗಿ ಅರ್ಥವನ್ನೂ, ಹೃದ್ಭಾವವನ್ನೂ ಪೋಷಿಸುತ್ತ ಅನುಭವದ ಹೊಮ್ಮುಗೆಯಲ್ಲಿ ಲಯಗೊಂಡು ನುಡಿದು ಹೇಗೆ ತತ್ತ್ವಾರ್ಥವನ್ನು ಸ್ಥಾಪಿಸುತ್ತದೆ; ಒಂದೊಂದು ವಚನವನ್ನೂ ಸಂಗ್ರಹವಾಗಿ, ಒಂದು ಭಾವಗೀತೆಯಂತೆ, ಮುಕ್ತಕದಂತೆ ಎಂಬುದನ್ನು ಎಲ್ಲರ ವಚನಗಳಿಗಿಂತಲೂ ಬಸವಣ್ಣನವರ ವಚನಗಳಲ್ಲಿ ಕಾಣಬಹುದು. ಆಗ ಹೇಗೊ ಈಗಲೂ ಹಾಗೇ. ಒಬ್ಬರಿಗೆ, ಒಂದು ಜನವರ್ಗಕ್ಕೆ ಹೇಗೊ ಸಾರ್ವಕಾಲಿಕವಾದ ಸತ್ಯವನ್ನು ಸಾರಿ ಲೋಕವನ್ನು ಉದ್ಧರಿಸಿದ ಮಹಾನುಭಾವರಲ್ಲಿ ಬಸವಣ್ಣನವರ ಹಿರಿಮೆ ನಿಂತು ಕಾಣುತ್ತದೆ.''
>
> *(ಅದೇ, ಪು. ೩೩೮-೩೯)*

ಈ ಅನುಪಮವಾದ ಗದ್ಯಶೈಲಿಯಲ್ಲಿ ವಿ.ಸೀ. ಬಸವಣ್ಣನವರ ವಚನಗಳ ಹೆಚ್ಚುಗಾರಿಕೆಯನ್ನು ಎತ್ತಿಹಿಡಿದು ತೋರಿಸಿದ್ದಾರೆ.

ಪುರಂದರದಾಸರು

ಬಸವಣ್ಣನವರ ವಚನಗಳ ಹಿರಿಮೆಯನ್ನು ಎತ್ತಿ ತೋರಿಸಿದಂತೆಯೇ ಪುರಂದರದಾಸರ ಕೃತಿಗಳ ಗೇಯತ್ವವನ್ನು, ಆ ಪದಗಳ ಮಹತ್ತ್ವ ಎಲ್ಲಿ ಅಡಗಿದೆ ಎನ್ನುವುದರ ಕಡೆಗೂ ನಮ್ಮ ಗಮನವನ್ನು ಇನ್ನೊಂದು ಲೇಖನದಲ್ಲಿ ಹರಿಸಿದ್ದಾರೆ.

''ಸಾಹಿತ್ಯಕೃತಿಗಳನ್ನು ನಿರ್ಮಾಣಮಾಡುವುದು ಅವರ ಉದ್ದೇಶವಲ್ಲ. ಅವರಿಗೆ ಸಾಹಿತ್ಯ , ಸಂಗೀತದಂತೆ ಒಂದು ಸಾಧನ ಸಾಮಗ್ರಿ. ಆತ್ಮನಿವೇದನೆ, ಧರ್ಮವಿವರಣೆ, ಭಕ್ತಿಪ್ರಚಾರ ಅವರ ಉದ್ದೇಶ. ವ್ಯಕ್ತಿಗಳ, ಸಮಾಜದ ಬಾಳು ಶುದ್ಧವಾಗಿ ದೇವರಿಗೆ ಮೆಚ್ಚುವಂತೆ ಆಗಲಿ ಎಂಬುದು ಅವರ ದೃಷ್ಟಿ. ಅದು, ಆ ಮಾತು ಸಾಹಿತ್ಯವೂ ಆದರೆ ಸಂತೋಷ. ಅವುಗಳಲ್ಲಿ ಹಲವು ಉತ್ತಮ ಭಾವಗೀತೆಗಳು..... ಲೋಕಾನುಭವ, ಲೋಕೋಕ್ತಿ, ಸಾಮಾನ್ಯ ಉಪಮಾನ, ಜಾಣು ತುಂಬಿವೆ; ಜೀವವಿವೇಕವಿದೆ. ನೇರ ಹೃದಯದಲ್ಲಿ ಹುಟ್ಟಿ ನೇರ ಹೃದಯವನ್ನು ಮುಟ್ಟುತ್ತವೆ.''

''ನಿರಾಳವಾಗಿ ತಂಬೂರಿ ಹಿಡಿದು ಹಾಡುತ್ತ ಹೇಳುವ ದಾಸರ ಶುಚಿಶೀಲ, ಭಾವಭರ, ಲೋಕಕಾರುಣ್ಯ ಅವನ್ನು , ಅವರನ್ನು ಕೃತಿಯಾಗಿ ಮಾಡುತ್ತವೆ. ....ಇವರಿಗೆ ಲೋಕದ ಚೆಲುವೆಲ್ಲ ಗೊತ್ತು. ಪ್ರಧಾನವಾಗಿ ಇವು ಭಕ್ತಿ-ಗೀತಗಳು; ಗುಣಾವಗುಣವಿವೇಚಕವಾದವು ; ಆತ್ಮನಿವೇದನದವು ; ಸಮರ್ಪಣದವು; ಸುತ್ತಲ ಜೀವನದ ಒರೆಕೋರೆಯನ್ನು ತೋರಿಸುವುವು. ಎಲ್ಲರ ಜೀವ ಚೊಕ್ಕವಾಗಬೇಕು, ನಡೆನುಡಿ ವ್ಯವಹಾರ ನೇರವಾಗಬೇಕು; ಬಾಳು ಶುದ್ಧವಾದರೆ, ಮಡಿ ಆಚಾರ ಕುಲ ಪೂಜೆ ಇವು ಗೌಣ ಎಂಬುದು ಅವರ ಮಾತು.''

(ಅದೇ, ಪು. ೩೫೩-೫೪)

''ಒಂದು ಬಾಳು ಹೇಗೆ ಸಂಸಾರದ ನಿರ್ಬಂಧಗಳಿಂದ ಬಿಡುಗಡೆ ಹೊಂದಿ ದೈವಕೃಪೆ ಪಡೆಯಿತು ಎಂಬುದರ ಇಡೀ ಚಿತ್ರ ಇವರ ಪದಗಳಲ್ಲಿ ದೊರೆಯುತ್ತದೆ. ಯಾವ ಸನ್ನಿವೇಶದಲ್ಲಿ ಯಾವ ಕೃತಿ, ಸ್ತೋತ್ರ, ಪದ, ದೇವರನಾಮ, ಸುಳಾದಿ, ಉಗಾಭೋಗ ಹುಟ್ಟಿತು'' ಎಂಬುದು ಮಾತ್ರ ತಿಳಿಯದು. ಶೋಧಕರು ಈ ದಾರಿಯಲ್ಲಿ ಮುಂದುವರಿದು ಹೊಸ ಬೆಳಕನ್ನು ಚೆಲ್ಲುವುದಾದರೆ ನಮ್ಮ ಭಾಗ್ಯ ಇಮ್ಮಡಿಸುತ್ತದೆ.

'ವಿಮರ್ಶೆಯಲ್ಲಿ, ವಿಮರ್ಶಕರಲ್ಲಿ ಪ್ರೀತಿ ಇರಬೇಕು' - 'ಸಾಹಿತ್ಯದಲ್ಲಿ ಮುಖ್ಯವಾದ ರಸ ಪ್ರೀತಿಯೇ ಹೊರತು ಬೇರೊಂದಲ್ಲ' ಎಂದು ಪದೇ ಪದೇ ಹೇಳುತ್ತಿದ್ದವರು ವಿ.ಸೀ.

''If a review doesn't set one to think about a whole subject, why should it exist and why should one write it at all?'' (ವಿಮರ್ಶೆ ಓದುಗನ ಮನಸ್ಸನ್ನು ಎಚ್ಚರಿಸಿ ಅವನು ಇಡೀ ವಿಷಯದ ಬಗ್ಗೆ ಚಿಂತಿಸುವಂತೆ ಮಾಡದೆ ಹೋದರೆ ಅಂಥ ವಿಮರ್ಶೆ ಏಕಿರಬೇಕು? ಅದನ್ನು ಬರೆಯುವ ಅವಶ್ಯಕತೆಯಾದರೂ ಏಕೆ?)

(ಸುಮನಾ, 'ವಿ.ಸೀ.', ಪು. ೧೩೩)

''ವಿಮರ್ಶಕನಾದವನು ಅತಿ ಸೂಕ್ಷ್ಮವಾದ ಅಂಶಗಳ ಕಡೆ ಗಮನ ಕೊಡುತ್ತಿರಬೇಕು. ಸಾಹಿತ್ಯ ಅಧಿದೇವಿಯ ಹೆಜ್ಜೆ ಸಪ್ಪಳವನ್ನು ದೇವತೆಗಳು ಮಾತ್ರ ತಿಳಿಯಬಲ್ಲರು. ಆ ಹೆಜ್ಜೆ ಸದ್ದನ್ನು ಆಲಿಸಲು ನಾವು ಎಷ್ಟು ಜಾಗರೂಕರಾಗಿದ್ದರೂ ಸಾಲದು. ಬರವಣಿಗೆ ಬಾಳನ್ನು, ಬೆಳಕನ್ನು ಕಾಣಿಸಬೇಕು. ಇಲ್ಲವಾದರೆ ಏಕೆ ಬರೆಯಬೇಕು.'' ಇದು ವಿ.ಸೀ.ಯವರ ಸಾಹಿತ್ಯಾಲೋಕನದ ಹಿಂದಿನ ಮನೋಧರ್ಮ. ಅವರು ಯಾವುದೇ ಕೃತಿಯ ವಿಮರ್ಶೆ ಮಾಡಿದಾಗ, ಅದನ್ನು ಓದುವ ನಾವು ಹೊಸ ಬೆಳಕನ್ನು ಕಂಡುಕೊಳ್ಳುತ್ತೇವೆ. ಕೃತಿಯನ್ನು ಹೊಸ ದೃಷ್ಟಿಯಿಂದ ಕಂಡು ಹೆಚ್ಚಿನ ರಸಾನುಭವ ಮಾಡುತ್ತೇವೆ. ವಿ.ಸೀ.ಯವರ ವಿಮರ್ಶನದ ಹೆಚ್ಚುಗಾರಿಕೆ ಇದೇ.

ಆಲೋಕನದ ಅವಲೋಕನವೇ ಬಹುವಾಗಿ ಬೆಳೆದುಹೋಯಿತು. ಇಲ್ಲಿ ಉದ್ಧರಿಸಿರುವ ಭಾಗಗಳು ವಿ.ಸೀ. ಅವರ ಮನಸ್ಸು ಎಷ್ಟು ಸುಸಂಸ್ಕೃತವಾದದ್ದು, ಅವರ ಬುದ್ಧಿ ಎಷ್ಟು ವಿಶಾಲವಾದದ್ದು, ಕೃತಿಗಳಲ್ಲಿ ಅಡಗಿರುವ ಸೊಗಸನ್ನು ಹೊರತಂದು ನಮಗೆ ತಿಳಿಸುವುದರಲ್ಲಿ ಅವರು ತೋರಿರುವ ಕೌಶಲ್ಯ ಎಷ್ಟು ಹೆಚ್ಚಿನದು - ಇವೆಲ್ಲದರ ಪರಿಚಯ ಸ್ವಲ್ಪಮಟ್ಟಿಗಾದರೂ ಆದೀತು. ವಿ.ಸೀ. ಯವರಂಥ ವಿಮರ್ಶಕನನ್ನು ಪಡೆದಿರುವುದು ನಮ್ಮ ನುಡಿಯ ಭಾಗ್ಯ.

'ಕವಿಕಾವ್ಯ ಪರಂಪರೆ' (೧೯೭೧-೧೯೮೩)

ಕನ್ನಡ ಪುಸ್ತಕ ಪ್ರಕಾಶನದಲ್ಲಿ ದಿಟ್ಟ ಹೆಜ್ಜೆ ಇಟ್ಟು, ಅಂದವಾದ ಮುದ್ರಣ, ಆಕರ್ಷಕವಾದ ಹೊರಹೊದಿಕೆಯುಳ್ಳ ಉತ್ತಮ ಸಾಹಿತ್ಯಗ್ರಂಥಗಳನ್ನು ಹೊರತಂದ ಕೀರ್ತಿ ಐ.ಬಿ.ಎಚ್. ಪ್ರಕಾಶನದವರದು. ೧೯೭೩ರ ಸುಮಾರಿಗೆ ಈ ಪ್ರಕಾಶನದವರು ಕನ್ನಡ ಪ್ರಮುಖ ಕಾವ್ಯಗಳ ಪರಿಚಯಮಾಡಿಕೊಡುವ ಹೊಸ ಯೋಜನೆಯನ್ನು ಹಾಕಿಕೊಂಡರು. ವಿ.ಸೀ.ಯವರನ್ನು ಪ್ರಧಾನ ಸಂಪಾದಕರನ್ನಾಗಿ ಮಾಡಿ ಅವರನ್ನು ಮುಂದಿಟ್ಟುಕೊಂಡು ೧೯೭೩-೧೯೮೧ರ ಅವಧಿಯಲ್ಲಿ ಸುಮಾರು ಹದಿನೆಂಟು ಪುಸ್ತಕಗಳನ್ನು ಹೊರತಂದರು. ೧೯೭೫ರಲ್ಲಿ ಕವಿರಾಜಮಾರ್ಗ, ನಾಗವರ್ಮ-೧, ನಾಗವರ್ಮ-೨, ರನ್ನ, ಕುಮಾರವ್ಯಾಸ ಹೊರಬಂದವು. ಹರಿಹರದೇವ ೧೯೭೪ ರಲ್ಲಿ, ಜನ್ನ, ಯಕ್ಷಗಾನ ೧೯೭೫ ರಲ್ಲಿ, ರಾಘವಾಂಕ, ನಾಗಚಂದ್ರ, ಪಂಪ ೧೯೭೬ ರಲ್ಲಿ, ವಡ್ಡಾರಾಧನೆ, ವ್ಯಾಕರಣಗಳು ೧೯೭೭ರಲ್ಲಿ, ಮುದ್ದಣ, ಜನಪದಸಾಹಿತ್ಯ, ಲಕ್ಷ್ಮೀಶ ೧೯೭೮ರಲ್ಲಿ, ತಿರುಮಲಾರ್ಯ ೧೯೮೦ರಲ್ಲಿ, ನೇಮಿಚಂದ್ರ ೧೯೮೧ರಲ್ಲಿ ಹೊರಬಿದ್ದವು. ವಿ.ಸೀ. ಅವರು ತೀರಿಕೊಂಡನಂತರ ೧೯೮೪ರಲ್ಲಿ ರತ್ನಾಕರವರ್ಣಿ, ೧೯೮೭ರಲ್ಲಿ ದಾಸಸಾಹಿತ್ಯ, ಚಾಮರಸ, ೧೯೮೮ರಲ್ಲಿ ಬಸವೇಶ್ವರ ಹೊರಬಿದ್ದವು. ಇನ್ನೂ ಎಂಟು ಪುಸ್ತಕಗಳನ್ನು ವಿ.ಸೀ. ಸಿದ್ಧಗೊಳಿಸಿದ್ದರು. ಅವು ಬೆಳಕು ಕಾಣದೆ ಇನ್ನೂ ಪ್ರಕಾಶಕರ ಕಡೆಯೇ ಉಳಿದುಕೊಂಡಿವೆ.

ಈ ಒಂದೊಂದು ಗ್ರಂಥಕ್ಕೂ ಕೊನೆಯಲ್ಲಿ ಸಮೀಕ್ಷೆಯನ್ನು ವಿ.ಸೀ. ಬರೆದಿದ್ದಾರೆ. ಎಲ್ಲ ಪುಸ್ತಕಗಳನ್ನೂ ಅವಲೋಕಿಸಿದರೆ ಒಟ್ಟು ಕನ್ನಡ ಸಾಹಿತ್ಯದ ವಿಸ್ತಾರ ಎಷ್ಟು ಎನ್ನುವುದು ವಿದ್ಯಾರ್ಥಿಯಾದವನಿಗೆ ತಿಳಿಯುತ್ತದೆ. ವಿ.ಸೀ. ತಮ್ಮ ಕೊನೆಯ ದಿನಗಳಲ್ಲಿ ಸಾಧಿಸಿದ ಮಹತ್ತರ ಕಾರ್ಯ ಇದು.

ವಿ.ಸೀ. ಯವರೊಡನೆಯೇ ಈ ಮಹತ್ವದ ಕೆಲಸವೂ ನಿಂತುಹೋಯಿತು. ಇಂಥ ಕೆಲಸ ನಿಲ್ಲಬಾರದು. ಕನ್ನಡ ವಿಶ್ವವಿದ್ಯಾನಿಲಯಗಳು, ಅಧ್ಯಯನ ಸಂಸ್ಥೆಗಳು, ಕನ್ನಡ ಸಾಹಿತ್ಯ ಪರಿಷತ್ತಿನಂಥ ವಿದ್ವತ್ ಸಂಸ್ಥೆಗಳು ಈ ಕಡೆ ಗಮನ ಹರಿಸಬೇಕು. ವಿ.ಸೀ. ತಮ್ಮ ಇಳಿವಯಸ್ಸಿನಲ್ಲಿ ಉತ್ಸಾಹದಿಂದ ಕೈಗೊಂಡ ಕೆಲಸವನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗಬೇಕು.

ವ್ಯಕ್ತಿತ್ವ

ಯದ್ಯದಾಚರತಿ ಶ್ರೇಷ್ಠಃ ತತ್ತದೇವ ಇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಃ ತದನುವರ್ತತೇ ॥

(ದೊಡ್ಡವನು ಏನನ್ನು ಆಚರಿಸುತ್ತಾನೊ ಅದನ್ನೆ ಇತರರೂ ಆಚರಿಸುತ್ತಾರೆ. ಯಾವುದನ್ನು ಅವನು ಸರಿಯೆಂದು ತಿಳಿದು ಮಾಡುತ್ತಾನೊ ಸಾಮಾನ್ಯ ಜನರು ಅದನ್ನೆ ಅನುಸರಿಸುತ್ತಾರೆ.)

ಗೀತಾ III, ೨೧

- ಹೀಗೆನ್ನುತ್ತದೆ ಪ್ರಸಿದ್ಧವಾದ ಗೀತಾವಾಕ್ಯ. ಇದೇ ಕಾರಣದಿಂದ ಹಿರಿಯರಾದವರ ಜೀವನಚರಿತ್ರೆಯಿಂದ ನಾವು ಕಲಿಯಬೇಕಾದ ಪಾಠಗಳು ಅನೇಕವಿರುತ್ತವೆ. ಜೀವನದ ಹಲವಾರು ಸಂದರ್ಭಗಳಲ್ಲಿ ಅವರು ಯಾವ ರೀತಿ ನಡೆದುಕೊಂಡರು? ಅನುಕರಣೀಯವಾದ ಅವರಲ್ಲಿನ ಚರ್ಯೆಗಳು ಯಾವುವು ? ಎನ್ನುವುದರ ಕಡೆ ಗಮನ ಹರಿಸುವುದು ಜೀವನಚರಿತ್ರಕಾರನ ಮುಖ್ಯ ಕರ್ತವ್ಯ.

ವಿ.ಸೀ.ಯವರ ಒಟ್ಟು ಜೀವನದಲ್ಲಿ ನಮಗೆ ಎದ್ದು ಕಾಣುವುದು ಅವರ ರುಚಿಶುದ್ಧಿ, ಶುಚಿಪ್ರಿಯತೆ, ಸಾತ್ತ್ವಿಕ ಗುಣ, ವಿಶಾಲವಾದ ಬುದ್ಧಿ, ಯಾವ ವೇಷವನ್ನೂ ತಾಳದ ಉತ್ತಮ ಗೃಹಸ್ಥರಾಗಿ ನಡೆದುಕೊಂಡ ರೀತಿ, ದೈನಂದಿನ ಜೀವನದಲ್ಲಿ ಆಸಕ್ತಿ, ವಿನಯವೇ ಮೈವೆತ್ತು ಬಂದಂಥ ನಡವಳಿಕೆ — ಈ ಗುಣಗಳು ವಿ.ಸೀ.ಯವರನ್ನು ನಾವು ಮೆಚ್ಚುವಂತೆ ಮಾಡಿವೆ. ವಿ.ಸೀ.ಯವರಲ್ಲಿ ಅನೇಕಾನೇಕ ಗುಣಗಳು ಮನೆಮಾಡಿದ್ದವು. ದೋಷಗಳೂ ಇದ್ದುವೇನೊ ; ಆದರೆ ಅವು ಅಷ್ಟಾಗಿ ನಮ್ಮ ಕಣ್ಣಿಗೆ ಬೀಳುತ್ತಿರಲಿಲ್ಲ. ಅವರ ವಸ್ತ್ರವ್ಯಸನ, ಊಟ ಉಡುಗೆಗಳ, ಪಾಶ್ಚಾತ್ಯ ನಿಯತಕಾಲಿಕೆಗಳ ಮೇಲಿನ ಆಸಕ್ತಿಗಳನ್ನು ದೋಷಗಳೆಂದು ಗಣಿಸಬೇಕೊ ಹೇಗೊ? ಇವುಗಳಲ್ಲಿ ಯಾವುದನ್ನು ಗುರುತಿಸಿ ಇದು ವಿ.ಸೀ. ಎಂದು ಹೇಳುವುದು? ಅಜ್ಞಾತ ಇಂಗ್ಲಿಷ್ ಕವಿಯ ಕವನದ ಈ ಸಾಲುಗಳು ಜ್ಞಾಪಕಕ್ಕೆ ಬರುತ್ತವೆ :

All this you are and each is partly you
And none is false and none is wholly true

(ಇವೆಲ್ಲವೂ ನೀನೆ; ಆದರೆ ಈ ಒಂದೊಂದೂ ಭಾಗಶಃ ನಿಜ. ಒಂದೂ ಸುಳ್ಳಲ್ಲ - ಆದರೆ ಅದು ಸಂಪೂರ್ಣ ನಿಜವೂ ಅಲ್ಲ.)

''ವಿ.ಸೀ. ಎಂಬ ಎರಡಕ್ಷರ ಕೇಳಿದೊಡನೆ ಅತ್ಯಂತ ಮಧುರವಾದ ವ್ಯಕ್ತಿಚಿತ್ರ ಮನಸ್ಸನ್ನು ತುಂಬಿಕೊಳ್ಳುತ್ತದೆ'' ಎನ್ನುತ್ತಾರೆ ಎಚ್.ಕೆ. ರಂಗನಾಥ್. ಈ ಮಾತು ಎಷ್ಟೊಂದು ಯಥಾರ್ಥ ಎನ್ನುವುದನ್ನು ವಿ.ಸೀ.ಯವರನ್ನು ಕಂಡವರೆಲ್ಲರೂ ಬಲ್ಲರು.

ಸುವಿಶಾಲ ವಿಸ್ತರ ಮನೋಭಾವ

ಸದ್ಗುಣವನ್ನು ಎಲ್ಲಿ ಕಂಡರೂ ಅದನ್ನು ಮೆಚ್ಚಿ ಮುಕ್ತಕಂಠದಿಂದ ಹೊಗಳುವ ಪ್ರಕೃತಿ ವಿ.ಸೀ.ಯವರದು. ತರುಣ ಕವಿಗಳಾದ ರಾಜರತ್ನಂ ಅವರನ್ನು ಕಂಡು ಅವರು ಆಡಿದ್ದ ಮೆಚ್ಚುನುಡಿಗಳನ್ನು ಉದಾಹರಿಸಬಹುದು :

> ''...ಒಂದು ವಿಶೇಷ ಬಗೆಯ ಬಳಕೆಯ ಶೈಲಿಯಲ್ಲಿಯೂ ಮೃದು ಹಾಸ್ಯದಲ್ಲಿಯೂ, ಉಗ್ರತೇಜಸ್ವಿತೆಯಲ್ಲಿಯೂ, ಒಂದು ಉದ್ದಾಮ ಜೀವನದರ್ಶನವನ್ನು ದಾನಮಾಡಿದ ಅವರ ಕೀರ್ತಿ ಅಮರವಾದೀತು. ಮಣ್ಣಿಂದ ಚಿನ್ನ ಮಾಡುವ ಶಕ್ತಿ ಮಾಂತ್ರಿಕರಿಗೆ ಇರುವುದೆನ್ನುವರು. ಮಡ್ಡಿಗಳಿಂದ ಮಹತ್ಕಾರ್ಯ ಮಾಡಿಸಬಲ್ಲ ಅವರ ಸತ್ತ್ವವನ್ನು ವಿದ್ಯಾರ್ಥಿ ಪ್ರಪಂಚ ಬಲ್ಲದು. ಅವರ ಸತ್ತ್ವ ದಿನದಿನಕ್ಕೆ ಪ್ರಚಂಡವಾಗಿ, ಅವರ ಧ್ವನಿಯೂ ಲೇಖನಿಯೂ ಕನ್ನಡ ಲೋಕಕ್ಕೆ ಸಂತೋಷಪ್ರದವಾಗಲಿ.''
>
> *(ವಿ.ಸೀ. ೧೯೪೪, ಪ್ರಬುದ್ಧ ಕರ್ಣಾಟಕ, ೨೬, ಪು.೧೨೯)*

*　　*　　*　　*

ಧಾರವಾಡ ಬಳಿಯ ಬೋಳುಗುಡ್ಡವನ್ನು ಆಯ್ದು ವಿದ್ಯಾನಗರಿಯನ್ನಾಗಿ ಪರಿವರ್ತಿಸಿ, ಕರ್ನಾಟಕ ವಿಶ್ವವಿದ್ಯಾನಿಲಯದ ಸ್ಥಾಪಕರಾದ ಪಾವಟೆಯವರನ್ನು ಕುರಿತು ಆಡಿರುವ ಮಾತುಗಳು ವಿ.ಸೀ. ಅವರ ದೊಡ್ಡತನವನ್ನು ಸೂಚಿಸುತ್ತವೆ.

> ''ಕಾಡಾಗಿ, ಮೇಡಾಗಿ ಇದ್ದ ಒಂದು ಪ್ರದೇಶವನ್ನು ವಿದ್ಯೆಯ ನೆಲೆಯಾಗಿ, ಒಂದು ಮಹಾನಗರವಾಗಿ ನಿರ್ಮಾಣಮಾಡಿ ಕಲೆ, ಶಾಸ್ತ್ರ, ವಿಜ್ಞಾನಗಳಿಗೆ ಅದನ್ನು ತವರು ಮಾಡಿದ ಪುಣ್ಯ ದಾನಪ್ಪ ಚಿಂತಪ್ಪ ಪಾವಟೆಯವರದು.''

ಕೃತಜ್ಞತಾ ಭಾವನೆ

'ಅಮಿತ ಕೃತಜ್ಞತೆಯೇ ವಿ.ಸೀ.ಯವರ ಬಾಳನ್ನು ನಡೆಸಿರುವ ಒಂದು ಶಕ್ತಿ' ಎನ್ನುತ್ತಾರೆ ಡಾ॥ ಶಿವರಾಂ. ಚಿಕ್ಕಮಗಳೂರಿಗೆ ಕಾಲೇಜು ಸೂಪರಿಂಟೆಂಡೆಂಟರಾಗಿ ವರ್ಗವಾಗಿ ಹೋದಾಗ ನಡೆದ ಸಂದರ್ಭವೊಂದರ ನೆನಪಾಗುತ್ತದೆ. ವಿ.ಸೀ. ಚಿಕ್ಕಮಗಳೂರು ಸೇರಿದಾಗ ಅವರಿಗೆ ಇರಲು ಮನೆ ಸಿಕ್ಕಿರಲಿಲ್ಲ. ನನ್ನ ತಮ್ಮ ಬಾಲಕೃಷ್ಣ ಚಿಕ್ಕಮಗಳೂರಿನಲ್ಲಿ ವ್ಯವಸಾಯ ಇಲಾಖೆಯ ಮುಖ್ಯಾ

ಧಿಕಾರಿಯಾಗಿದ್ದ. ಅವನಿಗೂ ಅದೇ ಸಮಯ ಬೇರೊಂದು ಊರಿಗೆ ವರ್ಗ ವಾಗಿತ್ತು. ವಿ.ಸೀ.ಯವರ ತೊಂದರೆಯನ್ನು ತಿಳಿದ ಅವನು ತಾನಿದ್ದ ಮನೆ ಯನ್ನು ಅವರಿಗೆ ಬಿಟ್ಟುಕೊಟ್ಟ, ಅಷ್ಟೇ ಅಲ್ಲ, ಮನೆಯಲ್ಲಿ ತಾನು ಉಪ ಯೋಗಿಸುತ್ತಿದ್ದ ಬೆತ್ತದ ಕುರ್ಚಿ ಮೊದಲಾದ ಸಾಮಾನುಗಳನ್ನು ವಿ.ಸೀ.ಯವರ



ಉಪಯೋಗಕ್ಕೆಂದು ಹಿಂದೆ ಬಿಟ್ಟು ಹೋದ. ಇದೊಂದು ಸಣ್ಣ ವಿಷಯ. ಆದರೆ ಅದನ್ನು ಮರೆಯುವಂಥವರಲ್ಲ ವಿ.ಸೀ. ಕಂಡಕಂಡವರ ಕೂಡ ಬಾಲಕೃಷ್ಣ ನಿಂದಾದ ಉಪಕಾರವನ್ನು ಪ್ರಸ್ತಾಪಿಸಿ ತಮ್ಮ ಕೃತಜ್ಞತೆಯ ಮಾತನ್ನಾಡುತ್ತಿದ್ದರು. ನನ್ನನ್ನು ಕಂಡಾಗಲೆಲ್ಲ ಈ ಸಂದರ್ಭವನ್ನು ನೆನಪಿಗೆ ತಂದುಕೊಳ್ಳುತ್ತಿದ್ದರು.

ಈ ವಿಷಯ ಪ್ರಸ್ತಾಪಿಸುತ್ತಿರುವಾಗಲೆ ಇನ್ನೊಂದು ಸಂದರ್ಭವನ್ನು ನೆನಪಿಸಿಕೊಳ್ಳಬೇಕು. ಉತ್ತರಭಾರತದಲ್ಲಿ ಪ್ರವಾಸ ಕೈಗೊಂಡಾಗ ಕಾಶಿಯ ಬಳಿ ರೈಲಿನಲ್ಲಿ ಒಮ್ಮೆ ಪ್ರಯಾಣ ಮಾಡುತ್ತಿದ್ದರಂತೆ. ಮರೆತು ಕಿಟಕಿಯನ್ನು ಮುಚ್ಚದೆ ಮಲಗಿದ್ದರಂತೆ. ನಡುರಾತ್ರಿಯಲ್ಲಿ ಗಾಳಿ ಬೀಸಲು ಮೊದಲಾಗಿ ಚಳಿ ಕಾಣಿಸಿಕೊಂಡಿತು. ಜೊತೆಯಲ್ಲಿ ಪ್ರಯಾಣಮಾಡುತ್ತಿದ್ದ ವೆಂಕಟೇಶಮೂರ್ತಿಗೆ ಎಚ್ಚರವಾಗಿ, ವಿ.ಸೀ.ಯವರು ಹೊದಿಕೆಯಿಲ್ಲದೆ ಕಿಟಕಿಯ ಬಳಿ ಮಲಗಿರುವುದನ್ನು ಕಂಡು, ಕಿಟಕಿಮುಚ್ಚಿ ಫ್ಯಾನ್ ಆರಿಸಿ, ತಾವು ಹೊದ್ದುಕೊಂಡಿದ್ದ ಶಾಲನ್ನು ವಿ.ಸೀ. ಯವರಿಗೆ ಹೊದ್ದಿಸಿ ತಮ್ಮ ಜಾಗಕ್ಕೆ ಹೋಗಿ ಮಲಗಿಕೊಂಡರಂತೆ. ಸ್ವಲ್ಪ ಹೊತ್ತಾದ ಮೇಲೆ ಎಚ್ಚರಗೊಂಡ ವಿ.ಸೀ. ಶಾಲು ಹೊದ್ದಿಸಿರುವುದನ್ನು ಕಂಡು ನಡೆದ ಸಂಗತಿಯನ್ನು ಊಹಿಸಿ ತುಂಬ ಕೃತಜ್ಞತೆಯಿಂದ ಮೂರ್ತಿಯಿಂದಾದ ಉಪಕಾರವನ್ನು ಹಲವು ವರ್ಷಗಳೇ ನೆನೆಯುತ್ತಿದ್ದರು. "This fellow mothered me throughout the journey" (ಪ್ರಯಾಣದುದ್ದಕ್ಕೂ ನನ್ನನ್ನು ತಾಯಿಯಂತೆ ಉಪಚರಿಸಿದ) ಎಂದು ತಮಗೆ ಸಿಕ್ಕಿದವರಿಗೆಲ್ಲ ಹೇಳುತ್ತಿದ್ದರು. ತಮಗಾದ ಉಪಕಾರವನ್ನು ಅವರು ಎಂದಿಗೂ ಮರೆತವರಲ್ಲ. ಕೃತಜ್ಞತೆಯ ಭಾವನೆ ರಕ್ತಗತವಾಗಿ ಅವರ ಪ್ರತಿಯೊಂದು ನಡವಳಿಕೆಯಲ್ಲೂ ಎದ್ದು ತೋರುತ್ತಿತ್ತು.

ನಡೆ-ನುಡಿ, ಆಚಾರ ಧರ್ಮ

ವಿ.ಸೀ.ಯವರ ಸಹಪಾಠಿಗಳೂ, ಪರಮಮಿತ್ರರೂ ಆದ ಕೆ.ವಿ.ಅಯ್ಯರ್ ಹೇಳುತ್ತಾರೆ :

> "..... ನನಗೆ ತಿಳಿದಂತೆ - ಅವರು ಇನ್ನೊಬ್ಬರ ಸಹಾಯವನ್ನು ಅಪೇಕ್ಷಿಸಿಯೂ ಇಲ್ಲ. ಇನ್ನೊಬ್ಬರ ಹೊಗಳುವಿಕೆಯನ್ನೂ ಅಪೇಕ್ಷಿಸಿದವರಲ್ಲ; ತೆಗಳುವಿಕೆಯನ್ನೂ ಮನಸ್ಸಿಗೆ ತಂದುಕೊಂಡವರಲ್ಲ. ಯಾರೊಬ್ಬರನ್ನೂ ಕೆಟ್ಟವರೆಂದಿಲ್ಲ; ಅನ್ನುವುದೂ ಇಲ್ಲ. 'ಅವರವರ ಮನಸ್ಸು, ಸಮಯ ಸಂದರ್ಭಗಳು ಹೇಗಿತ್ತೊ ಏನೊ?' ಎಂದುಬಿಡುತ್ತಾರೆ. ಅಂದು ಆಡಿದವರನ್ನೂ ಇಂದು ಕಂಡಾಗ ನಸುನಕ್ಕು, ಕುಶಲ ಕೇಳಿ ಇವರೇ ಮಾತನಾಡಿಸುತ್ತಾರೆ. 'ಇಂತಹ ಮಹಾನುಭಾವರನ್ನು, ಇದ್ದುದರಲ್ಲೆ ತೃಪ್ತಿಹೊಂದಿ ಬಾಳುತ್ತಿರುವವರನ್ನೂ ವಿಧಿ ಮತ್ತೆ ಮತ್ತೆ ಪರೀಕ್ಷಿಸುತ್ತಿದೆಯಲ್ಲಾ' ಎಂದು ನನಗನಿಸಿದೆ. 'ಪುಟ ಹಾಕಿದಷ್ಟೂ ಚಿನ್ನ ಮತ್ತೂ ಮತ್ತೂ ಅಪರಂಜಿಯಾಗುತ್ತೆ' ಎಂದೇನೊ? ಒಂದು ಸಲ ಅಪರಂಜಿ ಆಯಿತೆಂದರೆ, ಅದು ಮುಂದೆ ಸರ್ವಕಾಲಕ್ಕೂ ಅಪರಂಜಿಯಾಗಿಯೇ ಉಳಿಯುತ್ತದೆಯಲ್ಲವೆ? ಕಿಲುಬು ಕಟ್ಟುತ್ತದೆಯೆ? ಮಸಕು ಮುಸುಕುತ್ತದೆಯೇ? ಮತ್ತೆ ವಿಧಿ ಏಕೆ ಮೇಲಿಂದ ಮೇಲೆ ಪರೀಕ್ಷಿಸುತ್ತದೆ? 'ಇದು ನನ್ನ ಮನಸ್ಸಿಗೆ ಹಿತ, ನಾನು ಹೀಗೇ ಇದ್ದುಬಿಡುತ್ತೇನೆ', ಎಂಬುದು ಸ್ಥಿತಪ್ರಜ್ಞನ ವಾಕ್ಯ. ಎಷ್ಟು ಎಡರುತೊಡರುಗಳು ಬರಲಿ, ಅವು ಆತನ ಮನಸ್ಸನ್ನು ಛಿದ್ರಿಸಲಾರವು. ಇದು ಶ್ರೀ ವಿ.ಸೀ.ಯವರ ಗಾಂಭೀರ್ಯ, ನಡೆ, ನುಡಿ, ಆಚಾರ, ಧರ್ಮ.

ವಿ.ಸೀ. ಯವರದು ದೊಡ್ಡ ಕವಿಹೃದಯ. ಒಳ್ಳೆಯದನ್ನೆ ನೋಡುತ್ತದೆ, ಒಳ್ಳೆಯದನ್ನೆ ನೆನೆಯುತ್ತದೆ. 'ಊರಿನಲ್ಲಿ ಉದ್ಯಾನವನವೂ ಇದೆ. ಗ್ರಾಮದ ಕೊಳೆಯನ್ನೆಲ್ಲ ಹೊತ್ತು ಹೋಗುವ ಚರಂಡಿಯೂ ಇದೆ. ಆದರೆ ನಾವು ಉದ್ಯಾನವನ್ನಾಮೋದಿಸಬೇಕು' ಎಂಬುದು ಅವರ ಮತ. ಅದು ನ್ಯಾಯವೂ ಹೌದು. ಬದುಕನ್ನು ಸಾರ್ಥಕಗೊಳಿಸಬೇಕಾದುದೇ ನಿಜ. ಶ್ರೀ ವಿ.ಸೀ. ಯವರು ಮಹಾ ಅನುಭವಿಗಳು. ಜೀವನದಲ್ಲಿ ಎಲ್ಲ ತರದ ಕಷ್ಟಗಳನ್ನೂ ಎದುರಿಸಿ ನಿಂತವರಿವರು. ಸೋಲಲಿಲ್ಲ; ಗೆದ್ದರು. ಸಾಧಾರಣದವರಾಗಿದ್ದರೆ ಎಂದೋ ಮುರಿದು ಬೀಳುತ್ತಿದ್ದರು.''

(ಕೆ.ವಿ. ಅಯ್ಯರ್, 'ವಿ.ಸೀ. - ೭೫', ಪು.೩೧೩-೩೧೬)

ವಿ.ಸೀ. ಯವರ ಜೀವನದಲ್ಲಿ ಬೆಲ್ಲದ ಭಾಗಕ್ಕಿಂತ ಬೇವಿನ ಭಾಗವೇ ಹೆಚ್ಚಾಗಿತ್ತು. ಒಂದು ಸಾರಿ ಪಾಠ ಹೇಳುತ್ತಿರುವಾಗ ವಿದ್ಯಾರ್ಥಿಗಳಿಗೆ 'Civilization decrees that you should drain the bitter cup to the last drop without a grimace' ಎಂಬಂಥ ಪದಪುಂಜವನ್ನು ಅನುವಾದ ಮಾಡಲು ಕೊಟ್ಟರಂತೆ. ಅದು ಏನು ಸಂದರ್ಭವೋ ಈ ವಾಕ್ಯವನ್ನು ವಿದ್ಯಾರ್ಥಿಗಳ ಮುಂದಿಡಲು ಕಾರಣ; ಜೀವನದಲ್ಲಿ ಅನೇಕ ಕಷ್ಟಗಳನ್ನು ಕಂಡವರು ವಿ.ಸೀ. 'ಅವರ ಜೀವನದ ಸೂತ್ರಗಳನ್ನು ಕೈಯಲ್ಲಿ ಹಿಡಿದಿರುವ ದೈವ ಸುದೈವವಲ್ಲ' ಎಂದು ಅವರ ಸಹೋದ್ಯೋಗಿಗಳಾದ ಎಸ್.ಮಂಜುನಾಥ್ ಅವರು ಹೇಳಿದ್ದುಂಟು. ಆದರೆ ಬಂದ ಎಲ್ಲ ಕಷ್ಟಗಳನ್ನು ತಾಳಿಕೊಂಡರೂ ವಿ.ಸೀ. ತಮ್ಮ ಮನಸ್ಸನ್ನು ಕೆಡಿಸಿಕೊಳ್ಳಲಿಲ್ಲ. ಅನ್ಯಾಯ ಮಾಡಿದವರ ವಿಷಯದಲ್ಲಿ ಅಸಹನೆ ತೋರಿಸಲಿಲ್ಲ. ಕಷ್ಟಕ್ಕೆ ಸಿಕ್ಕಿಕೊಂಡ ಸ್ನೇಹಿತರೊಬ್ಬರನ್ನು ಪಾರುಮಾಡಲು ತಾವು ಜಾಮೀನಾಗಿ ನಿಂತು ಸಾವಿರಗಟ್ಟಲೆ ಹಣ ಕಳೆದುಕೊಂಡಿದ್ದರು. ಮನಸ್ಸಿನ ಕ್ಲೇಶ ಏನಿದ್ದರೂ, ಅದನ್ನು ತಮ್ಮೊಳಗೇ ಅದುಮಿಟ್ಟುಕೊಂಡರು. ಇಂಥ ಸದ್ಗುಣವನ್ನು ಸಾಮಾನ್ಯವಾಗಿ ಬೇರೆಯವರಲ್ಲಿ ಕಾಣಲಾರೆವು.

ಗೀತೆಯ ಉಪದೇಶವನ್ನು ಅವರು ಸಂಪೂರ್ಣವಾಗಿ ಒಪ್ಪಿಕೊಂಡವರೆಂದಲ್ಲ. 'ವೀತರಾಗಭಯಕ್ರೋಧಃ' ಎಂಬ ವಾಕ್ಯವನ್ನು ಲಘುವಾಗಿ ಟೀಕಿಸಿರುವುದುಂಟು. 'ಲೋಕದಲ್ಲಿ ಕಾಣಬರುವ ಕರುಣೆ ರಾಗಗಳೇ ಜೀವನದ ಪ್ರಾಶಸ್ತ್ಯ ಭಾಗಗಳು. ನನಗೆ ಅವೇ ಹೆಚ್ಚು ಪ್ರಿಯ' ಎಂದಿದ್ದಾರೆ.

'ಇತರರು ನುಡಿವ ಧ್ಯಾನ, ಆಧ್ಯಾತ್ಮಿಕತೆ, ಋಷಿಬಲ ನನ್ನ ಪಾಲಿಗೆ ಬರದಾಗಿದೆ. ನನ್ನ ಮನಸ್ಸು ದಿನಜೀವನಕ್ಕೆ ಮಣಿಯುತ್ತದೆ. ಇಲ್ಲಿನ ನೋವು ನಿರಾಸೆ ಪ್ರೀತಿ, ಇಲ್ಲಿಯ ಔದಾರ್ಯ, ಸ್ನೇಹದ ನೆರವು, ಕಾರುಣ್ಯ ನನಗೆ ತುಂಬ ಪ್ರಿಯ' ಎನ್ನುತ್ತಾರೆ ವಿ.ಸೀ. ಗೃಹಸ್ಥಜೀವನದ ನೋವು ನಲಿವುಗಳನ್ನು ಬಲ್ಲ ಅವರ ಒಲವು ಯಾವ ಕಡೆ ಎನ್ನುವುದು ಇದರಿಂದ ತಿಳಿಯುತ್ತದೆ.

ಮಾಸ್ತಿಯವರು ವಿ.ಸೀ. ಯವರ ಈ ಜೀವನ ಧರ್ಮಯೋಗವನ್ನು ಅರ್ಥಮಾಡಿಕೊಂಡು ಮನಮುಟ್ಟುವ ರೀತಿಯಲ್ಲಿ ವರ್ಣಿಸಿದ್ದಾರೆ :

ಕಷ್ಟವನ್ನು ತರುವುದೇ ಬಾಳು, ತರಲಿ ಆಯಿತು ಏನು?
ಸಹಿಸಿದರೆ ಮುಗಿಯಿತು, ಸಹಿಸುವುದು ಸಾಧ್ಯವೇ?
ನೋಡುವ; ನಮ್ಮಿಂದ ಆದಷ್ಟು ಸಹಿಸುವ

ಇದು ಇವರ ರೀತಿ.

ದೇವರನು ಕರೆದು ಯಾವುದೆ ನೋವ ಭಾರವನು
ಅವನ ಹೆಗಲಲಿ ಹೇರುವುದು ಇವರಿಗೊಪ್ಪದು.
ಈ ಮನೋಧರ್ಮ, ಈ ಅನುಭವದ ಫಲವಾಗಿ
ಲೋಕ ಇವರಿಗೆ ಸುಖದ ನೆಲೆಯಲ್ಲ ; ಚೇತನದ
ಶಿಕ್ಷಣ ಪರೀಕ್ಷಣದ ಗರಡಿ ಎಂಬಂತಿಹುದು.

(ಶ್ರೀನಿವಾಸ, 'ವಿ.ಸೀ.-೭೫', ಪು.೨೮೯)

ಕೆ.ವಿ. ರಾಘವಾಚಾರ್ ವಿ.ಸೀ.ಯವರನ್ನು ಹತ್ತಿರದಿಂದ ಕಂಡವರು, ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಸಮಸಮನಾಗಿ ದುಡಿದವರು. ಅವರು ಸುಲಭಕ್ಕೆ ಯಾರನ್ನೂ ಮೆಚ್ಚಿಕೊಳ್ಳುವವರಲ್ಲ. ಅಂಥವರು ವಿ.ಸೀ. ಯವರ ನಡೆ ನುಡಿಗಳ ಬಗ್ಗೆ ಹೇಳಿರುವ ಮಾತುಗಳಿವು :

''ಸೀತಾರಾಮಯ್ಯನವರ ನಡೆ ನುಡಿ ಎಲ್ಲಾ ಹೇಳಿಕೇಳಿ ತುಂಬ ನಯ ನವುರು. ಆ ನಯ ನವುರುಗಳಲ್ಲಿ ತಳುಕು ಎಳ್ಳಷ್ಟೂ ಇಲ್ಲ. ..... ಅವರು ಹೆರವರ ಬಗ್ಗೆ ಕಠಿನವಾಗಿ ನುಡಿದದ್ದನ್ನು, ಕೊನೆಗೆ ಅಸಂತೃಪ್ತಿಯಿಂದ ಗೊಣಗಿದ್ದನ್ನೂ ನಾನು ಒಮ್ಮೆಯೂ ಕಂಡಿಲ್ಲ. ಸೀತಾರಾಮಯ್ಯನವರು ಸರ್ವದಾ ಪ್ರಸನ್ನಚಿತ್ತರು. ಪ್ರಸನ್ನವದನರು. ಅವರದು ಯಾವಾಗಲೂ ನಗುಮುಖ; ಗೆಲುಮುಖ. ಆದರೆ ನೋವರಿಯದ ನಗುವಲ್ಲ. ಬೇಗೆಯರಿಯದ ಗೆಲುವಲ್ಲ... ಕುಹಕಿಗಳ ಕುಟುಕು ನುಡಿಗಳನ್ನು, ಲೇವಡಿಗರ ಕುಚೋದ್ಯಗಳನ್ನು, ನಂಟರ ನೋವುಗಳನ್ನು, ಮಿತ್ರರ ಮೋಸಗಳನ್ನು ತಾಳಿಕೊಂಡು, ನುಂಗಿಕೊಂಡು, ಅರಗಿಸಿಕೊಂಡು, ಮನದ ಹದಹಾಳತಗಳನ್ನು ತಪ್ಪಗೊಡದೆ ಸಾಧಿಸಿಕೊಂಡ ವೈಚಾರಿಕ ನಗು ಗೆಲುವುಗಳು ಅವು.''

(ರಾಘವಾಚಾರ್, 'ವಿ.ಸೀ.-೭೫', ಪು.೩೧೮-೩೧೯)

ಇದು ಯಾವ ಉತ್ಪ್ರೇಕ್ಷೆಯೂ ಇಲ್ಲದ ಸುಂದರ ಆತ್ಮೀಯ ವ್ಯಕ್ತಿಚಿತ್ರ.

ವಿ.ಸೀ.ಯವರು ಉನ್ನತ ಪದವಿಗೇರಲಿಲ್ಲ. ಭಾರಿ ಸಂಬಳವನ್ನು ಗಳಿಸಲಿಲ್ಲ. ಹೇಳಿಕೊಳ್ಳುವಂಥ ಯಾವ ಪ್ರಶಸ್ತಿಯೂ ಅವರಿಗೆ ದೊರಕಲಿಲ್ಲ. ಅವರು ಲೋಕದಿಂದ ಪಡೆದುದಕ್ಕಿಂತ ಕೊಟ್ಟದ್ದೆ ಹೆಚ್ಚು. ಮಹಾವಿಜ್ಞಾನಿ ಐನ್‌ಸ್ಟೈನ್ ಹೇಳಿರುವ ಮಾತನ್ನು ಇಲ್ಲಿ ಗಮನಿಸಬೇಕು :

"Successful man is he who receives a great deal from his fellowmen usually incomparably more than corresponds to his service to them. The value of a man, however, should be seen in what he has given and not in what he is able to receive."

(ಯಶಸ್ವಿಯಾದ ಮನುಷ್ಯ ಎನ್ನಿಸಿಕೊಳ್ಳುವವನು, ತಾನು ಕೊಟ್ಟದ್ದಕ್ಕಿಂತ ಅದೆಷ್ಟೋ ಪಾಲು ಹೆಚ್ಚಿನ ಉಪಕಾರವನ್ನು ಇತರರಿಂದ ಪಡೆದವನು. ಆದರೆ ಮನುಷ್ಯನ ಬಾಳಿಗೆ ಬೆಲೆಬರುವುದು ಅವನು ಇತರರಿಗೆ ಎಷ್ಟು ಕೊಟ್ಟ ಎನ್ನುವುದರಿಂದಲೇ ಹೊರತು ಅವರಿಂದ ಎಷ್ಟು ಪಡೆದ ಎನ್ನುವುದರಿಂದಲ್ಲ.)

ಈ ಅಳತೆಗೋಲಿನಿಂದ ವಿ.ಸೀ.ಯವರ ಜೀವನವನ್ನು ನಾವು ಅಳೆಯುವುದಾದರೆ, ಅವರಿಗಿಂತ ಹೆಚ್ಚಿನ ಭಾಗ್ಯಶಾಲಿಗಳು ಹೆಚ್ಚು ಮಂದಿ ಇಲ್ಲವೆಂದು ತೀರ್ಮಾನ ಮಾಡಬೇಕಾಗುತ್ತದೆ. ಅವರ ಮೌಲ್ಯ ಇರುವುದು ಅವರ ಗಳಿಕೆಯಿಂದಲ್ಲ, ಅವರು ತಮ್ಮ ನಿಡುಗಾಲದ ಅಧ್ಯಾಪಕ ವೃತ್ತಿಯಲ್ಲಿ ಮಾಡಿದ ಜ್ಞಾನದಾನದಲ್ಲಿ, ಅವರು ಉಳಿಸಿ ಹೋಗಿರುವ ಸಾಹಿತ್ಯದಲ್ಲಿ. 'ಜೀವನದ ಸ್ಪೃತಿಪಥದಲ್ಲಿ ಎಲ್ಲಕ್ಕಿಂತಲೂ ಮನಸ್ಸಿನ ಮೇಲೆ ಅಚ್ಚೊತ್ತಿ ನಿಲ್ಲುವ ಶಕ್ತಿ ಒಂದು ಇದ್ದರೆ ಅದು ಮನುಷ್ಯನ ಒಳ್ಳೆಯತನ' ಎಂದು ಕಾರಂತರು ಹೇಳುತ್ತಾರೆ. ವಿ.ಸೀ.ಯವರ ಒಳ್ಳೆಯತನವೇ ಅವರ ಸಂಪತ್ತು. ಅವರ ಹೆಸರು ಚಿರಕಾಲ ಉಳಿಯುವಂತೆ ಮಾಡಿರುವುದೇ ಈ ಒಳ್ಳೆಯತನ.

ವಿಶಾಲ ಬುದ್ಧಿ

ವಿದ್ಯಾರ್ಥಿಯಾದಾಗಿನಿಂದ ಕೊನೆಯ ಉಸಿರೆಳೆಯುವವರೆಗೂ ಸ್ವಾಧ್ಯಾಯದಲ್ಲಿ ನಿರತರಾಗಿದ್ದವರು ವಿ.ಸೀ. ಸ್ವಾಧ್ಯಾಯ ಎನ್ನುವ ವಿಷಯವಾಗಿ ತಮ್ಮ ಗೀತಾತಾತ್ಪರ್ಯದಲ್ಲಿ ವ್ಯಾಖ್ಯಾನ ಮಾಡುತ್ತ ಡಿ.ವಿ.ಜಿ. ಹೇಳುತ್ತಾರೆ : 'ನನ್ನ ವೃತ್ತಿಗೆ ಸಂಬಂಧಪಟ್ಟ ಶಾಸ್ತ್ರವ್ಯಾಸಂಗ, ಗ್ರಂಥ ಕಾಲಕ್ಷೇಪ - ನಾನು ತಿಳಿದುಕೊಳ್ಳಬೇಕಾದ್ದು ಅಪಾರವಾಗಿದೆ ಎಂಬ ಅಂತರಂಗ ನಮ್ರತೆ, ಇದು ಬುದ್ಧಿಯ ಕೃಷಿಗೆ ಸಾಧನ.' ಇಂಥ ಸಾಧನೆಯಲ್ಲಿ ಸತತವಾಗಿ ತೊಡಗಿದ್ದವರು ವಿ.ಸೀ. ಎಲ್ಲ ಬಲ್ಲವನು ನಾನು ಎಂದು ಅವರು ಎಂದೂ ಮೆರೆದವರಲ್ಲ.

'ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ' (ಉನ್ನತ ಭಾವನೆಗಳು ವಿಶ್ವದ ಎಲ್ಲ ಕಡೆಯಿಂದಲೂ ನನ್ನ ಕಡೆಗೆ ಬರಲಿ). ಇದು ಅವರು ಜಪಿಸುತ್ತಿದ್ದ ಮಂತ್ರ. ಅವರ ಆಸಕ್ತಿ ಒಂದೇ ವಿಷಯಕ್ಕೆ ಎಂದೂ ಮೀಸಲಾಗಿರಲಿಲ್ಲ. ಸಾಹಿತ್ಯ, ಸಂಗೀತ, ಚಿತ್ರಕಲೆ, ಚಲನಚಿತ್ರ, ನೃತ್ಯ, ರಾಜಕೀಯ, ಚರಿತ್ರೆ, ವಿಜ್ಞಾನ, ಅರ್ಥಶಾಸ್ತ್ರ, ಇವೆಲ್ಲದರಲ್ಲೂ ಸಮನಾದ ಆಸಕ್ತಿ ಬೆಳಸಿಕೊಂಡು ಉತ್ತಮ ಜ್ಞಾನ ಸಂಪಾದಿಸಿಕೊಂಡಿದ್ದರು. ಪಾಶ್ಚಾತ್ಯ ಸಾಹಿತ್ಯ ತಮಗೆ ವಿಶೇಷ

ಜ್ಞಾನವನ್ನು ದೊರಕಿಸಿದ್ದ ಕಾರಣದಿಂದ ಅದರ ಕಡೆ ಒಲವು ಅವರಿಗೆ ಹೆಚ್ಚಾಗಿಯೇ ಇತ್ತು. ಸಂಸಾರ ನಿರ್ವಹಣೆಗೆ ಸಂಪಾದಿಸುತ್ತಿದ್ದ ಹಣ ಸಾಲದೆ ಹೋದರೂ, ತಮ್ಮ ಜ್ಞಾನದಾಹ ಅಡಗಿಸಿಕೊಳ್ಳಲು 'ಬಿ.ಬಿ.ಸಿ. ಲಿಸ್ನರ್', 'ಟೈಮ್ಸ್ ಲಿಟರರಿ ಸಪ್ಲಿಮೆಂಟ್', 'ಜಾನ್ ಓ'ಲಂಡನ್ ವೀಕ್ಲಿ', 'ಎಕಾನಮಿಸ್ಟ್' ಪತ್ರಿಕೆಗಳನ್ನು ಚಂದಾಕೊಟ್ಟು ತರಿಸುತ್ತಿದ್ದರು.

ಲೋಕಸಾಹಿತ್ಯದ ಸುಗಾಢ ಪರಿಚಯದಿಂದ
ಇವರ ರುಚಿ ತುಂಬ ಹಸನಾಗಿ ಬೆಳೆದಿಹುದು.
ಮೊತ್ತದಲಿ
ಬುದ್ಧಿ ಅನುಭವ ಯೋಚನೆಗಳ ವಿಸ್ತಾರದಲಿ
ಸೀತಣ್ಣ ನಮ್ಮ ನಾಡಿನ ಇಂದಿನತ್ಯಂತ
ಮೇಲ್ತರದ ಸಾಧಕರ ಪಂಕ್ತಿಯಲಿ ನಿಂತಿಹರು.

ಎಂದು ಮಾಸ್ತಿಯವರು ವಿ.ಸೀ.ಯವರ ಜ್ಞಾನವಿಶಾಲತೆಯನ್ನು ಗುರುತಿಸಿದ್ದಾರೆ.

ವಿ.ಸೀ.ಯವರನ್ನು ಹತ್ತಿರದಿಂದ ಕಂಡ ಸ್ವಯಂ ವಿದ್ವಾಂಸರಾದ ರಾಳ್ಳಪಲ್ಲಿ ಅನಂತಕೃಷ್ಣಶರ್ಮರು ಹೇಳುತ್ತಾರೆ :

''(ವಿ.ಸೀ.) ಅವರ ವ್ಯಾಸಂಗ ವಿಶ್ರಾಂತಿ ಇಲ್ಲದ್ದು. ಪಾಂಡಿತ್ಯ ಬಹುಮುಖವಾಗಿ ವಿಶಾಲಗಂಭೀರವಾದದ್ದು. ವಿಷಯ ನಿಷ್ಠೆಯಿಂದ ವಿವಿಧವಾಗಿ ಸ್ವಾರ್ಥಗಂಧರಹಿತವಾದದ್ದು. ಕಥೆ, ಕಾವ್ಯ, ನಾಟಕ, ಕಲೆ, ಅಲಂಕಾರ, ಛಂದಸ್ಸು, ತತ್ತ್ವಶಾಸ್ತ್ರ, ಅರ್ಥಶಾಸ್ತ್ರ, ಸಂಖ್ಯಾಶಾಸ್ತ್ರ, ದಂಡ ನೀತಿ, ಚರಿತ್ರೆ ಮುಂತಾದ ಹಲವು ಮಾರ್ಗಗಳಲ್ಲಿ ಅವರ ಪ್ರತಿಭೆ, ಪ್ರಾಚೀನ ಪ್ರತೀಚೀನ ಎಂಬ ಭೇದವಿಲ್ಲದೆ, ಬೇಜಾರು ಪಡದೆ ನಡೆದಿದೆ, ನಡೆಯುತ್ತಿದೆ. ವಿಮರ್ಶೆಯ ಶಕ್ತಿಯಿಂದ ಹರಿತವಾದ ರಚನೆಗಳಾಗಿ ಪರಿಣಮಿಸಿದೆ. ಸ್ವದೇಶ-ಪರದೇಶಗಳ, ಸ್ವಭಾಷೆ-ಪರಭಾಷೆಗಳ ಉದಾತ್ತ ರಚನೆಗಳ ಪ್ರಭಾವ ಪರಿಮಳ ತುಂಬಿ ತುಳುಕುವ ವಿಶಿಷ್ಟ ವ್ಯಕ್ತಿ ವಿ.ಸೀ.''

(ಅನಂತಕೃಷ್ಣ ಶರ್ಮ, 'ವಿ.ಸೀ.-೭೫', ಪು.೨೮೭)

''ನನ್ನ ಕವಿ-ಕಾವ್ಯ ಗುರು'' ಎಂದು ಕರೆದ ರಾಜರತ್ನಂ ಹೇಳುತ್ತಾರೆ :

''ಬರೀ ಕನ್ನಡ, ಇಂಗ್ಲಿಷ್ ಎಂದುಕೊಂಡರೆ ಸಾಲದು, ಜಗತ್ತಿನಲ್ಲಿಯ ಎಲ್ಲ ಭಾಷೆಗಳ ಪರಿಚಯವನ್ನೂ ಪಡೆಯಬೇಕು' – ಎಂಬ ಅರ್ಥ ಬರುವಂತೆ ಶ್ರೀ ವಿ.ಸೀ. ಅವರು ಆ ಆರಂಭದ ದಿವಸಗಳಲ್ಲಿ ನನಗೆ ಹೇಳದೆ ಇದ್ದಿದ್ದರೆ, ಅನಂತರ ನಾನು ಬರೆದ ಬಾಲಿಶವಾದ ಬರಹಗಳನ್ನು ಸಹನೆಯಿಂದ ಓದಿ ತಿದ್ದದೆ ಹೋಗಿದ್ದರೆ, ಮುಂದೆ ನನ್ನ ಬೆಳವಣಿಗೆಯನ್ನು ನೋಡಿ ಆತ್ಮೀಯವಾದ ಮೆಚ್ಚುಗೆಯ ಮಾತುಗಳನ್ನು ಹೇಳದೆ ಹೋಗಿ

ದ್ದರೆ - ನಾನು ಈಗ ಓದಿಕೊಂಡಿರುವಷ್ಟನ್ನು ಓದುತ್ತಿದ್ದೆನೊ ಇಲ್ಲವೊ! ಈಗ ಬರೆದಿರುವಷ್ಟನ್ನು ಬರೆಯುತ್ತಿದ್ದೆನೊ ಇಲ್ಲವೊ!"

(ರಾಜರತ್ನಂ, 'ವಿ.ಸೀ.-೭೫', ಪು.೩೨೨)

ತರಗತಿಯಲ್ಲಿ ಪಾಠ ಹೇಳಿದ ಗುರುವಲ್ಲದಿದ್ದರೂ ವಿ.ಸೀ.ಯವರ ಸಹವಾಸದಿಂದ, ಅವರ ವಿಶಾಲ ಬುದ್ಧಿಯ ಪರಿಚಯದಿಂದ ಉಪಯುಕ್ತವಾದ ಅನೇಕ ಪಾಠಗಳನ್ನು ಕಲಿತವರು ರಾಜರತ್ನಂ.

ವಿ.ಸೀ.ಯವರ ಜ್ಞಾನದ ಆಳ ಅಗಲಗಳನ್ನು ಪರಿಚಯಿಸಿಕೊಂಡಿದ್ದ ವಿ.ಎಂ.ಇನಾಂದಾರರು ಹೇಳುತ್ತಾರೆ :

> ''ಯಾವ ವಿಷಯವನ್ನಾದರೂ ಅವರು ಇದು ಸರಿ, ಅಥವಾ ಇದೇ ಸರಿ, ಎಂದು ಎಂದಿಗೂ ಹೇಳುವುದಿಲ್ಲ. ಆದರೆ ವಿಷಯವನ್ನು ಅವರು ಕಾಣುವ ಬಗೆಯನ್ನು ಗಮನಿಸಿದಾಗ ವಿಷಯಕ್ಕೆ ಒಂದಲ್ಲ ಹತ್ತು ಮುಖಗಳಿರಬಹುದು ಎಂದು ಮನವರಿಕೆಯಾಗುತ್ತದೆ. ಆ ಹತ್ತು ಮುಖಗಳೂ ಒಂದೊಂದು ಬಗೆಯ ಸತ್ಯವನ್ನು ಹೇಳುತ್ತವೆ ಎನ್ನುವುದರ ಅರಿವಾಗುತ್ತದೆ. ಇದರಿಂದಾಗಿ ತಾತ್ಕಾಲಿಕವಾಗಿ ಒಂದು ತೀರ್ಮಾನ ಕಷ್ಟವಾಗುತ್ತದೆಯಾದರೂ ವಿಷಯದ ಪರಿಜ್ಞಾನ ವಿಸ್ತರಿಸುತ್ತದೆ. ಅವರೊಡನೆ ಮಾತನಾಡುವ ಎಲ್ಲರಿಗೂ ಇದರ ಅನುಭವವಿದೆ. ಹತ್ತು ಮುಖಗಳನ್ನು ಹೇಳಿದರೂ ಹತ್ತನ್ನೂ ಅವರು ಸೌಹಾರ್ದದಿಂದ ಕಂಡಿರುತ್ತಾರೆ, ಕೇಳುವವರು ಕಾಣುವಂತೆ ಮಾಡುತ್ತಾರೆ, ಎನ್ನುವುದು ವಿಶೇಷ. ಇದು ಸಹೃದಯತೆಯ ಪರಮಾವಧಿ.....''
>
> (ಇನಾಂದಾರ್, 'ವಿ.ಸೀ.-೭೫', ಅರಿಕೆ. ಪು.೫)

ವಿದ್ವಾಂಸರಾದವರುಗಳ ಈ ಉದಾರ, ಸತ್ಯಕ್ಕೆ ದೂರವಲ್ಲದ ವಿಶ್ಲೇಷಣೆ ಮತ್ತು ಮೆಚ್ಚುಕೆಯ ಮಾತುಗಳು ವಿ.ಸೀ. ತಮ್ಮ ಸಮಕಾಲೀನರಲ್ಲಿ ಎಂಥ ಸದಭಿಪ್ರಾಯವನ್ನು ಮೂಡಿಸಿದ್ದರು ಎನ್ನುವುದಕ್ಕೆ ಉತ್ತಮ ನಿದರ್ಶನಗಳಾಗಿವೆ.

ಅಂತರಂಗನಮ್ರತೆ

'ನಾನೇತರವನು' ಎನ್ನುವ ಅಂತರಂಗನಮ್ರತೆ ವಿ.ಸೀ.ಯವರ ಸಹಜ ಗುಣ. ಆದರೆ ಇಂದಿನ ಪೈಪೋಟಿ ಯುಗದಲ್ಲಿ ತನ್ನ ಪ್ರತಾಪವನ್ನು ಮುಂದು ಮಾಡಿ, ಅವಕಾಶ ದೊರೆತಾಗಲೆಲ್ಲ ಕೊಚ್ಚಿಕೊಳ್ಳದೆ ಹೋಗುವವನು ಹಿಂದೆಯೇ ಉಳಿಯಬೇಕಾಗುತ್ತದೆ. 'ಪ್ರಸಿದ್ಧನಾಗಬೇಕಾದರೆ ಮೂರು ಹೊತ್ತೂ ಗದ್ದಲ ಮಾಡುತ್ತಿರಬೇಕು' ಎಂದು ಡಿ.ವಿ.ಜಿ. ವ್ಯಂಗ್ಯವಾಡಿದ್ದುದು ನೆನಪಿಗೆ ಬರುತ್ತದೆ. ಈ ವರ್ಗಕ್ಕೆ ವಿ.ಸೀ. ಸೇರಿದವರಲ್ಲ. ಅವರು ಧನಸಂಪತ್ತಿಗಾಗಿ, ಸ್ಥಾನ ಪ್ರತಿಷ್ಠೆಗಳಿಗಾಗಿ ಹಂಬಲಿಸಿದವರಲ್ಲ. ಅವು ದೊರೆಯದೆಹೋದಾಗ ದುಃಖಿಸಿದವರೂ

ಅಲ್ಲ. 'ಯದೃಚ್ಛಾಲಾಭಸಂತುಷ್ಟಃ' - ಬಂದುದಷ್ಟರಲ್ಲಿ ತೃಪ್ತಿ ಪಟ್ಟುಕೊಂಡವರು, ನಿರ್ಮತ್ಸರತೆಯಿಂದ ಬಾಳು ಸಾಗಿಸಿದವರು.

ಶ್ರೀಯವರು 'ಕನ್ನಡ ಬಾವುಟ'ಕ್ಕೆ ಉತ್ತಮ ಕನ್ನಡ ಪದ್ಯಗಳನ್ನು ಆಯುವಾಗ ವಿ.ಸೀ. ಅವರ ಸಲಹೆ ಕೇಳಿದ್ದರಂತೆ. ವಿ.ಸೀ. ಹಲವಾರು ಉತ್ತಮ ಕವನಗಳ ಹೆಸರನ್ನು ಸೂಚಿಸಿದರೂ ತಮ್ಮವು ಯಾವುದನ್ನೂ ಸಂಗ್ರಹದಲ್ಲಿ ಸೇರಿಸಬೇಕೆಂದು ಸೂಚಿಸಿರಲಿಲ್ಲವಂತೆ. ಶ್ರೀಯವರೇ ಕೊನೆಗೆ ಮೂರು ನಾಲ್ಕು ಕೃತಿಗಳನ್ನು (ಲಾಲ್‌ಬಾಗ್, ಕಸ್ಮೈದೇವಾಯ, ಕೋಗಿಲೆ, ಅಭೀಃ) ಸೇರಿಸಬೇಕಾಯಿತು. ಇಂಥ ವಿಚಾರಗಳಲ್ಲಿ ವಿ.ಸೀ. ಬಹು ಎಚ್ಚರಿಕೆ ವಹಿಸಿ ನಡೆದುಕೊಳ್ಳುತ್ತಿದ್ದರು. ತಮ್ಮ ಹೆಸರನ್ನು ಎಂದೂ ಮುಂದುಮಾಡಲು ಕಾತರಿಸುತ್ತಿರಲಿಲ್ಲವೆನ್ನುವುದನ್ನು ನಾವಿಲ್ಲಿ ಗಮನಿಸಬೇಕು. ಇದೊಂದು ಅಪರೂಪವಾಗುತ್ತಿರುವ ಬಹು ದೊಡ್ಡ ಗುಣ.

ವಿ.ಸೀ. ಯವರಲ್ಲಿ ನಾವು ಕಾಣುತ್ತಿದ್ದ ಅಂತರಂಗನಮ್ರತೆ ಅಸಾಧಾರಣವಾದದ್ದು. ತಮ್ಮನ್ನು ಯಾರಾದರೂ ಹೊಗಳಿದರೆ ''ಅಯ್ಯೋ ನಾನೊಬ್ಬ ನಾಡಾಡಿ, ನನ್ನನ್ನೇಕೆ ಹೊಗಳುತ್ತೀರಿ. ನನ್ನನ್ನು ಸುಮ್ಮನೆ ಬಿಡಿ'' ಎನ್ನುತ್ತಿದ್ದರು. ಸುಳ್ಳುಕೀರ್ತಿಯಿಂದ ಅವರ ಮನಸ್ಸಿಗಾದ ವೇದನೆಯನ್ನು ಗುರುತಿಸುವುದಕ್ಕೆ 'ಹಗಲು ಇರುಳು' ಸಂಗ್ರಹದಲ್ಲಿರುವ ರಚನೆಯೊಂದನ್ನು ಉದಾಹರಿಸಬಹುದು.

ನೀವು ಗೈದುದ ನೋಡಿ ಹರ್ಷ ಪಡುವವನು,
ನೋಡಿ, ಕೇಳಿ, ಉಂಡು ನಿಮ್ಮೊಡನೆ ಬೆರೆದು
ಉತ್ಸವಗಳಲಿ ಮೈಮರೆವ ನಾಡಾಡಿ ನಾನು.
ಎಲ್ಲೆಲ್ಲಿಗೊ ಎಳೆದು, ಇಲ್ಲದುದ ತಲೆಗೆ ಸುತ್ತಿ
ನೀನಿಂತು ಅಂತು ಎಂದರಾಗುವುದು ಮನಕೆ ಗಾಸಿ.
ಸುಳ್ಳು ಕೀರುತಿ, ಮನವು ಹೊರಲಾರದಿದರ ಭಾರ.
ಕೇಳಿ, ಕೆಳೆಯರೆ, ನನ್ನಷ್ಟಕ್ಕೆ ನನ್ನ ಬಿಡಿ.

('ಸ್ನೇಹ ವಿಶ್ವಾಸ', 'ಸುಳ್ಳು ಕೀರ್ತಿ', ಪು.೪೨೧)

ಜನರ ಮುಂದೆ ಮೆರೆದು ಬೀಗುವ ಸ್ವಭಾವ ಅವರದಾಗಿರಲಿಲ್ಲವಾದ್ದರಿಂದಲೊ ಏನೊ ಅವರ ಸಾಹಿತ್ಯಸೇವೆಯನ್ನು ಗುರುತಿಸಿ ಅವರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಲು ಬಹಳ ತಡವಾಯಿತು. ಕಾರವಾರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಆದದ್ದು ೧೯೫೩ರಲ್ಲಿ, ಅವರು ಉತ್ತಮ ಬರಹಗಾರರೆಂದು ಹೆಸರುಗಳಿಸಿದ ಎಷ್ಟೋ ವರ್ಷಗಳಾದ ಮೇಲೆ.

ಸಾಧುತ್ವ

ವಿ.ಸೀ.ಯವರ ಮುಖ್ಯ ಗುಣ ಅವರ ಸಾಧುತ್ವ. ಈ ಗುಣವನ್ನು ಬಹು ಹಿಂದೆಯೇ ಗುರುತಿಸಿದವರು 'ಯಜಮಾನ'ರಾದ ಬೆಳ್ಳಾವೆ ವೆಂಕಟ

ನಾರಣಪ್ಪನವರು. ಇದರ ಪ್ರಸ್ತಾಪವನ್ನು ಈಗಾಗಲೇ ಮಾಡಿಯಾಗಿದೆ. (ಪು. ೫೯-೬೦) ಸಾಧು ಎಂಬ ಮಾತಿಗೆ ಈಚಿನ ದಿನಗಳಲ್ಲಿ 'ಅಯ್ಯೋ ಪಾಪ! ಹಸುವಿನಂತೆ ಅಮಾಯಕ, ಕಚ್ಚುವುದಿಲ್ಲ, ಪರಚುವುದಿಲ್ಲ, ಯಾರ ಗೊಡವೆಗೂ ಹೋಗುವುದಿಲ್ಲ, ತನ್ನ ಪಾಡಿಗೆ ತಾನು ಮೂಲೆಯಲ್ಲಿ ಒರಗಿರುತ್ತಾನೆ' ಎಂಬ ಅರ್ಥವೇ ಬಳಕೆಯಲ್ಲಿರಬಹುದು. 'ಸಾಧು' ಶಬ್ದಕ್ಕೆ ಮೂಲತಃ ಅರ್ಥವೇ ಬೇರೆ ಎನ್ನುತ್ತಾರೆ ಸಾಲಿಗ್ರಾಮ ರಾಮಚಂದ್ರರಾಯರು. ಸ್ಮೃತಿಗ್ರಂಥಗಳಲ್ಲಿಯೂ ಪುರಾಣಗಳಲ್ಲಿಯೂ ದೊರೆಯುವ ಅರ್ಥವೇ ಬೇರೆ. ಸಾಧುವೆಂದರೆ :

ಯಥಾಲಬ್ಧಸಂತುಷ್ಟ (ತನಗೆ ಬಂದದ್ದರಲ್ಲಿ ತೃಪ್ತನಾಗಿರುವವನು)
ಸಮಚಿತ್ತ (ಉಪಶಾಂತನಾಗಿರುವವನು)
ನಿರ್ವೈರ (ದ್ವೇಷ ಅಸೂಯೆಗಳಿಲ್ಲದವನು)
ನಿರಪೇಕ್ಷ (ಅತಿಯಾದ ಬಯಕೆಗಳಿಲ್ಲದವನು)
ದಂಭಾಹಂಕಾರವರ್ಜಿತ (ಜೋರು ಜಂಬಗಳನ್ನು ಬಿಟ್ಟವನು)
ನ ಪ್ರಹೃಷ್ಯತಿ ಸನ್ಮಾನೇ (ಸನ್ಮಾನದಿಂದ ಉಬ್ಬುವುದಿಲ್ಲ)
ನ ಅವಮಾನೇನ ಕುಪ್ಯತಿ (ಅವಮಾನಗೊಂಡರೆ
ಕೋಪಗೊಳ್ಳುವುದಿಲ್ಲ)
ನ ಕೃದ್ಧಃ ಪರುಷಂ ಬ್ರೂಯಾತ್ (ಕೋಪಗೊಂಡಾಗಲೂ ಕೆಟ್ಟ
ಮಾತಾಡುವುದಿಲ್ಲ)
ಏತತ್ ಸಾಧೋಸ್ತು ಲಕ್ಷಣಂ (ಇದು ಸಾಧುವಿನ ಲಕ್ಷಣ)

(ರಾಮಚಂದ್ರರಾವ್, 'ವ್ಯಕ್ತಿಚಿತ್ರಸಂಪುಟ', ಭಾಗ ೧, ಪು. ೨೯)

ಈ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡೇ ಬೆಳ್ಳಾವೆ ವೆಂಕಟ ನಾರಣಪ್ಪನವರು ವಿ.ಸೀ.ಯನ್ನು ಸಾಧು ಎಂದು ಕರೆದಿರಬೇಕು. ಈ ಲಕ್ಷಣ ಗಳನ್ನು ಮುಖ್ಯ ಗುರಿಯಾಗಿಟ್ಟುಕೊಂಡು ವಿ.ಸೀ. ಬಾಳಿದರು.

ಸ್ನೇಹಶೀಲ

ವಿ.ಸೀ. ಅತ್ಯಂತ ಸ್ನೇಹಶೀಲರು. ಅವರ ಆಪ್ತವರ್ಗದವರೆಲ್ಲರೂ ತಮ್ಮ ತಮ್ಮ ಕಾರ್ಯರಂಗದಲ್ಲಿ ಉನ್ನತವ್ಯಕ್ತಿಗಳಾಗಿದ್ದವರು. ಭಗವಂತನು ವಿ.ಸೀ. ಯವರಿಗೆ ಇನ್ನು ಬೇರೆ ಯಾವ ಸುಖಸಂಪತ್ತುಗಳನ್ನು ದೊರಕಿಸದೆ ಹೋಗಿ ದ್ದರೂ ಸ್ನೇಹ ಸೌಭಾಗ್ಯವನ್ನು ಮಾತ್ರ ಮುಕ್ತಹಸ್ತದಿಂದ ದಯಪಾಲಿಸಿದ್ದ. ತಮ್ಮ ಸ್ನೇಹಿತರ ಸಹವಾಸದಲ್ಲಿ ವಿ.ಸೀ. ಸ್ವರ್ಗಸುಖವನ್ನು ಅನುಭವಿಸಿದರು. 'ಜನ ರೊಂದಿಗೆ ಬೆರೆಯುವುದು, ಜನರನ್ನು ಅರಿತುಕೊಳ್ಳುವುದು, ಜನರಿಗೆ ನೆರವಾಗು ವುದು, ಜನರ .ನೆರವನ್ನು ಬಯಸುವುದು, ಜನರಿಗಾಗಿ ಬರೆಯುವುದು' ವಿ.ಸೀ.ಯವರ ಸ್ವಭಾವ ಎನ್ನುವುದನ್ನು ಅವರನ್ನು ಹತ್ತಿರದಿಂದ ಕಂಡವರೆಲ್ಲರೂ ಒಪ್ಪಿಕೊಂಡಿದ್ದಾರೆ. ಸ್ನೇಹಜೀವನದ ಅನೇಕ ಸ್ಮೃತಿಗಳು ಅವರ ಬರಹ

ಗಳುದ್ದಕ್ಕೂ ಕಾಣಿಸಿಗುತ್ತವೆ. ಸ್ನೇಹಿತರನ್ನು ಚಿತ್ರಿಸಿರುವ ರೀತಿಯಲ್ಲಿ ವಿ.ಸೀ. ಯವರ ಹೃದಯವಂತಿಕೆ ಎದ್ದುಕಾಣುತ್ತದೆ.

ವಿ.ಸೀ.ಯವರ ಗೆಳೆಯರಲ್ಲಿ ಮುಖ್ಯಸ್ಥಾನವನ್ನು ಪಡೆದವರು ಮಾಸ್ತಿಯವರು, ಬೇಂದ್ರೆಯವರು, ವೆಂಕಣ್ಣಯ್ಯನವರು ಮತ್ತು ಪಂಜೆಯವರು. ಪಂಜೆ ಮಂಗೇಶರಾಯರ ವಿಷಯವನ್ನು ಬರೆಯುವಾಗ ವಿ.ಸೀ. ತಮ್ಮನ್ನು ತಾವೇ ಮರೆತುಕೊಳ್ಳುತ್ತಾರೆ. ಹೃದಯವನ್ನೇ ತೆರೆದು ನಮ್ಮ ಮುಂದಿಡುತ್ತಾರೆ.

> ''ಅವರನ್ನು ನಾನು ನೆನೆಯುವುದು ಅವರ ವ್ಯಕ್ತಿತ್ವಕ್ಕಾಗಿ, ಅವರ ಸರಸ ಸಂಪರ್ಕಕ್ಕಾಗಿ, ಮಗುವಿನಂತಹ ಮನಸ್ಸಿಗಾಗಿ, ದೇವರಂತಹ ಅವರ ಮಾತು, ಒಡನಾಟಗಳಿಗಾಗಿ. ಎಲ್ಲಕ್ಕಿಂತ ದೊಡ್ಡದು ಆ ಜೀವ ಗುಣ. ಮಗನಾಗಿ, ತಂದೆಯಾಗಿ, ಗುರುವಾಗಿ, ಅಧಿಕಾರಿಯಾಗಿ, ಚಿಕ್ಕವರೂ, ದೊಡ್ಡವರೂ, ಹೆಣ್ಣುಮಕ್ಕಳೂ, ಅರಿಯದ ಜನ, ಬೀದಿಯವರು, ಕೂಲಿಯವರು, ವಿದ್ವಾಂಸರು - ಎಂಥವರೊಡನೆಯೂ ಅವರು ಬೆರೆತು ಹತ್ತು ನಿಮಿಷಗಳಲ್ಲಿ ಇದು ಅನನ್ಯಸಾಧಾರಣವಾದ ಒಂದು ಸತ್ವ, ಲೋಕದ ಅತಿ ವಸ್ತುಗಳಲ್ಲಿ ಒಂದು ಎಂದು ಭಾಸವಾಗುತ್ತಿದ್ದರು. ಹೀಗೆ ಅವರು ನಮ್ಮೆಲ್ಲರಿಗೂ ಪ್ರಿಯರಾದರು.''
>
> (*'ವ್ಯಕ್ತಿಚಿತ್ರ ಸಂಪುಟ' ಭಾಗ -೧, ಪು. ೧೫೧*)

ವರಕವಿ ಬೇಂದ್ರೆ ಮತ್ತು ಮಾಸ್ತಿಯವರೊಡನೆ ವಿ.ಸೀ.

ಪಂಜೆಯವರ ಮನೆಯಲ್ಲಿ ಕಳೆದೊಂದು ದಿನದ ನೆನಪು ವಿ.ಸೀ.ಯವರ ಮನಸ್ಸಿನಲ್ಲಿ ಮಾಸದೆ ಉಳಿದಿತ್ತು. ವರಾಂಡದಲ್ಲಿ ಪಂಜೆಯವರು ಸಿಗರೇಟು ಸೇದುತ್ತ ಅತ್ತಿಂದಿತ್ತಾ ತಿರುಗಾಡುತ್ತಿದ್ದರಂತೆ. ಏನನ್ನೊ ನೆನಪಿಸಿಕೊಂಡು ತಮ್ಮ ದೊಡ್ಡ ಮಗಳು ಅನಸೂಯೆಯನ್ನು ಕರೆದು, 'ಅನ್ನೂ ! ಹೂ ಮಾರುವ ಹೆಣ್ಣಿನ ಹಾಡು ನೆನಪಿದೆಯೇನಮ್ಮ. ಅದನ್ನು ಹಾಡು' ಎಂದರಂತೆ. ಬಹು ಸಮಯ ಬೀದಿಗಳೆಲ್ಲ ತಿರುಗಾಡಿ, ಹೂ ಮಾರಾಟವಾಗದಿರಲು ನಿರಾಸೆಯಿಂದ ರಸ್ತೆಯ ಕಲ್ಲಿನ ಮೇಲೆ ಕುಳಿತ ಹೂಮಾರುವ ಹುಡುಗಿಯನ್ನು ಕುರಿತದ್ದು ಆ ಹಾಡು. ಅನಸೂಯಾದೇವಿ ಬಹು ಮೃದುವಾಗಿ ಕರುಣೆ ಹೊಮ್ಮುವಂತೆ ಆ ಹಾಡನ್ನು ಹಾಡಿದರಂತೆ. ಹಾಡು, ಅದನ್ನು ಹಾಡಿದ ರೀತಿ ವಿ.ಸೀ.ಯವರ ಮನಸ್ಸಿನ ಮೇಲೆ ತುಂಬಾ ಪರಿಣಾಮ ಉಂಟುಮಾಡಿತು. ಮಗಳನ್ನು ಮನೆಯೊಳಗೆ ಕಳುಹಿಸಿಕೊಟ್ಟಮೇಲೆ ಪಂಜೆಯವರು ವಿ.ಸೀ. ಕಡೆ ತಿರುಗಿ 'ಹಾಡಿನ ವಿಷಯವಾಗಿ ನಿಮ್ಮ ಅಭಿಪ್ರಾಯವೇನು?' ಎಂದು ಕೇಳಿದರಂತೆ. 'ತುಂಬಾ ಆರ್ದ್ರವಾಗಿದೆ ಸನ್ನಿವೇಶ, ಮಟ್ಟು ಬಹಳ ಚೆನ್ನಾಗಿದೆ. ಇದು ನಮ್ಮ ತರಹ ಸಂಗೀತವಲ್ಲ. ಆದರೆ ಇಲ್ಲಿ ನುಡಿಯುವ ಕಾರುಣ್ಯ ಎದೆ ಕರಗಿಸುವಂಥಹುದು' ಎಂದರಂತೆ ವಿ.ಸೀ. ಇದನ್ನು ಕೇಳಿದ ಪಂಜೆಯವರು ಕೂಡಲೇ ಬಂದು ವಿ.ಸೀ. ಯವರನ್ನು ಬಿಗಿದಪ್ಪಿದ್ದರಂತೆ. 'ಈ ಹಾಡನ್ನು ಕೆಲವು ಕಾಲದ ಹಿಂದೆ ನಮ್ಮ ಕಡೆಯೊಬ್ಬರ ಎದುರು ಹಾಡಿಸಿದ್ದೆ. ಅವರು ಈ 'ಕಿರಿಸ್ತಾನಿ ಸಂಗೀತ ಕೇಳುವುದು ಕಷ್ಟ' ಎಂದೋ ಏನೋ ಅಣಕಿಸಿ ಹಲ್ಲು ಕಿರಿದುಬಿಟ್ಟರು. ಆ ನೆನಪು ಮುಳ್ಳಿನಂತೆ, ಶಲ್ಯದಂತೆ ಪಂಜೆಯವರ ಮನಸ್ಸಿನಲ್ಲಿ ನಾಟಿತ್ತು. ಅಂದಿನ ಯಾತನೆಯನ್ನು ಅವರು ಪುನಃ ಅನುಭವಿಸುತ್ತಿದ್ದರು ಎಂಬಂತಿತ್ತು.

ಈ ಸನ್ನಿವೇಶದ ವಿವರ ವಿ.ಸೀ.ಯವರ ಮತ್ತು ಪಂಜೆಯವರ ವ್ಯಕ್ತಿತ್ವದ ಮೇಲೆ ಮರೆಯಲಾಗದ ಹೊಸಬೆಳಕನ್ನು ಚೆಲ್ಲುತ್ತದೆ. ಆ ಹಿರಿಯ ಬಾಳನ್ನು ನೆನೆಸಿಕೊಂಡು ವಿ.ಸೀ. ಹೇಳುತ್ತಾರೆ :

> ''ರಾಯರನ್ನು ನೆನೆಸಿಕೊಂಡಾಗಲೆಲ್ಲ ಒಂದು ತುಂಬು ಬಾಳಿನ ಚಿತ್ರ ಕಣ್ಣಮುಂದೆ ಬರುತ್ತದೆ. ಒಂದು ಕಾಲ, ಒಂದು ದೇಶ, ಒಂದು ಜನತೆ ಇಂಥವರ ಹುಟ್ಟು ಬದುಕುಗಳಿಂದ ಒಂದು ವಿಶೇಷ ಬಗೆಯ ಕೃತಾರ್ಥತೆಯನ್ನು ಪಡೆಯುತ್ತದೆ.''
>
> (*'ವ್ಯಕ್ತಿಚಿತ್ರಗಳು ಭಾಗ ೧', ಪು. ೧೬೦*)

ಮಂಜೇಶ್ವರ ಗೋವಿಂದ ಪೈಗಳನ್ನು ಹೀಗೆಯೇ ತುಂಬ ಮೆಚ್ಚಿಕೊಂಡಿದ್ದರು ವಿ.ಸೀ. ಪೈಗಳನ್ನು ಕಾಣಲು ಮಂಜೇಶ್ವರಕ್ಕೆ ಹೋದ ಸಂದರ್ಭದಲ್ಲಿ ಇಬ್ಬರೂ ಕಡಲಕರೆಯಲ್ಲಿ ಕುಳಿತು ಸೂರ್ಯಾಸ್ತವನ್ನು ನೋಡುತ್ತಿದ್ದರಂತೆ. ಆಗ ಪೈಗಳು ತಮ್ಮ ಕೆಳಗೈಯಿಂದ ವಿ.ಸೀ.ಯವರ ಕೈಯನ್ನು ಮೆಲ್ಲನೆ ಹಿಡಿದು 'ಬಹು ಚಲೋದಿದೆಯಲ್ಲ' ಎಂದರಂತೆ. ಅಂದು ವಿ.ಸೀ.ಯವರಿ

ಗುಂಟಾದ ಮೈ ಜುಮ್ಮು ೨೦-೨೫ ವರ್ಷಗಳಾದ ಮೇಲೂ ಮರುಕಳಿಸುತ್ತಿತ್ತಂತೆ. ಅಂದಿನ ಸನ್ನಿವೇಶವನ್ನು ನೆನೆದು ವಿ.ಸೀ. ಹೇಳುತ್ತಾರೆ :

> '' ಆ ಸ್ನೇಹಕ್ಕೆ ಏನು ಕೊಟ್ಟೇನು? ಅಂಥ ಪ್ರೀತಿಯ ನೆನಪು ನನ್ನ ಹಲವು ಪುಣ್ಯಗಳಲ್ಲಿ, ಜೀವನವನ್ನು ಸಹ್ಯಮಾಡಿರುವ ಅಮೃತಾಂಶಗಳಲ್ಲಿ ಒಂದು. ನನ್ನ ಬಾಳಿಗೆ ಸಾರ್ಥಕತೆಯನ್ನು ತಂದು ಅಂಥವು ಉಪಕರಿಸಿವೆ.'
>
> *('ವ್ಯಕ್ತಿಚಿತ್ರಸಂಪುಟ' ಭಾಗ ೧, ಪು. ೧೭೪)*

ವ್ಯಾಯಾಮ ಪಟುಗಳಾದ ಕೆ.ವಿ. ಅಯ್ಯರ್ ಅವರು ವಿ.ಸೀ.ಯವರ ಮತ್ತೊಬ್ಬ ಆಪ್ತಗೆಳೆಯರು. ಯಾವುದೋ ಒಂದು ಸಂದರ್ಭದಲ್ಲಿ ಗೃಹ ಜೀವನದ ತೊಡಕಿಗೆ ವಿ.ಸೀ. ಸಿಕ್ಕಿಹಾಕಿಕೊಂಡರು. ಮನೆಬಿಟ್ಟು ಬೇರೆ ಕಡೆ ಇರಬೇಕಾದ ಪ್ರಸಂಗ ಎದುರಾಯಿತಂತೆ. ಆಗ ಅವರು ದಾರಿಕಾಣದೆ, ಕೋಶಾಧ್ಯಕ್ಷನಾಗಿ ಪರಿಷತ್ತಿನಲ್ಲಿ ಕೆಲಸ ಮಾಡುತ್ತಿದ್ದ ಕೋಣೆಯಲ್ಲೆ ಎರಡು ದಿವಸವಿರಲು ಆಶ್ರಯ ಬೇಡಿ, ಅಪ್ಪಣೆ ಪಡೆದು ಅಲ್ಲಿ ವಾಸಿಸಲು ಹೋದರಂತೆ. ಈ ಸಮಾಚಾರ ಅಯ್ಯರ್ ಅವರಿಗೆ ಹೇಗೋ ತಿಳಿದು ಅವರು ಕೂಡಲೇ ಪರಿಷತ್ತಿಗೆ ಧಾವಿಸಿ ಬಂದು 'ನೀವಿಲ್ಲಿ ಬಂದಿರುವುದೇಕೆ? ನಾವೆಲ್ಲ ಸತ್ತು ಹೋಗಿದ್ದೇವೆಯೇ?' ಎಂದು ಬಿರುನುಡಿಗಳಲ್ಲಿ ಕೇಳಿ, ವಿ.ಸೀ.ಯವರನ್ನೂ ಅವರ ಮನೆಯವರನ್ನೂ ಕೂಡಲೇ ತಮ್ಮ ಮನೆಗೆ ಕರೆದುಕೊಂಡು ಹೋಗಿ ಆಶ್ರಯವಿತ್ತರಂತೆ.

ಅಯ್ಯರವರು ಅಂದು ತೋರಿದ ಗುಣವನ್ನು 'ಮಾನವತೆಯ ಪರಮ ಸಂಸ್ಕಾರ ಲಕ್ಷಣ' ಎಂದು ವಿ.ಸೀ. ಗುರುತಿಸುತ್ತಾರೆ. 'ಈ ಮಾನವತೆಯನ್ನು ಎಲ್ಲಿಂದ ತರೋಣ ಈ ನಿರ್ಘೃಣ ಕಾಡುಜೀವನದಲ್ಲಿ? ಇಂಥ ಸೌಮನಸ್ಯಿನ ಸಂಸ್ಕಾರವನ್ನು ಕಾಣುವ ಭಾಗ್ಯ ನನ್ನ ಜೀವಕ್ಕೆ ಇಂಥ ಒಬ್ಬಿಬ್ಬರು ಸ್ನೇಹಿತರಲ್ಲಿ ದೊರೆತು ನನ್ನ ಹೃದಯ ಕೃತಜ್ಞವಾಗಿದೆ' ಎನ್ನುತ್ತಾರೆ. *(ವ್ಯಕ್ತಿಚಿತ್ರ ಸಂಪುಟ ಭಾಗ ೨, ಪು. ೨೦೦-೨೦೧)*

ಇಂಥ ಬಹುಬಗೆಯ ಸ್ನೇಹಸೌಭಾಗ್ಯವನ್ನು ಪಡೆದು ಕೃತಾರ್ಥರಾದವರು ವಿ.ಸೀ.

ಸೇವಾತತ್ಪರ

ಜೀವನದುದ್ದಕ್ಕೂ ಪಾಠ ಹೇಳಿ ವಿದ್ಯಾದಾನ ಮಾಡಿದ್ದಂತೂ ಸರಿಯೆ. ಆದರೆ ಚಿಕ್ಕಂದಿನಿಂದಲೂ ತಮ್ಮಿಂದ ತಮ್ಮ ಸುತ್ತ ಇರುವವರಿಗೆ ಯಾವ ರೀತಿಯಲ್ಲಾದರೂ ಸೇವೆಸಲ್ಲಬೇಕೆಂಬ ಭಾವ ಅವರಲ್ಲಿ ಬಲಿತಿತ್ತು. ಇನ್ನೂ ಇಪ್ಪತ್ತೆರಡು ವರ್ಷದ ಯುವಕರಾಗಿದ್ದಾಗಲೇ ಕರ್ನಾಟಕ ಸಂಘದ ಕೆಲಸದಲ್ಲಿ ವಿಶೇಷ ಆಸಕ್ತಿ ವಹಿಸಿದ್ದರು. ಸಾಹಿತ್ಯ ಪರಿಷತ್ತಿನ ದಿಗ್ಗಜಗಳ ಪರಿಚಯವಾಗಿ

ಸಂಸ್ಥೆಯ ಸೇವೆಯಲ್ಲಿ ಹೇಗೆಯೋ ಸೇರಿಕೊಂಡರು. ಎಲ್ಲತರದ ಸೇವೆಯನ್ನೂ ಮಾಡಿದರು. ಪ್ರತಿಫಲಾಪೇಕ್ಷೆಯಿಲ್ಲದೆ ಮೂರು ಹೊತ್ತೂ ಸೇವೆ ಸಲ್ಲಿಸಿದರು. ಕಾರ್ಯದರ್ಶಿಯಾಗಿ, ಕೋಶಾಧ್ಯಕ್ಷರಾಗಿ, 'ಕನ್ನಡ ನುಡಿ', 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ 'ಗಳ ಸಂಪಾದಕರಾಗಿ, ಆ ಮೊದಲ ದಿವಸಗಳಲ್ಲಿ ಹಗಲಿರುಳೆನ್ನದೆ ದುಡಿದರು. ಎಷ್ಟೋವೇಳೆ ಸ್ವಂತ ವೆಚ್ಚದಿಂದ ದೂರದ ಊರುಗಳಿಗೆ ಭೇಟಿ ಕೊಟ್ಟು, ಪರಿಷತ್ತಿನ ಪ್ರತಿನಿಧಿಯಾಗಿ ಕರ್ನಾಟಕ ಏಕೀಕರಣಕ್ಕೆ ಬೆಂಬಲ ಕೊಟ್ಟರು. ಉತ್ತರ ಕರ್ನಾಟಕದವರ ಒಲವನ್ನು ಸಂಪಾದಿಸಿದರು. ಕನ್ನಡ ಜನ ಒಟ್ಟಾಗಿ, ಅಖಂಡ ಕರ್ನಾಟಕವಾಗಲು ವಿ.ಸೀ. ಸಲ್ಲಿಸಿದ ಸೇವೆ ಸಾಮಾನ್ಯ ವೇನಲ್ಲ.

ಸಂಗೀತದಲ್ಲಿ ಆಸಕ್ತಿ

ವಿ.ಸೀ. ಕೋಟೆ ಹೈಸ್ಕೂಲಿನಲ್ಲಿ ಓದುತ್ತಿದ್ದ ಕಾಲಕ್ಕೆ, ಸ್ಕೂಲಿನ ಉತ್ತರಕ್ಕೆ ಟಿಪ್ಪೂಸುಲ್ತಾನನ ಅರಮನೆಯೂ, ಅದನ್ನು ದಾಟಿ ಹೋದರೆ ಹಳೆಯ ಪುರಾತನ ಕಟ್ಟಡದಲ್ಲಿ ನಡೆಯುತ್ತಿದ್ದ ಸಂಸ್ಕೃತ ಪಾಠಶಾಲೆಯೂ ಇದ್ದುವು. 'ಗಾಯನ ಸಮಾಜ'ದ ಸಂಗೀತ ಕಚೇರಿಗಳು ಮೊದಲಿಗೆ ಅಲ್ಲಿ ನಡೆಯುತ್ತಿದ್ದವು. ಚಾಮರಾಜಪೇಟೆ ಮೂರನೆಯ ಬೀದಿಯಲ್ಲಿನ ರಾಮೇಶ್ವರನ ಗುಡಿಯ ಸಭಾಂಗಣದಲ್ಲಿಯೂ ಪ್ರಸಿದ್ಧ ವಿದ್ವಾಂಸರ ಗಾಯನ ಕಚೇರಿಗಳು ನಡೆಯುತ್ತಿದ್ದವು. ವಿ.ಸೀ. ಎಳೆವಯಸ್ಸಿನಿಂದಲೆ ಸಂಗೀತದಲ್ಲಿ ಅಭಿರುಚಿ ಬೆಳೆಸಿಕೊಂಡು ಕಚೇರಿಗಳಿಗೆ ಹೋಗುತ್ತಿದ್ದರು.

ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿ ಮೈಸೂರಿಗೆ ಹೋಗಿ ಮಹಾರಾಜ ಕಾಲೆಜು ಸೇರಿ ಊಟ ವಸತಿಗಳಿಗಾಗಿ ಶ್ರೀಮಂತ ಬ್ರಾಹ್ಮಣ ಕುಟುಂಬವೊಂದರ ಆಶ್ರಯ ದೊರಕಿಸಿಕೊಂಡ ಸಂಗತಿಯ ಪ್ರಸ್ತಾಪ ಈಗಾಗಲೆ ಮಾಡಿದ್ದಾಗಿದೆ. ಆ ಶ್ರೀಮಂತರು ಸಂತೆಪೇಟೆಯಲ್ಲಿದ್ದ ರಾಮಮಂದಿರಕ್ಕೆ ಆಗಿಂದಾಗ್ಗೆ ಸೇವೆಸಲ್ಲಿಸುತ್ತಿದ್ದರು ಆ ಕಾರಣವಾಗಿ ಮಂದಿರದಲ್ಲಿ ನಡೆಯುತ್ತಿದ್ದ ಪ್ರದೋಷ ಕಾಲದ ಪೂಜೆಯ ಹೊತ್ತಿಗೆ ಹೋಗಿ ಹತ್ತಿರದಲ್ಲಿ ಕುಳಿತು ಸಂಗೀತವಿದ್ವಾಂಸರ ಸಂಗೀತ ಕೇಳುವ ಅವಕಾಶ ವಿ.ಸೀ. ಯವರಿಗೆ ತಾನಾಗಿ ಒದಗಿಬಂದಿತ್ತು. ಬಿಡಾರಂ ಕೃಷ್ಣಪ್ಪನವರ, ವೀಣೆ ಶೇಷಣ್ಣನವರ ಪರಿಚಯವಾಯಿತು. ಕೃಷ್ಣಜನ್ಮಾಷ್ಟಮಿಯ ಕಾಲದಲ್ಲಿ ಶೇಷಣ್ಣನವರ ಮನೆಗೆ ಹೋಗಿ ಹತ್ತು ರಾತ್ರಿಯೂ ಸಂಗೀತವನ್ನು ಕೇಳುವ ಅವಕಾಶ ಅವರಿಗೆ ದೊರೆಯಿತು. ಹೀಗೆ ಕಾಲೆಜಿನಲ್ಲಿ ಶಾಸ್ತ್ರ ಸಾಹಿತ್ಯಗಳ ವ್ಯಾಸಂಗ ನಡೆಯುತ್ತಿದ್ದ ಕಾಲದಲ್ಲಿಯೇ ಜೊತೆಜೊತೆಗೆ ಸಂಗೀತದ ಮೇಲಿನ ಆಸಕ್ತಿಯೂ ಬೆಳೆಯುತ್ತ ಹೋಯಿತು.

ಇಷ್ಟೇ ಅಲ್ಲ, ಪ್ರಸಿದ್ಧ ವಾಗ್ಗೇಯಕಾರರಾದ ವಾಸುದೇವಾಚಾರ್ಯರ

ಮನೆಗೆ ಪ್ರತಿವಾರವೂ ಹೋಗಿ ಅಲ್ಲಿ ನಡೆಯುತ್ತಿದ್ದ ಭಜನೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಆಚಾರ್ಯರ ಹತ್ತಿರ ಸ್ವಲ್ಪ ಕಾಲ ಶಿಷ್ಯವೃತ್ತಿಯನ್ನೂ ಮಾಡಿದರು. ಆದರೆ ಸಣ್ಣ ಕಾರಣವೊಂದರ ಸಲುವಾಗಿ ಈ ಶಿಕ್ಷಣ ಮುಂದುವರಿಯದೆ ಹೋಯಿತು. ಆದರೆ ಸಂಗೀತದ ಮೇಲಿನ ಆಸಕ್ತಿ ಮಾತ್ರ ಒಂದೇ ಸಮನೆ ಮುಂದುವರಿಯಿತು. ಪ್ರಸಿದ್ಧ ವಿದ್ವಾಂಸರುಗಳ ಗಾಯನ ಕೇಳುವುದರಿಂದ ದೊರೆಯುವ ನಾದಸಂಸ್ಕಾರ, ಸಂಗೀತ ಮಾತ್ರ ಕೊಡಬಲ್ಲ ರಾಗಭಾವಸಂಸ್ಕಾರ ಅವರಿಗೆ ದೊರೆಯಿತು.

ಚಿತ್ರಕಲಾರಾಧಕ

ಕೋಟೆ ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿ ಹೇಗೆ ಸಂಗೀತದ ಮೇಲಿನ ಆಸಕ್ತಿ ಬೆಳೆಯಿತೋ ಹಾಗೇ ಅದೇ ಕಾಲದಲ್ಲಿಯೇ ಚಿತ್ರಕಲೆಯ ಮೇಲಿನ ಆಸಕ್ತಿಯೂ ಬೆಳೆಯಿತು. ಆಗಿನ ಕಾಲದಲ್ಲಿ ಬಂಗಾಳದ ರಮಾನಂದ ಚಟರ್ಜಿಯವರು ಸಂಪಾದಿಸುತ್ತಿದ್ದ 'ಮಾಡರ್ನ್ ರಿವ್ಯೂ' (Modern Review) ಪ್ರಸಿದ್ಧ ಮಾಸಪತ್ರಿಕೆಯಾಗಿತ್ತು. ಆ ಪತ್ರಿಕೆಯಲ್ಲಿ ನಂದಲಾಲ ಬಸು, ಅವನೀಂದ್ರನಾಥ ಠಾಕೂರ, ಗಗನೇಂದ್ರನಾಥ ಠಾಕೂರ ಇವರುಗಳ ವರ್ಣಚಿತ್ರಗಳು ಅಚ್ಚಾಗುತ್ತಿದ್ದವು. ಆ ಚಿತ್ರಗಳು, ಅವುಗಳ ಮೇಲೆ ಬರುತ್ತಿದ್ದ ಟೀಕೆಗಳು ಯುವಕ ವಿ.ಸೀ.ಯವರನ್ನು ಆಕರ್ಷಿಸಿದವು. ಚಿತ್ರಕಲೆಯ ಮೇಲಿನ ಒಲವು ಅಂದಿನಿಂದಲೇ ಬಲಿಯಿತು. ದಿನ ಕಳೆದಂತೆ ವೃದ್ಧಿಹೊಂದುತ್ತ ಹೋಯಿತು. ಮುಂದೆ ಪ್ರಖ್ಯಾತ ಚಿತ್ರಕಾರರಾದ ಕೆ.ವೆಂಕಟಪ್ಪನವರ ಸ್ನೇಹವೂ ದೊರೆತು ಉತ್ತಮ ಕಲಾವಿಮರ್ಶಕರಾದರು. ವೆಂಕಟಪ್ಪನವರ ವಿಷಯವಾಗಿ ಸಚಿತ್ರ ಪುಸ್ತಕವೊಂದನ್ನು ಇಂಗ್ಲಿಷಿನಲ್ಲಿ ಬರೆದರು. ವಿ.ಸೀ. ಯವರಿಗೆ ಚಿತ್ರಕಲೆಯ ಮೇಲಿನ ಆಸಕ್ತಿ ಎಷ್ಟು ಹೆಚ್ಚಿತ್ತು ಎನ್ನುವುದಕ್ಕೆ ಈ ಕಿರುಹೊತ್ತಿಗೆ ಸಾಕ್ಷಿಯಾಗಿದೆ. ಖ್ಯಾತ ಚಿತ್ರಕಲಾವಿದರಾದ ಕೆ.ಕೆ.ಹೆಬ್ಬಾರರೂ, ಮನೀಷಿ ದೇ ಅವರೂ ವಿ.ಸೀ. ಅವರ ಹತ್ತಿರದ ಮಿತ್ರರು. ಅವರ ಕಲಾಕೃತಿಗಳ ಬಗೆಗೂ ವಿ.ಸೀ. ಮೆಚ್ಚಿ ಲೇಖನಗಳನ್ನು ಬರೆದುದುಂಟು.

ವಿಶಾಲ ಓದುಗಾರಿಕೆಯ ಮೂಲಕ ಚಿತ್ರಕಲೆಯ ವಿಶೇಷ ಜ್ಞಾನವನ್ನು ವಿ.ಸೀ. ಸಂಪಾದಿಸಿಕೊಂಡಿದ್ದರು. ಸ್ವಯಂ ಚಿತ್ರಕಾರರಾದ ಎಂ.ವಿ.ಸೀತಾರಾಮಯ್ಯನವರು ವಿ.ಸೀ.ಯವರ ಕಲಾಭಿಜ್ಞತೆಯನ್ನು ಕುರಿತು ಹೇಳುತ್ತ - ''ದೇಶವಿದೇಶಗಳ ಚಿತ್ರಕಲಾ ಪ್ರಪಂಚದಲ್ಲಿ ಅವರು ಅರಿಯದ ಸಂಪ್ರದಾಯ ಪಂಥಗಳಿಲ್ಲ; ಹೆಸರಿಲ್ಲ. ಪಾಶ್ಚಾತ್ಯ ಚಿತ್ರಕಲಾ ಪ್ರಪಂಚದಲ್ಲಿ ನಡೆದಿರುವ ಕ್ರಾಂತಿಗಳೂ ಪ್ರಯೋಗಗಳೂ ತಂತ್ರವಿಧಾನಗಳೂ ಇವರ ಅರಿವಿನ ಎಲ್ಲೆಯೊಳಗೆ ಎಡೆ ಕಾಣದೆ ಇಲ್ಲ'' (ವಿ.ಸೀ.-೭೫, ಪು.೫೬) ಎಂದಿದ್ದಾರೆ.

ವಿ.ಸೀ. ಅವರ ಕೋಣೆಯಲ್ಲಿ ಖ್ಯಾತ ದೇಶಿ ವಿದೇಶಿ ಕಲಾವಿದರ ಚಿತ್ರಗಳನ್ನು ತೂಗುಹಾಕಿದ್ದುದನ್ನು ಯಾರೂ ಕಾಣಬಹುದಿತ್ತು.

ವಿ.ಸೀ. ತಮ್ಮ ಮೊದಲ ಕವನ ಸಂಗ್ರಹವಾದ 'ಗೀತಗಳು' ಪುಸ್ತಕಕ್ಕೆ ಉತ್ತಮ ಕಲಾಚಿತ್ರಗಳನ್ನು ಅಳವಡಿಸಿ ಹೊರತರಲು ವಿಶೇಷ ಆಸಕ್ತಿ ವಹಿಸಿದರು. ಕಲಾಕಾರರು ಅವರ ಮೇಲೆ ಎಷ್ಟೊಂದು ವಿಶ್ವಾಸವಿಟ್ಟಿದ್ದರೆಂದರೆ ಕೇಳಿದ ಕೂಡಲೆ ಉದಾರ ಮನಸ್ಸಿನಿಂದ ತಮ್ಮ ಚಿತ್ರಗಳನ್ನು ಉಪಯೋಗಿಸಿಕೊಳ್ಳಲು ಕೆ. ವೆಂಕಟಪ್ಪನವರೂ, ನಂದಲಾಲ ಬಸು ಅವರೂ ಅನುಮತಿ ಕೊಟ್ಟರು.

ಎಪ್ಪತ್ತು ವರ್ಷ ದಾಟಿದನಂತರ ಒಂದು ಸಲ ವಿ.ಸೀ. ಅನಾರೋಗ್ಯ ನಿಮಿತ್ತವಾಗಿ ನರ್ಸಿಂಗ್ ಹೋಮ್ ಸೇರಬೇಕಾಯಿತು. ಅವರನ್ನು ನೋಡಲು ಬಂದಿದ್ದ ಮಿತ್ರ ಎಸ್.ಆರ್. ರಾಮಸ್ವಾಮಿ, ಹಾಸಿಗೆ ಬಳಿ ದೇಹದ ಒಂದು ಭಾಗದ ಎಕ್ಸ್‌ರೇ ಫೋಟೋವನ್ನು ಕಂಡು, ಅದನ್ನು ಎತ್ತಿಕೊಂಡು ಪರಿಶೀಲಿಸುತ್ತಿದ್ದುದನ್ನು ನೋಡಿದ ವಿ.ಸೀ. - 'ಇದೇನು ಪ್ರಾರಬ್ಧ! ಒಂದು ಒಳ್ಳೆಯ ಪೈಂಟಿಂಗ್ ಆದರೂ ತಂದುಕೊಟ್ಟರೆ ನೋಡಿ ಸಂತೋಷಪಡಬಹುದು. ಇದರಲ್ಲೇನಿದೆ - ಡೆಪ್ತ್, ಫಾರಂ, ಕಾನ್‌ಫಿಗುರೇಷನ್, ಲೆವೆಲ್ಸ್ - ಏನಿದೆ ಇದರಲ್ಲಿ? .... ಒಳ್ಳೆ ಪದ್ಯ ಓದಬಹುದು, ಸೌಂದರ್ಯ ನೋಡಬಹುದು, ಸಂಗೀತ ಕೇಳಬಹುದು. What a blessing' - ಎಂದರಂತೆ. ಇದನ್ನು ನೆನಸಿಕೊಂಡ ರಾಮಸ್ವಾಮಿ ಹೇಳುತ್ತಾರೆ : 'ಈ ಮನೋಭಾವವಿರುವವರನ್ನು ಮೆಚ್ಚದಿರುವುದು ಹೇಗೆ? ' (ರಾಮಸ್ವಾಮಿ, 'ವಿ.ಸೀ.-೭೫', ಪು.೩೫)

ಸೌಂದರ್ಯಪ್ರಜ್ಞೆ

'ಪುಸ್ತಕ ಪ್ರಕಟಣೆಯೂ ಒಂದು ಕಲೆ ಎಂದು ನಂಬಿದವರಲ್ಲಿ, ಆ ನಂಬಿಕೆಗೆ ಅನುಗುಣವಾಗಿ ತಮ್ಮ ಪುಸ್ತಕಗಳನ್ನು ಪ್ರಕಟಿಸಿದವರಲ್ಲಿ ವಿ.ಸೀ. ಮೊದಲಿಗರು; ಅಗ್ರಗಣ್ಯರು' ಎಂದಿದ್ದಾರೆ ಹಾ.ಮಾ. ನಾಯಕರು. ಅಂದವಾಗಿ ಪುಸ್ತಕವನ್ನು ಹೊರತಂದಾಗ ಕುಹಕತನದಿಂದ ಬಿರುನುಡಿಗಳನ್ನಾಡಿದುದಕ್ಕೆ ಅವರಿತ್ತ ಸಮಾಧಾನವನ್ನು ಈಗಾಗಲೇ ಪ್ರಸ್ತಾಪ ಮಾಡಿಯಾಗಿದೆ. ಈ ಟೀಕೆಗಳಿಂದ ಅವರು ಮುಂಚಿನಿಂದಲೂ ಬೆಳೆಸಿಕೊಂಡ ಸೌಂದರ್ಯಪ್ರಜ್ಞೆ ಕುಂದಲಿಲ್ಲ. ಅವರು ತಮ್ಮ ಪುಸ್ತಕಗಳನ್ನು ಆದಷ್ಟುಮಟ್ಟಿಗೆ ಆಕರ್ಷಕವಾಗಿ ಹೊರತರಲು ವಿಶೇಷ ಆಸಕ್ತಿ ವಹಿಸುತ್ತಿದ್ದರು. 'ಕನ್ನಡ ಪುಸ್ತಕಗಳನ್ನು ಚೆಲುವಾಗಿ ಪ್ರಕಟಿಸುವ ಸಂಪ್ರದಾಯವು ಈ ಕಾಲದಲ್ಲಿ ಮೊದಲಾಯಿತೆಂಬ ಅಂಶವು ನಮ್ಮ ಸಾಹಿತ್ಯ ಚರಿತ್ರೆಗೆ ಸೇರುವಂತಾಗಲಿ' ಎಂದುದನ್ನು ನಾಯಕರು ನೆನಪಿಗೆ ತಂದುಕೊಂಡಿದ್ದಾರೆ. 'ತಮ್ಮ ಪುಸ್ತಕಗಳನ್ನು ಚೆಲುವಾಗಿ ಪ್ರಕಟಿಸುತ್ತಿರುವವರಿಗೆಲ್ಲ ಅವರು ಬತ್ತದ ಸ್ಫೂರ್ತಿ, ಪ್ರೇರಣೆಯಾಗಿರುತ್ತಾರೆ' ಎಂದಿದ್ದಾರೆ ನಾಯಕರು ('ಗ್ರಂಥಲೋಕದ ಸುತ್ತಮುತ್ತ', ೧೯೮೪, ಪು. ೧೬೧).

ವಾಗ್ಮಿತೆ

ವಿ.ಸೀ.ಯವರ ವಾಗ್ಮಿತೆ ಪ್ರಸಿದ್ಧವಾದುದು. ಅವರ ವಾಕ್‌ಶ್ರೀ ಸುಭಗತೆಯನ್ನು ಕಂಡು ಬೆರಗಾಗದವರೇ ಅಪರೂಪ. ಅವರು ನಮಗೆ ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನೂ, ಡಿ.ವಿ.ಜಿ.ಯವರ ನಿವೇದನವನ್ನೂ ಬೋಧಿಸಿದ ವೈಖರಿ ಎಂಥದು ಎನ್ನುವುದನ್ನು ಆಗಲೆ ಪ್ರಸ್ತಾಪಿಸಿದ್ದೇನೆ. ಅದೊಂದು ಮರೆಯಲಾಗದ ಅನುಭವ.

'ವಾಗ್ಭೂಷಣಂ ಭೂಷಣಂ'. ಮನುಷ್ಯನಿಗೆ ಗೌರವ ತರತಕ್ಕದ್ದು ಅವನ ಮಾತು. ವಿ.ಸೀ.ಯವರಿಗೆ ಇಡೀ ಕನ್ನಡ ನಾಡು ಸಲ್ಲಿಸಿದ ಗೌರವ ಅವರ ವಾಗ್ಮಿತೆಗಾಗಿ.

ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳವರ ಉಡುಪಿನಿಂದ ಆಕರ್ಷಿತರಾಗಿ, ವಿ.ಸೀ. ಅದನ್ನು ಅನುಕರಿಸತೊಡಗಿದ್ದರಷ್ಟೆ. ವೇಷವೊಂದೇ ಅಲ್ಲದೆ ಶಾಸ್ತ್ರಿಗಳಂತೆಯೇ ಆ ಮಹನೀಯರ ಭಾಷಣದ ವೈಭವದಿಂದಲೂ ವಿ.ಸೀ. ಆಕರ್ಷಿತರಾಗಿದ್ದರು. ಅವರಂತೆಯೇ ಭಾಷಣ ಮಾಡಬೇಕೆಂಬ ಆಕಾಂಕ್ಷೆ ಬಲಿಯಿತು. ಭಾಷಣಶಕ್ತಿಯನ್ನು ಬೆಳೆಸಿಕೊಂಡರು. ಕನ್ನಡದ ಅತ್ಯುತ್ತಮ ಭಾಷಣಕಾರರಲ್ಲೊಬ್ಬರೆಂದು ಕೀರ್ತಿ ಪಡೆದರು. ಬೆಂಗಳೂರು, ಮೈಸೂರು ಕಾಲೆಜು ಆವರಣದಲ್ಲಿ ಮಾತ್ರವಲ್ಲ, ಅಹಮದಾಬಾದ್, ಲಖನೌ, ಬೊಂಬಾಯಿ, ಬಿಜಾಪುರ, ಬೆಳಗಾಂ, ಧಾರವಾಡ ಈ ಸ್ಥಳಗಳಲ್ಲೆಲ್ಲ ಅಮೋಘವಾಗಿ ಭಾಷಣ ಮಾಡಿ ಅಲ್ಲಿಯ ಜನರ ಮನ ತಣಿಸಿದರು. ಇಂಗ್ಲಿಷ್ ಕನ್ನಡವೆರಡರಲ್ಲೂ ಲೀಲಾಜಾಲವಾಗಿ ಅವರು ಭಾಷಣ ಮಾಡುತ್ತಿದ್ದುದನ್ನು ಹಲವಾರು ಜನರು ಸ್ಮರಿಸಿ ಕೊಂಡಿದ್ದಾರೆ.

ಕಾವ್ಯವಾಚನ ಮಾಡುವವರು ಎಷ್ಟೋ ಮಂದಿಯನ್ನು ಕೇಳಿ ದ್ದೇವೆ. ಅವರಲ್ಲಿ ಬಹುಪಾಲು ಜನ ಕವಿಯ ಆಶಯವೇನು ಎನ್ನುವುದನ್ನು ತಿಳಿಯದೆ ಮನ ಬಂದಂತೆ ಪಾಠ ಒಪ್ಪಿಸುವವರೇ. ಅಂಥವರನ್ನು ಕಂಡೇ ಏನೊ ನಯಸೇನ ಹೇಳಿದ್ದು :

ಮಾನಿತ ಪದವಂ, ಪದ ಸಂ
ಧಾನಮನ್, ಅರ್ಥಪ್ರತೀತಿಯಂ, ಕವಿ ಹೃದಯಂ
ಸ್ಥಾನಮನರಿತೋದದೆ, ಕ
ಣ್ಣೇನೆಯ ಕರಡಿಯವೊಲ್ ಊಳ್ದಪಂ ವಾಚಕನೇ

ವಿ.ಸೀ.ಯವರ ಕಾವ್ಯವಾಚನ ಇಂಥ ಯಾವ ಅಪವಾದಕ್ಕೂ ಪಕ್ಕಾಗದಂಥದ್ದು. ಅದರ ಸೊಗಸನ್ನು ವರ್ಣಿಸಲು ಸಾಧ್ಯವಿಲ್ಲ. ಅದನ್ನು ಕೇಳಿಯೇ ಅನುಭವಿಸಬೇಕು.

ವಿ.ಸೀ.ಯವರ ಪಾಠ ಪ್ರವಚನಗಳಿಗೆ ಕಳೆ ತರುತ್ತಿದ್ದದ್ದು ಅವರ ಉಚ್ಚಾರ ಶುದ್ಧಿ. ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಹತ್ತಿರದ ರಾಮೇಶ್ವರನ ಗುಡಿಯಲ್ಲಿ

ಸೇರುತ್ತಿದ್ದ ವಿದ್ವದ್ಗೋಷ್ಠಿಗಳಲ್ಲಿ ಪಾಲುಗೊಳ್ಳುತ್ತಿದ್ದ ಭಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳು, ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು ಮೊದಲಾದವರ ವೇದ ಪಾರಾಯಣ, ಶ್ಲೋಕಗಳ ಗಾಯನ, ಬಾಲಕ ವಿ.ಸೀ.ಯ ಮೇಲೆ ವಿಶೇಷ ಪರಿಣಾಮವುಂಟುಮಾಡಿದ್ದವೆಂದು ತೋರುತ್ತದೆ. ವಿ.ಸೀ. ಬೆಳಸಿಕೊಂಡ ಉಚ್ಚಾರಶುದ್ಧಿಗೆ ಈ ಎಳೆತನದ ವಿದ್ವಾಂಸರ ಸಹವಾಸವೂ ಕಾರಣವಾಗಿರಬೇಕು.

ವಿ.ಸೀ.ಯವರ ಉಚ್ಚಾರಶುದ್ಧಿಗೆ ಒಂದು ನಿದರ್ಶನ ಕೊಡಬೇಕು. ಷೆಲ್ಲಿ ಕವಿಯ ಪ್ರಸಿದ್ಧ ಕವನದ ಸಾಲು ಈ ರೀತಿ ಇದೆ.

O! Wind
If Winter comes can spring be far behind?

ನಾವೆಲ್ಲ ಸಾಮಾನ್ಯವಾಗಿ Wind ಎಂಬ ಪದವನ್ನು 'ವಿಂಡ್' ಎಂದು ಉಚ್ಚರಿಸುತ್ತೇವೆ. 'ವೈಂಡ್' ಎನ್ನುವ ಇನ್ನೊಂದು ಉಚ್ಚಾರವೂ ಈ ಪದಕ್ಕೆ ಉಂಟಂತೆ. ಇದನ್ನು ವಿ.ಸೀ. ಬಲ್ಲರು. ಷೆಲ್ಲಿ ಪದ್ಯವನ್ನು ಓದುವಾಗ ಬಿಹೈಂಡ್ ಎನ್ನುವ ಮುಂದಿನ ಸಾಲಿನ ಪದಕ್ಕೆ ಅನುಗುಣವಾದ ವೈಂಡ್ ಎನ್ನುವ ಉಚ್ಚಾರ ಎಷ್ಟು ಸಮಂಜಸ ಎಂದು ತಿಳಿಯಬಹುದು. ಇದು ಉಚ್ಚಾರಶುದ್ಧಿ. ಉತ್ತಮ ವಾಗ್ಮಿಗಿರಬೇಕಾದ ಮುಖ್ಯಗುಣ.

ಹೊರನಾಡುಗಳಲ್ಲಿ ವಿ.ಸೀ. ಕೊಟ್ಟ ಭಾಷಣಗಳನ್ನು ಕೇಳಿ ಮೆಚ್ಚಿಕೊಂಡ ಕಾರಂತರು ಹೇಳುತ್ತಾರೆ :

> "ವಿ.ಸೀ.ಯವರು ಸಾಹಿತ್ಯ, ಕಲೆ, ಇತಿಹಾಸ, ಅರ್ಥಶಾಸ್ತ್ರ – ಇಂಥ ವಿಷಯಗಳನ್ನು ಕುರಿತು ನಿರರ್ಗಳವಾಗಿ ಮಾತನಾಡಬಲ್ಲರು. ಒಮ್ಮೆ ಊರಿಗೆ ಬಂದ ಅವರು ಇನ್ನೊಮ್ಮೆ ಬರಲೇಬೇಕು ಎಂಬ ಭಾವನೆಯನ್ನು ಜನರಲ್ಲಿ ಮೂಡಿಸುವ ಶಕ್ತಿ ಇದ್ದವರು. ಈ ಕೆಲಸವನ್ನು ವಿ.ಸೀ.ಯವರು ಸುಮಾರು ಮೂವತ್ತು ನಲವತ್ತು ವರ್ಷಗಳ ಕಾಲ ಮಾಡುತ್ತ ಬಂದದ್ದರಿಂದ, ಸೀತಾರಾಮಯ್ಯ ತಮ್ಮ ಬರವಣಿಗೆಗಳಿಂದ ಮಾತ್ರವಲ್ಲ, ನಡೆ-ನುಡಿ, ಉದಾರ ದೃಷ್ಟಿಗಳಿಂದ ಸಂಪರ್ಕಕ್ಕೆ ಬಂದವರೆಲ್ಲರಿಂದಲೂ ಮನ್ನಣೆ ಪಡೆದಿದ್ದರು."
>
> (ಕಾರಂತ, ೧೯೮೩, ಸಂ. ೧, ಪು.೧೩೧)

ವಿ.ಸೀ.ಯವರ ವಾಗ್ಮಿತೆಯನ್ನು ಕೊಂಡಾಡುತ್ತ ಎಚ್.ಕೆ.ರಂಗನಾಥ್ ಹೇಳುತ್ತಾರೆ :

> "ಕಣ್ಣಿಗೆ ಕಟ್ಟುವಂತೆ ಮಾತುಗಳಲ್ಲಿ ಚಿತ್ರ ರಚಿಸುತ್ತಿದ್ದ ಅವರ ರೀತಿ ಅಪರೂಪದ್ದೇ. ಅವರ ಮಾತಿನ ಓಟ, ಧಾಟಿ, ವಿರಿಳಿತ, ಕನ್ನಡ ಭಾಷೆಯನ್ನು ಅದಕ್ಕೆ ಸ್ವಲ್ಪವೂ ನೋವಾಗದಂತೆ ಬಳಸಿಕೊಂಡ ರೀತಿ, ತಮ್ಮದೇ ಧ್ವನಿಯನ್ನು ದುಡಿಸಿಕೊಂಡ ಬಗೆ - ಈ ಎಲ್ಲ ವಿ.ಸೀ. ವೈಶಿಷ್ಟ್ಯ. ಮೂಲ ಪಾಠದ ಜಾಡು ಬಿಡದೆಯೇ ವಿ.ಸೀ.ಯವರು ಶಿಷ್ಯರನ್ನು ತಮ್ಮ ಮಾತಿನ ಮಂಟಪದಲ್ಲಿ ಕುಳ್ಳಿರಿಸಿಕೊಂಡು ಸಾಹಿತ್ಯ, ಸಂಗೀತ, ಕಲೆ, ನಾಟಕ,

ಸಂಸ್ಕೃತಿ ವ್ಯವಂಚಿದಲ್ಲಿ ಸುತ್ತಾಡಿಸುತ್ತಿದ್ದರು. ಅವರ ಪಾಠ - ಅದೊಂದು ಜೀವಂತ ಪ್ರಾಣಕೋಶ.''

(*'ವ್ಯಕ್ತಿಚಿತ್ರ ಸಂಪುಟ', ಭಾಗ ೧, ಪು.xxxvii*)



ನಿಮುಗಾಲದ ಗೆಳೆಯರು - ಶಿವರಾಮ ಕಾರಂತರು

ಬರವಣಿಗೆಗಿಂತ ಹೆಚ್ಚಿನದು ವಿ.ಸೀ.ಯವರ ವಾಗ್ವಿಲಾಸ. ಅದರ ಸೊಗಸನ್ನು ಸವಿದವರೇ ಬಲ್ಲರು. ಸ್ವಯಂ ಉತ್ತಮ ವಾಗ್ಮಿಗಳಾದ ಸಾಲಿಗ್ರಾಮ ಕೃಷ್ಣ ರಾಮಚಂದ್ರರಾಯರು ವಿ.ಸೀ. ಭಾಷಣಗಳ ಸೊಗಸನ್ನು ಮನಸಾರ ಕೊಂಡಾಡುತ್ತ ಹೇಳುತ್ತಾರೆ :

> ''(ವಿ.ಸೀ.) ಅವರ ಮಾತಿನಲ್ಲಿರುತ್ತಿದ್ದ ಕಾವು, ಕಳೆ, ಹೊಳಪು ಲೇಖನಿಗೆ ಇಳಿದು ಬರುವಾಗ ಅಷ್ಟಿಷ್ಟು ಆರುತ್ತಿದ್ದವು. ಮಾತಿನ ಮಿಂಚು ಬರಹದಲ್ಲಿ ಉಳಿದೀತೆ? ಅವರು ಭಾವುಕರು, ರಸಿಕರು, ಸಹೃದಯರು; ಕರಗುವುದು ಅವರ ಸ್ವಭಾವ, ಬಿರುಸಾಗುವುದಲ್ಲ; ಯಾವುದೋ ಭಾವದ ಗುಂಗು, ಏನೋ ಒಳಗುದಿ, ಯಾವುದೋ ಹಳೆಯ ನೆನಪು, ಮಾತು ಚಿಲುಮೆಯಂತೆ ಸಿಡಿದೆದ್ದು ಹೊರಗೆ ಹರಿಯುವುದು ..... ''
>
> *(ಅದೇ, ಪು.v)*

*　　*　　*

> ''ಅವರು ಮಾತನಾಡುವಾಗ ನಿಮ್ಮನ್ನು (ನೀವು ಭಾವುಕರಾದರೆ) ಎಲ್ಲೆಲ್ಲಿಗೋ ಅನಾಯಾಸದಿಂದ ಕರೆದೊಯ್ಯುವರು ; ಮೂರು ಲೋಕಗಳಲ್ಲಿ ಕೈ ಹಿಡಿದು ಸುತ್ತಾಡಿಸುವರು ; ಬಗೆಬಗೆಯ ಭಾವಗಳನ್ನು ಅಡೆತಡೆಯಿಲ್ಲದೆ ಬಿತ್ತರಿಸುವರು. ಬದುಕಿನ ಚೌಕಟ್ಟಿನಲ್ಲಿ, ಸಾಹಿತ್ಯವೋ, ರಾಜಕಾರಣವೋ, ಆರ್ಥಿಕ ಚಿಂತನೆಯೋ, ಭೋಗವೋ, ಬಡತನವೋ, ಕಾವ್ಯವೋ, ಕಲೆಯೋ, ಶೀಲವೋ, ಅಶ್ಲೀಲವೋ, ಊಟವೋ ಉಪಚಾರವೋ ಎಲ್ಲವೂ ಸನಿಹವಾಗಿದ್ದುಕೊಂಡೇ ಸೇರುವವು ; ಯಾವೊಂದು ವಿಚಾರವೂ ಸೆಟೆದು ದೂರ ಸರಿದು ನಿಲ್ಲುವುದಿಲ್ಲ. ಮಾತನಾಡುವಾಗ ಎಲ್ಲವೂ ಸಲ್ಲುತ್ತವೆ.''
>
> *(ಅದೇ, ಪು.vi)*

ಇದೀಗ ವಿ.ಸೀ.ಯವರ ಮಾತುಗಾರಿಕೆಯ ಸ್ವಾರಸ್ಯ. ಇಂಥ ಭಾಷಣಕಾರರು ಅಪರೂಪವಾಗುತ್ತಿರುವುದು ನಾಡಿನ ದುರ್ದೈವ.

ವಿ.ಸೀ.ಯವರ ವಾಗ್ಮಿತೆ, ಅವರ ನಡೆ-ನುಡಿಗಳು ವಿಶಾಲ ಕರ್ನಾಟಕದ ಅನೇಕ ಪ್ರತಿಷ್ಠಿತ ವ್ಯಕ್ತಿಗಳನ್ನು ಅವರ ಮಿತ್ರರನ್ನಾಗಿಸಿತು. ಬಂದವರೆಲ್ಲರೊಡನೆಯೂ ವಿಶ್ವಾಸದಿಂದ ನಡೆದುಕೊಂಡು ಗೌರವಿಸಿದವರು ವಿ.ಸೀ. ಅವರ ಈ ಗುಣವನ್ನು ಎಷ್ಟು ಕೊಂಡಾಡಿದರೂ ಸಾಲದು.

ವಸ್ತ್ರವ್ಯಸನ

ವಿ.ಸೀ.ಯವರಲ್ಲಿದ್ದ 'ವ್ಯಸನ' ಅವರಿಗೆ ವಸ್ತ್ರಗಳ ಮೇಲಿದ್ದ ವ್ಯಾಮೋಹ. ಅವರ ರುಮಾಲು, ಸಿಲ್ಕ್ ಕೋಟು, ಮುತ್ತಿನ ಚಿಪ್ಪಿನ ಗುಂಡಿಗಳು, ತೀಡಿ ಕಟ್ಟಿದ

ಕಚ್ಚೆ ಪಂಚೆ ಇವು ಪ್ರಸಿದ್ಧವಾದವು. ಅವುಗಳ ವಿಚಾರವಾಗಿ ಬಿ. ಜಿ. ಎಲ್. ಸ್ವಾಮಿ ಹೇಳಿರುವುದನ್ನು ಕೇಳಿ :

> ''ಇಂಗ್ಲೆಂಡಿಂದ ಆಮದಾಗುತ್ತಿದ್ದ ೧೭೦೩ ಎಂಬ ಚಿಹ್ನೆಯ ಮಲ್ಲುಬಟ್ಟೆಗೆ ಏಪರೀತ ಬೆಲೆ; ಒಂದೆರಡು ಸಲ ಒಗೆದ ಮೇಲೆ ಆ ಪಂಚೆಗೆ ಒದಗುತ್ತಿದ್ದ ಮುರುಗು ನವುರುಗಳು ಇನ್ನಾವ ಧೋತ್ರಕ್ಕೂ ಬಾರವು. ವಿ. ಸೀ. ಯವರ ಪಂಚೆಕಚ್ಚೆ ಈ ಬಟ್ಟೆಯಿಂದ ರೂಪುಗೊಳ್ಳಬೇಕು. ಹೀಗೆ ತೀಡಿತೀಡಿ ಹಾಕಿದ ಕಚ್ಚೆಪಂಚೆಯ ನಿರಿಗೆ, ಪದರಪದರಗಳ ನುಣುಪಾದ ನೈಜವಾದ ಹರಿವು ಮಗ್ಗದ ದುಪ್ಪಟಿಗೂ ಖಾದಿ ತುಂಡಿಗೂ ಬಂದಾವೆ? ಕೊನೆಯ ಎರಡು ಬಗೆಗಳು ಅಗ್ಗದ ಮಾಲು, ನಿಜ ; ಈ ತೆರನಾದ ಬಟ್ಟೆಯಿಂದಲೂ ಕಚ್ಚೆಪಂಚೆ ಕಟ್ಟಿಕೊಳ್ಳಲು ಸಾಧ್ಯವಿಲ್ಲದೆ ಇಲ್ಲ. 'ಮೈಮುಚ್ಚುವಂತೆ ಒಂದೇ ಬಟ್ಟೆಯಿದ್ದರೆ ಸಾಕು. ಇದು ಶುಚಿಯಾಗಿರಬೇಕಾದ್ದು ಮುಖ್ಯ. ನಮ್ಮ ಋಷಿಗಳು ಪಂಚೆಕಚ್ಚೆಯನ್ನು ೧೭೦೩ ಮಲ್ಲಿನಿಂದಲೇ ಹಾಕಿಕೊಳ್ಳುತ್ತಿದ್ದರೆ? ಒಂದಕ್ಕೆ ಹತ್ತರಷ್ಟು ಬೆಲೆಕೊಟ್ಟು ೧೭೦೩ ಮಲ್ಲೇ ಬೇಕೆನ್ನುವುದು ಬರಿಯ ಛಾನಸ' ಎಂಬುದು ನಮ್ಮಲ್ಲಿ ಕೆಲವರ ಅಭಿಪ್ರಾಯ. 'ಬಟ್ಟೆ ಹಾಕಿಕೊಳ್ಳುವುದರಲ್ಲೂ ಒಂದು ರುಚಿ ಬೇಡವೆ? ಅಗ್ಗದ ಸೂತ್ರವನ್ನೇ ಅನುಸರಿಸುವುದಾದರೆ ಹತ್ತಿಬಟ್ಟೆ ತಾನೆ ಏಕೆ ಬೇಕು. ಋಷಿಗಳಂತೆ ನಾರುಮಡಿಯನ್ನೇ ಉಡಬಹುದಲ್ಲ! ಅದೂ ಬೇಡ. ಎಲೆಗಳನ್ನು ಹೊಲಿದು ನಡುವಿಗೂ ಮೈಗೂ ಸುತ್ತಿಕೊಳ್ಳಬಹುದಲ್ಲ! ಒಂದು ಕಾಸೂ ವೆಚ್ಚವಾಗದು! ಪಂಚೆ ಕಚ್ಚೆಹಾಕಿದರೆ ಅದು ಪಂಚೆ ಕಚ್ಚೆಯಂತೆಯೇ ಇರಬೇಕಲ್ಲದೆ ಒಂದು ಚಾಪೆಯನ್ನು ಸುತ್ತಿಕೊಂಡಂತೆಯೋ ರಟ್ಟಿನ ಕವಚದಂತೆಯೋ ಕಾಣಬಾರದು. ಪಂಚೆಯಲ್ಲಿ ಪಂಚೆತನವೂ ಕಚ್ಚೆಯಲ್ಲಿ ಕಚ್ಚೆತನವೂ ಕಾಣಬೇಕಾದರೆ ಅನುಗುಣವಾದ ಬಟ್ಟೆಯ ರಖಂ ಅನಿವಾರ್ಯ!' — ಎನ್ನುವುದು ಪ್ರತಿಕಕ್ಷಿ. ವಿ. ಸೀ. ಯವರ ಸಿಲ್ಕ್ ಕೋಟಿಗೂ ಇದೇ ತೆರನಾದ ತರ್ಕ. ಅವರ ರುಮಾಲು ಮಾತ್ರ ತರ್ಕಾತೀತವಾದದ್ದು.'
>
> *(ಸ್ವಾಮಿ, ೧೯೬೪, 'ಪಂಚಕಲಶಗೋಪುರ,' ಪು. ೮೯-೯೦)*

ವಿ. ಸೀ. ಯವರ ರುಮಾಲಿನ ಬಗೆಗೆ ವಿ. ಸೀ. ಅವರೇ ಜ್ಞಾಪಕಕ್ಕೆ ತಂದು ಕೊಂಡಿರುವ ಇನ್ನೊಂದು ಪ್ರಸಂಗವನ್ನು ಇಲ್ಲಿ ಸ್ಮರಿಸಬೇಕು. ಸರ್ಕಾರದ ಆಡಳಿತವ್ಯವಸ್ಥೆಯಲ್ಲಿ ಕನ್ನಡವನ್ನು ಬಳಸುವುದಕ್ಕೆ, ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಸರಕಾರ ಉಪಸಮಿತಿಯನ್ನು ರಚಿಸಿತ್ತಂತೆ. ಸಭೆ ಕರೆದಿದ್ದವರು ಅಂದಿನ ಮುಖ್ಯ ಕಾರ್ಯದರ್ಶಿ ಪಿ. ವಿ. ಆರ್. ರಾವ್. ಸಮಿತಿಯ ಇನ್ನೊಬ್ಬ ಸದಸ್ಯರು ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿ ಡಿ. ಸಿ. ಪಾವಟೆ. ಏನು ಕಾರಣವೊ ಅಂದು ವಿ. ಸೀ. ಧರಿಸಿದ್ದ ರುಮಾಲು ಮಾಮೂಲಿನಂತೆ ಅಚ್ಚುಕಟ್ಟಾಗಿರದೆ ದೊಡ್ಡದಾಗಿತ್ತಂತೆ. ಅದನ್ನು ಕಂಡ ಪಾವಟೆ 'It is a big turban that Vi. Si. is wearing today' ಎಂದರಂತೆ. ಕೂಡಲೆ ಚಾಟಿಯ ಏಟಿನಂತೆ ಮುಖ್ಯ ಕಾರ್ಯದರ್ಶಿಯಾದ ರಾವ್ 'You need not worry, Pavate, Vi. Si.'s

head can sustain three more such at once' ಎಂದರಂತೆ. ವಿ.ಸೀ. ಅಂದಿನ ಕಾಲದ ಗಣ್ಯರಾದವರಲ್ಲಿ ಪಡೆದುಕೊಂಡಿದ್ದ ಗೌರವ ಮರ್ಯಾದೆಗಳಿಗೆ ಇದೊಂದು ಉದಾಹರಣೆ.

ವಿ.ಸೀ. ಅವರ ಮನಸ್ಸಿಗೆ ನೋವುಂಟುಮಾಡಬೇಕಾದರೆ ಅವರ ರುಮಾಲು ಸರಿಯಾಗಿಲ್ಲವೆಂದು ಟೀಕಿಸಿದರೆ ಸಾಕಂತೆ. ಗೆಳೆಯ ಎಸ್.ಆರ್. ರಾಮಸ್ವಾಮಿ ಹೇಳುತ್ತಾರೆ: ''ಅದಕ್ಕಿಂತ ಮರ್ಮಘಾತಕವಾದ ಟೀಕೆ ಬೇರೆ

'ಮೈಸೂರು ರುಮಾಲು'ಧಾರಿ ವಿ.ಸೀ.

ಯಿಲ್ಲ. ಹಲವಾರು ದಿನಗಳಾದರೂ ಆ ಗಾಯ ಮಾಯಲಿಲ್ಲ.'' ''ನೋಡಿ, ಹೀಗೆಂದುಬಿಟ್ಟರು'' ಎಂದು ವಿ.ಸೀ. ಪ್ರಲಾಪಿಸುತ್ತಿದ್ದರಂತೆ.

ನಿತ್ಯ ಬದಲಾಗುತ್ತಿರುವ ಉಡುಪಿನ ಫ್ಯಾಶನ್ ಕಂಡವರಿಗೆ, ಎಳೆತನದಲ್ಲಿ ಮೆಚ್ಚಿಕೊಂಡ ಉಡುಪಿನ ವೈಖರಿಯನ್ನು ಇಡೀ ಜೀವನವೆಲ್ಲ ವಿಕಪ್ರಕಾರವಾಗಿ ಅವಲಂಬಿಸಿಕೊಂಡು ಬಂದ ವಿ.ಸೀ.ಯವರ ನಿಷ್ಠೆಯನ್ನು ಮೆಚ್ಚದಿರಲು ಸಾಧ್ಯವಿಲ್ಲ.

ವಿ.ಸೀ.ಯವರ ವೇಷಭೂಷಣಗಳಲ್ಲಿನ ಇನ್ನೂ ಒಂದೆರಡು ವೈಲಕ್ಷಣ್ಯಗಳನ್ನು ವಿವರಿಸಬೇಕು. ಕೊಳಕುಬಟ್ಟೆಯನ್ನು ಉಡುವುದು ಎಂದರೆ ಅವರಿಗೆ ಆಗದು. ಎಲ್ಲವೂ ಶುಚಿಯಾಗಿರಬೇಕು. ಗರಿಗರಿಯಾಗಿ ನಿಲ್ಲುವಂತೆ ಇಸ್ತ್ರಿಮಾಡಿದ್ದಾಗಿರಬೇಕು. ಧರಿಸುತ್ತಿದ್ದುದು ಯಾವಾಗಲೂ ಮುಚ್ಚುಕುತ್ತಿಗೆಯ ಕೋಟು. ಕೋಟಿಗೆ ಇಂತಿಷ್ಟೇ ಗುಂಡಿಗಳಿರಬೇಕು ಎನ್ನುವುದು ಅವರ ನಿಯಮ. ಆ ಗುಂಡಿಗಳು Mother of Pearl ಜಾತಿಯವಾಗಿ ಕೋಟಿನ ಬಣ್ಣಕ್ಕೆ match ಆಗಬೇಕು. ಕಾಲಿಗೆ ಕಂದು ಅಥವಾ ಕಪ್ಪು ಬಣ್ಣದ ಮೃದು ಚಪ್ಪಲಿಯೇ ಆಗಬೇಕು. Slip-on shoe ಅಥವಾ pump shoe ಅವರು ಮೆಟ್ಟಿದ್ದನ್ನು ಕಂಡವರಿಲ್ಲ. Wrist watch ಗಿಂತ ಅವರಿಗೆ pocket watch ಒಪ್ಪಿಗೆ.

ಮೈಸೂರು ರುಮಾಲಿನ ಮೇಲೆ ಅಭಿಮಾನವಿರುವಂತೆಯೇ, ಮೈಸೂರು ಜನರ ನಯ ನಾಜೂಕುಗಳನ್ನು ಕಂಡು ಇನ್ನೂ ಹೆಚ್ಚಿನ ಅಭಿಮಾನ ವಿ.ಸೀ. ಯವರಿಗೆ :

> ''ಸುಮ್ಮನೆ ನಮ್ಮನ್ನು ಸೊಗಸುಗಾರರು, ಬಯಲು ಡಂಬದವರು ಎಂದು ತಿಳಿಯದವರು ಆಕ್ಷೇಪಣೆ ಮಾಡುತ್ತಾರೆ. .... ಮೈಸೂರು ನಯ ನಾಜೂಕು, ವಿತರಣೆ, ಐಟಕ್ಕು - ಇವು ಸುಮ್ಮನೆ ಬಂದಾವೆ? ದೇವರಲ್ಲಿ ವರವನ್ನು ಪಡೆದು ಇಲ್ಲಿ ಹುಟ್ಟಿ ಅವುಗಳನ್ನು ಅನುಭವಿಸಬೇಕು. ಈ ಜನ್ಮದಲ್ಲಿ ಅವು ದೊರೆಯದಾದರೆ ಮುಂದಿನ ಜನ್ಮಕ್ಕಾದರೂ ದೊರೆಯಲೆಂದು ಹಗಲೂ ರಾತ್ರಿಯೂ ತಪಸ್ಸು ಮಾಡಬೇಕು.
>
> * * *
>
> ಇಂಥ ಊರಿನ, ಇಂಥ ದೇಶದ, ಮರ್ಯಾದೆಗೆ ತಕ್ಕದ್ದಾಗಿರಬೇಕಲ್ಲವೆ ರುಮಾಲು? ರುಮಾಲು ಶಿರಸ್ಸಿಗೆ ಭೂಷಣ. ಆದುದರಿಂದಲೇ ನಮ್ಮ ರುಮಾಲು ಅಷ್ಟು ಮನೋಹರವಾಗಿರುವುದು. ದಕ್ಷಿಣದವರ ದಿಗಂಬರತೆಯೆಲ್ಲಿ? ಉತ್ತರದವರ ಪರಕೀಯ ವಕ್ರತೆಗಳೆಲ್ಲಿ? ಮೈಸೂರಿನವರ ಶುದ್ಧ ಸೌಂದರ್ಯ ಸಂಪ್ರದಾಯವೆಲ್ಲಿ?..... ಹೀಗೆ ನಮ್ಮ ರುಮಾಲು ನಮ್ಮ ಜನರ ಶೀಲಸಂಸ್ಕಾರಕ್ಕೂ ಮನಸ್ಸಿನ ಶಿಕ್ಷಣಕ್ಕೂ ಬಹು ಅಮೂಲ್ಯವಾದ ಸಹಕಾರಿಯಾಗಿದೆ.''
>
> *(ವಿ.ಸೀ. 'ಸಮಗ್ರಗದ್ಯ', ಪು.೫೮೮,೬೧)*

ಕಾರಂತರು ವಿ.ಸೀ.ಯವರ ಅಚ್ಚುಕಟ್ಟಾದ ವೇಷಭೂಷಣ, ಹಳೆಗಾಲದ ಮೈಸೂರಿನ ಗಂಭೀರ ಸೊಗಸಿನ ತೊಡುಗೆಯನ್ನು ಮೆಚ್ಚಿಕೊಂಡವರಲ್ಲ.

ಕಾರಂತರ ಉಡುಗೆಯನ್ನು ಕಂಡರೆ ವಿ.ಸೀ. ಯವರಿಗೂ ಅಷ್ಟಕ್ಕಷ್ಟೆ. ಕಾರಂತರು ಬರಿ ಪಂಚೆ, ಬನೀನು ತೊಟ್ಟು, ಕೆಲವೊಂದು ವೇಳೆ ಭುಜದ ಮೇಲೆ ಟವಲನ್ನು ತೂಗಿಹಾಕಿಕೊಂಡು ಜೊತೆಯಲ್ಲಿ ಹೊರಟರೆ ವಿ.ಸೀ. ಯವರಿಗೆ ಸಂಕೋಚ. ಅದರೆ ಹೇಳಿಕೊಳ್ಳುವುದಕ್ಕಿಲ್ಲ. ಅವರ ಕಷ್ಟವನ್ನು ನೋಡಿ ಕಾರಂತರು ಒಂದು ಸಲ ಕೇಳಿಯೇಬಿಟ್ಟರಂತೆ, 'ಏನು ನಿಮ್ಮ ಸಂಕಟ?' ಎಂದು. ಆಗ ವಿ.ಸೀ. 'ಈ ವೇಷದಲ್ಲಿ ಹೊರಟರೆ ನಮ್ಮ ಕಡೆ ಶ್ಮಶಾನಕ್ಕೆ ಹೊರಟವರಿವರು ಎನ್ನುತ್ತಾರೆ' ಎಂದರಂತೆ. ಅದಕ್ಕೆ ಕಾರಂತರ ಉತ್ತರ ಸಿದ್ಧ: 'ಅಲ್ಲಿಗೇ ಹೊರಟದ್ದು ಎಂದು ಬಿಡಿ' (ಕಾರಂತ ೧೯೮೩, ಪು.೭).

ಸರಳ ಜೀವನ

ವಸ್ತ್ರ ಉಡುಪುಗಳ ಮೇಲಿನ ವ್ಯಸನವೊಂದನ್ನು ಬಿಟ್ಟರೆ ವಿ.ಸೀ. ಯವರದು ತುಂಬ ಸರಳ ಜೀವನ. ಯಾವ ಭೋಗಭಾಗ್ಯದ ಅಪೇಕ್ಷೆಯೂ ಇರಲಿಲ್ಲ. ಎಲ್ಲಿಗಾದರೂ ಕಾಲುನಡಿಗೆಯಲ್ಲೆ ಪ್ರಯಾಣ. ಬಿಸಿಲಿನ ತಾಪ ನಿವಾರಣೆಗೆಂದು, ಕೈಗೆ ಭೂಷಣವೆಂದು ಕೈಯಲ್ಲಿ ಕೊಡೆ. ಮನೆಯಲ್ಲಿರುವಾಗ ಬೆಳ್ಳಗೆ ಒಗೆದು ಶುಭ್ರವಾಗಿರುವ ಅತಿ ತೆಳ್ಳಗಿರುವ ನವುರಾದ ಪಂಚೆ. ಅಷ್ಟೇ ತೆಳುವಾದ, ಮಲ್ ಬಟ್ಟೆಯಿಂದ ಹೊಲಿದ ಅರೆತೋಳಿನ ಬನಿಯನ್. ಕೂಡಲು ಕುರ್ಚಿ ಮೇಜು ಗಳು ಅವರಿಗೆ ಬೇಕೆನಿಸಲಿಲ್ಲ. ನೆಲದ ಮೇಲೊಂದು ಚಾಪೆ. ಗೋಡೆಯ ಕಡೆ ಸುರುಳಿ ಸುತ್ತಿಟ್ಟ ಹಾಸಿಗೆಯ ಸುರುಳಿ. ಅದಕ್ಕೆ ಒರಗಿಕೊಂಡು ಒಮ್ಮೊಮ್ಮೆ ಕಾಲು ಚಾಚಿಕೊಂಡು ಕುಳಿತಿರುವ ಭಂಗಿ. ಸಣ್ಣ ಕೋಣೆಯಲ್ಲಿ ನೆಲದಿಂದ ಸೂರಿನ ವರೆಗೂ ಕ್ರಮವಾಗಿ ಜೋಡಿಸಿಟ್ಟ ಪುಸ್ತಕಗಳ ರಾಶಿಯೊಂದೇ ಕೊಠಡಿಗೆ ಇದ್ದ ಅಲಂಕಾರ. ಇಂಥ ಸರಳ ಗೃಹ ಪರಿಸರದಲ್ಲಿ ವಿ.ಸೀ. ತಮ್ಮ ಇಡೀ ಜೀವನವನ್ನು ಸಾಗಿಸಿದರು.

ಭೋಗಜೀವನವನ್ನು ಕಂಡರೆ ಅದರಲ್ಲೂ ಆಸಕ್ತಿಯೇ. ಫಸ್ಟ್‌ಕ್ಲಾಸ್ ಗಾಡಿಯಲ್ಲಿ ಪ್ರಯಾಣಮಾಡುವವರ ಬೆಡಗು ಬಿಂಕಗಳನ್ನು ಮೆಚ್ಚಿ ವರ್ಣಿಸಿ ದ್ದುಂಟು. ಸರಳತೆಯಲ್ಲಿಯೂ, ಭೋಗಜೀವನದಲ್ಲಿಯೂ ಎರಡರಲ್ಲೂ ಒಂದೇ ಸಮನಾದ ಆಸಕ್ತಿ. ಇದೊಂದು ಹೊಸಬಗೆಯ ದ್ವಂದ್ವಗಳ ಸಮನ್ವಯ ವನ್ನು ಅವರ ಜೀವನದಲ್ಲಿ ಕಾಣಬಹುದು. ಮುಪ್ಪಿನಲ್ಲೂ ಕುಗ್ಗದ ಒಂದೇ ಬಗೆಯ ಜೀವನೋತ್ಸಾಹ. ಇಂಥ ಮನೋಧರ್ಮವಿರುವವರನ್ನು ಹುಡುಕಿ ಕೊಂಡು ಹೋದರೂ ಸಿಕ್ಕುವುದು ಕಷ್ಟ.

ನಿರ್ಮತ್ಸರತೆ, ಪ್ರಸನ್ನತೆ

ಯಾರಲ್ಲಿಯೇ ಆಗಲಿ ನಿರ್ಮತ್ಸರತೆ ಎನ್ನುವುದು ಅಪರೂಪದ ಗುಣ. ಒಳ್ಳೆಯದನ್ನು ಎಲ್ಲಿ ಕಂಡರೂ ಪ್ರೋತ್ಸಾಹವೀಯುವುದು ತಮ್ಮ ಕರ್ತವ್ಯವೆಂದು

ತಿಳಿದಿದ್ದವರು ವಿ.ಸೀ. ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ವೃತ್ತಿಯ ಸೇವಾವಧಿಯಲ್ಲಿ ಅವರಿಗೆ ದೊರೆಯಬೇಕಾದ ಬಡ್ತಿ ದೊರೆಯದೆ ಅನ್ಯಾಯವಾದುದರ ಪ್ರಸ್ತಾಪ ಮಾಡಿಯಾಗಿದೆ. ತಮಗಿಂತ ಸೇವಾವಧಿಯಲ್ಲಿ ಕಿರಿಯರಾದ ಪುಟ್ಟಪ್ಪನವರು, ತಮ್ಮನ್ನು ಹಿಂದೆ ಹಾಕಿ ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಕೊನೆಗೆ ಕುಲಪತಿಗಳೂ ಆಗಿ ಮೇಲೆ ಮೇಲೆ ಏರಿ ಹೋಗಿದ್ದರು. ಅವರು ಮುಂದುವರಿದುದನ್ನು ಕಂಡು ವಿ.ಸೀ.ಯವರಿಗೆ ಮಾತ್ಸರ್ಯವಿರಲಿಲ್ಲ. ನಡೆಯಲ್ಲಾಗಲಿ, ನುಡಿಯಲ್ಲಾಗಲಿ ಮನಸ್ಸಿನಲ್ಲಿ ಇದ್ದಿರಬಹುದಾದ ಕಹಿಯನ್ನು ತೋಡಿಕೊಂಡವರಲ್ಲ. ಮುಂದೆ 'ಜ್ಞಾನಪೀಠ ಪ್ರಶಸ್ತಿ' ಸಮಿತಿಯ ಸದಸ್ಯರಾಗಿದ್ದಾಗ, ಪುಟ್ಟಪ್ಪನವರ 'ರಾಮಾಯಣ ದರ್ಶನಂ' ಕಾವ್ಯವನ್ನು ಇತರ ಸದಸ್ಯರ ಮುಂದಿಟ್ಟು ಹೊಗಳಿ ಆ ವರ್ಷ ಆ ಕಾವ್ಯಕ್ಕೆ ಪ್ರಶಸ್ತಿ ದೊರೆಯುವಂತೆ ಮಾಡಿದ್ದು ವಿ.ಸೀ.ಯವರ ದೊಡ್ಡಗುಣವನ್ನು ತೋರಿಸುತ್ತದೆ.

ಭಾರತೀಯ ಜ್ಞಾನಪೀಠದ ಅಧ್ಯಕ್ಷರಾದ ಎಲ್.ಸಿ. ಜೈನ್ ಅವರು ವಿ.ಸೀ.ಯವರಿಗೆ ಆ ಸಂದರ್ಭದಲ್ಲಿ ಬರೆದ ಕಾಗದವನ್ನು ಉದ್ಧರಿಸಬಹುದು.

> "I must hasten to offer hearty congratulations to you for recommending the work (ರಾಮಾಯಣ ದರ್ಶನಂ) for the national honour. Our sincere thanks are also due to you for the cooperation you have always extended to us as a member of the Kannada Language Advisory Committee."

ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕೆ ಉತ್ತಮ ಸ್ಥಾನವನ್ನು ಗಳಿಸಿಕೊಟ್ಟ ಪುಟ್ಟಪ್ಪನವರ ಸೇವೆಯನ್ನು ವಿ.ಸೀ. ಮುಕ್ತಕಂಠದಿಂದ ಹೊಗಳಿದ್ದಾರೆ :

> ''ಕನ್ನಡಿಗರಿಗೆ ಕನ್ನಡದ ಮೂಲಕ ತಾನೆ ಎಲ್ಲಾ ಮಟ್ಟಗಳಲ್ಲಿಯೂ ವಿದ್ಯಾರ್ಜನೆ ನಡೆಯಬೇಕು? ಏಕೆ ನಡೆಯಲಾರದು? – ಎಂಬ ಮನಸ್ಸಿನಿಂದ ಒಂದು ಕಡೆ ಸಂಶೋಧನ ಶಾಖೆ, ಇನ್ನೊಂದು ಕಡೆ ಅದಕ್ಕೆ ತಕ್ಕ ಅಚ್ಚಿನ ಮನೆ, ಪ್ರಕಟನಶಾಖೆ ಏರ್ಪಟ್ಟು, ಆ ಮೂಲಕ ನೂರಾರು ಗ್ರಂಥಗಳು ಹೊರಗೆ ಬರುವಂತಾಯಿತು. ಹಿಂದಿನ ಕಾಲದ ಕನ್ನಡ ಪುಸ್ತಕಗಳ ಬಡತನ ಹೋಗಿ ಎಂಥ ದೊಡ್ಡ ಪುಸ್ತಕಭಂಡಾರದಲ್ಲಿ ಕೂಡ ನಿಂತು ಶೋಭಿಸುವಂಥ ಗಾತ್ರದ, ರಂಗಿನ, ಬೆಲೆಯ ಪುಸ್ತಕಗಳು ಸ್ಪರ್ಧಿಸಿ ನಿಲ್ಲುವಂತೆ ಈ ಕಾರ್ಯ ಕೀರ್ತಿಗೊಂಡಿದೆ. ಮುಡಿಯೆಂಬಂತೆ ಕನ್ನಡಕ್ಕೇ ಪ್ರತ್ಯೇಕ ಅಧ್ಯಯನಸಂಸ್ಥೆ ಏರ್ಪಟ್ಟಿದೆ. ಬಗೆಬಗೆಯ ಯೋಗ್ಯತಾ ಸಿದ್ಧಿಗಳನ್ನು ಪಡೆದು, ವಿದ್ಯಾವಂತರು ಹುಟ್ಟಿಕೊಂಡು ಒಂದು ಮಹಾ ಸರಸ್ವತೀಪೀಠವೇ ಮೆರೆಯುವಂತಾಗಿದೆ. ಇದು ಪುಟ್ಟಪ್ಪನವರ ಕನ್ನಡ ತಪಸ್ಸಿಗೆ ದೊಡ್ಡ ಉದ್ಯಾಪನೆ.''

(ವಿ.ಸೀ., 'ಹಿರಿಯರು-ಗೆಳೆಯರು', ಪು.೪೮೨)

ವಿ.ಸೀ. ಯವರ ನಿರ್ಮತ್ಸರತೆಯ ಈ ವಿಶೇಷ ಗುಣವನ್ನು ಮೆಚ್ಚಿಕೊಂಡು ಕಾರಂತರು ಹೇಳಿರುವ ಮಾತುಗಳನ್ನು ಇಲ್ಲಿ ಉಲ್ಲೇಖಿಸಬೇಕು :

> ''ವಿ.ಸೀ.ಯವರ ಬದುಕಿನಲ್ಲಿ ಅವರ ಬದುಕನ್ನು ಗುದ್ದಿ ಹಣ್ಣು ಮಾಡುವ ಅನೇಕ ಪ್ರಸಂಗಗಳು ಎಳೆತನದಿಂದ ಮುಪ್ಪಿನತನಕವೂ ಹಾಯ್ದು ಬಂದಿವೆ. ಅವುಗಳ ಎಡೆಯಿಂದಲೇ ಅವರು ನುಗ್ಗಿ ಪಾರಾಗಿ ಬಂದಿದ್ದಾರೆ. ಆದರೂ ಮನಸ್ಸನ್ನು ತಮ್ಮ ವಿರೋಧಿಗಳ ವಿಷಯದಲ್ಲೂ ಕಹಿಮಾಡಿಕೊಂಡವರಲ್ಲ, ಅವರನ್ನು ಕುರಿತು ಕೆಟ್ಟ ಮಾತನ್ನು ಆಡಿದವರಲ್ಲ. ಎಷ್ಟು ಜನ ಅಂಥ ಒಳ್ಳೆಯತನವನ್ನು ತಮ್ಮ ಬದುಕಿನಲ್ಲಿ ಸಾಧಿಸಬಲ್ಲರು?''
>
> *('ವಿ.ಸೀ. -೭೫,' ಪು.೩೦೧)*

ಜಿಹ್ವಾಚಾಪಲ್ಯ

ಅಜ್ಜಿಯ ಅಡಿಗೆಯ ರುಚಿಯನ್ನು ಉಂಡ ವಿ.ಸೀ. ಅವರ ಜಿಹ್ವಾಚಾಪಲ್ಯ ಬಹು ಬಗೆಯದು. ಅದರ ವರ್ಣನೆಗಳಂತೂ ಬಹು ಸೊಗಸಿನವು, ನಮ್ಮೆಲ್ಲರ ಬಾಯಲ್ಲೂ ನೀರೂರಿಸುವಂಥವು. ತಾವು ಎಳೆತನದಲ್ಲಿ ಊಟದಲ್ಲಿ ಕಂಡ ರುಚಿಯನ್ನು ಬಗೆಬಗೆಯಾಗಿ ಬಣ್ಣಿಸಿದ್ದಾರೆ. ಮಾದರಿಯಾಗಿ :

> ''.... ಬಸಿದ ಸಾರು, ಗೊಡ್ಡು ಹುಳಿ, ಬೇಳೆಯೊಡನೆ ಬೆಂದದ್ದು ; ತಾಳ್ದ, ಕೂಟು ತೊವ್ವೆ, ಹಿದುಕಿದ್ದು, ಸಪ್ಪೆಯದು ಕಾರ ಇಕ್ಕಿ ಮಾಡುತ್ತಿದ್ದರು. ಸಿಕ್ಕಿಸಿಕ್ಕಿದ ಕಾಯಿಪಲ್ಲೆಯ ಕಾಳೊಡನೆ, ಕಾಯೊಡನೆ ಸೇರಿಸುತ್ತಿರಲಿಲ್ಲ. ಕೆಲವಕ್ಕೆ ನೆಲಗಡಲೆ ಸೇರದು ; ಕೆಲವಕ್ಕೆ ಬೇಕು . ಕೆಲವು ದಿನ ಬದನೆ ಮಾತ್ರ ; ಚಪ್ಪರದವರೆಯ ಸಾಂಗತ್ಯ ನಿತ್ಯ ಸೂಕ್ತ. ಅವರೆ ಕಾಳು ಹಾಕಿ ಜೊತೆಗೆ ಆಲೂ, ಸೊಪ್ಪು ಬೇಯಿಸಿ ಅರೆಕಸಬಿ ಅಡಿಗೆ ಎಂದೂ ಇಲ್ಲ. ಯಾವುದಕ್ಕೂ ಒರೆದೊರೆ ಎಂಬುವುದಿಲ್ಲವೆ; ಹೊಂದಬೇಡವೆ; ಮಿತ್ರಗಣ ವೈರಿಗಣ ಇಲ್ಲವೆ? ಅವುಗಳಲ್ಲಿ ಯಾವುದರ ವಿಧಾನವನ್ನಾಗಲಿ ಕಂಪನ್ನಾಗಲಿ ತುಟಿರುಚಿಯನ್ನಾಗಲಿ ಹೊಗಳಿ ಈಗ ಅದಿಲ್ಲದ ಫಾಸಿ ಶಿಕ್ಷೆಯನ್ನು ಅನುಭವಿಸುತ್ತಿರುವ ಭವಿ ನಾನು. ಕೆಲವಂತೂ ಹಸಿಕೊಬ್ಬರಿ ರುಬ್ಬಿ ಮಾತ್ರ ಬಳಸಬೇಕು. ಕೆಲವಕ್ಕೆ ಕೊಬ್ಬರಿ ಪಚ್ಚಡಿ. ತೆಂಗಿನದು ಕೆಲವಕ್ಕೆ . ಹುರಿದ ಒಣಕೊಬ್ಬರಿಯದು ಕೆಲವಕ್ಕೆ . ಜೀರಿಗೆ ಸಂಬಾರ ಇನ್ನು ಕೆಲವಕ್ಕೆ - ಹುಚ್ಚೆಳ್ಳು ಪುಡಿ ; ರೊಟ್ಟಿ, ದೋಸೆ, ತೊಟ್ಟಲು ಕಡಬು, ಗುಗ್ಗರಿ, ಅಕ್ಕಿತರಿ ಉಪ್ಪಿಟ್ಟು ..... ಇಂದೆಲ್ಲಿ ತರಲಿ? ಅದನ್ನು ಯಾರು ಹಾಗೆ ಮಾಡಿಕೊಡುವವರು?....''
>
> *(ವಿ.ಸೀ. 'ನಮ್ಮ ಅಜ್ಜಿಯ ಅಡಿಗೆ', ಸಮಗ್ರ ಗದ್ಯ, ಪು.೩೦೯)*

ವಿ.ಸೀ. ಯವರದು ಸರಳ ಜೀವನ - ಗಾಂಧಿಯವರಂತೆ. ಆದರೆ, ಅದಕ್ಕೆ ಬೇಕಾಗುವ ಸಾಮಗ್ರಿಗಳು ಸುಲಭಕ್ಕೆ ದೊರೆಯವು. ಅದರ ಸೊಗಸಿಗೆ ವಿಳ್ಳೇದೆಲೆ

ಬೇಕು. ಕಾಫಿ, ಗರಿಗರಿ ರುಮಾಲು, ಫಿನ್ಲೆ ಪಂಚೆ, ಮಸಾಲದೋಸೆ, ಇವು ಗಳನ್ನು ಸರಳಜೀವನದ ಕುರುಹೆನ್ನಬಹುದೆ? ವಿಳ್ಳೇದೆಲೆ ಕೂಡ ಅಂಥಿಂಥ ದಾಗಿರಕೂಡದು. ಅದು ಬಳೇಪೇಟೆಯ ಒಂದು ಗುರುತಿನ ಅಂಗಡಿಯಿಂದಲೇ ಬರಬೇಕು. ಇನ್ನು ಕಾಫಿಯೋ! 'ನಾನು ಕಾಫಿ ಕುಡಿದಿರುವಷ್ಟು ನೀವು ನೀರು ಕುಡಿದಿಲ್ಲ' ಎನ್ನುತ್ತಾರೆ ಅವರು.

''ಕನ್ನಡ ನಾಡಿನಲ್ಲಿ ಒಳ್ಳೆಯ ಅಡಿಗೆ, ಪಕ್ವಾನ್ನ, ತಿಂಡಿ ತಿನಸು - ಎಲ್ಲಿ ಮಾಡುತ್ತಾರೆ ಎಂದು ಯಾರಾದರೂ ನನ್ನನ್ನು ಪ್ರಶ್ನಿಸಿದರೆ ಹೋಗಿ ವಿ.ಸೀ. ಅವರನ್ನು ಕೇಳಿ ಎನ್ನುತ್ತೇನೆ ನಾನು'' ಎಂದು ವಿ.ಸೀ.ಯವರ ಜಿಹ್ವಾಚಾಪಲ್ಯ ವನ್ನರಿತ ಕಾರಂತರು ಹೇಳುತ್ತಾರೆ. ವಿ.ಸೀ.ಯವರಂತೆ ಊಟ ತಿಂಡಿಗಳಲ್ಲಿ ರುಚಿ ಯನ್ನು ಕಂಡು ಆಸ್ವಾದಿಸಿದವರು ದೊರೆಯುವುದಿಲ್ಲ. ಅವರು ತಿನ್ನುತ್ತಿದ್ದುದು ಕಡಮೆ. ಆದರೆ ತಿಂದ ಪದಾರ್ಥದ ಮೇಲೆ ಅವರು ಬೆಳಸುತ್ತಿದ್ದ ಟೀಕೆ, ವ್ಯಾಖ್ಯಾನ ಎಲ್ಲರ ಬಾಯಲ್ಲೂ ನೀರೂರುವಂತೆ ಮಾಡುತ್ತಿತ್ತು.

ಒಮ್ಮೆ ಪುಣೆಯಲ್ಲಿ ವಿ.ಸೀ.ಯವರು ಯಾವುದೋ ಸಮಾರಂಭಕ್ಕೆ ಹೋಗಿದ್ದರಂತೆ. ಅಲ್ಲಿಯ ಹಾಸ್ಟೆಲ್‌ನಲ್ಲಿ ಊಟ ಏರ್ಪಾಟಾಗಿತ್ತು. ಊಟಕ್ಕೆ ಬಿಸಿ ಬಿಸಿ ಭಕ್ಕರಿಗಳನ್ನು ಮಾಡಿದ್ದರು. ಆ ಬಿಸಿ ರೊಟ್ಟಿಗಳ ಸವಿಯನ್ನು ಅನುಭವಿ ಸುವ ಸಡಗರದಲ್ಲಿ ವಿ.ಸೀ. ತಮ್ಮ ರೈಲು ಪ್ರಯಾಣವನ್ನೇ ಮರೆತರಂತೆ. 'ನಿಮಗೆ ಗಾಡಿಯ ವೇಳೆಯಾಯಿತು' ಎಂದು ಮಿತ್ರರು ನೆನಪುಕೊಟ್ಟಾಗ 'ಗಾಡಿ ಇನ್ನೊಂದು ಸಿಕ್ಕೀತು. ಈ ರೊಟ್ಟಿ ಸಿಕ್ಕೀತೆ? ಇನ್ನೊಂದು ತನ್ನಿ' ಎಂದು ತೃಪ್ತಿ ಯಿಂದ ಯಾವ ಆತುರವೂ ಇಲ್ಲದೆ ಊಟಮಾಡಿದರಂತೆ. ಇಂಥ ರಸಿಕರು ವಿ.ಸೀ.

ಸಾಹಿತ್ಯಕ್ಕೆ ಒಲಿದ ಮನಸ್ಸು

ಧರ್ಮಶಾಸ್ತ್ರಗಳು ಕೊಂಡಾಡುವ ವೀತರಾಗತನ ಅವರಿಗೆ ರುಚಿಸಲಿಲ್ಲ. 'ಅಂಥವರು ಲೋಕಕ್ಕೆ ವಿಮುಖರು, ಅಂಥವರ ಗೊಡವೆ ನನಗೆ ಬೇಕಿಲ್ಲ' ಎಂದು ದೂರವಿರಿಸಿದರು. ಸಾಮಾನ್ಯರ ಬಾಳೇ ಸೊಗಸಿನದು. ''ಒಂದು ಹಾಡಿನ ಪಲ್ಲವಿ, ಚರಣ, ಅದರ ನಾದಲಯ, ಯಾವುದೋ ಕಣ್ಣಿನ ಒಂದು ಒಸೆವ ಹೊಳಪು, ಒಂದೊಂದು ಬದುಕನ್ನು ಬಣ್ಣಿಸಬಲ್ಲವು. ಕಾಪಾಡಬಲ್ಲವು, ಉದ್ಧಾರ ಮಾಡಬಲ್ಲವು. ಇಲ್ಲಿನ ಸೌಂದರ್ಯ, ಮಾನವವಿಲಾಸ ಬೇರೊಂದರಲ್ಲಿ ನಾ ಕಾಣೆ. ಆದ್ದರಿಂದಲೇ ನನ್ನ ಮನಸ್ಸು ಸಾಹಿತ್ಯದ ಉಪಾಸನೆಗೂ ಆರ್ಜನೆಗೂ ಭೋಗಕ್ಕೂ ತನ್ನನ್ನು ತೆತ್ತುಕೊಂಡಿದೆ.'' *(ವಿ.ಸೀ. 'ಸಮಗ್ರಗದ್ಯ', ಪು.೧೩೯)*

ಹುಟ್ಟೂರಿನ ಮೇಲಿನ ಅಭಿಮಾನ, ದೇಶದ ಮೇಲಿನ ಅಭಿಮಾನ - ಇವನ್ನು sentimental ಎಂದು ತಳ್ಳಿಹಾಕಲು ಅವರು ತಯಾರಿರಲಿಲ್ಲ. ಆ ಭಾವ,

ಮೋಹ ಇಲ್ಲದಿದ್ದರೆ ಮಾನವನ ಬದುಕೇ ಬಡವಾಗುತ್ತಿತ್ತು, ಕಾವು ರಂಗುಗಳನ್ನು ಕಳೆದುಕೊಳ್ಳುತ್ತಿತ್ತು ಎಂದು ಅವರಿಗೆ. 'ಇದನ್ನು ಹೃದಯದೌರ್ಬಲ್ಯವೆನ್ನಬಹುದು; ಆದರೆ ಕ್ಷುದ್ರವಲ್ಲ, ಇದು ಹೃದ್ಯವಲ್ಲ ಎನ್ನಲಂತೂ ಮನಸ್ಸು ಬರುವುದಿಲ್ಲ. ಇದೊಂದು ಮೋಹವೆನ್ನುವುದಾದರೆ ಇಂಥ ಮೋಹವುಳ್ಳ ಮಂದಿ ಸಹಸ್ರವಾಗಲಿ, ನೆಲ ಇಂಥವರಿಂದ ಹಸುರಾಗುತ್ತದೆ. ಹೆಚ್ಚು ಲೋಕಹಿತವನ್ನು ಸಾಧಿಸುತ್ತದೆ. ಹೃದಯದೌರ್ಬಲ್ಯದ ಸನ್ನಿವೇಶಗಳೆ ಜೀವನಕ್ಕೆ ಮೆರುಗು ಕೊಡುತ್ತವೆ. ನೆನಪು ಪರಿಮಳಿಸುತ್ತವೆ' ಎಂದು ವಿ.ಸೀ. ನಂಬಿ ಅಂಥ ಸನ್ನಿವೇಶಗಳ ಕಡೆಗೇ ಹೆಚ್ಚು ಮನಕೊಡುತ್ತಿದ್ದರು.

ಶೈಲಿ

ಬರವಣಿಗೆಯಲ್ಲಿ ವಿ.ಸೀ.ಯವರ ಹಾಗೆ ಅರ್ಥವಿರಾಮ ಚಿಹ್ನೆಗಳನ್ನು, ಇನ್ನೂ ಅನೇಕ punctuation marks ಉಪಯೋಗಿಸಿರುವವರು ನಮಗೆ ದೊರೆಯುವುದು ಅಪರೂಪ. 'ನಾವು ಬರೆಯಲು ಪ್ರಾರಂಭ ಮಾಡಿದಾಗ ಕನ್ನಡದಲ್ಲಿ ವಾಕ್ಯಗಳನ್ನು ರಚಿಸುವ, ಉದಾಹರಣೆಗೆ ವಾಕ್ಯಗಳನ್ನು ತೊಡಗುವ ಮುಗಿಸುವ ವಿಧಾನಗಳು ತೀರ ಮಿತವಾಗಿದ್ದವು. ನಾವು ಭಾಷೆಯನ್ನು ಹೆಚ್ಚು flexible ಮಾಡಲು ಪ್ರಯತ್ನಿಸಬೇಕೆಂದುಕೊಂಡೆವು' ಎಂದು ತಮ್ಮ ಶೈಲಿಯಲ್ಲಿ ಮಾಡಿರುವ ಪ್ರಯೋಗಗಳನ್ನು ಸಮರ್ಥಿಸಿಕೊಂಡಿದ್ದಾರೆ. ಅವರ ಪ್ರಕಾರ 'ಓದುಗನಿಗೆ ಬರಹಗಾರನ ಮನಸ್ಸಿನ ಉಸಿರು ಕತೆ ಕಾಣಿಸಬೇಕು, ವಾಣಿ ಕೇಳಿಸಬೇಕು. ಆದುದರಿಂದ ಸಂಭಾಷಣೆಯ ಹತ್ತಿರಕ್ಕೆ ಬರಹದ ಭಾಷೆಯನ್ನು ತರಲು ಪ್ರಯತ್ನಿಸಿದ್ದೇನೆ.' ಈ ಪ್ರಯತ್ನದಲ್ಲಿ ಅವರು ಯಶಸ್ವಿಯಾಗಿದ್ದಾರೆಂದು ಅವರ ಗದ್ಯವನ್ನು ಓದಿ ಆನಂದಿಸಿದವರೆಲ್ಲರೂ ಧಾರಾಳವಾಗಿ ಹೇಳಬಹುದು. 'ಮಾತಿನ ಭಾಷೆ ಬೇರೆ, ಬರವಣಿಗೆಯ ಭಾಷೆ ಬೇರೆ ಎಂದುಕೊಳ್ಳುತ್ತಿದ್ದ ಆ ಕಾಲದಲ್ಲಿ ಮಾತಿನ ಧಾಟಿಯನ್ನೆ ತಮ್ಮ ಅನುಭವ ಸಾಹಿತ್ಯ ದೃಷ್ಟಿಯಲ್ಲಿ ಇಳಿಸಿದ್ದು ವಿ.ಸೀ.ಯವರ ಅಪೂರ್ವ ಸಾಧನೆ' ಎಂದಿದ್ದಾರೆ ಎಚ್.ಕೆ.ರಂಗನಾಥ್ ಅವರು.

ವಿ.ಸೀ.ಯವರ ಗದ್ಯಶೈಲಿಯ ಸೊಗಸು ಎಂಥದೆನ್ನುವುದು ಇದುವರೆಗಾಗಲೆ ಉದ್ಧರಿಸಿರುವ ಭಾಗಗಳಿಂದ ಮಂದಟ್ಟಾಗಿರಬೇಕು. ಅವರ ಶೈಲಿಯಲ್ಲಿ ಅತಿರೇಕವಿಲ್ಲ, ಸಂಭ್ರಮವಿಲ್ಲ, ಉತ್ಪ್ರೇಕ್ಷೆಯಿಲ್ಲ. ದಿನದಿನ ಆಡುವ ಮಾತಿನಂತೆ ಸಲೀಸಾಗಿ, ಸ್ವಲ್ಪವೂ ತಡವರಿಸದಂತೆ ಮಾತುಗಳು ಉರುಳುರುಳಿ ಬರುತ್ತವೆ. ಇದು ವಿ.ಸೀ.ಯವರ ಶೈಲಿಯ ಲಕ್ಷಣ. ಕಾಲೇಜ್ ದಿನಗಳನ್ನು ನೆನಪಿಸಿಕೊಳ್ಳುತ್ತ ಅವರು ಹೇಳಿರುವ ಮಾತುಗಳು ಅವರ ಶೈಲಿಗೆ ಒಂದು ಉತ್ತಮ ನಿದರ್ಶನ :

> ''ಒಂದು ಕಾಲೇಜಲ್ಲಿ ಕಳೆದ ದಿನಗಳು ಎಂದಾಗ ಕಾಲೇಜಲ್ಲಿ ಏನು ಓದುತ್ತೇವೊ ಏನು ಹೇಳುತ್ತಾರೊ ಅಷ್ಟೇ ಮುಖ್ಯವಲ್ಲ. ಆವರಣ ಮುಖ್ಯ.

ಬೆಳೆವ ಸ್ನೇಹಗಳು, ಕವಿವ ಉಲ್ಲಾಸ, ಕಿರುಕುಳಗಳು; ಕಷ್ಟದಲ್ಲಿ ಕೈ ಚಾಚುವ ನೆರವು; ಸಣ್ಣ ದೊಡ್ಡ ನಡವಳಿಕೆ; ಹುಟ್ಟಿಕೊಳ್ಳುವ ಬಾಂಧವ್ಯಗಳು - ಇವೆಲ್ಲ ಸೇರಿ ಹುಡುಗರ ಮನಸ್ಸನ್ನು ಒಲಿಸುತ್ತವೆ, ರೂಪಿಸುತ್ತವೆ; ಪಕ್ಷಪಾತಗಳನ್ನು, ರುಚಿಗಳನ್ನು ಬಿತ್ತುತ್ತವೆ; ಕೃಪಣತೆ ವಿರಸ ವಿಷಗಳನ್ನು ಬೆರಸುತ್ತವೆ. ಅಲ್ಲಿ ರೂಪಿತವಾಗುತ್ತದೆ ವಿದ್ಯಾರ್ಥಿಯ ಶೀಲಸಂಪತ್ತಿ; ಸಂಸ್ಕಾರ, ಒಳಗೆ ಮನೆಗಳಲ್ಲಿ, ಹೊರಗೆ ಸಂಸ್ಥೆಗಳಲ್ಲಿ ಎಷ್ಟು ಬಗೆಯ ಜೀವನ ಸ್ಪಂದಿಸುತ್ತದೆ, ವಿದ್ಯಾರ್ಥಿಯ ಮನಃಸಂಸ್ಕಾರಕ್ಕೆ ಬೆಳಕು ಹಾಯಿಸುತ್ತದೆ, ಪುಷ್ಟಿ ತರುತ್ತದೆ ಎಂಬುದು ಆ ಕಾಲದಲ್ಲಿ ತುಂಬ ದೊಡ್ಡ ಪ್ರಭಾವವಾಗುತ್ತದೆ. ಅದು ನಾಳೆಯ ಬಾಳಿನ ಅಡಿಗಲ್ಲು.''

(ವಿ.ಸೀ. 'ಕಾಲೆಜ್ ದಿನಗಳು,' ಪು.೨೫೦)

ಎಷ್ಟು ಲಲಿತವಾಗಿ ಮನಸ್ಸು ಹರಿದಂತೆಲ್ಲ ವಿ.ಸೀ.ಯವರ ಗದ್ಯ ಕೂಡ ವಿಧೇಯಕವಾಗಿ ನಡೆಯುತ್ತದೆ. ನಮ್ಮ ಭಾಷೆ ಎಷ್ಟು ಚೆಲುವಿನದು ಎಂದು ಹಿಗ್ಗುವಂತಾಗುತ್ತದೆ. 'ಪಂಪಾಯಾತ್ರೆ'ಯಂತೂ ಕನ್ನಡ ಗದ್ಯ ಶೈಲಿಯ ಸೌಂದರ್ಯಕ್ಕೆ ಅತ್ಯುತ್ತಮ ನಿದರ್ಶನ. ಹಾ.ಮಾ.ನಾಯಕರು ಹೇಳುವಂತೆ - 'ನಮ್ಮ ಗತವೈಭವದ ನೆನಪು, ಶಿಲ್ಪ ಸಂಸ್ಕೃತಿಯ ವೈಭವ, ನವಿರಾದ ಹಾಸ್ಯ, ತಿಳಿಯಾದ ರಸಿಕತೆ, ಉದ್ದಕ್ಕೂ ಮೈವೆತ್ತು ನಿಂತ ಆ ಪಯಣದ ಕತೆ ಪಂಪಾಯಾತ್ರೆ ಕನ್ನಡ ಗದ್ಯಸಾಹಿತ್ಯದ ಒಂದು ಮೈಲಿಗಲ್ಲು'. *(ಹಾ.ಮಾ.ನಾಯಕ, ೧೯೫೩, ಪು.೧೮)*

ಭಗವಚ್ಛ್ರದ್ಧೆ

ವಿ.ಸೀ.ಯವರ ಧರ್ಮಶ್ರದ್ಧೆಯ ವಿಚಾರವಾಗಿ, ಅವರನ್ನು ಹತ್ತಿರದಿಂದ ಕಂಡ ಎಸ್. ಆರ್. ರಾಮಸ್ವಾಮಿ ಹೇಳುತ್ತಾರೆ :

''ಅವರೂ ನಾನೂ ಸಂಧಿಸಿದಾಗಲೆಲ್ಲ ಅವರು ನನ್ನನ್ನು You are a fossil ನಿಮ್ಮ ವೇದ ಪುರಾಣಶಾಸ್ತ್ರಗಳೆಲ್ಲ 'Mumbo-jumbo' ಇತ್ಯಾದಿಯಾಗಿ ಟೀಕಿಸುವುದೂ, ನಾನೂ ಅವರ ವಾದವೆಲ್ಲ ಅಕಾಂಡ ತಾಂಡವವೆಂದು ಹೇಳುವುದೂ ನಮ್ಮಿಬ್ಬರಿಗೂ ರೂಢಿಯಾಗಿದೆ. .....

ಆದರೆ ವಿ.ಸೀ. ಅವರ ನೈತಿಕ-ಧಾರ್ಮಿಕ ಶ್ರದ್ಧೆ ಆಳವಾದದ್ದು. ಅವರ ನಾಸ್ತಿಕತೆ ಮೇಲುಮೇಲಿನದು. ಶಿಖೆಯ ಲಾಂಛನವನ್ನಾಗಲೀ, ನಿತ್ಯಾಚಮನವನ್ನಾಗಲಿ, ಭೋಜನ ಪೂರ್ವದಲ್ಲಿ ಸಾದಿನ ಚುಕ್ಕೆಯಿಡುವುದನ್ನಾಗಲಿ, ಶಿವರಾತ್ರಿಯ ದಿನ ಸಕುಟುಂಬರಾಗಿ ಶಿವಾಲಯಕ್ಕೆ ಹೋಗಿ ದೇವರ ದರ್ಶನ ಮಾಡುವುದನ್ನಾಗಲಿ ವಿ.ಸೀ. ಇಂದಿಗೂ ಬಿಟ್ಟಿಲ್ಲ. ಅವರ ಭಗವಚ್ಛ್ರದ್ಧೆ ಗಾಢವಾದದ್ದು.''

(ರಾಮಸ್ವಾಮಿ, 'ವಿ.ಸೀ.-೭೫', ಪು.೩೭)

ಮನಸ್ಸು ತೀರ ಖಿನ್ನವಾದಾಗ, ಜೀವಕ್ಕೆ ತುಂಬ ಅಧೈರ್ಯ ಉಂಟಾದಾಗ, ದೈವನಿಂದೆ ಮಾಡುವ ಚಪಲ ಹೆಚ್ಚಾದಾಗ, ತಮಗೆ ತಾವೇ 'ಶಿವಾಪರಾಧ ಕ್ಷಮಾಪಣ ಸ್ತೋತ್ರ'ವನ್ನು - 'ಕ್ಷಂತವ್ಯೋ ಮೇ ಅಪರಾಧಃ ಶಿವ ಶಿವ ಶಿವ ಭೋ ಶ್ರೀಮಹಾದೇವ ಶಂಭೋ' ಸ್ತೋತ್ರವನ್ನು - ಹೇಳಿಕೊಂಡು ಮನಸ್ಸಿಗೆ ಸಮಾಧಾನ ತಂದುಕೊಳ್ಳಲು ಪ್ರಯತ್ನಿಸುತ್ತಿದ್ದರಂತೆ. ವಿ.ಸೀ.ಯವರ ಭಗವಚ್ಛ್ರದ್ಧೆ ಈ ರೀತಿಯದು.

ಸ್ನಿಗ್ಧತೆ

ಡಿ.ವಿ.ಜಿ. ಅನಾರೋಗ್ಯದಿಂದ ಬಳಲಿ ಚೇತರಿಸಿಕೊಳ್ಳುತ್ತಿದ್ದಾಗ ವಿ.ಸೀ. ಅವರನ್ನು ನೋಡಲು ಹೋದರಂತೆ. ಆಗಷ್ಟೇ ಮಲಗಿದ್ದು ಏಳುತ್ತಿದ್ದ ಡಿ.ವಿ.ಜಿ. ವಿ.ಸೀ.ಯವರನ್ನು ಕಂಡು 'ದೀರ್ಘಾಯುಸ್ಸನ್ನು ನಾವಿಬ್ಬರೂ ಕೇಳಿಕೊಳ್ಳ ಬೇಕಿಲ್ಲ; ಆರೋಗ್ಯವಾಗಿ ಇಟ್ಟಿರು ಇರುವತನಕ ಎಂದು ಕೇಳಿಕೊಳ್ಳಬೇಕು ಅಷ್ಟೆ' ಎಂದು ಹೇಳಿ ನಕ್ಕರಂತೆ. ಹೌದೆನ್ನುವಂತೆ ವಿ.ಸೀ. ಅನುಮೋದಿಸಿ, ಪರಿವ್ರಾಜಕ ಧರ್ಮವನ್ನು ಪ್ರತಿಬಿಂಬಿಸುವ ಡಿ.ವಿ.ಜಿ. ಅವರ 'ದಾರಿಗರ ಹಾಡು'ವಿನ ಕೊನೆಯ ಮೂರು ಪದ್ಯಗಳನ್ನು -

ಇಂತೆಸಗಬೇಕೆಂಬ ಹಟದ ಬಂಧನವಿಲ್ಲ
ಪಂಥವಿದು ಕಡಿದೆಂಬ ಭೀತಿಯಿಲ್ಲ
ಅಂತರಂಗದೊಳು ನಾವಾಂತು ಗುರುಗಳ ಪದವ
ಸಂತಸಿಪೆವವರ ನುಡಿಯಿಂ - ಸಖರೇ

ಬಿದಿಯಣಕಿಪುದ ಕಂಡು ಹೆದರುವವರು ನಾವಲ್ಲ
ಎದುರುಗೊಳ್ಳುವೆವದನು ವಿನಯದಿಂದೆ
ಎದೆಯೊಳಿಹುದೆಮಗೊಂದು ಸುಧೆಯ ಸಾರದ ಬಿಂದು
ಅದ ಸವಿಯುತಳುಕದಿಹೆವೈ - ಸಖರೇ

ಕಂಡು ಕಂಡುದನೆಲ್ಲ ಬೇಡುವರು ನಾವಲ್ಲ
ಉಂಡು ಸುಖಿಪೆವು ಕೈಗೆ ಬಂದ ಫಲವ
ಎಮ್ಮ ಸುಖವೆಮಗಿಹುದು ನಿಮ್ಮ ದುಗುಡವು ನಿಮಗೆ
ನಿಮ್ಮೂರು ನಮಗೆ ಸಾಕೈ - ಸಖರೇ

ವಿ.ಸೀ. ತಮ್ಮ ನೆನಪಿನಿಂದ ಹೇಳಿ 'This has been part of my life' ಎಂದರಂತೆ. ಆಗ ಡಿ.ವಿ.ಜಿ.ಯವರ ಮುಖದಲ್ಲಿ ಮೂಡಿದ ಮಂದಹಾಸ, ತೃಪ್ತಿ, ಸಂತೋಷ ನುಡಿಗೆ ನಿಲುಕದ್ದು ಎಂದಿದ್ದಾರೆ. (ಸುಮನಾ, 'ಧೀಮಂತ' ೧೯೮೮, ಪು. ೨೫೯) ಆ ಸಂದರ್ಭದಲ್ಲಿ ಪಾಲುಗೊಂಡಿದ್ದ ವೆಂಕಟೇಶಮೂರ್ತಿ ಯವರು 'ಡಿ.ವಿ.ಜಿ. ಹಾಗೂ ವಿ.ಸೀ.ಯವರ ವ್ಯಕ್ತಿತ್ವದ ಸ್ನಿಗ್ಧತೆ ಸೊಗಸುಗಳನ್ನು

ತೋರಿಸುವುದಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇರೊಂದು ನನಗೆ ತೋರದು' ಎಂದಿದ್ದಾರೆ.

ಜೀವನ ದರ್ಶನ

ವಿ.ಸೀ. ಅವರ ಜೀವನದರ್ಶನ ಯಾವುದು ಎನ್ನುವುದನ್ನು ಈ ಕೆಳಗೆ ಕಾಣಿಸಿರುವ ವಾಕ್ಯಗಳು ಸೊಗಸಾಗಿ ಸಂಗ್ರಹಿಸುತ್ತವೆ.

> ''ನನಗೆ ಇಷ್ಟು ನಿಜ; ಬದುಕಿನಲ್ಲಿ ದುಃಖ ಇರುವಂತೆ ಸಂತೋಷವೂ ಇದೆ. ಹಗೆ ಇರುವಂತೆ ಕೆಳೆ ಇದೆ. ನಿಷ್ಠುರತೆ ವಂಚನೆ ಇರುವಂತೆ ನಯ ಪ್ರಾಮಾಣಿಕತೆ ಇವೆ. ಕಷ್ಟದಲ್ಲಿ ಇರುವಾಗ ಯಾರೊ ಒಬ್ಬರಾಡಿದ ಮಾತು ಅಮೃತ ಸತ್ತ್ವವಾಗಬಲ್ಲದು. ಕೋಟಿ ಕರ್ಕಶ ಕೊಲ್ಲುತ್ತಿರುವಾಗ, ಮೌನದಲ್ಲಿ ಮರೆಯಲ್ಲಿ ನಮಗಾಗಿ ಚಾಚಿ ಹಿಡಿವ ಕೈ ಕೆಳೆ, ಕೊಡುವ ಧೈರ್ಯ, ನುಡಿವ ತುಟಿಯ ಒಂದು ಅಲುಗು, ಮಾತು, ಕಣ್ಣಿನ ಒಂದು ಸ್ನೇಹದ ಮಿನುಗು ಸಾಕು - ತಾರಣೆಗೆ, ಉಳಿಸುವುದಕ್ಕೆ, ಬದುಕಿನಲ್ಲಿ ನಂಬಿಕೆ ಸಾಧಿಸುವುದಕ್ಕೆ. ಈ ಲಕ್ಷಣ ಮಾನವತೆಯ ಪರಮ ಲಕ್ಷಣ. ಇದು ನರಲೋಕದ ಸೌಭಾಗ್ಯ. ಈ ಸೌಭಾಗ್ಯ ಎಷ್ಟು ಹೊಮ್ಮಿದರೂ ಕಡಮೆಯೇ ಎನಿಸುತ್ತದೆ ನನಗೆ. ಅದನ್ನು ಸವಿಯುವ ಭೋಗ, ಸಾಧಿಸುವ ಯೋಗ ಸಾಹಿತ್ಯಯೋಗ. ಲೋಕ ಕ್ಷಣಿಕವೇನು? ಆಗಲಿ. ಈ ಸೌಂದರ್ಯ, ಮೈತ್ರಿ ನಶ್ವರವೇ ಆಗಲಿ. ಪ್ರೀತಿ ನನಗೆ ದಿವ್ಯ. ಬಾಳಿಗೆ ನಾನು ಕೃತಜ್ಞ ಎಂಬ ಕವಿನುಡಿಗಳಿವೆ. ಆ ಸುಖೋಷ್ಣತೆ, ಆ ಕರುಳಕರುಣೆ ನನಗೂ ಸಾಕು. ಅದನ್ನು ಎರೆವವರು ಬಂಧುಗಳು, ಲೋಕವೆಲ್ಲ ನಿರ್ಘೃಣವಾಗಿ ಕೈಬಿಟ್ಟ ಕಾಲದಲ್ಲಿ ಎಲ್ಲಿನದೋ ಒಂದು ಪ್ರೀತಿ, ಧೈರ್ಯ ಕಂಡಾಗ ನನಗೆ ಮಾನವನ ಬದುಕು ಸಾರ್ಥಕವಾದಂತೆ ಕಾಣುತ್ತದೆ. ಹತ್ತು ಯುಗಗಳ ಕಷ್ಟವನ್ನು ದಾಟಬಲ್ಲೆನೆಂಬ ದೃಢ ಸ್ಫೂರ್ತಿ ಬರುತ್ತದೆ. ರಾಜ್ಯ ಸಾಮ್ರಾಜ್ಯಗಳ ಗರ್ವವನ್ನು ಪ್ರತಿಭಟಿಸಬಲ್ಲೆನೆಂಬ ನಿಶ್ಚಯ, ಸಾಹಸ ಉಂಟಾಗುತ್ತದೆ. ಈ ನಂಬಿಕೆ ನನಗೆ ಸಾಕು.''
>
> *(ವಿ.ಸೀ. ಸಂಪದ, 'ಸಮಗ್ರಗದ್ಯ-೧', ಪು.೧೩೯-೧೪೦)*

'ನರನಾದವನು ಮಾನವಂತ. ಅವನಿಗೆ ಹಿರಿಯಾಸೆಗಳಿರಬೇಕು. ಅದನ್ನು ತುಂಬಿಕೊಳ್ಳುವ ಧೈರ್ಯ, ಸಾಧಿಸಿಯೇನೆಂಬ ಕಸುವಿರಬೇಕು' ಎನ್ನುತ್ತಾರೆ ವಿ.ಸೀ. ಅದು ಕಡಮೆಯಾಗದಿರಲಿ ಎಂದು ಹಾರೈಸುತ್ತಾರೆ.

ವಿ.ಸೀ. ವ್ಯಕ್ತಿತ್ವ ನಿರೂಪಿಸುವ ಈ ಅಧ್ಯಾಯ ಮುಗಿಸುವ ಮುನ್ನ ಕಾರಂತರು ಆ ಹಿರಿಯ ಜೀವದ ವಿಷಯವಾಗಿ ಆಡಿರುವ ಮಾತುಗಳನ್ನು ನೆನಸಿಕೊಳ್ಳುವುದು ಸೂಕ್ತ.

> ''ನನ್ನ ಪಾಲಿಗೆ (ವಿ.ಸೀ.) ಅವರ ಬದುಕು ಮರೆಯಲಾಗದ್ದು. ಅದು ಅಷ್ಟೊಂದು ದೊಡ್ಡದಾಗಿತ್ತು. ಅವರ ನಡವಳಿಕೆ ಹಾಗಿತ್ತು,

ದೊಡ್ಡಸ್ತಿಕೆ ಹಾಗಿತ್ತು. ಅವರ ಭಾವಜೀವನ ಅಷ್ಟೇ ಹಿರಿದಾಗಿತ್ತು. ಒಂದು ದೃಷ್ಟಿಯಿಂದ ಒಬ್ಬ ಪ್ರಾಧ್ಯಾಪಕ ಎಷ್ಟೆಲ್ಲ ಪೂರ್ಣತೆಯನ್ನು ಪಡೆಯ ಬಹುದೋ ಅಷ್ಟೊಂದು ಪೂರ್ಣತೆಯನ್ನು ಅವರು ಸಾಧಿಸಿದ್ದರು.''

('ಶಿವರಾಮ ಕಾರಂತರ ಲೇಖನಗಳು', ಸಂ. ೧, ಪು.೨೦೯)

ವಿ.ಸೀ. ಯವರ ವ್ಯಕ್ತಿತ್ವದ ಕಲ್ಪನೆ ನಮ್ಮ ಮನಸ್ಸಿನಲ್ಲಿ ಮೂಡುವುದಕ್ಕೆ ಇಲ್ಲಿ ಉದಾಹರಿಸಿರುವ ನಿದರ್ಶನಗಳು ಸಾಕಾದಾವು. ವಿ.ಸೀ. ನಾವು ಮರೆಯ ಲಾಗದ, ಮರೆಯಬಾರದ ವ್ಯಕ್ತಿ.

ಕೊನೆಯ ಅಂಕ

ಮಹಾಕವಿ ಷೇಕ್ಸ್‌ಪಿಯರ್ ತನ್ನ ಪ್ರಸಿದ್ಧ ನಾಟಕವೊಂದರಲ್ಲಿ ಪ್ರಪಂಚವನ್ನು ಒಂದು ನಾಟ್ಯರಂಗಕ್ಕೆ ಹೋಲಿಸಿದ್ದಾನೆ. ಜಗತ್ತಿನ ಗಂಡು ಹೆಣ್ಣುಗಳೆಲ್ಲರೂ ಆ ರಂಗದಲ್ಲಿ ನಟರು. ಅವರು ವಿವಿಧ ವೇಷಗಳನ್ನು ಧರಿಸಿ ರಂಗ ಪ್ರವೇಶಿಸುತ್ತಾರೆ. ಆಟ ಆಡಿ ನಿರ್ಗಮಿಸುತ್ತಾರೆ. ಅವರ ಬಾಳಿನಲ್ಲಿ ಕವಿ ಹಲವು ಘಟ್ಟಗಳನ್ನು ಗುರುತಿಸಿದ್ದಾನೆ. ಏಳನೆಯದೇ ಕೊನೆಯ ಘಟ್ಟ. ಆ ಕೊನೆಯ ಅಂಕವನ್ನು ವಿವರಿಸಿರುವುದು ಹೀಗೆ :

Last scene of all,
That ends this strange eventful history,
Is second childishness and mere oblivion
Sans teeth, sans eyes, sans taste, sans everything.

('As You Like It,' Act.II, Scene VII)

ನಮ್ಮಲ್ಲಿಯೂ ಭರ್ತೃಹರಿಯ ಒಂದು ಶ್ಲೋಕ ಕೂಡ ಇದೇ ರೀತಿ ಜೀವಿಯನ್ನು ರಂಗಭೂಮಿಯ ನಟನಿಗೆ ಹೋಲಿಸುತ್ತದೆ.

ಕ್ಷಣಂ ಬಾಲೋ ಭೂತ್ವಾ, ಕ್ಷಣಮಪಿ ಯುವಾ ಕಾಮರಸಿಕಃ
ಕ್ಷಣಂ ವಿತ್ತೈರ್ಹೀನಃ, ಕ್ಷಣಮಪಿ ಚ ಸಂಪೂರ್ಣವಿಭವಃ
ಜರಾಜೀರ್ಣೈರಂಗೈರ್ನಟ ಇವ ವಲೀಮಂಡಿತ ತನುಃ
ನರಃ ಸಂಸಾರಾಂತೇ ವಿಶತಿ ಯಮಧಾನೀಯವನಿಕಾಂ

(ಹುಟ್ಟಿಗೆ ಬಂದ ಕೆಲಕಾಲ ಬಾಲಕನಾಗಿ, ಕೆಲಕಾಲ ಹರಯವೇರಿ ಕಾಮರಸಿಕನಾಗಿ, ಕೆಲಕಾಲ ಬದುಕಿಗೆ ಧನವಿಲ್ಲದವನಾಗಿ, ಕೆಲಕಾಲ ಐಸಿರಿಯಲ್ಲಿ ಮೆರೆವವನಾಗಿ, ಬರುಬರುತ್ತ ಮುಪ್ಪೇರಿ ಶರೀರಾಂಗಗಳು ಸವೆದು ಸುಕ್ಕುಗೆರೆಗಳಿಂದ ಉಡುಗಿ ಸಂಸಾರದ ಪಾಡನ್ನು ಪಟ್ಟು ಮುಗಿಸಿ, ಕಡೆಗೆ ರಂಗಭೂಮಿಯಿಂದ ನಟನು ತೆರೆಸರಿಸಿ ನೇಪಥ್ಯಕ್ಕೆ ತೆರಳುವಂತೆ ಜೀವನು ಯಮಪುರಿಯನ್ನು ಹೊಗುತ್ತಾನೆ.)

(ಭರ್ತೃಹರಿ, 'ವೈರಾಗ್ಯಶತಕ')

೧೯೭೯ರ ವರ್ಷ ಕಳೆಯಿತು. ಅಲ್ಲಿಗೆ ವಿ.ಸೀ. ಎಂಬತ್ತು ದಾಟಿ ತಮ್ಮ ಬಾಳಿನ ಕೊನೆಯ ಅಂಕವನ್ನು ಪ್ರವೇಶಿಸಿದರು. ಅದೇ ಐದು ವರ್ಷಗಳಿಗೆ ಹಿಂದೆ ತಮ್ಮ ಬಾಳಸಂಗಾತಿಯನ್ನು ಕಳೆದುಕೊಂಡು ಒಂಟಿಯಾಗಿಬಿಟ್ಟಿದ್ದರು. ಒಂಟಿತನದ ಬೇಸರವನ್ನು ನೀಗಿಕೊಳ್ಳಲೆಂದು ಮತ್ತೂರು ಕೃಷ್ಣಮೂರ್ತಿಗಳಿತ್ತ

ಅಜ್ಞಾನವನ್ನು ಮನ್ನಿಸಿ ಲಂಡನ್ ಕಡೆ ಯಾತ್ರೆ ಬೆಳೆಸಿದರು. ದುರದೃಷ್ಟವಶಾತ್ ಆ ವೇಳೆಗೆ ಕೇರಿದ ಮಾರನೆಯ ದಿವಸವೇ ಕೈಕಾಲು ಸ್ವಾಧೀನ ತಪ್ಪಿ ಆಸ್ಪತ್ರೆ



ಕೊನೆಯ ದಿನಗಳ ವಿ.ಸೀ. ತಮ್ಮ ಮನೆಯ ಬಾಗಿಲ ಬಳಿ

ಸೇರಬೇಕಾಯಿತು. ಇದರ ವಿವರವನ್ನು ಆಗಲೆ ತಿಳಿಸಿಯಾಗಿದೆ. ಈ ಆಘಾತ ದಿಂದ ತೀರ ನಿರುತ್ಸಾಹಗೊಂಡು ಪ್ರವಾಸ ಮುಂದುವರಿಸದೆ ವಿ.ಸೀ. ಸ್ವದೇಶಕ್ಕೆ ಮರಳಿದರು. ಅಂದಿನಿಂದ ಅವರ ಆರೋಗ್ಯ ಕ್ಷೀಣಿಸಲು ತೊಡಗಿತು;

ಮಾಮೂಲಿನಂತೆ ಸುತ್ತಾಡಲು ಹೊರಕ್ಕೆ ಹೋಗುವುದು ಸಾಧ್ಯವಾಗದೆ ಹೋಯಿತು. ಏನಿದ್ದರೂ ಮನೆಯೊಳಗೆ ಮಾತ್ರ ತಪ್ಪು ತಪ್ಪು ಹೆಜ್ಜೆಯಿಟ್ಟು ಮಗುವಿನಂತೆ ತಟ್ಟಾಡುತ್ತ ನಡೆಯುವಂತಾಯಿತು. ದೇಹಶಕ್ತಿ ಹೀಗೆ ಕ್ಷೀಣಿಸುತ್ತ ಹೋದರೂ ಬುದ್ಧಿ ಮಾತ್ರ ಚುರುಕಾಗಿಯೇ ಇತ್ತು. ಹೇಳಿ ಬರೆಯಿಸುವ ಕಾರ್ಯ ಎಂದಿನಂತೆ ಮುಂದುವರಿಯುತ್ತಿತ್ತು.

೧೯೬೧ರ ಫೆಬ್ರವರಿ ಹದಿನಾರರಂದು ಸೂರ್ಯಗ್ರಹಣ. ಅಂದೇ ವಿ.ಸೀ. ಯವರ ತಂದೆಯ ವಾರ್ಷಿಕ ತಿಥಿ. ಇದ್ದಕ್ಕಿದ್ದಂತೆ ಆ ದಿನ ಸ್ಮರಣಶಕ್ತಿ ನಷ್ಟವಾಗಿ ಮಾತು ಸಹ ನಿಂತುಹೋಯಿತು. ಮುಖ ತೀರ ಕಪ್ಪಿಟ್ಟಿತು, ಶೂನ್ಯಕಳೆ ಆವರಿಸಿತು. ಏನನ್ನೊ ದಿಟ್ಟಿಸುತ್ತ ಒಂದು ಕಡೆ ಕುಳಿತುಬಿಟ್ಟರು. ಯಾರು ಮಾತನಾಡಿಸಲು ಹೋದರೂ ಅವರಿಂದ ಯಾವ ಪ್ರತಿಕ್ರಿಯೆಯೂ ಇರುತ್ತಿರಲಿಲ್ಲ. ಇಡೀ ದಿನವೆಲ್ಲ ಹಾಗಿದ್ದುದನ್ನು ಕಂಡು ಹತ್ತಿರದವರೆಲ್ಲರೂ ಗಾಬರಿಯಾದರು. ಬಹುಶಃ ಅದೇ ಅವರ ಕೊನೆಯ ದಿನವೂ ಆಗಿಬಿಡುವುದೊ ಏನೊ ಎಂದು ಹೆದರಿದರು.

ಹಠಾತ್ತನೆ ಈ ರೀತಿ ಆರೋಗ್ಯ ಕೆಟ್ಟುದಕ್ಕೆ ಕಾರಣ ಅವರು ಹೊಸ ವೈದ್ಯರೊಬ್ಬರ ಸಲಹೆಯ ಮೇರೆಗೆ ಯಾವುದೋ ಮಾತ್ರೆಯನ್ನು ಸೇವಿಸಿದ್ದಂತೆ. ಆ ಹೊಸ ವೈದ್ಯರು ವಯಸ್ಸಾದ ವಿ.ಸೀ. ಯವರ ಮೇಲೆ ಔಷಧದ ಸಾಧಕ ಬಾಧಕಗಳು ಏನಾಗಬಹುದು ಎನ್ನುವುದನ್ನು ಸರಿಯಾಗಿ ಗಮನಿಸದೆ ಪ್ರಯೋಗಿಸಿಬಿಟ್ಟಿದ್ದರು. ಆ ಮಾತ್ರೆ ವಿ.ಸೀ. ಯವರ ಮೆದುಳಿನ ಜೀವಕೋಶಗಳಲ್ಲಿ ರಕ್ತಸ್ರಾವ ಉಂಟುಮಾಡಿ ನೆನಪಿನ ಶಕ್ತಿಯೇ ಅಳಿದುಹೋಗುವಂತೆ ಮಾಡಿಬಿಟ್ಟಿತ್ತು. ಆಗಬಾರದ್ದು ಆಗಿಹೋಯಿತು. ಯಾರೂ ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ನೆನಪು ಮರುಕಳಿಸುವಂತೆ ಮಾಡಲು ಹಿಂದಿನ ಪರಿಚಯದ ವೈದ್ಯರು ಉತ್ತೇಜಕ ಔಷಧಿಗಳನ್ನು ಕೊಟ್ಟು ನೋಡಿದರು. ಒಂದೆರಡು ವಾರಗಳಲ್ಲಿ ಅಷ್ಟಿಷ್ಟು ಮಾತನಾಡುವ ಶಕ್ತಿಯೇನೊ ಬಂದಿತು. ನೆನಪೂ ಕೂಡ ತಕ್ಕಮಟ್ಟಿಗೆ ಮರಳಿತು. ಆದರೆ ಹಿಂದಿನ ಸ್ಥಿತಿಗೆ ಮರಳುವಂತೆ ಮಾಡಲಾಗಲಿಲ್ಲ. ವಿ.ಸೀ. ಯವರ ಅಂದಿನ ಅಸಹಾಯಕ ಸ್ಥಿತಿಯನ್ನು ಕಂಡು ವೆಂಕಟೇಶಮೂರ್ತಿ ಹೇಳುತ್ತಾರೆ :

> '' ....ಆಡುವ ಮಾತು ಅರ್ಧಾರ್ಧಕ್ಕೇ ನಿಂತು ಅವರನ್ನು ತುಂಬ ಪೇಚಿಗೆ ಸಿಕ್ಕಿಸುತ್ತಿತ್ತು. ಏನನ್ನೊ ಹೇಳ ಹೋಗುವುದು, ಪ್ರಯಾಸಪಟ್ಟು ನಾಲ್ಕು ಪದ ಹೇಳುವುದು. ಮುಂದಿನದು ಮರೆತುಹೋಗಿ ಮಾತಿಗೆ ತಡವರಿಸುವುದು. 'ಹೀಗಾಗಿಹೋಯಿತಲ್ಲ' ಎಂದು ಪೇಚಾಡುವುದು, ಮರುಕ್ಷಣ ಅಸಹಾಯಕರಾಗಿ ಪೆಚ್ಚು ನಗೆ ನಕ್ಕುಬಿಡುವುದು - ದಿನವೂ ಕಾಣಬಹುದಿತ್ತು. ಆ ನಗೆಯ ಹಿಂದಿನ ನೋವು ನುಡಿಗೆ ನಿಲುಕದ್ದು.
>
> ''ಆವರೆಗೆ ಅವರಿಗಿದ್ದ, ಅವರದಾಗಿದ್ದ ಅದ್ಭುತ ಸ್ಮೃತಿಶಕ್ತಿ, ಅಪೂರ್ವ ವಾಗ್ಮಿತೆ, ಸಂಭಾಷಣಾ ಚಾತುರ್ಯ, ಕಾವ್ಯ ನಾಟಕಗಳನ್ನು ಒದಿ

ತೋರಿಸುತ್ತಿದ್ದ ಒಂದು ಅನುಪಮ ಕಲಿಗಾರಿಕೆ, ಅನಾಯಾಸವಾಗಿ ಪೂರ್ವಸಿದ್ಧತೆಯಿಲ್ಲದೆ ಯಾವಾಗ ಎಂದರೆ ಆಗ ಪುಟಗಟ್ಟಲೆ ಹೇಳಿ ಬರೆಸುತ್ತಿದ್ದ ಧೀಶಕ್ತಿ - ಎಲ್ಲವೂ ಇತಿಹಾಸಕ್ಕೇ ಸೇರಿಹೋದವು. ಸದಾ ಚಟುವಟಿಕೆಯಿಂದಿರುತ್ತಿದ್ದು, ಗಂಟೆಗಟ್ಟಲೆ ಲೋಕಾಭಿರಾಮವಾಗಿ ಹೃದ್ಯವಾಗಿ ಮಾತನಾಡಿ, ಒಂದು ವಿಶ್ವರೂಪ ದರ್ಶನವನ್ನೇ ಕಣ್ಮುಂದೆ ಕಟ್ಟಿಸುತ್ತಿದ್ದ ವಿ.ಸೀ. ಈಗ ತಾಸುಗಟ್ಟಲೆ ಮೌನವಾಗಿ ಕುಳಿತಲ್ಲೇ ಏಕಾಕಿಯಾಗಿ ಕುಳಿತಿರುವಂತಾಯಿತು. ತಮ್ಮ ಬದುಕಿನ ಎಂಬತ್ತು ಸಂವತ್ಸರದಲ್ಲಿ ಕಂಡು, ಕೇಳಿ, ಓದಿ ತಿಳಿದ ಎಲ್ಲ ಅನುಭವದ ನೆನಪೂ ಕಣ್ಮರೆಯಾಗಿ, ಕೇವಲ ಶೂನ್ಯತೆ ಆವರಿಸಿದ್ದ ವ್ಯಕ್ತಿ ಆದರು. ಇದರೊಡನೆ ಅವರ ಬೌದ್ಧಿಕ, ಸಾಹಿತ್ಯಿಕ ಜೀವನವೂ ಪರಿಸಮಾಪ್ತಗೊಂಡದ್ದು ಒಂದು ಅನಿವಾರ್ಯ ದುರಂತವೇ.''

(ಸುಮನಾ, ೧೯೮೪, 'ಅಂಕಣ' ಪು.೩)

ಇಂಥ ಮನಃಸ್ಥಿತಿಯನ್ನೇ ಏನೋ ಷೇಕ್ಸ್‌ಪಿಯರ್ 'mere oblivion' ಎಂದದ್ದು. ಮುಂದೆ ಎರಡು ತಿಂಗಳ ಕಾಲ ವೈದ್ಯರು ಕೊಟ್ಟಿದ್ದ ಔಷಧಿಯನ್ನು ವಿ.ಸೀ. ಸೇವಿಸುತ್ತ ಹೋದರು. ಹೆಚ್ಚಿನ ಗುಣ ಕಾಣದೆ ಹೋದದ್ದರಿಂದ ನಿಲ್ಲಿಸಿಬಿಟ್ಟರು. ಔಷಧಿಯಿಂದ ಸ್ವಲ್ಪಮಟ್ಟಿಗೆ ಅವರ ಪರಿಸ್ಥಿತಿ ಸುಧಾರಿಸಿತೆಂದೇ ಹೇಳಬೇಕು. ನೋಡಲು ಬಂದವರನ್ನು ಗುರುತಿಸಲು ಸಮರ್ಥರಾಗಿದ್ದರೂ ಅವರುಗಳು ಯಾರು ಎನ್ನುವುದರ ನೆನಪಿರುತ್ತಿತ್ತೋ ಇಲ್ಲವೊ. ಅಂತೂ ಬಂದವರೆಲ್ಲರನ್ನೂ ನಗುಮುಖದಿಂದ ಸ್ವಾಗತಿಸಿ ಕಳುಹಿಸುತ್ತಿದ್ದರು.

ಆ ಕೊನೆಯ ವರ್ಷಗಳಲ್ಲಿ, ಬಿ.ಬಿ.ಡಿ. ಪ್ರೆಸ್ಸಿನ ಮಾಲೀಕರಾದ ಮಾಧವ ಮಲ್ಯರೂ, ನಾನೂ, ವಿ.ಸೀ. ಅವರ ಹುಟ್ಟುಹಬ್ಬದ ದಿನವಾದ ಅಕ್ಟೋಬರ್ ೨ ರಂದು, ಅವರ ಮನೆಗೆ ಹೋಗಿ ಫಲಪುಷ್ಪಗಳನ್ನು ಅರ್ಪಿಸಿ ಪಾದಮುಟ್ಟಿ ನಮಸ್ಕಾರ ಮಾಡಿ, ಆಶೀರ್ವಾದ ಪಡೆದು ಬರುತ್ತಿದ್ದೆವು. ಕೊನೆಯ ಸಾರಿ ೧೯೮೨ರ ಅಕ್ಟೋಬರ್ ೨ ರಂದು ಅವರನ್ನು ನಾವು ಕಾಣಲು ಹೋದಾಗ, ಮಾಮೂಲಿನಂತೆ ಅವರು ಚಾಪೆಯಮೇಲೆ ಹಾಸಿಗೆ ಸುರುಳಿಯನ್ನು ಒರಗಿ ಕೊಂಡು ಕುಳಿತಿರಲಿಲ್ಲ. ಸ್ನಾನ ಮಾಡಲು ಒಳಗೆ ಹೋಗಿದ್ದರೆಂದು ತೋರುತ್ತದೆ. ಸ್ವಲ್ಪ ಹೊತ್ತು ಕಳೆದ ಮೇಲೆ ಸ್ನಾನ ಮಾಡಿಸಿದ ವಿ.ಸೀ.ಯವರನ್ನು ಅವರ ಮಗ ಮೆಲ್ಲಗೆ ನಡೆಸಿಕೊಂಡು ಕರೆತಂದರು. ಆಗ ತಾನೆ ಬಿಸಿ ನೀರಿನಲ್ಲಿ ಮಿಂದು ಬಂದದ್ದರಿಂದ ನಸು ಕೆಂಪಾದ ಮೈಯಿಂದ ಹಬೆ ಏಳುತ್ತಿತ್ತು. ಒಗೆದು ಇಸ್ತ್ರಿಮಾಡಿದ ಸಿಲ್ಕ್ ಷರ್ಟನ್ನು ಅವರಿಗೆ ತೊಡಿಸಿದರು. ನೆಮ್ಮದಿಯ ಮುಖದಿಂದ ವಿ.ಸೀ. ಹಾಸಿಗೆಗೆ ಒರಗಿ ಕುಳಿತರು. ಮಾತಿಲ್ಲ ಕತೆಯಿಲ್ಲ. ನಾವು ಅಲ್ಲಿ ಕುಳಿತಿರುವಾಗಲೆ ವಿ.ಸೀ.ಯವರ ಪರಮಮಿತ್ರರಾದ ವಿ.ಎಂ.ಇನಾಂದಾರರು ಬಂದು, ಅವರೂ ಪಕ್ಕದಲ್ಲಿ ಮೌನವಾಗಿ ಕುಳಿತರು. ಗುಂಡ್ಮಿ ರಾಮಕೃಷ್ಣ ಐತಾಳರೂ ಅದೇ ಹೊತ್ತಿಗೆ ಬಂದು ಆಳುದ್ದದ ಭಾರಿ ಹಾರವನ್ನು ವಿ.ಸೀ.

ಯವರ ಕೊರಳಿಗೆ ತೊಡಿಸಿ ನಮಿಸಿದರು. ಎಲ್ಲ ಪಾಂಟೊಮೈಮ್ ಮೂಕಾಭಿನಯದಂತೆ ನಡೆದು ಹೋಯಿತು. ಸ್ವಲ್ಪ ಹೊತ್ತು ಕುಳಿತಿದ್ದು ನಾನೂ ಮಲ್ಯರೂ ಹೊರಬಂದೆವು. ಇನಾಂದಾರರು ಮಾತ್ರ ಖಿನ್ನಮನಸ್ಸಿನಿಂದ ವಿ.ಸೀ. ಯವರ ಪಕ್ಕದಲ್ಲಿ ಮೌನವಾಗಿ ಕುಳಿತಿದ್ದರು. ಅದೇ ನಾನು ಪಡೆದ ಗುರುವಿನ ಕೊನೆಯ ದರ್ಶನ.

ಮಾತು ನಿಂತು ನೆನಪು ಕ್ಷೀಣವಾದ ಆ ಕೊನೆಯ ವರ್ಷಗಳಲ್ಲಿಯೂ ವಿ.ಸೀ.ಯವರು ಹೇಳಿ ಬರೆಯಿಸುವ ತಮ್ಮ ಕೆಲಸವನ್ನು ನಿಲ್ಲಿಸದೆ ಮುಂದುವರಿಸಲು ಪ್ರಯತ್ನಿಸಿದ್ದುಂಟು. ಹಿಂದೆ ಕನ್ನಡಿಸುತ್ತಿದ್ದು ಅರ್ಧಕ್ಕೇ ನಿಲ್ಲಿಸಿದ್ದ ಬರ್ಟ್ರಂಡ್ ರಸೆಲ್ಲನ 'Roads to Freedom' ಕೃತಿಯ ಭಾಷಾಂತರವನ್ನು ಮುಂದುವರಿಸಲು ಪ್ರಯತ್ನಪಟ್ಟರು. ಸಾಧ್ಯವಾಗಲಿಲ್ಲವಾದ್ದರಿಂದ ಆ ಕೆಲಸವನ್ನು ನಿಲ್ಲಿಸಿಬಿಟ್ಟರು. ಅಲ್ಲಿಗೆ ಅವರ ಸಾಹಿತ್ಯ ವ್ಯವಸಾಯ ನಿಂತಿತು.

ಹದಿನೈದು ವರ್ಷಗಳಿಗೂ ಹಿಂದೆ, ೧೯೬೪ರ ಸುಮಾರಿನಲ್ಲಿ, ಅಮೆರಿಕನ್ ವಾರ್ತಾಸಂಸ್ಥೆ (United States Information Service - USIS) ಯ ಕೋರಿಕೆಯಂತೆ ಅನುವಾದಕಾರ್ಯಕ್ಕೆ ಕೈಹಚ್ಚಿ ಎಸ್.ಆರ್.ರಾಮಸ್ವಾಮಿಯವರ ಸಹಾಯದಿಂದ ಸಿದ್ಧಪಡಿಸಿದ್ದ ಹರ್ಮನ್ ಮೆಲ್‌ವಿಲ್‌ನ ಪ್ರಸಿದ್ಧ ಕಾದಂಬರಿ 'ಮೋಬಿ ಡಿಕ್' (Moby Dick) ಅಚ್ಚಾಗದೆ ಹಾಗೆಯೇ ಉಳಿದಿತ್ತು. ಅಮೆರಿಕನ್ ಸಂಸ್ಥೆ ಪುಸ್ತಕ ಪ್ರಕಟನೆಯ ಕೆಲಸದಲ್ಲಿ ಉತ್ಸಾಹ ತೋರಿಸದುದನ್ನು ಕಂಡು ವಿ.ಸೀ. ನಿರಾಶರಾಗಿದ್ದರು. ಪುಣ್ಯಕ್ಕೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾದ ಜಿ.ಎಸ್. ಶಿವರುದ್ರಪ್ಪನವರೂ, ಗೆಳೆಯ ಕೆ.ಸಿ.ಶಿವಪ್ಪನವರೂ ಆಸಕ್ತಿವಹಿಸಿದುದರ ಫಲವಾಗಿ ಪುಸ್ತಕ ಮುದ್ರಣಗೊಂಡು ವಿ.ಸೀ.ಯವರು ಕಣ್ಮುಚ್ಚುವ ಕೆಲವು ವಾರಗಳ ಹಿಂದೆ ಅದು ಅವರ ಕೈ ಸೇರಿತು. ಅವರ ಸೋತ ಜೀವಕ್ಕೆ ಈ ಪುಸ್ತಕದ ಪ್ರಕಟನೆ ಸ್ವಲ್ಪಮಟ್ಟಿನ ನೆಮ್ಮದಿಯನ್ನು ತಂದಿರ ಬೇಕು.

ವಿ.ಸೀ. ಕ್ಯಾಂಬೆಲ್ ಜಾನ್ಸನ್ನನ 'Mission with Mountbatten' ಪುಸ್ತಕದ ಅನುವಾದವನ್ನು ಕೂಡ ಸಿದ್ಧಗೊಳಿಸಿದ್ದರಂತೆ. ಆ ಅನುವಾದ ಈವರೆಗೂ ಬೆಳಕು ಕಂಡಿಲ್ಲ.

ಈ ನಡುವೆ ಹತ್ತಿರದ ಹಲವಾರು ಹಿರಿಯರು, ಮಿತ್ರರು ತೀರಿಕೊಂಡಿದ್ದರು. ಆಪ್ತರಾದ ಕೆ.ವಿ. ಅಯ್ಯರ್, ಜಿ.ಪಿ.ರಾಜರತ್ನಂ, ಬೇಂದ್ರೆ, ಗುರು ಸಮಾನರಾದ ರಾಳ್ಳಪಲ್ಲಿ ಅನಂತಕೃಷ್ಣಶರ್ಮ ಇವರುಗಳು ಕಣ್ಮರೆಯಾದರು. ಪೂಜ್ಯ ಡಿ.ವಿ.ಜಿ.ಯವರ ಏಕಮಾತ್ರ ಪುತ್ರ, ತಮ್ಮ ಪ್ರಿಯಶಿಷ್ಯ ಬಿ.ಜಿ.ಎಲ್. ಸ್ವಾಮಿ ಹಠಾತ್ತನೆ ಮೈಸೂರಿನಲ್ಲಿ ಹೃದಯಾಘಾತದಿಂದ ತೀರಿಕೊಂಡರು. ಆ ಸುದ್ದಿಯೂ ಅವರು ತಲ್ಲಣಗೊಳ್ಳುವಂತೆ ಮಾಡಿತು. ವಿ.ಸೀ. ಆ ಅಸಹಾಯ

ಕೃತಿಯಲ್ಲಿಯೂ ಸ್ವಾಮಿಯ ಮನೆಗೆ ಹೋಗಿ, ಹೆಂಡತಿ ವಸಂತಮ್ಮನನ್ನು ಕಂಡು ಸಮಾಧಾನದ ಮಾತುಗಳನ್ನು ಹೇಳಿ ದುಃಖದಿಂದ ಕುಗ್ಗಿ ಮನೆಗೆ ಹಿಂದಿರುಗಿದರು.

ಬಾಳ ಬೆಳ್ದಿಂಗಳಲಿ ಒಲಿದು ನಲಿದವರು -
ಬೇವೊ ಬಿಲ್ವವೊ ಬರಲಿ, ಮಲ್ಲಿಗೆಯೊ ಮುಳ್ಳೊ
ಬಾನ ಬೆಳಕಿನಲಿ, ಮಾನದಳುಕಿನಲಿ
ಬೆನ್ನು ಬದುಕನು ಕುಣಿಸಿ ಒಲಿದು ನಲಿದವರು
ನಮ್ಮ ತಾಯಣುಗರು

– ಇಂಥವರು ಎಲ್ಲರೂ ಒಬ್ಬೊಬ್ಬರಾಗಿ ಮಾಯವಾದರು.

"All, all are gone, the old familiar faces."

ಎಲ್ಲ, ಎಲ್ಲ ಮಾಯವಾದುವು ಹಳೆಯ ಪಳಕೆಯ ಮುಖಗಳು

- ಎನ್ನುವಂತಾಯಿತು. ಅದುವರೆಗೂ ಜೀವನದ ಉತ್ಸಾಹ, ಶ್ರದ್ಧೆಗಳಿಂದ ಉಕ್ಕುತ್ತಿದ್ದ ಜೀವ ತೀರ ಕುಗ್ಗಿತು. ''ಆಯಿತ್ರಿ, ಇನ್ನು ಬೇಗ ಹೋಗಿಬಿಡ ಬೇಕ್ರಿ''. ''ಯಾಕ್ರಿ ಇರಬೇಕು ಇನ್ನು ?'' ''I should pop off'' ಎನ್ನುವ ಮಾತುಗಳು ಅವರ ಬಾಯಿಂದ ಪದೇಪದೇ ಹೊರಬೀಳುತ್ತಿದ್ದವು. ವೆಂಕಟೇಶ ಮೂರ್ತಿ ಹೇಳುತ್ತಾರೆ :

> ''ಸಾಮಾನ್ಯವಾಗಿ ಸರ್ವದಾ ಶಾಂತರಾಗಿ, ಸೌಮ್ಯರಾಗಿ, ಸಮಾಧಾನಚಿತ್ತರಾಗಿ, ಅನುದ್ವಿಗ್ನರಾಗಿ ಇರುತ್ತಿದ್ದರು. ಆಡುವ ನಾಲ್ಕು ಮಾತಿನಲ್ಲಿ ವಿನಯ, ಸೌಜನ್ಯ, ಕೃತಜ್ಞತಾಭಾವ, ಭಾವುಕತೆ ದಿನೇ ದಿನೇ ಹೆಚ್ಚುತ್ತಿತ್ತು. ಹೊರನೋಟಕ್ಕೆ, ತೋರಿಕೆಗೆ ಹಾಗೆ ನುಡಿದದ್ದಲ್ಲ; ತೀರ ಪ್ರಾಮಾಣಿಕವಾಗಿ, ಹೃದಯದಿಂದ ನೇರ ಬಂದಂಥ ನೈಜ ಮಾತು ಅವು. ಆತ್ಮದ ಜೀವಗುಣವನ್ನು ಕಾಣಿಸುವಂಥವು. ಯಾರಿಂದ ಅತ್ಯಲ್ಪ ಸೇವೆ, ಸಹಾಯ, ವಿಶ್ವಾಸ ಸ್ವೀಕರಿಸಿದರೂ ಅಂಥವರಿಗೆ ತಾವು ತುಂಬ ಋಣಿ ಎಂಬಂತೆ ಮುಖದಲ್ಲಿ ಸಂಜ್ಞೆಯಲ್ಲಿ ಕಾಣಿಸಿ, ತೀರ ಹತ್ತಿರದವರಿಗೂ ಕಿರಿಯರಿಗೂ, ಮಕ್ಕಳಿಗೂ ಒಮ್ಮೊಮ್ಮೆ, ಎರಡೂ ಕೈ ಜೋಡಿಸಿ ಕೈ ಮುಗಿದು ಬಿಡುತ್ತಿದ್ದರು. ಆ ದೃಶ್ಯ ಹೃದಯವನ್ನು ತಟ್ಟಿ ಹಿಂಡುತ್ತಿತ್ತು. ಕಂಡವರಿಗೆ ಕಸಿವಿಸಿ, ಸಂಕೋಚ, ಸಂಕಟ ಆಗುತ್ತಿತ್ತು. ಆದರೆ ಆಗೆಲ್ಲ ಅವರ ಕಣ್ಣಲ್ಲಿ, ಮುಖದಲ್ಲಿ ಕಾಣುತ್ತಿದ್ದ ಜೀವದ ಸ್ನಿಗ್ಧತೆ, ಪಕ್ವತೆ, ಹಣ್ತನ ಕೇವಲ ಕಂಡು ಅರಿಯಬೇಕೇ ಹೊರತು ವರ್ಣಿಸಲಾಗದ್ದು.''
>
> *(ಸುಮನಾ, 'ಅಂಕಣ', ಪು.೫೫)*

ವಿ.ಸೀ.ಯವರದು ಸ್ವಭಾವತಃ ಅತಿ ಸಂಕೋಚದ ಪ್ರವೃತ್ತಿ ಎಂದು ಹಿಂದೆಯೇ ತಿಳಿಸಿದ್ದೇನೆ. ಈಗ ತಮ್ಮ ಅಸಹಾಯ ಪರಿಸ್ಥಿತಿಯಲ್ಲಿ ಪ್ರತಿ

ಯೊಂದಕ್ಕೂ ಇತರರನ್ನು ಆಶ್ರಯಿಸಬೇಕಾಗಿತ್ತು. ಅವರ ಬೇಸರಕ್ಕೆ ಮುಖ್ಯ ಕಾರಣ ಇದು. ಪುಣ್ಯಕ್ಕೆ ಅವರನ್ನು ವಿದ್ಯಾರ್ಥಿ ದೆಸೆಯಿಂದಲೂ ಬಲ್ಲ, ವೈದ್ಯರಾದ ಡಾಕ್ಟರ್ ಡಿ. ರಾಮರಾಯರು, ಹಲವಾರು ವರ್ಷ ಅವರಿಗೆ ನೆರವಾಗಿದ್ದ ಕಿರಿಯರು ಶ್ರೀನಿವಾಸಮೂರ್ತಿ (ಸೀನಣ್ಣ) ಅತ್ಯಂತ ಪ್ರೀತಿ ವಿಶ್ವಾಸಗಳಿಂದ ವಿ.ಸೀ. ಯವರನ್ನು ನೋಡಿಕೊಳ್ಳುತ್ತಿದ್ದರು. 'ಈ ಮಹನೀಯರುಗಳು ಸಲ್ಲಿಸಿದ ಸೇವೆ ನಿಃಸ್ವಾರ್ಥವಾದದ್ದು. ವಿ.ಸೀ. ಯವರ ಬದುಕನ್ನು ಆ ದಿನಗಳಲ್ಲಿ ಸಹ್ಯಗೊಳಿಸಿದ ಮಹಾನುಭಾವರು ಅವರು.'

ಕೊನೆಯ ದಿನಗಳು ಇನ್ನು ಬಹುದೂರ ಉಳಿಯಲಿಲ್ಲ. 'ಉಪಯೋಗವಿಲ್ಲದ ಬದುಕು ಏಕಿರಬೇಕು, ಬೇಗ ಮುಗಿದುಹೋಗಲಿ' ಎಂದು ಬಯಸುತ್ತಿದ್ದರು. ೧೯೪೩ರ ಸೆಪ್ಟೆಂಬರ್ ಎರಡರಂದು ಸಣ್ಣ ಜ್ವರ ಬಂದು ಮಲಗಿದರು. ವೆಂಕಟೇಶಮೂರ್ತಿ ಅವರನ್ನು ನೋಡಲು ಹೋದಾಗ 'ನೋಡಿದಿರಾ ನನ್ನ ಸ್ಥಿತಿ' ಎಂಬಂತೆ ಕಣ್ಣುಮುಖ ಮಿನುಗಿಸಿ ನಕ್ಕರಂತೆ. ಮೂರ್ತಿಯವರು ಯಾವುದೋ ತುರ್ತು ಕೆಲಸದ ಮೇಲೆ ಹುಬ್ಬಳ್ಳಿಗೆ ಹೋಗಬೇಕಾಗಿದ್ದುದರಿಂದ. ಹೇಳಿ ಹೋಗಲು ಬಂದಿದ್ದರು, ಅಷ್ಟೆ. ವಿ.ಸೀ. ಯವರ ದೇಹಸ್ಥಿತಿ ವಿಷಮಿಸುವುದೆಂದು ತಿಳಿದಿದ್ದರೆ ಅವರು ಹೋಗುತ್ತಿರಲಿಲ್ಲ. 'ಸಣ್ಣ ಜ್ವರ ತಾನೆ. ಬೆಳಗಾದರೆ ಎಲ್ಲ ಸರಿಹೋಗುತ್ತದೆ' ಎಂದುಕೊಂಡು ಅವರು ಹೊರಟರು. ಆದರೆ ವಿ.ಸೀ. ಯವರ ದೇಹಸ್ಥಿತಿ ವಿಷಮಿಸಿತು. ಮಾರನೆಯ ದಿನವೆಲ್ಲ ಸಂಕಟಪಟ್ಟರು. ಭಾನುವಾರ ಬೆಳಿಗ್ಗೆ, ೧೯೪೩ ಸೆಪ್ಟೆಂಬರ್ ನಾಲ್ಕರಂದು ವಿ.ಸೀ. ತೀರಿಕೊಂಡರು. ಉಸಿರು ನಿಲ್ಲುವ ಮುನ್ನ ವಿ.ಸೀ. ಬಹಳ ಕಷ್ಟಪಟ್ಟರಂತೆ. ಇಂಥ ಸಜ್ಜನರಿಗೆ ಮರಣಕಾಲದಲ್ಲಿಯೂ ಏಕೆ ಇಷ್ಟು ಕಷ್ಟ ಒದಗಿತೋ! ಅಂತೂ ಅನಿರೀಕ್ಷಿತವಾಗಿ ಯಾವೊಂದು ಸದ್ದುಗದ್ದಲವೂ ಇಲ್ಲದೆ ಬದುಕನ್ನು, ತಮ್ಮ ಕೋಣೆಯಲ್ಲಿಯೇ, ತಮ್ಮ ಬಾಳಿನುದ್ದಕ್ಕೂ ಬೆಳಕನ್ನಿತ್ತ ಪುಸ್ತಕಗಳ ನಡುವೆಯೇ ಮುಗಿಸಿಬಿಟ್ಟಿದ್ದರು.

ವಿ.ಸೀ. ನಿಧನರಾದಾಗ ಅದೊಂದು ದೊಡ್ಡ ಸುದ್ದಿಯಾಗಲಿಲ್ಲ. ರಾಜ್ಯಪಾಲರೂ, ರಾಜಕಾರಣಿಗಳೂ, ಪುರಪ್ರಮುಖರೂ ಯಾರೂ ಪುಷ್ಪಗುಚ್ಛಗಳನ್ನು ಅರ್ಪಿಸಲು ಮುಂದೆ ಬರಲಿಲ್ಲ. ಪತ್ರಿಕೆಗಳಲ್ಲಿಯೂ ಕೂಡ ಸಾವಿನ ಸುದ್ದಿ ಹೊರತು ವಿಶೇಷ ಬರವಣಿಗೆ ಯಾವುದೂ ಕಾಣಲಿಲ್ಲ. ವಿ.ಸೀ. ತಮ್ಮ ನಿಡುಗಾಲದ ಬದುಕಿನಲ್ಲಿ ಸಲ್ಲಿಸಿದ ಸಾರಸ್ವತಸೇವೆಯನ್ನು ಅಭಿಮಾನಶೂನ್ಯರಾದ ಕನ್ನಡಿಗರು ನೆನೆಯದೆ ಹೋದರು.

'ತಂದೆ ಹರಕೆ' ಎಂಬ ತಮ್ಮದೊಂದು ಕವನದಲ್ಲಿ ವಿ.ಸೀ. ತಮ್ಮ ಕೊನೆಯ ಯಾತ್ರೆ ಹೇಗೆ ನಡೆಯಬೇಕು ಎನ್ನುವುದನ್ನು ಸೂಚಿಸಿದ್ದರು :

ನನ್ನ ರಕ್ತದಿ ಹುಟ್ಟಿ ಬೆಳೆದಿಹ
ನಾಲ್ಕು ಮಕ್ಕಳು ನಿಲ್ಲಲಿ ;

ನನ್ನ ದಿಬ್ಬಣವವರ ಭುಜದಲಿ
ಮಸಣ ಸೂಡಿಗೆ ನಡೆಯಲಿ.

(ಸ್ನೇಹ - ವಿಶ್ವಾಸ, 'ತಂದೆ ಹರಕೆ', ಪು.೨೦೦)

ಕೊನೆಗೆ ಆದದ್ದೂ ಹಾಗೆಯೇ. ನಾಲ್ವರು ಮಕ್ಕಳೂ ಕವಿಯ ಜೀವ ಹೋದ ದೇಹವನ್ನು ಹೆಗಲಲ್ಲಿ ಹೊತ್ತು ಮಸಣದ ಕಡೆ ನಡೆದರು. ಚಾಮರಾಜ ಪೇಟೆಯ ಪಶ್ಚಿಮಕ್ಕೆ ಕೆಂಪಾಂಬುಧಿ ಕೆರೆಯ ಹಿಂದಿರುವ ರುದ್ರಭೂಮಿಯಲ್ಲಿ ದಹನ ಸಂಸ್ಕಾರ ನಡೆಯಿತು. ಬೆಂಗಳೂರಿನ ನಾಗರಿಕರಾಗಲಿ, ವಿ.ಸೀ. ಯವರ ಮಿತ್ರವರ್ಗದವರಾಗಲಿ, ವಿದ್ಯಾದಾನ ಪಡೆದ ವಿದ್ಯಾರ್ಥಿಗಳಾಗಲಿ, ಕೊನೆಯ ಗಳಿಗೆಯಲ್ಲಿ ಕವಿಗೆ ಸಲ್ಲಿಸಬೇಕಾದ ಗೌರವವನ್ನು ಸಲ್ಲಿಸದೆ ಹೋದರು. ವಿ.ಸೀ. ಯವರ ಆಪ್ತ ಮಿತ್ರರಾದ ಪಿ.ವಿ. ಜೋಶಿಯವರು, ರತ್ನಪಡಿ ವ್ಯಾಪಾರಿಗಳಾದ ಗಂಜಾಂ ಭೀಮಾಜಿಯವರು, ಬಿ.ಬಿ.ಡಿ.ಪ್ರೆಸ್ಸಿನ ಮಾಲಿಕರಾದ ಮಾಧವ ಮಲ್ಯರು, ನಾನು, ಇವರಿಷ್ಟು ಜನ ಶವದ ಹಿಂದೆ ನಡೆದು ದಹನಕಾರ್ಯ ಮುಗಿಯುವವರೆಗೂ ಇದ್ದು, ಚರಮಸೇವೆ ಸಲ್ಲಿಸಿ ದುಃಖದಿಂದ ಭಾರವಾದ ಮನಸ್ಸಿನಿಂದ ಹಿಂದಿರುಗಿದೆವು. ಸರ್ ಜಾನ್ ಮೂರನ್ನು ಕಾಳಗದ ಕಣದಲ್ಲಿ ಹೂಳಿದ್ದನ್ನು ನೆನಸಿಕೊಂಡು ವುಲ್ಫ್ ಕವಿ ಬರೆದ ಕವನದ ಸಾಲುಗಳು ನೆನಪಿಗೆ ಬಂದವು.

Slowly and steadily we laid him down,
From the field of his fame fresh and gory
We carved not a line and we raised not a stone,
But we left him alone with his glory.

(ಮೆಲ್ಲಗೆ ಮರುಗುತ, ಮಣ್ಣಿನಲಿಟ್ಟೆವು
ರಣದ ರಕ್ತದ ಚೆಲುವಿನ ಚೆಲುವಿನಲಿ
ಕಲ್ಲ ನೆಡದೆ, ಒಂದು ಪಂಕ್ತಿಯ ಕೆತ್ತದೆ,
ಅವನ ಕೀರ್ತಿಯಲವನನೆ ಬಿಟ್ಟೆವಲ್ಲಿ)

(ಶ್ರೀ, ಇಂಗ್ಲಿಷ್ ಗೀತಗಳು, 'ಸರ್‌ಜಾನ್‌ಮೂರನ್ನು ಹೂಳಿದ್ದು')

ಹೀಗೆ ನನ್ನ ಗುರುವಿನ ಬಾಳು ಕೊನೆಗೊಂಡಿತು. ಸಾಕ್ರಟೀಸನ ಕೊನೆಯ ದಿನದಲ್ಲಿ ಫಿಡೋ - 'ನನಗೆ ತಿಳಿದ ಮಟ್ಟಿಗೆ ನಾವು ಬಲ್ಲ ಜನರಲ್ಲೆಲ್ಲ, ಆತನಷ್ಟು ಜ್ಞಾನಿಗಳೂ, ನ್ಯಾಯಪರರೂ ಸದ್ಗುಣಿಗಳೂ ಮತ್ತೊಬ್ಬರಿಲ್ಲವೆಂದು ಸತ್ಯವಾಗಿ ಹೇಳಬಹುದು' ಎಂದ ಆ ಮಾತನ್ನು ನನ್ನ ಗುರುವಿಗೂ ಅನ್ವಯಿಸಬಹುದು.

ಎ. ಸಿ. ಅವರ ಬಾಳಿನ ಮುಖ್ಯ ಘಟನೆಗಳು

೨ ಅಕ್ಟೋಬರ್ ೧೮೯೯	ಜನನ, ಬೆಂಗಳೂರು ಜಿಲ್ಲೆಯ ದೇವನಹಳ್ಳಿ ತಾಲೂಕಿನ ಬೂದಿಗೆರೆಯಲ್ಲಿ
೧೯೦೬	ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಆಗಮನ
೧೯೦೬-೧೯೧೬	ಚಾಮರಾಜಪೇಟೆ ಮುನಿಸಿಪಲ್ ಪ್ರಾಥಮಿಕ ಮತ್ತು ಕೋಟೆ ಹೈಸ್ಕೂಲುಗಳಲ್ಲಿ ವಿದ್ಯಾಭ್ಯಾಸ
೧೯೧೬-೧೯೨೦	ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಶಿಕ್ಷಣ; ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ದರ್ಶನಗಳಲ್ಲಿ ಸ್ನಾತಕ (B.A.) ಪದವಿ
೧೯೨೦-೧೯೨೧	ಶಿಕ್ಷಣ ಮುಂದುವರಿಕೆ, ಎಂ.ಎ. ಪದವಿ, ಶಾರದಾ ವಿಲಾಸ ಹೈಸ್ಕೂಲಿನಲ್ಲಿ ಉಪಾಧ್ಯಾಯ ವೃತ್ತಿ
೧೯೨೨	ಮುಂಬಯಿ ಕರೆನ್ಸಿ ಆಫೀಸಿನಲ್ಲಿ ಕೆಲಸ (ಎಂಟುತಿಂಗಳ ಕಾಲ)
೧೯೨೨-೧೯೨೮	ಶಾರದಾ ವಿಲಾಸ ಹೈಸ್ಕೂಲಿನಲ್ಲಿ ಉಪಾಧ್ಯಾಯ ವೃತ್ತಿ
೧೯೨೫	ಸರೋಜಮ್ಮನವರೊಡನೆ ವಿವಾಹ - ವಿಜಯಪುರದಲ್ಲಿ
೧೯೨೮	ಪಂಪಾಯಾತ್ರೆ - ಪ್ರಥಮಕೃತಿ ಪ್ರಕಟಣೆ
೧೯೨೮ - ೧೯೪೮	ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರು
೧೯೩೧	ಕವಿ ಸಮ್ಮೇಳನ, ಕಾರವಾರ, ಅಧ್ಯಕ್ಷತೆ
೧೯೪೮-೧೯೫೦	ಚಿಕ್ಕಮಗಳೂರು ಕಾಲೇಜಿನ ಸೂಪರಿಂಟೆಂಡೆಂಟರು
೧೯೫೦-೧೯೫೫	ವಿಶ್ವವಿದ್ಯಾನಿಲಯದಲ್ಲಿ ಉಪಪ್ರಾಧ್ಯಾಪಕರಾಗಿ, ೧೯೫೫ ರಲ್ಲಿ ನಿವೃತ್ತಿ
೧೯೫೩	ಅಧ್ಯಕ್ಷತೆ, ಕುಮಟಾ ಸಾಹಿತ್ಯ ಸಮ್ಮೇಳನ
೧೯೫೬-೧೯೫೮	ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ
೧೯೫೮-೧೯೬೪	ಬೆಂಗಳೂರಿನಲ್ಲಿ ನಿವೃತ್ತ ಜೀವನ
೧೯೬೪-೧೯೬೮	ಹೊನ್ನಾವರ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ ಪ್ರಾಂಶುಪಾಲರಾಗಿ
೧೯೬೪	ಪತ್ನೀವಿಯೋಗ, ಲಂಡನ್ ಯಾತ್ರೆ
೧೯೬೬	ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್ ಪದವಿ ಪ್ರದಾನ
೪ ಸೆಪ್ಟೆಂಬರ್ ೧೯೭೩	ಮರಣ, ಬೆಂಗಳೂರಿನ ಸ್ವಗೃಹದಲ್ಲಿ

ಗ್ರಂಥಋಣ

ಅನಂತನಾರಾಯಣ, ಎಸ್., ಚಂದ್ರಶೇಖರ, ಪ.ವಿ. (೧೯೫೩) (ಸಂಪಾದಕರು), ವಿ.ಸೀ. (ಕವಿ ಕಾವ್ಯ ಪರಿಚಯ), ಗೆಳೆಯರ ಬಳಗ, ದಾವಣಗೆರೆ, ಪು. ೧೨೮

ಅನಂತಕೃಷ್ಣಶರ್ಮ, ರಾ. (೧೯೭೩), 'ಅಭಿನಂದನ', ವಿ.ಸೀ.-೭೫ ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ಪು. ೨೮೭

ಅಯ್ಯಂಗಾರ್, ಎಚ್. ವಿ. ಆರ್. (೧೯೭೩), 'Scholar and Writer' ವಿ.ಸೀ. - ೭೫, ಐ.ಬಿ.ಎಚ್. ಪ್ರಕಾಶನ, ಪು. ೩೨೯-೩೩೧

ಅಯ್ಯರ್, ಕೆ.ವಿ. (೧೯೭೩), 'ವಿಶ್ವಾಸಿ ಶ್ರೀ ವಿ.ಸೀ.', ವಿ.ಸೀ. - ೭೫, ಐ.ಬಿ.ಎಚ್ ಪ್ರಕಾಶನ, ಪು. ೩೦೮-೩೧೭

ಇನಾಂದಾರ್, ವಿ.ಎಂ. (೧೯೭೪), (ಸಂಪಾದಕರು), 'ವಿ.ಸೀ.-೭೫', (ಸಂಭಾವನಾ ಗ್ರಂಥ), ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ಪು. ೩೩೨

ಕಾರಂತ, ಶಿವರಾಮ (೧೯೭೩), 'ನಿಡುಗಾಲದ ಗೆಳೆಯರು', ವಿ.ಸೀ.-೭೫, ಐ.ಬಿ.ಎಚ್. ಪ್ರಕಾಶನ, ಪು. ೨೯೭-೩೦೦

ಕಾರಂತ, ಶಿವರಾಮ (೧೯೪೩), ವಿ.ಸೀ. ನಿಡುಗಾಲದ ನೆನಪುಗಳು, ತರಂಗ, ೧೬ ಅಕ್ಟೋಬರ್ ೧೯೪೩

ಕಾರಂತ, ಶಿವರಾಮ (೧೯೯೧), 'ಸರಳ, ಮಧುರ, ವಿರಳ ಚೇತನ', ವಿ. ಸೀತಾರಾಮಯ್ಯ, ವ್ಯಕ್ತಿತ್ವ, ಕಾವ್ಯ ವೈಶಿಷ್ಟ್ಯ, ವಿ.ಸೀ. ಸಂಪದ, ಪು. ೩೧-೪೧

ಕೀರ್ತಿನಾಥ ಕುರ್ತಕೋಟಿ (೧೯೯೨), ವಿ.ಸೀ. ಗದ್ಯಪ್ರಬಂಧ, 'ಬಯಲು ಆಲಯ', ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪು. ೮೬-೧೦೮

ಕೀರ್ತಿನಾಥ ಕುರ್ತಕೋಟಿ (೧೯೯೨), ಪ್ರಸ್ತಾವನೆ, ಸಮಗ್ರಗದ್ಯ ೧, ಲಲಿತ ಪ್ರಬಂಧ ಸಂಪುಟ, ವಿ.ಸೀ. ಸಂಪದ, ಬೆಂಗಳೂರು, ಪು. i-xxvi

ಕೃಷ್ಣಮೂರ್ತಿ, ಖಜಾನೆ (೧೯೬೯), 'ತಸ್ಮೈ ಶ್ರೀ ಗುರವೇ ನಮಃ', ವಿ.ಸೀ. ೭೧, ಸಾಧನ ಪ್ರಕಾಶನ, ಹೊನ್ನಾವರ, ಪು. ೧೭-೨೯

ಕೃಷ್ಣಮೂರ್ತಿ, ಖಜಾನೆ (೧೯೮೩), 'ತೊರೆದು ಜೀವಿಸಬಹುದೇ?' ಕಸ್ತೂರಿ, ೨೮, ಸಂ. ೨೮, ಪು. ೧೧೨-೧೩೬

ಕೃಷ್ಣಶಾಸ್ತ್ರಿ, ಎ.ಆರ್. (೧೯೪೪), 'ಪ್ರಬುದ್ಧ ಕರ್ಣಾಟಕದ ಹುಟ್ಟು ಮತ್ತು ಬೆಳವಣಿಗೆ', ಪ್ರಬುದ್ಧ ಕರ್ಣಾಟಕ ಬೆಳ್ಳಿಯ ಸಂಚಿಕೆ ೧೦೨, ಪು. ೧-೨೮

ಗೋಕಾಕ, ವಿ.ಕೃ. (ವಿನಾಯಕ) (೧೯೭೩), ರೂಪಾರಾಧಕ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ಪು. ೨೯೦-೨೯೭

ಗುಂಡಪ್ಪ, ಡಿ.ವಿ. (ಡಿ.ವಿ.ಜಿ.) ೧೯೨೪, 'ನಿವೇದನ', ಕರ್ಣಾಟಕ ಸಂಘ, ಬೆಂಗಳೂರು ಪು. ೫೫೫

ಗುಂಡಪ್ಪ, ಡಿ.ವಿ. (೧೯೩೩) 'ಜೀವನ ಸೌಂದರ್ಯ ಮತ್ತು ಸಾಹಿತ್ಯ', ಕರ್ಣಾಟಕ ಪ್ರಕಟನಾಲಯ, ಬೆಂಗಳೂರು ಸಿಟಿ, ಪು. ೨೩೯

ಗುಂಡಪ್ಪ , ಡಿ.ವಿ. (೧೯೭೩), Goodness Itself ವಿ.ಸೀ.-೭೫, ಐ.ಬಿ.ಎಚ್. ಪ್ರಕಾಶನ, ಪು. ೩೨೩

ಜೋಶಿ, ಪಿ.ವಿ. (೧೯೯೧), 'ಸರ್ವಂಕಷ ವ್ಯಕ್ತಿತ್ವ ', ವಿ.ಸೀತಾರಾಮಯ್ಯ, ವ್ಯಕ್ತಿತ್ವ, ಕಾವ್ಯ ವೈಶಿಷ್ಟ್ಯ, ವಿ.ಸೀ. ಸಂಪದ, ಪು. ೧-೬

ದಿನಕರ ದೇಸಾಯಿ (೧೯೬೯), 'ವಿ.ಸೀ.ಯವರಿಗೆ', ವಿ.ಸೀ.-೭೧, ಸಾಧನ ಪ್ರಕಾಶನ, ಹೊನ್ನಾವರ, ಪು. ೪೨

ನರಸಿಂಹಸ್ವಾಮಿ, ಕೆ.ಎಸ್. (೧೯೭೩), 'ವಿ.ಸೀ.-೭೫ ', ಐ.ಬಿ.ಎಚ್.ಪ್ರಕಾಶನ, ಪು.೩-೨೭

ನಾಯಕ, ಹಾ.ಮಾ., (೧೯೫೩) ಸಂಪಾದಕರು 'ರೂಪಾರಾಧಕ', ಉಷಾ ಸಾಹಿತ್ಯ ಮಾಲೆ, ಪು. ೧೧೨,

ನಾಯಕ, ಹಾ.ಮಾ. (೧೯೮೪) 'ಗ್ರಂಥಲೋಕದ ಸುತ್ತಮುತ್ತ', ಶಾರದಾ ಮಂದಿರ, ಮೈಸೂರು, ಪು. ೧೫೨

ಪ್ರೇಮಕುಮಾರ್, ಎಂ.ವಿ. (೧೯೭೩), 'ವಿ.ಸೀ. ಒಂದು ನೋಟ', ವಿ.ಸೀ.-೭೫, ಐ.ಬಿ.ಎಚ್. ಪ್ರಕಾಶನ, ಪು. ೫೯-೮೦

ಭಟ್, ಜಿ.ಯು. ಮತ್ತು ಅವಧಾನಿ, ಜಿ.ಎಸ್. (ಸಂಪಾದಕರು), (೧೯೬೯) ವಿ.ಸೀ.-೭೧, ಸಾಧನ ಪ್ರಕಾಶನ, ಹೊನ್ನಾವರ, ಪು. ೧೦೨

ಭಾಗೀರಥಿ (೧೯೬೯), 'ವಿ.ಸೀ. ಭಾವದೇವಾಲಯದಿ', ವಿ.ಸೀ.-೭೧, ಸಾಧನ ಪ್ರಕಾಶನ, ಹೊನ್ನಾವರ, ಪು. ೯೫-೧೦೦

ಮಾಲಿನಿ ಮಲ್ಯ , (೧೯೯೩), ಶಿವರಾಮ ಕಾರಂತರ ಲೇಖನಗಳು, ಸಂಪುಟ ೧, ವ್ಯಕ್ತಿ ಚಿತ್ರ ಗಳು, ವಿಮರ್ಶೆಗಳು, ಪ್ರಸಾರಾಂಗ , ಮಂಗಳೂರು ವಿಶ್ವವಿದ್ಯಾನಿಲಯ, ಪು. ೫೨೩

ರಂಗನಾಥ್, ಎಚ್.ಕೆ. (೧೯೯೩), 'ಪ್ರಸ್ತಾವನೆ, ಸಮಗ್ರ ನಾಟಕ ', ವಿ.ಸೀ. ಸಂಪದ, ಬೆಂಗಳೂರು, ಪು. i-xxxiv

ರಂಗನಾಥ್, ಎಚ್.ಕೆ. (೧೯೯೬), 'ಎರಡು ಮಾತು', ವಿ.ಸೀ. ವ್ಯಕ್ತಿಚಿತ್ರ ಸಂಪುಟ, ಭಾಗ ೧, ಪು. xxxvii - xxxviv

ರಾಧಾಕೃಷ್ಣ , ಬಿ.ಪಿ., 'ಕನ್ನಡನಾಡಿನ ಚಿನ್ನದ ಗಣಿಗಳು', ಪ್ರಬುದ್ಧ ಕರ್ಣಾಟಕ, ಸಂಪುಟ ೨೫, ಸಂಚಿಕೆ ೩

ರಾಘವಾಚಾರ್, ಕೆ.ವಿ. (೧೯೭೩), 'ಸೌಜನ್ಯಮೂರ್ತಿ', ವಿ.ಸೀ.-೭೫, ಐ.ಬಿ.ಎಚ್. ಪ್ರಕಾಶನ, ಪು. ೩೧೮-೩೧೯

ರಾಮಚಂದ್ರರಾವ್, ಹೆಚ್.ಜಿ. (೧೯೮೫), ಡಾII ವಿ.ಸೀ. ಸ್ಮರಣಸಂಚಿಕೆ, 'ಜ್ಞಾನಸುಧಾ' ಸಂಪುಟ ೧೮, ಸಂಚಿಕೆ ೧-೨, ಪು. ೬೨, ಜ್ಞಾನಜ್ಯೋತಿ ಕಲಾಮಂದಿರ, ರಾಜಾಜಿನಗರ, ಬೆಂಗಳೂರು

ರಾಮಚಂದ್ರರಾವ್, ಎಸ್.ಕೆ. (೧೯೯೬), 'ಪ್ರಸ್ತಾವನೆ ', ವಿ.ಸೀ. ವ್ಯಕ್ತಿಚಿತ್ರ ಸಂಪುಟ, ಭಾಗ ೧, ಪು. v-xxxvi

ರಾಮಸ್ವಾಮಿ, ಎಸ್.ಆರ್. (೧೯೭೩), 'ಸ್ನೇಹಶೀಲ ', ವಿ.ಸೀ.-೭೫, ಐ.ಬಿ.ಎಚ್. ಪ್ರಕಾಶನ, ಪು. ೨೫-೩೭

ವೆಂಕಟಸುಬ್ಬಯ್ಯ , ಜಿ. (೧೯೯೦) 'ಸಾಲುದೀಪಗಳು', ಕರ್ನಾಟಕ ಸಾಹಿತ್ಯ ಅಕಾಡೆಮಿ, ಪು. ೧೩೧-೧೩೪

ಶಿವರುದ್ರಪ್ಪ, ಜಿ.ಎಸ್. (೧೯೯೧), 'ವಿ.ಸೀ. ಅವರ ಕಾವ್ಯ: ಕೆಲವು ವೈಶಿಷ್ಟ್ಯಗಳು', ವಿ.ಸೀತಾರಾಮಯ್ಯ - ವ್ಯಕ್ತಿತ್ವ ಕಾವ್ಯ ವೈಶಿಷ್ಟ್ಯ, ವಿ.ಸೀ. ಸಂಪದ, ಪು. ೧೯-೩೦

ಶಿವರುದ್ರಪ್ಪ, ಜಿ.ಎಸ್.(೧೯೭೩), 'ಗೀತಗಳು', 'ದೀಪಗಳು', ವಿ.ಸೀ.-೭೫, ಐ.ಬಿ.ಎಚ್. ಪ್ರಕಾಶನ, ಪು. ೧೦೨-೧೧೬

ಶೇಷಗಿರಿರಾವ್, ಎಲ್.ಎಸ್. (೧೯೭೩), 'ಜ್ಞಾನೀ ವಿ.ಸೀ.', ವಿ.ಸೀ.-೭೫, ಐ.ಬಿ.ಎಚ್. ಪ್ರಕಾಶನ, ಪು. ೩೮-೫೦

ಶೇಷಗಿರಿರಾವ್, ಎಲ್.ಎಸ್. ೧೯೯೦, 'ಪ್ರಸ್ತಾವನೆ' ಸ್ನೇಹ-ವಿಶ್ವಾಸ - ಸಮಗ್ರ ಕಾವ್ಯ ಸಂಪುಟ, ವಿ.ಸೀ. ಸಂಪದ, ಪು. vii-xxxix

ಶೇಷಗಿರಿರಾವ್, ಎಲ್.ಎಸ್. (೧೯೯೧), 'ವಿ.ಸೀ. ವ್ಯಕ್ತಿತ್ವ', ವಿ.ಸೀತಾರಾಮಯ್ಯ, ವ್ಯಕ್ತಿತ್ವ ಕಾವ್ಯ ವೈಶಿಷ್ಟ್ಯ, ವಿ.ಸೀ. ಸಂಪದ, ಪು. ೭-೧೮

ಶ್ರೀಕಂಠಯ್ಯ, ಬಿ.ಎಂ. (೧೯೩೧), (ಸಂಪಾದಕ), 'ಹರಿಶ್ಚಂದ್ರಕಾವ್ಯ ಸಂಗ್ರಹ', ಮೈಸೂರು ವಿಶ್ವವಿದ್ಯಾನಿಲಯ (ಆರನೆಯ ಮುದ್ರಣ, ೧೯೫೬) ಪು. ೧೧೨

ಶ್ರೀನಿವಾಸ (೧೯೭೪), 'ಸೀತಣ್ಣ', ವಿ.ಸೀ.-೭೫, ಐ.ಬಿ.ಎಚ್. ಪ್ರಕಾಶನ, ಪು. ೨೮೮-೨೮೯

ಸೀತಾರಾಮಯ್ಯ, ಎಂ. ವಿ. (೧೯೭೪), 'ವಿ.ಸೀ. ನಾನು ತಿಳಿದ ಹಾಗೆ', ವಿ.ಸೀ.-೭೫, ಐ.ಬಿ.ಎಚ್. ಪ್ರಕಾಶನ, ಪು. ೫೧-೫೮

ಸೀತಾರಾಮಯ್ಯ, ವಿ. ೧೯೨೬, 'ರಾಧೆ' (ಕಥೆ), ಹೊಸಗನ್ನಡದ ವಾಚನ ಪಾಠಮಾಲೆ (ರಂಗರಾವ್ ಹಿರೇಕೆರೂರ - ಸಂಪಾದಕರು), ಪು. ೭೨-೮೭, ಪ್ರಬುದ್ಧ ಕರ್ಣಾಟಕ ದಿಂದ ಉದ್ಧರಿಸಿದ್ದು

ಸೀತಾರಾಮಯ್ಯ, ವಿ. (೧೯೨೮), 'ಪಂಪಾಯಾತ್ರೆ', ಸಮಗ್ರ ಗದ್ಯ - ೧, ಲಲಿತ ಪ್ರಬಂಧ ಸಂಪುಟ, ವಿ.ಸೀ. ಸಂಪದ (೧೯೯೨), ಪು. ೧-೫೩

ಸೀತಾರಾಮಯ್ಯ, ವಿ. (೧೯೩೦), 'ಸೊಹ್ರಾಬ್-ರುಸ್ತುಂ', ಸಮಗ್ರನಾಟಕಗಳು (೧೯೯೩), ಪು. ೪೧-೮೪

ಸೀತಾರಾಮಯ್ಯ, ವಿ. (೧೯೩೧), 'ಆಗ್ರಹ', ಸಮಗ್ರನಾಟಕಗಳು (೧೯೯೨), ಪು. ೧-೩೮

ವಿ.ಸೀ. (೧೯೩೩, ೧೯೫೯) 'ದೀಪಗಳು', ಕರ್ಣಾಟಕ ಸಂಘ, ಬೆಂಗಳೂರು, ಪು. ೪೮

ಸೀತಾರಾಮಯ್ಯ, ವಿ. (೧೯೩೫, ೧೯೬೭), 'ನೆಳಲು-ಬೆಳಕು', ಗೀತಾ ಬುಕ್ ಹೌಸ್ ಮೈಸೂರು, (ಎರಡನೇ ಮುದ್ರಣ)

ಸೀತಾರಾಮಯ್ಯ, ವಿ. (೧೯೩೭) 'ಹಣಪ್ರಪಂಚ', ಮೈಸೂರು ವಿಶ್ವವಿದ್ಯಾನಿಲಯ, ಪು.೩೯೫

ಸೀತಾರಾಮಯ್ಯ, ವಿ. (೧೯೪೧), 'ಕಲೆಯ ಪ್ರಪಂಚ', ಸಂಭಾವನೆ, (ಬಿ.ಎಂ.ಶ್ರೀ. ಅವರಿಗೆ ಒಪ್ಪಿಸಿದ ಪ್ರಬಂಧ ಸಂಪುಟ), ಬೆಂಗಳೂರು ಪ್ರೆಸ್, ಪು. ೪೩೬-೪೪೮

ಸೀತಾರಾಮಯ್ಯ, ವಿ. (೧೯೪೩), 'ಅಭಿಜ್ಞಾನಶಾಕುಂತಲ ನಾಟಕ ಪರಿಚಯ', ಕರ್ಣಾಟಕ ಸಂಘ, ಬೆಂಗಳೂರು (ಮೂರನೆಯ ಮುದ್ರಣ, ೧೯೬೦), ಪು. ೧೧೮

ಸೀತಾರಾಮಯ್ಯ, ವಿ. (೧೯೪೪), 'ಸಂಪಾದಕೀಯ' - ಪ್ರಬುದ್ಧ ಕರ್ಣಾಟಕ, ತಾರಣ ಸಂವತ್ಸರ, ಬೆಳ್ಳಿಯ ಸಂಚಿಕೆ, ಪು. ೯೫-೯೯

ಸೀತಾರಾಮಯ್ಯ, ವಿ. (೧೯೪೬), 'ಅಶ್ವತ್ಥಾಮನ್ (ಸಮೀಕ್ಷೆ)', ಶಾರದಾ ಮಂದಿರ, ಮೈಸೂರು, ಮೂರನೆಯ ಮುದ್ರಣ (೧೯೭೯), ಪು. ೧೪೬

ಸೀತಾರಾಮಯ್ಯ, ವಿ. (೧೯೪೬), 'ಭಾರತದ ರಾಜ್ಯಾಂಗ ರಚನೆ', ಮಾಧವ ಸನ್ಸ್, ಬೆಂಗಳೂರು, ಪು. ೯೯

ಸೀತಾರಾಮಯ್ಯ, ವಿ. (೧೯೪೮), 'ದ್ರಾಕ್ಷಿ-ದಾಳಿಂಬೆ', ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು

ಸೀತಾರಾಮಯ್ಯ, ವಿ. (೧೯೪೯), 'ವ್ಯವಹಾರ ಧರ್ಮ', ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ಸೀತಾರಾಮಯ್ಯ, ವಿ. (೧೯೫೧), 'ಮಹಾಭಾರತದ ಐವರು ಮಾನ್ಯರು', ಐ.ಬಿ.ಎಚ್. ಪ್ರಕಾಶನ, ಪು. ೧೩೩

ಸೀತಾರಾಮಯ್ಯ, ವಿ. (೧೯೫೫), 'ಕವಿಕಾವ್ಯದೃಷ್ಟಿ, (ವಿವೇಚನೆಗಳು)', ಗೀತಾ ಬುಕ್ ಹೌಸ್, ಮೈಸೂರು ಪು. ೧೬೭

ಸೀತಾರಾಮಯ್ಯ, ವಿ. (೧೯೫೭), 'ಕರ್ನಾಟಕ ಕಾದಂಬರಿ', ಮೈಸೂರು ವಿಶ್ವವಿದ್ಯಾನಿಲಯ ಪ್ರಚಾರಪುಸ್ತಕಮಾಲೆ - ೧೭, ಪು. ೬೭

ಸೀತಾರಾಮಯ್ಯ, ವಿ. (೧೯೫೮), 'ಹೆಜ್ಜೆಪಾಡು', ಕರ್ನಾಟಕ ಸಂಘ, ಸೆಂಟ್ರಲ್ ಕಾಲೆಜ್, ಬೆಂಗಳೂರು, ಪು. ೮೮

ಸೀತಾರಾಮಯ್ಯ, ವಿ. (೧೯೫೯), 'ಬೆಳುದಿಂಗಳು', ಸಮಗ್ರಗದ್ಯ - ೧, ಲಲಿತ ಪ್ರಬಂಧ ಸಂಪುಟ, ವಿ.ಸೀ. ಸಂಪದ, (೧೯೯೨), ಪು. ೫೭-೧೬೪

ಸೀತಾರಾಮಯ್ಯ, ವಿ. (೧೯೬೦), 'ಶ್ರೀಶೈಲಶಿಖರ', ಸಮಗ್ರನಾಟಕ (೧೯೯೩), ಪು. ೮೭-೧೨೩

ಸೀತಾರಾಮಯ್ಯ, ವಿ. (೧೯೬೧), 'ಸಾಹಿತ್ಯವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ', ಮೈಸೂರು ವಿಶ್ವವಿದ್ಯಾನಿಲಯ, ಪು. ೯೬

ವಿ.ಸೀ. (೧೯೬೨), 'ಭಾರತದಲ್ಲಿ ಯೋಜನೆ', ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರಕಾರ, ನವದೆಹಲಿ, ಪು. ೧೪೩

ಸೀತಾರಾಮಯ್ಯ, ವಿ. (೧೯೬೩), ಪಿಗ್‌ಮೇಲಿಯನ್, 'ಸಮಗ್ರನಾಟಕ' (೧೯೯೩), ವಿ.ಸೀ. ಸಂಪದ, ಪು. ೨೨೯-೩೩೩

ಸೀತಾರಾಮಯ್ಯ, ವಿ. (ಅನುವಾದಕರು) (೧೯೬೩), 'ಭಾರತ ಬಿಡುಗಡೆ ಗಳಿಸಿತು' (ಸ್ವಚರಿತ್ರೆ - ಮೌಲಾನಾ ಅಬುಲ್ ಕಲಾಮ್ ಆಜಾದ್), ಓರಿಯಂಟಲ್ ಲಾಂಗ್‌ಮನ್ಸ್, ಮದ್ರಾಸ್, ಪು. ೩೩೦

ಸೀತಾರಾಮಯ್ಯ, ವಿ. (೧೯೬೬), 'ಷೇಕ್‌ಸ್ಪಿಯರ್ - ಒಂದು ನೋಟ', 'ಷೇಕ್‌ಸ್ಪಿಯರನಿಗೆ ನಮಸ್ಕಾರ', ಶಾ. ಬಾಬೂರಾವ್, ಕನ್ನಡ ಭಾರತಿ, ಕರೊಲ್ ಬಾಗ್, ನವದೆಹಲಿ

ಸೀತಾರಾಮಯ್ಯ, ವಿ. (೧೯೬೭), 'ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ', ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪು. ೧೪೫

ಸೀತಾರಾಮಯ್ಯ, ವಿ. (೧೯೬೮), 'ಮೇಜರ್ ಬಾರ್ಬರ', ಸಮಗ್ರನಾಟಕ, (೧೯೯೩), ವಿ.ಸೀ. ಸಂಪದ, ಪು. ೩೩೭-೪೬೦

ಸೀತಾರಾಮಯ್ಯ, ವಿ. (೧೯೭೦), 'ಸೀಕರಣೆ', ಗೀತಾ ಬುಕ್ ಹೌಸ್, ಮೈಸೂರು, ಪು.೧೯೨,

ಸೀತಾರಾಮಯ್ಯ, ವಿ. (೧೯೭೦), 'ಮಹನೀಯರು', ಸರಸ್ವತಿ ಪ್ರಕಾಶನ, ಬೆಂಗಳೂರು

ಸೀತಾರಾಮಯ್ಯ, ವಿ. (೧೯೭೦), 'ಕದಂಬ (ಆಯ್ದ ಕವನಗಳು)', ಗೀತಾ ಬುಕ್ ಹೌಸ್, ಮೈಸೂರು, ಪು. ೧೭೨

ಸೀತಾರಾಮಯ್ಯ, ವಿ., (೧೯೭೦), 'ಚ್ಯವನ', ಸಮಗ್ರ ನಾಟಕ, (೧೯೯೩), ಪು. ೧೨೭-೧೬೨

ಸೀತಾರಾಮಯ್ಯ, ವಿ. (೧೯೭೧), 'ಎರಡು ನಾಟಕಗಳು' (ಆಗ್ರಹ, ಚ್ಯವನ), ಗೀತಾ ಬುಕ್ ಹೌಸ್, ಎರಡನೇ ಮುದ್ರಣ (೧೯೭೨), ಪು. ೯೯

ಸೀತಾರಾಮಯ್ಯ, ವಿ. (೧೯೭೨), 'D.V. Gundappa', Institute of Kannada Studies, University of Mysore, Prasaranga, p. 84

ಸೀತಾರಾಮಯ್ಯ, ವಿ. (೧೯೭೨), 'ಸತ್ಯ ಮತ್ತು ಮೌಲ್ಯ', ಬೆಂಗಳೂರು ವಿಶ್ವವಿದ್ಯಾನಿಲಯ, ಪು. ೧೩೨

ಸೀತಾರಾಮಯ್ಯ, ವಿ. (೧೯೭೨), 'ಅರಲು ಬರಲು', ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ಪು. ೧೪೩, ಮೊದಲ ಮಾತು, ಪು. ೩೭

ಸೀತಾರಾಮಯ್ಯ, ವಿ. (೧೯೭೩), ವಿ.ಸೀ.-೭೫, (ಸಂಭಾವನಾ ಗ್ರಂಥ), ಐ.ಬಿ.ಎಚ್. ಪ್ರಕಾಶನ, ೨೬೨-೨೮೪

ಸೀತಾರಾಮಯ್ಯ, ವಿ. (೧೯೭೩), 'ಕವಿಕಾವ್ಯ ಪರಂಪರೆ - ೫', ಕುಮಾರವ್ಯಾಸ, ಐ.ಬಿ.ಎಚ್. ಪ್ರಕಾಶನ, ಪು. ೨೧೫

ಸೀತಾರಾಮಯ್ಯ, ವಿ. (೧೯೭೩), 'ಒಳ್ಳೆಯ ಮನುಷ್ಯ - ಒಳ್ಳೆಯ ಬದುಕು', ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು, ಪು. ೨೫

ಸೀತಾರಾಮಯ್ಯ, ವಿ. (೧೯೭೬), 'ಮುಂಬಯಿ ವಾಸ', ಬಾಪ್ಪೊ ಪ್ರಕಾಶನ, ಬೆಂಗಳೂರು, ಪು. ೧೫೦

ಸೀತಾರಾಮಯ್ಯ, ವಿ. (೧೯೭೬) 'ಕಲಾನುಭವ', ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. xii + ೧೭೦

ಸೀತಾರಾಮಯ್ಯ, ವಿ. 'ವಾಲ್ಮೀಕಿ ರಾಮಾಯಣ', ಸಾಹಿತ್ಯ ಅಕಾಡೆಮಿ, ನವದೆಹಲಿ, ಪು. viii + ೨೨೭

ಸೀತಾರಾಮಯ್ಯ, ವಿ. (೧೯೭೯), 'ಕಾಲೇಜ್ ದಿನಗಳು', ಐ.ಬಿ.ಎಚ್. ಪ್ರಕಾಶನ, ಪು. ೨೫೨

ಸೀತಾರಾಮಯ್ಯ, ವಿ. (೧೯೭೭), 'ಕವಿಕಾವ್ಯಪರಂಪರೆ', 'ಪಂಪ', ಐ.ಬಿ.ಎಚ್. ಪ್ರಕಾಶನ ಪು. ೨೮೩.

ಸೀತಾರಾಮಯ್ಯ, ವಿ. (೧೯೭೯), 'ಪಟ್ಟಬಂಧ', ಸಮಗ್ರನಾಟಕ (೧೯೯೩), ಪು. ೧೬೫-೨೨೫

ಸೀತಾರಾಮಯ್ಯ, ವಿ. (೧೯೮೦), 'ಹಿರಿಯರು - ಗೆಳೆಯರು' (ವ್ಯಕ್ತಿಚಿತ್ರಗಳು), ಗೀತಾ ಬುಕ್ ಹೌಸ್, ಮೈಸೂರು - ೫೭೦ ೦೦೧, ಪು. ೫೬೬

ಸೀತಾರಾಮಯ್ಯ, ವಿ. (೧೯೮೧), 'ಹಗಲು ಇರುಳು', ಕನ್ನಡಸಂಘ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು, ಪು. ೧೩೪

ಸೀತಾರಾಮಯ್ಯ, ವಿ. (ಅನುವಾದಕ), (೧೯೮೨), 'ಮೋಬಿ ಡಿಕ್' (ಹೆರ್ಮನ್ ಮೆಲ್‌ವಿಲ್), ಬೆಂಗಳೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ೪೭೨ ಪು.

ಸೀತಾರಾಮಯ್ಯ . ವಿ. (೧೯೯೨), 'ಸಂವಿಧಾನ ಮತ್ತು ಕಾನೂನು', ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು - ೧೯, ಪು. ೧೮೦

ಸೀತಾರಾಮಯ್ಯ . ವಿ. (೧೯೭೯), 'ಸಾಹಿತ್ಯಾಲೋಕನ', ಗೀತಾ ಬುಕ್ ಹೌಸ್, ಮೈಸೂರು, ಪು. ೫೧೧

ಸೀತಾರಾಮಯ್ಯ . ವಿ. (೧೯೭೫), 'ಮಹಾಕವಿ ಪಂಪ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪು. ೩೨೫

ವಿ.ಸೀ. ಸಂಪದ (೧೯೯೦), 'ಸ್ನೇಹ-ವಿಶ್ವಾಸ (ಸಮಗ್ರಕಾವ್ಯಸಂಪುಟ)', ಅಶೋಕನಗರ, ಬೆಂಗಳೂರು - ೫೦, ಪು. ೭೦೪

ವಿ.ಸೀ. ಸಂಪದ, (೧೯೯೩), ಸಮಗ್ರ ನಾಟಕ - ಮೇಜರ್ ಬಾರ್ಬರ, ಮುನ್ನುಡಿ, ವಿ.ಸೀ. ಸಂಪದ, ಬೆಂಗಳೂರು (೧೯೯೩), ಪು. ೫೦೩-೫೩೦

ವಿ.ಸೀ. ಸಂಪದ (೧೯೯೧), 'ವಿ.ಸೀತಾರಾಮಯ್ಯ - ವ್ಯಕ್ತಿತ್ವ, ಕಾವ್ಯ ವೈಶಿಷ್ಟ್ಯ', ಬೆಂಗಳೂರು, ಪು. ೪೧

ವಿ.ಸೀ. ಸಂಪದ (೧೯೯೧), 'ಮಾಸ್ತಿ ಕುರಿತು ವಿ. ಸೀ.', ಬೆಂಗಳೂರು, ಪು. xii + ೯೪

ವಿ.ಸೀ. ಸಂಪದ (೧೯೯೨), ಸಮಗ್ರ ಗದ್ಯ - ೧, 'ಲಲಿತ ಪ್ರಬಂಧ ಸಂಪುಟ', ಬೆಂಗಳೂರು, ಪು. ೩೩೨

ವಿ.ಸೀ. ಸಂಪದ (೧೯೯೩), 'ಸಮಗ್ರ ನಾಟಕ', ಪು. xxxviii + ೫೫೬

ವಿ.ಸೀ. ಸಂಪದ (೧೯೯೬), ವ್ಯಕ್ತಿಚಿತ್ರ ಸಂಪುಟ, ಭಾಗ - ೧, ಪು. ೩೬೦

ವಿ.ಸೀ. ಸಂಪದ (೧೯೯೬), 'ವ್ಯಕ್ತಿಚಿತ್ರ ಸಂಪುಟ' ಭಾಗ - ೨, ಪು. ೩೩೩

ಸುಮನಾ (೧೯೮೫), ವಿ.ಸೀತಾರಾಮಯ್ಯ (ವಿ.ಸೀ.) 'ಬದುಕು - ಬರಹ - ವ್ಯಕಿತ್ವ', ಐ.ಬಿ.ಎಚ್. ಪ್ರಕಾಶನ, ಪು. ೧೭೬

ಸುಮನಾ (ಎಂ.ವಿ. ವೆಂಕಟೇಶಮೂರ್ತಿ), (೧೯೮೪), 'ವಿ.ಸೀ. ಕೊನೆಯ ದಿನಗಳ ಕೆಲವು ನೆನಪು , ಅಂಕಣ, ಸಂಪುಟ ೫, ಸಂಚಿಕೆ ೪, ಪು. ೧-೮

ಸ್ವಾಮಿ, ಬಿ.ಜಿ.ಎಲ್. (೧೯೬೪), 'ಪಂಚಕಲಶಗೋಪುರ', ಕರ್ನಾಟಕ ಸಂಘ, ಬೆಂಗಳೂರು, ಪು. ೧೦೮

ಹರಿದಾಸಭಟ್ಟ, ಕು.ಶಿ. (೧೯೫೩), 'ವಿ.ಸೀ.ಯವರ ಹಣಪ್ರಪಂಚ', ಗೆಳೆಯರ ಬಳಗ, ದಾವಣಗೆರೆ, ವಿ.ಸೀ. (ಕವಿ, ಕಾವ್ಯ ಪರಿಚಯ), ೩೧-೪೦